JJ-51

(B) 25222

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಀ೨ನೇ ಅಧಿವೇಶನ

12TH SESSION

ಸಂಪುಟ – ೧೬ (ಕ್ರಮಾಂಕ – ೦೨)

Volume - 16 (No. 02)

(೧೯, ೨೦ನೇ ಜುಲೈ ೨೦೦೭,)

(19th, 20th July 2007)

ಭಾಗ–೧

Part-I

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

(B) 25222

ಅಧಿಕೃತ ವರದಿ
OFFICIAL REPORT

೧೨ನೇ ಅಧಿವೇಶನ

12TH SESSION

ಸಂಪುಟ – ೧೬ (ಕ್ರಮಾಂಕ – ೦೨)

Volume - 16 (No. 02)

(೧೯, ೨೦ನೇ ಜುಲೈ ೨೦೦೭)

(19th, 20th July 2007)

ಭಾಗ–೧

Part-I

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನ ಸಭೆ

ಹನ್ನೆರಡನೇ ವಿಧಾನ ಸಭೆ

ಐದನೇ ಅಧಿವೇಶನದ ಮುಂದುವರೆದ ಉಪವೇಶನ

ಶ್ರೀ ಕೃಷ್ಣ

ಅಧ್ಯಕ್ಷರು

ಶ್ರೀ ಎನ್. ವೈ. ಗೋಪಾಲಕೃಷ್ಣ

ಉಪಾಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ಗುರುವಾರ 19ನೇ ಜುಲೈ 2007 ರಂದು ಸದನವು

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.18 ಘಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಶ್ರೀ ಕೃಷ್ಣ ರವರು

ಪೀಠವನ್ನು ಅಲಂಕರಿಸಿದ್ದರು

ಗುರುವಾರ 19–7–2007

ವಿಷಯಾನುಕ್ರಮಣಿಕೆ

ಪು ಸಂಖ್ಯೆ

1 ವರದಿಯನ್ನೊಪ್ಪಿಸುವುದು **1–2**

2006–07ನೇ ಸಾಲಿನ ಹಕ್ಕುಬಾಧ್ಯತೆಗಳು ಸಮಿತಿಯ ಮೂರನೇ ವರದಿ

2 ವಿತ್ತೀಯ ಕಾರ್ಯಕಲಾಪ

ವಿಷಯ 2007–08ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ 2–57

ಶ್ರೀ ಜೆ ಸಿ ಮಾಧುಸ್ವಾಮಿ
ಶ್ರೀ ಸಿದ್ದುಸವದಿ

3 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 58–62

ವಿಷಯ ಬೆಂಗಳೂರು ನಗರದ ವಿಶ್ವೇಶ್ವರಪುರಂನಲ್ಲಿರುವ ವಾಸವಿ ವಿದ್ಯಾನಿಕೇತನ ಶಾಲೆಯ 4ನೇ ಮಹಡಿಯಿಂದ ಮಗು ಕೆಳಗೆ ಬಿದ್ದು ಸತ್ತು ಹೋಗಿರುವ ಘಟನೆ ಬಗ್ಗೆ 62–107

ಶ್ರೀ ವಾಟಾಳ್ ನಾಗರಾಜ್
ಶ್ರೀ ಜಯಪ್ರಕಾಶ್ ಹೆಗ್ಡೆ
ಶ್ರೀ ಎನ್ ಎಲ್ ನರೇಂದ್ರ ಬಾಬು
ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

4 ವಿತ್ತೀಯ ಕಾರ್ಯಕಲಾಪ .

2007–08ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ 62–107

ಶ್ರೀ ಎಸ್ ಎಸ್ ಪಾಟೀಲ್

5 ರಾಜ್ಯಪಾಲರಿಂದ ಬಂದ ಸಂದೇಶ **107–113**

ವಿಷಯ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ 2007 ಅನ್ನು ಮರುಪರಿಶೀಲನೆಗಾಗಿ ಹಿಂದಿರುಗಿಸುವ ಬಗ್ಗೆ

6 ಪ್ರಶ್ನೋತ್ತರ **114–155**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು 34–40

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ 122(1005)

ಶ್ರೀ ಕೆ ಆರ್ ರಮೇಶ್ ಕುಮಾರ್ 124 (817)

ಶ್ರೀ ವಿ ಸುನೀಲ್ ಕುಮಾರ್ 129 (925)

ಶ್ರೀ ಎಂ ವೈ ಪಾಟೀಲ್ 130 (708)

ಶ್ರೀ ಕೆ ಎಸ್ ಕಿರಣ್ ಕುಮಾರ್ 131 (1019)

ಶ್ರೀ ಹೆಚ್ ಹಾಲಪ್ಪ 132 (639)

ಶ್ರೀ ಮೋಹನ್ ಕೃಷ್ಣ ಶೆಟ್ಟಿ 133 (1018)

ಶ್ರೀ ಜಿ ವಿ ಶ್ರೀರಾಮರೆಡ್ಡಿ 134 (1011)

ಶ್ರೀ ಸಿಂಧೂರ ಜಿ ರಾಜಶೇಖರ 135 (1124)

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

7 ಗಮನ ಸೆಳೆಯುವ ಸೂಚನೆ **156–166**

ಅ) ವಿಷಯ ಅರ್ಕಾವತಿ ಜಲಾಶಯದಲ್ಲಿ ಮುಳುಗಡೆಯಾದ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

ಶ್ರೀ ಡಿ ಕೆ ಶಿವಕುಮಾರ್

ಡಾ ವಿ ಎಸ್ ಆಚಾರ್ಯ, ವೈದ್ಯಕೀಯ ಶಿಕ್ಷಣ ಸಚಿವರು

(ತಡೆ)

ಆ) ವಿಷಯ ಅಫಜಲಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಗಳ ಕೊರತೆ ಬಗ್ಗೆ

ಶ್ರೀ ಎಂ ವೈ ಪಾಟೀಲ್
ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್
ಶ್ರೀ ಬಸವರಾಜ್ ರಾಯರೆಡ್ಡಿ
ಶ್ರೀ ಕುಮಾರ್ ಬಂಗಾರಪ್ಪ
ಶ್ರೀ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

8 ಅನುಬಂಧಗಳು 167–443

ಶುಕ್ರವಾರ 20-7-2007

ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

1 ಸಂತಾಪ ಸೂಚನೆ 444-446

ವಿಷಯ ಶ್ರೀಮತಿ ಸುಶೀಲ ಚೆಲುವರಾಜು ಅವರ ನಿಧನದ ಬಗ್ಗೆ

2 ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ 446-478

ಅ) 2007ನೇ ಸಾಲಿನ ಕರ್ನಾಟಕ ಪಂಚಾಯುತ್ ರಾಜ್ (ತಿದ್ದುಪಡಿ) ವಿಧೇಯಕ ಹಿಂದಿರುಗಿಸಲ್ಪಟ್ಟಿರುವ ಕುರಿತು

1 ಶ್ರೀ ಎನ್ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು)

2 ಶ್ರೀ ಜೆ ಸಿ ಮಾಧುಸ್ವಾಮಿ

3 ಶ್ರೀ ಕೆ ಆರ್ ರಮೇಶ್‌ಕುಮಾರ್

4 ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ ಹಾಗೂ 'ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ತೀರ್ಪನ್ನು ಕಾದಿರಿಸಲಾಯಿತು)

ಆ) ಮೇಲ್ಮನೆಯ ಕೆಲವು ಸದಸ್ಯರು ಮಾನ್ಯ ರಾಜ್ಯಪಾಲರನ್ನು ಭೇಟಿ ಮಾಡಿ ಪಂಚಾಯತ್ ರಾಜ್ ಕಾಯಿದೆಯನ್ನು ತಡೆಹಿಡಿಯಲು ಕೋರುವ ಮೂಲಕ ವಿಧಾನ ಸಭೆಯ ಸಾರ್ವಭೌಮತ್ವವನ್ನು ಪ್ರಶ್ನಿಸಿರುವ ಬಗ್ಗೆ

1 ಶ್ರೀ ಜಿ ವಿ ಶ್ರೀರಾಮರೆಡ್ಡಿ

2 ಶ್ರೀ ವಾಟಾಳ್ ನಾಗರಾಜ್

3 ಶ್ರೀ ಎಂ ಪಿ ಪ್ರಕಾಶ್, (ಮಾನ್ಯ ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ತೀರ್ಪನ್ನು ಕಾದಿರಿಸಲಾಯಿತು)

3 ಪ್ರಶ್ನೋತ್ತರ 478-514

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ರಾಮಲಿಂಗಾರೆಡ್ಡಿ 138 (289)

ಶ್ರೀ ಖಾದರ್ ಯು ಟಿ 825

ಶ್ರೀಮತಿ ಶಕುಂತಲಾ ಶೆಟ್ಟಿ 140 (1213)

ಶ್ರೀ ಬಾದರ್ಲಿ ಹಂಪನಗೌಡ 141 (463)
ಶ್ರೀ ಬಿ ಪಿ ವೆಂಕಟಮುನಿಯಪ್ಪ 149 (1026)
ಶ್ರೀ ಡಿ ಆರ್ ಪಾಟೀಲ್ 143 (650)
ಶ್ರೀ ಸಿದ್ದು ಸಾವದಿ 145 (249)
ಶ್ರೀ ನೆ ಲ ನರೇಂದ್ರ ಬಾಬು 147 (466)
ಶ್ರೀ ಚನ್ನಬಸವರಾಜ (ಅಪ್ಪಾಜಿ) ಶಂಕರರಾವ್ ನಾಡಗೌಡ 148 (1216)
ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ 150 (931)
ಆ) ಲಿಖಿತ ಮೂಲಕ ಉತ್ತರಿಸಿದ ಪ್ರಶ್ನೆಗಳು
ಇ) ಅನುಬಂಧ–1

4 **ವರದಿಯನ್ನೊಪ್ಪಿಸುವುದು** 515
ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೇ ವರದಿ

5 **ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು** 515–575

1 ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವವರ ಮುಷ್ಕರದ ಕುರಿತು
ಶ್ರೀ ಎನ್ ಎಸ್ ಬೋಸರಾಜು

2 ಹಳೆಯ ಮದ್ರಾಸ್ ರೋಡ್‌ನಲ್ಲಿ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಗಳ ಕುರಿತು
ಶ್ರೀ ಐವಾನ್ ನಿಗ್ಲಿ

3 ಅನುದೇವ ಹೊರಗಣವನು ಪುಸ್ತಕವನ್ನು ಮುಟ್ಟುಗೋಲು ಹಾಕುವ ಕುರಿತು
ಶ್ರೀ ವೈಜನಾಥ ಪಾಟೀಲ್

4 ನಕ್ಸಲ್ ಕಾರ್ಯಾಚರಣೆಯಲ್ಲಿ ಮೃತಪಟ್ಟ ವೆಂಕಟೇಶ್‌ರವರಿಗೆ ಪರಿಹಾರ ನೀಡುವ ಕುರಿತು
ಶ್ರೀ ಅರಗ ಜ್ಞಾನೇಂದ್ರ

5 ಪಠ್ಯಪುಸ್ತಕಗಳಲ್ಲಿ ರಾಷ್ಟ್ರಗೀತೆ ಮತ್ತು ನಾಡಗೀತೆಯನ್ನು ಮುದ್ರಿಸದೇ ಇರುವ ಕುರಿತು
ಶ್ರೀ ವಿ ಸುನೀಲ್ ಕುಮಾರ್

6 ಮೈಸೂರು ನಗರದ ಕೆಲವು ಭಾಗಗಳಿಗೆ ನೀರನ್ನು ಕೊಡಿಸುವಂಥ ವ್ಯವಸ್ಥೆ ಕುರಿತು

ಶ್ರೀ ಎಂ ಕೆ ಸೋಮಶೇಖರ್

7 ತಿರುಪತಿ ಮಾದರಿ ವಿಶ್ರಾಂತಿ ಗೃಹ ಮಹಾರಾಷ್ಟ್ರದ ಪಂಡರಾಪುರದಲ್ಲಿ ನಿರ್ಮಿಸುವ ಬಗ್ಗೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ

8 ಮಹಿಳಾ ವಿಶ್ವವಿದ್ಯಾನಿಲಯ ಕುರಿತು

ಶ್ರೀ ಚನ್ನಬಸವರಾಜ (ಅಪ್ಪಾಜಿ) ಶಂಕರರಾವ್ ನಾಡಗೌಡ

ಶ್ರೀ ಮಲ್ಲಿಕಾರ್ಜುನ ಖರ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ

ಶ್ರೀ ಎನ್ ಧರ್ಮಸಿಂಗ್

ಶ್ರೀ ಎಸ್ ಸಿದ್ಧರಾಮಯ್ಯ

ಶ್ರೀ ಹೆಚ್ ಸಿ ಮಹದೇವಪ್ಪ

ಶ್ರೀ ಹೆಚ್ ಸಿ ಬಾಲಕೃಷ್ಣ

9 ಜಾಸ್ತಿಯಾಗುತ್ತಿರುವ ಸಿಮೆಂಟಿನ ಬೆಲೆ ಕುರಿತು

ಶ್ರೀ ಪಿ ಜಿ ಆರ್ ಸಿಂಧ್ಯಾ

10 ಗದಗ ತಾಲ್ಲೂಕು ಹರಳಾಪುರ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಿಸುವ ಬಗ್ಗೆ ಮತ್ತು ಡಂಬಳದಲ್ಲಿ ಪೊಲೀಸ್ ಠಾಣೆ ಬಗ್ಗೆ

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

11 ಪೌರಸೇವಾ ನೌಕರರ ಮುಷ್ಕರದ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ

ಶ್ರೀ ಆರ್ ವಿ ದೇಶಪಾಂಡೆ

ಶ್ರೀ ಪಿ ಜಿ ಆರ್ ಸಿಂಧ್ಯಾ

ಶ್ರೀ ಎಸ್ ಸಿದ್ಧರಾಮಯ್ಯ

ಶ್ರೀ ಎಸ್ ರಾಜೇಂದ್ರನ್

ಶ್ರೀ ವೈಜನಾಥ ಪಾಟೀಲ್

ಶ್ರೀ ಎಂ ಟಿ ಕೃಷ್ಣಪ್ಪ

ಡಾ॥ ಹೆಚ್ ಸಿ ಮಹದೇವಪ್ಪ

ಶ್ರೀ ಜಿ ಎಸ್ ಗಡ್ಡದೇವರಮಠ್
ಶ್ರೀ ಆರ್ ಶ್ರೀನಿವಾಸ್ (ಮಾನ್ಯ ಪೌರಾಡಳಿತ ಸಚಿವರು)

12 ಮಳೆಯಿಂದಾಗಿ ಕೊಡಗು ಜಿಲ್ಲೆಯಲ್ಲಾಗಿರುವ
ತೊಂದರೆಗಳ ಬಗ್ಗೆ
ಶ್ರೀ ಹೆಚ್ ಡಿ ಬಸವರಾಜ್
ಶ್ರೀ ಪಿ ಜಿ ಆರ್ ಸಿಂಧ್ಯಾ
ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

6 ಪ್ರಕಟಣೆಗಳು 478–514

7 ಅನುಬಂಧಗಳು 577–741

* * * * *

1 ವರದಿಯನ್ನೊಪ್ಪಿಸುವುದು

2006-07 ನೇ ಸಾಲಿನ ಹಕ್ಕುಬಾಧ್ಯತೆಗಳ ಸಮಿತಿಯ ಮೂರನೆಯ ವರದಿ

ಶ್ರೀ ಜಿ ಬಸವಣ್ಣೆಪ್ಪ (ಹೊಳೆಹೊನ್ನೂರು) ಮಾನ್ಯ ಅಧ್ಯಕ್ಷರೆ, 2006-07ನೇ ಸಾಲಿನ ಹಕ್ಕು ಬಾಧ್ಯತೆಗಳ ಸಮಿತಿಯ 3ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

ಶ್ರೀ ಜೆ ಸಿ ಮಾಧುಸ್ವಾಮಿ ತಾವು ಭಾಷಣ ಮಾಡಲಿಕ್ಕೆ ನನ್ನನ್ನು ಕರೆದಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಕೇಳಿದ್ದೆ ನನ್ನ ಸ್ನೇಹಿತರಿಗೂ ನಾನು ಮನವಿ ಮಾಡುತ್ತಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಸನ್ಮಾನ್ಯ ಯಡಿಯೂರಪ್ಪನವರು 2007-08ನೇ ಸಾಲಿಗೆ

ಶ್ರೀ ವಾಟಾಳ್ ನಾಗರಾಜ್ ದಯವಿಟ್ಟು, ಒಂದ್ನಿಮಿಷ ಯೀಲ್ಡ್ ಆಗಿ

ಅಧ್ಯಕ್ಷರು ಅವರು yield ಆಗದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ನನ್ನ ಭಾಷಣಕ್ಕೆ ಪೂರಕವಾಗಿ ಮಾತನಾಡುವುದಾದರೆ ನಾನು yield ಆಗುತ್ತೇನೆ ಬೇರೆ ಏನಾದರೂ ಮಾತನಾಡುವುದಾದರೆ, (ಗೊಂದಲ)

ಅಧ್ಯಕ್ಷರು ಮಾನ್ಯ ವಾಟಾಳ್‌ರವರೆ, ತಾವು ಕುಳಿತುಕೊಳ್ಳಿ, ತಮಗೆ ನಂತರ ಅವಕಾಶ ಕೊಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಇನ್ನೂ ಸಹ ಮಾತು ಪ್ರಾರಂಭವೇ ಮಾಡಲಿಲ್ಲ ನನ್ನ ಬಗ್ಗೆ ಮಾತನಾಡುತ್ತಾರೆ, ನನ್ನ ಪರವಾಗಿ ಮಾತನಾಡುತ್ತಾರೋ, ವಿರೋಧವಾಗಿ ಮಾತನಾಡುತ್ತಾರೋ, ನನಗೇನು ಗೊತ್ತು ? ನಾನೇಕೆ yield ಅಗಲಿ ? ಬೇರೆ ವಿಚಾರ raise ಮಾಡಲು ಅನುಮತಿಸುವುದು ನಿಮಗೆ ಬಿಟ್ಟಿದ್ದು

ಶ್ರೀ ವಾಟಾಳ್ ನಾಗರಾಜ್ ನಾನು ಯಾವತ್ತೂ ಪರವೇ ಹೊರತು ವಿರುದ್ಧವಲ್ಲ

ಅಧ್ಯಕ್ಷರು ನಾನು ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ ಅವರು ಪ್ರಾರಂಭ ಮಾಡಲಿ ಮಾಧುಸ್ವಾಮಿಯವರೇ, ಚರ್ಚೆ ಪ್ರಾರಂಭ ಮಾಡಿ ಎಂದು ನಿಮಗೇ

ಹೇಳಿದ್ದು

ಶ್ರೀ ಜೆ ಸಿ ಮಾಧುಸ್ವಾಮಿ ನನಗೆ ಪ್ರಾರಂಭ ಮಾಡಿ ಎಂದು ಹೇಳಿದ್ದಾರೆ I am sorry (ಗೊಂದಲ) ಯರಿಗಾದರೂ ಒಬ್ಬರಿಗೆ ಹೇಳಿ ಸರ್

ಶ್ರೀ ವಾಟಾಳ ನಾಗರಾಜ್ ಸರ್ ನಾನೇನು ಮಾಡಬೇಕು ಈಗ ?

ಅಧ್ಯಕ್ಷರು ಮಾದುಸ್ವಾಮಿಯವರೆ, ಅವರೇನೋ ಶೂನ್ಯ ವೇಳೆಯಲ್ಲಿ ಯಾವುದೋ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಅದು ದಿವಸವೂ ಇದ್ದದ್ದೇ ಅಲ್ಲವೇ ಸರ್ ಹೊಸದೇನಾದರೂ ಇದ್ದರೆ ಹೇಳಲಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಕೇಳಿದರೆ question hour ಅದಮೇಲೆ zero hour ಎಂದು ಹೇಳುತ್ತೀರಿ

ಶ್ರೀ ಜೆ ಸಿ ಮಾಧುಸ್ವಾಮಿ zero hour ಅನ್ನು ಮೊದಲೇ ಹೇಗೆ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು ಹೌದು ಎಲ್ಲರಿಗೂ ಅದೇ ತರಹ ಹೇಳಿರುವುದು

ಶ್ರೀ ಜೆ ಸಿ ಮಾಧುಸ್ವಾಮಿ ಇರಲಿ, question hour ಆಗುವವರೆಗಾದರೂ ಇರಿ

ಅಧ್ಯಕ್ಷರು One should fall in line ವಾಟಾಳ್ ನಾಗರಾಜ್‌ರವರೇ, ನೀವು ಆಮೇಲೆ ಮಾತನಾಡಿ ಅವರು ಮೊದಲು ಮಾತನಾಡಲಿ

ಶ್ರೀ ವಾಟಾಳ್ ನಾಗರಾಜ್ ನಾನು ಒಂದೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ

ಅಧ್ಯಕ್ಷರು ಒಬ್ಬರಿಗೆ ಅವಕಾಶ ಕೊಟ್ಟರೆ ಎಲ್ಲರೂ ಅವಕಾಶ ಕೇಳುತ್ತಾರೆ ಬೇರೆಯವರು ಸಹ ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೇ ಕೇಳಿಕೊಂಡಿದ್ದಾರೆ ತಾವು ಕುಳಿತುಕೊಳ್ಳಿ ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ

2 ವಿತ್ತೀಯ ಕಾರ್ಯಕಲಾಪ
2007-2008ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು 2007-08 ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದರು ಇದರಲ್ಲಿ ಅವರು ಸುಮಾರು ಮೂರು ತಿಂಗಳುಗಳ ಕಾಲ vote an account ತೆಗೆದುಕೊಂಡು ಸರ್ಕಾರ ನಡೆಸಿ ಈ ಸಭೆಯಲ್ಲಿ ಅಭಿಯಾಚನೆಗಳನ್ನು ಮಂಡಿಸಿ ಬೇಡಿಕೆಗಳನ್ನು ಇಲಾಖಾವಾರು ಇಡುತ್ತಿದ್ದಾರೆ ಇದರಲ್ಲಿ ಭಾಗವಹಿಸಿ

ಮಾತನಾಡುತ್ತಾ, ಬಹುಶಃ ಪ್ರಾರಂಭದಲ್ಲಿ ನಾನು ಒಂದೆರಡು ಮೂರು ಮಾತುಗಳನ್ನು ಹೇಳುತ್ತೇನೆ ಅವರು ನಿನ್ನೆ ಇಲ್ಲಿ ಮಾತನಾಡುತ್ತಾ ಕೇಳಿದರು ನಾವೆಲ್ಲ ಸೇರಿ ಏನಾದರೊಂದು ಮಾಡಬೇಕು, ರೈತರನ್ನು ಉಳಿಸಬೇಕು, ಹಳ್ಳಿಗಾಡುಗಳಿಗೆ ಸಹಾಯ ಮಾಡಬೇಕೆಂದು ಹೇಳಿದರು ಯಾವುದೇ ಕಾರ್ಯಕ್ರಮ ಬಜೆಟ್‌ನಲ್ಲಿ ಪ್ರತಿಬಿಂಬ ಆಗಿದ್ದು ಅಷ್ಟೊಂದು ಸಮರ್ಪಕವಾಗಿದೆ ಎಂದು ನಾವೆಲ್ಲ ಆ ದಿವಸ ಮಾತನಾಡಿದ್ದೆವು ಇವತ್ತು ಅದನ್ನೇ ಪುನರುಚ್ಚರಿಸಿ, ನಾನು ಆರಂಭವಾಗಿ ಲೋಕೋಪಯೋಗಿ ಇಲಾಖೆಯ ಮೇಲೆ ಸ್ವಲ್ಪ ಮಾತನಾಡಿ ಆ ನಂತರ ತಾವು ಕಾಲಾವಕಾಶ ಕೊಟ್ಟರೆ ಬೇರೆ ಇಲಾಖೆಯ ಬಗ್ಗೆ ಮಾತನಾಡುತ್ತೇನೆ "Roads are the Lifeline for our State Where the other modes of transportation are not very well developed, properly laid and well maintained roads have the potential to the spur the economic acitvity and achieve the object of economic growth with equity Maintenance of already laid roads is importatnt to safeguard the public assets and to deserve " ಕನ್ನಡ ಪ್ರತಿ ಸಿಕ್ಕಲಿಲ್ಲವೆಂದು ನಾನು ಇಂಗ್ಲೀಷ್‌ನಲ್ಲಿ ಓದುತ್ತಿದ್ದೇನೆ ನಾನು ನಿನ್ನೆ ಕನ್ನಡದ ಒಂದು ಪ್ರತಿ ಕೊಡಿ ಎಂದು ಕೇಳಿದ್ದೆ, "In this direction, I propose to increase the allocation for maintenance of major district roads from Rs 132 crore to 300 crore ನಮ್ಮ ರಾಜ್ಯದಲ್ಲಿ ಅತ್ಯುತ್ತಮವಾಗಿ ಅಭಿವೃದ್ಧಿ ಹೊಂದಿರುವ ಜಲಮಾರ್ಗ ಮತ್ತು ವಾಯುಮಾರ್ಗ ವ್ಯವಸ್ಥೆ ಇಲ್ಲದೇ ಇರುವುದರಿಂದ ಭೂ ಮಾರ್ಗದ ರಸ್ತೆಗಳೇ ನಮ್ಮ ರಾಜ್ಯದ ಜೀವನಾಡಿಗಳಾಗಿವೆ ಅತ್ಯುತ್ತಮವಾಗಿ ನಿರ್ಮಿಸಿರುವ ಮತ್ತು ಉತ್ತಮವಾಗಿ ನಿರ್ವಹಿಸಿರುವ ರಸ್ತೆಗಳು, ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುತ್ತವೆ ನಾನು ಅಲ್ಲಿಗೆ ನಿಲ್ಲಿಸುತ್ತೇನೆ ಅತ್ಯತ್ತುಮವಾಗಿ ನಿರ್ಮಿಸಿರುವ ರಸ್ತೆಗಳು ನಮ್ಮ ಆರ್ಥಿಕ ಚಟುವಟಿಕೆಯನ್ನು ನಿರ್ವಹಿಸುತ್ತವೆ For any development, ಯಾವುದೇ ಆರ್ಥಿಕ ಅಭಿವೃದ್ಧಿಗೆ the mode of transport ನಾವೇನು ಸಾಮಾನು ಸರಂಜಾಮನ್ನು ಸಾಗಾಣಿಕೆ ಮಾಡುತ್ತೇವೆ ಅದು ಬಹಳ ಮುಖ್ಯ ಕರ್ನಾಟಕಕ್ಕೆ ರೈಲು ಮಾರ್ಗ ತೀರ ಕಡಿಮೆಯಿದ್ದು ನಮ್ಮ ಜಲಮಾರ್ಗ ಕೂಡ ಒಂದೇ ಕಡೆ ಕೇಂದ್ರೀಕೃತವಾಗಿರುವುದರಿಂದ ನಾವು ರಸ್ತೆಗಳ ಮೇಲೆ ಆಧಾರವಾಗಿರುವಂಥ ರಾಜ್ಯ ನೀವೇನಾದರೂ ಆ ಕಡೆಯಿಂದ ತುಮಕೂರು, ಹೊಸಕೋಟೆ, ಮೈಸೂರು, ಕಡೆಯಿಂದ ಬಂದರೆ ಎಷ್ಟೊಂದು ಸುಭಿಕ್ಷವಾದ ರಸ್ತೆ ಮಾರ್ಗ ನಮ್ಮದು ಇದೆ ಎಂದು ನಮಗೆ ಗೊತ್ತಾಗಿ ಬಿಡುತ್ತದೆ NH4, NH7, ಕಡೆಯಿಂದ ಬಂದರೆ, ಎಷ್ಟು ಒಳ್ಳೆಯ ಸುಭಿಕ್ಷವಾದ mode of transport ಹೊಂದಿದ್ದೇವೆ ಇನ್ನು ಸ್ವಲ್ಪ ಆಚೆಗೆ ಬಂದರೆ, ಬಳ್ಳಾರಿ, ಚಿತ್ರದುರ್ಗ, ಹೊಸಪೇಟೆ, ಚಿಕ್ಕನಾಯಕನಹಳ್ಳಿ, ಆ ಕಡೆಯಿಂದ ಬಂದರೆ ಎಷ್ಟು ಅಭಿವೃದ್ಧಿಯಾಗಿದ್ದೇವೆ, ರಸ್ತೆ ಆ ಕಡೆಯಿಂದ ಈ ಕಡೆಗೆ ಪಟ್ಟಣಗಳಲ್ಲಿ ಬೇಡ, ಹಳ್ಳಿಗಳಲ್ಲೂ ಕೂಡ ದಾಟಲಿಕ್ಕೆ ಎಷ್ಟೊಂದು ಬಿಜಿಯಾಗಿದ್ದೇವೆಂದು ನಮಗೆ ಅರ್ಥವಾಗುತ್ತದೆ ಇಂಥ ಒಂದು ಸುಭಿಕ್ಷವಾದ ಟ್ರಾಫಿಕ್ ಇಟ್ಟುಕೊಂಡು ರಾಜ್ಯದಲ್ಲಿ ರಸ್ತೆಗಳ ಸ್ಥಿತಿ ಏನಾಗಿದೆ ಎಂದು ನಾವು ಚರ್ಚಿಸಬೇಕಾಗುತ್ತದೆ ನಾನು ಪ್ರಮುಖವಾಗಿ ರಾಜ್ಯ ಹೆದ್ದಾರಿಗಳ ಬಗ್ಗೆ ಮೊದಲನೆಯದಾಗಿ ಮಾತನಾಡುತ್ತೇನೆ

ಈ ರಾಜ್ಯ ಹೆದ್ದಾರಿಗಳು ಏನಾಗಿವೆ ? ಬಹಳ ನೋವಿನಿಂದ ಹೇಳಬೇಕಾಗುತ್ತದೆ ಇದರ ಮೇಂಟೆನೆನ್ಸ್ ಮತ್ತು ಪುನರ್ ನಿರ್ಮಾಣಕ್ಕೆ KRDCL ಎನ್ನುವ ಒಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ನಾನು ಹಳ್ಳಿಯಿಂದ ಬಂದಿರುವವನು KRDCL ಎಂದರೆ ಏನೆಂದು ಸ್ವಲ್ಪ ಹೀಗೆ ಚರ್ಚೆ ಮಾಡುತ್ತಿದ್ದೆವು ಯಾರೋ ಒಬ್ಬರು, Karnataka Ravenna Development Corporation Limited ಎಂದಿರಬಹುದು ಎಂದರು ಇನ್ನೊಬ್ಬರು ಇಲ್ಲಾ ಸಾರ್, ಕುಮಾರಸ್ವಾಮಿ, ದೇವೇಗೌಡರು, ರೇವಣ್ಣ, ಚೆನ್ನಮ್ಮನವರ ಲಿಮಿಟೆಡ್ ಇರಬಹುದು ಎಂದರು ಏನು ಹೀಗೆಲ್ಲಾ ಮಾತನಾಡುತ್ತಿದ್ದೀರಿ ಎಂದು KRDCL ನಲ್ಲಿ work allot ಮಾಡಿರುವುದನ್ನು ನೋಡಬೇಕೆಂದು ಬಹಳ ಆಸೆಯಾಯಿತು ಸನ್ಮಾನ್ಯ ಯಡಿಯೂರಪ್ಪನವರೇ, ನಾನು ಇವತ್ತು ಇಲ್ಲಿ ಕೇಳುತ್ತಿದ್ದೇನೆ ಇಲಾಖೆಯ ಬೇಡಿಕೆಯನ್ನು ನಾವು ಮಂಜೂರು ಮಾಡಬೇಕೇ ? ಅಥವಾ ಸನ್ಮಾನ್ಯ ರೇವಣ್ಣನವರ ಬೇಡಿಕೆಯನ್ನು ನಾವು ಇಲ್ಲಿ ಮಂಜೂರು ಮಾಡಬೇಕೆ ? ಈ ಶಾಸನ ಸಭೆಗೆ ಸ್ಪಷ್ಟವಾಗಬೇಕು ಈ ಬೇಡಿಕೆ ಇಲಾಖೆಯದ್ದೋ ? ನಿಮ್ಮ ಮಂತ್ರಿಗಳದ್ದೋ ? ಇದು ಸ್ಪಷ್ಟವಾಗಬೇಕು ಇಲಾಖೆಯ ಬೇಡಿಕೆ ಎಂದರೆ ವೆಚ್ಚ ಮಾಡಲಿಕ್ಕೆ ಒಂದು ನೀತಿ, ನಿಯಮ, ಶಿಸ್ತು, ಸಮಗ್ರವಾದ ರಾಜ್ಯದ ಅಭಿವೃದ್ಧಿ, ಇಡೀ ಐದೂವರೆ ಕೋಟಿ ಜನಗಳ ವ್ಯವಸ್ಥೆ ಇದು involve ಆಗಬೇಕಾಗುತ್ತದೆ ನಾನು ಕೂಡ ಮೂರನೇ ಸಲ ಈ ಶಾಸನ ಸಭೆಯಲ್ಲಿ ನಿಂತು ಮಾತನಾಡುತ್ತಿದ್ದೇನೆ ಏನಾದರೊಂದು ಮಾನದಂಡ ಇಟ್ಟುಕೊಂಡು ರಸ್ತೆಗಳ ಮೇಂಟೆನೆನ್ಸ್, ರಸ್ತೆಗಳನ್ನು ಮಾಡುವುದು, ಹೊಸ ರಸ್ತೆಗಳನ್ನು ಅಭಿವೃದ್ಧಿ ಮಾಡುವುದು, ಈ ಕಾರ್ಯಕ್ರಮವಾಗುತ್ತಿತ್ತು ನಾನು ಮನಸ್ಸು ನೊಂದು ಹೇಳಬೇಕಾಗಿದೆ, ಈ ಮೂರು ವರ್ಷ ಆ ರೀತಿ ಕಾರ್ಯಕ್ರಮ ಎಲ್ಲೂ ಈ ರಾಜ್ಯದಲ್ಲಿ ಆಗಲಿಲ್ಲ ಯಾರ್ಯಾರಿಗೆ ಮರ್ಜಿ ಇದೆ, ಯಾರ್ಯಾರಿಗೆ ಓಲೈಸಲಿಕ್ಕೆ ಶಕ್ತಿ ಇದೆ, ಯಾರ್ಯಾರಿಗೆ ನಿಮ್ಮ ಪಕ್ಷದ ಅಥವಾ ನಿಮಗೆ ಬೇಕಾದವರ ಸಾಂಗತ್ಯವಿದೆ, ಆ ಭಾಗದಲ್ಲಿ ಮಾತ್ರ ರಸ್ತೆಗಳಾಗಿವೆ ಆ ಭಾಗದಲ್ಲಿ ಮಾತ್ರ ರಸ್ತೆ ಅಭಿವೃದ್ಧಿಯಾಗುತ್ತಿವೆ ಅದು National Highway ಯಿಂದ ಹಿಡಿದು, State Highway ಯಿಂದ ಹಿಡಿದು CRF Fund ನಿಂದ ಹಿಡಿದು, ನಬಾರ್ಡ್‌ನಿಂದ ಹಿಡಿದು, 11th, 12th, 13th Finance Commission ನಿಂದ ಹಿಡಿದು, ನಿಮ್ಮ 11,12,13 RIDF ನಿಂದ ಹಿಡಿದು, ನಾನು ಇಲ್ಲಿ ಪಟ್ಟಿಗಳನ್ನು ತಂದು ಇಟ್ಟುಕೊಂಡಿದ್ದೇನೆ, ಎಷ್ಟರ ಮಟ್ಟಿಗೆ ಈ ರಸ್ತೆಗಳ ಆಯ್ಕೆ ಕೆಲಸ ನಡೆಯುತ್ತಿದೆ ? I demand, ಯಾವ ಆಧಾರದ ಮೇಲೆ ಈ ರಾಜ್ಯದಲ್ಲಿ ಇವತ್ತು ರೋಡ್ ಅಭಿವೃದ್ಧಿ ಕೆಲಸ ಮಾಡುತ್ತಿದ್ದೀರಿ ? ನಾನು ಈ ಮನೆಯ ಸದಸ್ಯ ನಾನು ನಿಮ್ಮ ಈ ಬೇಡಿಕೆಯನ್ನು ಪಾಸ್ ಮಾಡಲಿಕ್ಕೆ ಕೈ ಎತ್ತಬೇಕಾಗಿರುವವನು ಏಕೆ ನಿಮಗೆ ಕೈ ಎತ್ತಬೇಕು ? ಸರ್ಕಾರದ ಬೇಡಿಕೆ ಅಲ್ಲವೆ ಅಲ್ಲವಲ್ಲ ನಾನು ಬಹಳ ನೊಂದು ಹೇಳುತ್ತಿದ್ದೇನೆ ಇವರು ಕೊಟ್ಟಿರುವ ದುಡ್ಡು ಎಲ್ಲೆಲ್ಲಿ ಖರ್ಚಾಗುತ್ತದೆಂದು ಯಾರಾದರೂ ಕುಳಿತು ನೋಡುವುದಕ್ಕಾಗಿದೆಯೆ ? 2 ರಿಂದ 3 ಬಹಳ ಎಂದರೆ, 4-5 ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುವುದು, ನಾಳೆ ಅವರು ಚುನಾವಣೆಗೆ ಖರ್ಚು ಮಾಡುವ ಅಗತ್ಯವಿಲ್ಲದೆ ಇದೇ ಹಣದಲ್ಲಿ ಕಾಮಗಾರಿ ಮಾಡಿ ಇವರು ಮಾತ್ರ ಈ

ಶಾಸನ ಸಭೆಗೆ ಬರುವುದಕ್ಕೆ ಸಮರ್ಥರು ಎಂದು ಎನ್ನಿಸಿಕೊಳ್ಳುವುದು, ಇವರು ಮಾತ್ರ ಅಭಿವೃದ್ಧಿ ಮಾಡಲಿಕ್ಕೆ ಶ್ರೇಷ್ಠರು, ಧನ್ಯರು, ಎನಿಸಿಕೊಂಡು ಸರ್ಕಾರಿ R eÁ fÉÃ ÄÆfÁ,ÄÀvÉÃ§ ¼À ÉÆ ¼ÁÛÀÛ Ë J AzÀ fÁ fÀ Charge ಮಾಡುತ್ತಿದ್ದೇನೆ ಪ್ಯಾಕೇಜ್ ಇರಬಹುದು, ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಯಾರಿಗೆ ಇವತ್ತು ಅಧಿಕಾರವನ್ನು ಕೊಟ್ಟು ಈ ಶಾಸನ ಸಭೆ ನಿಮಗೆ ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಉಪ ಮುಖ್ಯಮಂತ್ರಿಗಳಾಗಿ ಎಂದು ಅಧಿಕಾರ ಕೊಟ್ಟಿದೆ ನೀವು ರಾಜ್ಯಕ್ಕೆ ಈ ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದೀರಿ ಎಂದು ಭಾವಿಸಲಿಕ್ಕೆ ಯಾವುದೇ ಆಧಾರವಿಲ್ಲ ಯಾವುದೇ ಮಾಹಿತಿಯಿಲ್ಲ ಶಿವಮೊಗ್ಗದಲ್ಲಿ ನಡೆಯುತ್ತಿರುವ ಕೆಲಸಕ್ಕೆ, ರಾಮನಗರದಲ್ಲಿ ನಡೆಯುತ್ತಿರುವ ಕೆಲಸಕ್ಕೆ ಹಾಸನದಲ್ಲಿ ನಡೆಯುತ್ತಿರುವ ಕೆಲಸಕ್ಕೆ ನಮ್ಮ ಕ್ಷೇತ್ರಗಳನ್ನು ಹೋಲಿಸಿದರೆ, ಹತ್ತನೇ ಒಂದು ಭಾಗ, ಬೇಡ ನೂರನೇ ಒಂದು ಭಾಗಕ್ಕೂ ಕೂಡ ನಾವು ಇವತ್ತು ಹೋಲಿಕೆ ಮಾಡುವ ಸ್ಥಿತಿಯಲ್ಲಿಲ್ಲ ಇದರಲ್ಲಿ ಏನು ನೀವು ಸ್ವಂತ ದುಡ್ಡು ಹಾಕಿದ್ದೀರಾ ? ನಿಮ್ಮ ಪಕ್ಷದ ದುಡ್ಡು ಹಾಕಿದ್ದೀರಾ ? ನಿಮ್ಮ ಜಾತಿ ದುಡ್ಡು ಹಾಕಿದ್ದೀರಾ ? ನಿಮ್ಮ ಮಠಗಳ ದುಡ್ಡು ಹಾಕಿದ್ದೀರಾ ? ನಮ್ಮ ಹತ್ತಿರ ಇರುವ ಜನ ಕಂದಾಯ ಕಟ್ಟುವುದಿಲ್ಲವೇ ? ನಾವು ಈ ದೇಶಕ್ಕೆ ಪ್ರಜೆಗಳಲ್ಲವೆ ? ನಮಗೆ ಇಲ್ಲಿ ಬಾಳುವ ಹಕ್ಕು ಇಲ್ಲವೇ ? ಇದನ್ನು ಯಾರಾದರೂ ಬೇಡಿಕೆ ಎಂದು ಕರೆಯುತ್ತಾರೆಯೇ ? ಇದು ಬೇಡಿಕೆಯಲ್ಲ, ಇದು ಸ್ವಜನಪಕ್ಷಪಾತ ಸ್ವಜನಪಕ್ಷಪಾತ ಮಾಡಿ ಈ ಇಲಾಖೆಗಳನ್ನು ನಡೆಸುತ್ತಿದ್ದೀರೆಂದು ನಾನು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ ನೀವು ಉದ್ದುದ್ದ ಭಾಷಣವನ್ನು ಮಾಡುತ್ತೀರಿ ಮತ್ತೆ ಕಾರ್ಯಕ್ರಮಗಳ ಬಗ್ಗೆ ಪುಸ್ತಕದಲ್ಲಿ ಓದುತ್ತೀರಿ Karnataka State Highway Improvement Project with external aid NABARD with external aid RIDF with external aid ತಾವೇ ಹೇಳಿರುವಂತೆಯೇ ಕೋಟ್ಯಾಂತರ ರೂಪಾಯಿಗಳನ್ನು ಅಂದರೆ, 2253 ಕೋಟಿ ರೂಪಾಯಿಗಳನ್ನು PWD ಒಂದಕ್ಕೆ ಈ ರಾಜ್ಯದ ರಾಜಸ್ವದಿಂದ ಖರ್ಚು ಮಾಡುತ್ತಿದ್ದೀರಿ ಇದರ ಜೊತೆಗೆ ಕೇಂದ್ರ ಸರ್ಕಾರ ನಿಮಗೆ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದಲ್ಲಿ ಹಣ ಕೊಡುತ್ತಿದೆ ಮತ್ತೆ economic importance ಎಂದು ರಸ್ತೆಗಳ ಹೆಡ್‌ನಲ್ಲಿ ಮತ್ತೆ CRF ಕೆಳಗಡೆ ಹಣವನ್ನು ನಿಮಗೆ ಕೇಂದ್ರ ಸರ್ಕಾರ ಕೊಡುತ್ತಿದೆ ಹಾಗೆಯೇ, ಕೇಂದ್ರ ಸರ್ಕಾರ NCCF ಕೆಳಗಡೆ ಹಣ ಕೊಡುತ್ತಿದೆ ಇದು ಅಲ್ಲದೆ ಇವತ್ತಿನ ದಿವಸ ರೂರಲ್ ಡೆವಲಪ್‌ಮೆಂಟ್ ಪಂಚಾಯತ್ ರಾಜ್ ಇಲಾಖೆಯಿಂದ ರಸ್ತೆಗಳಿಗೆ ಖರ್ಚು ಮಾಡುತ್ತಿದ್ದೀರಿ ಮತ್ತೆ ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ ಮತ್ತು ಸಡಕ್ ಕಾರ್ಯಕ್ರಮದಲ್ಲಿ ಕೂಡ ನೀವು ಖರ್ಚು ಮಾಡುತ್ತಿದ್ದೀರಿ ಆದ್ದರಿಂದ, ಇದಕ್ಕೆಲ್ಲಾ ಸಂಬಂಧಪಟ್ಟಂಥ ಪೂರ್ಣ ಮಾಹಿತಿಯ White paper ಅನ್ನು ಈ ಸಭೆಯ ಮುಂದೆ ತಾವು ಮಂಡಿಸಬೇಕು ಇವತ್ತಿನ ದಿವಸ ಈ ರಾಜ್ಯದ ರಸ್ತೆಗಳು, ಕಟ್ಟಡಗಳು, ಸೇತುವೆಗಳು ಪಂಚಾಯತ್‌ನಿಂದಿಡಿದು ಇಲ್ಲಿಯವರೆಗೆ ಯಾವ್ಯಾವ ಯೋಜನೆಗಳ ಕೆಳಗಡೆ ಎಷ್ಟು ಪ್ರಮಾಣದಲ್ಲಿ ಆಗುತ್ತದೆಂಬುದರ ಬಗ್ಗೆ

ತಾವು White paper ಅನ್ನು ಮಂಡಿಸಬೇಕು ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಗಮನಹರಿಸಿದ್ದಾರೆಯೋ ಅಥವಾ ಇಲ್ಲವೋ ಗೊತ್ತಿಲ್ಲ ನಾನು ಇವತ್ತು ಬೆಳಿಗ್ಗೆ ಕುಳಿತುಕೊಂಡು ನೋಡೋಣವೆಂದು ಈ ರಸ್ತೆಗಳ ಬಗ್ಗೆ ಒಂದು ಲಿಸ್ಟ್ ಮಾಡಿದೆ List of RIDF-10 ಮಾಡಿದ್ದೇನೆ ಮತ್ತೆ RIDF-11 ಇವರು ಮತ್ತು ಅವರು ಜೊತೆಯಲ್ಲಿದ್ದಂಥ ಸಂದರ್ಭದಲ್ಲಿ ಇದನ್ನು ಮಾಡಲಾಗಿದೆ ಇದರಲ್ಲಿ ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಇದರಲ್ಲಿ ಇವರು ಹೇಗೆ ಕೊಡುತ್ತಾರೆಂದರೆ, ಉತ್ತರಹಳ್ಳಿ ಕ್ಷೇತ್ರದ ಬಗ್ಗೆ ಹೇಳುವುದಾದರೆ represented by Honorable Minister, ಇಲ್ಲಿಗೆ 31 ಲಕ್ಷ, ಚನ್ನಪಟ್ಟಣ75 ಲಕ್ಷ ದೊಡ್ಡಬಳ್ಳಾಪುರ 103 ಲಕ್ಷ, ನೆಲಮಂಗಲ 97 ಲಕ್ಷ, ದೇವನಹಳ್ಳಿ 131 ಲಕ್ಷ, ರಾಮನಗರ 304 ಲಕ್ಷ, ಕನಕಪುರ 319 ಲಕ್ಷ, ಮಾಗಡಿ 204 ಲಕ್ಷ ಸಾತನೂರು 146 ಲಕ್ಷ, ಹೊಸಕೋಟೆ 120 ಲಕ್ಷ, ಯಲಹಂಕ 110 ಲಕ್ಷ ರೂಪಾಯಿಗಳು RIDF–11 ರಲ್ಲಿ ಬೆಂಗಳೂರು ಗ್ರಾಮಾಂತರ ಪ್ರದೇಶಗಳಿಗೆ ಕೊಟ್ಟರತಕ್ಕಂಥದು ಮತ್ತೆ ಕೋಲಾರ ಜಿಲ್ಲೆಗಳಾದ ಬಾಗೇಪಲ್ಲಿಗೆ 102 ಲಕ್ಷ, ಸಿ ಬಿ ಪುರ 106 ಲಕ್ಷ, ಚಿಂತಾಮಣಿ 83 ಲಕ್ಷ, ವೇಮಗಲ್ 113 ಲಕ್ಷ, ಗೌರಿಬಿದನೂರು 112 ಲಕ್ಷ, ಮಾಲೂರು160 ಲಕ್ಷ, ಮುಳಬಾಗಿಲು 156 ಲಕ್ಷ, ಶಿಡ್ಲಘಟ್ಟ 164 ಲಕ್ಷ, ಶ್ರೀನಿವಾಸಪುರ 100 ಲಕ್ಷ, ಮತ್ತು ಕೋಲಾರ 206 ಲಕ್ಷ ರೂಪಾಯಿ ಕೊಟ್ಟಿದ್ದಾರೆ ಕೋಲಾರಕ್ಕೆ ಹೆಚ್ಚು ಏಕೆಂದರೆ, ಸನ್ಮಾನ್ಯ ಶ್ರೀನಿವಾಸ ಗೌಡರು ಆ ಸಂದರ್ಭದಲ್ಲಿ ಮಿನಿಸ್ಟರ್ ಆಗಿದ್ದರೆಂದು ನಾನು ತಿಳಿದುಕೊಳ್ಳುತ್ತೇನೆ ಕೋಲಾರ ಸಿಟಿ ಏರಿಯಾ ಮತ್ತು ಕೋಲಾರ ರೂರಲ್ ಏರಿಯಾ ಎಷ್ಟು ಬರುತ್ತದೆಂಬುದನ್ನು ತಾವು ಚಿಂತಾಮಣಿಗೆ ಹೋಲಿಸಬೇಕು ಏಕೆಂದರೆ ಚಿಂತಾಮಣಿಗೆ ಕೇವಲ 83 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ ಮತ್ತೆ ಶ್ರೀನಿವಾಸಪುರಕ್ಕೂ ಸಹ ಹೋಲಿಸಿ ನೋಡಬೇಕು ರಸ್ತೆಗಳು ಯಾವ ಕ್ಷೇತ್ರದಲ್ಲಿ ಹೆಚ್ಚಿರಬಹುದು ಮತ್ತೆ ರಸ್ತೆಗಳ ಉದ್ದ ಯಾವ ಕ್ಷೇತ್ರದಲ್ಲಿ ಜಾಸ್ತಿಯಿರಬಹುದೆಂದು ಲೆಕ್ಕ ಮಾಡಬೇಕಾಗುತ್ತದೆ ಕೇವಲ ಕ್ಷೇತ್ರವಾರು ಮಾಡುವುದಕ್ಕೆ ಆಗುವುದಿಲ್ಲ ಇನ್ನು ತುಮಕೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ, ಚಿಕ್ಕನಾಯಕನ ಹಳ್ಳಿಗೆ 132 ಲಕ್ಷ ಕಳ್ಳಂಬೆಳ್ಳ 80 ಲಕ್ಷ, ಗುಬ್ಬಿಗೆ 116 ಲಕ್ಷ ತಿಪಟೂರಿಗೆ 152 ಲಕ್ಷ, ಶಿರಾಕ್ಕೆ 130 ಲಕ್ಷ, ಬೆಳ್ಳಾವಿಗೆ 34 5 ಲಕ್ಷ, ಪಾವಗಡಕ್ಕೆ 162 ಲಕ್ಷ ಮಧುಗಿರಿಗೆ 126 ಲಕ್ಷ, ಕುಣಿಗಲ್‌ಗೆ 130 ಲಕ್ಷ, ಹುಲಿಯೂರುದುರ್ಗಕ್ಕೆ 233 ಲಕ್ಷ, ತುಮಕೂರಿಗೆ 81 ಲಕ್ಷ ತುರುವೇಕೆರೆಗೆ 145 ಲಕ್ಷ, ಕೊರಟಗೆರೆಗೆ 191 ಲಕ್ಷ ರೂಪಾಯಿ ಕೊಟ್ಟಿದ್ದೀರಿ, ತುಮಕೂರು ಮತ್ತು ಕಳ್ಳಬೆಂಳ್ಳ ಕ್ಷೇತ್ರದಲ್ಲಿ ನಿಮ್ಮ ಪಾರ್ಟಿಯ ಶಾಸಕರಿದ್ದರು ಅನಂತರ RIDF-12 ನಲ್ಲಿ ಕೊಟ್ಟಿರತಕ್ಕಂಥದರ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ – RIDF-12 ರಲ್ಲಿ ಉತ್ತರ ಕರ್ನಾಟಕದ ಕಡೆ ನೀಡಿರತಕ್ಕಂಥದ್ದರ ಬಗ್ಗೆ ಕೂಡ ಸ್ವಲ್ಪ ಹೇಳಿ, ನೀವು ದಕ್ಷಿಣದ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಿ ಉತ್ತರ ಕರ್ನಾಟಕ ಜಿಲ್ಲೆಗಳ ಕಡೆ ಇರತಕ್ಕಂಥ ಪರಿಸ್ಥಿತಿ ಬಗ್ಗೆ ಕೂಡ ಸ್ವಲ್ಪ ಹೇಳಿ

ಶ್ರೀ ಜೆ ಸಿ ಮಾಧುಸ್ವಾಮಿ – RIDF-12 ರಲ್ಲಿ ಪಾವಗಡ 136 ಲಕ್ಷ ಮತ್ತು ಶಿರಾ 228 ಲಕ್ಷ ತಿಪಟೂರು 180 ಲಕ್ಷ, ತುರುವೇಕೆರೆಗೆ 243 ಲಕ್ಷ, ಕೊರಟಗೆರೆಗೆ 90 ಲಕ್ಷ, ಮಧುಗಿರಿಗೆ 50 ಲಕ್ಷ, ಬೆಳ್ಳಾವಿಗೆ 63 ಲಕ್ಷ, ಹುಲಿಯೂರುದುರ್ಗ 49 5 ಲಕ್ಷ, ಕುಣಿಗಲ್‌ಗೆ 50 ಲಕ್ಷ, ರೂಪಾಯಿ ಕೊಟ್ಟಿದ್ದಾರೆ we have no place here ಚಿಕ್ಕನಾಯಕನಹಳ್ಳಿ, ಕಳ್ಳಂಬೆಳ್ಳ ಕ್ಷೇತ್ರಗಳನ್ನು ಈ ಪಟ್ಟಿಯಲ್ಲಿ ಸೇರಿಸುವುದಕ್ಕೆ ಜಾಗವೇ ಇಲ್ಲ ನಮ್ಮ ಕ್ಷೇತ್ರಗಳ ಹೆಸರುಗಳೇ ಇದರಲ್ಲಿ ಇಲ್ಲ ಆದ್ದರಿಂದ, ಈ ಬಜೆಟ್‌ನ್ನು ನಾವೇಕೆ ಪಾಸ್ ಮಾಡಬೇಕು ಪಕ್ಕದ ಕ್ಷೇತ್ರಗಳಲ್ಲಿ 2 ರಿಂದ 2 5 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತೇವೆ ಚಿಕ್ಕನಾಯಕನ ಹಳ್ಳಿ, ಮತ್ತು ಕಳ್ಳಂಬೆಳ್ಳ ಈ ಎರಡು ಕ್ಷೇತ್ರಗಳಿಗೆ ಕೇವಲ ಒಂದು ರೂಪಾಯಿಯನ್ನು RIDF-12 ರಲ್ಲಿ ಇಟ್ಟಿಲ್ಲ RIDF-13 ರಲ್ಲಿ ಸಾರಾಸಗಟಾಗಿ 180 ಲಕ್ಷಕೊಟ್ಟಿದ್ದೇವೆಂದು ನಿಮಗೆ ಹೇಳಿರಬಹುದು ಆದರೆ, ನಮಗೆ ಇಷ್ಟು ಕೊಟ್ಟಿಲ್ಲ ನಮಗೆ ಮತ್ತೆ ಅರ್ಧದಷ್ಟು ಅಂದರೆ 90 ಲಕ್ಷ ಅಷ್ಟೇ ಮಾನ್ಯ ಯಡಿಯೂರಪ್ಪನವರಲ್ಲಿ ನಾನು ಈಗ ಕೇಳುವುದೇನೆಂದರೆ, ಈ ರಾಜ್ಯದ್ದೆಲ್ಲಾ ಇಲ್ಲಿ ಓದಿದರೆ ಬಹಳ ಸಮಯ ತೆಗೆದುಕೊಳ್ಳುತ್ತದೆ ವಿಶೇಷವಾಗಿ ತಾವು ಪ್ಯಾಕೇಜ್ ಮಾಡಿ ಹಾಸನ ಬೈಪಾಸ್‌ಗೆ 50 ಕೋಟಿ ರೂಪಾಯಿ ಕೊಟ್ಟಿದ್ದೀರಿ, ಹಾಸನದಲ್ಲಿ ರಿಂಗ್ ರೋಡ್, ಪೆರಿಫೆರಲ್ ರೋಡ್ ಮಾಡುವುದಕ್ಕಾಗಿ 50 ಕೋಟಿ ರೂಪಾಯಿ ಕೊಡುವ ಬಗ್ಗೆ ತಾವೇ announce ಮಾಡಿದ್ದೀರಿ ಇದರ ಜೊತೆಗೆ ಅಲ್ಲಿ ಎಷ್ಟು ಹಣ ಖರ್ಚಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಕೊಡಿ ಹಾಗಾದರೆ, ಈ ರಾಜ್ಯಕ್ಕೆ ಹೇಳುವವರು, ಕೇಳುವವರು ಯಾರು ಬೇಡವೆಂದು ಹೇಳುತ್ತೀರಾ ? ಯಾರಿಗಾದರು ಒಂದು ಖಾತೆ ಕೊಟ್ಟರೆ ಅದು ಅವರ ಸ್ವಂತದ್ದೆಂದು ನಾವು ಭಾವಿಸಿಕೊಳ್ಳೋಣವೆ ? ನಾವೆಲ್ಲಾ ಹೋಗಿ ಒಂದು ದೊಡ್ಡ ಸಲಾಂ ಹೊಡೆದುಬಿಟ್ಟು ಅವರ ಮುಂದೆ ಹುಜೂರ್, ಅದು ಇದು ಮಾಡಿ ಎಂದು ಬೇಡಿಕೊಳ್ಳುವ ಸ್ಥಿತಿಗೋಸ್ಕರ ನಾವು ಇಲ್ಲಿಗೆ ಶಾಸಕರಾಗಿ ಬಂದಿದ್ದೇವೆಯೇ? ಇದೇ ರೀತಿಯಾಗಿ ಮಾಡಬೇಕೆಂದರೆ ದಯಮಾಡಿ ಹೇಳಿಬಿಡಿ ಪ್ರಮಾಣ ವಚನ ತೆಗೆದುಕೊಳ್ಳುವಾಗ ಸತ್ಯದ ಹೆಸರಿನಲ್ಲಿ ಮತ್ತು ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ನಿಷ್ಠೆಯ ಹೆಸರಿನಲ್ಲಿ ಬದುಕಬೇಡಿ, ಯಾರಿಂದ ಈ ರಾಜ್ಯ ನಡೆಯುತ್ತದೆಯೋ ಅವರ ಗುಲಾಮರಾಗಿ ಬದುಕಿ ಎಂದು ಹೇಳಿಬಿಡಿ ಆಗ ನಾವು ಗುಲಾಮರಾಗಿಯೇ ಇದ್ದುಕೊಂಡು ಹೋಗುತ್ತೇವೆ ನಮ್ಮಿಂದಾಗಿ ನಮ್ಮ ಕ್ಷೇತ್ರಕ್ಕೆ ಏಕೆ ಅನ್ಯಾಯವಾಗಬೇಕು ? ನಮ್ಮ ಕ್ಷೇತ್ರದಲ್ಲಿರುವಂತಹ ಜನರು ನಿಮಗೆ ಮತ್ತು ಇನ್ನೊಬ್ಬರಿಗೂ ಸಹ ವೋಟ್ ಹಾಕುತ್ತಾರೆ ನಾಳೆ ದಿವಸ ಯಾರಿಗೆ ವೋಟ್ ಹಾಕುತ್ತಾರೆಂದು ನಮಗೆ ಗೊತ್ತಿಲ್ಲ ಆದರೆ, ಸ್ಟೇಟ್ ಹೈವೇ ಒಂದು ಕ್ಷೇತ್ರ ಮುಗಿಯುತ್ತಾ ಬರುತ್ತಿದ್ದರೆ ಜಂಪ್ ಆಗುತ್ತಾ ಬರುತ್ತದೆ ಅಂದರೆ, ಒಂದು ಕ್ಷೇತ್ರದ ರಸ್ತೆ ಮುಗಿಯುವ ಹೊತ್ತಿಗೆ ಇನ್ನೊಂದು ಕ್ಷೇತ್ರದ ರಸ್ತೆ ಪ್ರಾರಂಭವಾಗುತ್ತದೆ ಆದರೆ, ಅದು ಸಂಪೂರ್ಣವಾಗಿ ಸರ್ವನಾಶವಾಗಿರುತ್ತದೆ ಮತ್ತೆ ಮುಂದೆ ಹೋಗುತ್ತಾ ಜಂಪ್ ಆಗುತ್ತದೆ ಇದನ್ನು ಸ್ಟೇಟ್ ಹೈವೇ ಎಂದು

ಕರೆಯುತ್ತೀರಾ ? You say that you are going to complete the works of State Highway in 2008 2008 ನೇ ಇಸವಿಯೊಳಗೆ ತಾವು ಸ್ಟೇಟ್ ಹೈವೇ ಕೆಲಸವನ್ನು ಮುಗಿಸುತ್ತೀರಾ ? ಇದಕ್ಕೆ ಪ್ರಯಾರಿಟಿ ಏನು ? ನಾನು ಬಹಳ ನೋವಿನಿಂದ ಹೇಳುವುದೇನೆಂದರೆ, ಎಲ್ಲದಕ್ಕಿಂಥ worst affected ಎಂದರೆ, ಸೌತ್ ಕೆನರಾ ಮತ್ತು ಉಡುಪಿ ಈ ರೀತಿ ಏಕೆ ಮಾಡಿದ್ದೀರಿ ? ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಬರುವುದರಿಂದ ರಸ್ತೆಗಳು ಹಾಳಾಗುತ್ತವೆಂದು ಮಾನ್ಯ ಉಪ ಮುಖ್ಯ ಮಂತ್ರಿಗಳಿಗೆ ಗೊತ್ತಿರುತ್ತದೆ ಸೌತ್ ಕೆನರಾ, ಸಕಲೇಶಪುರ, ನಾರ್ಥ್ ಕೆನರಾ ಮತ್ತು ಉಡುಪಿ ಜಿಲ್ಲೆಗಳಲ್ಲಿನ ರಸ್ತೆಗಳ ಸ್ಥಿತಿ ಯಾವ ರೀತಿಯಾಗಿದೆ ಎಂಬುದು ತಮಗೆ ಗೊತ್ತಿದೆಯೇ ? ಇವತ್ತಿನ ದಿವಸ ಯಾರಾದರು ಮಂಗಳೂರಿನಿಂದ ಹಾಸನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತಿದೆಯೇ ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿಯೇ ಕುಳಿತುಕೊಂಡಿದ್ದಾರೆ ಆದ್ದರಿಂದ, ಒಂದು ವಿಷಯವನ್ನು ಕೇಳುವುದಕ್ಕೆ ಬಯಸುತ್ತೇನೆ ಅದೇನೆಂದರೆ ತಾವು ಈಗಾಗಲೇ ಎರಡು ಸಭೆಗಳನ್ನು ಮಾಡಿದ್ದೀರಿ ಏತಕ್ಕಾಗಿ ಸಭೆ ಮಾಡಿದಿರಿ ಎನ್ನತಕ್ಕಂಥದ್ದು ನಮಗೆ ಅರ್ಥವಾಗಲಿಲ್ಲ ಸಭೆ ಮಾಡಿದ ನಂತರ ಕೆಲಸ ಪ್ರಾರಂಭ ಮಾಡಿದ್ದರೆ ನಮಗೆ ಸಂತೋಷವಾಗುತ್ತಿತ್ತು ಸಭೆ ಮಾಡಿದ್ದೇವೆಂದು ಕೇವಲ ಪತ್ರಿಕೆಗಳಲ್ಲಿ ಬರುವುದಕ್ಕೋಸ್ಕರ ಸಭೆಯನ್ನು ಮಾಡಲಾಯಿತೇ ? ಅಥವಾ ಇಲಾಖೆಯಿಂದ ಏನಾದರೂ ಹಣ ತಂದು ಅಭಿವೃದ್ಧಿ ಮಾಡುವಂತಹ ಕೆಲಸ ಮಾಡಲಾಗಿದೆಯೇ ? ಈ ಮಳೆಗಾಲ ಮುಗಿಯುವುದರೊಳಗೆ ಶಿರಾಡಿ ಘಾಟ್ ರಸ್ತೆಯಲ್ಲಿ ಬರುವುದಕ್ಕೆ ಆಗುವುದಿಲ್ಲ ಚಾರ್ಮಾಡಿ ಘಾಟ್ ಮತ್ತು ನಿಮ್ಮ ಬಾಳೆಬರೆ ಘಾಟ್ ರಸ್ತೆ ಕೂಡ ಹಾಳಾಗುತ್ತಿದೆ ವಿಮಾನದ ಟಿಕೆಟ್ ಕೊಡಿ ಎಂದು ನೀವು ಗಲಾಟೆ ಮಾಡಿದಾಗ ನಮಗೆ ಅಧ್ಯಕ್ಷರು ಕೊಡಬಹುದಷ್ಟೆ, ಆದರೆ, ಜನ ಏನು ಮಾಡಬೇಕು ? ಪ್ರತಿ ದಿವಸ 200 ಬಸ್ ಹೋಗುತ್ತದೆ 200 ಬಸ್ ಬರುತ್ತದೆಂದು ನಾನು ಮೊನ್ನೆ ದಿವಸ ಹೇಳಿದ್ದೇನೆ ಆದ್ದರಿಂದ, ಅಲ್ಲಿನ ರಸ್ತೆಗಳ ಬಗ್ಗೆ ಏನು ಮಾಡಲಾಗುತ್ತದೆಂಬುದರ ಬಗ್ಗೆ ತೀರ್ಮಾನವಾಗಬೇಕು

ಶ್ರೀ ಎಂ ಕೆ ಸೋಮಶೇಖರ್ – ಮಾನ್ಯ ಅಧ್ಯಕ್ಷರೆ, ಆ ರಸ್ತೆಯಲ್ಲಿ ಗ್ಯಾಸ್ ತುಂಬಿಕೊಂಡು ಬರುವ ಲಾರಿಗಳು ಈಗ ಬಾರದೇ ಇರುವುದರಿಂದ ಗ್ಯಾಸ್ ಸರಬರಾಜು ಇಲ್ಲದೇ ಜನಸಾಮಾನ್ಯರಿಗೆ ತೊಂದರೆಯಾಗಿದೆ

ಶ್ರೀ ಯು ಟಿ ಖಾದರ್ – ಈ ವರ್ಷದಲ್ಲಿ ಆಗಿರತಕ್ಕಂಥದಲ್ಲ ಕಳೆದ 2 ವರ್ಷದಿಂದಲೂ ಇದೇ ರೀತಿಯಾಗಿ ನಡೆಯುತ್ತಿದೆ ಅಲ್ಲಿ ಯಾವುದೇ ರೀತಿಯಾದ ಒಂದು ಕೆಲಸವೂ ಕೂಡ ಆಗಿಲ್ಲ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ – ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ ಎರಡು ತಿಂಗಳ ಹಿಂದೆ ನಮ್ಮ ಹೈ ಕೋರ್ಟ್‌ನ

ಮುಖ್ಯ ನ್ಯಾಯಾಧೀಶರು ಒಂದು ಕಾರ್ಯಕ್ರಮಕ್ಕೆ ಗೌರಿಬಿದನೂರಿಗೆ ಬರಬೇಕಾಗಿತ್ತು ಮಾನ್ಯ ಶಿವಶಂಕರ್ ರೆಡ್ಡಿಯವರಿಗೆ ಗೊತ್ತಿದೆ ಅವರೂ ಸಹ ಇಲ್ಲಿರಬಹುದು ಗೌರಿಬಿದನೂರಿಗೆ ಹೋಗುವ ದಾರಿ ಯಾವುದೆಂದರೆ, ದೊಡ್ಡಬಳ್ಳಾಪುರದ ಮೇಲೆ ಗೌರಿಬಿದನೂರಿಗೆ ಹೋಗಬೇಕಾಗುತ್ತದೆ His security men advised not to go via Doddaballapur ಅದರ ಬದಲು ಚಿಕ್ಕಬಳ್ಳಾಪುರಕ್ಕೆ ಬಂದು ಆಮೇಲೆ ಈ ಕಡೆ ಬಂದರು ಅದು 60 ಕಿ ಮೀ ರೌಂಡ್ ಹಾಕಿಕೊಂಡು ಬಂದರು ಏನು ಕಾರಣವೆಂದರೆ, ಬೆಂಗಳೂರು-ಗೌರಿಬಿದನೂರು ರೋಡಿನಲ್ಲಿ ಯಾವುದೇ ವಾಹನ ಇವತ್ತು ಓಡಾಡುವ ಸ್ಥಿತಿಯಲ್ಲಿ ಇಲ್ಲ ಅದೇ ರೋಡಿನಲ್ಲಿ ಹರ ಹಿಡಿದು ಇವತ್ತು ಯಾರಾದರೂ ಬಂದರೆ 75 ಕಿ ಮೀ ಕ್ರಮಿಸಲು ನಾಲ್ಕುವರೆ ಗಂಟೆಯಾಗುತ್ತದೆ Absolutely there is no road ಅದು ಲೆಕ್ಕದಲ್ಲಿ State Highway ಬೆಂಗಳೂರು – ಗೌರಿಬಿದನೂರು via ದೊಡ್ಡಬಳ್ಳಾಪುರ ರಸ್ತೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ . ಎರಡು ವರ್ಷದಿಂದ ನಾವು ಗಲಾಟೆಯನ್ನು ಮಾಡಿದರೂ ನಮಗೆ ಇನ್ನೂವರೆಗೆ ಮೈನ್ಸ್ ಲಾರಿಯನ್ನು ನಿಲ್ಲಿಸುವುದಕ್ಕಾಗಿರುವುದಿಲ್ಲ

ಶ್ರೀ ಜಿ ವಿ ಶ್ರೀರಾಮ ರೆಡ್ಡಿ – ಆಗ High Court Judge ಕೇಳಿದರು ಏಕೆ ಈ ರೋಡಿನಲ್ಲಿ ಕರೆದುಕೊಂಡು ಬರುತ್ತಿದ್ದೀರಿ ಎಂದು ಕೇಳಿದರೆ, ಅದು Motorable ರೋಡ್ ಆಗಿ ಉಳಿದಿಲ್ಲ, ಅದಕ್ಕೋಸ್ಕರ ನಾವು ಹೋಗುವುದಕ್ಕೆ ಅಡ್ವೈಸ್ ಮಾಡುವುದಿಲ್ಲವೆಂದು N H 7 ರಲ್ಲಿ ಚಿಕ್ಕಬಳ್ಳಾಪುರಕ್ಕೆ ಬಂದು 45 ಕಿ ಮಿ ಡೈವರ್ಷನ್ ತೆಗೆದುಕೊಂಡು ಗೌರಿಬಿದನೂರಿಗೆ ಬಂದು ವಾಪಸ್ಸು ಬಂದ ಮೇಲೆ ನ್ಯಾಯಾಧೀಶರು ಸರ್ಕಾರಕ್ಕೆ ಹೇಳಿದ್ದಾರೆ ಬಹುಶ ಇದು ಗೃಹ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಮುಖ್ಯ ನ್ಯಾಯಾಧೀಶರು ಸರ್ಕಾರಕ್ಕೆ ಆ ರಸ್ತೆಯನ್ನು ತಕ್ಷಣ ಮಾಡಬೇಕೆದು ಹೇಳಿದ್ದಾರೆ ಅವರು ಹೇಳಿ 6 ತಿಂಗಳಾಯಿತು ಇನ್ನುವರೆಗೆ ಅದರ ತಂಟೆಗೆ ಹೋಗಿಲ್ಲ, ಆ ರಸ್ತೆಯಲ್ಲಿ ಓಡಾಡುವ ಸ್ಥಿತಿಯಲ್ಲಿಲ್ಲ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಯಾರೂ ಇಲ್ಲ ಇವರು ಹೇಳಿದ್ದನ್ನು ಯಾರು ಬರೆದುಕೊಳ್ಳುತ್ತಾರೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಅಧ್ಯಕ್ಷರೆ, ನಾವು ಮಂತ್ರಿಗಳಾಗಿ ಅಧಿಕಾರದಲ್ಲಿ ಕೆಲಸವನ್ನು ಮಾಡಿದ್ದೇವೆ ನಾನು ಒಪ್ಪಿಕೊಳ್ಳುತ್ತೇನೆ, ಒಂದು ಜಿಲ್ಲೆಗೆ ಹಣವನ್ನು ಕೊಡುವಾಗ ಬಹಳ balance ಆಗಿ ಹಣವನ್ನು ಕೊಡುವುದು ಕಷ್ಟ ಆದರೆ balance maintain ಮಾಡುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವಾಗಬೇಕಲ್ಲವೆ ?

ನಮ್ಮ ಜಿಲ್ಲೆಯಿಂದ 4 ಜನ ಬಿಜೆಪಿ ಸದಸ್ಯರು ಆರಿಸಿ ಬಂದಿದ್ದಾರೆ ಈಗ ನಿಮ್ಮ ಜವಾಬ್ದಾರಿ ಹೆಚ್ಚಾಗಿದೆಯಲ್ಲವೆ ? ಆದರೆ ಪರಿಸ್ಥಿತಿ ಏನಾಗಿದೆ ? ನಾನು 25 ವರ್ಷದಿಂದ ಆ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೇನೆ ಇಷ್ಟು worst condition of roads ನಾನು life ನಲ್ಲಿ ನೋಡಿಲ್ಲ ಎಷ್ಟು ಪತ್ರವನ್ನು ಬರೆಯಬೇಕು, ಎಷ್ಟು ಸಲ ಮಾತನಾಡಬೇಕು Main Highway ಬಿಟ್ಟರೆ National Highway, World Bank Roads ಬಿಟ್ಟರೆ ಯಾವ ರಸ್ತೆಗಳು ಚೆನ್ನಾಗಿವೆ? ಧಾರವಾಡ - ಹಳಿಯಾಳ ನೋಡಿ, ಮರಗೋಡು ನೋಡಿ, ಶಿರಸಿ ನೋಡಿ, ಎಲ್ಲ ರಸ್ತೆಗಳೂ ಕೆಟ್ಟಿವೆ ಇದಕ್ಕೆ ಯಾರು ಜವಾಬ್ದಾರರು ?

(ಗೊಂದಲ)

ಅಧ್ಯಕ್ಷರು ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೆ, ಕೇಳಿ ನಿಮ್ಮ ಸರದಿ ಬಂದಾಗ ನೀವು ಹೇಳಬಹುದು

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ Central Road Fund ನ್ನು ಇವರು ಹೇಗೆ spend ಮಾಡುತ್ತಾರೆಂದು ಒಂದು ಜಿಸ್ಟ್ ಕೊಡುತ್ತೇನೆ CRF ನಲ್ಲಿ 2004-05 only to Kolar 475 ಲಕ್ಷ ರೂಗಳು 2005-06 ಕ್ಕೆ 380 ಲಕ್ಷ ರೂ ಗಳು 2006-07 ಕ್ಕೆ 900 ಲಕ್ಷ ರೂ ಗಳು, Total Rs 1755 ಲಕ್ಷ ರೂ ಗಳು, ಬೆಂಗಳೂರಿಗೆ 970 ಲಕ್ಷ ರೂಗಳು, ಇದೇ ಸರ್ಕಲ್‌ನಲ್ಲಿ ತುಮಕೂರಿಗೆ 290 ಲಕ್ಷ ರೂ ಗಳೂ ಇದಕ್ಕೆ ಈ ಮಂತ್ರಿಗಳೂ ಒಬ್ಬರೇ ಕಾರಣರು ಎಂದು ನಾನು ಹೇಳುವುದಿಲ್ಲ ನಮ್ಮನ್ನು ಪ್ರತಿನಿಧಿಸುವಂಥ ಕೇಂದ್ರ ಒಬ್ಬ ಮಂತ್ರಿ ಇದ್ದಾರೆ ಅವರಿಗೆ ಕೋಲಾರ ಬಿಟ್ಟರೆ ಬೇರೆ ಏನು ಕಾಣುತ್ತಿಲ್ಲ 1330 15 ಕೋಟಿ ರೂ ಗಳ Funds ಇದ್ದರೆ 17 ಕೋಟಿ 55 ಲಕ್ಷ ರೂಗಳನ್ನು ಒಬ್ಬರೆ/ಇಟ್ಟು ಕೊಳ್ಳುತ್ತಾರೆ ಕೋಲಾರ ಜಿಲ್ಲೆಗೂ ಆಗಿದೆ ಎಂದು ನನಗೆ ಗೊತ್ತಿಲ್ಲ/ ಅದು ಆಗುವುದಕ್ಕೆ ಸಾಧ್ಯವಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದರಲ್ಲಿ ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರಿಗೆ ಒಂದು ರೂ ಇಲ್ಲ ಅದು ಅವರ ಲೋಕಸಭಾ ಕ್ಷೇತ್ರದಲ್ಲಿ ಮಾತ್ರ ಆಗಿರುವುದು ತಾಲ್ಲೂಕುವೈಸ್ ನೋಡಿ

ಶ್ರೀ ಜೆ ಸಿ ಮಾಧುಸ್ವಾಮಿ ಬಹಳ ದೊಡ್ಡ ಲೀಡರ್‌ಗಳು ಇರುವುದು ಕಾಂಗ್ರಸ್‌ನಲ್ಲಿ Central Road Fund ನಲ್ಲಿ ದಕ್ಷಣ ಕನ್ನಡ 288 ಲಕ್ಷ ರೂ ಗಳು, ಉಡುಪಿ ಏನೂ ಇಲ್ಲ ಕೊಡಗು 488 ಲಕ್ಷ ರೂ ಗಳು

ಒಬ್ಬ ಮಾನ್ಯ ಸದಸ್ಯ ಉಳ್ಳಾಲ ಮತ್ತು ಮೂಡಬಿದರೆಗೆ ಎರಡು ವರ್ಷದಿಂದ ಒಂದೇ ಒಂದು ರಸ್ತೆಯನ್ನು ಕೊಟ್ಟಿರುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಆಮೇಲೆ Head of account on 5054 ರಲ್ಲಿ 2005–06 ಕ್ಕೆ 785 ಲಕ್ಷ ರೂ ಗಳು, ಒಟ್ಟು 830 ಲಕ್ಷ ರೂ ಗಳು Special Division 138 02 ಕೋಟಿ ರೂ ಗಳು 5054 ರ ಹೆಡ್‌ನಲ್ಲಿ 138 02 ಕೋಟಿ ರೂ ಗಳು ನಾನು ಫಿಗರ್ಸ್‌ನ್ನು ಬಹಳ ಚೆನ್ನಾಗಿ ನೋಡಿ ಹೇಳುತ್ತಿದ್ದೇನೆ Special Division in Bangalore whichcreated in Ramanagara 138 ಕೋಟಿ 5054 State Head of account ನಲ್ಲಿ ತುಮಕೂರು 89 ಲಕ್ಷ ರೂ ಗಳು ನಾವು ಈ ಮನೆಯ ಸದಸ್ಯರಾಗಿ ಇರಬೇಕೆ ? ನಮಗೆ ಮಾನ ಮರ್ಯಾದೆ ಏನಾದರೂ ಇದೆಯಾ ? ನಮ್ಮ ಜನ ನಮ್ಮನ್ನು ಕೇಳುತ್ತಾರೆ, ನೀವು ಏನು ಮಾಡುತ್ತಿದ್ದೀರಿ, ಬಜೆಟ್ ಅಸೆಂಬ್ಲಿಯಲ್ಲಿ ಪಾಸ್ ಆಗುತ್ತದೋ ಆಫೀಸಿನಲ್ಲಿ ಪಾಸ್ ಆಗುತ್ತದೋ ಎಂದು ಕೇಳಿದರೆ ನಾವು ಏನು ಹೇಳಬೇಕು ಹಾಸನ ಸರ್ಕಲ್, ಹಾಸನ್ 2575 ಲಕ್ಷ ರೂ ಗಳು, ಚಿಕ್ಕಮಗಳೂರು 240 ಲಕ್ಷ ರೂ ಗಳು total for three years 2 40 ಕೋಟಿ ರೂ ಗಳು ಚಿಕ್ಕಮಗಳೂರಿಗೆ ನಿಮಗೆ ಏನಾದರೂ ಅನ್ನಿಸಬೇಕಲ್ಲಾ ಮಾನ್ಯ ಯಡಿಯೂರಪ್ಪನವರೆ ನಿಮ್ಮ ಶಾಸಕರು ಇರುವ ಕ್ಷೇತ್ರವೆಂದು ಇದು ಹಾಳಾಗಿರುವುದು ಸ್ವಾಭಿಮಾನಕ್ಕಿಂತ ಅಧಿಕಾರ ದೊಡ್ಡದೆ ? 25 72 ಕೋಟಿ ರೂ ಗಳು, ನಾನು ಕಂಪ್ಲೀಟ್ ಮಾಡುತ್ತೇನೆ 3054 ರಲ್ಲಿ ಗ್ರಾಂಟ್‌ನಲ್ಲಿ ರಸ್ತೆಗಳ ಉದ್ದದ ಆಧಾರದ ಮೇಲೆ ಗ್ರಾಂಟ್ ಕೊಡುವುದು Bangalore Rural is entitled for 1421 ಲಕ್ಷ ರೂ ಗಳಿಗೆ, 393 ವರ್ಕ್‌ಗಳಿಗೆ Bangalore Special Division 470 ಲಕ್ಷ ರೂ ಗಳಿಗೆ, ಕೋಲಾರ 1754 ಲಕ್ಷ ರೂ ಗಳಿಗೆ ತುಮಕೂರು 3030 ನಷ್ಟ ರೂ ಗಳಿಗೆ we are entitled ಏಕೆ ? ತುಮಕೂರು, ಬೆಳಗಾಂ, ಗುಲ್ಬರ್ಗಾ ಇವತ್ತು ಪ್ರಮುಖವಾಗಿ ಕರ್ನಾಟಕ ರಾಜ್ಯದಲ್ಲಿ ಉಳಿದುಕೊಂಡಿರುವ ದೊಡ್ಡ ಜಿಲ್ಲೆಗಳು ನಾವು ರಸ್ತೆಯ ಉದ್ದದ ವಿಸ್ತೀರ್ಣದಲ್ಲಿ ಜಿಯಾಗ್ರಫಿಕಲ್ ಏರಿಯಾದಲ್ಲಿ ಇರುವಂಥ ಜನ ಅಷ್ಟನ್ನು ಕೊಡಬೇಕಾಗಿತ್ತು 2004–05 ರಲ್ಲಿ ತಾವು ಬರುವುದಕ್ಕೆ ಮುಂಚೆ ಇದು ಇತ್ತು ನೀವು ಬಂದ ಮೇಲೆ ಏನು ಮಾಡಿದಿರಿ, 1067, 533, 1967 ಕ್ಕೆ ತುಮಕೂರನ್ನು ಇಳಿಸಿದಿರಿ ಶಿವಮೊಗ್ಗ ಸರ್ಕಲ್ 3054 ರಲ್ಲಿ 34 ಕೋಟಿ 58 ಲಕ್ಷ ರೂ ಗಳು ಅದ next year 22 ಕೋಟಿ 58 ಲಕ್ಷ ರೂ ಗಳು corresponding ಆಗಿ ಅದೇ ಸರ್ಕಲ್‌ನಲ್ಲಿರುವ ಚಿಕ್ಕಮಗಳೂರಿಗೆ 18 70 ಕೋಟಿ ರೂ ಗಳು 10 93 ಕೋಟಿ ರೂ ಗ over all 57 17 ಕೋಟಿ ರೂ ಗಳು ಇವರು ಹಾಸನಕ್ಕೆ ಕೊಡುತ್ತಿದ್ದಾರೆ 3054 12ನೇ ಹಣಕಾಸಿನಲ್ಲಿ ನಾವು 2004–05 ರಲ್ಲಿ ಏನೂ ಇಲ್ಲ 2005–06 ನಲ್ಲಿ ಇಲ್ಲ 2006–07 ರಲ್ಲಿ ತುಮಕೂರು 12ನೇ ಹಣಕಾಸಿನಲ್ಲಿ ನಮಗೆ ಒಂದಿಷ್ಟು ಹಣವನ್ನು ಕೊಟ್ಟಿದ್ದೀರಿ ಚಮರಾಜನಗರ ಕ್ಕೆ ನಮ್ಮ ಸ್ನೇಹಿತರಾದ ವಾಟಾಳ್ ನಾಗರಾಜ್‌ರವರು ಹೊರಗಡೆ ಹೋಗಿದ್ದರೆ ಅಲ್ಲಿಗೆ 172 ಲಕ್ಷ ರೂ ಗಳನ್ನು ಕೊಟ್ಟಿದ್ದಾರೆ ಹಾಸನ ಕ್ಕೆ 12 ಕೋಟಿ 46 ಲಕ್ಷಗಳು, ಅದೇ ಸರ್ಕಲ್‌ನಲ್ಲಿರುವಂತಹ ಚಿಕ್ಕಮಗಳೂರಿಗೆ 296 ಲಕ್ಷ ರೂಪಾಯಿಗಳು ಹಾಸನ ಸರ್ಕಲ್‌ಗೆ 15 ಕೋಟಿ 43 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ ಚಿಕ್ಕಮಗಳೂರಿಗೆ

2 ಕೋಟಿ ರೂಪಾಯಿಗಳು ಹೋಗುತ್ತದೆ, ಮಿಕ್ಕ ಎಲ್ಲಾ ಹಣವು ಹಾಸನದಲ್ಲಿ ಖರ್ಚಾಗುತ್ತದೆ ಕೆಆರ್‌ಡಿಸಿಎಲ್ ಇದನ್ನು ನೋಡಿದರೆ ಏನಾದರೂ ಬಜೆಟ್ ಪಾಸು ಮಾಡುವಂತಹ ಬಜೆಟ್ ಎಂದು ತಮಗೆ ಅನಿಸುತ್ತದೆಯೇ ? KRDCL Bridge Works ತುಮಕೂರಿಗೆ 117 ಲಕ್ಷ ರೂಪಾಯಿಗಳು, ಹಾಸನ 142 ಲಕ್ಷ ರೂಪಾಯಿಗಳು, entire Mangalore Circle ಅಲ್ಲಿ ಬ್ರಿಡ್ಜ್‌ಗಳು ಹಾಳಾಗಿ ಹಾಹಾಕಾರವಾಗುತ್ತದೆ Just 35 lakhs ಮಾನ್ಯ ಯಡಿಯೂರಪ್ಪನವರೆ, ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ? ಏನು ನಡೆಯುತ್ತಿದೆ ಎಂದು ತಾವು ಹೇಳಬೇಕು ನಮಗೆ

ಶ್ರೀ ಹೆಚ್ ಎಂ ವಿಶ್ವನಾಥ್ ಹಾಸನದಲ್ಲಿ ಕೆಲಸ ಆಗದೆ ಇರುವಂತಹ ಮಲೆನಾಡು ಬಾಗದಲ್ಲಿ ರಸ್ತೆಗಳಿಗಾಗಿ ಸ್ವಲ್ಪ ಹಣವನ್ನು ಕೊಡುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ನಾವು ಮಾತನಾಡುವುದನ್ನು ಮಾತನಾಡುತ್ತಿರುತ್ತೇವೆ ಉತ್ತರವನ್ನು ಹೇಳುವುದಕ್ಕೆ ಮಂತ್ರಿಗಳು ಇದ್ದಾರೆ ನಮ್ಮ ಹತ್ತಿರ ಮಾಹಿತಿ ಇದೆ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು ಸಕಲೇಶಪುರ ಒಂದೇ ಮಲೆನಾಡೆ, ಚಿಕ್ಕಮಗಳೂರು ಮಲೆನಾಡು ಅಲ್ಲವೇ ?

ಶ್ರೀ ಹೆಚ್ ಎಂ ವಿಶ್ವನಾಥ್ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಏನು ಕೊಡಲಿಲ್ಲವಲ್ಲಾ ?

ಶ್ರೀ ಜೆ ಸಿ ಮಾಧುಸ್ವಾಮಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವಂತಹ ಕಾರ್ಯಕ್ರಮ, ಇದನ್ನು ಮಾಡುವ ಬಗ್ಗೆ ಏನು ಅರ್ಹತೆ ಆಧಾರ ಎಂದು ಹೇಳಿ, ಈ ಸಭೆಯಲ್ಲಿ ಯರಾದರೂ ಹೇಳಬೇಕು ಈ ಬಗ್ಗೆ ನಾವು ತಿಳಿದುಕೊಂಡಿದ್ದೆವು Traffic survey, Length of the Road, surface level connectivity, Surface ಏನಿದೆ, ಅದು asphalted ಇದೆಯೇ ? Macadam ಇದೆಯಾ, ಎಷ್ಟು population ಗೆಂದು ಅದು ಕವರ್ ಆಗುತ್ತದೆ ? ಇವತ್ತು ಇಲ್ಲಿ ತೆಗೆದುಕೊಂಡಿರುವಂತಹ ರಸ್ತೆಗಳನ್ನು ತಾವು ನೋಡಬೇಕು ಇಡೀ ಬೆಂಗಳೂರು 32 ಕಿ ಮಿ ಬೆಂಗಳೂರು ಗ್ರಾಮಾಂತರ 134ಕಿ ಮಿ when it comes to Hassan 439 Kms Nowhere in Karnataka 300 Km ಮೈಸೂರು 375 ಕಿ ಮಿ ಒಂದನ್ನು ಬಿಟ್ಟರೆ ಇನ್ನು ಯಾವುದನ್ನು ಸಹ ತೆಗೆದುಕೊಳ್ಳಲಿಲ್ಲ ಇವರು ಯಾವುದನ್ನು ತೆಗೆದುಕೊಂಡಿರುವುದು, ಅವರಿಗೆ ಇಷ್ಟಬಂದ ಹಾಗೆ ತೆಗೆದುಕೊಂಡಿದ್ದಾರೆ ಇಡೀ ತುಮಕೂರು ಜಿಲ್ಲೆಗೆ ಮಾನ್ಯ ಯಡಿಯೂರಪ್ಪನವರೆ, ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಕಿ ಮಿ ರಸ್ತೆ ಯನ್ನು upgrade ಮಾಡುವ ಬಗ್ಗೆ ಯೋಜನೆಯನ್ನು ತೆಗೆದುಕೊಳ್ಳಲಿಲ್ಲ ಏನು ನಾವು ಅವರ ಹತ್ತಿರ ಹೋಗಿ ಪಾದವನ್ನು ಮುಟ್ಟಲಿಲ್ಲ ಅಂತಲಾ ? ಹಾಕಿಸಿ ಕಾವಿನಾ, ಅವರನ್ನು ಕೂರಿಸಿ ಮರಕ್ಕೆ ಹಾಳಾಗಿ ಹೋಗಲಿ, ಹೋಗಿ ಅಡ್ಡ ಬೀಳುತ್ತೇವೆ ನಾವು ಅವರ ಪಾದವನ್ನು ನೆಕ್ಕುವುದಕ್ಕಾ

ಇಲ್ಲಿ ಎಂಎಲ್ ಎ ಆಗಿ ಬಂದಿರುವುದು ? ನೀವು ನಮ್ಮ ಕೈಯಿಂದ ಅವರ ಪಾದವನ್ನು ನೆಕ್ಕಿಸಬೇಕೆ ? ಏತಕ್ಕಾಗಿ ಇಲ್ಲಿ ಚಿಕ್ಕನಾಯಕನಹಳ್ಳಿ ರಸ್ತೆಗಾಗಿ 1 ಕಿ ಮಿ ಕೊಟ್ಟಿಲ್ಲ ಹಾಗಾದರೆ ನಮ್ಮ ಹೋಬಳಿ ಬಿಟ್ಟು ಬಿಡಿ ನಿಮ್ಮ ಎಂಎಲ್ಎ ಕ್ಷೇತ್ರದ ಬಗ್ಗೆ ಏನು ಮಾಡಿದ್ದೀರಿ ? ನಾಳೆ ದಿವಸ ಜನರ ಎದುರಿಗೆ ಹೋಗಿ ಏನು ಮಾಡಬೇಕು ? ಇವತ್ತು ತಿಪಟೂರು ತಾಲ್ಲೂಕಿನಲ್ಲಿ 2 ಕಿ ಮಿ ನನ್ನ ಕ್ಷೇತದ ಒಂದು ರೋಡ್ upgrade ಆಗುತ್ತದೆ, ಅದು ನರಸಿಂಹಸ್ವಾಮಿ ಬೆಟ್ಟಕ್ಕೆ ಹೋಗುತ್ತದೆ ಅಲ್ಲಿ ಬಸ್ಸುಗಳು ಹೋಗುತ್ತದೆಯೇ? ಲಾರಿಗಳು ಹೋಗುತ್ತದೆಯೇ ? ಭೂಮಿಯ ಮೇಲೆ ಜನರು ನಿಮ್ಮನ್ನು ಆಡಿಕೊಂಡು ನಗುವುದಿಲ್ಲವೇ ? 2 ಕಿ ಮಿ ಇರುವಂತಹ ಒಂದು ದೇವಸ್ಥಾನದ ರೋಡ್‌ನ್ನು ನೀವು ಪಿಡಬ್ಲ್ಯೂಡಿಗೆ ತೆಗೆದುಕೊಳ್ಳುತ್ತೀರಿ, 65–66 ಕಿ ಮಿ ನಾವು ನಬಾರ್ಡ್‌ನಿಂದ ಮಾಡಿರುವುದು, Surface ಹಾಳಾಗಿ ಹೋಗುತ್ತದೆ ಅಲ್ಲಿ ಸರಿಯಾಗಿ maintainance ಇಲ್ಲ ಟಾರು ರೋಡ್‌ಗಳನ್ನು ZP ಯವರು maintainance ಮಾಡುವುದಕ್ಕಾಗುತ್ತಿಲ್ಲ ಇದನ್ನು ಏನಾದರು upgrade ಮಾಡಿ ಎಂದು ಬೊಂಬಡ ಬಡಿದುಕೊಳ್ಳುತ್ತಿದ್ದೇವೆ ಇದು ಅವರಿಗೆ ಬೇಕಿಲ್ಲ, ಈ ಬಗ್ಗೆ ಮಾನ್ಯ ಯಡಿಯೂರಪ್ಪನವರೆ, ತಮ್ಮ ಹತ್ತಿರ ಒಂದು ಪಟ್ಟಿ ಇರಬೇಕಲ್ಲಾ ಸಾರ್ ಯಾವ ಯಾವ ರೋಡ್‌ನ್ನು ನಬಾರ್ಡ್‌ನಲ್ಲಿ ತೆಗೆದುಕೊಂಡು Asphalt ಮಾಡಿದ್ದೀರಿ? ಆ ರೀಚ್ ಇವತ್ತು ರಿಪೇರಿಗೆ ಬಂದಿದ್ದರೆ ಏನು ಮಾಡಬೇಕು ? ಯಾವ ಯಾವ ರೋಡ್‌ನ್ನು KSHIP ನೊಳಗಡೆ agreement ಮುಗಿದಿದೆ, ಆ ರೋಡನ್ನು maintainance ಮಾಡುತ್ತಿರುವ ಬಗ್ಗೆ ಒಂದು ಪಟ್ಟಿ ನಿಮ್ಮ ಹತ್ತಿರ ಇರಬೇಕು ಯಾವ ಯಾವ ರೋಡ್ National Highway ನಲ್ಲಿದೆ, ಹೊಸದಾಗಿ Notify ಆಗಿರುವಂತಹ ರೋಡ್‌ಗಳು ಯಾವುದು ? ಅದರಲ್ಲಿ Curves ಎಷ್ಟು ? Bends , ಎಷ್ಟು ? ಹಾಳಾಗಿರುವಂತ Bridge ಗಳು ಎಷ್ಟು? tonnageನ vehicle ಗಳು move ಆಗುತ್ತಿವೆ ಈ ಬಗ್ಗೆ ಈ ರಾಜ್ಯದಲ್ಲಿ ಈ ಕಾರ್ಯಕ್ರಮದ ಬಗ್ಗೆ ಒಂದು ಆಧಾರವಿದೆಯೇ ? ಇಡೀ Mines Lorry ಗಳು ಓಡಾಡುವಂತಹ ಜಾಗ ಒಂದೇ ಒಂದು ರೋಡ್‌ಗಳು ಆಗಲಿಲ್ಲ Economic importance ಎಂದು ಹೇಳಿ ಕೇಂದ್ರ ಸರ್ಕಾರದವರು ರಸ್ತೆಗಾಗಿ ಹಣವನ್ನು ಕೊಡುತ್ತಾರೆ Railway Link ಎಂದು ಹೇಳಿ ಕೇಂದ್ರ ಸರ್ಕಾದವರು ಹಣವನ್ನು ಕೊಡುತ್ತಾರೆ Railway wagon ಗಳಿಗೆ transportation ಮತ್ತೊಂದಕ್ಕೆ ಆ ಹಣವೂ ಕೂಡಿ ರಾಜ್ಯಕ್ಕೆ ಬರುತ್ತದೆ Mining Area, ಒಳ್ಳೆಯ economic Importance ಇರುವಂತಹ ಜಾಗ ಕರ್ನಾಟಕದಲ್ಲಿ ಇದೆ ಎಂದು ನಾನು ಕೇಳಿತ್ತಿದ್ದೇನೆ Economic importance ನಲ್ಲಿ ನಿಮ್ಮ Industrial Area ಬರಬಹುದು, Mining Area ಬರಬಹುದು, densely populated area ಬರಬಹುದು Any number of Roads can be granted Sir, ಕೊರತೆ ಇಲ್ಲದಂತಹ grant ನಮ್ಮ ಕೇಂದ್ರ ಸರ್ಕಾರದಲ್ಲಿ ಇದೆ ಮಾನ್ಯ ಯಡಿಯೂರಪ್ಪನವರೆ, ಎಷ್ಟು grant ನ್ನು ತಂದಿದ್ದೀರಿ ? ನಾನು 17 ಚಿಲ್ಲರೆ ಕೋಟಿಗೆ ಒಂದು ರೋಡ್‌ನ್ನು Mines Road ಗೆ estimate ಮಾಡಿ ಕಳುಹಿಸಿದರೆ,

State Government ನವರು follow up ಮಾಡಲಿಲ್ಲವೆಂದು ಅವರು ನನಗೆ ಹೇಳುತ್ತಾರೆ ಅವರು ಕಳುಹಿಸುವುದಿಲ್ಲ, ಅದು ಅವರಿಗೆ ಬೇಕಿಲ್ಲ ನಾವ್ಯಾರು ಕೂಡ ಅಚ್ಚುಕಟ್ಟಾಗಿ ಓಡಾಡಬಾರದು, ಇದನ್ನು ನಾನು ಆರಂಭದಲ್ಲೆ ಹೇಳಿದ ಹಾಗೆ ಮುಂದಿನ ಚುನಾವಣೆಯನ್ನು ನೀವು ಸರ್ಕಾರಿ ಖಜಾನೆಯಿಂದ ಮಾಡುತ್ತಿದ್ದೀರಿ ? They are going to organise your election Sir, Selection of work ಹೇಗೆ ಆಗುತ್ತಿದೆ ಎಂದರೆ, ಈ ರಾಜ್ಯದಲ್ಲಿ ತಾವು ಇಲ್ಲಿ ಒಂದು ಬಿಳಿ ಪತ್ರ ಅಂದರೆ ಶ್ವೇತಪತ್ರವನ್ನು ಮಂಡಿಸಬೇಕು ಯಾವ ಆಧಾರದ ಮೇಲೆ ಇವತ್ತು ನಬಾರ್ಡ್ ರೋಡ್‌ಗಳು ಅಯ್ಕೆ ಆಗುತ್ತಿದೆ ? ಯಾವ ಆಧಾರದ ಮೇಲೆ CRF ನಲ್ಲಿರುವಂತಹ ರೋಡ್‌ಗಳನ್ನು ಆಯ್ಕೆ ಮಾಡುತ್ತಿದ್ದೀರಿ ? ಯಾವ ಆಧಾರದ ಮೇಲೆ 12th Finance Commission ನಲ್ಲಿ ಹಣವನ್ನು ಕೊಡುತ್ತಿದ್ದೀರಿ ? ridf ಗೆ ಎಷ್ಟು ಕೊಡುತ್ತಿದ್ದೀರಿ ? ಅವುಗಳಿಗೆಲ್ಲಾ ಸ್ಪಷ್ಟವಾದ ಮಾನಗೋಲು ಇದೆ ನಿಯಮಗಳು ಇದೆ, ಒಂದೇ ಒಂದು ನಿಯಮ ಈ ರಾಜ್ಯದಲ್ಲಿ ಅನುಷ್ಠಾನವಾಗಲಿಲ್ಲ ಇವರು ಕಾರ್ಯಕರ್ತರುಗಳನ್ನು phone ಮಾಡಿಕೇಳುತ್ತಾರೆ ಇಲ್ಲಿ ಯಾವ ರೋಡ್‌ನ್ನು ಸೇರಿಸೋಣ ಎಂದು ಅವರು ನಮ್ಮನ್ನು ಕೇಳುವುದಿಲ್ಲ ಅವರು ನಮ್ಮನ್ನು ಕೇಳಕೂಡದು, ನಾನು ಅದನ್ನು ಕೂಡ endorse ಮಾಡುತ್ತೇನೆ we are not there to say ಯಾವ ರೋಡ್‌ನ್ನು ಸೇರಿಸಬೇಕು, ಯಾವ ರೋಡ್‌ನ್ನು ಸೇರಿಸಬಾರದು ಇದನ್ನು ಹೇಳುವುದು ಎಂಎಲ್‌ಎಗಳಲ್ಲ ಸಾರ್ ನಿಮ್ಮ Executive Engineer, Superintending Engineer, Chief Engineer ಚಪ್ರಾಸಿಗಳ, ನಾನು ನೊಂದು ಹೇಳಬೇಕಾಗಿದೆ ಇಡೀ ಅಧಿಕಾರಿಗಳ ಮೇಲೆ ಸರ್ಕಾರದ control ಇಲ್ಲ ರಾಜ್ಯ ಸರ್ಕಾರದ ಡಿ ಸಿ ಗಳು ಎಸ್ ಪಿ ಗಳಿಗೆ ಹೇಳುವವರು ಇಲ್ಲ ಆದರೆ 2 ಇಲಾಖೆಗಳಲ್ಲಿ ಇಡೀ ಅಧಿಕಾರಿಗಳೆ ಸತ್ತು ಹೋಗಿಬಿಟ್ಟಿದ್ದಾರೆ ಅವರು ಉಸಿರನ್ನು ಬಿಡುವಹಾಗೆ ಇಲ್ಲ ಉಸಿರು ಬಿಟ್ಟರೆ ಅವರು ಇಲ್ಲ ಹೇಳಿದನ್ನು ಕೇಳುತ್ತೀರಾ ಕೇಳಿದರೆ Chief Secretary ಆಗುತ್ತೀರಿ, ಹೇಳಿದನ್ನು ಕೇಳಲಿಲ್ಲವೇ, ನೀವುಗಳು ಜೈಲಿಗೆ ಹೋಗುತ್ತೀರಿ ಈ ಎರಡು ಇಲಾಖೆ ಸಬ್ಧವಾಗಿದೆ only man, my God ಎಷ್ಟು ಶಕ್ತಿ ಕೊಟ್ಟಿರಬಹುದು ಎಷ್ಟು Energy ಕೊಟ್ಟಿರಬಹುದು ಎಷ್ಟು Boards sitting ಗೆ ಕುಳಿತುಕೊಳ್ಳಬೇಕು ಎಷ್ಟು ಮೀಟಿಂಗ್ ಮಾಡಬೇಕು ? ಎಷ್ಟು ಹಣವನ್ನು ಖರ್ಚು ಮಾಡಬೇಕು ? ನಿಮ್ಮದು ಆ ಖಾತೆ ಋ ಖಾತೆ ಎಲ್ಲಾ ಸೇರಿ, ಬಹುಶ ದೇವರ ಅನುಗ್ರಹದಲ್ಲಿ ಹುಟ್ಟಿದವರಿಗೆ ಮಾತ್ರ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಮನುಷ್ಯನ ಅನುಗ್ರಹದಲ್ಲಿ ಹುಟ್ಟಿದವರಿಗೆ ಇದನ್ನು ಮಾಡುವುದಕ್ಕಾಗುವುದಿಲ್ಲ ಅಷ್ಟೊಂದು ಸಂಪನ್ಮೂಲ ಇರುತ್ತದೆ ಅಲ್ಲಿ ಇಲಾಖೆಯ ಅಧಿಕಾರಿಗಳೇ ಇಲ್ಲಾ ಸಾರ್ ಉಸಿರು, ಉಸಿರು ಅಕಸ್ಮಾತ್ ನಿಮ್ಮದು ಏನಾದರೂ breathing problem ಇದ್ದರೆ ಆಸ್ಮಾಗಿಸ್ಮಾ ಇದ್ದರೆ ಉಸಿರು ಕಟ್ಟಿಕೊಂಡು ಆಚೆಗೆ ಹೋಗಿ ಬಂದು ಉಸಿರಾಡಬೇಕು ಉಸಿರನ್ನು ಜೋರಾಗಿ ಬಿಟ್ಟರೆ ಮುಗಿಯಿತು ನಿಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ ನಾನು ಒಂದು Interesting case

ಹೇಳುತ್ತೇನೆ ತಾವು ನನ್ನನ್ನು ಕ್ಷಮಿಸಬೇಕು ಪುನ ನಾನು ನೈಸ್ ಕಂಪನಿಯ ವಿಷಯಕ್ಕೆ ಹೋಗುತ್ತಿಲ್ಲ ಆದರೆ ಈ ಸರ್ಕಾರ ಕಳೆದ ತಿಂಗಳಲ್ಲಿ ಸುಪ್ರೀಂಕೋರ್ಟಿಗೆ ಒಂದು affidivate ಹಾಕಿದೆ ಅದು ಸುಪ್ರೀಂಕೋರ್ಟಿನ ಮುಂದೆ Special Leave Petition permission ತೆಗೆದುಕೊಂಡು ಒಂದು ಅರ್ಜಿಯನ್ನು ಹಾಕಿದೆ ಏನೆಂದು ಅರ್ಜಿಯನ್ನು ಹಾಕಿದೆ ಎಂದರೆ, 2 ದಾಖಲೆಗಳನ್ನು, ಮಾನ್ಯ ಪ್ರಕಾಶ್‌ರವರೆ, ನಿಮ್ಮ ಸರ್ಕಾರ ಹಾಕಿರುವುದು, I don't know whether you are party to this or not ನಾನು Government affidivate ಬಗ್ಗೆ ಹೇಳುತ್ತಿದ್ದೇನೆ, 2 ದಾಖಲೆಗಳನ್ನು suppress ಮಾಡಿದ್ದಾರೆ ನಾವು ಸುಪ್ರೀಂಕೋರ್ಟಿನ ಮುಂದೆ ಅದನ್ನು ಹೇಳಿದೆವು ನಾನು ಅದನ್ನು ಓದುತ್ತೇನೆ

"It is submitted that in view of the above orders and undertaking on behalf of the State the State has not proceeded with the commission of enquiry, however, the recovery of the two important files have shown that betweenjuly and September 1999 i e , after dismissal of SLP in Somashekar Reddy's case, by indulging in supression of considerable previous record and by sustituting false and fabricated record it is placed an additional 2,289 acres of land for sale in toll road sanction and township of the project was illegally sought to be made available to the petitioner company, In these sustituted figures which has formed basis of hte subsequent decisions of the Government, this additional salable land amounting to 2,289 acres is worth about 30,000 crores in present value in terms of floor price index FSI It is in this like it has become nescessary for the State to seek suitable modification of the order dated 21 07 2006 in order to proceed against the officers of the State responsible for these acts in order to safeguard interest of the State and to enable the State to implement the judgement of thisw Hon'ble Court dated 20 04 2006 in State of Karnataka Vs All India Manufactures Organization The petition Company in collusion with some high ranking officials of the State in supression of massive record and decision of the Government of Karnataka form time to time before and after signing the frame work agreement dated 3rd April 1997 created a fabricated record there by making available addtional 2,289 acres of saleble land in the toll road section and towships where as originally Only on 5,937 In August 1995 the petitioner company submitted, ಇದು ಏನು ಹೇಳುತ್ತದೆ ? ತಾವು ಹೇಳಿದ್ದೀರಿ, ಕೋರ್ಟ್ ಮುಂದೆ ತಾವು ಹೇಳಿದ್ದೀರಿ, ನಮಗೆ ಎರಡು ದಾಖಲೆಗಳು ಸಿಕ್ಕದೆ ಹೋಗಿರುವುದರಿಂದ ಸುಪ್ರೀಂಕೋರ್ಟ್ ಮುಂದೆ ಅವರೆಡನ್ನು ಹಾಕಲಿಕ್ಕೆ ಆಗದೇ ಇರುವುದರಿಂದ ಈ ಕೇಸಿನಲ್ಲಿ ಹಿನ್ನಡೆ ಆಗಿದೆ 2,289 ಎಕರೆ ಬೆಂಗಳೂರಿನಲ್ಲಿ ಐದು ಸಾವಿರ ಚಿಲ್ಲರೆ ಎಕರೆ ಟೌನ್‌ಶಿಪ್‌ನಲ್ಲಿ ವೃಥಾ ಕೊಡಬೇಕಾಗಿ ಬಂತು ತಾವು ಆ ಆಫೀಸರ್ಸ್ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇವೆ But ನಮಗೆ ಈ ಅರ್ಜಿಯನ್ನು consider ಮಾಡಿ fresh decision ಕೊಡಿ ಎಂದು ಕೋರ್ಟ್ ಮುಂದೆ

ಹಾಕಿದ್ದೀರಿ ಏಕೆಂದರೆ ನಾನು ಎಲ್ಲಾ ಓದಿ ಈ ಶಾಸನಸಭೆಯ ಕಾಲವನ್ನು ತೆಗೆದುಕೊಳ್ಳುವುದಿಲ್ಲ Are you as Law Minister aware of this ? ಅಷ್ಟೇ ನನ್ನ ಪ್ರಶ್ನೆ ? ಇಲ್ಲಿ ನಿಮ್ಮ ಹೆಗಡೆಯವರು sign ಮಾಡಿ ಹಾಕಿರುವ Affidivate ಇದೆ ಅದರ ಪ್ರತಿಯನ್ನು ತಮಗೆ ಕಳುಹಿಸುತ್ತೇನೆ ಅದರ prayer ಏನು ನಿಮ್ಮ prayer ಓದಿಬಿಡುತ್ತೇನೆ Suitably modify the Order dated 21 7 2006 and permit the State to intiate preliminary fact finding enquiry in the matter of a making available 2,289 acres of extre saleable land to the project Company, supression of record of the State KIADB file No 1256 pertaining to BMICP PWD File No 155 CRM 95 dated 1999-2000 to enable the state in intiate further necessary action" ಸುಪ್ರಿಂಕೋರ್ಟ್ ಮುಂದೆ ಶ್ರೀ ಸಂಜಯ್ ಆರ್ ಹೆಗಡೆ ಯವರು ಒಂದು ಅಪ್ಲಿಕೇಷನ್ ಹಾಕುತಾರೆ ಇದಕ್ಕೆ ನಾಚಿಕೆ ಪಡಬೇಕು, ಯಾರಾದರೂ ವಿದ್ಯೆ, ಬುದ್ಧಿ, ಜ್ಞಾನ ಇರುವ ಒಂದು ಸಮಾಜ ಇದ್ದರೆ ಒಂದು ಸರ್ಕಾರ ನಾಲ್ಕೈದು ವರ್ಷದವರೆಗೆ ಒಂದು ಕಟ್ಟಳೆ ನಡೆಸಿ, ಕೇಸ್ ನಡೆಸಿ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ಈಗ ಹೋಗಿ after the decision ನಾನು 50,000-00 ಶ್ರೀರಾಮರೆಡ್ಡಿಯವರು 50,000-00 cost ಕೊಟ್ಟ ಮೇಲೆ ಹೋಗಿ ನಮ್ಮ ಹತ್ತಿರ ಇದ್ದ record ಅನ್ನು ಈ ಆಫೀಸರ್ಸ್ ಕದ್ದು ಇಟ್ಟಿದ್ದಾರೆ ಆ records ಅನ್ನು ಈಗ file ಮಾಡಿದರೆ 30,000-00 ಕೋಟಿ ರೂ ಗಳಷ್ಟು ಪ್ರಾಪರ್ಟಿ ನಮಗೆ ಸಿಗಬೇಕು They have colluded with the company ನಮಗೆ fresh application re-petition ಗೆ ಅವಕಾಶವನ್ನು ಕೊಡಿ ಎಂದು ನೀವು ಅರ್ಜಿ ಹಾಕಿ you are conducting the case ಯಾರು ಅವತ್ತಿನ PWD secretary ? 2006 ನೇ ಇಸವಿಯಲ್ಲಿ, ಯಾರು ನಿಮ್ಮ PWD secretary? ಅವರು ಈಗ ಏನಾದರೂ ? He is elevated as the Chief Secretary of Karnataka for doing this mischief ಈ ಪಾಪ ಮಾಡಲಿಕ್ಕೆ ಅವರನ್ನು ಬಳಸಿಕೊಂಡು ಇವತ್ತು ಮುಖ್ಯ ಕಾರ್ಯದರ್ಶಿಯನ್ನಾಗಿ ಮಾಡಿದ್ದೀರಿ, ಮೇಲೆ ಬರುತ್ತದೆಂದು, ಇವತ್ತು ಅವರ ಮುಂಡನ ಬೋಳಿಸುತ್ತಿದ್ದೀರಿ He will be cut short. ಸುಪ್ರೀಂಕೋರ್ಟ್ ಮುಂದೆ ಹೋಗಿದ್ದಾರೆ ಯಾರು ನಿಮ್ಮ C& I Secretary, who is taking care of Industrial Area Development Board of Karnataka ? ಆತನನ್ನು ಇವತ್ತು ನೀವು ತೆಗೆಸುತ್ತಿದ್ದೀರಿ ಹಾಗಾದರೆ ನೀವು ಇಲಾಖೆಯನ್ನು ನಡೆಸುತ್ತಿರಾ ? ನೀವು ಈ ಶಾಸನಸಭೆಯಲ್ಲಿ ಹೇಳುವುದೆಲ್ಲಾ ಸತ್ಯವೆಂದು ನಾವು ತಿಳಿದುಕೊಳ್ಳಬೇಕೆ ? ನಿಮಗೆ ಪೂರ್ಣವಾದ ಮಾಹಿತಿಯನ್ನು ಅಧಿಕಾರಿಗಳು ಕೊಡುತ್ತಿದ್ದಾರೆಂದು ನಾವು ಭಾವಿಸಬೇಕೆ ? ಇಲ್ಲೇನು ಹೇಳುತ್ತಿದ್ದೀರಿ, ಅದು ಸುಳ್ಳಾಗಿರಬಹುದು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಮುಂದೆಯೇ ಅಧಿಕಾರಿಗಳು ಮಾಹಿತಿ ಕೊಟ್ಟಿಲ್ಲ ಅದಕ್ಕಾಗಿ ಇನ್ನೊಂದು ಅರ್ಜಿಯನ್ನು ಹಾಕಲಿಕ್ಕೆ ಅವಕಾಶ ಕೊಡಿ ಎಂದು pray ಮಾಡುವ ಒಂದು ಸರ್ಕಾರ ಕರ್ನಾಟಕವನ್ನು ಆಳುತ್ತಿದೆ ಎಂದರೆ ಇದಕ್ಕಿಂತ ನಾಚಿಕೆಗೆಟ್ಟ ಪರಿಸ್ಥಿತಿ ಯಾವುದೇ ಪ್ರಜಾಪ್ರಭುತ್ವದಲ್ಲಿ

ಬರುವುದಿಲ್ಲ After the disposal of the case, after conducting the enquiry and refusal by the enquiry officer to go head, ನೀವು case ಫೈಲ್ ಮಾಡುತ್ತಿದ್ದೀರಿ, ನೋಡಿ ಎಂತಹ ಕೆಲಸ ನಡೆಯುತ್ತಿದೆ ಸರ್ಕಾರ ನಡೆಸುತ್ತಿದ್ದೀರಿ, ಪೈಪೋಟಿಯಲ್ಲಿದ್ದೀರಿ, ಮುಖ್ಯಮಂತ್ರಿಗಳು ಏತಕ್ಕೆ ಆಗುತ್ತೀರಿ ? ನಾನು ನಿಮಗೆ ಹೇಳಿದೆ, ಅಂಕಣದ ಗುಡಿ ಲೇಸು ಸರ್ವಜ್ಞ ಎಂದಿರುವ ನಾಡಿನಲ್ಲಿ ನಾವು ಹುಟ್ಟಿರುವವರು, ಈ ಹಂಗಿನ ಅರಮನೆಯಲ್ಲಿ ಬದುಕಬೇಕೇ ನೀವು ? ಯಾರ ಹಂಗಿನಲ್ಲಿ ಬದುಕಿದ್ದೀರಿ, ಏತಕ್ಕೆ ಬದುಕಿದ್ದೀರಿ ? ಯಾರ ತಲೆ ಬೋಳಿಸಲಿಕ್ಕೆ ಬದುಕಿದ್ದೀರಿ ? ಇವತ್ತು ಈ ರಾಜ್ಯದಲ್ಲಿ ರಾಜಕೀಯ ಮಾಡುತ್ತಿರುವವರು, ಆಡಳಿತ ಮಾಡುವವರು ಇದಕ್ಕೆ ನಮಗೆ ಉತ್ತರ ಹೇಳಬೇಕು ಈ ಸಭೆ ಮುಂದೆ ನಾನು next ಹೇಳುತ್ತೇನೆ ಕಟ್ಟಡಗಳ ಒಂದು ಪಟ್ಟಿಯನ್ನು ತಾವು ತರಿಸಿ ಓದಿ Mr J H Patel ಅವರ ಕಾಲದಲ್ಲಿ ಜಿಲ್ಲೆಯನ್ನು create ಮಾಡಿದ್ದಾರೆ have they provided any amount for that ? ಹೊಸ ಹೊಸ ಕಟ್ಟಡಗಳನ್ನು ಹೊಳೆನರಸೀಪುರ, ರಾಮನಗರ, ಹಾಸನ ಅಷ್ಟರಲ್ಲೇ ಕಟ್ಟಬೇಕೇ ನೀವು ? ಇನ್ನೆಲ್ಲಿಯೂ ಕಟ್ಟುವ ಹಾಗಿಲ್ಲ ಇನ್ನೆಲ್ಲಿಯೂ TB alter ಆಗುವ ಹಾಗಿಲ್ಲ ಎಷ್ಟು ಗೆಸ್ಟ್‌ಹೌಸ್ ಹೊಳೆನರಸೀಪುರದಲ್ಲಿ ಆಗುತ್ತಿದೆ ಎಂಬ ಬಗ್ಗೆ ದಯವಿಟ್ಟು ಈ ಪುಸ್ತಕ ತೆಗೆದುಕೊಂಡು ಓದಬೇಕು ನಿಮಗೇನಾದರೂ ಮನುಷ್ಯತ್ವ ಅನ್ನುವುದು ಇದ್ದರೆ if at all you deemed fit to behave as custodian of the exchequer and treasury of this land ಎಂದು ನೀವು ಭಾವಿಸಿದ್ದರೆ, ಈ ರಾಜ್ಯದ ಸರ್ಕಾರ ನಡೆಸಲಿಕ್ಕೆ ಯೋಗ್ಯತೆ ಇದೆಯೆಂದು ಭಾವಿಸಿದರೆ ಈ ಪುಸ್ತಕವನ್ನು ನೀವು ಓದಬೇಕು ಎಲ್ಲೆಲ್ಲಿ ಯಾರ್‍ಯಾರಿಗೆ ಎಷ್ಟು ಅಗತ್ಯವಿರುವ ಕಟ್ಟಡಗಳು, ಇವೆ, ಎಷ್ಟು ಅನಗತ್ಯವಾಗಿರುವ ಕಟ್ಟಡಗಳು ಇವೆ, ತಾವು ಓದಬೇಕು, ನೋಡಬೇಕು ರಾಜ್ಯದ ಹಣದಲ್ಲಿ ಚೆಲ್ಲಾಟ ಆಡುತ್ತಿರುವಿರಾ ? ಯಾವನೋ ಟ್ಯಾಕ್ಸ್ ಕಟ್ಟುತ್ತಿದ್ದಾನೆ ದಿಮ್ಮಗೆ, ಮನೆ ಮಠ ಹಾಳು ಮಾಡಿಕೊಂಡಿದ್ದಾನೆ, ತಂದು ತಂದು ನಿಮ್ಮ ಇಷ್ಟ ಬಂದ ಹಾಗೆ ಪೋಲು ಮಾಡುತ್ತಿರುವಿರಾ ? ಏನು ನಡೆಯುತ್ತಿದೆ ಇಲ್ಲಿ ? ಲೂಟಿ, ಹಗಲುದರೋಡೆ ಮಾಡಲಿಕ್ಕೆ ಯಾರು ಮುಂದೆ ಇರಬೇಕು ಎಂದು ಪೈಪೋಟಿ ನಡೆಯುತ್ತಿದೆ ಅದನ್ನು running-race ಎಂದು ತಿಳಿದುಕೊಂಡಿದ್ದಾರೆ Running-Race ಇರುವುದು ಅದಕ್ಕೆ ಈ ಪೈಪೋಟಿಗೆ ಪಾರ್ಟಿ ಆಗುವಿರಾ ? ಈ ಸ್ಪರ್ಧೆಯಲ್ಲಿ ತಾವು ಕ್ರೀಡಾಪಟುಗಳೇ? ಏನಾಗಿದೆಯೆಂದು ನನಗೆ ಗೊತ್ತಾಗಬೇಕು ಇನ್ನು ಪ್ಯಾಕೇಜ್ ಎಂದರೆ ಏನು ? ಓದಿ ಎಂದರೆ ಓದುತ್ತೇನೆ, ಇದು ಬಹಳ ದೊಡ್ಡ ಪುಸ್ತಕ ಓದುವುದು ಹೇಗೆ? ಪ್ಯಾಕೇಜ್ ಎಂದರೆ ಏನು ? ಯಡಿಯೂರಪ್ಪನವರೇ, ನಾನು ಡಿಮ್ಯಾಂಡ್ ಮಾಡುತ್ತೇನೆ ಇದೇ ಪಕ್ಷ ಪ್ಯಾಕೇಜ್ ಅನ್ನು ವಿರೋಧ ಮಾಡಿದೆ ಶ್ರೀ ಎಸ್ ಎಂ ಕೃಷ್ಣರವರು ಪ್ಯಾಕೇಜ್ ಪ್ರೋಗ್ರಾಮ್ಸ್ ಅನ್ನು announce ಮಾಡಿದಾಗ ಪ್ಯಾಕೇಜಿಗೆ ವಿರುದ್ಧವಾಗಿ ಮಾತನಾಡಿದಂಥ ಪಕ್ಷ ಇವತ್ತು ಪ್ಯಾಕೇಜ್‌ಗಳನ್ನು ಕೊಡಲಿಕ್ಕೆ ಅವರಿಗಿಂತ 100 ಕಿ ಮಿ fast ನಲ್ಲಿದ್ದಾರೆ ಎಲ್ಲಾ ಪ್ಯಾಕೇಜ್ ಯಾರ ಜೊತೆ ಪ್ಯಾಕೇಜ್ ಅದರ ಫಲಾನುಭವಿ ಯಾರು ? ಅದರ shareholders ಯಾರು ? ಹೇಳಾದರೂ ಹೇಳಿ

ನಮಗೆ ಗೊತ್ತಾಗಬೇಕು ನಿಮಗೆ ಒಂದು ತಾಲ್ಲೂಕಿನ ರಸ್ತೆ ಎಲ್ಲಾ maintenance package ಇವತ್ತು ಅದನ್ನು ಒಬ್ಬನಿಗೇ ಕೊಡಬೇಕು ಒಂದು ಕೋಟ್, ಎರಡು, ಎರಡೂವರೆ ಕೋಟ್ ಬೇರೆ ಯಾರೂ ಅಲ್ಲಿ ಒಂದು ಜೆಲ್ಲಿ ಹೊಡೆಯವಂತಿಲ್ಲ, ಟಾರ್ ಹಾಕುವ ಅಗಿಲ್ಲ, ಒಂದು ಗುಂಡಿ ಮುಚ್ಚುವ ಹಾಗಿಲ್ಲ 100% ಪ್ಯಾಕೇಜ್ ಕೆ ಇ ಬಿ ಸಾರಾಸಗಟಾಗಿ ಪ್ಯಾಕೇಜ್ 4–5 ಕಂಪನಿಯವರನ್ನು ಕರೆದು ಡಿವಿಷನ್ ಪ್ಯಾಕೇಜಸ್‌ನಲ್ಲಿ 24 ತಿಂಗಳಿಗೆ ಕೊಟ್ಟಿದ್ದೇನೆ, 5 ವರ್ಷಕ್ಕೆ enhance ಮಾಡುತ್ತೇವೆನ್ನುವುದು ಒಂದು ಕಂಬ ವೆಡಲಿಕ್ಕೂ ಕೂಡ ಪ್ಯಾಕೇಜ್ ಒಂದು ಗುಂಡಿ ನೆಡಿಲಿಕ್ಕೆ ಪ್ಯಾಕೇಜ್ At what cost ? ಈ ಸಭೆಯ ಮುಂದೆ ಇಡಬೇಕು S R ಅನ್ನು ತಾವು ರಿವೈಸ್ ಮಾಡಿದಿರಿ It is again a long process ಎಸ್ ಆರ್ ಬಗ್ಗೆ ನಾನೇನಾದರೂ ನಿಂತುಕೊಂಡು ಮಾತನಾಡಿದೆ ಶ್ರೀ ಹೆಚ್ ಕೆ ಪಾಟೀಲ್ ಈ ಸಭೆಯಲ್ಲಿ ಅಥವಾ ಇನ್ನೊಂದು ಸಭೆಯಲ್ಲಿ ಎಸ್ ಆರ್ revision ಬಗ್ಗೆ ಅವರ ಸರ್ಕಾರದಲ್ಲಿ Irrigation Minister ಆಗಿದ್ದಾಗ ಟೀಕೆ ಮಾಡಿದ್ದರು ಎಂಬುದನ್ನು ರೆಕಾರ್ಡ್ ತೆಗೆದರೆ ನೀವು revise ಮಾಡಿರುವ ಖಖ ಅನ್ನು ಹೋಲಿಸಿಬಿಟ್ಟರೆ ನೀವು ಈ ರಾಜಯವನ್ನು ನಡೆಸಲಿಕ್ಕೆ ಇದ್ದೀರೋ ಅಥವಾ ನಿರ್ನಾಮ ಮಾಡಲಿಕ್ಕೆ ಇದ್ದೀರೂ ನಮಗೆ ಉತ್ತರ ಹೇಳಬೇಕಾಗುತ್ತದೆ 27, 28,40 % ವರೆಗೆ ಕೆಲವು Items ಮೇಲೆ enhance ಮಾಡಿದ್ದೀರಿ Contractor ನಿನ್ನೆ ನನ್ನೊಂದಿಗೆ ಯಾರೋ ಮಾತನಾಡುತ್ತಿದ್ದರು, ಮೊದಲು ಈ ರಾಜ್ಯ, ದೇಶವನ್ನು ರಾಜಕೀಯದವರು ನಡೆಸುತ್ತಿದ್ದರು, ಅವರ ವ್ಯವಸ್ಥೆಯಲ್ಲಿತ್ತು ಹಾಳಾಯಿತು ಎಂದರು, ಆಮೇಲೆ bureaucrats ಬಂದು ಸರ್ಕಾರ ನಡೆಸುತ್ತಿದ್ದರು ಹಾಳಾಯಿತು ಎಂದರು, ಈಗೇನಾಗಿದೆ ಎಂದರೆ Contractors ನಮ್ಮನ್ನು ಆಳುತ್ತಿರುವವರು, ಆಡಳಿತ ನಡೆಸುತ್ತಿರುವವರು, ನಮ್ಮ ರೀತಿ ನೀತಿಯನ್ನು ನಿರ್ವಹಣೆ ಮಾಡುತ್ತಿರುವವರು money-lenders, contractor, builders, black money ಇರುವವರು ಯಾರು ಇಲ್ಲಿಯವರು ಇಲ್ಲ ಏಕೆ ? ಇಲ್ಲಿ ಬಣ್ಣ ಬಯಲು ಆಗಿಬಿಡುತ್ತದೆ ಅವನೆಲ್ಲಾದರೂ ಕುಡಿದು ಸಂತೆಯಲ್ಲಿ ಬಾಯಿ ಬಿಟ್ಟುಬಿಡುತ್ತಾನೇನೋ ಎನ್ನುವ ಭಯ ಅವನು ಆಂಧ್ರ, ತಮಿಳು ಭಾಷೆಯಲ್ಲಿ ಯಾರಿಗೆ ಇಲ್ಲಿ ಗೊತ್ತಾಗುತ್ತದೆ ? ಆದರೆ work ಮಾಡುತ್ತಿರುವವರು ಯಾರು ಸನ್ಮಾನ್ಯ ಪ್ರಕಾಶ್‌ರವರೇ ? ಯಾರು ಒಂದು ಲಕ್ಷ ಎರಡು ಲಕ್ಷ ಐದು ಲಕ್ಷ piece work ಮಾಡಿಕೊಂಡು ಇದ್ದರೋ, ಅದೇ ಹುಡುಗರ ಕೈಯಲ್ಲಿ ಇವತ್ತು ಅವನು ಸಬ್ ಲೀಸ್ ಕೊಟ್ಟು ಕೆಲಸ ಮಾಡಿಸುತ್ತಿರುವುದು ಎಲ್ಲಿಂದಲೂ ಗ್ಯಾಂಗ್ ತರಿಸಲಿಲ್ಲ ಎಲ್ಲೂ ತರಲಿಲ್ಲ favour ಎಲ್ಲೂ ಹಾಕಿಲ್ಲ ಪ್ಲಾಂಟ್ ಯಾರೋ ಒಬ್ಬರೋ ಇಬ್ಬರೋ ಹಾಕಿರಬಹುದು ಎಲ್ಲರೂ ಉಪಯೋಗಿಸುತ್ತಿರುವುದು ಸ್ಥಳೀಯರಾದ ಹುಡುಗರನ್ನು, ಕಂಟ್ರಾಕ್ಟರುಗಳನ್ನೇ ರೇಟ್‌ನಲ್ಲಿ ಎಷ್ಟು ವ್ಯತ್ಯಾಸವಿದೆ ಅವರಿಗೆ ಇವರಿಗೆ, ಎಷ್ಟು ವ್ಯತ್ಯಾಸವಿದೆ ? ನಾನು ಎಸ್ ಆರ್ ಗೆ ಮಾಡಿಕೊಡುತ್ತೇವೆ ಎಂದು ಹುಡುಗರು ಕೇಳಿದರೆ, ನೀವು ಕೊಡಲಿಲ್ಲ ಇವತ್ತು ಪ್ಯಾಕೇಜ್‌ನಲ್ಲಿ 200 times ಜಾಸ್ತಿ ಮಾಡಿಕೊಡುತ್ತೀರಿ Material procure ಮಾಡುವುದಕ್ಕೂ ಅವನಿಗೆ ಬಿಡುತ್ತೀರಿ ಚಿಕ್ಕನಾಯಕನಹಳ್ಳಿಯಲ್ಲಿ ಒಬ್ಬ surface dressing ಮಾಡಿ ನಾಲ್ಕು ವರ್ಷಗಳಾಯಿತು Surface dressing ಎಂದರೆ, ತಮಗೆ ಗೊತ್ತಾಗಬಹುದು ರಸ್ತೆ ಎಲ್ಲವನ್ನೂ ಮಾಡಿ ಮುಗಿಸಿ, ನಾಳೆ, ನಾಡಿದ್ದು ashphat, tar ಹಾಕಬೇಕೆಂದರೆ, ಸ್ವಲ್ಪ ಮೆತ್ತಗೆ ಎರಚಿಕೊಂಡು ಮಟ್ಟ ಮಾಡಿಕೊಂಡಿರುತ್ತಾನೆ

ಒಂದೇ ಸಲ ಟಾರ್ ಹಾಕುವುದಕ್ಕೆ ಹೋದರೆ ನಷ್ಟವಾಗುತ್ತದೆ Surface dress ಆಗಿ 4–5 ವರ್ಷಗಳಾಗಿವೆ ರಸ್ತೆಗಳಿಗೆ ಮತ್ತೆ Asphalt ಹಾಕಿಲಿಲ್ಲ, ಏಕೆ? ಕಳೆದ ವರ್ಷ asphalt rate ಜಾಸ್ತಿಯಾಯಿತು, ರೇಟ್ ಸಿಗಲಿಲ್ಲ Every one was waiting for revision of S R S R reivise ಆಗುತ್ತದೆಂದು every one was knowing S R revise ಮಾಡಿ ಎಂದು ನಾವೂ ಹೇಳಿದ್ದೇವೆ ಆದರೆ, ಯಡಿಯೂರಪ್ಪನವರೇ, ಪ್ರತಿ contractor ಗೆ ಆರು ತಿಂಗಳು ಮೊದಲೇ ರೇಟ್ ರಿವಿಶನ್ ಆಗುತ್ತಿರುವುದು ಮೊದಲೇ ಗೊತ್ತಿತ್ತು, ಜಲ್ಲಿ ರೇಟ್ ಜಾಸ್ತಿಯಾಗುತ್ತದೆಂದು ಪ್ರತಿ contractor ಗೆ ಗೊತ್ತಿತ್ತು, ಮರಲು ರೇಟ್ ಜಾಸ್ತಿಯಾಗುತ್ತದೆಂದು ಪ್ರತಿ contractor ಗೆ ಮೊದಲೇ ಗೊತ್ತಿತ್ತು, ಜೂನ್, ಜುಲೈ ಆಗುವವರೆಗೂ ಒಬ್ಬರೂ ಕೆಲಸ ಮಾಡುವುದಕ್ಕೆ ರಾಜಿ ಇರಲಿಲ್ಲ They were sure ಆಗಿಯೆ ಆಗುತ್ತದೆಂದು ಗೊವತ್ತು ಯಾರು ? They are the Masters ನಾವಲ್ಲ ನಾನು ಬರೆದುಕೊಟ್ಟಿದ್ದ ರಸ್ತೆಯನ್ನು ಇವತ್ತು ತೆಗೆದುಕೊಳ್ಳುತ್ತಿಲ್ಲ ಯಾರಾದರೂ ಉದ್ದಿಮೆದಾರರಿಂದ ಬರೆಸಿಕೊಡಬೇಕು ಇಲ್ಲವೇ ಯಾರಾದರೂ ಸ್ವಾಮಿಗಳ ಪಾದಕ್ಕೆ ಅಡ್ಡ ಬಿದ್ದು ನಿಮಗೊಂದುಕಾಗದ ಕೊಡಿಸಬೇಕು ಇವತ್ತು ನಿಮ್ಮ ಆಫೀಸ್‌ಗಳಲ್ಲಿ ಎಷ್ಟು ಸ್ವಾಮಿಗಳು transfer ಗೆ ಶಿಫಾರಸ್ಸುಗಳನ್ನು ಮಾಡಿಲ್ಲ ? ಹೇಳಿ, ಅದನ್ನು ತೆಗೆಸಿರಿ ಸರ್ ಮಠಾಧ್ಯಕ್ಷರುಗಳಿಗೆ ಇವತ್ತು ಇದೊಂದು ದೊಡ್ಡ ಉದ್ಯೋಗವಾಗಿ ಬಿಟ್ಟಿದೆ ನಮಗೆ ನಾಚಿಕೆಯಾಗುತ್ತದೆ ಈಗ ನಮ್ಮ ಹತ್ತಿರ ಬರುವುದಿಲ್ಲ ಒಂದು ಕಾಗದ ಕೊಡಿ ಸರ್, ನಾನು transfer ಮಾಡಿಸಿಕೊಳ್ಳುತ್ತೇನೆಂದು officials ಆದವರು ಸ್ವಾಮಿಗಳ ಹತ್ತಿರ ಹೋಗುತ್ತಾರೆ ನಮ್ಮ ಕಾಗದದ ಮೇಲೆ ನಿಮ್ಮ ಇಲಾಖೆಯಲ್ಲಿ ಕಾಗದ ಹಾಕಿರುತ್ತಾರೆ ಈಶ್ವರಪ್ಪನವರೆ, ಮಿನಿಸ್ಟರ್‌ಗಳು ನಮ್ಮ ಕಾಗದದ ಮೇಲೆ ಬರೆಯುತ್ತಿಲ್ಲ ಅವರು ಸ್ವಾಮಿಗಳ ಕಾಗದದ ಮೇಲೆ ಬರೆಯುವುದು ಇಂತಹ ಬುದ್ಧಿಯೋರು ಇಂತಹ transfer ಕೇಳಿಕೊಂಡಿದ್ದಾರೆ, consider ಮಾಡಿ ಎಂದು ಕಾಗದ ಹಾಕಿರುತ್ತಾರೆ ಹಾಗಾದರೆ, ನಾವು ಇಲ್ಲಿ ಏಕಿರಬೇಕು ? ಆಡಳಿತ ಯಾರು ಮಾಡುತ್ತಿದ್ದಾರೆ ? ತಾವು ಎಲ್ಲಿಗೆ ಹೋಗುತ್ತಿದ್ದೀರಿ ? ಸಾಹಿತಿಗಳು, ಸ್ವಾಮಿಗಳು, ನಿಮ್ಮ ಹತ್ತಿರ ಇರುವ contractor ಗಳು, ಸರ್ಕಾರಿ ಆಡಳಿತವನ್ನು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ ನಾವು ಮಂತ್ರಿಗಳನ್ನು ನೋಡೋಣವೆಂದು ಹೊರಗಡೆ ನಿಂತಿರುತ್ತೇವೆ ಅದರೆ, ಅವರು ಸೀದಾ ಒಳಕ್ಕೆ ಹೋಗುತ್ತಿರುತ್ತಾರೆ ಯಾರು ಅಡೆತಡೆ ಉಂಟು ಮಾಡುವುದಿಲ್ಲ ಆಮೇಲೆ ನೀವು ಬಂದು ಅವರನ್ನು ರಿಸೀವ್ ಮಾಡಿಕೊಳ್ಳುತ್ತೀರಿ M L A ಗಳಾದವರು ಆ ಸೌಜನ್ಯವನ್ನು ನಿರೀಕ್ಷಿಸುವುದಕ್ಕಾಗುವುದಿಲ್ಲ ಇಲ್ಲೊಂದು ಕಡೆ decentralization ಎಂದು ನಮಗೆ ಈಗ ಡಿ ಆರ್ ಪಾಟೀಲರ ಕಾಲ, ಇನ್ನೊಂದು ಕಡೆ ನಿಮ್ಮ ಕಾಟ MP ಗಳಿಗೆಲ್ಲರಿಗೂ ಕಾರು, staff, ಹುಡುಗರನ್ನು ಕೊಟ್ಟು ಅವರನ್ನು ಮಂತ್ರಿಗಳನ್ನಾಗಿ ಮಾಡಿ ಇಟ್ಟಿರಿ ಮತ್ತೊಂದು ಕಡೆ, ಎಲ್ಲ ಕೆಲಸವೂ ನಮ್ಮಿಂದಲೇ ಆಗುತ್ತದೆಂದು ಜನರಿಂದ ನಿರೀಕ್ಷೆ ಇಂತಹ ವಿಷಮ ಸ್ಥಿತಿಯಲ್ಲಿ ಶಾಸಕರಾದ ನಾವು ಬದುಕಿದ್ದೇವೆ ? ನಾವು ಮನೆಗಳನ್ನು ಕೊಡುವಂತಿಲ್ಲ, ಕೆ ಡಿ ಪಿ ಮೀಟಿಂಗ್ ಮಾಡುವುದನ್ನು ನಿಲ್ಲಿಸಿ ಬಿಟ್ಟಿದ್ದೇವೆ ಮೀಟಿಂಗ್‌ನಲ್ಲಿ ನೀರಿನ ಬಗ್ಗೆ review ಮಾಡುವಂತಿಲ್ಲ, ರಸ್ತೆಗಳ works review ಮಾಡುವಂತಿಲ್ಲ, ತಾಲ್ಲೂಕು ಪಂಚಾಯಿತಿ works review ಮಾಡುವಂತಿಲ್ಲ, ಜಿಲ್ಲಾ ಪಂಚಾಯತಿ works review ಮಾಡುವಂತಿಲ್ಲ ಈ column ಇಲ್ಲ ನಾವು ಏಕೆ ಇದ್ದೇವೆ? ಗೊತ್ತಿಲ್ಲ

ಆದರೆ, ಇವತ್ತು ನಿಮ್ಮಲ್ಲರ ಪಾಪವನ್ನು ನಾವು ನಮ್ಮ ಮುಖದ ಮೇಲೆ ಹಾಕಿಕೊಂಡು ಜನರ ಮುಂದೆ ಕ್ಯಾಕರಿಸಿ ಉಗಿಸಿಕೊಳ್ಳುವುದಕ್ಕೆ ನಿಂತುಕೊಳ್ಳಬೇಕು ನಮ್ಮ ಮುಖಗಳನ್ನು ಬಿಟ್ಟರೆ, ಬೇರೆಲ್ಲೂ ಒಳ್ಳೆಯ ಜಾಗಗಳಿಲ್ಲ ಬಹಳ ಸಂಪನ್ನವಾದ ಜಾಗವೆಂದರೆ, ಅದು MLA ಗಳ ಮುಖವಾಗಿದೆ ಪಾಲಿಗೆ ಯಾರ್ಯಾರು ? ಎಲ್ಲರೂ ಭಾಗಸ್ಥರೆ ಆಗಿದ್ದಾರೆ MLCಗೆ ಭಾಗ ಕೊಡಬೇಕು, MPಗೆ ಭಾಗ ಕೊಡಬೇಕು, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಭಾಗ ಕೊಡಬೇಕು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಭಾಗ ಕೊಡಬೇಕು, ZP Member ಗೆ ಭಾಗ ಕೊಡಬೇಕು, ಎಲ್ಲರಿಗೂ ಭಾಗ ಕೊಡಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ, ಉದಾಸಿಯವರು ನಗುತ್ತಿದ್ದಾರೆ ಒಖಂಗಳು ಉಗಿಸಿಕೊಳ್ಳಬೇಕೆಂದರೆ, ಅವರು ನಗಾಡುತ್ತಿದ್ದಾರೆ ಅವರು ಎಷ್ಟು ಖುಷಿಯಲ್ಲಿದ್ದಾರೆಂಬುದನ್ನು ನೋಡಿ ಬೈಗುಳವೆಲ್ಲವೂ ನಮಗೆ ಹಳ್ಳಿಗಳಿಗೆ ಹೋದರೆ, ಜನರು ನೀರು ಬೇಕೆಂದು ಕೇಳುವುದು ನಮ್ಮನ್ನು, ರಸ್ತೆ ಬೇಕೆಂದು ಕೇಳುವುದು ನಮ್ಮನ್ನು, ಲೈಟ್ ಬೇಕೆಂದು ಕೇಳುವುದು ನಮ್ಮನ್ನು, ಚರಂಡಿ ಬೇಕೆಂದು ಕೇಳುವುದು ನಮ್ಮನ್ನು, ಎಲ್ಲವನ್ನು ಕೇಳುವುದೂ ನಮ್ಮನ್ನೇ ಆದರೆ, ದುಡ್ಡು ಕೊಡುವುದು ಮಾತ್ರ ಅವರಿಗಾದರೆ, ಬೈಸಿಕೊಳ್ಳುವುದು ಮಾತ್ರ ನಾವು ನಮಗೆ ಎಂತಹ ಗ್ರಹಚಾರ ನೋಡಿ ?

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ – ಒಖಂಗಳಿಗೆ ಅಷ್ಟೋ ಇಷ್ಟೋ ಅವಕಾಶ ಕಲ್ಪಿಸಿಕೊಡಲು ಅವರು ಪ್ರಯತ್ನ ಮಾಡುತ್ತಿದ್ದಾರೆ ಅದಕ್ಕೆ ನೀವು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಇಲ್ಲಿ ಅವಕಾಶ ಎನ್ನುತ್ತಾರೆ, ಅಲ್ಲಿ Governor ಹತ್ತಿರ ಹೋಗಿ petition ಕೊಡುತ್ತಾರೆ ಇಲ್ಲಿ ಬರುತ್ತಾರೆ, ಅರ್ಜಿ ಕೊಡುತ್ತೀರಿ, ಯಾರಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ ? Governor ಗೆ ಹೋಗಿ petition ಕೊಟ್ಟಿದ್ದಾರೆ

ಶ್ರೀ ಬಿ ಎ ಜೀವಿಜಯ – ಅಧ್ಯಕ್ಷರೆ, ಮೊನ್ನೆ ಮಳೆ ಹಾನಿಯಲ್ಲಿ ನಮ್ಮ ಕೊಡಗಿಗೆ ಸ್ವಲ್ಪ ಹಣ ಬಿಡುಗಡೆಯಾಗಿದೆ ನಮ್ಮ District Minister ಆದ ರಾಮಚಂದ್ರೇಗೌಡರು ಇಲ್ಲೇ ಇದ್ದಾರೆ ಅವರು ಬಹಳ ಸಜ್ಜನರು ಆದರೆ, ಅಲ್ಲಿಗೆ ಅವರ ಚೇಲಾಗಳು ಬರುತ್ತಿದ್ದಾರೆ ಇಂತಿಂದ ರಸ್ತೆಗಳಿಗೆ ಇಷ್ಟಿಷ್ಟು ಹಣ ಬಿಡುಗಡೆ ಮಾಡಬೇಕೆಂದು ಇವರು ಲೆಟರ್ ಕಳುಹಿಸುತ್ತಿದ್ದಾರೆ ಹಾಗಾದರೆ, MLAಗಳಾಗಿ ನಾವು ಏಕಿರಬೇಕು ? ಮಳೆಯಿಂದ ಹಾನಿಯಾಗಿದೆಯೆಂದು ಇವರು ಹೇಗೆ decide ಮಾಡುತ್ತಾರೆ ? ಅಲ್ಲಿ committee ಇದೆ ಅದ್ಯಾವುದೂ ಇಲ್ಲದೇ ಈ ರೀತಿ ಮಾಡುತ್ತಿರುವುದರಿಂದ ಇವರ ಸರ್ಕಾರದಿಂದ ನಮಗೆ ಒಳ್ಳೆಯ ಆಡಳಿತ ಸಿಗುತ್ತದೆಯೇ ?

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅಧ್ಯಕ್ಷರೆ, ನಾನು ಅದಕ್ಕೊಂದು ಉದಾಹರಣೆ ಹೇಳುತ್ತೇನೆ ಮಾನ್ಯ ಯಡಿಯೂರಪ್ಪನವರು ಇಲ್ಲೇ ಕುಳಿತಿದ್ದಾರೆ ಆಗಲೇ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ, ಚಿಕ್ಕಮಗಳೂರಿಗೆ ಏನು ಅನ್ಯಾಯವಾಗಿದೆ ಎಂಬುದನ್ನು ಹೇಳಿದ್ದಾರೆ ಎಂ ಎಲ್ ಎ ಬಿಡಿ, ನಿಮ್ಮ ಮಂತ್ರಿಗಳಾದ ಶ್ರೀರಾಮುಲು ಇಲ್ಲಿ ಕುಳಿತ್ತಿದ್ದಾರಲ್ಲ, ಇವರು ಬಳ್ಳಾರಿ ಮಂತ್ರಿ ಅವರ ಗತಿ ಏನಾಗಿದೆ ಗೊತ್ತೆ? ಬಳ್ಳಾರಿ ಮುನಿಸಿಪಾಲಿಟಿಗೆ ಹಣ ಕೊಟ್ಟಿದ್ದೀರಿ

ಅಧ್ಯಕ್ಷರು .– ರೆಡ್ಡಿಯವರೆ, ಈಗ ಅವರು ಮಾತನಾಡುತ್ತಿದ್ದಾರೆ ನೀವು ಮಧ್ಯೆ ಎದ್ದು ನಿಂತು ಹೀಗೆ ಮಾತನಾಡಿದರೆ ಹೇಗೆ? ನೀವು ಮಾತನಾಡುವಾಗ ಇವೆಲ್ಲವನ್ನೂ ಮಾತನಾಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಂತ್ರಿಯಾಗಿರುವ ಅವರ ಗತಿ ಏನೆಂದು ಹೇಳುತ್ತೇನೆ, ನೋಡಿ, 2 ಕೋಟಿ 43 ಲಕ್ಷ ರೂಪಾಯಿಗಳಷ್ಟು SFC grant release ಮಾಡಿದ್ದಾರೆ, ಎಲ್ಲಾ ತಾಲ್ಲೂಕು, ಪಟ್ಟಣಗಳಿಗೆ grant ಕೊಟ್ಟು ಬಿಟ್ಟಿದ್ದೀರಿ ಬಳ್ಳಾರಿಗೆ ನಿಮ್ಮ office ನಿಂದಲೆ ಪೌರಾಡಳಿತ ಮಂತ್ರಿಗಳ ಆಫೀಸೋ, ಮುಖ್ಯಮಂತ್ರಿಗಳ ಆಫೀಸೋ ಗೊತ್ತಿಲ್ಲ, 43 ಲಕ್ಷ ರೂಪಾಯಿಗಳನ್ನು ಮಾತ್ರ ಬಳ್ಳಾರಿ ಟೌನ್‌ಗೆ ಇಟ್ಟು, ಯಾವ್ಯಾವ works ತೆಗೆದುಕೊಳ್ಳಬೇಕೆಂದು ಇಲ್ಲಿಂದಲೇ ಕಳುಹಿಸಿದ್ದೀರಿ, ನೋಡಿ ದುರ್ಗಾ ಲೇಔಟ್ – 20 ಲಕ್ಷ ಬಿ ಗೋನಾಳ – 10 ಲಕ್ಷ ವಿನಾಯಕ ನಗರ – 10 ಲಕ್ಷ ಗಗ್ಗರಕಟ್ಟೆ – 35 ಲಕ್ಷ ಅವಂಭಾವಿ – 20 ಲಕ್ಷ ಅಲದಳ್ಳಿ – 10 ಲಕ್ಷ ಬಿನಲಳ್ಳಿ – 10 ಲಕ್ಷ ನಾಯಿರಾಂ ಕಾಲೋನಿ – 10 ಲಕ್ಷ ಕಾಕರ್ಲ ತೋಟ – 20 ಲಕ್ಷ ಆಲ್ಲೀಮರ – 10 ಲಕ್ಷ ಹಂದ್ರಾಳ – 20 ಲಕ್ಷ ಈ ರೀತಿಯಾಗಿ ಇಲ್ಲಿಂದಲೇ ಇಂತಿಂತಹ works ತೆಗೆದುಕೊಳ್ಳಬೇಕೆಂದು ಹೇಳಿ ಕಳುಹಿಸಿಬಿಟ್ಟರೆ, ಆ ಮಂತ್ರಿ ಗತಿ ಏನಾಗಬೇಕು ನೀವೇ ಹೇಳಿ? ನಿಮ್ಮ ಕ್ಯಾಬಿನೆಟ್ ಮಂತ್ರಿಯ ಪರಿಸ್ಥಿತಿ ಏನು? ನೀವು ಇಲ್ಲಿಂದಲೇ ಇಂತಿಂತಹ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಕಳುಹಿಸುತ್ತೀರಿ ಅಲ್ಲಿರುವ ಜನಪ್ರತಿನಿಧಿಗಳ ಪರಿಸ್ಥಿತಿ ಏನು? ಗತಿ ಏನು? ಹೇಳಿ ನೀವು ಯಾರಿಗೆ ಸರ್ಕಾರ ನಡೆಸುತ್ತಿದ್ದೀರಿ? ಹೇಗೆ ಸರ್ಕಾರ ನಡೆಸುತ್ತಿದ್ದೀರಿ? ಇದು ಪರಿಸ್ಥಿತಿ ಇಲ್ಲಿಂದಲೇ ಲಿಸ್ಟ್ ಮಾಡಿ ಕಳುಹಿಸಿದರೆ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಬಾಗೇಪಲ್ಲಿಗೆ ಸಂಬಂದಿಸಿದಂತೆ ನಾವು action plan ಮಾಡಿ ಕಳುಹಿಸಿದರೆ, ನಮ್ಮ ಪಕ್ಷದ ಕಾರ್ಯಕರ್ತರು ಹೇಳಿದ ಕೆಲಸಗಳನ್ನು ಸೇರಿಸಿಕೊಳ್ಳಲಿಲ್ಲವೆಂದು ಆ plan ಅನ್ನು approval ಮಾಡದೇ pending ಇಟ್ಟಿದ್ದಾರೆ

ಅಧ್ಯಕ್ಷರು ಮಾಧುಸ್ವಾಮಿಯವರೆ, ತಾವು ಮಾತನಾಡಿ ಈ ರೀತಿಯಲ್ಲಿ ನೀವು ಎಲ್ಲರಿಗೂ ಯೀಲ್ಡ್ ಆದರೆ, ಎಲ್ಲರೂ ಎದ್ದು ನಿಂತು ಮಾತನಾಡುತ್ತಾರೆ ಅವರಿಗೆ ಅವಕಾಶವಿದ್ದಾಗ ಮಾತನಾಡಲಿ ನೀವು ಇಷ್ಟು ಗಂಟೆ ಇಷ್ಟು ನಿಮಿಷದೊಳಗೆ ಮಾತನಾಡಬೇಕಾಗುತ್ತದೆ ನಾನು ಅಂಕೆ ಹಾಕಿಬಿಡುತ್ತೇನೆ ಇದು ಡಿಮ್ಯಾಂಡ್ ಎಲ್ಲಾ ಕಡೆಗಳಲ್ಲೂ ಮಾತನಾಡಬೇಕಾಗುತ್ತದೆ

ಶ್ರೀ ಡಿ ಆರ್ ಪಾಟೀಲ್ – ಸರ್, ತಮ್ಮ ಗಮನಕ್ಕೆ urgent ಆಗಿ ಒಂದು ವಿಷಯ ತರಬೇಕಾಗಿದೆ Councilನಲ್ಲಿ ಈಗ APMC amended Bill ಅನ್ನು discussionಗೆ ತೆಗೆದುಕೊಳ್ಳುತ್ತಿದ್ದಾರೆ ಇಲ್ಲಿ ಸರ್ಕಾರ ಏನು ಒಪ್ಪಿತ್ತು Marketing Directorಗೆ ಬದಲಾಗಿ ಸರ್ಕಾರಕ್ಕೆ ಆ ಅಧಿಕಾರಿಯನ್ನು ಇಟ್ಟುಕೊಳ್ಳಬೇಕೆಂದು ನಾವು ಹೇಳಿದ್ದೆವು ಅದಕ್ಕೆ ಸರ್ಕಾರ ಒಪ್ಪಿತ್ತು ಆನಂತರ private market yardನೊಳಗೆ producers ಮತ್ತು sellersಗೆ ಯಾವುದೇ ರೀತಿಯಲ್ಲೂ, ದುಡ್ಡನ್ನು levy ಮಾಡಬಾರದೆಂದು ಹೇಳಿದ್ದೆವು ನೀವು ಎರಡನ್ನೂ ಒಪ್ಪಿದ್ದಿರಿ ಒಂದರಲ್ಲಿ ಆ Marketing Directorಗೆ ಲೈಸೆನ್ಸ್ ಕೊಡುವಂತಹ ಪವರ್ ಅನ್ನು ಇಟ್ಟು, ನೀವು ಒಪ್ಪಿದ್ದರ ವಿರುದ್ಧವಾಗಿ Bill ಅನ್ನು ಕಳುಹಿಸಿದ್ದೀರಿ ಇನ್ನೊಂದರಲ್ಲಿ, producer ಅನ್ನು delete ಮಾಡಿದ್ದೀರಿ, seller ಎಂದು ಇಟ್ಟಿದ್ದೀರಿ Producer is also a Seller as per the APMC definition ಇವೆರಡನ್ನೂ ತಾವೂ ಏನು ಇಲ್ಲಿ ಒಪ್ಪಿದ್ದಿರಿ, ಅದರ ವಿರುದ್ಧ ಅಲ್ಲಿ Bill ಈಗ discussionನಲ್ಲಿದೆ ದಯವಿಟ್ಟು ಅದರಲ್ಲಿ ತಾವು ಯಾವ ರೀತಿ ಬದಲಾವಣೆ ತರುತ್ತೀರಿ? ಬೇಗ ತರಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ, ಸನ್ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರವನ್ನು charge ಮಾಡುತ್ತಿದ್ದೇನೆ ಈಗ ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಮೂಲಕ PWD Minister ಅವರನ್ನು ಕೇಳಬಯಸುತ್ತೇನೆ ರಸ್ತೆಗಳ ಆಯ್ಕೆ ಯಾವ ಆಧಾರದ ಮೇಲೆ ಆಗುತ್ತಿದೆ? ರಸ್ತೆಗಳಿಗೆ ಗ್ರಾಂಟ್ ಅನ್ನು ಯಾವ ಆಧಾರದ ಮೇಲೆ ಕೊಡುತ್ತಿದ್ದೀರಿ? ಸರ್, ನಮ್ಮ ಹತ್ತಿರ ಬರುತ್ತಿದ್ದಾರೆ ನಾನು ಯಾವುದನ್ನೂ ಇಲ್ಲಿ ಉತ್ಪ್ರೇಕ್ಷೆಯಿಂದ ಆಡುವುದಿಲ್ಲ ಒಂದು ಕಾಗದವನ್ನು ಕೊಟ್ಟು ಬಿಡಿ ಸರ್, ನಾವು manage ಮಾಡಿ ರೋಡಿಗೆ grant ಹಾಕಿಸಿಕೊಂಡು ಬರುತ್ತೇವೆ ಎಂದು ಹೇಳುತ್ತಾರೆ ನಮಗೆ ಗೊತ್ತಿಲ್ಲದೆ, ಈಗ ನನ್ನ ಕ್ಷೇತ್ರದಲ್ಲಿ 90 ಲಕ್ಷ ರೂಪಾಯಿಗಳಷ್ಟು NABARD works ಸೇರಿದೆ ಪ್ರಕಾಶ್‌ರವರೆ, ರಸ್ತೆಯೇ ಇಲ್ಲ, ಮೂರು ಕಿಲೋಮೀಟರ್‌ಗಳು ಬಿಟ್ಟು ಮುಂದಕ್ಕೆ ಹೋದರೆ, ಹಳ್ಳ ಯಾರು ಇದನ್ನು ಸೇರಿಸಿದ್ದು? ಗೊತ್ತಿಲ್ಲ ನನ್ನದೇ ಮತಕ್ಷೇತ್ರವಾದ

ಚಿಕ್ಕನಾಯಕನಹಳ್ಳಿಯಲ್ಲಿ ಈ ರೀತಿ ಆಗಿದೆ ಇಲ್ಲಾ ಜಾತಿಯಲ್ಲಿ ಇರಬೇಕು, ನಾವೂ ಇಲ್ಲಾ ಪಾರ್ಟಿಯಲ್ಲಿರಬೇಕು ಹಾಗೂ ನಮ್ಮ ಕ್ಷೇತ್ರದಲ್ಲಿ ಕೊಟ್ಟರೆ ಅವರ ಪಾರ್ಟಿಯವರಿಗೆ ನಾವು ಎಂ ಎಲ್ ಎ ಗಳು ಭಾಗ ಕೊಡಬೇಕು ನೀವು ನಮ್ಮನ್ನು ಎಂಥ ವಿಷಮ ಸ್ಥಿತಿಗೆ ತಂದು ನಿಲ್ಲಿಸಿದ್ದಿರಿ? ತರಿಸಿ ರೆಕಾರ್ಡು ಯಾವ್ಯಾವ ರಸ್ತೆಗಳಿಗೆ ಗ್ರಾಂಟ್ ಹಾಕುತ್ತಿದ್ದಿರಿ ನೀವು, ಯಾವ ಆಧಾರದ ಮೇಲೆ ಆಗಿದೆ ಎಂಬುದನ್ನು ಹೇಳಬೇಕಲ್ಲಾ? ಏನು ನಡೆಯುತ್ತಿದೆ ಈ ಇಲಾಖೆಯಲ್ಲಿ ಎಂಬುದು ಗೊತ್ತಾಗುವುದಿಲ್ಲ ಯಾರು ಬೇಕಾದರೂ ಬಂದು 25, 30, 40, 90 ಲಕ್ಷದ worksನ್ನು ಇಲ್ಲಿ ಹಾಕಿಸಿಕೊಂಡು ಹೋಗಬಹುದು, ನಿಮ್ಮ ಪಿ ಡಬ್ಲ್ಯೂ ಡಿ ಇಲಾಖೆಯಲ್ಲಿ ಏನು ಎಂ ಎಲ್ ಎ ಆಗ ಬೇಕಾಗಿಲ್ಲ ಅಲ್ಲಿ ಮೀಸೆ ತಿರುವುತ್ತಾರೆ ಏನಯ್ಯ, ನಿಮ್ಮ ಎಂ ಎಲ್ ಎ ನೀತಿ ಹೇಳಿಕೊಂಡು ಓಡಾಡಿದರು ನೋಡು ನಾನು work ಹಾಕಿಸಿಕೊಂಡು ಬಂದೆ ಎಂದು ಉಸಿರು ಬಿಡುವಂತೆ ಇಲ್ಲ ನಾನು ಇದನ್ನು ಮಾಡಬೇಡಿ ಎಂದರೆ ಅಲ್ಲಿನ ಜನರು ವಿರೋಧಿಯಾಗುತ್ತಾರೆ ಅವರು ಮಾಡುವುದನ್ನು ಇವತ್ತು ಸಹಿಸಿಕೊಳ್ಳಲು ಆಗುವುದಿಲ್ಲ ನಮ್ಮ ಕಣ್ಣಿನ ಎದುರಿಗೆ ಅಗತ್ಯ ಇಲ್ಲದಿರುವ ಕೆಲಸ ನಡೆಯುತ್ತಿದೆ ಕೆಲಸ ಇಲ್ಲದೇ payment ಆಗುತ್ತಿದೆ ಜಂಗಲ್ ಕ್ಲಿಯರೆನ್ಸ್ ಎಂದು 25, 30, 40 ಲಕ್ಷ ಹಾಕಿಸಿಕೊಂಡು ಹೋಗಿದ್ದಾರೆ side ನಲ್ಲಿರುವ ಗಿಡವನ್ನು ನಾನು ತೆಗೆಯುತ್ತೇನೆಂದು ಒಂದು ಜೆ ಸಿ ಬಿ ತೆಗೆದುಕೊಂಡು 3 ಗಂಟೆ ಆ ಕಡೆ 3 ಗಂಟೆ ಈ ಕಡೆ ಒಡೆದುಕೊಂಡು ಹೋಗಿ 20-25 ಲಕ್ಷ ರೂಪಾಯಿ ಕೆಲಸ ಮಾಡಿದ್ದ stage ತಂದಿದ್ದಾರೆ ಏನಾಗಿದೆ? ನಾನು ಉತ್ಪ್ರೇಕ್ಷೆಗೆ ಆಡುತ್ತಿಲ್ಲ ಇಷ್ಟೊಂದು ಅಧ ಪತನಕ್ಕೆ ಯಾವತ್ತೂ ಲೋಕೋಪಯೋಗಿ ಇಲಾಖೆ ಇಳಿದಿರಲಿಲ್ಲ ತೆಗೆದುಕೊಳ್ಳುತಿರುವ ರೋಡ್ ಯಾವುದು? ನಿಮಗೆ ಸಂಬಂಧ ಇಲ್ಲ ನಬಾರ್ಡ್ ಎಂದು ಹೇಳುತ್ತೀರಿ, ವಿ ಆರ್ ತೆಗೆದುಕೊಳ್ಳುತ್ತೀರಿ, ಇನ್ನು ಯಾವುದೋ ಎಂ ಡಿ ಆರ್ ತೆಗೆದುಕೊಳ್ಳುತ್ತೀರಿ, ಒ ಡಿ ಆರ್ ತೆಗೆದುಕೊಳ್ಳುತ್ತಿದ್ದೀರಿ, ಐ ಸಿ ಆರ್ ಸಿ ರೋಡ್‌ನ್ನು ತೆಗೆದುಕೊಳ್ಳುತ್ತಿದ್ದೀರಿ ನೀವು ಪಿ ಡಬ್ಲ್ಯೂ ಡಿ ರಸ್ತೆಯನ್ನೇನು ಮಾಡುತ್ತೀರಿ ಎಂದರೆ ಕೆ ಆರ್ ಡಿ ಸಿ ಎಲ್ ನವರು ಮಾಡುತ್ತಾರೆ, ಅದು ನಮಗೆ ಸಂಬಂಧ ಇಲ್ಲ, State Highwayಗಳೆಲ್ಲಾ ಕೆ ಆರ್ ಡಿ ಸಿ ಎಲ್ ನಲ್ಲಿ ಆಗಬೇಕೆಂದು ಹೇಳಿ ಅಲ್ಲಿ ದನಾ ಕಾಯಲು ಲಾಯಕ್ಕು ಇಲ್ಲದ ಒಬ್ಬ officer ನ್ನು ಇಟ್ಟುಕೊಂಡು ಸವಾರಿ ಮಾಡುತ್ತೀರಾ ನೀವು? he is unfit ಕತ್ತೆಯನ್ನೋ, ದನವನ್ನೋ ಕಾಯಲಿ ಅವರನ್ನು ಮನೆಗೆ ಕಳಿಸಿ ನಾನು ಇವತ್ತು ನೊಂದು ಹೇಳುತ್ತಿದ್ದೇನೆ ಯಡಿಯೂರಪ್ಪನವರಿಗೆ ಗೋಗರೆದು ಒಂದು ಕಾಗದವನ್ನು ಕೊಡಿಸಿದೆ ಒಂದು ರಸ್ತೆ ಮಂಡ್ಯ-ಹಡಗಲಿ ರೋಡ್ ಹಾಳಾಗಿಹೋಗಿದೆ ಕ್ಯಾಕರಿಸಿ ಉಗಿಯುತ್ತಿದ್ದಾರೆ

ಜನ ಎಂದು, ಅವರು ವಿವೇಚನೆ ಯಾರಿಗೂ ಕೊಟ್ಟಿಲ್ಲದಿದ್ದ ಕಾಗದ 3 ಕೋಟಿ 55 ಲಕ್ಷ ಬಿಡುಗಡೆ ಮಾಡಿ ರಸ್ತೆ ತೆಗೆದುಕೊಳ್ಳಿ ಎಂದರೆ secretary ಯವರು Finance Minister ಅವರು ಹಾಗೆಲ್ಲಾ ಕೊಡಲು ಬರುವುದಿಲ್ಲವೆಂದು ಹೇಳುತ್ತಾರೆ Call him ಮತ್ತೆ ನಾನು ಹೋಗಿ ಗಲಾಟೆ ಮಾಡಿದ್ದಕ್ಕೆ ನಾನು ಎಂ ಡಿ ಗೆ ಹೇಳಿದ್ದೇನೆ ಸಾರ್, you contact him M D ನನಗೆ ಫೋನ್ ಮಾಡಿ ಹೇಳುತ್ತಾರೆ, Sir, I have taken care of the road ತಾವು ತಾಪತ್ರಯ ಮಾಡಿಕೊಳ್ಳಬೇಡಿ ಸಾರ್, ಆದರೆ ಆ contractorನ್ನು ಮುಂದುವರೆಸಲು ಆಗುವುದಿಲ್ಲ ಸಾರ್ ನನ್ನ ಮನೆಯಲ್ಲಿ ಯಾರೂ ನೆಂಟರಿಷ್ಟರು contractor ಇಲ್ಲ, ಯಾವನಿಗೋ ಕೊಟ್ಟು ರೋಡ್ ಮಾಡಿಸಯ್ಯ ಎಂದು ಹೇಳಿದರೆ four months ಆದ ಮೇಲೆ ನಾನು ಫೋನ್ ಮಾಡಿ ಹೇಳಿದರೆ "I am sorry sir, that cannot be included" ಎಂದು ಹೇಳುತ್ತಾರೆ I have a letter ನಿಮ್ಮ ಸುಬ್ರಹ್ಮಣ್ಯಂರವರ ಹತ್ತಿರ letter ಇದೆ ನಿಮ್ಮ ಎಂ ಡಿ ಕೆ ಆರ್ ಡಿ ಸಿ ಎಲ್ ಅವರು ನಾನು ಆ ರಸ್ತೆಯನ್ನು ಸೇರಿಸಿಕೊಂಡಿದ್ದೇನೆ ಎನ್ನುವ letter ಇದೆ ಕತ್ತೆಯ ಹಲ್ಲು ಉಜ್ಜಲು ಇದ್ದಾನಾ ಆ officer? ನಮ್ಮ ಮರ್ಯಾದೆ ಏನಾಗಬೇಕು? ನಾನು ಆ ರಸ್ತೆಯನ್ನು ಕಿತ್ತುಹಾಕಿಸಿ ಎಂ ಎಲ್ ಎ ಗ್ರಾಂಟನ್ನು ಹಾಕಿ ಎಂಬ್ಯಾಂಕ್‌ಮೆಂಟ್ ಮಾಡಿಸಿದೆ, ತಗ್ಗಾಗಿರುವ ಕಡೆ ಮಣ್ಣನ್ನು ಹೊಡೆಸಿದೆ ಆನಂತರ ಆಗುವುದಿಲ್ಲವೆಂದು ಆ letter ರನ್ನು ಎಸೆದರು ನಾವು ಸ್ವಾಭಿಮಾನ ಇರುವವರು ಏನಾಗಬೇಕು? ಇವತ್ತು ಜನರು ನಮ್ಮನ್ನು ನೋಡಿ ನಗುತ್ತಾರೆ I demand Such officers should be called here and explanation has to be sought ನಾನು ಹುಡುಗಾಟಕ್ಕೆ ಮಾತನಾಡುವವನಲ್ಲ ಪಿ ಡಬ್ಲ್ಯೂ ಡಿ secretary ಏನಾಗಿದ್ದರೆ, ಮೂರು ದಿವಸಗಳಿಂದ ಕೇಳುತ್ತಿದ್ದೇನೆ ಮಾಹಿತಿ ಕೊಡಿ ಎಂದು ಕೊಡುತ್ತಾರಾ? ನಿಮ್ಮ secretary ಕೈಯಲ್ಲಿ ಕೊಡಿಸಿದ್ದೇನೆ ನಾನು ಭಾರಿ ಹುಷಾರಿ ನಿಮ್ಮ secretary ಕೈಯಲ್ಲಿ ನಾನು demand ಮೇಲೆ ಮಾತನಾಡಲು ಇಂತಿಂಥ ಮಾಹಿತಿ ಬೇಕು ಎಂದು ಕಾಗದ ಕೊಡಿಸಿದ್ದೇನೆ I have not received ಇವತ್ತಿನವರೆಗೂ ಬಂದಿಲ್ಲ You call for his explanation ಪಾಟೀಲ್‌ರವರನ್ನು ಕರೆದು ಮಾಧುಸ್ವಾಮಿಯವರು ಕಾಗದ ಕೊಟ್ಟಿದ್ದರೇ, ಇವತ್ತಿನವರೆಗೆ ಉತ್ತರ supply ಆಗಿದೆಯೇ ಎಂದು ಕೇಳಿ ಎಲ್ಲಿಂದ ತರಿಸಿಕೊಳ್ಳಬೇಕು? ಮಾಹಿತಿ ಹಕ್ಕಿನ ಕೆಳಗೆ ಹಾಕಿಕೊಂಡು ಕುಳಿತರೆ ನೀವು ಶಾಸನ ಸಭೆ ನಡೆಸಲು ಆಗುತ್ತದೆಯೇ? Right to Information Act ಕೆಳಗೆ ಎಂ ಎಲ್ ಎ ಗಳು ಅರ್ಜಿಯನ್ನು ಹಾಕಬೇಕೇ? Are we not empowered to access the records in the

State Offices ? ಇದು ಹೊಸದೇ? ಕೊಡುವಂತೆ ಇಲ್ಲ ಶಾಸನಸಭೆ ಮುಗಿಯುವವರೆಗೂ ಯಾವುದೇ ಮಾಹಿತಿಯನ್ನು ಯಾರಿಗೂ ಕೊಡುವಂತೆ ಇಲ್ಲ ಏನಿದು ಸಾರ್ವಭೌಮರ, ಚಕ್ರವರ್ತಿಗಳ ಅದಿಲ್‌ಶಾಹಿ ಕಾಲದಲ್ಲಿದ್ದೇವಾ? ಎಲ್ಲಿ ಬದುಕಿದ್ದೇವೆ? ಇದು ಪ್ರಜಾಪ್ರಭುತ್ವನಾ, ನಿಮ್ಮ ಇಚ್ಛೆ, ಯಾರ್‍ಯಾರ ತೆವಲು ಹೇಗೇಗೆ ಇದೆಯೋ ಹಾಗೆ ಸರ್ಕಾರ ನಡೆಸಲು? ನೀವು ಏನಾದರೂ ಹಣಕಾಸು ಮಂತ್ರಿಗೆ ಲಾಯಕ್ಕಾಗಿದ್ದರೆ ಯಾವ ಯಾವ ರಸ್ತೆಯಲ್ಲಿ ಎಷ್ಟೆಷ್ಟು ಖರ್ಚು ಮಾಡಿದೆ, ನಾನು ಇಲ್ಲಾ ಭಾಷಣ ಮಾಡಿದ್ದೇನೆ ಎಂದು ಹೇಳಿ ಸಾರ್? ಸಮಗ್ರ ಅಭಿವೃದ್ಧಿ ಎಂದು ಇಲ್ಲಿ ಏನು ಭಾಷಣ ಮಾಡ್ಡೀರಿ, ಅದಕ್ಕೇ ನಾನು ಓದಿ ಹೇಳಿದೆ ನೀವು ಹೇಳಿ ಸಾರ್, ಯಾವ ಯಾವ ರಸ್ತೆ important ಇತ್ತು, ಯಾವ್ಯಾವ ರಸ್ತೆಗೆ ಖರ್ಚನ್ನು ಹಾಕಿದ್ದಾರೆ, ಯಾವ ರಸ್ತೆಗೆ ಏಕೆ ಹಾಕಿಲ್ಲ ಎಂದು ಇಲ್ಲಿ ತರಿಸಿ, ಒಂದು ಮೌನ್ಯಮಾಪನ ಆಗಲಿ ಸಾರ್, ವರ್ಕ್ ಕೇಳುತ್ತಿರುವವರು ಯಾರು, contract ಕೊಡಿಸುತ್ತಿರುವುದು ಯಾರಿಗೆ, ಪ್ಯಾಕೇಜ್ ಯಾರಿಗೆ ಆಗುತ್ತಿದೆ? ಯಾವ ಆಂಧ್ರದವನಿಗೆ ಪ್ಯಾಕೇಜ್ ಕೊಡುತ್ತೀರಿ? ನಿಮ್ಮ ನೆಂಟರಿಷ್ಟರನ್ನು ಸಬ್‌ಏಜೆಂಟ್ ಆಗಿ ಸಬ್ ಲೀಸ್‌ನಲ್ಲಿ ಕೊಡುತ್ತೀರಾ ನೀವು? ಇದೆಲ್ಲಾ ಸಹಿಸಿಕೊಂಡು ನಾವು ಇಲ್ಲಿ ಕೆಲಸ ಮಾಡಬೇಕಾ? ಇಲ್ಲಿ ಯಾರ ಹಂಗಿನಲ್ಲಿ ರಾಜಕೀಯ ಮಾಡಲು ಬಂದಿಲ್ಲ ಯಡಿಯೂರಪ್ಪನವರೇ ಹಂಗಿನಲ್ಲಿ ಬರುವುದಾಗಿದ್ದರೆ ನಿಮ್ಮಂತವರ ಕೈಕಾಲು ಹಿಡಿದು ನಿಮ್ಮ ಪಾರ್ಟಿಗಳಲ್ಲಿ ಬಿದ್ದಿರುತ್ತಿದ್ದೆವು ಹೇಳಿದ ಹಾಗೆ ಕೇಳಿಕೊಡು ನಮಗೆ ಶಕ್ತಿ ಇದೆ, ನಮಗೆ ಜನರಿದ್ದಾರೆ ಎಂಬ ಧೈರ್ಯದ ಮೇಲೆ ಒಂದೊಂದೇ ಎಂ ಎಲ್ ಎ ಇರುವ ಪಕ್ಷದಲ್ಲಿ ನಿಂತಿದ್ದೇವೆ ನಮಗೆ ಧಮ್ಮು ಕೊಟ್ಟಿದ್ದಾನೆ ದೇವರು ಬಾಳಲುಶಕ್ತಿ ಕೊಟ್ಟಿದ್ದಾರೆ ಈ ರಾಜ್ಯದ ಜನ ನಮ್ಮ ಕ್ಷೇತ್ರದ ಜನ ಅವರಿಗೆ ನಾವು ನ್ಯಾಯ ಒದಗಿಸಬೇಕಾಗಿದೆ ವರ್ಷ ವರ್ಷ ಒಂದು ರೂಪಾಯಿ ಗ್ರಾಂಟ್ ಇಲ್ಲದಂತೆ ನಮ್ಮನ್ನು ಆಚೆ ಇಡುವ ಸ್ಥಿತಿ ತಂದರೆ ಬಜೆಟ್ ಪಾಸ್ ಮಾಡಿ ಎಂದು ಕೇಳುತ್ತೀರಾ ನೀವು ಇಲ್ಲಿ? ಯಾರದ್ದೋ ನಾಲ್ಕು ಜನಕ್ಕೆ ಅನುಕೂಲ ಆಗುವುದು ರಾಜ್ಯ ಬಜೆಟ್ ಎಂದು consider ಮಾಡಬೇಕೆ? No, this cannot be passed This demand is underserving to be passed ಏಕೆ? ನಿಮಗೆ ಹಿಡಿತ ಇಲ್ಲ ನಿಮ್ಮ ಇಲಾಖೆಗಳು ಸತ್ತು ಹೋಗಿದೆ ನೀವು ಸುಪ್ರಿಂಕೋರ್ಟ್ ಮುಂದೆ ಅರ್ಜಿ ಹಾಕಿದ್ದೀರಿ, ನಮ್ಮ ಹತ್ತಿರ fabricated record ಕೊಡುವ officerಗಳು ಇದ್ದಾರೆ ಎಂದು ನಿಮ್ಮ officer ಗಳು ಇವತ್ತು Non-bailable warrant ಗಳಲ್ಲಿ ಕೋರ್ಟ್ ಮುಂದೆ ನಿಂತುಕೊಳ್ಳುತ್ತಾರೆ ಸುಪ್ರೀಂ ಕೋರ್ಟ್‌ಗೆ ಹೋಗಿ stay ತರುತ್ತಾರೆ ಇವತ್ತು warrant ತಪ್ಪಿಸಿಕೊಳ್ಳಲು, Contempt of the Court pro-

ceedings ತಪ್ಪಿಸಿಕೊಳ್ಳಲು Contempt of High Court ತಪ್ಪಿಸಿಕೊಳ್ಳಬೇಕು ಎಂದು Principal Secretary, C & I ಕೂಡ ಸುಪ್ರೀಂ ಕೋರ್ಟ್ ಮುಂದೆ ಹೋಗಿದ್ದಾರೆ ಏನು ನಡೆಸುತ್ತಿದ್ದೀರಿ ಪ್ರಮುಖವಾದ ಇಲಾಖೆಗಳಲ್ಲಿ? ಹಾಗಾದರೆ ಅವರನ್ನೇ ಇಟ್ಟುಕೊಂಡು ನಡೆಸುವ ಆಸೆ ಏನು? Commitment, care, ವ್ಯವಹಾರ ಬೇರೆ ಏನಿದೆ? In the name of package everything is packed up state ನ್ನು ನಿರ್ನಾಮ ಮಾಡಿದ್ದೀರಿ ನೀವು ನಾನು ಹೇಳಿದ್ದೆ ಒಂದು ಹೋದ ಸಲ Assembly ಆದಾಗ ಯಡಿಯೂರಪ್ಪನವರ ಸುದೈವ, ಯಾರಿಗೂ ಸಿಕ್ಕಲಾರದ ಒಂದು ಅವಕಾಶ ಸಿಕ್ಕಿತು ಕರ್ನಾಟಕವನ್ನು ಅಭಿವೃದ್ಧಿ ಪಥಕ್ಕೆ ತೆಗೆದುಕೊಂಡು ಹೋಗುವುದು ದುರಾದೃಷ್ಟ, ಇವತ್ತು, ಯಾರೋ ಆರು ಜನ Finance Ministers ಹಿಡಿತ ಮಾಡಿ, ಇವತ್ತು ರಾಜ್ಯಕ್ಕೆ ಸಂಪನ್ಮೂಲ ಕ್ರೋಢೀಕರಿಸಿಡುವ ಸ್ಥಿತಿ ಬಂದಾಗ ಯಡಿಯೂರಪ್ಪನವರೇ, ಈ ಸ್ಥಿತಿ ನಿರ್ಮಾಣವಾಗಿಬಿಟ್ಟರೆ ನಾಳೆ ಬರುವವರ ಗತಿ ಏನು? ದಿವಾಳಿಯಾಗಿತ್ತದೆ ನಿಮ್ಮ ಸರ್ಕಾರ, ಇನ್ನೊಂದು ಅವಧಿಗೆ ಬಂದು ನೋಡಿ ಎಷ್ಟು ಸಾಲ ತೀರಿಸಬೇಕಾಗುತ್ತದೆ, beggar ಆಗಿರುತ್ತದೆ ಕರ್ನಾಟಕ ಜನತೆ ಇವತ್ತು ಚೆನ್ನಾಗಿದೆ ಎಂದು ಯಥೇಚ್ಚವಾಗಿ ನಿಮಗೆ ಇಷ್ಟ ಬಂದಂತೆ ಏನು ಖರ್ಚು ಮಾಡುತ್ತಿದ್ದೀರಿ ಅದು ನಿಮ್ಮ ದುಡ್ಡಲ್ಲ ಮುಂದಿನ ಜನಾಂಗದವರಿಗೆ ಬಿಟ್ಟು ಹೋಗಬೇಕಾಗಿರುವ ದುಡ್ಡು ಇದು ಎಷ್ಟು ಉಳಿಸುತ್ತಿದ್ದೀರಿ? What is your Capital Investment? ಯಾವ sector ನಲ್ಲಿ ದುಡ್ಡು ಮಾಡಿದ್ದೀರಿ ಇವತ್ತು? ಯಾವ sector ನಲ್ಲಿ ಇವತ್ತು ಅಭಿವೃದ್ಧಿಯಾಗುತ್ತಿದೆ? ನಾನು ಹೇಳಿದೆ, ನಿನ್ನೆ ಅವರು ಬೈದುಕೊಂಡರು Growth is not this growth ಇಡೀ ಬೆಂಗಳೂರು ಜಿಲ್ಲೆ ಒಂದು ಭಾಗಕ್ಕೆ ಖರ್ಚು ಆಗುವ ಹಣ ಇನ್ನೊಂದು ಅದೇ ಅರ್ಧದಷ್ಟು ಹಣ ಒಂದೇ ಒಂದು ಕ್ಷೇತ್ರಕ್ಕೆ ಖರ್ಚಾದರೆ ಬೆಂಗಳೂರು ಜಿಲ್ಲೆ ಆಗುತ್ತದೆಯೇ? ಇಡೀ ನಿಮ್ಮ ಡಿವಿಜನ್‌ಗೆ ಆಗುವ ಹಣ ಶಿಕಾರಿಪುರದಲ್ಲಿ ಖರ್ಚಾದರೆ ಶಿವಮೊಗ್ಗ ಅಭಿವೃದ್ಧಿಯಾಗಿತ್ತದೆಯೇ? ನೀವು ಮಂತ್ರಿಯಲ್ಲವೇ? ನಮಗೆಲ್ಲಾ ಮಂತ್ರಿಯಲ್ಲಬೇ? ಈ ರಾಜ್ಯಕ್ಕೆಲ್ಲ ನಾಯಕರಲ್ಲವೇ ನೀವು ? ಬರೀ ನಿಮ್ಮ ಕ್ಷೇತ್ರಗಳಿಗೆ ನಾಯಕರುಗಳಾ ನೀವು? If at all you feel that, ಈ ಕ್ಷಣ ಆ ಸೀಟ್‌ನಲ್ಲಿ ಕುಳಿತುಕೊಳ್ಳಬಾರದು ನಾನು, ನನ್ನ ಕ್ಷೇತ್ರ, ನಾಳೆ ನಾನು ಅಲ್ಲಿ ಚುನಾವಣೆ ನೋಡಬೇಕು, ಅಲ್ಲಿರುವ ಜನರನ್ನು ಓಲೈಸಬೇಕೆಂದರೆ ಕೈಮುಗಿದು ಕೇಳುತ್ತೇವೆ, ಬಹಳ ದೊಡ್ಡ ಮನುಷ್ಯರು ಕುಳಿತುಕೊಂಡಿರುವ ಆ ಸೀಟನ್ನು ಏಕೆ ಕುಳಿತು ಹಾಳು ಮಾಡುತ್ತೀರಿ? ಆ ಪಾಪವನ್ನು ಮಾಡಬೇಡಿ ನಮಗೆ ಏನು ಮಾಡಲು ಆಗದಿದ್ದರೂ ಆ ಸೀಟಿನ ಗೌರವವನ್ನಾದರೂ ಉಳಿಸಿ ಹೋಗೋಣ ನಮಗೆ ಒಂದು ಸಲ ರಾಮಕೃಷ್ಣ

ಹೆಗಡೆಯವರು ಹೇಳುತ್ತಿದ್ದರು, ಕುರ್ಚಿಗೆ ಕೂತುಕೊಂಡರೆ ಗೌರವ ಬರುವ ಸ್ಥಿತಿ ಇರುತ್ತದೆ ನಾವು ಕುಳಿತುಕೊಂಡಾಗ ಕುರ್ಚಿಗೆ ಗೌರವ ತರುವ ಸ್ಥಿತಿ ಬೇರೆ ಇರುತ್ತದೆ ಎಂದು ನಾವು ಕುಳಿತುಕೊಂಡರೆ ಆ ಕುರ್ಚಿಗಳಿಗೆ ಗೌರವ ಬರಬೇಕು ಸಾರ್ ಯಾರೋ ಗೌರವಸ್ಥರು ಕುಳಿತದ್ದ ಕುರ್ಚಿಯಲ್ಲಿ ಕುಳಿತುಕೊಂಡು ಹೋಗಿಬಿಟ್ಟರೆ ಆಗುವುದಿಲ್ಲ ಆ ಕುರ್ಚಿಗೆ ನಮ್ಮಿಂದಲೂ ಸ್ವಲ್ಪ ಗೌರವ ಹೆಚ್ಚಬೇಕು ನಾನು ಈ ಕ್ಷೇತ್ರದ ಬಗ್ಗೆ ನೊಂದು ಇವತ್ತು ಮಾತನಾಡಲೇ ಬೇಕು ಎಂದು ಮಾತನಾಡುತ್ತಿದ್ದೇನೆ ನನಗೆ ಹಂಗು ಇಲ್ಲ ಯಾವುದೋ ಏನೋ ಕೆಲಸ ಆಗಲಿಲ್ಲವೆಂದರೆ ನನ್ನ ಕ್ಷೇತ್ರದ ಜನ ನನ್ನನ್ನು ಮನೆಗೆ ಕಳುಹಿಸುವುದಿಲ್ಲ ನಾನು ಎಲ್ಲಾ ಸ್ಥಿತಿಯನ್ನು ನಿಭಾಯಿಸಿಯಾಗಿದೆ ಈ ಭಯ, ಭೀತಿಗೆ ಹೆದರಿಕೊಂಡು ರಾಜಕೀಯ ಮಾಡಲು ನಾನು ಇಲ್ಲಿ ಬಂದಿಲ್ಲ ಭೀತಿ ನಿರ್ಮಾಣ ಮಾಡುತ್ತೀರಾ ನಮ್ಮ voiceನ್ನು suppress ಮಾಡುತ್ತೀರಾ ? ಯಾರು ಮಾತನಾಡುವಂತೆ ಇಲ್ಲವೇ ನಿಮ್ಮ ವಿರುದ್ಧವಾಗಿ ಈ ರಾಜ್ಯದಲಿ ಏನಾಗಿದ್ದಾರೆ ನಿಮ್ಮಂತೆ ಮೆರೆದವರು? ಬಿಹಾರದಲ್ಲಿ ಏನಾದರು? ಯು ಪಿ ಯಲ್ಲಿ ಏನಾದರು? ಏನಾಗಿದ್ದಾರೆ ನಿಮ್ಮಂತೆ ಮೆರೆದವರು? ಬಿಹಾರ, ಯು ಪಿ ಯಲ್ಲಿ ಏನಾದರೂ ಸ್ವಲ್ಪ ತಿರುಗಿ ನೋಡಿ ಆ ಗಾಳಿಯನ್ನು ಶಾಶ್ವತವಾಗಿ ಇರುತ್ತೀರಾ ? ನಿಮ್ಮ ಹಣೆ ಬರಹವನ್ನು ಬರೆದಾಗಿದೆ ಜನ ಹಣೆಯಬರಹ ಗೊತ್ತಿದ್ದೂ, ಆಯಸ್ಸು ಮುಗಿದಿದೆ ಎಂದು ಗೊತ್ತಿದ್ದೂ, ಮೃತ್ಯುಂಜಯ ಜಪ ಮಾಡಿಕೊಂಡಿದ್ದೂ, ಮಹಾಚಂಡಿ ಯಜ್ಞಗಳನ್ನು ಮಾಡಿಕೊಂಡು ಈ ರೀತಿ ವರ್ತಿಸುತ್ತೀರಲ್ಲ ನಮ್ಮ ಗತಿಯೇನು ಬದುಕಬೇಕಾದವರದ್ದು? I am sorry This is an unfit demand to be passed ಇದು selfish ನಾನು ನಿಮಗೆ ಬಿಡುತ್ತೇನೆ, ಇಡೀ ಬೆಂಗಳೂರು ಸರ್ಕಲ್‌ನಲ್ಲಿ ಯಾವ್ಯಾವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಇವತ್ತು ಅನುದಾನ ರಿಲೀಸ್ ಆಗುತ್ತಿದೆ, ಯಾವ್ಯಾವ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನ ರಿಲೀಸ್ ಆಗಿತ್ತಿದೆ, ನಾನು ನಿಮಗೆ ಆಗಲೇ ಹೇಳಿದ್ದೇನೆ ಈ ದಾಖಲೆ ಎಲ್ಲವನ್ನು ನಿಮ್ಮ ಮುಂದೆ ಇಡುತ್ತೇನೆ I demand a white paper on this floor ಇಲ್ಲಿ ಬರಬೇಕು ಯಾವ್ಯಾವ ಅರ್ಹತೆ ಮೇಲೆ ರೋಡ್‌ಗಳು upgrade ಅಗಿದೆ, ಯಾವ ಅರ್ಹತೆ ಮೇಲೆ grant ರಿಲೀಸ್ ಆಗಿದೆ? ನಾನು ಇನ್ನೊಂದು ಪ್ರಶ್ನೆ ಕೇಳುತ್ತೇನೆ, ಪಿ ಡಬ್ಲ್ಯೂ ಡಿ ರೋಡ್ ಯಾವುದೂ ನಬಾರ್ಡನಲ್ಲಿ ಅಭಿವೃದ್ಧಿಯಾಗಲಿಲ್ಲ ರೇವಣ್ಣನವರೆ ಯಾಕೆ ಹಾಗಾದರೆ ಆರ್ ಡಿ ಪಿ ಆರ್ Minister ಅದಕ್ಕೆ ಅಧ್ಯಕ್ಷರಾಗಿರಬಾರದು?

They are all village roads, Village roads ಅನ್ನು P W D ನವರೇಕೆ ವಹಿಸಿಕೊಂಡು ಅಭಿವೃದ್ಧಿ ಮಾಡುತ್ತಿದ್ದೀರಿ? Why are

you taking up these roads? ಒಂದು ಸಲ NABARDನಲ್ಲಿ ನೀವು ತೆಗೆದುಕೊಂಡ ರಸ್ತೆಯನ್ನು ಮತ್ತೆ ಏನಾದರೂ ನಿಮ್ಮ ಇಲಾಖೆಗೆ ಸೇರಿಸಿಕೊಳ್ಳುವಂತಹ ಕೃಪೆ ಮಾಡಿದೀರಾ? ಯಾವ್ಯಾವ roadಅನ್ನು NABARDನಲ್ಲಿ ಇವತ್ತು ನಾವು asphalt ಮಾಡಿದ್ದೇವೆ? ಯಾವ road ಗಳಲ್ಲಿ ಸೇತುವೆಗಳನ್ನು ಮಾಡಿದ್ದೇವೆ? Natural ಆಗಿ, ಏನ್ರಿ ರೇವಣ್ಣನವರೆ, ನಮ್ಮದೊಂದೂ ಕೂಡ ಸೇರಿಸಿಕೊಳ್ಳಲಿಲ್ಲವಲ್ಲಾ ಎಂದು ಮಾನ್ಯ ಸಚಿವರಿಗೆ ಕೇಳಿದೆ ನಿಮ್ಮ ಕಾಗದವೇ ಇಲ್ಲವೆಂದು ಹೇಳಿದರು ಸಾರ್, ನಾನು ಏಕೆ ಕಾಗದ ಕೊಡಬೇಕು? Upgradation of roadಗೆ ನನ್ನ constituencyಯಲ್ಲಿ ಒಂದು kilometer ಕೂಡ ಆಗಿಲ್ಲ ಒಂದೇ ಒಂದು ಕಿಲೋಮೀಟರ್ ಕೂಡ ಆಗಿಲ್ಲ ಇಲ್ಲಿರುವ ಪಟ್ಟಿಯಲ್ಲಿ ನಮ್ಮ ಕ್ಷೇತ್ರದ ಹೆಸರಿಲ್ಲ ಚಿಕ್ಕನಾಯಕನಹಳ್ಳಿ ಕರ್ನಾಟಕ ರಾಜ್ಯದಲ್ಲಿ ಇಲ್ಲವೆ? ನೀವೇನು RIDFನಲ್ಲಿ ಹೋದ ಸಲ ಹಣ ಕೊಟ್ಟಿದ್ದೀರಿ, 12th ನಲ್ಲಿ ನಮ್ಮ ಕ್ಷೇತ್ರಕ್ಕೆ ಒಂದು ರೂಪಾಯಿ ಸಹಾ ಕೊಟ್ಟಿಲ್ಲ 11ರಲ್ಲಿ ಕೊಟ್ಟಿದ್ದೀರಿ, 12ರಲ್ಲಿ ಅರ್ಧ ಕೊಟ್ಟಿದ್ದೀರಿ, 13ರಲ್ಲಿ 12ರಲ್ಲಿ ಒಂದೇ ಒಂದು ರೂಪಾಯಿಯನ್ನೂ ಸಹ ಕೊಟ್ಟಿಲ್ಲ ನನ್ನ ಪಕ್ಕದ ಕ್ಷೇತ್ರಕ್ಕೆ ಎರಡೂ ಚಿಲ್ಲರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ನಾವು tax ಕಟ್ಟುವುದಿಲ್ಲವೇ? ಸಾರ್, ಇದಕ್ಕೆ ಎಲ್ಲಿಯಾದರೂ ಒಂದು ಕಡೆ ಇತಿಶ್ರೀ ಹಾಡಲೇಬೇಕು ತುಂಬಿದ್ದು ಬಹಳ ದಿವಸ ಬದುಕುವುದಿಲ್ಲ ನಾನು ಬಹಳ ನಿಮ್ಮ ಭಾಷಣ ಓದಿದ್ದೇನೆ ಮಸ್ತಕದಲ್ಲಿ ಓದಿ ಬಿಟ್ಟರೆ ಭಾಷಣವಾಗಿವುದಿಲ್ಲ ಮಾನ್ಯ ಯಡಿಯೂರಪ್ಪನವರೆ, ಸ್ವರಾಜ್ಯ, ರಾಮರಾಜ್ಯ ಮಸ್ತಕದ ಮೇಲೆ ಆಗುವಂತಿದ್ದರೆ, ನಿಮಗಿಂತ ಒಳ್ಳೊಳ್ಳೆಯ ಭಾಷಣಗಳನ್ನು ಮಾಡಿದವರು ಇಲ್ಲಿಂದ ಎದ್ದು ಹೋಗಿ ಬಿಟ್ಟಿದ್ದಾರೆ ಭಾಷಣದಲ್ಲೇ ಸ್ವರ್ಗ ಸೃಷ್ಟಿಯಾಗಿವಂತಿದ್ದರೆ, ನಾವೆಲ್ಲಾ ಚೆನ್ನಾಗಿ ಸೃಷ್ಟಿ ಮಾಡುವವರು ಇಲ್ಲಿ ಕುಳಿತುಕೊಂಡು ಬಿಟ್ಟಿದ್ದೇವೆ, ಏನು ಬೇಕಾದರೂ ಮಾತಿನಲ್ಲಿ ಸೃಷ್ಟಿ ಮಾಡಿಬಿಡಬಹುದು I am sorry to say, this demand is unfit to be passed ಈ demandಅನ್ನು ವಿಧಾನಸಭೆ pass ಮಾಡಿದರೆ ಈ ಶಾಸನ ಸಭೆಗೆ ಶೋಭೆ ತರುವುದಿಲ್ಲ ನಾನು ಹೇಳುತ್ತಿದ್ದೇನೆ, ಇಲ್ಲಿರುವ ಎಲ್ಲಾ ಸದಸ್ಯರು ಒಂದೇ ಎನ್ನುವಂತಹ ಭಾವನೆ ಯಾವುದೇ ಕಾರ್ಯಕ್ರಮದ ಕೆಳಗಡೆ ಲೋಕೋಪಯೋಗಿ ಇಲಾಖೆಯಲ್ಲಿ ಆಗಿಲ್ಲ ಹಾಗಾಗಿ ತಾರತಮ್ಯವಾಗಿದೆ ಪಕ್ಷಭೇಧವಾಗಿದೆ ದಯಮಾಡಿ ಇದನ್ನು ಪಾಸ ಮಾಡಕೂಡದು ಇದನ್ನು prove ಮಾಡಲಿಕ್ಕೆ ನನ್ನ ಹತ್ತಿರ recrods ಇದೆ ನೀವು ನಿಮ್ಮ ಪಾರ್ಟಿಯವರಿಗೆ ಅಥವಾ ನಿಮ್ಮ ಜಾತಿಯವರಿಗೆ ಮಾಡುತ್ತೀರಿ ಎಂದು ನಾನು ಪ್ರೂವ್ ಮಾಡುತ್ತೇನೆ

ನಾನು ಹೇಳುತ್ತಿದ್ದೇನೆ, ನನಗೆ ಇಲ್ಲಿ prove ಮಾಡಲಿಕ್ಕೆ ಅವಕಾಶ ಕೊಡಬೇಕು ಇದು proov ಆಗುವವರೆಗೆ ಈ demand ಅನ್ನು pass ಮಾಡಕೂಡದು ಎಂದು ನಾನು ಬೇಡಿಕೊಳ್ಳುತ್ತೇನೆ ಮಾನ್ಯ ಅಧ್ಯಕ್ಷರೆ, ಬಹಳ ಸಂಪದ್ಭರಿತವಾಗಿರತಕ್ಕಂಥ ಕರ್ನಾಟಕ ಇವತ್ತು ಹೋಗುತ್ತಿದೆ ನನಗೆ ಮಾನ್ಯ ರೇವಣ್ಣನವರ ತಂದೆಯುವರ ಬಗ್ಗೆ ಬಹಳ ಗೌರವವಿದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ·– He is a senior Member, Concerned Ministers ಅವರ Demand ಅನ್ನು move ಮಾಡಿದ್ದಾರೆ You have allowed the House to debate over it All the members of the House are at liberty to express their opinion ಅದಕ್ಕೇನೂ ತೊಂದರೆಯಿಲ್ಲ ಈ House ಆ demand ಅನ್ನು consider ಮಾಡಬಹುದು, pass ಮಾಡಬಹುದು ಇಲ್ಲವೆಂದರೆ ಎಲ್ಲಾ ಸದಸ್ಯರಿಗೂ ಅವರು ಹೇಳಿದ್ದೇ ಸರಿ ಎಂದೆನಿಸಿದರೆ, ಎಲ್ಲರೂ ಒಟ್ಟಾರೆಯಾಗಿ ಅದನ್ನು reject ಸಹ ಮಾಡಬಹುದು ಆದರೆ ಅವರು ಈ ಎರಡನ್ನೂ ತಪ್ಪಿಸಿ, ಮೂರನೇ

ಶ್ರೀ ಜೆ ಸಿ ಮಾಧುಸ್ವಾಮಿ :– ಇಲ್ಲ, ನಾನು reject ಮಾಡಿ ಎಂದೇ ಕೇಳಿದ್ದೇನೆ ನಾನು demand ಅನ್ನು reject ಮಾಡಬೇಕೆಂದು ಹೇಳಿದ್ದೇನೆ I am very clear ಇನ್ನು ಇಂಧನ ಇಲಾಖೆ ಬಗ್ಗೆ ಹೇಳುವುದಾದರೆ; 1800 ಕೋಟಿ ರೂ ಗಳನ್ನು ವಿದ್ಯುತ್ ಸಹಾಯ ಧನ ಕೊಡುತ್ತಿದ್ದೇನೆ, 400 ಮೆಗಾವ್ಯಾಟ್ ಅನ್ನು ಹೆಚ್ಚು ಮಾಡುತ್ತಿದ್ದೇವೆ, ಅದರ ಜೊತೆಗೆ ನೌಕರರ ಪಿಂಚಣಿ ಮೊದಲಾದವಕ್ಕೆ 280 ಕೋಟಿ ರೂ ಗಳನ್ನು extra ಕೊಡುತ್ತಿದ್ದೇನೆ ಎಂದು ತಾವು ಹೇಳಿದ್ದೀರಿ Sir, ಏನಾಗಿದೆ ಎಂದರೆ, ಸನ್ಮಾನ್ಯ ರೇವಣ್ಣನವರು ಇಲ್ಲಿ ಮಂತ್ರಿಯಾಗುವುದಕ್ಕೆ ಮೊದಲು ಅವರ ತಂದೆಯುವರು 'ಕತ್ತಲಲ್ಲಿ ಕರ್ನಾಟಕ ಎಂಬ ಒಂದು ಪುಸ್ತಕ ಬರೆದಿದ್ದರು ಅದರಲ್ಲಿ ಅವರು ಗ್ರಾಮೀಣ ಕರ್ನಾಟಕ ಕತ್ತಲಲ್ಲಿ ಸೊರಗಿ ಹೋಗಿ ಬಿಟ್ಟಿದೆ ನಮ್ಮ ಮೊದಲನೇ ಆದ್ಯತೆ ಹಳ್ಳಿ ಭಾಗದ ಜನರಿಗೆ ವಿದ್ಯುತ್ ಕೊಡುವುದು ಎಂದಿದ್ದರು ಅದಕ್ಕೆ ಸನ್ಮಾನ್ಯ ಸಿದ್ಧರಾಮಯ್ಯನವರೂ ಪಾರ್ಟಿ ಇವತ್ತು ನಮ್ಮ ಸ್ಥಿತಿ ಏನಾಗಿದೆ? ಮೂರು ವರ್ಷ ನೀವು ಆಡಳಿತ ಮಾಡಿದ್ದೀರಿ ಬೇರೆಯುವರ ಸುದ್ದಿ ನನಗೆ ಗೊತ್ತಿಲ್ಲ ಮೂರು ವರ್ಷಗಳಾದ ಮೇಲೆ ನಾವು ಯಾರಾದರೂ ಹಳ್ಳಿಯಲ್ಲಿ, ಇವತ್ತಿನವರೆಗೂ 8 ಗಂಟೆಗಿಂತ ಜಾಸ್ತಿ IP sets ಓಡಿಸಲಿಕ್ಕೆ ಆಗಿಯೇ ಇಲ್ಲ ಇವತ್ತಿನವರೆಗೂ ನಮಗೆ power cut ಅನ್ನು ತೆಗೆದೇ ಇಲ್ಲ ಮಳೆ ಬಂದರೂ power cut, ಮಳೆ ಹೋದರೂ power cut 6-8 hours, entire rural karnataka is under power cut ನಿಮ್ಮ

ಹತ್ತಿರ ಹೇರಳವಾಗಿ ಹಣ ಇತ್ತು What should have been the priority? Finance Minister ಆಗಿದ್ದ ಮಾನ್ಯ ಸಿದ್ದರಾಮಯ್ಯನವರು ಹೇಳಬೇಕು ಮಾನ್ಯ ಯಡಿಯೂರಪ್ಪನವರೆ, ನಿಮಗೆ ಇದ್ದಿದ್ದು ಎರಡೇ priority ನಿಮ್ಮ generation ಅನ್ನು increase ಮಾಡಿಕೊಂಡು, ಏನಾದರೂ ಇವತ್ತು ನೀವು ಕೊಂಡುಕೊಂಡು ಬಂದಿರುವ power ಅನ್ನು substitute ಮಾಡಲಿಕ್ಕೆ ಆಗುತ್ತಿತ್ತೇ? ಎಂದು ನೋಡಬೇಕಾಗಿತ್ತು ಎರಡನೆಯದಾಗಿ, ಆದಷ್ಟೂ land ಅನ್ನು irrigate ಮಾಡಲಿಕ್ಕೆ ಆಗುತ್ತಿತ್ತೇ ಎಂದು ನೋಡಬೇಕಾಗಿತ್ತು ಈ ಎರಡರಲ್ಲಿ ಯಾವ ಕೆಲಸವನ್ನು ತಾವು ಮಾಡಿದ್ದೀರಿ? I am very sorry ಮಾನ್ಯ ಈಶ್ವರಪ್ಪನವರು ಮಂತ್ರಿಗಳಾದ ನಮಗೆ ಬಹಳ ಆಸೆ ಇತ್ತು ಬಿ ಜೆ ಪಿ ಯಲ್ಲಿ ಇದ್ದವರು, ಏನೋ ಬಹಳ ಮಾಡುತ್ತಾರೆಂಬ ಆಸೆ ಇತ್ತು ಇಬ್ಬರೂ ಗಳಸ್ಯ-ಕಂಠಸ್ಯ ಇಬ್ಬರೂ ನೀರಾವರಿಯಲ್ಲಿ ಆಸಕ್ತಿ ಇರುವವರು, ಹೆಚ್ಚು ದುಡ್ಡು ಕೊಡುತ್ತಾರೆ ಎಂದುಕೊಂಡಿದ್ದೆವು ಮಾನ್ಯ ಈಶ್ವರಪ್ಪನವರಿಗೆ ಹೋದ ವರ್ಷ ಸಿಕ್ಕಷ್ಟು ದುಡ್ಡೂ ಕೂಡ ಈ ವರ್ಷ ಸಿಗಲಿಲ್ಲ ಪಕ್ಕದ ರಾಜ್ಯವನ್ನು ನೋಡಿ 16 ಸಾವಿರ ಕೋಟಿ ರೂ ಗಳನ್ನು ಇವತ್ತು ಆಂಧ್ರಪ್ರದೇಶದವರು irrigationಗಾಗಿ ಇಟ್ಟಿದ್ದಾರೆ ಸ್ಪರ್ಧೆ ಏಕಾಗಿ ನೀವು ಮಾಡುತ್ತೀರಿ? ಅವರು ಅಷ್ಟೊಂದು ಹಣವನ್ನು ಏಕೆ ಇಟ್ಟರು? ಅವರಿಗೆ ಅಕಲ್ ಇಲ್ಲವೆನ್ನುತ್ತೀರಾ? ಶಕಲ್ ಕೊಡಲಿಕ್ಕೆ ಅವರಿಗೆ ಆಗುತ್ತಿರಲಿಲ್ಲವೇ? ಎಲ್ಲರಿಗೂ ತೆಗೆದುಕೊಳ್ಳಪ್ಪ ಎಂದು ಒಂದೊಂದು ಗುಲಾಬಿ ಹೂವು ಕೊಟ್ಟುಕೊಂಡು ಬರಲಿಕ್ಕೆ ಆಗುತ್ತಿರಲಿಲ್ಲವೇ? ಅಥವಾ ಎಲ್ಲರಿಗೂ ಒಂದೊಂದು ಕಂಬಳಿ ಕೊಟ್ಟುಕೊಂಡು ಬರಲಿಕ್ಕೆ ಆಗಿತ್ತಿರಲಿಲ್ಲವೇ? 16 ಸಾವಿರ ಕೋಟಿ ರೂ ಗಳನ್ನು ಅವರು ಏಕೆ ಇಟ್ಟರು? They have future ರಾಜ್ಯ ಮುಂದಕ್ಕೆ ಹೋಗಬೇಕಾಗಿದೆ, ಬದುಕಬೇಕಾಗಿದೆ core subject ಇರುವುದು ಅಲ್ಲಿ, ಜನ ಬದುಕಿರುವುದು ಹಳ್ಳಿಯಲ್ಲಿ ಅದಕ್ಕಾಗಿ ಅವರು ಅಷ್ಟು ಹಣ ಇಟ್ಟರು ಹಳ್ಳಿಗಳಲ್ಲಿ 75–78% ಇದ್ದ ಜನ ಇವತ್ತು 65%ಗೆ ಇಳಿದಿದ್ದಾರೆ Aerobic land ಕಡಿಮೆ ಆಗುತ್ತಿದೆ, ಇರುವ land ಇವತ್ತು exhaust ಆಗಿದೆ, fertilizers, chemicals use ಮಾಡಿ ಇಲ್ಲಿಂದ ಮುಂದಕ್ಕೆ production ಮುಂದಕ್ಕೆ ಜಾಸ್ತಿ ಮಾಡಲಿಕ್ಕೆ ಅವಕಾಶವಿಲ್ಲ, ಆಗಿವುದಿಲ್ಲ, production ಜಾಸ್ತಿ ಮಾಡದೇ ಇದ್ದರೆ produce ಆಗುತ್ತಿರುವುದು ಜನಸಂಖ್ಯೆಗೆ match ಆಗುವುದಿಲ್ಲವೆಂದು ಅವರು ಯೋಚನೆ ಮಾಡಿದರು ತಾವು ಇದನ್ನು ತಲೆಗೆ ತೆಗೆದುಕೊಳ್ಳಬೇಕಾಗಿತ್ತು ಇರುವ ಜಾಗವನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ ನೀವು ಈಗಾಗಲೇ 33% forest ಇಟ್ಟುಕೊಳ್ಳಬೇಕಾಗಿದ್ದವರು, 16–17%ಗೆ ಇಳಿದಿದ್ದೀರಿ ಇರುವ ಜಾಗದಲ್ಲಿ

fertilizer and chemicals ಹಾಕಿ ಬಿಟ್ಟು entire fertility ಅನ್ನು ತಿಂದು ಹಾಕಿ ಬಿಟ್ಟಿದ್ದೀರಿ ಅಲ್ಲಿಂದ ತಂದು ಹಾಕಿದರೆ ಬಿಡುತ್ತದೆ, ಇಲ್ಲವೇ ಇಲ್ಲ subsidy ತೆಗೆದ ಮೇಲೆ ಮಾನ್ಯ ಸಿದ್ದರಾಮಯ್ಯನವರೆ, DAP rate ಕೇಳಿದ್ದೀರಾ? ಭಾರಿ ರೈತರ ಪರವಾದ leadersಗಳು ಬಂದರು ಏನು ಸಾರ್, ಇವತ್ತು DAP price? ಬೀಜದ್ದು ಇವತ್ತು ಇಲ್ಲಿ ಚರ್ಚೆಯಾಗಿದ್ದು ಬಿಟ್ಟರೆ, ಗೊಬ್ಬರದ ಚರ್ಚೆ ಶ್ರೀನಿವಾಸಗೌಡರು ಮಾಡುವುದಿಲ್ಲ

ಶ್ರೀ ಕೆ ಶ್ರೀನಿವಾಸಗೌಡ – ನಾನು ಇನ್ನೂ ಎರಡು ಗಂಟೆಗಳ ಕಾಲ ಕೇಳಿದ್ದೆ, ನಿನ್ನೆ ಮಾನ್ಯ ಉಪಾಧ್ಯಕ್ಷರು ಇದ್ದರು ನೀವೇ ಮೂರೂ ಕಾಲು ಗಂಟೆ ಮಾತನಾಡಿದಿರಿ ಎಂದರು ನನಗೆ ಗೊಬ್ಬರದ ಬಗ್ಗೆ ಇವರಿಗಂತ ಜಾಸ್ತಿ ಗೊತ್ತು ನಾನು ಅನೇಕ ಗೊಬ್ಬರ ಕಂಪನಿಗಳಲ್ಲಿ ಕೆಲಸ ಮಾಡಿದ್ದೇನೆ ಮಾಡುತ್ತಲೂ ಇದ್ದೇನೆ ನಾನೇನೂ ಮಾಧುಸ್ವಾಮಿಯವರಿಂದ ಹೇಳಿಸಿಕೊಳ್ಳಬೇಕಾಗಿಲ್ಲ ಗೊಬ್ಬರದ ಪರಿಸ್ಥಿತಿ ಏನಿದೆ ಎಂಬುದನ್ನು

ಶ್ರೀ ಜೆ ಸಿ. ಮಾಧುಸ್ವಾಮಿ .– ಮಾನ್ಯ ಶ್ರೀನಿವಾಸಗೌಡರೆ, ನಾನು ಯೀಲ್ಡ್ ಆಗಿಲ್ಲ ದಯಮಾಡಿ ನಾನು ಪೂರ್ತಿ ಮಾತನಾಡುವುದನ್ನು ಕೇಳಿ ಮಾನ್ಯ ಶ್ರೀನಿವಾಸಗೌಡರು ಬೆಳಕು ಚೆಲ್ಲಬೇಕಾಗಿತ್ತು He is working in those Corporations and Federations ಎಂದು ಹೇಳುತ್ತಿದ್ದೆ ಆ ಮಾತನ್ನೇ ನೀವು mistake ಮಾಡಿಕೊಂಡರೆ ಹೇಗೆ? You are in the field, you should have told ಎಂದಷ್ಟೇ? ನಾನು ಹೇಳುತ್ತಿದ್ದೇನೆ ಸಾರ್, ನಾನು ಇವತ್ತು KPTCL ಬಗ್ಗೆ ಮಾತನಾಡಬೇಕಾಗಿದೆ ನಾವು ಬಹಳ ಆಸೆ ಇಟ್ಟುಕೊಂಡಿದ್ದೇವೆ ನಾವು ಬಹಳ ಮಾತನಾಡುತ್ತಿದ್ದೆವು, ಮಾನ್ಯ ರೇವಣ್ಣನವರು ಏನು ಮಾಡದಿದ್ದರೂ KPTCLನಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ಏಕೆಂದರೆ, ಶುರುವಿನಲ್ಲಿ ನಮ್ಮನ್ನೆಲ್ಲಾ ಸಭೆಗಳಿಗೆ ಕರೆಯುತ್ತಿದ್ದರು, ನಮ್ಮನ್ನೆಲ್ಲಾ ಏನಾಗಬೇಕು ಹೇಳಿ ಎನ್ನುತ್ತಿದ್ದರು ಆದಾಗಬೇಕು, ಇದಾಗಬೇಕು ಎಂದು ನಾವೂ ಹೇಳುತ್ತಿದ್ದೆವು ಮಾನ್ಯ ರೇವಣ್ಣನವರು, ಮಾಜಿ ಪ್ರಧಾನಿಗಳ ಮಕ್ಕಳು ಅವರು ಹೇಳಿದ್ದೆಲ್ಲಾ ಆಗಿಯೇ ಹೋಗಿ ಬಿಡುತ್ತದೆಂದು ನಾವೆಲ್ಲಾ ತಿಳಿದುಕೊಂಡಿದ್ದೆವು ಮಾನ್ಯ ರೇವಣ್ಣನವರೆ, ನಮ್ಮ ಸಮಸ್ಯೆಗಳೆಲ್ಲಾ ಬಗೆಹರಿದು ಹೋಗಿಬಿಟ್ಟವು ಎಂಬ ಭಾವನೆಯಲ್ಲಿ ನಾವೆಲ್ಲಾ ಬಹಳ ಖುಷಿಯಾಗಿದ್ದೆವು 1–1 1/2 ವರ್ಷಗಳ ಕಾಲ, ಮಾನ್ಯ ರೇವಣ್ಣನವರು ಇದ್ದಾರೆ, ನಮಗೇನೂ ತೊಂದರೆಯಿಲ್ಲ ಎಂದುಕೊಂಡಿದ್ದೆವು ಆದರೆ ಅವರಿಗೆ ರಾಜ್ಯ ಎಂದರೆ ಹೊಳೆನರಸೀಪುರ ಆಗಿ ಹೋಯಿತು, ರಾಷ್ಟ್ರ ಎಂದರೆ ಹಾಸನ ಆಗಿ ಹೋಯಿತು ನಾವೂ ಈ ರಾಜ್ಯದಲ್ಲೇ ಇದ್ದೇವೆ

ಶ್ರೀ ಹೆಚ್ ಡಿ ರೇವಣ್ಣ :– ಸ್ವಲ್ಪ ಯೀಲ್ಡ್ ಆಗಿ ನಾನು ಹೇಳುತ್ತೇನೆ ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರಷ್ಟು ನಾನು ನುರಿತವನಲ್ಲ ಅವರಷ್ಟು ಚಾಣುಕ್ಯತನದಿಂದ ನನಗೆ ಮಾತನಾಡಲಿಕ್ಕೆ ಬರುವುದಿಲ್ಲ ಅವರು ನಾವು ಕೇವಲ ಹೊಳೆನರಸೀಮರ, ಹಾಸನ, ರಾಮನಗರಕ್ಕೆ ಆದ್ಯತೆ ಕೊಟ್ಟಿದ್ದೇವೆಂದರು ಅದಕ್ಕೆ ನಮ್ಮ ಹಿರಿಯ ಕಾಂಗ್ರೆಸ್ ಸದಸ್ಯರು ಬೆನ್ನು ತಟ್ಟುತ್ತಿದ್ದಾರೆ ನಾನು ಉತ್ತರ ಕೊಡದೇ ಕದ್ದು ಓಡಿ ಹೋಗುವುದಿಲ್ಲ KPTCLನಲ್ಲಿ ಏನೇನು ನಡೆದಿದೆ?

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ರೇವಣ್ಣನವರೆ,

ಶ್ರೀ ಹೆಚ್ ಡಿ ರೇವಣ್ಣ – ಒಂದು ನಿಮಿಷ ನಾನು ಹೇಳುತ್ತೇನೆ ಏಕಂದರೆ, ಪತ್ರಕಾ ಸ್ನೇಹಿತರು, electronic media ದವರು ಇದ್ದಾರೆ ಎನ್ನುವ ದೃಷ್ಟಿಯಿಂದ ಮಾನ್ಯ ಮಾಧುಸ್ವಾಮಿಯವರು ಮಾತನಾಡುವುದು ಬೇಡ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ .– ನಾನು ನಿಮ್ಮ ಮೇಲೆ ಪ್ರಿವಿಲೇಜ್ ಮೂವ್ ಮಾಡುತ್ತಿದ್ದೇನೆ I am moving privilege

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು ಅವರು ರಿಪ್ಲೈ ಮಾಡಲಿ, ನಾವು ಕುಳಿತುಕೊಂಡು ಕೇಳುತ್ತೇವೆ, ನೀವು ಏನು ಮಾತನಾಡುತ್ತೀರೋ ಮಾಡನಾಡಿ ತಮಗೆ ರಿಪ್ಲೈ ಮಾಡಲು ಅವಕಾಶವಿದೆ

ಶ್ರೀ ಸಿದ್ಧರಾಮಯ್ಯ – ಅವರು ಬೇಡಿಕೆಗಳ ಮೇಲೆ ಮಾತನಾಡುತ್ತಿದ್ದಾರೆ He has got every right to speak ನಿಮಗೆ ಉತ್ತರ ಕೊಡಲು ಅವಕಾಶವಿದೆ, ಆವಾಗ ರಿಪ್ಲೈ ಕೊಡಿ (ಗೊಂದಲ)

ಶ್ರೀ ಬಿ ಶಿವರಾಂ – ಅಧ್ಯಕ್ಷರೆ, ಒಬ್ಬ ಸದಸ್ಯರ ಮೇಲೆ ಈ ರೀತಿಯ ಆರೋಪ ಮಾಡುವುದು ಸರಿಯಲ್ಲ (ಗೊಂದಲ)

ಅಧ್ಯಕ್ಷರು – ಸುಮ್ಮನೆ ಎಲ್ಲರು ನಿಂತುಕೊಳ್ಳುತ್ತೀರಿ, ಅವರು ಕೂಗುತ್ತಾರೆ, ಇವರು ಕೂಗುತ್ತಾರೆ ವಸ್ತುಸ್ಥಿತಿ ಯಾರಿಗೂ ಅರ್ಥವಾಗುವುದಿಲ್ಲ, ಆದುದರಿಂದ ಒಬ್ಬರು ಮಾಡನಾಡಿ, ಅವರು ಉತ್ತರ ಕೊಟ್ಟ ಮೇಲೆ ನೀವು ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ – ಸರ್, ನಾನು ಈಗ ಮಂತ್ರಿಗಳ ಮೇಲೆ ಪ್ರಿವಿಲೇಜ್ demand ಮಾಡುತ್ತಿದ್ದೇನೆ, I am demanding privilege

ಪ್ರಿವಿಲೇಜ್ ಮೂವ್ ಮಾಡುವುದಕ್ಕೆ ತಾವು ನನಗೆ ಅವಕಾಶ ಕೊಡಬೇಕು

ಅಧ್ಯಕ್ಷರು · ಅವರು (ಮಂತ್ರಿಗಳು) ಏನು ಹೇಳುತ್ತಾರೆ ನೋಡೋಣ ತಾವು ಕುಳಿತುಕೊಳ್ಳುವುದು

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಅವರ ಮೇಲೆ ಪ್ರಿವಿಲೇಜ್ ಮೂವ್ ಮಾಡುತ್ತಿದ್ದೇನೆ, ನಾನೇಕೆ ಕುಳಿತುಕೊಳ್ಳಬೇಕು?

ಶ್ರೀ ಸಿದ್ಧರಾಮಯ್ಯ – ಅವರು ಬೇಡಿಕೆ ಮೇಲೆ ಮಾತನಾಡುತ್ತಿದ್ದಾರೆ, ನೀವು ಕೇಳಿ ಬರೆದುಕೊಳ್ಳಿ, ಆಮೇಲೆ ಉತ್ತರ ಕೊಡಿ, ಮಧ್ಯದಲ್ಲಿ ಎಲ್ಲದಕ್ಕೂ ಉತ್ತರ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಹೆಚ್ ಡಿ ರೇವಣ್ಣ – ನಮ್ಮ ಇಲಾಖೆಗೆ ಸಂಬಂಧಿಸಿದಂತೆ ಏನು ಬೇಕಾದರೂ ಚರ್ಚೆ ಮಾಡಲಿ, ಆದರೆ ಕ್ಷೇತ್ರವಾರು ಬಂದಾಗ ಚರ್ಚೆ ಮಾಡಿ, ಕ್ಷೇತ್ರವಾರು ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ, ಯಾವ್ಯಾವ ಕಾಲದಲ್ಲಿ ಯಾವ್ಯಾವ ಕ್ಷೇತ್ರದಲ್ಲಿ ಏನಾಗಿದೆ ಎಂಬ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ

ಶ್ರೀ ಬಿ ಶಿವರಾಂ – ಕ್ಷೇತ್ರವಾರು ಏನಾಗಿದೆ ಎಂದು ಶ್ವೇತಪತ್ರ ಬಿಡುಗಡೆ ಮಾಡಿ, ನಾಕು ಅದರಲ್ಲೇ ಗೊತ್ತಾಗುತ್ತದಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಈ ಬೇಡಿಕೆಗಳನ್ನು ಎರಡು ದಿವಸ ಮುಂದಕ್ಕೆ ಹಾಕೋಣ, ಅವರು ಕ್ಷೇತ್ರವಾರು ಪಟ್ಟಿಯನ್ನು ಇಲ್ಲಿ ಮಂಡಿಸಲಿ, ನಾನು ಈಗ ಕುಳಿತುಕೊಳ್ಳುತ್ತೇನೆ PWD ಇಲಾಖೆಯಲ್ಲಿ KPTCLನಲ್ಲಿ ಅದರ ಕೆಳಗಿರುವ electric companiesನಲ್ಲಿ ಕ್ಷೇತ್ರವಾರು ಆಗಿರುವ ಕೆಲಸಗಳ ಶ್ವೇತವತ್ರವನ್ನು ಇಲ್ಲಿ ನಾವು ಡಿಮ್ಯಾಂಡ್ ಮಾಡುತ್ತಿದ್ದೇವೆ, ನಮಗೆ ಈಗ ಮಾಹಿತಿ ಸಿಕ್ಕಿಲ್ಲ, ತಾವು 3 ವರ್ಷದಿಂದ ಮಂತ್ರಿಗಳಾದಾಗಿನಿಂದ ಇಲ್ಲಿಯವರೆಗೆ ಏನೇನು ಕ್ಷೇತ್ರವಾರು ಮಾಡಿದ್ದೀರೆಂಬುದನ್ನು ಮಂಡಿಸಿ, ಕ್ಷೇತ್ರವಾರು ಕೆಲಸಗಳಾಗಿದ್ದರೆ, ನಾವು ತಮ್ಮನ್ನು ತಲೆಯ ಮೇಲೆ ಹೊತ್ತುಕೊಂಡು ಕರ್ನಾಟಕ ತುಂಬಾ, ಇಂಥವರು ನಮಗೆ ಸಿಗುವುದಿಲ್ಲ, ನೋಡಪ್ಪ ಕರ್ನಾಟಕ ಸ್ವರ್ಗವಾಗಿದೆ ಎಂದು ಓಡಾಡುತ್ತೇವೆ, ಇಲ್ಲವೆಂದರೆ ನೀವು ಏನು ಮಾಡಿಕೊಳ್ಳಬೇಕೋ ಮಾಡಿಕೊಳ್ಳಿ KPTCL ನಲ್ಲಿ ಆರಂಭದಲ್ಲಿ ಮಂತ್ರಿಗಳು ಒಳ್ಳೆಯ ಕೆಲಸ ಮಾಡಿದರೆಂದು ನಾನು ಆರಂಭದಲ್ಲೇ ಹೇಳಿದೆ ಸರ್ಕಾರದಿಂದ ಬಿಟ್ಟು ಹೋಗಿ ಒಳಗೆ ಬಂದ ಮೇಲೆ ಏಕೋ ಸಾರ್ವಭೌಮವಿದೆ ಎಂದು ತಿಳಿದುಕೊಂಡರೇನೋ ನನಗೆ ಗೊತ್ತಿಲ್ಲ Number of transformers ತೆಗೆದುಕೊಂಡಿರುವುದನ್ನು ನೋಡಿಬಿಟ್ಟರೆ ದಿಗಿಲಾಗುತ್ತದೆ ಆದರೆ, ಅಷ್ಟೊಂದು ಉತ್ಪಾದನೆ ಮಾಡಬೇಕಾದ ಸಂಸ್ಥೆಗಳಿಗೆ ಏಕೆ work

order ಹೋಗಲಿಲ್ಲ ಗೊತ್ತಾಗಲಿಲ್ಲ ಉತ್ಪಾದನೆಗೆ ಇಲ್ಲಿಂದ ಆರ್ಡರೇ ಹೋಗುತ್ತಿಲ್ಲ ಎರಡನೆಯದು, ಡೆವಲಪ್‌ಮೆಂಟ್, ನಾನು ಕೇಳುತ್ತೇನೆ, ನಾವೆಲ್ಲಾ ಭಾರಿ ಪ್ರತಿಭಟನೆಯನ್ನು ಮಾಡಿ ರೈತರ ಐಪಿ ಸೆಂಟ್‌ಗಳಿಗೆ ಜಾಸ್ತಿ ಚಾರ್ಜ್ ಮಾಡಬಾರದು, ಫ್ರೀಯಾಗಿರಬೇಕು, ಇರಿಗೇಷನ್‌ಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೀರಾ, ಅದೊಂದಾದರೂ input activity ನಮಗೆ ಕೊಡಿ, ನಾವು ನಮ್ಮದೇ ಆದ ದುಡ್ಡಿನಲ್ಲಿ ಬೋರ್ ಕೊರೆದುಕೊಂಡು, ನಮ್ಮದೇ ದುಡ್ಡಿನಲ್ಲಿ ಮೋಟಾರ್ ಬಿಟ್ಟುಕೊಂಡು, ನೀರು ಎತ್ತಿ ಹಾಕಿಕೊಳ್ಳುತ್ತೇವೆಂದರೆ ಒಂದಿಷ್ಟು ರಿಯಾಯಿತಿ ಕೊಡರಪ್ಪ ನಿಮ್ಮ ದಮ್ಮಯ್ಯ ಎಂದು ನಾವು ಕೇಳಿದ್ದೇವಷ್ಟೆ ಯಡಿಯೂರಪ್ಪನವರೆ, ನಾವು ಈ ದೇಶದ, ರಾಜ್ಯದ ಪ್ರಜೆಗಳು, ನಮ್ಮ ತೆರಿಗೆಯಲ್ಲಿ ಡ್ಯಾಂ ಕಟ್ಟಿದ್ದೀರಿ, ನಮ್ಮ ತೆರಿಗೆಯಲ್ಲಿ ಬೇರೆ ಕಡೆ irrigation potential create ಮಾಡಿದ್ದೀರಿ, ನಾವು ನಮ್ಮದೇ ಬಂಡವಾಳದಲ್ಲಿ ಬೋರ್ ಕೊರೆದುಕೊಳ್ಳುತ್ತಿದ್ದೇವೆ, ನಮ್ಮದೇ ಬಂಡವಾಳದಲ್ಲಿ ಮೋಟಾರ್ ಬಿಟ್ಟುಕೊಳ್ಳುತ್ತಿದ್ದೇವೆ, ಸ್ವಲ್ಪ ವಿದ್ಯುತ್ ಕೊಡಿರಪ್ಪ ಏನಾದರೂ ಸ್ವಲ್ಪ ಹೊಲ, ತೋಟ, ಮನೆಗೆ ಸ್ವಲ್ಪ ನೀರು ನೋಡಿಕೊಳ್ಳುತ್ತೇವೆಂದು ನಾವು ಕೇಳಿದ್ದೇವೆ ಸರ್, ಸರ್ಕಾರಗಳು ಹೇಗೆ ನಡೆದುಕೊಂಡವು? ಒಂದು ಸಲ ನಾನು unauthorized ಅನ್ನು regularize ಮಾಡಬೇಕಾದರೆ 25,000 penalty plus deposit ಕೊಟ್ಟರೆ ಮಾಡುತ್ತೇವೆ ಎಂದು ಹೇಳಿದಿರಿ, ಹೌದಾ? ಮತ್ತೆ ಬಂದು, Rs 10,000 with deposit ಕಟ್ಟಿ ಎಲ್ಲಾ regularize ಮಾಡುತ್ತೇವೆಂದರು ಆ ಮೇಲೆ ಕೆಲವು ತಾಲ್ಲೂಕುಗಳಿಗೆ ವೈಟಿದೆ ಎಂದು, ಇಲ್ಲ deposit ಕಟ್ಟಿ ಸಕ್ರಮ ಮಾಡಿಕೊಳ್ಳಿ ಎಂದಿರಿ, ನಾವು ಇವರು ಯಾವ ಹಿತಾಸಕ್ತಿಯಲ್ಲಿ ಮಾತನಾಡಿದರೆಂದು ತಿಳಿದುಕೊಳ್ಳಬೇಕು ಸರ್ ? ಬೋರ್ಡಿನ ಹಿತಾಶಕ್ತಿಯಲ್ಲಿ ಮಾತನಾಡಿದರೆಂದು ನಾವು ತಿಳಿದುಕೊಳ್ಳಬೇಕು ಕಳೆದ ಎರಡು ತಿಂಗಳ ಹಿಂದೆ ಮಾರ್ಚ್ 30ಕ್ಕೆ ಒಂದೇ ಒಂದು ರೂಪಾಯಿ deposit ಇಲ್ಲದೆ ಸಕ್ರಮಗೊಳಿಸಿದವರಲ್ಲ, ಇದು ಯಾವ ಸರ್ಕಾರದ ಪಾಲಿಸಿ? ನಾಳೆ ಯಾರಾದರೂ ನಿಮಗೆ ದುಡ್ಡನ್ನು ಕಟ್ಟುತ್ತಾರಾ? ಯುಡಿಯೂರಪ್ಪನವರೆ, ನಿಮಗೆ ಗೊತ್ತಾ? Without even the deposit for installation, power supply deposit ಇಲ್ಲದಂತೆ ಈಗ ಆಗಿ ಹೋಗಿಬಿಟ್ಟಿದೆ, 6000 ರೂಪಾಯಿ ಆಗುತ್ತದೆ, ಡೆಪಾಸಿಟ್ ಕೊಡುತ್ತೇವೆ, ಜವಾಬ್ದಾರಿ ಇರಲಿ, ಒಂದು ಐಪಿ ಸೆಟ್‌ಗೆ ಅಷ್ಟು ತೆಗೆದುಕೊಳ್ಳಿ ಪೆನಾಲ್ಟಿ ವೇವ್ ಮಾಡಿ ಕಟ್ಟುತ್ತೇವೆಂದು ನಾವು ಬೇಡಿದಾಗ ಅದು ಆಗಲಿಲ್ಲ 10,000 ಆದರೂ ಕಟ್ಟಬೇಕೆಂದಾಯಿತು, ಅವತ್ತು ಸಿದ್ಧರಾಮಯ್ಯನವರಿಗೆ ಬೇಡಿದೆವು ಇವತ್ತು ನಿಮಗೆ ಗೊತ್ತಾ? ಈ ಮಾರ್ಚ್ 31ಗೆ taking nothing for consideration ಅರ್ಜಿ ಮೇಲೆ ಎಲ್ಲರದು

confirm ಆಗಿದೆ

ಶ್ರೀ ಬಿ ಶಿವರಾಂ . ಎಲ್ಲಾ ಕಡೆ ಆಗಿದೆಯಾ?

ಶ್ರೀ ಜೆ ಸಿ ಮಾಧುಸ್ವಾಮಿ ನಮ್ಮಲ್ಲೆಲ್ಲಾ ಆಗಿದೆ, ನಿಮ್ಮದು ಗೊತ್ತಿಲ್ಲ, it is a policy of BESCOM

ಶ್ರೀ ಬಿ ಶಿವರಾಂ ಸಚಿವರು ಇಲ್ಲೆ ಇದ್ದಾರೆ, ಈ ಬಗ್ಗೆ ಹೇಳಬೇಕು

ಶ್ರಿ ಹೆಚ್ ಟಿ ಕೃಷ್ಣಪ್ಪ We have to appreciate the Government

ಶ್ರಿ ಜೆ ಸಿ ಮಾಧುಸ್ವಾಮಿ ಐಪಿ ಸೆಟ್ ಆನ್ ಆಧ ರೈಸ್ಡ್ ರೆಗ್ಯುಲರೈಸೇಷನ್ ಬರೀ ಒಂದು ಅರ್ಜಿ ಮೇಲೆ ಎಲ್ಲಾ ಕಡೆ ಆಗಿದೆ

ಶ್ರೀ ಹಂಪನಗೌಡ ಬಾದರ್ಲಿ ಮಾಧುಸ್ವಾಮಿಯವರೆ, ಎಲ್ಲಾ ಕಡೆ ಆಗಿಲ್ಲ

ಶ್ರೀ ಹೆಚ್ ಟಿ ಕೃಷ್ಣಪ್ಪ ಮಾಧುಸ್ವಾಮಿಯವರೆ, we have to appreciate the Government ಅಲ್ಲವೆ? You have to appreciate the Government ಸಿದ್ಧರಾಮಣ್ಣನವರೆ ಇದು ಖುಷಿಪಡುವ ವಿಚಾರವಲ್ಲವಾ?

ಶ್ರೀ ಬಿ. ಶಿವರಾಂ ಚಾಮುಂಡೇಶ್ವರಿ ಡಿವಿಷನ್‌ನಲ್ಲಿ ಆಗಿಲ್ಲ, ಇಲ್ಲಿ ಮಾತ್ರ ಅರ್ಜಿ ತೆಗದುಕೊಂಡು, ಪ್ರತಿ ತಿಂಗಳು ಕಂತಿನ ವಸೂಲಿಗೆ ಮಾಡಿಕೊಂಡಿದ್ದಾರೆಂದು ಮೀಟಿಂಗ್‌ನಲ್ಲಿ ನಮಗೆ ತಿಳಿದ ಮಾಹಿತಿ ಇದು ಆದರೆ ಬೇರೆ ಡಿವಿಷನ್‌ನಲ್ಲಿ ಈ ತರಹ ಆಗಲಿ ಎಂಬುದನ್ನು ನಮ್ಮ ಆಸೆ

ಶ್ರೀ ಜೆ ಸಿ ಮಾಧುಸ್ವಾಮಿ . ಬೆಸ್ಕಾಂನಲ್ಲಿ ಆಗಿಬಿಟ್ಟಿದೆ ಸಂತೋಷ, ರಾಜ್ಯದಲ್ಲಿರುವ ರೈತರಿಗೆಲ್ಲಾ ವಿಸ್ತರಿಸಿ, ಈಗಾಗಲೆ ಯಾರ್‍ಯಾರು ಡೆಪಾಸಿಟ್ ಕೊಟ್ಟಿದ್ದೇವೆ, ದಯವಿಟ್ಟು ಅದನ್ನು ಹಿಂದಕ್ಕೆ ಕೊಡಿ ಸರ್ ತಾವು ನಮ್ಮ ಹತ್ತಿರ ಡೆಪಾಸಿಟ್ ಕೊಟ್ಟು ತಾನೇ ಪವರ್ ಕೊಟ್ಟಿದ್ದಿರಿ, ಈಗ ನೀವು ಏನೂ ಇಲ್ಲದೇ ಕೊಡುತ್ತಿದ್ದೀರಿ ಕನಿಷ್ಟ ಡೆಪಾಸಿಟ್ ತೆಗೆದುಕೊಳ್ಳಿ ಎಂದು ನಾವೇ ರಾಜಿ ಮಾಡಿ, ಹೋರಾಟ ಮಾಡಿಕೊಂಡು ಬಂದು, ಡೆಪಾಸಿಟ್ ಕೊಡುತ್ತೇವೆಂದರೆ, ಆಗುವುದಿಲ್ಲ 10,000 ರೂಪಾಯಿ ದಂಡ ಕಟ್ಟಿ ಎಂದು ಏಕಾ ಏಕಿ ನೀವು ನಿರ್ಧಾರವನ್ನು ತೆಗೆದುಕೊಂಡಿರಿ, ಇಲ್ಲ, ಇಲ್ಲ, ಅರ್ಜಿ ತೆಗೆದುಕೊಳ್ಳಿ ಎಂದು ನಮ್ಮ ಹತ್ತಿರ ಜನರು ಬಂದು ಕೇಳಿದರು ಸರ್ ಏನ್ ಸರ್, ಹೋದ ತಿಂಗಳೆಲ್ಲಾ ಕುಳಿತುಕೊಂಡು ಡೆಪಾಸಿಟ್ ಆದರೂ ಕಟ್ಟಿರೆಂದು ಹೇಳಿದಿರಿ, ಈಗ ಏನು ಇಲ್ಲದೇ ತೆಗೆದುಕೊಳ್ಳುತ್ತಿದ್ದಾರೆ, ಇದೇನಿದು ನಿಮಗೇನಾದರೂ ಗೊತ್ತಾ ಎಂದು ಕೇಳುತ್ತಿದ್ದಾರೆ

ಖಂಡಿತಾ ಗೊತ್ತಿಲ್ಲ, ನಮಗೇನು ಗೊತ್ತಿಲ್ಲವೆಂದು ನಾವು ಹೇಳಿದೆವು ಮುಂದೆ ಆ supplier ಗತಿಯೇನು? ಅವನು ಹೇಗೆ ಕರೆಂಟ್ ಎಳೆದುಕೊಂಡಿದ್ದಾನೆಂದು ನಿಮಗೆ ಗೊತ್ತಾ? Unauthorized ಹೇಗಾಗಿದೆ ನಿಮಗೆ ಗೊತ್ತಾ? ಅದನ್ನು ಸರಿಪಡಿಸಲು ನಿಮ್ಮ ಹತ್ತಿರವಿರುವ ಕಾರ್ಯಕ್ರಮವೇನು? ಅಲ್ಲಿ ಆಗುವ ಪವರ್ ಲಾಸ್‌ಗೆ, ವಿತರಣೆ ಲಾಸ್‌ಗೆ ನಿಮ್ಮ ಕಾರ್ಯಕ್ರಮವೇನು? ಅವನೇ ಸ್ವತಃ transformer ಹಾಕಿಕೊಳ್ಳುತ್ತೇನೆ ದುಡ್ಡು ಕಟ್ಟುತ್ತೇನೆಂದು ಹೇಳಿದವನಿಗೆ ಇಲ್ಲಿಯವರೆಗೆ ಕೊಟ್ಟಿಲ್ಲ ತಾವು ಹಿಂದಿನ ದಿನಾಂಕದಲ್ಲಿ ದಂಡ ಕಟ್ಟಿ un authorized connection ಅನ್ನು regularisation ಕೇಳಿರುವವನಿಗೆ ಇನ್ನು ಮೆಟೀರಿಯಲ್ ಕೊಟ್ಟಿಲ್ಲ, ತಾವು ಡೆಪಾಸಿಟ್ ತೆಗೆದುಕೊಂಡು ಇದುವರೆಗೆ ಮೆಟೀರಿಯಲ್ ಕೊಟ್ಟಿಲ್ಲ, ಈಗ ತಾವು ಏನೂ ಇಲ್ಲದೇ RR number ಅನ್ನು ಕೊಟ್ಟಿದ್ದಿರಿ

ಇದನ್ನು ಹೇಗೆ ರೆಕ್ಟಿಫೈ ಮಾಡುತ್ತೀರಿ? ಈಗ ಅಲ್ಲಿನ TC ಮೇಲೆ ನಾವು ಎಲ್ಲಾ ಓವರ್ ಲೋಡ್ ಆಗಿದೆ ಎಂದು ಹೇಳುತ್ತೇವೆ ನಿಮ್ಮ ಇಂಜನಿಯರ್ ಲೋಡ್ ಇಲ್ಲವೆಂದು ಹೇಳುತ್ತಾರೆ ಯಾರು ಉತ್ತರ ಹೇಳುವವರು? ನಾವು ಇನ್ನು ಏನಾದರೂ ಕೇಳುವುದಕ್ಕೆ ಹೋದರೆ ಪ್ಯಾಕೇಜ್‌ವಲ್ಲಿ ಸೇರಿದೆ ಎಂದು ಹೇಳುತ್ತೀರಿ KEBಯನ್ನು ನೀವು ಯಾವ ಬುನಾದಿ ಮೇಲೆ ನಡೆಸುತ್ತಿದ್ದೀರಿ? What is your goal? KEBಯಲ್ಲಿ ನಿಮ್ಮ ಪಾಲಿಸಿ ಏನು? ಎಲ್ಲಿಗೆ ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೀರಿ? ರೈತರಿಗೆ ಫ್ರೀ ಪವರ್ ಕೊಡಬೇಕೆಂದು ಮಾಡಿದ್ದೀರಾ? ಇಲ್ಲಿ ಒಂದು ಚರ್ಚೆಯಾಯಿತು ಒಂದು ಲಕ್ಷ ರೂಪಾಯಿ ಮೇಲೆ ನಾನು ಯಾವುದೇ IP ಸೆಟ್‌ಗೆ ಕರೆಂಟ್ ಕೊಡುವುದಕ್ಕಾಗುವುದಿಲ್ಲವೆಂದು ಮಾನ್ಯ ರೇವಣ್ಣನವರು ಇಲ್ಲಿ ಹೇಳಿದರು, ಚೆನ್ನಾಗಿ ಇರುವವರು, ಸ್ವಲ್ಪ ಹಾಕಿಸಿಕೊಳ್ಳುವವರು ಎಲ್ಲ ಲೈನ್ ಎಳೆದು ಹಾಕಿಸಿಕೊಂಡಿದ್ದೇವೆ ಈಗ ಕೇಳುತ್ತಿರುವವರು ಯಾರು? ಪಾಪ, ಬಗರ್ ಹುಕುಂನಲ್ಲಿ ಜಮೀನು ತೆಗೆದುಕೊಂಡಿರುವವರೋ, ಗಂಗಾ ಕಲ್ಯಾಣ ಸ್ಕೀಮ್‌ನಲ್ಲೋ, Social welfare ಇಲಾಖೆಯ ಕೆಳಗೆ OBCನಲ್ಲೋ, Minorityನಲ್ಲೋ , power supply ತೆಗೆದುಕೊಳ್ಳುವವರನ್ನು ಕೇಳುತ್ತಿದ್ದೇವೆ ಎಂತಹ ದುರ್ಭಿಕ್ಷೆಯ ಕಾಲದಲ್ಲಿಯೂ ಕರ್ನಾಟಕದಲ್ಲಿ IP ಸೆಟ್ ಮೆಟೀರಿಯಲ್‌ಇಳಿಗೆ restrictions ಮಾಡಿಲ್ಲ 60,65,70 ಸಾವಿರ ಟಾರ್ಗೆಟ್ ಇಟ್ಟುಕೊಂಡು ಈ ರಾಜ್ಯ 1800, 2,000, 2,500 ಕೋಟಿ ರೂಪಾಯಿ ಬಜೆಟ್ ಪ್ರಾವಿಷನ್ ಮಾಡಿ ಕನಿಷ್ಠ 70,000, ಬಂಗಾರಪ್ಪನವರ ಕಾಲದಲ್ಲಿ 70,000 ದಿಂದ ಆರಂಭವಾದ ಯೋಜನೆಯಲ್ಲಿ ನೀರನ್ನು ಹೊಡೆದುಕೊಳ್ಳುವುದಕ್ಕೆ ಕರೆಂಟ್ ಹಾಕಿಕೊಡುತ್ತಿದ್ದರು ರಾಜ್ಯವನ್ನೇ ಎರಡು ಭಾಗ ಮಾಡಿಬಿಟ್ಟೀರಿ Black, gray ಮತ್ತು white ಆಗಿ ಮಾಡಿದಿರಿ

Black ಮುಗಿದು, ಹೋಯಿತು, ಅವರು supply ನೇ ಕೇಳುವ ಹಾಗಿಲ್ಲ Gray you have to wait ಮತ್ತೊಮ್ಮೆ ಜಿಯಾಲಜಿಸ್ಟ್ certificate ಕೊಡಬೇಕು White, ಇಡೀ ಕೋಲಾರ, I think it is 100% black ಇಡೀ Kolar is black Tumkur 8 Talukas are black ಎಲ್ಲಿ ಬಯಲು ಸೀಮೆ ಇತ್ತು ಎಲ್ಲಿ ನಾವು ಈ ನೀರನ್ನೇ ಉಪಯೋಗ ಮಾಡಿ ಬದುಕಬೇಕಾಗಿತ್ತು ಎಲ್ಲಿ ಬ್ಯಾಂಕ್‌ನವನಿಗೆ ಸಾಲ ಹಿಂದಕ್ಕೆ ಬರುವುದು ಅನುಮಾನವಾಗಿ, ಸರ್ಕಾರಕ್ಕೆ ಮೊರೆ ಹೋಗಿ, ಜಿಯಾಲಜಿಸ್ಟ್ certificate insist ಮಾಡಿ, ಆ ಜಿಯಾಲಜಿಸ್ಟ್ ಲೋನ್ ವರ್ಷನ್‌ಗೆ Black, Gray & White ಎಂದು ಮಾಡಿದ್ದು ಬ್ಯಾಂಕುಗಳಲ್ಲಿ ಮೊದಲು IP ಸೆಟ್‌ಗಳಿಗೆ ಬೋರ್‌ವೆಲ್‌ಇಳಿಗೆ ಸಾಲ ಕೊಡುತ್ತಿದ್ದರು ಈಗ ನಿಲ್ಲಿಸಿದ್ದಾರೆ ಅವತ್ತು ಜಿಯಾಲಜಿಸ್ಟ್ certificate ಕೇಳುವವರು ಆಗ White ತಾಲ್ಲೂಕು, Gray ತಾಲ್ಲೂಕು Black ತಾಲ್ಲೂಕು ಎಂದು ಪ್ರಶ್ನೆ ಉದ್ಭವವಾಗುತ್ತಿತ್ತು ಆ ಸರ್ಟಿಫಿಕೇಟ್‌ನ್ನು ಆಧಾರವಾಗಿಟ್ಟುಕೊಂಡು ರಾಜ್ಯದ ರೈತರಿಗೆಲ್ಲಾ ನಿರ್ನಾಮ ಮಾಡಿದಿರಿ ಅವರೆಲ್ಲಾ un-authorize ಆಗಿ ತೆಗೆದುಕೊಂಡಿದ್ದಾರೆ ತುರುವೇಕೆರೆ ಕೃಷ್ಣಪ್ಪನವರು ಮಾತನಾಡುತ್ತಿದ್ದರು, ನಿಮ್ಮ ತಾಲ್ಲೂಕು, ಇನ್ನೊಂದು ಮಧುಗಿರಿ ತಾಲ್ಲೂಕು, ಬೋರ್‌ವೆಲ್ ಹಾಕಿಕೊಂಡಿದ್ದಾರೆ ಬ್ಲ್ಯಾಕ್ ತಾಲ್ಲೂಕು ಅರ್ಜಿ ಕೊಟ್ಟರೆ ಪವರ್ ಸಪ್ಲೈ ಕೊಡುವುದಿಲ್ಲ ಅವರು ಕದಿಯಬಾರದು? ಅವರು ಅಕ್ರಮ ಮಾಡಬಾರದಾ? ಅವರು ತೋಟ ಉಳಿಸಿಕೊಳ್ಳಬಾರದಾ? ನನ್ನ ಬೋರಿನಲ್ಲಿ ನೀರು ಬಿದ್ದಿದೆ, ಪವರ್ ತೆಗೆದುಕೊಳ್ಳುತ್ತೇವೆ ನೀವು ಯಾರು ಬ್ಲ್ಯಾಕ್ ಏರಿಯಾ ಎಂದು ಹೇಳುವುದಕ್ಕೆ? ನೀರು ಬಿದ್ದ ಮೇಲೆ ಅಲ್ಲವಾ ಸಾರ್ ನಾವು ಸಪ್ಲೈ ಕೇಳುವುದು? ತಾವೂ ರೈತರೇ ನನ್ನ ಬೋರ್‌ನಲ್ಲಿ ನೀರು ಬಿದ್ದಿದೆ, yield test certificate ಕೊಡುತ್ತಿದ್ದೇನೆ, ಬ್ಲ್ಯಾಕ್ ತಾಲ್ಲೂಕು ಎಂದು ನೀರು ಹೊಡೆದುಕೊಳ್ಳುವುದಕ್ಕೆ ಕರೆಂಟ್ ಕೊಡುವುದಿಲ್ಲ ಇದು ರೈತರ ಪರವಾದ ತೀರ್ಮಾನವೆಂದು ಮಾನ್ಯ ರೇವಣ್ಣನವರು ತಿಳಿದುಕೊಂಡಿದ್ದಾರೆ, ನಿಮಗಿಂತ ರೈತರ ಚಾಂಪಿಯನ್ ಯಾರೂ ಇಲ್ಲ ಈಗ ಅವರಿಗೆಲ್ಲಾ ರೆಗ್ಯುಲರೈಸ್ ಆಗುತ್ತಿದೆ ಒಂದು ಸರ್ಕಾರ ಬರುವುದು ನಿಮ್ಮನ್ನು ಗುತ್ತಿಗೆ ಹಿಡಿದುಕೊಳ್ಳುವುದು ಇನ್ನೊಬ್ಬರು ಬರುವುದು ಸ್ವೇಚ್ಛೆಯಾಗಿ ಬಿಟ್ಟು ಬಿಡುವುದು ಈ ರೀತಿ ಆದರೆ ಇಲಾಖೆಗಳು ಬದುಕುತ್ತವಾ ಸಾರ್? ನಿಮ್ಮ ಬೆಸ್ಕಾಮ ಇರುತ್ತಾ? ನಿಮ್ಮ ಕೆಪಿಟಿಸಿಎಲ್ ಇರುತ್ತಾ? ರಾಜ್ಯಕ್ಕೆ ಇದೇ ಕೊನೆಯಾ? ಒಂದು ನೀತಿ ಎಂದರೆ ಆ ನೀತಿಗೆ ಒಂದು 10 ವರ್ಷ ಬೇಡವಾ? ಇಂತಹ ಒಂದು ಸೆಕ್ಟಾರ್‌ನಲ್ಲಿ ಏನು ಮಾಡಬೇಕೆಂದು ಒಂದು ಹತ್ತು ವರ್ಷದವರೆಗೆ ಆಲೋಚನೆ ಬೇಡವಾ? ಏಕಾ ಏಕಿ ಫ್ರೀ

ಅವತ್ತಿನಿಂದ ಇವತ್ತಿನವರೆಗೆ ಮೆಟೀರಿಯಲ್ ಮೂವ್ ಆಗುತ್ತಿಲ್ಲ ಅವತ್ತಿನಿಂದ ಇವತ್ತಿನವರೆಗೆ RLMS ಎಂದು ಅವರು ಒಂದು ಸ್ಕೀಮ್ ಕೊಟ್ಟರು ಚಿಕ್ಕನಾಯಕನಹಳ್ಳಿಯಲ್ಲಿ ಒಂದೊಂದು ಸ್ಟೇಷನ್‌ಗೆ ಒಂದೊಂದು ರೋಡ್ ತೆಗೆದುಕೊಂಡು ಬಿಟ್ಟಿದ್ದೇವೆ ಎಂದು ಹೇಳಿದರು ಮಾನ್ಯ ಕೃಷ್ಣ ಬೈರೇಗೌಡರು RLFS ಬಹಳ ಒಳ್ಳೆಯ ಸ್ಕೀಮ್ ಎಂದು ಅವರ ಛೇಂಬರ್‌ನಲ್ಲಿ ಹೇಳುತ್ತಿದ್ದರು ನಾನು ಗಮನಿಸಿದೆ ನನಗೆ ಬಹಳ ನೋವಾಯಿತು ನಾನು ಅವತ್ತು ಸ್ವಲ್ಪ ಒರಟಾಗಿ ಮಾತನಾಡಿದೆ ನಮಗೆ ಒಂದೊಂದು ಫೀಡರ್‌ಗಳನ್ನು ಮಾಡಿ ಕೊಟ್ಟಿಲ್ಲ ಚಿಕ್ಕನಾಯಕನ ಹಳ್ಳಿಯಲ್ಲಿ ನಿಮ್ಮ RLMS scheme ನಲ್ಲಿ even after three years ಒಂದು ಫೀಡರ್ ಇಲ್ಲ ಏಕೆ? ಸಮರ್ಥರಿದ್ದೀರಿ, most capable ಇದ್ದೀರಿ, you can alone run the department, you can alone run the portfolio, ಬೇರೆಯವರ ಅಗತ್ಯವಿಲ್ಲ, you can alone run the Government, ಏಕೆ ಸ್ವಾಮಿ ಹೀಗಾಗಿದೆ? ತಾವು ಹೇಳಬೇಕಲ್ಲಾ? ಚಿಕ್ಕನಾಯಕನಹಳ್ಳಿ sub division ನಲ್ಲಿ RLMSನಲ್ಲಿ ಯಾವುದಾದರೂ ಒಂದು ಫೀಡರ್‌ನ್ನು ನಿಮ್ಮ contractor ಮಾಡಿದ್ದೀರಾ? Deepak ಎನ್ನುವವರಿಗೆ ಯಾರಿಗೋ contract ಕೊಟ್ಟಿದ್ದೀರಿ ಅವರು ಮಾಡಲಿಲ್ಲ Station ಗಳು ಎಷ್ಟೊಷ್ಟು ಮಾಡಿದ್ದೀರಿ? ಅವರು ಸ್ಟೇಷನ್‌ಗಳನ್ನು ಮಾಡಬೇಕೆಂದು ಹೇಳಿದಾಗ ನಾನು ಸ್ವಲ್ಪ ಬೇಸರವಾಗಿ ಮಾತನಾಡಿದೆ ಏಕೆ? ನಮಗೆ ಎರಡು-ಮೂರು ಸ್ಟೇಷನ್, ಪಕ್ಕದಲ್ಲಿ 11, 12, 13, ಸ್ಟೇಷನ್ ಕೊಟ್ಟಿದ್ದಾರೆ ಇದನ್ನು ನೀವು ಸಮಗ್ರವಾಗಿ ಪರಿಶೀಲನೆ ಮಾಡಿ ಜಿಯಾಗ್ರಫಿಕಲ್ ಆಗಿ ಅರ್ಗನೈಸ್ ಮಾಡಿದರೆ ನಮ್ಮದೇನು ತಕರಾರು ಇಲ್ಲ who am i to object? ಮಾಡಿಲ್ಲ ಆಗಿಲ್ಲ ಇಷ್ಟ ಬಂದ ಕಡೆ ಆಗುತ್ತದೆ ಅದು ಲೋಡ್ ಸೆಂಟರ್‌ನಲ್ಲಿ ಆಗುವುದಿಲ್ಲ ಯಾರೂ ನಿಮಗೆ ವರದಿ ಕೊಡುತ್ತಿಲ್ಲ ನೀವು ಹೇಳಿದರಷ್ಟೇ ವರದಿ ತಂದು ಕೊಡುವುದು ವರದಿ ತೆಗೆದುಕೊಂಡು ಬಾರಯ್ಯಾ ಎಂದು ಪ್ರಭುಗಳು ಹೇಳಿದರೆ ಅವನು ಬರೆದುಕೊಂಡು ಬರುತ್ತಾರೆ ಇಲ್ಲದಿದ್ದರೆ ವರದಿ ತರುವ ಧಮ್ಮು ಯಾರಿಗೂ ಇಲ್ಲ ಇವತ್ತು KPTCL ಮತ್ತು BESCOM ನಲ್ಲಿ ಧಮ್ಮೇ ಇಲ್ಲ ಯಾರಾದರೂ ಆಫೀಸ್ ಹತ್ತಿರ ಬಂದುನೋಡಲಿ ಅವರಿಗೆ ಹುಟ್ಟಿದ ದಿವಸ ಜ್ಞಾಪಕ ಬಂದು ಬಿಡುತ್ತದೆ ಮಾಡಿ ಸಾರ್, ನಮ್ಮವರೇ ಜನ ಮೊದಲೆಲ್ಲಾ ನಿಮ್ಮ ಪಾರ್ಟಿಗೆ ಓಟು ಹಾಕಿದ್ದಾರೆ ಒಂದು ಕಾಲದಲ್ಲಿ ನಾವೂ ಅಲ್ಲಿಯೇ ಇದ್ದವರು ನಮ್ಮ ಹಾಗೆ ಏನು ನೀವು ವಿರೋಧ ಪಕ್ಷದಲ್ಲಿ ಕುಳಿತಿಲ್ಲ ಏನು ಮಲತಾಯಿ ಧೋರಣೆ ಮಾಡುತ್ತಿದ್ದೀರಿ? ನಮಗೆ ತುಮಕೂರಿನಲ್ಲಿ ಹುಟ್ಟಿರುವುದು ಪಾಪ ಅನ್ನಿಸಿಬಿಟ್ಟಿದೆ ಕೃಷ್ಣಪ್ಪನವರು ಸುಖವಾಗಿದ್ದಾರೋ ಏನೋ ಗೊತ್ತಿಲ್ಲ?

ಹಾಸನದ ಆಡಳಿತ ಬಂತು ಎಂದರೆ ನಾವು ಮೋಡದ ನೆರಳಾಗಿ ಹೋಗುತ್ತೇವೆ ಹೇಮಾವತಿ ನೀರು ಬರುವುದಿಲ್ಲ ಎಂದಿದ್ದು ಕೇಳಿದ್ದು ಆಯಿತು ಕರೆಂಟ್ ರೆಗ್ಯುಲರೈಸ್ ಆಗಿವುದಿಲ್ಲ ಎಂದಿದ್ದು ಕೇಳಿದ್ದು ಆಯಿತು ನಮಗೇನೋ ವಕ್ಕರಿಸಿಕೊಂಡು ಬಿಟ್ಟಿದೆ ಎನ್ನುವ ಭಾವನೆ ಬಂದು ಬಿಟ್ಟಿದೆ ನಮ್ಮನ್ನು ಇದರಿಂದ ಆಚೆಗೆ ತೆಗೆಯಿರಿ

ಶ್ರೀ ಕೃಷ್ಣಪ್ಪ - ರೆಗ್ಯುಲರೈಸ್ ಮಾಡಿದರೂ ನೀವು ಅಬ್ಜೆಕ್ಷನ್ ಮಾಡುತ್ತೀರಿ ಈ ದೌರ್ಭಾಗ್ಯ ಏಕೆ ನಿಮಗೆ? free regularization ಮಾಡಿದರೂ ನೀವು objection ಮಾಡುತ್ತೀರಿ

ಶ್ರೀ ಜೆ ಸಿ ಮಾಧುಸ್ವಾಮಿ ನಿಮಗೆ ಚೆನ್ನಾಗಿ ಇಟ್ಟಿದ್ದಾರೆ ಕೃಷ್ಣಪ್ಪನವರು ಹೇಳಿದರು, 300 ಕೋಟಿ ರೂಪಾಯಿಗಳ ಯೋಜನೆಗಳಿಗೆ ಶಂಕುಸ್ಥಾಪನೆ ಆಯಿತು ಎಂದು ಹೇಳಿದರು ನಮ್ಮವು ಎಷ್ಟೆಷ್ಟು ಆಗಿದೆ ಎಂದು ಇಲ್ಲಿ ಹೇಳಬೇಕು ಕೃಷ್ಣಪ್ಪನವರು ಒಬ್ಬ MLA ನಿಂತುಕೊಂಡು ಪೇಪರ್‌ನಲ್ಲಿ advertisement ಕೊಟ್ಟು 300 ಕೋಟಿ ರೂಪಾಯಿ ವರ್ಕನ್ನು ಇವತ್ತು ಶಂಕುಸ್ಥಾಪನೆ ಮಾಡಿದರೆ,

ಅಧ್ಯಕ್ಷರು ಈಗಾಗಲೇ ಒಂದು ಗಂಟೆ 40 ನಿಮಿಷವಾಯಿತು ಮಾಧುಸ್ವಾಮಿಯವರು ಬೇಗ ಮುಗಿಸಬೇಕು

ಶ್ರೀ ಸಿ ಎಸ್ ಪುಟ್ಟೇಗೌಡ ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಸದನ ಪ್ರಾರಂಭವಾದಾಗಿನಿಂದ ಒಳ್ಳೆಯ ಭಾಷಣ ಮಾಡುತ್ತಾರೆಂದು ನಾವು ಮತ್ತು ಜನಗಳು ತಿಳಿದುಕೊಂಡಿದ್ದೇವೆ ಅಂಕಿ ಸಂಖ್ಯೆ ಕೊಡುತ್ತಾರೆ ನಮಗೆ ಅಷ್ಟು ಶಕ್ತಿ ಇಲ್ಲ ಇವರು ಮಾತು ಮಾತಿಗೂ ಹಾಸನದವರು ಎಂದು ಹೇಳುತ್ತಾರೆ ಹೇಮಾವತಿ ನೀರನ್ನು ನಮ್ಮ ಹೃದಯ ನಾಳದಿಂದ ಕೊಟ್ಟ ಹಾಗೆ ನಮ್ಮ ಮನೆಯನ್ನು ಹಾಳು ಮಾಡಿಕೊಂಡು ಬಾಗೂರು ನವಿಲೆ ನೀರನ್ನು ಕೊಟ್ಟಿದ್ದೇವೆ ಮಾನ್ಯ ಮಾಧುಸ್ವಾಮಿಯವರು ಅದನ್ನು ಹೇಳಬಾರದು ಮಾನ್ಯ ರೇವಣ್ಣನವರು ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿರಬಹುದು, ಕೆಲವು ಕೆಟ್ಟ ಕೆಲಸಗಳನ್ನು ಮಾಡಿರಬಹುದು ನೀವು ವಿರೋಧ ಪಕ್ಷದಲ್ಲಿ ಕುಳಿತು ಸರ್ಕಾರದ ಲೋಪದೋಷಗಳನ್ನು ಎತ್ತಿ ಹಿಡಿಯಿರಿ, ಬೇಡವೆಂದು ಹೇಳುವುದಿಲ್ಲ ನಾವು ಹಾಸನದಲ್ಲಿ ಹುಟ್ಟಿದ್ದು ಶಾಪವೇ ಸ್ವಾಮಿ?

ಶ್ರೀ ಜೆ ಸಿ ಮಾಧುಸ್ವಾಮಿ : ನಮಗೆ ಇವತ್ತಿನವರೆಗೆ ತುಮಕೂರು ಜಿಲ್ಲೆಗೆ ಕೊಡಬೇಕಾದ ಐದು ಲಕ್ಷ ಎಕರೆ ಅಚ್ಚುಕಟ್ಟಿನಲ್ಲಿ ಒಂದೇ ಒಂದು ಎಕರೆ ಅಚ್ಚುಕಟ್ಟನ್ನು ಇನ್ನು ಕೊಟ್ಟಿಲ್ಲ ಸ್ವಾಮಿ ತಾವು ನಾವೆಲ್ಲಾ escape ನಲ್ಲಿ ನೀರು ಹಾಯಿಸುತ್ತಿರುವುದು ನೀವೇನು ನಮಗೆ ಧಾರಾಳವಾಗಿ ನೀರು ಬಿಟ್ಟಿಲ್ಲ

ಶ್ರೀ ಸಿ ಎಸ್ ಪುಟ್ಟೇಗೌಡ . ಹಾಸನ ಜಿಲ್ಲೆಯಲ್ಲಿ ಕುಡಿಯುವುದಕ್ಕೆ ನೀರಿಲ್ಲ ಟನಾಲ್ ತೆಗೆದು ನಿಮಗೆ ನೀರು ಕೊಟ್ಟಿದ್ದೇವೆ ಕುಡಿಯುವುದಕ್ಕೆ ನೀರಲ್ಲದೇ ಆ ಭಾಗದ ಜನ ಶಾಪಗ್ರಸ್ತರಾಗಿದ್ದಾರೆ

ಶ್ರೀ ಜೆ.ಸಿ. ಮಾಧುಸ್ವಾಮಿ · ನಾನು ಮುಗಿಸಿ ಬಿಡುತ್ತೇನೆ

ಅಧ್ಯಕ್ಷರು ಮಾಧುಸ್ವಾಮಿಯವರೆ, ಒಂದು ಗಂಟೆ 40 ನಿಮಿಷ ಆಗಿದೆ ಬೇಗ ಮುಗಿಸಿ

ಡಾ ಹೆಚ್ ಸಿ ಮಹಾದೇವಪ್ಪ . ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಹಾಸನದಲ್ಲಿ ಹುಟ್ಟಿರುವವರು ಸುಖವಾಗಿರಬಹುದು ಎಂದು ತಿಳಿದುಕೊಂಡಿದ್ದರು ಮಾನ್ಯ ಪುಟ್ಟೇಗೌಡರಿಗೂ ಕಷ್ಟ ಇದೆ ಎಂದು ಗೊತ್ತಾಯಿತು

ಶ್ರೀ ಜೆ ಸಿ ಮಾಧುಸ್ವಾಮಿ KPTCL ಬಗ್ಗೆ ಬಹಳ ನೋವಿನಿಂದ ಹೇಳುತ್ತಿದ್ದೇನೆ ಇವತ್ತಿನವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಲೋಡ್‌ಶೆಡ್ಡಿಂಗ್‌ನ್ನು ತೆಗೆದಿಲ್ಲ ವ್ಯವಹಾರ ದೃಷ್ಟಿ ಬಿಟ್ಟು BESCOM ಆಗಲಿ, KPTCL ಯಲ್ಲಾಗಲಿ ವರ್ಕ್ಸ್ ಇಲ್ಲ ಇವತ್ತಿನವರೆಗೆ ನಮ್ಮ ಭಾಗದಲ್ಲಿ ಒಂದು transformer repair center ಕೂಡ ಮಾನ್ಯ ರೇವಣ್ಣನವರು ಮಾಡಿಲ್ಲ ಯಥೇಚ್ಛವಾಗಿ transfromer fail ಆಗುವ ಚಿಕ್ಕನಾಯಕನ ಹಳ್ಳಿ, ತಿಪಟೂರು ಮತ್ತು ಶಿರಾ ಈ ಭಾಗದಲ್ಲಿ ಇವತ್ತಿನವರೆಗೂ ಒಂದು ರಿಪೇರಿ ಸೆಂಟರ್ ಕೆಲಸ ಮಾಡಿಲ್ಲ ನಾವು ಮಾನ್ಯ ರೇವಣ್ಣನವರ ಹಂಗಿಗೆ ಮತ್ತು ಬೆಸ್ಕಾಂ ಹಂಗಿಗೆ ಇರಲೇಬೇಕು, TC ಕಳುಹಿಸಿ ಮಾನ್ಯ ರೇವಣ್ಣನವರೇ ನಿಮ್ಮ ದಮ್ಮಯ್ಯ ಎಂದು ಕೇಳಲೇಬೇಕೆನ್ನುವ ಹಾಗೆ ನಮ್ಮನ್ನು ಇಟ್ಟುಕೊಳ್ಳುವುದಕ್ಕೆ ಅವರು ತೀರ್ಮಾನ ಮಾಡಿದ್ದಾರೆ ಅದು ಎಷ್ಟು ದಿವಸ ಇರಬೇಕೆಂದು ಅವರು ಹೇಳಿ ಬಿಟ್ಟರೆ, ಅಷ್ಟು ದಿವಸ ನಾವೂ ಚಾಕರಿ ಮಾಡಬಹುದು ಅವರೇ ಎಲ್ಲಾ ಮಾಡಿದ ಮೇಲೆ ನಮ್ಮದು ಯಾವ ಲೆಕ್ಕ? ನಮಗೆ ಏನಾಗಿದೆ ಎಂದು ನಮಗೆ ಅರ್ಥವಾಗಬೇಕು

ನಾನು ಮಾನ್ಯ ಯಡಿಯೂರಪ್ಪನವರಲ್ಲಿ ಡಿಮ್ಯಾಂಡ್ ಮಾಡುತ್ತೇನೆ ಸರ್ಕಾರ ಎಲೆಕ್ಟ್ರಿಸಿಟಿ ಸಮಸ್ಯೆಯನ್ನು ಬಗೆಹರಿಸಬೇಕು ರೇವಣ್ಣವರ ಪಿಡಬ್ಲ್ಯೂಡಿ ಇಲಾಖೆಗೆ ದುಡ್ಡು ಕೊಡುವುದನ್ನು ಕಡಿಮೆ ಮಾಡುತ್ತೀರೋ ಅಥವಾ ಬೇರೇನು ಮಾಡುತ್ತೀರೋ ಗೊತ್ತಿಲ್ಲ ನಾನು ಹೇಳುವುದೇನೆಂದರೆ, production of power has to be taken up on priority ಇದು ರಾಜ್ಯದ ಹಿತಾಸಕ್ತಿ ನೀವಿಬ್ಬರೇ ಇಲ್ಲಿ ಗೂಟಾ ಹೊಡೆದುಕೊಂಡು ಇರುವುದಿಲ್ಲ ನಾಳೆ ಯಾರೋ ಬೇರೆಯವರು ಬರುತ್ತಾರೆ ನಾನು ಒಂದು ಮಾತನ್ನು ಈ ಸಭೆಯಲ್ಲಿ ಹೇಳಬೇಕಾಗುತ್ತದೆ ಚಿಕ್ಕನಾಯಕನಹಳ್ಳಿಯಲ್ಲಿ ಹೆಚ್ಚು ಓರ್ ಇದೆ ಏನಾದರೂ

ಮಾಡಿ ಅಲ್ಲಿ ಒಂದು ಸ್ಟೀಲ್ ಪ್ಲ್ಯಾಂಟ್ ಹಾಕಿ ಎಂದರು ಬರೋರೆಲಾ ಕೇಳೋದೆ ಸಾರ್ Water and Power, ಅದೆಲ್ಲದ್ದನ್ನೂ ತಂದ ಬೆಂಗಳೂರಿನಲ್ಲಿಯೇ ತಾವು ಮಾಡಬೇಕೆನ್ನುತ್ತೀರಾ? ಇವತ್ತೇನಾದರೂ ಎಲೆಕ್ಟ್ರಿಸಿಟಿ ನಮ್ಮ ಬಾಗದಲ್ಲಿ ನೀವು ಕೊಟ್ಟಿದ್ದರೆ ಫಸ್ಟ್‌ಕ್ಲಾಸಾಗಿ ಅಲ್ಲಿ ಸ್ಟೀಲ್ ಪ್ಲ್ಯಾಂಟ್ ಆಗಿರುತ್ತಿತ್ತು ಒಂದ್ ಮುನ್ನೂರೋ, ಐದುನೂರೋ, ಒಂದು ಸಾವಿರವ್ರೋ, ಎರಡು ಸಾವಿರವ್ರೋ ಜನರು ನೌಕರರಿಗೆ ಹೋಗಿರುತ್ತಿದ್ದರು ನೀವು ಮಾಡಲಿಲ್ಲ ನೀರಿಲ್ಲ ಇವತ್ತು ಕೆ ಇ ಬಿ ಏನೋ ರೇವಣ್ಣನವರಿಗೆ ಮೂರಾ ಸಿಕ್ಕಿಬಿಟ್ಟು ನೀರು ಇಳಿದು ಹೋಗಿಬಿಟ್ಟಿದೆ ಅದರಲ್ಲಿ ಅಧಿಕಾರಿಗಳು ಹೇಗಾಗಿದ್ದಾರೆ, ನಾನು ಒಂದು ಸಲ ಇಲ್ಲಿ ರೇವಣ್ಣನವರಿಗೆ ಹೇಳಿದ್ದೆ, ಚೀಫ್ ಇಂಜಿನಿಯರ್‌ಗಳಿಗೆ ಏಕಪ್ಪಾ ಪ್ರಮೋಷನ್ ಮಾಡಿಲ್ಲವೆಂದು ಕೇಳಿದ್ದೆ 24 ಪೋಸ್ಟ್‌ಗಳು ಖಾಲಿ ಇತ್ತು ಆವತ್ತು ಒಂದು ಮಾತನ್ನು ಹೇಳಿದೆ, ಈಗ ಇರುವ ಒಂದು ಬ್ಯಾಚ್ ಹೋಗುವವರೆಗೂ ರೇವಣ್ಣ ಪ್ರಮೋಷನ್ ಮಾಡುವುದಿಲ್ಲ, ಇದು ನನಗೆ ಗೊತ್ತು ಎಂದು ಹೇಳಿದ್ದೆ ಅವರು ಅದನ್ನು ಪ್ರೂವ್ ಮಾಡಿಬಿಟ್ಟರು ಆ ಬ್ಯಾಚ್ ಹೋದ ತಕ್ಷಣ ಸಿದ್ಧರಾಮಯ್ಯನವರೆ, ರಾತ್ರೋರಾತ್ರಿ ಚೀಫ್ ಇಂಜಿನಿಯರ್ ಆಗಿಬಿಟ್ಟರು, ಎಷ್ಟು ಜನ ಆಗಿದ್ದಾರೆ ಗೊತ್ತೆ, 57 ಜನ ಈಗ ಚೀಫ್ ಇಂಜನಿಯರ್‌ಗಳು ಪಿ ಡಬ್ಲ್ಯೂ ಡಿ ಯಲ್ಲಿ ಇದ್ದಾರೆ ಈಗ 50 ಮಾಡಿದ್ದೀರಿ ಇನ್ನು 7 ಪೋಸ್ಟ್‌ಗಳನ್ನು ರಿಸರ್ವೇಷನ್‌ನಲ್ಲಿ ಇಟ್ಟುಕೊಂಡಿದ್ದೀರಿ

ಶ್ರೀ ಹೆಚ್ ಡಿ ರೇವಣ್ಣ ತಾವು ಹೇಳುತ್ತಿರುವುದು ಚೀಫ್ ಇಂಜಿನಿಯರ್‌ಗಳದ್ದನ್ನು, ಪಿ ಡಬ್ಲ್ಯೂ ಡಿ ಯಲ್ಲಿ ಇರುವುದು ನಾಲ್ಕೋ, ಐದೋ ಅಷ್ಟೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಇದೆ ಅದು ನನಗೆ ಬರುವುದಿಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ . ಬೆಂಗಳೂರು ಕಾರ್ಪೊರೇಷನ್‌ದು ನಿಮಗೆ ಗೊತ್ತಿಲ್ಲ ಇರಿಗೇಷನ್‌ದು ನಿಮಗೆ ಗೊತ್ತಿಲ್ಲ ಮೈನರ್ ಇರಿಗೇಷನ್‌ದು ನಿಮಗೆ ಗೊತ್ತಿಲ್ಲ ಆದರೆ ಪ್ರಮೋಷನ್ ಕೊಡುವವರು ನೀವೇ ತಾನೇ?

ಶ್ರೀ ಹೆಚ್ ಡಿ ರೇವಣ್ಣ ಅದರ ಬಗ್ಗೆಯೇ ನಾನು ಹೇಳುತ್ತೇನೆ

ಶ್ರೀ ಸಿದ್ಧರಾಮಯ್ಯ : ಪ್ರಮೋಷನ್ ವಿಚಾರ ಬಂದಾಗ ಪೇರೆಂಟಲ್ ಡಿಪಾಟ್‌ಮೆಂಟ್ ಪಿ ಡಬ್ಲ್ಯೂ ಡಿ ಡಿಪಾರ್ಟ್‌ಮೆಂಟ್‌ಗೆ ಬರುತ್ತದೆ ತಾನೆ

ಶ್ರೀ ಹೆಚ್ ಡಿ ರೇವಣ್ಣ · ಪ್ರಮೋಷನ್ ಡಿ ಪಿ ಎ ಆರ್ ನವರು ಮಾಡುವವರು

ಶ್ರೀ ಜೆ ಸಿ ಮಾಧುಸ್ವಾಮಿ . ಡಿ ಪಿ ಎ ಆರ್ ಕೆಳಗೇ ಮಾಡುವುದು ಆದರೆ ನಿಮ್ಮ ಸೆಕ್ರೆಟರಿ ಮೊದಲು ಇಶ್ಯೂ ಮಾಡಬೇಕಲ್ಲ ಅವರು ಸಹಿ ಮಾಡದೇ ನೀವೇ ಸಹಿ ಮಾಡಿಕೊಡುವುದಕ್ಕಾಗುತ್ತದೆಯೇ? ಯಾರಿಗಾದರೂ

ಇಂಥವರನ್ನು ಚೀಫ್ ಇಂಜಿನಿಯರ್ ಆಗಿ ಮಾಡಿದ್ದೇನೆಂದು ಮಾಡುವುದಕ್ಕಾಗುತ್ತದೆಯೇ? ಆ ರೀತಿ ಮಾಡುವುದಕ್ಕಾಗುತ್ತದೆಯೇ ಸಾರ್? ಅದಕ್ಕೋಸ್ಕರವೇ ನೀವು ಅಂಥ ಸೆಕ್ರೆಟರಿಯವರನ್ನು ಇಟ್ಟುಕೊಂಡಿರುವುದು ಎಷ್ಟು ಜನ ಮಾಡುತ್ತಾರೆ? ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ಕೆಲವು ಪ್ರಮಾಷನ್‌ಗಳನ್ನು ಕೊಟ್ಟಿದ್ದೀರಿ ಸಿ ಆರ್ ಆವತ್ತು ಬಂದೇ ಇರಲಿಲ್ಲ ಅಷ್ಟು ಸಾಮರ್ಥ್ಯ ಇಲ್ಲಿ ಯಾರಿಗಾದರೂ ಇದೆಯೆ?

ಶ್ರೀ ಹೆಚ್ ಡಿ ರೇವಣ್ಣ – ಮಾನ್ಯ ಅಧ್ಯಕ್ಷರೆ, ಕಾನೂನು ಬಾಹಿರವಾಗಿ ಯಾವುದೇ ಪ್ರಮೋಷನ್ ಮಾಡಿದ್ದರೆ ಅಂಥದ್ದನ್ನು ಬೇಕಾದರೆ ಹೇಳಲಿ ಆ ಬಗ್ಗೆ ಚರ್ಚೆಯಾಗಲಿ ಸಿ ಆರ್ ಬಂದೇ ಇರಲಿಲ್ಲ ಪ್ರಮೋಷನ್ ಕೊಡುವುದಕ್ಕೆ ಎಂದಿದ್ದಾರೆ ಅಂಥವುಗಳು ಯಾವುದಾದರೂ ಇದ್ದರೆ ಹೇಳಲಿ ಸಿ ಆರ್ ಬರದೇ ಪ್ರಮೋಷನ್ ಕೊಟ್ಟಿರುವಂಥ ಯಾವುದಾದರು ಒಂದು ಪ್ರಕರಣ ಇದ್ದರೆ ಈ ಸಭೆ ಮುಂದೆ ಹೇಳಲಿ ಬೇಕಾದರೆ ನೀವು ಏನು ಹೇಳುತ್ತೀರೋ ಕೇಳುತ್ತೀನಿ ಇನ್ನು ಚೀಫ್ ಇಂಜಿನಿಯರ್ಸ್‌ಗಳ ಬಗ್ಗೆ ಹೇಳಿದಿರಿ ಈಗ ಇಲ್ಲಿಯೇ ಮಹದೇವಪ್ಪನವರು ಇದ್ದಾರೆ, ಸಿದ್ಧರಾಮಯ್ಯನವರು ಇದ್ದಾರೆ, ಇವತ್ತಲ್ಲ, ನಮ್ಮ ಕಾಲದಲ್ಲಿ ನಡೆದಿಲ್ಲ, ಕಳೆದ ಎರಡು ವರ್ಷದಿಂದ ಬಿದ್ದಿತ್ತು ಸುಪ್ರೀಂಕೋರ್ಟ್‌ಗೆ ಹೋಯಿತು ಕೆ ಎ ಟಿ ಗೆ ಹೋಯಿತು, ಹೈಕೋರ್ಟ್‌ಗೆ ಹೋಯಿತು, ಎಲ್ಲಾ ಕಡೆ ಹೋಯಿತು ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ 40 ಜನ ಚೀಫ್ ಇಂಜಿನಿಯರ್ಸ್ ಹಿಂದೆ ಒಬ್ಬೊಬ್ಬರು ಚೀಫ್ ಇಂಜಿನಿಯರ್ ಆಗಿದ್ದವರು ಮೂರು ಮೂರು ಕಡೆ ಇನ್‌ಛಾರ್ಜ್ ಇದ್ದರು ನಮ್ಮ ಪಿಡಬ್ಲ್ಯೂಡಿಯಲ್ಲಿ ನಾರ್ತ್, ಸೌತ್ ಎರಡು ಬಿಟ್ಟರೆ, ಕೆ ಆರ್ ಡಿ ಸಿಎಲ್ ಚೀಫ್ ಇಂಜಿನಿಯರ್ ಬಿಟ್ಟರೆ, ಕೇಶಿಪ್ ಬಿಟ್ಟರೆ, ಈ ನಾಲ್ಕು ಚೀಫ್ ಇಂಜಿನಿಯರ್ಸ್ ಬಿಟ್ಟರೆ, ನಮ್ಮಲ್ಲಿ ಯಾವುದೂ ಇಲ್ಲ ನಾವೇನಾದರೂ ಕಾನೂನುಬಾಹಿರವಾಗಿ ಏನಾದರೂ ನಾನು ಚೀಫ್ ಇಂಜಿನಿಯರ್‌ದೋ, ಎಕ್ಸಿಕ್ಯುಟಿವ್ ಇಂಜಿನಿಯರ್‌ದೋ, ಎಸ್ ಇ ಗಳದ್ದೋ ಯಾವುದಾದರೂ ಕಾನೂನುಬಾಹಿರವಾಗಿ ಪ್ರಮೋಷನ್ ಮಾಡಿದ್ದಾರೆ ಮಾಧುಸ್ವಾಮಿಯವರು ಹೇಳಲಿ

(ಗೊಂದಲ)

ಡಾ ಹೆಚ್ ಸಿ. ಮಹದೇವಪ್ಪ – ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಲೋಕೋಪಯೋಗಿ ಸಚಿವರು ಹೇಳಿದರು ಸುಮಾರು ವರ್ಷದಿಂದ ಅದು ಹಾಗೆಯೇ ಬಿದ್ದಿತ್ತು ಸಿದ್ಧರಾಮಯ್ಯನವರು ಇದ್ದರು, ನಾನೂ ಇದ್ದೆ, ಎಂ ಪಿ ಪ್ರಕಾಶ್, ಎಲ್ಲರೂ ಕ್ಯಾಬಿನೆಟ್‌ನಲ್ಲಿ ಇದ್ದೆವು ಸಂವಿಧಾನಕ್ಕೆ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ತಿದ್ದುಪಡಿಯನ್ನು ತಂದರು ಪ್ರಮೋಷನ್‌ನಲ್ಲಿ ಎಸ್ ಸಿ/

ಎಸ್ ಟಿ ಅಧಿಕಾರಿಗಳಿಗೆ ಮುಂಬಡ್ತಿ ಕೊಡುವಾಗ ಮೀಸಲಾತಿ ಇಡಬೇಕೆಂದು ತಂದರು ಈ ವಿಷಯದ ಮೇಲೆ ಸುಪ್ರೀಂಕೋರ್ಟ್‌ಗೆ ಹೋದಾಗ ಸುಪ್ರೀಂಕೋರ್ಟ್ ಎಸ್ ಸಿ /ಎಸ್ ಟಿ ಅಧಿಕಾರಿಗಳಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಇಡುವುದನ್ನು ಎತ್ತಿಹಿಡಿಯಿತು 16(4)ನೇ ಕಾಲಂಗೆ ತಿದ್ದುಪಡಿ ತಂದಿರತಕ್ಕಂಥ ಮೀಸಲಾತಿ ಕ್ರಮವನ್ನು ಎತ್ತಿಹಿಡಿಯಿತು 2002ನೇ ಇಸವಿಯಲ್ಲಿ 16 ಜನ ಪರಿಶಿಷ್ಟ ಜಾತಿಯವರು ಎಸ್ ಇ ಗಳು ಇದ್ದರು ಈ ಪ್ರಮೋಷನ್ ಕೊಟ್ಟಾಗ ಬರೀ ಇಬ್ಬರೋ ಮೂರು ಜನಕ್ಕೋ ಕೊಟ್ಟಿದ್ದಾರೆ ಆದರೆ ಎಲ್ಲರೂ ಆಗಬೇಕಾಗಿತ್ತು 2004ಕ್ಕೆ ಪ್ರಮೋಷನ್ಸ್ ಎಲ್ಲರಿಗೂ ಕೊಟ್ಟಿದ್ದಾರೆ ನಿಜವಾಗಿ ಆಗಬೇಕಾಗಿದ್ದವರನ್ನು ಬಿಟ್ಟಿದ್ದಾರೆ, ಹೀಗೆ ಅನೇಕ ಗೊಂದಲಗಳು ಆಗಿವೆ

ಗೊಂದಲ

ಶ್ರೀ ಹೆಚ್.ಡಿ ರೇವಣ್ಣ – ಮಾನ್ಯ ಅಧ್ಯಕ್ಷರೆ, ಮಾನ್ಯ ಮಹದೇವಪ್ಪನವರಿಗೆ ಒಂದು ನಿಮಿಷದಲ್ಲಿ ಉತ್ತರ ಕೊಟ್ಟುಬಿಡುತ್ತೇನೆ ಹಿಂದೆ ಹೆಚ್ ಕೆ ಪಾಟೀಲರು ಕಾನೂನು ಸಚಿವರಾಗಿದ್ದರು ಲಾ ಸೆಕ್ರೆಟರಿ ಒಪಿನಿಯನ್ ಇದೆ, ಅಡ್ವೊಕೇಟ್ ಜನರಲ್ ಒಪಿನಿಯನ್ ಇದೆ, ಕಾನೂನು ಮಂತ್ರಿಗಳು ಏನು ಒಪಿನಿಯನ್ ಕೊಟ್ಟಿದ್ದಾರೆ, ಅದರಂತೆ ಮಾಡಿದ್ದಾರೆ ನಾನೇನಾದರೂ ಒಪ್ಪಿಗೆಯನ್ನು ಕೊಟ್ಟಿದ್ದರೆ ಹೇಳಲಿ

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಸಚಿವರೆ, ಮೀಸಲಾತಿ ಉಲ್ಲಂಘನೆ ಆಗಿದ್ದರೆ ತಾವು ಸರಿಪಡಿಸಿ

ಶ್ರೀ ಹೆಚ್ ಡಿ ರೇವಣ್ಣ .– ಒಂದು ಸಾವಿರ ಎಸ್ ಸಿ/ಎಸ್‌ಟಿ ಇಂಜಿನಿಯರ್ಸ್‌ಗಳನ್ನು ಸಿದ್ಧರಾಮಯ್ಯ ಸಾಹೇಬರು ಪರ್ಮನೆಂಟ್ ಮಾಡಿದರು ನಿಮ್ಮ ಕೈಯಲ್ಲಿ ಆಯಿತೇನ್ರಿ, ಹಿಂದಿನ ಸರ್ಕಾರ ನಿಮ್ಮದು ಇದ್ದಾಗ ನೀವು ಏನು ಮಾಡಿದ್ದೀರಿ?

(ಗೊಂದಲ)

ಡಾ. ಹೆಚ್ ಸಿ ಮಹದೇವಪ್ಪ :– ರೇವಣ್ಣನವರು ಬೇಜಾರು ಮಾಡಿಕೊಳ್ಳುವ ಅಗತ್ಯವಿಲ್ಲ ಅನ್ಯಾಯವಾಗಿದೆ ಸಂವಿಧಾನದ ತಿದ್ದುಪಡಿಗೆ ವ್ಯತಿರಿಕ್ತವಾಗಿ

(ಗೊಂದಲ)

ಅಧ್ಯಕ್ಷರು – ಮಾಧುಸ್ವಾಮಿಯವರೆ, ತಾವು ಮಾತನಾಡಿ, ಸುಮ್ಮನೇ ನೀವು ಆ ಕಡೆ ನೋಡುತ್ತೀರಿ, ಬೇಗ ಮಾತನಾಡಿ ಮುಗಿಸಿ

ಶ್ರೀ ಜೆ.ಸಿ ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮೊದಲೇ ಈ ಸಭೆಯಲ್ಲಿ ಪ್ರಶ್ನೆ ಹಾಕಿದ್ದೆ 24 ಚೀಫ್ ಇಂಜಿನಿಯರ್ ಪೋಸ್ಟ್‌ಗಳು ಖಾಲಿ ಇದೆ, ಇದನ್ನು ಏಕೆ ಭರ್ತಿ ಮಾಡಿಲ್ಲವೆಂದು ಪ್ರಶ್ನೆ ಹಾಕಿದ್ದೆ ನನಗೆ ಗೊತ್ತಿತ್ತು, ಅದು ಆವತ್ತು ಆಗಿವುದಿಲ್ಲ ಎಂದು ನಾನು ಅವರ ಆಫೀಸ್‌ಗೆ ಹೋಗಿ ಕೇಳಿದ್ದೆ ಸುಪ್ರೀಂಕೋರ್ಟ್ ಆದೇಶವಿದೆ, ಏಕೆ ಚೀಫ್ ಇಂಜಿನಿಯರ್ ಪೋಸ್ಟ್ ತುಂಬುತ್ತಿಲ್ಲವೆಂದು ಕೇಳಿದ್ದೆ ಅದಕ್ಕೆ ಹೌದು ಸಾರ್, ಅದನ್ನು ಕನ್ಸಿಡರ್ ಮಾಡಬೇಕಾಗಿದೆ ಎಂದರು ಇದನ್ನು ಇವರು ಹೇಳಲಿಲ್ಲ ಯಾರು ಹೇಳಿದರು ಎಂದು ನಾನು ಹೇಳುತ್ತೇನೆ While promoting we will consider ಎಂದು ಹೇಳಿದರು ಆದರೆ ನಾನು ಆವತ್ತೇ ಹೇಳಿದೆ, ಈ ಬ್ಯಾಚ್‌ರಿಟೈರ್ ಆಗುವವರೆಗೆ ಪ್ರಮೋಷನ್‌ಗಳು ಆಗುವುದಿಲ್ಲವೆಂದು ಹೇಳಿದ್ದೆ ಆ ಬ್ಯಾಚ್ ರಿಟೈರೆ ಆದರು ಪಾಪ ಈಗ ಅವರೇನೂ ಲೇಟ್ ಮಾಡಿಲ್ಲ ಪ್ರಮೋಷನ್ ಕೊಟ್ಟರು ಅದರ ಹಿಂದೆಯೇ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೂ ಕೊಟ್ಟರು

ಶ್ರೀ ಬಿ ಶಿವರಾಂ :- ಆ ಬ್ಯಾಚ್ ರಿಟೈರ್ ಆಗುವವರೆಗೂ ಪ್ರಮೋಷನ್ ಕೊಡಲಿಲ್ಲವೆಂದರೆ ಉದ್ದೇಶವೇನಿತ್ತು?

ಶ್ರೀ ಜೆ ಸಿ ಮಾಧುಸ್ವಾಮಿ - ಅದೇನೋ ನನಗೆ ಗೊತ್ತಿಲ್ಲ ಬಹುಶಃ ಅವರು ಕೋರ್ಟ್‌ಗೆ ಹೋಗಿದ್ದರು ಎಂದು ಸಿಟ್ಟಿತ್ತೇನೋ ಅವರೇ ಪಿಡಬ್ಲ್ಯುಡಿ ಸಚಿವರಾಗಿದ್ದರು ಪಾಪ, ಅವರಿಗೆ ಇದು ಗೊತ್ತಿಲ್ಲ ಕೆಲವು ವಿಷಯ ಅವರಿಗೆ ಗೊತ್ತಾಗುವುದಿಲ್ಲ ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ ಸಾರ್ ಕೆಲವು ಒಂದೊಂದು ಸಲ ಅವರಿಗೆ ಗೊತ್ತಾಗುವುದಿಲ್ಲ ಪಾಪ, ಆವರೂ ಎಷ್ಟು ಅಂತ ನೋಡುವುದಕ್ಕಾಗುತ್ತದೆ ಹೇಳಿ ಇಡೀ 440 ವೋಲ್ಟ್ ಹೊರೆ ನಿಮ್ಮ ಮೇಲೆ ಬಿದ್ದುಬಿಟ್ಟರೆ ಹೊರುವುದಕ್ಕಾಗುತ್ತದೆಯೇ ಆಗಲ್ಲ ಹಿಂದೆ ಪ್ರಮೋಷನ್ ಹೇಗಾಗಿದೆ ಎಂಬುದನ್ನು ತಾವು ನೋಡಬೇಕು ಸಾರ್ ಸಾರ್ ರಾತ್ರಿ 11 ಗಂಟೆ 12 ಗಂಟೆಗೆ ಪ್ರಮೋಷನ್‌ಗಳು ಆಗುತ್ತದೆ ರಾತ್ರಿ 12 ಗಂಟೆಯಲ್ಲಿ ಆರ್ಡರ್ ಇಶ್ಯೂ ಆಗುತ್ತದೆ ಬೆಳಿಗ್ಗೆ 10 ಗಂಟೆಗೇ ಹೋಗಿ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಆದೇಶವಾಗಿರುತ್ತದೆ ಏಕೆಂದರೆ ಯಾರಾದರೂ ಕೋರ್ಟ್‌ಗೆ ಹೋಗಿಬಿಟ್ಟರೆ, ನಿಮಗೆ ಎಕ್ಸಿಕ್ಯುಟಿವ್ ಇಂಜಿನಿಯರ್‌ನಿಂದ ಸೂಪರಿಂಟೆಂಡೆಂಟ್ ಆಗಿರುವುದು ಸ್ವಾತಂತ್ರ್ಯ ಬಂದ ಹೊತ್ತನಲ್ಲಿಯೇ ಸೂಪರಿಂಟೆಂಡೆಂಟ್ ಇಂಜಿನಿಯರ್‌ರಿಂದ ಚೀಫ್ ಇಂಜಿನಿಯರ್ ಆಗುವುದೂ ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿಯೇ ಏಕೆಂದರೆ ಲಗ್ನ ಕಟ್ಟಿರುವುದು ಆ ಕಾಲ ಹಿಂದೆ ಜವಹರ್‌ಲಾಲ್ ನೆಹರು ಮೌಂಟ್ ಬ್ಯಾಟನ್ ಕೇಳಿ ಆ ಟೈಮ್ಸ್‌ಗೇ ಲಗ್ನ ಕಟ್ಟಿಸಿಬಿಟ್ಟಿದ್ದಾರೆ ಅಷ್ಟು ಹೊತ್ತಿನಲ್ಲಿಯೇ

ಒಳ್ಳೆಯ ಕೆಲಸಗಳೂ ಈ ವಿಧಾನಸೌಧದಲ್ಲಿ ಆಗುವುದು ಬೆಳಿಗ್ಗೆ ಹೊತ್ತು ಅಗುವುದಿಲ್ಲ ಏಕೆಂದರೆ ಪಕ್ಕದಲ್ಲಿಯೇ ಕೆಂಪು ಬಣ್ಣದ ಕೋರ್ಟ್ ಇಟ್ಟುಕೊಂಡು ಬೆಳಿಗ್ಗೆ ಹೊತ್ತು ಆರ್ಡರ್ ಹೊತ್ತು ಆರ್ಡರ್ ಇಶ್ಯೂ ಮಾಡುವುದಕ್ಕಾಗುತ್ತದೆಯೇ ಇದು ನಡೆಯುತ್ತಿರುವ ರೀತಿ ಇಲ್ಲಿ decentralization ಎಂದುಬಿಟ್ಟು, ಅದೇನೋ ನಮಗೆ ಆ ಸ್ಪೆಲಿಂಗೆ ಕೂಡ ಗೊತ್ತಿಲ್ಲ, ನಾವೆಲ್ಲ victimise ಆಗಿಬಿಟ್ಟೆವು, ಅದರಲ್ಲಿ ಬಹಳ ಮಾತು ನಡೆಯುತ್ತದೆ ಕೆಲವು ಇಲಾಖೆಗಳು, ಏನು ಸೆಂಟ್ರಲೈಸ್, ಏಕಾಯಿತೋ, ಏನಾಯಿತೋ, ಏನು ಆಗುತ್ತಿದ್ದೇವೆ, ಏನು ಆಗುತ್ತಿದೆ ಎನ್ನುವುದು ಗೊತ್ತಿಲ್ಲ ನಾನು ಇಲ್ಲಿ ಕೆ ಪಿ ಟಿ ಸಿ ಎಲ್ ಗೆ ಬೆಸ್ಕಾಂಗೆ ಡಿಮ್ಯಾಂಡ್ ಮಾಡುತ್ತಿದ್ದೇನೆ ಹೇಗಾದರೂ ಮಾಡಿ ಹಳ್ಳಿಯಲ್ಲಿ ತಾವು ಪಟ್ಟಣದವರಿಗೆ ಕೊಟ್ಟಂತೆ ದಿನದ 24 ಗಂಟೆಗಳ ಕಾಲ ಕರೆಂಟ್ ಕೊಡಿಸುವುದಕ್ಕೆ ಅಗುತ್ತದೆಯೆ ಅಥವಾ ಇಲ್ಲವೆ? ಇದು ಒಂದು ವಿಚಾರ ಎರಡನೆಯದಾಗಿ, ಇವತ್ತು ಪ್ರಪಂಚ ಬಹಳ ಫಾಸ್ಟ್ ಆಗಿ ಮೂವ್ ಆಗುತ್ತಿದೆ ಸೋಲಾರ್ ಎನರ್ಜಿ, ವಿಂಡ್ ಎನರ್ಜಿ, ಕೇಂದ್ರ ಸರ್ಕಾರ ಕೊಡುತ್ತಿರುವ ನಾನ್-ಕನ್‌ವೆನ್‌ಶನಲ್ ಎನರ್ಜಿ ಬೋರ್ಡ್ ಕೊಡುತ್ತಿರುವ ಹಣ ಕೂಡ ಇಲ್ಲಿ ಬಳಕೆಯಾಗುತ್ತಿಲ್ಲ 30 ರೂಪಾಯಿ ನಮಗೆ ಸಬ್ಸಿಡೈಸ್ಡ್ ಮಾಡಿಬಿಡುತ್ತಾನೆ, ನಮ್ಮ ಮನೆಯಲ್ಲಿ ನಾನು ಸೋಲಾರ್ ಸಿಸ್ಟಂ ಅನ್ನು ಹಾಕಿಕೊಂಡಿದ್ದೇನೆ ಎಂದರೆ ಕೆ ಪಿ ಟಿ ಸಿ ಎಲ್ ನವರು ಮಾಡುವುದು ಇಷ್ಟೆ ಈ ಮೊದಲು ಇಂಟರೆಸ್ಟ್ ಫ್ರೀ ಲೋನ್ ಇತ್ತು 80% ಸಬ್ಸಿಡಿ ಇತ್ತು, ರೇವಣ್ಣನವರೆ, ಈ ಮೊದಲು ನಾನು ಕೆ ಎಂ ಎಫ್ ಅಧ್ಯಕ್ಷನಾಗಿದ್ದಾಗ ಬೆಂಗಳೂರು ಡೈರಿಯಲ್ಲಿ ಸೋಲಾರ್ ಸಿಸ್ಟಂ ಹಾಕಲಾಗಿತ್ತು ನಿಮಗೆ ಎಲ್ಲಾ ಗೊತ್ತಿದ್ದರೂ ಆ ಕಡೆಗೆ ತಾವೇಕೆ ಆಲೋಚನೆಯನ್ನು ಮಾಡುತ್ತಿಲ್ಲವೆಂದು ನಾನು ಕೇಳಬಯಸುತ್ತೇನೆ

ಪ್ರಮುಖವಾಗಿ solar houseಗಳನ್ನು ನೋಡುವುದಕ್ಕೆ ಹೋಗಬೇಕು ಮಾನ್ಯ ಸಿದ್ಧರಾಮಯ್ಯನವರೆ, ಮಲೇಶಿಯಾದಲ್ಲಿ ಅಲ್ಲಿ enitre roof design ಮಾಡಿದ್ದಾರೆ ಹಾಗೆ ಮಾಡಿದರೆ ನಿಮಗೆ power ಅಗತ್ಯವೇ ಬರುವುದಿಲ್ಲ ಇದನ್ನೆಲ್ಲಾ ಮಾಡುವುದಕ್ಕೆ ನಿಮಗೆ ಎಷ್ಟು ವರ್ಷ ಬೇಕು? ಕನಿಷ್ಟ ನಮ್ಮ ಮನೆಯಲ್ಲಿ ಆಗಲಾದರೂ current ಉಪಯೋಗಿಸುವುದನ್ನು ಕಡಿಮೆ ಮಾಡಬಹುದು ಒಂದು ಸ್ವಲ್ಪ subsidized ಮಾಡಿ ನಿಮ್ಮ power ಉಳಿಸಿ ಹಳ್ಳಿಯಲ್ಲಿರುವವರು solar ಮಾಡಲಿ, ನೀವು ಕೊಡಿ ದುಡ್ಡು ನೀವು ಇಲ್ಲಿ apartment ಕಟ್ಟುವವರಿಗೆ ಇಷ್ಟು unit ಅನ್ನು ನೀವು solarನಲ್ಲಿ generate ಮಾಡಿಕೊಳ್ಳಲೇಬೇಕು ಎಂದು insist ಮಾಡಿ ಬೆಂಗಳೂರು cityಯಲ್ಲಿ ಇರುವವರಿಗೆ ಸ್ವಂತ generation ಮಾಡಿಕೊಳ್ಳಿ ಎಂದು ಹೇಳಿ

ಬೇರೆ ಕಡೆಯಲ್ಲಿರುವವರಿಗೆ ಹೇಳಲಿ But you have confined ಎಲ್ಲಾ ನೀರು ಮತ್ತು current ಅನ್ನು ಎಲ್ಲಾ ತಂದು ನೀವು factoryಗಳಿಗೆ, T V ನೋಡುವುದಕ್ಕೆ current ಕೊಟ್ಟುಬಿಟ್ಟರೆ, ಅಲ್ಲಿ ನಾವು ಹೇಗೆ ಬದುಕುವುದು? ನಿಮ್ಮ ತಂದೆಯವರು ಬರೆದ ಮಸ್ತಕ ಏನಾಯಿತು? ಏಕೆ ಓದಲಿಲ್ಲ? ನೀವು ಎಲ್ಲಾ ಓದಿದ್ದೀರಿ ಇಲಾಖೆಯಲ್ಲಿ ಇಡುವುದು ಎಲ್ಲಾ ಗೊತ್ತು ರೇವಣ್ಣ, ನೀವು ಆ ಮಸ್ತಕವನ್ನು ಓದುವುದನ್ನು ಏಕೆ ಮರೆತುಬಿಟ್ಟಿರಿ "ಕತ್ತಲಲ್ಲಿ ಕರ್ನಾಟಕ ಎನ್ನುವ ಮಸ್ತಕವನ್ನು ಓದುವುದನ್ನು ಮರೆತುಬಿಟ್ಟರು ಇನ್ನೊಂದು ಮಸ್ತಕ ಮರೆತುಬಿಟ್ಟರು "ಭೂಗಳ್ಳರ ವಿರುದ್ಧ ಹೋರಾಟ SEZ ಮಾಡಲಿಕ್ಕೆ ಹೊರಟರು ಯಾರು ಕೂಡ ರೈತರ ಜಮೀನನ್ನು ಒಂದು ಇಂಚು ತೆಗೆದುಕೊಳ್ಳಕೂಡದು ಭೂಗಳ್ಳರು, ನನ್ನ ಜೀನವದ ಆಕಾಂಕ್ಷೆ ಈ ಭೂಗಳ್ಳರನ್ನು ನೆಲಸಮ ಮಾಡುವುದು ಎಂದು ಹೇಳಿದರು ಕೋಲಾರ ಜಿಲ್ಲೆ ಮುಳುಗಿಸುವುದಕ್ಕೆ ಹೊರಟುಬಿಟ್ಟರಿ ಒಂದು ಮಾತು ನಿನ್ನೆ ಆಡಿದ್ದಿರಿ ನಾನು ಏನು ಆಡಿದ್ದೇನೆ ಅದು ಪ್ರಮಾಣ, ಅದರ ಆಧಾರದ ಮೇಲೆ ಜನ ಓಟು ಕೊಟ್ಟಿದ್ದಾರೆ 59 ಜನರನ್ನು ಗೆಲ್ಲಿಸಿದ್ದು, ನಿಮಗೆ ಅಧಿಕಾರ ಮಾಡುವುದಕ್ಕೆ ಕೊಟ್ಟಿಲ್ಲ ನಾವೇ ಗೆದ್ದಿರುವುದು ರಾಜ್ಯವನ್ನು ಆಳುವುದಕ್ಕೆ ಎಂದು ಭ್ರಮೆಯಲ್ಲಿ ಬಕುಕಿಕೊಂಡು ಬಿಟ್ಟಿರಿ ನಿಮ್ಮನ್ನು ಆಳುವುದಕ್ಕೆ ಯಾರು ಗೆಲ್ಲಿಸಿದ್ದಾರೆ? You are just 59 ಯಾರ್ಯಾರದೋ ಜೊತೆಯಲ್ಲಿ ಒಡಂಬಿಕೆ ಮಾಡಿಕೊಂಡು, ಯಾರ್ಯಾರದೋ ಜೊತೆಯಲ್ಲಿ ಮಲಗಿಕೊಂಡು ನಾನು ಸಂಸಾರಸ್ಥ ಗೃಹಸ್ಥ ಎಂದು ಹೇಳಿದರೆ ನಾವು ಏನು ಹೇಳುವುದು? ದೇಶದ ಸುದ್ದಿ ಬಿಡಿ, ಇಲ್ಲಿಯವರನ್ನು ಮಾತನಾಡೋಣ ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆ ಮೇಲೆ ಮಾನ್ಯ ರೇವಣ್ಣನವರು ಇಟ್ಟಿರುವ ಡಿಮಾಂಡ್ಸ್ ಬಗ್ಗೆ ನಾವು ಮಾತನಾಡುತ್ತಿರುವುದು ಈಗ ಕೊಟ್ಟಿರುವುದನ್ನು ಸದ್ಭಳಕೆ ಮಾಡಿಕೊಳ್ಳಿ ಮುಂದೆ ಚುನಾವಣೆಗಳು ಬಂದರೆ ನಾವು ಹೇಳುತ್ತೇವೆ ನೋಡಪ್ಪ, ನಮ್ಮ ತಾಲ್ಲೂಕು ಹಾಳಾಗುವುದಕ್ಕೆ ಇಂತಿಂತಹವರು ಕಾರಣ, ಮುಂದೆ ಒಳಗೆ ಬರದ ಹಾಗೆ ನೋಡಿಕೊಳ್ಳಿ ಎಂದು ಹೇಳುವುದಕ್ಕಾಗುತ್ತದೆ ಇವನ್ನು ಅಲ್ಲಿಗೆ ತೆಗೆದುಕೊಂಡು ಹೋಗುತ್ತೇವೆ ನಮ್ಮನ್ನೇನು ಮುಟ್ಠಾಳರು ಎಂದು ಮಾಡಿಕೊಂಡಿರಾ? ನಾವು ಇದನ್ನೆ ಮಾಡುತ್ತೇವೆ ನಾವು ಅದನ್ನೇ ಮಾಡಿಕೊಂಡು ರಾಜಕೀಯದಲ್ಲಿ ಬದುಕಿರುವವರು ಕ್ಷೇತ್ರ ನನ್ನದಲ್ಲ ನೀವು ತಿಳಿದುಕೊಂಡಿರಬಹುದು, ಹೊಳೆನರಸೀಮರ ನಿಮ್ಮದು ಎಂದು ಇರಬಹುದು, ನೀವು ವ್ಯವಸ್ಥೆ ಮಾಡಿಕೊಂಡಿದ್ದೀರಿ, ಇನ್ನೊಂದು ಐದಾರು ಏಳೆಂಟು election ಏನಾದರೂ ಸೋಲದ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದೀರಿ, ಸಂತೋಷ, ಗೆಲ್ಲಿರಿ ನಾಲ್ಕೈದು ಜನರ ಜೊತೆ ನೀವೊಬ್ಬರು ಶಾಶ್ವತವಾಗಿ ಇಲ್ಲಿರುವಂತಹ ಸ್ಥಿತಿ ಬಂದಿದೆ ಮಾಡಿಕೊಳ್ಳಿ ನಮಗೆ ಆ ಶಕ್ತಿ

ಇಲ್ಲ ಪ್ರಕಾಶ್ ಸಾಹೇಬರಿಗೂ ಇಲ್ಲ ಯಡಿಯೂರಪ್ಪನವರು ಸೋತು ಸಾಕಾಗಿದ್ದಾರೆ ನಮಗೆ ಆ ಶಕ್ತಿ ಇಲ್ಲ ಪಾಪ, ಜನಗಳ ಮುಂದೆ ಏನಾದರೂ ಹೇಳುವ ಹಾಗೆ ಮಾಡಿ ಸಾರ್ ಒಳ್ಳೆಯ ಸರ್ಕಾರ ಇತ್ತು ಕೈ ತುಂಬ ದುಡ್ಡು ಇತ್ತು ಕ್ಷೇತ್ರಕ್ಕೆ ಎಲ್ಲಾ ಕೆಲಸ ಮಾಡಿದೆವು, ರಾಜ್ಯವೆಲ್ಲಾ ಒಂದೇ ದೃಷ್ಟಿಯಲ್ಲಿ ನಡೆಯಿತು, ಎಲ್ಲ ಕಡೆ ಸಮಗ್ರವಾಗಿ ಅಭಿವೃದ್ಧಿಯಾಯಿತು ಎಂದು ಹೇಳುವ ಹಾಗೆ ಮಾಡಿ Growthಗೆ ವ್ಯತ್ಯಾಸ ಏನು ಎನ್ನುವುದನ್ನು ನಾನು ನಿನ್ನೆ ಇದನ್ನೇ ಮಾತನಾಡಿದ್ದು Growth can be at any point, at any range and at any level But development has to be from the bottom ಅಭಿವೃದ್ಧಿಗೆ ಹಾಗೂ ಬೆಳವಣಿಗೆಗೆ ಅದೇ ವ್ಯತ್ಯಾಸ ನಿಮ್ಮ ರಾಜ್ಯ ಅಭಿವೃದ್ಧಿಯಾಗುತ್ತಿಲ್ಲ, ನಾಶವಾಗುತ್ತಿದೆ Growth ಆಗಿದೆ Tax ಚೆನ್ನಾಗಿ ಬರುತ್ತಿದೆ Revenue ಚೆನ್ನಾಗಿ ವಸೂಲಾಗುತ್ತಿದೆ ಕಂದಾಯ ಚೆನ್ನಾಗಿ ಕಟ್ಟುತ್ತಿದ್ದಾರೆ ಒಳ್ಳೊಳ್ಳೆಯ ಅಧಿಕಾರಿಗಳೂ ಇದ್ದಾರೆ ಕದ್ದು ಹೋಗುತ್ತಿರುವ ಮಾಲುಗಳನ್ನು ಹಿಡಿದುಕೊಡುತ್ತಿದ್ದಾರೆ ಆದರೆ ಬಳಕೆ ಎಲ್ಲಿ ಆಗುತ್ತಿದೆ? Where are you investing that amount? Investment ಆಗಬೇಕು ಬರೀ expenditure ಆದರೆ ಆಗುವುದಿಲ್ಲ You are not doing anything at the capital investment level at all ನಾಳೆ ಈ ರಾಜ್ಯದಲ್ಲಿ ನೀವು ಯಾರಿಗೆ invest ಮಾಡಬೇಕು? ನಮಗೆ, ಹಳ್ಳಿಯಲ್ಲಿರುವ ರೈತರಿಗೆ ನನ್ನ economic level elevate ಆದಾಗ, ನಾನು ನನ್ನ ಕಾಲಮೇಲೆ ನಿಂತುಕೊಳ್ಳುತ್ತೇವೆ ಹೋಗಯ್ಯ ಯಾರು ನನಗೆ ಹೇಳುತ್ತೀರಿ ಎಂದಾಗ ಅಭಿವೃದ್ಧಿ ಆಗಿದ್ದೀರಿ ಎಂದು ಹೇಳುವುದು ಅದನ್ನು growth ಎನ್ನುವುದು Volvo busನಲ್ಲಿ ಓಡಾಡಿಬಿಟ್ಟರೆ, airport ಮಾಡಿಕೊಂಡು ಬಿಟ್ಟರೆ, ಎಷ್ಟು ಜನ ನಿಮ್ಮ air portನಲ್ಲಿ ಓಡಾಡಬಹುದು ಎಷ್ಟು ಜನರನ್ನೂ ಓಡಾಡಿಸುತ್ತೀರಿ? ಇನ್ನು ಇದ್ದವರ ಗತಿ ಏನು? What is his purchasing power? ಇವತ್ತು ಹಳ್ಳಿಯಲ್ಲಿ ಒಬ್ಬ ಮನುಷ್ಯ ಮಾನ ಮರ್ಯಾದೆಯಾಗಿ ಜೀವನ ಮಾಡುವುದಕ್ಕೆ ಆಗುತ್ತದೆಯಾ? ಅಕ್ಕಿ ಒಂದು ಕೊಟ್ಟುಬಿಟ್ಟಿರಿ ಬೇಳೆ ಎಲ್ಲಿಂದ ತಂದು ಕೊಡುತ್ತೀರಿ? ಬೆಲ್ಲ ಎಲ್ಲಿಂದ ತಂದುಕೊಡುತ್ತೀರಿ? ಇವತ್ತು ಬೇಳೆಗೆ rate ಎಷ್ಟು? ಒಂದು ಕೆಜಿ ಬೇಳೆಗೆ 65 ರಿಂದ 70 ರೂಪಾಯಿ, ಅದು ನಿಮಗೆ ಗೊತ್ತಿರಬೇಕು ಅವನು ಸಾಂಬಾರಿಗೆ ಬೇಳೆಯನ್ನು ಹೇಗೆ ಕೊಂಡುಕೊಳ್ಳುತ್ತಾನೆ? ಅವನು ನೀವು ಕೊಟ್ಟಿರುವ ಅಕ್ಕಿ ಜೊತೆ ತಿನ್ನುವುದಕ್ಕೆ ಏನು ಕೊಂಡುಕೊಳ್ಳುತ್ತಾನೆ? oil ಹೇಗೆ ಕೊಳ್ಳುತ್ತಾನೆ? ಇದೆಲ್ಲಾ ಆಗುವವರೆಗೆ ನೀವು ರಾಜ್ಯವನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗಿಬಿಟ್ಟಿದ್ದೇವೆ, ಜನ ಮೆಚ್ಚಿದ್ದಾರೆ, ಜನ ಮೆಚ್ಚಿದ್ದಾರೆ ಎಂದು ಆ ಭ್ರಮೆಯಲ್ಲಿ

ಬದುಕುವುದನ್ನು ದಯಮಾಡಿ ಬಿಟ್ಟುಬಿಡಿ ಜನ ಯಾರನ್ನು ಮೆಚ್ಚಿಲ್ಲ ಮೂಗರಾಗಿಬಿಟ್ಟಿದ್ದಾರೆ ಸುಮ್ಮನೆ ಇದ್ದಾರೆ ನೀವು 4% ಎಂದರೂ ಸುಮ್ಮನೆ ಇರುತ್ತಾರೆ, ನೀವು 6% ಎಂದರೂ ಸುಮ್ಮನೆ ಇರುತ್ತಾರೆ ನೀವು waive ಮಾಡಿದ್ದೇವೆ ಎಂದರೂ ಸುಮ್ಮನೆ ಇರುತ್ತಾರೆ, waive ಮಾಡಿಲ್ಲ ಎಂದರೂ ಸುಮ್ಮನೆ ಇರುತ್ತಾರೆ ಸಾಲ ಕೊಡದೇ ಇದ್ದರೂ ಸುಮ್ಮನೆ ಇರುತ್ತಾರೆ ಯಾರು ರೊಚ್ಚಿಗೆ ಎದ್ದಿಲ್ಲವಲ್ಲ ಇಡೀ ಕಾರೀಫ್ ಲೋನ್ ಒಬ್ಬರಿಗೂ ಕೊಟ್ಟಿಲ್ಲ ನಾನು, ಮಾನ್ಯ ಪಾಟೀಳ್, ಮಾನ್ಯ ಶ್ರೀರಾಮರೆಡ್ಡಿಯವರು ಇಲ್ಲಿ ನಿಂತುಕೊಂಡಾಗ ನಾನು ದೊಡ್ಡವರ ಪರವಾಗಿಲ್ಲ 25 ಸಾವಿರ ರೂಪಾಯಿಯೊಳಗೆ ಸಾಲ ಮಾಡಿದವರಿಗೆ ಮಾತ್ರ ನಾನು ರಿಯಾಯಿತಿ ಕೊಡುತ್ತೇನೆ ಎಂದು ಹೇಳಿದಿರಿ ಸನ್ಮಾನ್ಯ ಯಡಿಯೂರಪ್ಪನವರೇ, 25 ಸಾವಿರದೊಳಗೆ ಸಾಲ ತೆಗೆದುಕೊಂಡವರಿಗೆ ತಾವೇನು ಹಣ ತುಂಬಬೇಕೆಂದು ಇದ್ದೀರಿ, ಅವರ್‍ಯಾರಿಗೂ ಈ ವರ್ಷ ಸಾಲ ಸಿಕ್ಕಿಲ್ಲ you have killed him ತಾವು ಅವರನ್ನು ಪರೋಕ್ಷವಾಗಿ ಕೊಲ್ಲುತ್ತಿದ್ದೀರಿ ಈ ವರ್ಷದ ಮಟ್ಟಿಗೆ ಕೊಂದು ಬಿಟ್ಟಿದ್ದೀರಿ DCC Bankನವರನ್ನು, Apex Bankನವರನ್ನು ಕರೆಸಿ ಎಂದು ಹೇಳುವುದಕ್ಕೂ ನಿಮಗೆ ದಮ್ಮಿಲ್ಲ ನಿಮ್ಮ ಹತ್ತಿರ ಕೊಡುವುದಕ್ಕೂ ಪೈಸೆ ಇಲ್ಲ ಈ ಸ್ಥಿತಿಯಲ್ಲಿ ನೀವೇನು ಸರ್ಕಾರ ನಡೆಸುತ್ತಿದ್ದೀರಿ, do you fit to call yourself a very good Government? ಮಾನ್ಯ ಅಧ್ಯಕ್ಷರೆ, ನಾನು ಬಹಳ ನೊಂದು ಹೇಳುತ್ತಿದ್ದೇನೆ ಈ ಸರ್ಕಾರ ಏನು ಬೆನ್ನು ತಟ್ಟಿಕೊಂಡು ಭಾಷಣ ಮಾಡುತ್ತಾರೆ ಪೈಪೋಟಿಗೆ ಮಾಡುತ್ತಾರೆ ರೇವಣ್ಣನವರ ಪಾರ್ಟಿಯವರು ಹೋಗುವುದಕ್ಕೆ ಮೊದಲು ಯಡಿಯೂರಪ್ಪನವರ ಪಾರ್ಟಿಯವರು ಹೋಗಬೇಕು ಯಡಿಯೂರಪ್ಪನವರು ಹೋಗುವುದಕ್ಕೆ ಮೊದಲೇ ರೇವಣ್ಣ ಜನಗಳ ಹತ್ತಿರ ಹೋಗಬೇಕು ಎಂದು ನಮ್ಮ ಶಬ್ದ ಪ್ರಮಾಣ ಸೀತೆ ಪತಿವ್ರತೆ, ಸೀತೆ ಪತಿವ್ರತೆ ಹೇಳಿ, ಹೇಳಿ, ಯಾರೂ ಕೂಡ ನಮ್ಮ ಹೆಂಗಸರು ಪತಿವ್ರತೆ ಅಲ್ಲವೆ? ಎಂದು ಪ್ರಶ್ನೆ ಮಾಡಿ ಯಾರೂ ಕೇಳಲಿಲ್ಲವಲ್ಲ ನಮ್ಮನ್ನು ಯಾರಾದರೂ ಕೇಳಿ ಪತಿವ್ರತೆ ಹೆಸರು ಹೇಳು ಎಂದರೆ ಏನು ಹೇಳುತ್ತೇವೆ ಸೀತೆ ಪತಿವ್ರತೆ ಎಂದು ಹೇಳುತ್ತೇವೆ ನಿಮ್ಮನೆಯವರು ಎಂದರೆ ನಮಗೆ ಯೋಚನೆ ಮಾಡುವುದಕ್ಕೆ ಗೊತ್ತೇ ಇಲ್ಲ ಹಾಗೆ ಇವರಿಬ್ಬರೂ ಜನರನ್ನು ನಂಬಿಸುವುದಕ್ಕೆ ಹೊರಟಿದ್ದಾರೆ ನಾನು ಪತಿವ್ರತೆ, ನಾನು ಪತಿವ್ರತೆ ಎಂದು ಹೇಳಿ

ಶ್ರೀ ಕೆ ಶ್ರೀನಿವಾಸ ಗೌಡ – ಅಜ್ಜಿಗಳಾದ ಮೇಲೆ ಎಲ್ಲರೂ ಪತಿವ್ರತೆಗಳೆ?

ಶ್ರೀ ಜೆ ಸಿ ಮಾಧುಸ್ವಾಮಿ ಅಜ್ಜಿಗಳಾದ ಮೇಲೆ ಪತಿವ್ರತೆಗಳಲ್ಲ ಅವಳು ಗರತಿ ನಿಮಗೆ ಗರತಿಗೂ ಪತಿವ್ರತೆಗೂ ವ್ಯತ್ಯಾಸ ಗೊತ್ತಿಲ್ಲವಲ್ಲ ಅಂತಹ

ಒಂದು ಬಹಳ ಕೆಟ್ಟ ಸ್ಥಿತಿಯಲ್ಲಿ ಸರ್ಕಾರ ಹೋಗುತ್ತಿದೆ ಒಳ್ಳೆಯ ಸಂಪದ್ಭರಿತವಾಗಿರುವಂತಹ ಕಾಲದಲ್ಲಿ ಹಣವನ್ನು ಯತೇಚ್ಛವಾಗಿ ಪೋಲು ಮಾಡುತ್ತಾರೆ ಎನ್ನುವಂತಹ ನೋವು ನಮಗೆ ಆತ್ಮದಲ್ಲಿದೆ ನಾವು ಟೀಕೆಗೋಸ್ಕರ ಟೀಕೆ ಮಾಡುತ್ತಿಲ್ಲ ತಾವು ಎಚ್ಚೆತ್ತುಕೊಳ್ಳಬೇಕು ಏನಾದರೂ ಮಾಡಿ ರಾಜ್ಯವನ್ನು ಅಭಿವೃದ್ಧಿಯಾಗುವ ಕಡೆ ತೆಗೆದುಕೊಂಡು ಹೋಗಬೇಕು ರಸ್ತೆಗಳು, ತಾವೇ ಹೇಳೀಬಿಟ್ಟಿದ್ದೀರಿ, ನಿಮ್ಮ economic growthಗೆ ಮಾರ್ಗಗಳು ಮುಖ್ಯ ಎಂದು ಹೇಳಿದ್ದೀರಿ ಆ ರಸ್ತೆಗಳನ್ನು ಮಾಡಬೇಕಾದರೆ ನೀವು collegue ಗೆ ಹೇಳಬೇಕು Party, ಜಾತಿ ಎಲ್ಲಾ ಬಿಟ್ಟುಬಿಡಪ್ಪ, ಇಡೀ ಕರ್ನಾಟಕ ನಿಮ್ಮ ಜಾತಿ ಎಂದು ತಿಳಿದುಕೊಳ್ಳಪ್ಪ ಎಂದು ರೇವಣ್ಣನವರಿಗೆ ಒಂದು advice ಮಾಡಿ ಯಡಿಯೂರಪ್ಪನವರೆ ಕೇಳಲ್ಲ ನೀವೇ ಅವರಿಗೆ ಹೆದರಿಕೊಂಡು ಇದ್ದೀರಿ ಆದರೆ ಹೇಳುವುದು ಹೇಳಿ, ದಿನಾಂಕ you are the Finance Minister ಆಮೇಲೆ ಏನಾಗುತ್ತದೆ ನೋಡೋಣ ಇಲ್ರಿ, ರೇವಣ್ಣ ಹೀಗೆಲ್ಲಾ ಮಾಡಬಾರದು ಎಂದು ಒಂದು advice ಮಾಡಿ ಬೇರೆಯವರಿಗೂ ಒಂದೊಂದು ಮಾತು ಕಳುಹಿಸಿ ಎಂದು ಹೇಳಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು . ಈಗ ಸಿದ್ದು ಸವದಿಯವರು ಮಾತನಾಡಿ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಮಾತನಾಡುವಾಗ ಮಾನ್ಯ ಯಡಿಯೂರಪ್ಪನವರು ಕೋಲಾರ ಜಿಲ್ಲೆಯಲ್ಲಿ 100% drip Irrigation ಸಂಬಂಧಪಟ್ಟ ಮಾಹಿತಿ ಬಗ್ಗೆ ನಾನು ಅಷ್ಟೆ ಹೇಳುವುದು

ಅಧ್ಯಕ್ಷರು ನಿನ್ನೆ ಸಾಕಷ್ಟು ಮಾತನಾಡಿದ್ದೀರಿ

ಶ್ರೀ ಕೆ ಶ್ರೀನಿವಾಸ ಗೌಡ . ನಿನ್ನೆ ಇದರ ಬಗ್ಗೆ ಬಂದು ತಾವು ಹೇಳಿ ನಾವು ಹಣ ಕೊಡುತ್ತೇವೆಂದು ಹೇಳಿದ್ದಾರೆ ನಿನ್ನೆ ಅವರು ಹೇಳಿದ್ದಾರೆ

ಅಧ್ಯಕ್ಷರು · ಮುಂದಿನ ಬೆಂಚಿನಲ್ಲಿ ಯಾರ‍್ಯಾರು ಇದ್ದೀರಿ, ಅವರದ್ದೇ ಆಗಿಹೋಯಿತು

ಶ್ರೀ ಕೆ. ಶ್ರೀನಿವಾಸಗೌಡ : ನಿನ್ನೆ ಅವರು ಹೇಳಿದ್ದಾರೆ ಇಷ್ಟೆ ಹೇಳುವುದು, ನಾನು ಬೇರೆ ಏನೂ ಮಾತನಾಡುವುದಿಲ್ಲ

ಅಧ್ಯಕ್ಷರು · ಹೇಳಿ, ಒಂದು ನಿಮಿಷದಲ್ಲಿ ಮುಗಿಸಿ

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ ನಿನ್ನೆ ಮಾತನಾಡುವಾಗ drip irrigationಗೆ ಕೋಲಾರ ಜಿಲ್ಲೆಯಲ್ಲಿ ಇನ್ನು ಹಣ ಬಿಡುಗಡೆಯಾಗಿಲ್ಲವೆಂದು ಹೇಳಿದ್ದೆನು ಮಾನ್ಯ ಯಡಿಯೂರಪ್ಪನವರು ನಾನು ಪೈಸೆ ಸಮೇತ release

ಮಾಡಿದ್ದೇನೆ ಎಂದು ಹೇಳಿದರು 2006-07ರ ಮಾರ್ಚ್ ಅಂತ್ಯಕ್ಕೆ ಒಂದು ರೂಪಾಯಿ ಬಾಕಿ ಇದ್ದರೆ ಹೇಳಿ ನಾನು ನಿಮಗೆ ಉತ್ತರ ಕೊಡುತ್ತೇನೆಂದು ಹೇಳಿದರು ನಮ್ಮ ಕೋಲಾರ ಜಿಲ್ಲೆಗೆ 2 276 ಅರ್ಜಿಗಳು ಬಂದಿವೆ ಅದರಲ್ಲಿ ಸಹಾಯಧನವನ್ನು 1,206 ಅರ್ಜಿಗಳಿಗೆ ಸಹಾಯಧನ ಕೊಟ್ಟಿರುವುದು ಎಷ್ಟೆಂದರೆ 4,94,10,000 ರೂಪಾಯಿ ಇನ್ನು 1,070 ಅರ್ಜಿಗಳು ಉಳಿದಿವೆ ನಮಗೆ 2006-07ಕ್ಕೆ ಇನ್ನು ಬೇಕಾಗಿರುವ ಅನುದಾನ 4,65,58,000 ರೂಪಾಯಿಗಳು 2007-2008ನೇ ಸಾಲಿಗೆ ಇನ್ನು 274 ಅರ್ಜಿಗಳು ಬಂದಿವೆ ಇದಕ್ಕೆ ಬೇಕಾಗಿರುವ ಹಣ 1,26,000,00 Action planನಲ್ಲಿ ಇದಕ್ಕೆ 246 88 ನಮ್ಮ ಜಿಲ್ಲೆಯದು ಒಂದು ಮಾತ್ರ ಕಳುಹಿಸಿದಾರೆ ನೀವು ನಿನ್ನೆ ಚೆನ್ನಾಗಿ ಮಾತನಾಡಿದಿರಿ ಹೋದ ವರ್ಷದ್ದು ಇಷ್ಟು ಹಣ ಕೊಡಬೇಕು ಇನ್ನು ಹಣ ಕೊಟ್ಟಿಲ್ಲ ಆ ಹಣವನ್ನು ಬಿಡುಗಡೆ ಮಾಡುವುದನ್ನು ಹೇಳಿಬಿಡಲಿ

ಅಧ್ಯಕ್ಷರು : ಆಯಿತು, ಎಲ್ಲಾ ನಿಮ್ಮದೇ ಆಗಿಹೋಯಿತು ಇಲ್ಲಿ ಯಾರೂ ಬೇರೆಯವರು ಮಾತನಾಡುವ ಹಾಗೆ ಇಲ್ಲ ಕೊಡುತ್ತಾರೆ ಕುಳಿತುಕೊಳ್ಳಿ

ಶ್ರೀ ಕೆ ಶ್ರೀನಿವಾಸ ಗೌಡ ನಿನ್ನೆ ಮಾನ್ಯ ಯಡಿಯೂರಪ್ಪನವರು ಹೇಳಿದರು ನೀವು ನಾಳೆ ಒಂದು ಮಾತು ಹೇಳಿ ನಾನು ಹೇಳುತ್ತೇವೆಂದು ಹೇಳಿದ್ದರು

ಅಧ್ಯಕ್ಷರು · ಇದು ಏನು? ಈಗ ನಾನು ಮಾನ್ಯ ಸದಸ್ಯರನ್ನು ಮಾತನಾಡಲು ಕರೆದಿದ್ದೇನೆ ಅವರು ಮಾತನಾಡುತ್ತಾರೆ ತಾವು ಕುಳಿತುಕೊಳ್ಳಿ

ಶ್ರೀ ಕೆ ಶ್ರೀನಿವಾಸಗೌಡ . ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮಾತು ಕೊಟ್ಟಿದ್ದರು ' ಅವರು ಉತ್ತರ ಹೇಳಲಿ

ಅಧ್ಯಕ್ಷರು ನಾನು ಅವರನ್ನು ಎಬ್ಬಿಸಿ ನಿಲ್ಲಿಸಿ, ಮಾತನಾಡಿ ಎಂದು ಹೇಳುವುದಕ್ಕೆ ಆಗುತ್ತದಾ?

ಶ್ರೀ ಕೆ ಶ್ರೀನಿವಾಸಗೌಡ . ಮಾನ್ಯ ಅಧ್ಯಕ್ಷರೆ, ಅವರು ಮಾತು ಕೊಟ್ಟಿದ್ದರು

ಅಧ್ಯಕ್ಷರು : ಮಾತು ಕೊಡುತ್ತಾರೆ ಅವರು ಉತ್ತರ ಕೊಡುವಾಗ ಹೇಳುತ್ತಾರೆ

ಶ್ರೀ ಕೆ ಶ್ರೀನಿವಾಸಗೌಡ . ಮಾನ್ಯ ಯಡಿಯೂರಪ್ಪನವರೆ, ನಾನು ಕೇಳಿದ ಪ್ರಶ್ನೆಗೆ ನೀವು react ಮಾಡುತ್ತೀರಾ ಇಲ್ಲವಾ?

ಅಧ್ಯಕ್ಷರು ಮಾನ್ಯ ಸಿದ್ದು ಸವದಿಯವರೆ, ಮಾತನಾಡಿ

ಶ್ರೀ ಕೆ ಶ್ರೀನಿವಾಸ ಗೌಡ · ಮಾನ್ಯ ಯಡಿಯೂರಪ್ಪನವರಿಗೆ ಇವತ್ತು ಕಿವಿಯೇ ಕೇಳಿಸಲಿಲ್ಲ, ಪಾಪ

ಅಧ್ಯಕ್ಷರು ಅವರು ಉತ್ತರ ಕೊಡುವಾಗ ನಿಮಗೆ ಹೇಳುತ್ತಾರೆ

ಶ್ರೀ ಕೆ ಶ್ರೀನಿವಾಸ ಗೌಡ ಅವರು ನಿನ್ನೆ ಹೇಳುವಾಗ ಬಹಳ ಜೋರಾಗಿ ಒಂದು ರೂಪಾಯಿ ಬಾಕಿಯಿಲ್ಲವೆಂದು ಹೇಳಿದರು ಇವತ್ತು ಬಾಕಿ ಇರುವುದನ್ನು ಹೇಳಿದರೆ, ಉತ್ತರ ಕೊಡುವುದಕ್ಕೆ ಆಗಲಿಲ್ಲ ಬರೀ ರೈಲು ಬಿಡುವುದರಲ್ಲಿ ಮಾನ್ಯ ಯಡಿಯೂರಪ್ಪನವರು ಬಹಳ ಮುಖ್ಯವಾಗಿ ಇದ್ದಾರೆ

ಅಧ್ಯಕ್ಷರು ಮಾನ್ಯ ಸಿದ್ಧು ಸವದಿಯವರೆ, ಮಾತನಾಡಿ

ಶ್ರೀ ಸಿದ್ಧು ಸವದಿ (ಜಮಖಂಡಿ) ಮಾನ್ಯ ಅಧ್ಯಕ್ಷರೆ, ನಮ್ಮ ಸಮ್ಮಿಶ್ರ ಸರ್ಕಾರ ಈ ರಾಜ್ಯದಲ್ಲಿ, ಹಿಂದೆ ಯಾವ ಸರ್ಕಾರವೂ ಮಾಡದಂಥ ಅಭಿವೃದ್ಧಿ ಕೆಲಸವನ್ನು ಮಾಡಿದಂಥ ಉದಾಹರಣೆಯನ್ನು ನಾವು ನೂರಾರು ಕೊಡಬಹುದು ಆ ರೀತಿಯಾಗಿ ಈ ಸರ್ಕಾರದ ಆಡಳಿತದಿಂದ ನಮ್ಮ ರಾಜ್ಯದ ಜನತೆ ಬಹಳ ನೆಮ್ಮದಿಯಾಗಿ ಇದ್ದಾರೆ ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು ನಾನು ಒಂದೇ ಒಂದು ಉದಾಹರಣೆಯನ್ನು ಹೇಳಬಹುದು ಇದಕ್ಕೆ ಜವಳಿ ಇಲಾಖೆಯನ್ನು ತೆಗೆದುಕೊಂಡರೆ, ಇಂದಿನ ಸರ್ಕಾರವು ಮಾಡದಂಥ ಬಡ್ಡಿ ಮನ್ನಾ, ನಾಲಾ ಮನ್ನಾ ಹಾಗೂ ವಿದ್ಯುತ್ ಸಬ್ಸಿಡಿ, ಇಂಥಾ ಸವಲತ್ತುಗಳನ್ನು ನೇಕಾರರಿಗೆ ಒದಗಿಸಿಕೊಟ್ಟಿದ್ದರಿಂದ, ಈ ರಾಜ್ಯದ ನೇಕಾರರು ನೆಮ್ಮದಿಯ ನಿಟ್ಟುಸಿರು ಬಿಡುವಂಥಾ ಸಂಗತಿಯನ್ನು ನಾವು ಇವತ್ತು ಕಾಣುತ್ತಿದ್ದೇವೆ ಆ ರೀತಿಯಾಗಿರುವಂಥ ನೇಕಾರರಿಗೆ ಸವಲತ್ತುಗಳನ್ನು ಕೊಟ್ಟಿರುವಂಥಾದ್ದು, ಕಡು ಬಡವ ನೇಕಾರನಿಗೂ ಸಹ ಮುಟ್ಟಬೇಕಾದ ವಿಚಾರದಲ್ಲಿ, ನೇಕಾರರ ಸಮೂಹದಲ್ಲಿ ಕಡು ಬಡತನದಲ್ಲಿ ಜೀವನ ನಡೆಸುವ ನೇಕಾರನೆಂದರೆ ಕೈ ಮಗ್ಗ ನೇಕಾರ ಆಗಿದ್ದಾನೆ KHDCಯಲ್ಲಿ ಕೆಲಸ ಮಾಡುವಂಥ ನೇಕಾರನಾಗಿದ್ದಾರೆ ಆದರೆ ಸರ್ಕಾರದ ನಾಲ ಮನ್ನಾ ಆಗಲಿ, ಬಡ್ಡಿ ಮನ್ನಾ ಆಗಲಿ, ವಿದ್ಯುತ್ ರಿಯಾಯಿತಿಯಾಗಲಿ, ಯಾವ ಸವಲತ್ತುಗಳು ಈ ಕಡು ಬಡ ನೇಕಾರರಿಗೆ ಒಂದು ನಯಾ ಪೈಸೆಯ ಸೌಲಭ್ಯ ಸಿಕ್ಕಿಲ್ಲ ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ ಯಾರಿಗಾಗಿ ಈ ಯೋಜನೆಯನ್ನು ತರಲಾಗಿದೆಯೋ, ಅಂಥ ಕಡು ಬಡತನದಲ್ಲಿರುವಂಥ ಕೈ ಮಗ್ಗ ನೇಕಾರರಿಗೂ ಸಹಿತ ಈ ಸೌಲಭ್ಯಗಳು ಸಿಗುವಂತೆ ಆಗಬೇಕೆಂಬ ವಿನಂತಿಯನ್ನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ ಇನ್ನು ಕೃಷಿ ಇಲಾಖೆ ಬಗ್ಗೆ ಬಹಳಷ್ಟು ವಿಚಾರಗಳನ್ನು ನಿನ್ನೆ ದಿವಸ ಹಿರಿಯ ಸದಸ್ಯರುಗಳು ಮಾತನಾಡಿದರು ಅದರಲ್ಲೂ ವಿಶೇಷವಾಗಿ

ಬರಗಾಲದ ಬವಣೆಯಿಂದ ನಮ್ಮ ರಾಜ್ಯ ತತ್ತರಿಸುವುದನ್ನು ನಿಭಾಯಿಸಬೇಕು ನಮ್ಮ ರಾಜ್ಯದಲ್ಲಿ ಸಿಗುವಂಥ ನೀರನ್ನು ಸದ್ಬಳಕೆ ಮಾಡುವ ಬಗ್ಗೆ ವೈಜ್ಞಾನಿಕವಾಗಿ ಉಪಯೋಗ ಮಾಡುವುದರ ಮೂಲಕ ಇಡೀ ರಾಜ್ಯಕ್ಕೆ ಕುಡಿಯುವ ನೀರನ್ನು ಕೊಡಬಹುದು, ನೀರಾವರಿಯನ್ನು ಮಾಡಬಹುದೆಂಬ ವಿಚಾರವನ್ನು ನಮ್ಮ ಮಾಜಿ ಸಚಿವರಾದ ಶ್ರೀನಿವಾಸ ಗೌಡರು ಬಹಳ ಸುಂದರವಾಗಿ ಮಾತನಾಡಿದ್ದಾರೆ ನಾನು ಆಗಲೇ ಒಂದೆರಡು ಮಾತುಗಳನ್ನು ಹೇಳಿದ್ದೇವೆ ಗುಜರಾತ್ ರಾಜ್ಯದಂಥ ಒಂದೆರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ ಅದೇ ಪ್ರಕಾರ ನಮ್ಮ ರಾಜ್ಯದಲ್ಲಿ ಕೃಷ್ಣ ನದಿ ಪ್ರತಿ ವರ್ಷ ಮಳೆಗಾಲದಲ್ಲಿ ಸುಮಾರು ಎರಡು ತಿಂಗಳುಗಳಿಂದ ತುಂಬಿ ಹರಿಯುತ್ತಾ ಇದೆ ಈ ನದಿ ತುಂಬಿ ಹರಿದು ಯಥೇಚ್ಛವಾಗಿ ನೀರು ಸಮುದ್ರವನ್ನು ಸೇರುತ್ತಾ ಇದೆ ಆ ನದಿಯು ನೀರಿಗೆ ರಾಜ್ಯ ರಾಜ್ಯಗಳು ಹೊಡೆದಾಡುವ ಸ್ಥಿತಿಯನ್ನು ನೋಡಿದರೆ, ಕೃಷ್ಣಾನದಿ ದಂಡೆಯಲ್ಲಿರುವಂಥಾ ರೈತರು ನಗಬೇಕೋ, ಅಳಬೇಕೋ, ಒಂದು ಅರ್ಥವಾಗುವುದಿಲ್ಲ ನಮ್ಮ ಆಲಮಟ್ಟಿ ಡ್ಯಾಮ್‌ನ ಇವತ್ತಿನ ಕೆಪಾಸಿಟಿ 173 ಟಿ ಎಂ ಸಿ ಆದರೆ ಮಳೆಗಾಲದಲ್ಲಿ ನದಿಯಲ್ಲಿ ನೀರು ಹರಿದು ಹೋಗುವುದನ್ನು ನೋಡಿದರೆ, ಒಂದು ಲಕ್ಷ ಕ್ಯುಸೆಕ್ಸ್‌ನಿಂದ ಐದು ಲಕ್ಷ ಕ್ಯುಸೆಕ್ಸ್‌ನವರೆಗೆ ನೀರು ಆಲಮಟ್ಟಿ ಡ್ಯಾಮ್‌ನಿಂದ ಹರಿದು ಹೋಗುವ ಪ್ರಸಂಗವಿದೆ ನಾವು ಕಡಿಮೆ ಪ್ರಮಾಣದ ನೀರನ್ನು ಹಿಡಿದುಕೊಂಡರೂ, ಒಂದು ಲಕ್ಷ ಕ್ಯೂಸೆಕ್ಸ್ ನೀರನ್ನು ಹಿಡಿದುಕೊಂಡರೂ ದಿವಸಕ್ಕೆ ಹತ್ತಾರು ಟಿ ಎಂ ಸಿ ನೀರು ಹರಿದು ಹೋಗುತ್ತಾ ಇದೆ ನಮ್ಮ ಆಲಮಟ್ಟಿಗೆ ಬೇಕಾದ ನೀರು 10 15 ದಿವಸಗಳಲ್ಲಿ ಡ್ಯಾಮ್ ತುಂಬಿ ಹೋಗುತ್ತಾ ಇದೆ ಉಳಿದ ನೀರು ಯಥೇಚ್ಛವಾಗಿ ಹರಿದು ಸಮುದ್ರವನ್ನು ಸೇರುತ್ತಾ ಇರುವಂಥದ್ದನ್ನು ನಾವು ತಡೆದರೆ ಅಥವಾ ವೈಜ್ಞಾನಕವಾಗಿ ಲೆಕ್ಕ ಮಾಡಿ, ಯಾವ ರೀತಿಯಾಗಿ ಅದನ್ನು ಸದ್ಬಳಕೆ ಮಾಡಬೇಕೆನ್ನುವಂಥದ್ದರ ಬಗ್ಗೆ ನಮ್ಮ ರಾಜ್ಯದಲ್ಲಿ ಯೋಜನೆ ಮಾಡುವಂಥ ವ್ಯಕ್ತಿಗಳನ್ನು ಕೇಳಿಕೊಂಡು, ಈ ನೀರನ್ನು ಸದ್ಬಳಕೆ ಮಾಡಿಕೊಂಡರೆ ಇಡೀ ರಾಜ್ಯಕ್ಕೆ ಕೃಷ್ಣಾನದಿಯಿಂದ ನೀರನ್ನು ಕೊಡಬಹುದು ನಮ್ಮ ಕರ್ನಾಟಕ ರಾಜ್ಯಕ್ಕೆ ಕೃಷ್ಣಾನದಿ ನೀರು ಒಂದೇ ಸಾಕು ನಮ್ಮ ರಾಜ್ಯದಲ್ಲಿ ನೀರಾವರಿಯನ್ನು ಮಾಡುವುದಕ್ಕೆ, ಕುಡಿಯುವ ನೀರನ್ನು ಕೊಡುವುದಕ್ಕೆ ಅಂಥ ಯೋಜನೆಗಳನ್ನು ತರುವಂಥ ಕೆಲಸವನ್ನು ಆದ್ಯತೆಯ ಮೇಲೆ ತರುವಂಥದ್ದನ್ನು ಮಾಡಬೇಕು ನಮ್ಮ ರೈತರಿಗೆ ಇವತ್ತು ನಮ್ಮ ಸರ್ಕಾರ ಸಾಲ ಮನ್ನಾ ಮಾಡಿ, ಬಡ್ಡಿ ಮನ್ನಾ ಮಾಡಿದೆ, ಸುಸ್ತಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ ಎಲ್ಲಾ ಸಾಲಗಳ ಬಡ್ಡಿಯನ್ನು ಮನ್ನಾ ಮಾಡಿ, ರೈತರು ನೆಮ್ಮದಿಯ ನಿಟ್ಟುಸಿರು ಬಿಡುವ ವಾತಾವರಣ ನಿರ್ಮಾಣವಾಗಿದೆ ಹಿಂದೆ ಯಾವ ಸರ್ಕಾರವೂ ಮಾಡಲಿಲ್ಲ ಆ ರೀತಿ ರೈತರ ಬಗ್ಗೆ ಕಳಕಳಿ ಇರುವಂಥ

ನಮ್ಮ ಸರ್ಕಾರ, ಯಥೇಚ್ಛ ಸವಲತ್ತುಗಳನ್ನು ನಮ್ಮ ರೈತರು ಕಷ್ಟದಲ್ಲಿದ್ದಾರೆ ಅವನು ಹೆಂಡತಿ ಮಕ್ಕಳನ್ನು ಕರೆದುಕೊಂಡು ಭೂಮಿಯಲ್ಲಿ ದುಡಿದರೂ ಸಹಿತ, ಸಾಲದಿಂದ ಋಣಮುಕ್ತನಾಗಿಲ್ಲವೆಂಬ ದೃಷ್ಟಿಯಿಂದ ಈ ಸಾಲ ಮನ್ನಾ, ಬಡ್ಡಿ ಮನ್ನಾ ಸೌಲಭ್ಯವನ್ನು ಕೊಡಲಾಗಿದೆ ಇದೇ ರೀತಿ ರಾಜ್ಯದಲ್ಲಿ ಅನೇಕ ಸವಲತ್ತುಗಳನ್ನು ರಾಜ್ಯದಲ್ಲಿ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ, ಇದನ್ನು ಯಾವ ಸರ್ಕಾರವೂ ಮಾಡಿರಲಿಲ್ಲ ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆರವರ ಸರ್ಕಾರ ಇದ್ದಾಗ, ನೂರು ರೂಪಾಯಿಗಳನ್ನು ಮಾಡಿದ್ದರೆಂದು ಕೇಳಿದ್ದೇವೆ ಅದರ ನಂತರದ ಸರ್ಕಾರಗಳು ಅಸಹಾಯಕರ ಸಹಾಯಕ್ಕೆ ಬರಲಿಲ್ಲ ನಮ್ಮ ಸರ್ಕಾರ ಬಂದ 18 ತಿಂಗಳೊಳಗೆ ನೂರು ರೂಪಾಯಿಗಳಿದ್ದದ್ದನ್ನು 400 ರೂಪಾಯಿಗಳಿಗೆ ಮಾಡುವ ಮುಖಾಂತರ ಆ ಬಡ ಜನರ, ಅಸಹಾಯಕ ಜನರಿಗೆ ಸ್ವಾಭಿಮಾನದಿಂದ ಬದುಕುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸರ್ಕಾರ ಯಾವುದಾದರೂ ಇದ್ದರೆ, ಅದು ನಮ್ಮ ಸಮ್ಮಿಶ್ರ ಸರ್ಕಾರವಾಗಿದೆ ಇದರಿಂದ ಇನ್ನೊಂದು ಕಳಕಳಿಯ ಮನವಿ ಏನೆಂದರೆ, ಇದರಿಂದ ಮತ್ತೊಂದು ದುರಂತವಾಗುವುದಕ್ಕೆ, ಈ ರಾಜ್ಯದ, ಈ ದೇಶದ, ಅಭಿವೃದ್ಧಿಗೆ ದುರಂತವಾಗಲಿದೆ ಈ ರೀತಿ ನಾವು ಸವಲತ್ತುಗಳನ್ನು ಕೊಡುವುದರ ಮೂಲಕ, ಇಲ್ಲಿ ಹುಲಿ ಮರಿಗಳಿಗೆ ಬೇಟೆಯಾಡುವುದನ್ನು ನಾವು ಕಲಿಸುವುದಿಲ್ಲ ಅದು ಬೇಟೆಯಾಡಿದ್ದನ್ನು ತಿನ್ನುವುದು ಕಲಿಸುವುದರಿಂದ, ನಮ್ಮ ಸಾಮರ್ಥ್ಯ, ನಮ್ಮ ಶಕ್ತಿ ವ್ಯರ್ಥವಾಗುತ್ತಾ ಹೋಗುತ್ತಿರುವಂಥದ್ದನ್ನು ನಾವು ಕಾಣುತ್ತಿದ್ದೇವೆ ಅದಕ್ಕಾಗಿ ನಮ್ಮ ರೈತರಿಗೆ ಅವನ ಭೂಮಿಗೆ ನೀರು ಕೊಡಿ, ಅವನಿಗೆ ವಿದ್ಯುತ್ ಸಪ್ಲೈ ಮಾಡಿ, ಅವನು ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಟ್ಟರೆ ಸಾಕು ಅವನಿಗೆ ಇನ್ನು ಏನು ಕೈಯೆತ್ತಿ ಕೊಡುವುದು ಬೇಡ ಅವನಲ್ಲಿ ದುಡಿಯುವ ಸಾಮರ್ಥ್ಯವನ್ನು ಬೆಳೆಸಿ, ಅವರು ಸ್ವಾಭಿಮಾನದಿಂದ ಬದುಕುವುದಕ್ಕೆ, ಅವನ ಸಾಮರ್ಥ್ಯಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಸಾಕು ಅವನಿಗೆ ಸಹಾಯ, ಸವಲತ್ತುಗಳನ್ನು ಕೊಡುವುದರ ಮುಖಾಂತರ, ಈ ರಾಜ್ಯದ, ಈ ದೇಶದಲ್ಲಿ ಯಥೇಚ್ಛವಾಗಿ ಇರುವಂಥ ಮಾನವ ಶಕ್ತಿಯನ್ನು ನಾವು ನಿಸ್ಸಹಾಯಕರನ್ನಾಗಿ ಮಾಡುತ್ತೇವೆನೋ, ಎಂಬ ಒಂದು ಅಳುಕು ಎಲ್ಲೋ ಒಂದು ಕಡೆ ನಮ್ಮನ್ನು ಕಾಡುತ್ತಾ ಇದೆ ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ ಇವತ್ತು ನಾವು ರೇಷನ್ ಮುಖಾಂತರ ಆಹಾರ ಧಾನ್ಯವನ್ನು ಕೊಡುತ್ತಿದ್ದೇವೆ ಕೆಲವೊಂದು ಕುಟುಂಬಗಳನ್ನು ನಗರಗಳಲ್ಲಿ, ಹಳ್ಳಿಗಳಲ್ಲಿ, ನೋಡಬಹುದು ಅವರಲ್ಲಿ ಸಾಮರ್ಥ್ಯವಿದ್ದರೂ ಒಬ್ಬರೂ ಸಹಿತ ಕೆಲಸವನ್ನು ಮಾಡುವುದಿಲ್ಲ ಯಾವುದೇ ಅಭಿವೃದ್ಧಿ ಕೆಲಸಗಳಾಗಲಿ, ಒಕ್ಕಲುತನದ ಕೆಲಸವಾಗಲಿ, ಇನ್ನಿತರ ಕೆಲಸಗಳನ್ನು ಅವರು ಒಂದು ರೂಪಾಯಿಗಳಿಸುವಂಥ

ಕೆಲಸಗಳನ್ನು ಅವರು ಮಾಡುವುದಿಲ್ಲ ಅವರಿಗೆ ಸರ್ಕಾರ ಒಂದು ನೂರು ರೂಪಾಯಿಗಳನ್ನು ಕೊಟ್ಟರೆ, ಒಂದು ತಿಂಗಳು ಕುಳಿತುಕೊಂಡು ತಿನ್ನುವುದಕ್ಕೆ ಅಕ್ಕಿಯನ್ನು ಕೊಡುತ್ತಿದೆ, ಗೋಧಿಯನ್ನು ಕೊಡುತ್ತಿದೆ, ಎಲ್ಲವನ್ನು ಕೊಡುವಾಗ ನಾವು ಏಕೆ ದುಡಿಯಬೇಕೆಂಬ ದೃಷ್ಟಿಯಲ್ಲಿ, ಅವರ ಸಾಮರ್ಥ್ಯವನ್ನು ವ್ಯರ್ಥ ಮಾಡಿ, ಅಸಹಾಯಕರಾಗಿ ಅವರು ಬದುಕುವಂಥ ಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇನೆ ಅದು ಹೋಗಬೇಕಾದರೆ, ಅವರಿಗೆ ಎಲ್ಲಾ ಸೌಲಭ್ಯವನ್ನು ಒದಗಿಸಿ ಕೊಡುವುದರ ಮುಖಾಂತರ, ಅವರೇ ಖುದ್ದಾಗಿ ಕೆಲಸ ಮಾಡುವಂಥ ವ್ಯವಸ್ಥೆಯಾದರೆ, ಅದು ಚೈನಾ ದೇಶವಿರಬಹುದು, ಅಮೇರಿಕಾ ದೇಶವಿರಬಹುದು, ನಾವು ಅವರಿಗಿಂತಲೂ ಪ್ರಗತಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ ಅದು ಬಿಟ್ಟು ಯಾವುದೋ ಒಂದು ದುರಾಸೆಗಾಗಿ, ಓಟಿನ ಕುರ್ಚಿಗಾಗಿ, ಮತದ ಆಸೆಗಾಗಿ, ನಾನು ಹೆಚ್ಚು ಕೊಡಬೇಕು, ನೀನು ಹೆಚ್ಚು ಕೊಡಬೇಕು, ನಾನು ಸೌಲಭ್ಯವನ್ನು ಹೆಚ್ಚಿಗೆ ಕೊಡಬೇಕೆಂಬ ಸ್ಪರ್ಧಾತ್ಮಕ ದೃಷ್ಟಿಯಿಂದ ನಾವು ಸವಲತ್ತುಗಳನ್ನು ಒದಗಿಸುತ್ತಾ ಹೋದರೆ, ನಾವು ಇಷ್ಟೊಂದು ಶಕ್ತಿಯನ್ನು, ಸಂಪತ್ತನ್ನು ಹೊಂದಿರುವಂಥ ನಾಡನ್ನು ಸಹಿತ, ನಾವು ಅಸಹಾಯಕ ನಾಡನ್ನಾಗಿ ಮಾಡುವುದಕ್ಕೆ ಹೊರಟ್ಟಿದ್ದೇವೆನ್ನುವಂಥದ್ದು ನನಗೆ ಅನಿಸುತ್ತಿದೆ ಅದು ಹೋಗಬೇಕು, ಎಲ್ಲಾ ರೈತರಿಗೆ, ಬಡವರು ಯಾರು ಇದ್ದಾರೆ ಅವರು ದುಡಿಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ರೈತರಿಗೆ ನೀರು ಕೊಡಬೇಕು, ವಿದ್ಯುತ್ ಕೊಡಬೇಕು, ಅವರು ಬೆಳೆದಂಥ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಟ್ಟರೆ, ಯಾವ ಸಬ್ಸಿಡಿಯ ಅವಶ್ಯಕತೆಯೂ ಇಲ್ಲ, ಬಡ್ಡಿ ಮನ್ನಾ, ಸಾಲ ಮನ್ನಾ, ಅವಶ್ಯಕತೆ ಇರುವುದಿಲ್ಲವೆನ್ನುವ ಮಾತನ್ನು ಈ ಸಭೆಯ ಮುಖಾಂತರ ಹೇಳಬಯಸುತ್ತೇನೆ ನಿನ್ನೆ ಹೇಳಿದ ಪ್ರಕಾರ ಆ ನೀರನ್ನು ವೈಜ್ಞಾನಿಕವಾಗಿ Drip Irrigation, Sprinkler Irrigation ಮುಖಾಂತರ ಇಡೀ ನಾಡಿನಾದ್ಯಂತ ನೀರಾವರಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ನಮ್ಮ ಸರ್ಕಾರ ಬಂದ ತಕ್ಷಣ ಒಳ್ಳೆಯ ರಸ್ತೆಗಳನ್ನು ನಾಕಷ್ಟು ಅಭಿವೃದ್ಧಿ ರಸ್ತೆಗಳನ್ನು ಈ ರಾಜ್ಯದಲ್ಲಿ ನಿರ್ಮಾಣ ಮಾಡಿರುವ ಸಂಗತಿಯನ್ನು ನಾವು ಕಂಡಿದ್ದೇವೆ ನಮ್ಮಲ್ಲಿ ರಸ್ತೆ ಅಭಿವೃದ್ಧಿ ಆದರೆ ಮಾತ್ರ ನಮ್ಮಲ್ಲಿ ಎಲ್ಲಾ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ ಆ ರೀತಿ ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಒಟ್ಟಾರೆಯಾಗಿ ನಮ್ಮ ಸರ್ಕಾರದ ಬಗ್ಗೆ ಹಿರಿಯ ಸದಸ್ಯರುಗಳ ಏನೇನೊ ಅಪಾದನೆಗಳನ್ನು ಇಲ್ಲಿ ಮಾತನಾಡುವಾಗ ಮಾಡಿದರು ನಾನು ಇಲ್ಲಿಗೆ ಹೊಸದಾಗಿ ಆರಿಸಿ ಬಂದಿರುವುದರಿಂದ, ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ 20 ತಿಂಗಳುಗಳು ನಾವು ಎಷ್ಟೊಂದು ತೊಂದರೆಗಳನ್ನು ಅನುಭವಿಸಿದೆವು ನಾವು ಏಕಾದರೂ ಎಂ ಎಲ್ ಎ ಗಾಗಿ ಆರಿಸಿ ಬಂದೆವೋ, ಜನರಿಗೆ ಏನು ಉತ್ತರವನ್ನು ಹೇಳಬೇಕೆನ್ನುವ ಸ್ಥಿತಿಯಲ್ಲಿ,

ನಾವು ಬಹಳಷ್ಟು ತೊಂದರೆಗಳನ್ನು ಈ 20 ತಿಂಗಳಲ್ಲಿ ಅನುಭವಿಸಿದೆವು

ಆಗ ಇವರ್ಯಾರೂ ಧ್ವನಿಯೆತ್ತಲಿಲ್ಲ ಇಡೀ ಬಾಗಲಕೋಟೆ ಜಿಲ್ಲೆಯಲ್ಲಿ ಬಿ ಜೆ ಪಿ MLA ಗಳು ಆರಿಸಿ ಬಂದಿದ್ದೇವೆ ಗುಳೇದಗುಡ್ಡದಿಂದ ಹೆಚ್ ವೈ ಮೇಟಿಯವರು ಜೆ ಡಿ (ಎಸ್)ನ ಒಬ್ಬರೇ ಒಬ್ಬರು ಸದಸ್ಯರು ಮಾತ್ರ ಇದ್ದಾರೆ ಅವರನ್ನು ಬಿಟ್ಟು ಇಡೀ ಜಿಲ್ಲೆಯಲ್ಲಿ ಬಿ ಜೆ ಪಿ ಸದಸ್ಯರೇ ಇರುವುದರಿಂದ, ಅವರ ಕ್ಷೇತ್ರಕ್ಕೆ 6 ಕೋಟಿ ರೂಪಾಯಿಗಳನ್ನು ರೋಡುಗಳಿಗೆ ಕೊಟ್ಟರೆ, ನಮ್ಮ ಇಡೀ ಜಮಖಂಡಿ ತಾಲ್ಲೂಕಿಗೆ 50 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ 6 ಕೋಟಿ ರೂಪಾಯಿಗಳು ಅವರಿಗೆ, 50 ಲಕ್ಷ ರೂಪಾಯಿಗಳನ್ನು ನಮಗೆ ಕೊಟ್ಟರು ಆಗ ನಿಮಗೆ ತಾರತಮ್ಯ ಗೊತ್ತಾಗಲಿಲ್ಲ ಈ ತಾರತಮ್ಯ ನೀತಿಯನ್ನು ಹುಟ್ಟುಹಾಕಿದ್ದೇ ಕಾಂಗ್ರೆಸ್ ಪಕ್ಷ ಎಂದು ನಾನು ಈ ಸದನದಲ್ಲಿ ಆಪಾದನೆ ಮಾಡುತ್ತೇನೆ ನೀವು ಮಾಡಿದ ಪಾಪವನ್ನು ನೀವು ಉಣ್ಣುತ್ತಿದ್ದೀರಿ ಆದರೆ, ನಮ್ಮ ಸರ್ಕಾರವನ್ನು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅಂಥ ತಾರತಮ್ಯ ನೀತಿ ಇನ್ನು ಮುಂದೆ ಆಗಬಾರದು ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಎಲ್ಲ ಕ್ಷೇತ್ರಗಳನ್ನು ಸಮನಾಗಿ ಅಭಿವೃದ್ಧಿ ಪಡಿಸುವಂಥ ವ್ಯವಸ್ಥೆ ಆಗಬೇಕು ಎನ್ನುವ ವಿನಂತಿಯನ್ನು ಈ ಸಭೆಯ ಮುಖಾಂತರ ನಾನು ಮಾಡಿಕೊಳ್ಳುತ್ತೇನೆ ಈ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಎಲ್ಲ ಕ್ಷೇತ್ರಗಳಲ್ಲಿ ದುಡ್ಡಿನ ಹೊಳೆ ಹರಿಯುವಂಥ ಸಂಗತಿಯನ್ನು ನಾವು ನೋಡುತ್ತಿದ್ದೇವೆ ಇದನ್ನು ನಾನು ಹೇಳುತ್ತಿಲ್ಲ ಜನರು ಗಲ್ಲಿಗಲ್ಲಿಗಳಲ್ಲಿ, ಓಣಿಓಣಿಗಳಲ್ಲಿ, ಊರುಊರುಗಳಲ್ಲಿ ಮಾತನಾಡುತ್ತಿದ್ದಾರೆ ಈ ಸಮ್ಮಿಶ್ರ ಸರ್ಕಾರ ಬಂದಾಗ ಇಷ್ಟೊಂದು ಅಭಿವೃದ್ಧಿ ಕೆಲಸಗಳು ಹೇಗೆ ನಡೆದವು? ಈ ರಾಜ್ಯವನ್ನು ಆಳಿದಂಥ ಹಿಂದಿನ ಸರ್ಕಾರಗಳು ಏಕೆ ಮಾಡಿಲಿಲ್ಲ ಎಂದು ಸಾಮಾನ್ಯ ಜನ ನಮ್ಮನ್ನು ಕೇಳುತ್ತಿದ್ದಾರೆ ಇದಕ್ಕೆ ನಾವು ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು ಒಕ್ಕಲುತನದ ಉಪಕರಣಗಳನ್ನು ತೆಗೆದುಕೊಂಡರೆ, ಹಿಂದೆ ಒಂದು ತಾಲ್ಲೂಕಿಗೆ 1–2 ಟ್ರಾಕ್ಟರ್ ಬರುತ್ತಿದ್ದವು, 1–2 ನೇಗಿಲು, ಗಾಡಿಗಳು ಬರುತ್ತಿದ್ದರು ಆದರೆ ನಮ್ಮ ಸರ್ಕಾರ ಬಂದ ನಂತರ ಸಣ್ಣ ರೈತರಿಂದ ಹಿಡಿದು ದೊಡ್ಡ ರೈತರವರೆಗೆ ಒಂದು ತಾಲ್ಲೂಕಿಗೆ 20–25 ಟ್ರಾಕ್ಟರ್‌ಗಳನ್ನು ಕೊಡುತ್ತಿದ್ದೇವೆ ನೂರಾರು ಕಲ್ಟಿವೇಟರ್, ನೂರಾರು ರೊಟಾವೇಟರ್, ನೂರಾರು ನೇಗಿಲುಗಳನ್ನು ಕೊಡುತ್ತಿದ್ದೇವೆ ಎತ್ತು, ಗಾಡಿಗಳನ್ನು ಕೊಡುತ್ತಿದ್ದೇವೆ ಈ ರೀತಿಯಾಗಿ ಪ್ರತಿಯೊಂದು ಇಲಾಖೆಯಲ್ಲೂ ಆಗಿದೆ ಬಿಜೆ ಪಿ ಯನ್ನು ಅಲ್ಪಸಂಖ್ಯಾತರ ವಿರೋಧಿಗಳು ಎಂದು ಇವರು ಕರೆಯುತ್ತಿದ್ದರು ಇವರ ಆಡಳಿತದಲ್ಲಿ ಅಲ್ಪ ಸಂಖ್ಯಾತ ಇಲಾಖೆಗೆ ಖರ್ಚು ಮಾಡಿದ ಹಣವೆಷ್ಟು? ಕೇವಲ 20–25 ಕೋಟಿ ರೂಪಾಯಿಗಳು ಆದರೆ ನಮ್ಮ ಸಮ್ಮಿಶ್ರ ಸರ್ಕಾರ ಬಂದಾಗ ಒಮ್ಮಿಂದೊಮ್ಮೆಗೇ 140 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ ಅದೇ ರೀತಿ ಎಸ್ ಸಿ , ಎಸ್ ಟಿ ಯವರನ್ನು ಗುತ್ತಿಗೆಗೆ ತೆಗೆದುಕೊಂಡಂತೆ ಮಾತನಾಡುವ ಹಿಂದಿನ ಸರ್ಕಾರಗಳು ಅವರಿಗಾಗಿ

ಎಷ್ಟು ಖರ್ಚು ಮಾಡುತ್ತಿದ್ದರು? ಒಂದು ಸಾವಿರ ಕೋಟಿ ರೂಪಾಯಿಯವರೆಗೂ ಖರ್ಚು ಮಾಡುತ್ತಿರಲಿಲ್ಲ ಆದರೆ ನಮ್ಮ ಸಮ್ಮಿಶ್ರ ಸರ್ಕಾರ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಎಸ್ ಸಿ , ಎಸ್ ಟಿ ಯವರಿಗೊಂದು ಸಮಾಜ ಕಲ್ಯಾಣ ಇಲಾಖೆಗೆ ತೆಗೆದಿಟ್ಟುರುವುದನ್ನು ನಾವು ಕಾಣುತ್ತಿದ್ದೇವೆ ಅದೇ ರೀತಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಹಿಂದೆ ತಾಲ್ಲೂಕಿಗೆ ಒಂದೆರಡು ಕೊಳವೆ ಬಾವಿಗಳು ಬರುತ್ತಿದ್ದವು ನಾನು M L A ಯಾದಾಗ ಮೊದಲು ನನ್ನ ತಾಲ್ಲೂಕಿಗೆ ಎಸ್ ಸಿ , ಎಸ್ ಟಿ ಯವರಿಗೆ 5, ಹಿಂದುಳಿದವರಿಗೆ 3 ಎಂದು ಇತ್ತು ಆದರೆ ನಮ್ಮ ಸರ್ಕಾರ ಗಂಗಾ ಕಲ್ಯಾಣ ಯೋಜನೆಯಲ್ಲಿ ನೂರುಗಟ್ಟಲೆ ಸಂಖ್ಯೆಯಲ್ಲಿ ದಲಿತರ ಮತ್ತು ಹಿಂದುಳಿದ ಜನಾಂಗದವರ ಅಭಿವೃದ್ಧಿಗಾಗಿ ಅವರ ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಕೊರೆಸುವುದರ ಮುಖಾಂತರ ಅವರ ಬಾಳಿನಲ್ಲಿ ಬೆಳಕಾಗಿರತಕ್ಕಂಥ ಸಂಗತಿಯನ್ನು ನಾವು ಕಾಣುತ್ತಿದ್ದೇವೆ ಈ ರೀತಿ ನಾವು ಲೆಕ್ಕ ಮಾಡುತ್ತಾ ಹೋದರೆ, ಪ್ರತಿಯೊಂದು ಕ್ಷೇತ್ರದಲ್ಲೂ ಸಹ ಯುದ್ಧೋಪಾದಿಯಲ್ಲಿ ಅಭಿವೃದ್ಧಿ ಕೆಲಸಗಳು ಆಗುವುದನ್ನು ಕಂಡು ಜನ ಕಕ್ಕಾಬಿಕ್ಕಿಯಾಗಿದ್ದಾರೆ ಇವರಿಗೆ ದುಡ್ಡು ಎಲ್ಲಿಂದ ಬಂತು? ಈ ಸರ್ಕಾರದವರು ಜಾದೂ ಮಾಡಿದರೇ ಎಂದು ಜನರು ಮಾತನಾಡುತ್ತಿದ್ದಾರೆ ಹಿಂದಿನ ಸರ್ಕಾರಗಳೂ ಸಹ ಆಳಿದರಲ್ಲ, ಆಗ ಏಕೆ ಇವುಗಳು ಆಗಲಿಲ್ಲ ಎಂದು ಮಾತನಾಡುತ್ತಿದ್ದಾರೆ ನಾವು ಪ್ರತಿಯೊಂದು ಹಳ್ಳಿಗಳಲ್ಲಿಯೂ ಹತ್ತತ್ತು ರೋಡುಗಳನ್ನು ಮಾಡಿದ್ದೇವೆ, ಗಂಗಾ ಕಲ್ಯಾಣ ಯೋಜನೆಯನ್ನು ಮಾಡಿದ್ದೇವೆ, ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳೀಗೆ ಸೈಕಲ್ಲುಗಳನ್ನು ಕೊಟ್ಟಿದ್ದೇವೆ, ಭಾಗ್ಯಜ್ಯೋತಿ ಯೋಜನೆಯಲ್ಲಿ ಮನೆಗಳಿಗೆ ಲೈಟು ಕೊಟ್ಟಿದ್ದೇವೆ, ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಬಡತನದ ಕುಟುಂಬದಲ್ಲಿ ಹುಟ್ಟಿರುವ ಹೆಣ್ಣುಮಗುವಿಗೆ ಹತ್ತು ಸಾವಿರ ರೂಪಾಯಿಗಳ ಡಿಪಾಸಿಟ್ ಇಡುವಂಥ ಕಾರ್ಯಕ್ರಮವಾಗಿದೆ ಈ ರೀತಿಯಾಗಿ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯೇ ಆಗುತ್ತದೆ ಇಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡಿದರೂ ಸಹ ಏಕೋ, ಏನೋ ವಿರೋಧ ಪಕ್ಷದವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ ಈ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಮೂಲ ಶಿಕ್ಷಣ ಬೇಕು ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ನಮ್ಮ ಕ್ಷೇತ್ರಗಳಿಗೆ ಒಂದು ಹೈಸ್ಕೂಲನ್ನು ಅಥವಾ ಒಂದು ಕಾಲೇಜನ್ನು ಕೊಡುವಂಥ ವ್ಯವಸ್ಥೆಯಾಗಲಿಲ್ಲ ಆದರೆ ಈಗ ನಮ್ಮ ಸರ್ಕಾರ ಹೈಸ್ಕೂಲು, ಕಾಲೇಜುಗಳನ್ನು ಕೊಡುತ್ತಿರುವಾಗ, ತಾರತಮ್ಯ ಮಾಡುತ್ತಿದ್ದಾರೆ ಎಂದು ಇವರು ಹೇಳುತ್ತಿರುವ ಸಂಗತಿಯನ್ನು ನೋಡಿದರೆ ನಮಗೆ ಒಂದು ನಮೂನೆಯಾಗುತ್ತದೆ ಏಕೆಂದರೆ, ಇವರ ಆಡಳಿತದಲ್ಲಿ ನಮಗೆ ಕೊಡುವುದು ಇರಲಿ ಅವರ ಪಕ್ಷದ ಸದಸ್ಯರಿಗೂ ಸಹ ಹೈಸ್ಕೂಲು, ಜೂನಿಯರ್ ಕಾಲೇಜುಗಳನ್ನು ಕೊಡಲಿಲ್ಲ ಇವರು ಹೇಗೆ ರಾಜ್ಯದ ಪ್ರಗತಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ? ಮೊದಲನೆಯದಾಗಿ, ರಾಜ್ಯದಲ್ಲಿ ಶಿಕ್ಷಣದ ಪ್ರಗತಿಯಾಗಬೇಕು ನಮ್ಮ ಸಮ್ಮಿಶ್ರ ಸರ್ಕಾರ ಆಡಳಿತಕ್ಕೆ ಬಂದ ಮೊದಲನೆಯ ವರ್ಷದಲ್ಲಿಯೇ 500 ಹೈಸ್ಕೂಲುಗಳನ್ನು

ಈ ವರ್ಷ 500 ಹೈಸ್ಕೂಲುಗಳನ್ನು ಕೊಡುವ ಯೋಜನೆ ಮಾಡಿದ್ದು, ಈ ರಾಜ್ಯದ ಅಭಿವೃದ್ಧಿಯ ದಷ್ಟಿಯಿಂದ ನಮ್ಮ ಸರ್ಕಾರ ಯೋಗ್ಯವಾಗಿದೆ ಎನ್ನುವ ಮಾತನ್ನು ಜನ ಮಾತನಾಡುವಂತಾಗಿದೆ ಅದಲ್ಲದೇ, ಜೂನಿಯರ್ ಕಾಲೇಜುಗಳು, ಪದವಿ ಕಾಲೇಜುಗಳು, ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಡಿಪ್ಲೋಮಾ ಕಾಲೇಜುಗಳನ್ನು ಕೊಡುವುದನ್ನು ನೋಡಿದರೆ, ಒಟ್ಟಾರೆ ಈ ಸಮ್ಮಿಶ್ರ ಸರ್ಕಾರ ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಜನ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ ಭವಿಷ್ಯದಲ್ಲಿ ಈ ಸರ್ಕಾರದಲ್ಲಿ ಇನ್ನೂ ಇರಬೇಕು ಈ ರಾಜ್ಯದ ಅಭಿವೃದ್ಧಿಯಾಗಬೇಕು ಇಂಥ ಸರ್ಕಾರದಿಂದ ಮಾತ್ರ ಜನರ ಕಷ್ಟನಷ್ಟಗಳನ್ನು ಹೋಗಲಾಡಿಸಲು ಸಾಧ್ಯವಿದೆಯೇ ವಿನಃ 50 ವರ್ಷಗಳವರೆಗೆ ಈ ನಾಡನ್ನಾಳಿದ ಹಿಂದಿನ ಸರ್ಕಾರಗಳು ದುಡ್ಡು ಖರ್ಚು ಮಾಡಿರುತ್ತಿದ್ದಾರೂ ಅದು ನಿಜವಾಗಿಯೂ ಫಲಾನುಭವಿಗಳಿಗೆ ಮುಟ್ಟುತ್ತಿರಲಿಲ್ಲ ಎಂದು ಜನರು ಬೀದಿಯಲ್ಲಿ ಮಾತನಾಡುವಂತಾಗಿದೆ ಇಷ್ಟೊಂದು ಅಭಿವೃದ್ಧಿ ಕಾರ್ಯಗಳಾದರೂ ಸಹ ವಿರೋಧ ಪಕ್ಷದವರು ಮಾತನಾಡುತ್ತಾರೆ ಜನರಿಗೆ ತೋರಿಸಲಿಕ್ಕಾದರೂ ನಾವು ವಿರೋಧ ಮಾಡಬೇಕು ಎನ್ನುವ ದೃಷ್ಟಿಯಲ್ಲಿ ಅವರು ಮಾತನಾಡುತ್ತಾರೆಯೇ ವಿನಃ ಅವರ ಆತ್ಮದಲ್ಲಿ, ನಾವು ಇದ್ದಾಗ ಇಷ್ಟು ದುಡ್ಡು ಬರಲಿಲ್ಲವಲ್ಲ ಎನ್ನುವ ಬೇದ ಮಾತ್ರ ದಿನನಿತ್ಯ ಕಾಣುತ್ತದೆ ಅಂಥ ಸಂಗತಿಯನ್ನು ನಾವು ಕಾಣುತ್ತಿದ್ದೇವೆ ಇಲ್ಲಿ ಮಾತನಾಡುವಂಥ ಎಲ್ಲರೂ ಸಹ, ನಮ್ಮ ಸರ್ಕಾರದಲ್ಲಿ ಏನೂ ಮಾಡಲಿಲ್ಲ, ನಿಮ್ಮ ಸರ್ಕಾರ ಬಂದಾಗ ರಾಜ್ಯದಲ್ಲಿ ಕೆಲಸ ಆಗುತ್ತಿದೆ ಎನ್ನುವ ಅಳುಕನ್ನು ಹೇಳುತ್ತಿದ್ದಾರೆ ಕೇವಲ ವಿರೋಧಕ್ಕಾಗಿ ವಿರೋಧ ಮಾಡುತ್ತಿದ್ದಾರೆಯೇ ವಿನಃ ಅವರ ಆತ್ಮದಿಂದ ವಿರೋಧ ಮಾಡುವಂಥ ಸಂಗತಿ ಅವರಲ್ಲಿಯೂ ಇಲ್ಲ ಅದಕ್ಕಾಗಿ ಈ ಸರ್ಕಾರ ರಾಜ್ಯದಲ್ಲಿ ಇನ್ನೂ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಈ ರಾಜ್ಯವನ್ನು ಸುಭಿಕ್ಷವಾಗಿ ಮಾಡಬೇಕು, ಒಕ್ಕಲುತನವನ್ನು ಅಭಿವೃದ್ಧಿ ಮಾಡಬೇಕು ನೇಕಾರರಿಗೆ ಒಂದು ಒಳ್ಳೆಯ ಯೋಜನೆಯನ್ನು ಮಾಡಬೇಕು, ಅಭಿವೃದ್ಧಿ ಕೆಲಸಗಳಿಗಾಗಿ ಇನ್ನೂ ಯಾರಿಗೆ ಹಣ ಮುಟ್ಟಿಲ್ಲವೋ ಅವರಿಗೆ ಮುಟ್ಟಿಸುವಂಥ ವ್ಯವಸ್ಥೆಯಾಗಬೇಕು ಎನ್ನುವುದನ್ನು ಹೇಳುತ್ತಾ, ಈ ಸಭೆಯಲ್ಲಿ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಿರತಕ್ಕಂಥ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಸಭೆಯನ್ನು ಎರಡೂವರೆ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸಭೆಯು ಮಧ್ಯಾಹ್ನ 1 ಗಂಟೆ 36 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸಭೆಯು 3 ಗಂಟೆ 18 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

3 ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ · ಬೆಂಗಳೂರು ನಗರದ ವಿಶ್ವೇಶ್ವರಪುರಂನಲ್ಲಿರುವ ವಾಸವಿ ವಿದ್ಯಾನಿಕೇತನ ಶಾಲೆಯ ನಾಲ್ಕನೇ ಮಹಡಿಯಿಂದ ಮಗು ಕೆಳಗೆ ಬಿದ್ದು ಸತ್ತು ಹೋಗಿರುವ ಘಟನೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) . ಮಾನ್ಯ ಅಧಕ್ಷರೇ, ನಿನ್ನೆ ದಿನ ನಗರದಲ್ಲಿ ಒಂದು ಸಣ್ಣ ಮಗು ಶಾಲಾ ಕಟ್ಟಡದಿಂದ ಕೆಳಗೆ ಬಿದ್ದು ಸಾವು ಸಂಭವಿಸಿದೆ ಇದು ಬೆಂಗಳೂರು ನಗರದಲ್ಲಿ ಸೆಂಟ್ರಲ್ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ವಿಶ್ವೇಶ್ವರಪುರಂನಲ್ಲಿ ಬರುವಂತಹ ವಾಸವಿ ವಿದ್ಯಾನಿಕೇತನ ಶಾಲೆ ಇಲ್ಲಿ 4ನೇ ಮಹಡಿಯಿಂದ ಮಗು ಆಟ ಆಡುವುದಕ್ಕೆ ಹೋಗಿ 4ನೇ ಮಹಡಿಯಿಂದ ಬಿದ್ದಿದೆ ಬೆಂಗಳೂರು ಸಿಟಿಯಲ್ಲಿ ಗಲ್ಲಿ ಗಲ್ಲಿಗಳಲ್ಲಿ, ಬೀದಿ ಬೀದಿಯಲ್ಲಿ ಶಾಲೆಗಳು ನಡೆಯುತ್ತಿದೆ ಕೆಳಗಡೆಯ ಅಂತಸ್ತಿನಲ್ಲಿ ಅಂದರೆ ಬಹಳ ಕೆಳಗಡೆ ಮೊದಲನೆಯ ಮಹಡಿಯಲ್ಲಿ ಸಣ್ಣಮಕ್ಕಳಿಗೆ ಶಾಲೆ ಇರಬೇಕೆಂದು ಸರ್ಕಾರದ ಆದೇಶವಿದೆ ಯಾವ ಲಂಗುಲಗಾಮು ಇಲ್ಲದೇ ಇಡೀ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಂತೂ ಈ ತರಹ ಶಾಲೆಗಳು ನಡೆಯುತ್ತಿದೆ ಆ ದೃಷ್ಟಿಯಿಂದ ನಿನ್ನೆ ದಿನ ಆಗಿರುವಂತಹ ಘಟನೆ ಬಗ್ಗೆ ತೀವ್ರವಾದಂತಹ ತನಿಖೆಯಾಗಬೇಕು, 1-2-3-4ನೇ ಮಹಡಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಕೆಳಗಡೆ ಮಹಡಿ ಮಾತ್ರ ಮಕ್ಕಳಿಗೆ ಎನ್ನುವಂತಹ ಕಾನೂನನ್ನು ಸರ್ಕಾರ ತರಬೇಕು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತಿದ್ದೇನೆ ಇದು ಬಹಳ ದೊಡ್ಡ ರೋಧನವಾಗಿದೆ, ಇದರಿಂದ ಬಹಳ ನೋವಾಗಿದೆ ಇವತ್ತು ಈ ಪರಸ್ಥಿತಿಯಾಗಿದೆ ಇದರ ಬಗ್ಗೆ ಸರ್ಕಾರ ತಕ್ಷಣ ಸುತ್ತೋಲೆಯನ್ನು ಹೊರಡಿಸಬೇಕು ಬೆಂಗಳೂರು ನಗರದಲ್ಲಿ ಆಗಲಿ ಅಥವಾ ರಾಜ್ಯದಲ್ಲಿ ಎಲ್ಲೇ ಆಗಲಿ, ಸಣ್ಣಮಕ್ಕಳಿಗೆ ಶಾಲೆಯ ಸ್ಥಳ ಎಲ್ಲಿರಬೇಕು ? ಇದರ ಬಗ್ಗೆ ತಾವು ತೀರ್ಮಾನ ಮಾಡಲಿಲ್ಲವೆಂದರೆ, ಅತ್ಯಂತ ಅನ್ಯಾಯವಾಗುತ್ತದೆ ಅದರ ಬಗ್ಗೆ ಸರ್ಕಾರದವರು ಕ್ರಮವನ್ನು ಕೈಗೊಳ್ಳಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ . ಮಾನ್ಯ ಅಧಕ್ಷರೇ, ನಿನ್ನೆಯ ದಿವಸ ಆದ ಘಟನೆಯ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು ಕಳೆದ ವರ್ಷ ಒಂದು ಶಾಲೆಯಲ್ಲಿ ಕಟ್ಟಡವನ್ನು ಕಟ್ಟುವಾಗ ಇಟ್ಟಿಗೆ ಬಿದ್ದು ಒಂದು ಮಗು ಸತ್ತುಹೋಯಿತು ಈಗ 4ನೆಯ ಮಹಡಿಯಿಂದ ಕೆಳಗಡೆ

ಬಿದ್ದು ಒಂದು ಮಗು ಸತ್ತುಹೋಯಿತು ಕೆಳ ಅಂತಸ್ತಿನಲ್ಲಿ ಶಾಲೆಯನ್ನು ಮಾಡುವುದು ಒಂದು ಅಲ್ಲದೇ ಮೇಲು ಅಂತಸ್ತುಗಳಲ್ಲಿ ಗ್ರಿಲ್ ಹಾಕುವಂತಹ ವ್ಯವಸ್ಥೆಯನ್ನು ಮಾಡಬೇಕು ಕಟ್ಟಡವನ್ನು ಒಡೆಯಬೇಕೆಂದು ನಾನು ಹೇಳುವುದಿಲ್ಲ ಏಕೆಂದರೆ ಮಕ್ಕಳು ಬೀಳದೇ ಇರುವ ಹಾಗೆ ಗ್ರಿಲ್ ಹಾಕುವಂತಹ ವ್ಯವಸ್ಥೆಯನ್ನು ಮಾಡಿ ಕೇವಲ ಶಾಲೆಗಳಲ್ಲಿ ಮಾತ್ರವಲ್ಲ, ಇನ್ನು ಮುಂದೆ ಅಪಾರ್ಟ್‌ಮೆಂಟ್‌ಗಳಲ್ಲಿ ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕಾಗುತ್ತದೆ ಕಟ್ಟಡವನ್ನು ಕಟ್ಟುವುದಕ್ಕೆ ಪರ್ಮಿಶನ್‌ನ್ನು ಕೊಟ್ಟಾಗ ಯಾವ ಅಂತಸ್ತಿನಲ್ಲಿ ಎಷ್ಟು ಅಂತಸ್ತಿನವರೆಗೆ ಓಪನ್ ಇರಬಹುದು, ಎಷ್ಟು ಅಂತಸ್ತಿನವರೆಗೆ ಗ್ರಿಲ್‌ಗಳನ್ನು ಹಾಕಬಹುದು ಎಂಬ ಬಗ್ಗೆ ವ್ಯವಸ್ಥೆಯನ್ನು ಮಾಡದೇ ಇದ್ದರೆ, ಕಷ್ಟವಾಗುತ್ತದೆ ಮೊನ್ನೆ ದಿನ ಗರುಡ ಮಾಲ್‌ನಲ್ಲಿ ಒಂದು ಅಪಘಾತವಾಯಿತು ಅದೇ ರೀತಿಯಲ್ಲಿ ಅಪಘಾತಗಳು ಜಾಸ್ತಿಯಾಗುವಂತಹ ಪರಿಸ್ಥಿಯಲ್ಲಿ ನಿಯಂತ್ರಣ ಮಾಡುವ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ

ಶ್ರೀ ಎನ್ ಎಲ್ ನರೇಂದ್ರಬಾಬು ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಮಾತಿನಲ್ಲಿ ಮುಗಿಸುತ್ತೇನೆ

ಅಧ್ಯಕ್ಷರು ಶೂನ್ಯ ವೇಳೆಯಲ್ಲಿ ಮಾನ್ಯ ಪಾಟೀಲ್ ನಾಗರಾಜ್ ರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಇದು ನಿಮಗೆ ಗೊತ್ತಾಗುವುದಿಲ್ಲವೇ? ಮಾನ್ಯ ನರೇಂದ್ರಬಾಬುರವರೆ, ತಾವು ಈ ತರಹ ಆದರೆ ಹೇಗೆ? ಮಾನ್ಯ ಪಾಟೀಲ್ ನಾಗರಾಜ್ ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ನಮ್ಮ ಗಮನಕ್ಕೆ ತಂದು ಮಾತನಾಡುತ್ತಿದ್ದಾರೆ

ಶ್ರೀ ಎನ್ ಎಲ್. ನರೇಂದ್ರಬಾಬು . ನಾನು ತಮ್ಮ ಮುಖೇನ ಒಂದೇ ಒಂದು ವಿಷಯವನ್ನು ತಂದು ಒಂದೇ ಮಾತಿನಲ್ಲಿ ಮುಗಿಸುತ್ತೇನೆ

ಅಧ್ಯಕ್ಷರು : ಎಲ್ಲಾ ಒಂದೊಂದೇ

ಶ್ರೀ ಎನ್ ಎಲ್ ನರೇಂದ್ರಬಾಬು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ ಬೆಂಗಳೂರು ನಗರ ಮತ್ತು ಇನ್ನಿತರ ಯಾವುದೇ 2 floorಗಿಂತ ಜಾಸ್ತಿ ಇರುವಂತಹ ಶಾಲೆಗಳು ಮಕ್ಕಳಿಗೆ ಸುರಕ್ಷಿತವಾಗಿಯಾ ಎಂದು ಹೇಳಿ ಒಂದು ಸಮಗ್ರ ತನಿಖೆಯಾಗುಬೇಕು ಎರಡನೆಯದಾಗಿ ಹೇಳುವುದಾದರೆ staircase sizeಗಳು ಏನಿದೆ, ಬಹಳ ಸ್ಪಷ್ಟವಾಗಿ ಗೋಚರವಾಗದೇ ಅಪಾಯದ ಪರಿಸ್ಥಿತಿಯಿದೆ ಎಷ್ಟೋ ತಂದೆತಾಯಿಗಳು ಹೇಳಿಕೊಳ್ಳುತ್ತಿಲ್ಲ ನಮ್ಮ ಕ್ಷೇತ್ರದ ಒಂದು ಶಾಲೆಯಲ್ಲಿ ಇಷ್ಟು ಹತ್ತಿರದಲ್ಲಿ ಕುರಿದೊಡ್ಡಿಯ ತರಹ ಮಕ್ಕಳನ್ನು

18-01

ಬಿಡುತ್ತಾರೆ ಎರಡನೇ floor ಮಾಡುವುದರ ಬಗ್ಗೆ ಸಮಗ್ರ ತನಿಖೆಯಾಗಬೇಕು ಇದರ ಬಗ್ಗೆ ಮಕ್ಕಳುಗಳು ಬಹಳ ಅಪಾಯಕ್ಕೆ ಸಿಲುಕುತ್ತಾರೆ ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) · ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವುದನ್ನು ನಾನು ಗಮನಿಸಿದ್ದೇನೆ ಇನ್ನು ಮುಂದೆ ಸರ್ಕಾರ ಈ ರೀತಿಯ ಅಹಿತಕರವಾದ ಘಟನೆಗಳು ನಡೆಯಲು ಅವಕಾಶ ಕೊಡುವುದಿಲ್ಲ ಇದು ನಾವುಗಳು ಇದ್ದ ಕಾಲವಲ್ಲ, ಮಕ್ಕಳುಗಳು ಚಟುವಟಿಕೆಯಿಂದ ಹಾರುವುದು, ಕುಣಿಯುವುದು, ಕುಪ್ಪಳಿಸುವುದು ಒಂದು ವಿಚಿತ್ರವಾದಂತಹ ರೀತಿಯಲ್ಲಿ ಒಂದು ನಿರೀಕ್ಷೇ ಮಾಡಲಾರದಂತಹ ಬುದ್ಧಿವಂತಿಕೆಯಲ್ಲಿದ್ದಾರೆ ಅವರಿಗೆ ಗ್ರೀಲ್ ಗಳನ್ನು ಹಾಕುವಂತಹದು 3-4 ಅಡಿ ಗ್ರೀಲ್ ಹಾಕಿ ಹೊರಗಡೆಯಿಂದ ಬೇಕಾದರೂ ಅದು ಕಾಣಲಿ, ಗ್ರಿಲ್ ಆಚೆಗೆ ಬೀಳದಂತೆ ಎತ್ತರದಲ್ಲಿ ಮಾಡಬೇಕು ಯಾವುದೇ ಬಹುಮಹಡಿ ಕಟ್ಟಡ ಆದರೂ ಸಹ ಸುತ್ತೋಲೆಯನ್ನು ಕಳುಹಿಸಿ ಅದಕ್ಕೆ ಲೈಸನ್ಸ್‌ನ್ನು ಕೊಡಬೇಕಾದರೆ ಅವೆಲ್ಲವನ್ನು ನೋಡಿ ನೀಡುವಂತೆ ಬಿಗಿ ಬಂದೋಬಸ್ತು ಮಾಡುವ ಬಗ್ಗೆ ಖಂಡಿತವಾಗಿ ಎಚ್ಚರಿಕೆಯ ಮಾತನ್ನು ಗೌರವಾನ್ವಿತ ಸದಸ್ಯರು ಹೇಳುತ್ತಿದ್ದೀರಿ ಶಾಲೆಗಳಲ್ಲಿ ಅಂತೂ ಎರಡನೆ ಮಹಡಿಯಲ್ಲಿ 3-4ನೇ ಮಹಡಿಗಳಲ್ಲ, ಗ್ರೌಂಡ್ ಫ್ಲೋರ್ ಆದ ಮೇಲೆ ಎಲ್ಲದಕ್ಕೂ ಕೂಡ ಈ ಬಂದೋಬಸ್ತನ್ನು ಮಾಡಲೇಬೇಕು ಗ್ರಿಲ್ ಇರಲೇಬೇಕು ಅದು ಎಲ್ಲಿ ಇಲ್ಲ, ಅದು ಸರ್ಕಾರಿ ಶಾಲೆಗಳಾಗಲೀ, ಖಾಸಗಿ ಶಾಲೆಗಳಾಗಲೀ ಅದನ್ನು ಮಾಡಿ ಎಂದು ಸೂಚನೆಯನ್ನು ನಮ್ಮ ಶಿಕ್ಷಣ ಇಲಾಖೆಯಿಂದ ಕಳುಹಿಸಿಕೊಡುವಂತಹದ್ದು, ಇನ್ನು ಮುಂದೆ ಬಹುಮಹಡಿ ಕಟ್ಟಡಗಳು ಸಾರ್ವಜನಿಕವಾಗಿ ಕಟ್ಟುವಂತಹ ಕಾಂಪ್ಲೆಕ್ಸ್‌ಗಳು ಏನಿವೆ, ಈ ಬಗ್ಗೆ ಸುತ್ತೋಲೆಯನ್ನು ಹೊರಡಿಸಿ, ಇವೆಲ್ಲದಕ್ಕೂ ಲೈಸೆನ್ಸ್ ಕೊಡಬೇಕಾದರೆ ಇದನ್ನು ಮಾಡಬೇಕೆಂದು ಸೂಚನೆಯನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತೇನೆ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು ಮಾನ್ಯ ಎಸ್ ಎಸ್ ಪಾಟೀಲ್‌ರವರೇ ಬೇಡಿಕೆಗಳ ಬಗ್ಗೆ ತಾವು ಮಾತನಾಡುತ್ತೀರಾ ?

ಶ್ರೀ ಎಸ್ ಎಸ್ ಪಾಟೀಲ್ ನಾನು ಸೋಮವಾರ ಮಾತನಾಡುತ್ತೇನೆ

ಅಧ್ಯಕ್ಷರು ಎಲ್ಲರೂ ಹೇಳಿ ಹೇಳಿ ಗಳಿಗೆಯನ್ನು ಲೆಕ್ಕವನ್ನು ಹಾಕಿಕೊಂಡು ಬಿಟ್ಟಿದ್ದೀರಿ ಈಗ ಮಾತನಾಡುವವರು ಯಾರು? ಮಾನ್ಯ ಡಿ ಆರ್ ಪಾಟೀಲ್‌ರವರೆ, ತಾವು ಮಾತನಾಡುತ್ತೀರಾ? ನಿಮ್ಮದು ಯಾವ ವಾರ? ಮಂಗಳವಾರ

ಮಾತನಾಡುತ್ತೀರಾ? ಮಾನ್ಯ ಶಿವರಾಂ ಬಂದಿಲ್ಲ, ಶ್ರೀ ಎನ್ ಎಸ್ ಭೋಸರಾಜು ಇಲ್ಲ, ಶ್ರೀ ಡಿ ಸಿ ತಮ್ಮಣ್ಣ ಇಲ್ಲ, ಶ್ರೀ ಕೃಷ್ಣಭೈರೇಗೌಡ ಇಲ್ಲ, ಶ್ರೀ ಕೆ ಚಂದ್ರಶೇಖರ್ ಇಲ್ಲ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ತಮಗೆ ನೇರವಾಗಿ ಸಂಬಂಧಪಟ್ಟಿದ್ದು ಸಾರ್ ಮತದಾನಕ್ಕೆ ತಾವು ಹೋಗಿದ್ದೀರಾ ಸಾರ್ ಎಂದು ನಾನು ಕೇಳುತ್ತಿದ್ದೇನೆ

ಅಧ್ಯಕ್ಷರು · ಅದು ನನಗೆ ಸಂಬಂಧಪಟ್ಟಿರುವುದು, ನೀವೇನು ಕೇಳುವುದು?

ಶ್ರೀ ವಾಟಾಳ್ ನಾಗರಾಜ್ ಅದು ತಮ್ಮದೇ

ಅಧ್ಯಕ್ಷರು · ಅದನ್ನು ಹೇಳುವುದಕ್ಕೆ ಅವಕಾಶವಿಲ್ಲ ನೀವು ಎಲ್ಲವನ್ನೂ ಕೇಳುತ್ತೀರಿ

ಶ್ರೀ ವಾಟಾಳ್ ನಾಗರಾಜ್ ತಾವು ಅಧ್ಯಕ್ಷರಾಗಿ

ಅಧ್ಯಕ್ಷರು ಅದು ನನಗೆ ಬಿಟ್ಟಿರುವುದು, ನಾಳೆ ದಿನ ನಿಮಗೆ ಗೊತ್ತಾಗುತ್ತದೆ ಮತದಾನ ಮುಗಿದಾದ ಮೇಲೆ ತಮಗೆ ಗೊತ್ತಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ · ರಾಷ್ಟ್ರಪತಿ ಚುನಾವಣೆಯಲ್ಲಿ

ಅಧ್ಯಕ್ಷರು ಆಯಿತು, ಮತದಾನ ಆದ ಮೇಲೆ ಅದರ ಬಗ್ಗೆ ತಿಳಿದುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ನಾನು ಅದನ್ನು ವಿರೋಧ ಮಾಡುತ್ತಿಲ್ಲ ತಾವು ಸರ್ವಸ್ವತಂತ್ರರು, ಆದ್ದರಿಂದ ತಾವು ಮತದಾನಕ್ಕೆ ಹೊಗಿದ್ರಾ ಅಥವಾ ಇಲ್ಲವೇ?

ಅಧ್ಯಕ್ಷರು ಕುಳಿತುಕೊಳ್ಳಿ, 5 ಗಂಟೆಯಾದ ನಂತರ ತಾವು ತಿಳಿದುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಈಗ ಜಾತ್ಯಾತೀತ ಜನತಾದಳದವರು ಮತದಾನಕ್ಕೆ ಹೋಗಿಲ್ಲ, ಅದ್ದರಿಂದ ತಾವು ಸರ್ವಸ್ವತಂತ್ರರು, ತಾವು ಹೋಗಿದ್ದೀರಾ?

ಅಧ್ಯಕ್ಷರು ತಾವು 5 ಗಂಟೆಯಾದ ಮೇಲೆ ಮಾತನಾಡಿ ಈಗಲ್ಲಾ ತಾವು ಕೇಳುವುದು ಈಗ ಚಂದ್ರಶೇಖರ್‌ರವರು, ಶ್ರೀ ಬಸವರಾಜ ರಾಯರೆಡ್ಡಿ ಕಾಂಗ್ರೆಸ್ ಪಕ್ಷದ ಸದಸ್ಯರು ಮಾತನಾಡುವುದಕ್ಕೆ ಹೆಸರು ಕೊಟ್ಟು ಇಲ್ಲದೇ ಇದ್ದರೆ ಹೇಗೆ? ಕೆಲವರು ಸೋಮವಾರ, ಮಂಗಳವಾರ, ಬುಧವಾರ ಫಳಿಗೆ ಚೆನ್ನಾಗಿದೆ, ಎಂದು ಹೇಳುತ್ತಾ ಹೋದರೆ ಸದನವನ್ನು ಹೇಗೆ ನಡೆಸುವುದು?

can't understand ಮಾನ್ಯ ಹೆಗಡೆಯವರೆ, ತಾವು ಮಾತನಾಡುತ್ತೀರಾ? ಈ ತರಹ ಆದರೆ ಹೇಗೆ? ಡಿಮ್ಯಾಂಡ್ಸ್ ಮೇಲೆ ಮಾತನಾಡುವುದಕ್ಕೆ ಯಾರಿಗೂ ಆಸಕ್ತಿ ಇಲ್ಲವೆಂದು ಕಾಣುತ್ತದೆ

ಶ್ರೀ ಎಸ್ ಎಸ್ ಪಾಟೀಲ್ ಇವತ್ತು ನನ್ನ ಸರದಿ ಬರುವುದಿಲ್ಲವೆಂದು ನಾನು ತಯಾರಾಗಿ ಬಂದಿಲ್ಲ ಅವರೆಲ್ಲರಿಗೂ ಮಾತನಾಡುವುದಕ್ಕೆ ಕೊಡುತ್ತೀರೆಂದು ಹಾಗೆ ನಾನು ಬಂದೆ ಇಲ್ಲದೆ ಇದ್ದರೆ ನಾನೇನೂ ಮಾತನಾಡುವುದಕ್ಕೆ ರೆಡಿ ಇದ್ದೇನೆ ತಾವು ಮಾತನಾಡಿ ಎಂದರೆ ಮಾತನಾಡುತ್ತೇನೆ

ಅಧ್ಯಕ್ಷರು . ತಾವು ರೆಡಿ ಇದ್ದರೆ ಮಾತನಾಡಿ ಇಲ್ಲದೆ ಇದ್ದರೆ ಅವರು ಮಾತನಾಡುತ್ತಾರೆ

4 ವಿತ್ತೀಯ ಕಾರ್ಯಕಲಾಪ

2007-08ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಎಸ್ ಎಸ್ ಪಾಟೀಲ್ · (ಮುಂಡರಗಿ) ಮಾನ್ಯ ಅಧ್ಯಕ್ಷರೆ, ಎಲ್ಲಾ ರೆಡಿ ಮಾಡಿಕೊಂಡು ಬಂದಿದ್ದರೆ ಚೆನ್ನಾಗಿ ಮಾತನಾಡಬಹುದಿತ್ತು ವಚನಗಳನ್ನು ಹೇಳಿಯೇ ನಾನು ಪ್ರಾರಂಭ ಮಾಡುತ್ತೇನೆ ಅಲ್ಲಿಂದಲ್ಲೇ ಅದು ಚಾಲು ಆಗುತ್ತದೆ ಅದನ್ನು ಬಿಟ್ಟು ಹೋಗುವುದಿಲ್ಲ ಬಹುಶಃ ನನಗನಿಸುತ್ತದೆ, ಒಂದು ಬರಿ ವಚನದ ಮೇಲೆ ನಾನು ನನ್ನ ಭಾಷಣವನ್ನು ಮುಗಿಸಬೇಕೆಂದುಕೊಂಡಿದ್ದೇನೆ ಅದಕ್ಕೆ ತರಬೇಕೆಂದು ಇದ್ದೆ, ಅದ್ದರಿಂದ ಈ ಸಲ ಯಾವುದು ಹೇಳುವುದಿಲ್ಲ ವಚನ ಹೇಳಿ ಅದರ ಪ್ರಕಾರ ನಡೆಯಿರಿ ಎಂದು ಹೇಳಿ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ

ಅಧ್ಯಕ್ಷರು . ಮಾನ್ಯ ಪಾಟೀಲ್ ರವರೆ ತಾವು ವಚನದಿಂದಲೇ ಪ್ರಾರಂಭ ಮಾಡಿ ವಚನದಿಂದಲೇ ಎಂಡ್ ಆಗಬೇಕು ಇವತ್ತು ಬಸವಣ್ಣನವರ 50 ವಚನಗಳನ್ನಾದರೂ ಹೇಳಿ ಮುಗಿಸಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ವಚನವನ್ನು ಹೇಳುವವರು ಬಹಳ ಜನ ಇದ್ದಾರೆ ಆದರೆ ಬಸವಣ್ಣ ಹೇಳಿದ ಹಾಗೆ ನುಡಿದಂತೆ ನಡೆಯುವವರು ಬಹಳ ಕಡಿಮೆ ಇದ್ದಾರೆ ಅದು ಆಗಬೇಕು

ಅಧ್ಯಕ್ಷರು : ನುಡಿದಂತೆ ನಡೆಯುವವರೆಲ್ಲರೂ ಹೊಲಗದ್ದೆಗಳಲ್ಲಿ ಇದ್ದಾರೆ ಇನ್ನು ಬಿಳಿ ಬಟ್ಟೆ ಮತ್ತು ಪ್ಯಾಂಟು ಹಾಕಿರುವವರು ಯಾರು ನುಡಿದಂತೆ ನಡೆಯುವುದಿಲ್ಲ

ಶ್ರೀ ಎಸ್ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ,

" ನುಡಿದರೆ ಮುತ್ತಿನ ಹಾರದಂತಿರಬೇಕು

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿರ್ದೊಡೆ
ಕೂಡಲ ಸಂಗಮದೇವನೆಂತೊಲಿವನಯ್ಯಾ
ಇದು ಸರ್ಕಾರಕ್ಕೆ ಹೇಳುವುದು
"ಬಿಡು ಬಾಹ್ಯದೊಳು ಡಂಭವ
ಮಾನಸದೊಳು ಎಡಬಿಡದಿರು ಶಂಭುವ
ಒಡಲೊಳು ವಂಚಿಸಿ ಹೊರಗೆ ನೀ
ಕೀರ್ತಿಯು ಪಡೆದರೆ ಶಿವ ತಾನೊಲಿವನೇ ಮರುಳೆ
ಬಿಡು ಬಾಹ್ಯದೊಳು ಡಂಭವ
ಮಾನಸದೊಳು ಎಡಬಿಡದಿರು ಶಂಭುವ
ಜನ ಮೆಚ್ಚಿ ನಡೆಕೊಂಡರೇನುಂಟು ಲೋಕದಿ
ಮನಮೆಚ್ಚಿ ನಡೆಕೊಂಬುದೇ ಚಂದ
ಜನರೇನು ಬಲ್ಲರು ಒಳಗಾಗೊ ಕೃತ್ಯವ
ಮನವರಿಯದ ಕಳ್ಳತನವಿಲ್ಲ
ಜನ ಮೆಚ್ಚಿ ನಿನ್ನ ಕೈಲಾಸಕೊಯ್ಯರೆ
ಜನ ಮೆಚ್ಚಿದರೆ ಶಿವ ತಾ ಬಿಡುವನೆ
ಜನರೆಲ್ಲ ನಿನ್ನನ್ನು ದೊಡ್ಡಾತನೆಂದರೆ
ಚಿನುಮಯ ಶಿವನೆಲ್ಲ ಅರಿಯನೆ ಮರುಳೇ
ಮನದಲಿ ಶಿವ ತಾ ಮನೆ ಮಾಡಿಕೊಂಡಿಹ
ಮನಕಂಜಿ ನಡೆಯದೆ ಜನಕಂಜಿ ನಡೆದರೆ
ಮನದಾಣ್ಮ ಗುರುಸಿದ್ಧ ಮರೆಯಾಗೋನಲ್ಲ
ಎಂದು ಸರ್ವಭೂಷಣ ಶಿವಯೋಗಿಗಳು ಹೇಳುತ್ತಾರೆ

ಬಹುಶ ಆ ಬಗ್ಗೆ ಹಿಂದೊಮ್ಮೆ ಚರ್ಚೆಯಾಯಿತು ನನಗೆ ತಿಳಿದ ಮಟ್ಟಿಗೆ ರಾಜಕೀಯ ಧರ್ಮದಿಂದ ಮಾಡಬೇಕಾಗುತ್ತದೆ ರಾಜಕೀಯದಲ್ಲಿ ಧರ್ಮ ಇರಬೇಕು ಯಾವ ಧರ್ಮಬೇಕು, "ಇವನ್ಯಾರವ ಇವನ್ಯಾರವ ಇವನಾರವನೆಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ, ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ

ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನೆಲ್ಲವಾ, ಕೋಳಿ ಒಂದು ಗುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವಾ, ಶಿವಭಕ್ತನಾಗಿ ಭಕ್ತಿ, ಪಕ್ಷವಿಲ್ಲದಿದ್ದರೆ ಆ ಕಾಗೆ ಕೋಳಿಗಿಂತ ಕರಕಷ್ಟ ಕೂಡಲ ಸಂಗಮದೇವಾ

"ಕೊಲ್ಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ,

ಕುಲವೇನೋ ಆವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ

ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು

ಇಷ್ಟು ಹೇಳಿ ಬಹುಶ ನಾನು ಈ ದಿವಸ ಪರಿಸರದ ಬಗ್ಗೆ ಮಾತನಾಡುತ್ತೇನೆ ಇಷ್ಟುಹೊತ್ತು ಬೆಳಿಗ್ಗೆಯಿಂದ ಚರ್ಚೆಯಾಯಿತು ಪಿಡಬ್ಲ್ಯುಡಿ

ಂ ು ೀ ಡ ್ ,

ಕರೆಂಟ್, ಕುಡಿಯುವ ನೀರು, ಇದೆಲ್ಲಕ್ಕೂ ಮೂಲ ಅರಣ್ಯ ಅಧ್ಯಕ್ಷರೆ, ನಾವು ಅರಣ್ಯೀಕರಣವನ್ನು ಮಾಡದೇ ಹೋದರೆ ಬಹುಶ ನಮಗೆ ಯಾವ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ

ಯಡಿಯೂರಪ್ಪನವರೇ, ಅದಕ್ಕೆ ಒತ್ತು ಕೊಡಲಿಲ್ಲ, ನಿಮಗೆ ಯಾರಾದರೂ ಹೇಳಿದರೋ ಇಲ್ಲವೋ ಗೊತ್ತಾಗಲಿಲ್ಲ ಬಹುಶ ನಾನು ಹೇಳುತ್ತೇನೆ, ಕನಿಷ್ಠ ಅರಣ್ಯ 33ನೇ ಭಾಗದಷ್ಟಿರಬೇಕಾಗುತ್ತದೆ ದುರ್ದೈವದಿಂದ ಕಳೆದ 50 ವರ್ಷಗಳಿಂದ ನಾವು ಎಲ್ಲಾ ಅರಣ್ಯಗಳನ್ನು ಹಾಳು ಮಾಡಿ ಇವತ್ತು ಕುಡಿಯಲಿಕ್ಕೆ ನೀರಿಲ್ಲದಂಥ ಸ್ಥಿತಿಗೆ ತಂದಿದ್ದೇವೆ ಬಹುಶ ಜಗತ್ತಿನ ತಾಪಮಾನ ಹೆಚ್ಚಾಗುತ್ತದೆ ತಾವೆಲ್ಲಾ ವರದಿಗಳನ್ನು ಓದಿದ್ದೀರಿ ಜಗತ್ತಿನ ತಾಪಮಾನ ಹೆಚ್ಚಾಗಿ ಹಿಮಾಲಯ ಪರ್ವತದಲ್ಲಿರತಕ್ಕಂಥ ಹಿಮಬಂಡೆಗಳು ಕರಗುತ್ತವೆ, ಅದರಿಂದ ಸಮುದ್ರಗಳು ಮತ್ತೆ ಹೆಚ್ಚಾಗುತ್ತವೆ ಆಮೇಲೆ ಗಂಗಾ ಮತ್ತು ಯಮುನಾ ನದಿಗಳು ಕೂಡ ಒಣಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತವೆಂದು ತಜರು ಹೇಳುತ್ತಾರೆ ಬಹುಶ ಮುಂಬರುವ ದಿನಗಳಲ್ಲಿ ಸಮುದ್ರ ಉಕ್ಕೇರಿ ಬಹಳ ಭೂಭಾರವನ್ನು ಆಕ್ರಮಿಸುತ್ತವೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆನ್ನುವ ಮಾತನ್ನು ಕೂಡ ಇವತ್ತು ತಜ್ಞರು ಹೇಳುತ್ತಿದ್ದಾರೆ ಹಾಗೆಯೇ ಮುಂಬರುವ ದಿನಗಳಲ್ಲಿ 50 ವರ್ಷಗಳಿಗೆ ಲೆಕ್ಕ ಕೊಟ್ಟಿದ್ದಾರೆ ಬಹುಶಃ ನಮ್ಮ ಕೃಷಿಯೂ, ನೀರಾವರಿಯೂ ಅಭಿವೃದ್ಧಿ

ಆಗುವುದಿಲ್ಲ ಕುಡಿಯಲಿಕ್ಕೆ ನೀರು ಸಿಗುವುದಿಲ್ಲ ನಾವು ಎಲ್ಲಿಯವರೆಗೆ ಅರಣ್ಯದ ಕಡೆ ಗಮನ ಕೊಡುವುದಿಲ್ಲ, ಈಗ ನಮ್ಮ ಅರಣ್ಯ ಮಂತ್ರಿಗಳು ಇಲ್ಲಿಲ್ಲ ಏಕೋ ಅರಣ್ಯ ಮತ್ತು ಪರಿಸರ ಮಂತ್ರಿಗಳೂ ಬಹಳ ತಮಂದ ಆಗಿಬಿಟ್ಟಿದ್ದಾರೆ, ಏಕೆ ತಮಂದ ಆಗಿದ್ದಾರೋ ನನಗೆ ಗೊತ್ತಾಗುತ್ತಿಲ್ಲ, ಅವರು ಇರಬೇಕಾಗಿತ್ತು ನಾನು major ಆಗಿ ಅರಣ್ಯ ಮತ್ತು ಪರಿಸರದ ಬಗ್ಗೆ ಹೆಚ್ಚು ಮಾತನಾಡುತ್ತೇನೆ ಬಹುಶಃ ಈಗಾಗಲೇ ನಾವು ಕಳೆದ 50-60 ವರ್ಷಗಳಿಂದ ಒಂದು ಕಡೆ ಅರಣ್ಯ ನಾಶ ಮಾಡಿದೆವು ಇನ್ನೊಂದು ಕಡೆ ಜನಸಂಖ್ಯೆ ಬೆಳೆಸಿದೆವು ಇದೇ ನಮ್ಮಲ್ಲಿರುವ ದೊಡ್ಡ ರೋಗ ಇದೆಲ್ಲದಕ್ಕೂ ನಾವು ಏನು ಮಾಡಿದರೂ, ಯಾವ ರೀತಿಯಿಂದ ಖಂಡಿತವಾಗಿ ಇದನ್ನು ಎಂದೂ ಸುಧಾರಣೆ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಆ ಕಾರಣದಿಂದ ಮಾನ್ಯ ಕೃಷಿ ಸಚಿವರು ನೀವು ಈಗ ಮಂತ್ರಿಗಳಾಗಿದ್ದೀರಿ, ಹಿಂದೆ ನೀವು ಸಣ್ಣವರಾಗಿದ್ದಿರಿ ಮೊದಲು N E S ಎಂದು ಬಂತು Agriculture Department ನವರು ಪ್ರಚಾರ ಮಾಡಿದರು, ಸರ್ಕಾರಿ ಗೊಬ್ಬರ ತಂದರು ಎಣ್ಣೆ ತಂದರು, ಗೊಬ್ಬರ ಸಿಂಪಡಿಸಿ ಎಂದು ಹೇಳಿದರು ಆದರಂತೆ ಪ್ರಚಾರ ಆಯಿತು ನಮ್ಮ ತಾಯಿಯವರು ಹಿಂದೆ ಒಂದು ಮಾತನ್ನು ಹೇಳಿದ್ದರು, ಅದನ್ನು ಈಗ ಉದಾಹರಣೆಯಾಗಿ ಇಲ್ಲಿ ಹೇಳುತ್ತೇನೆ ಇಂದು ನಮ್ಮ ತಾಯಿ ಹೇಳಿದಂಥ ಮಾತು ಈಗ ಸರಿಯೆನಿಸುತ್ತದೆ ಆ N E S ಆದಾಗ ನಮ್ಮ ಅಣ್ಣನವರು ಅದರಲ್ಲಿ N E S ನ T D President ಆಗಿದ್ದರು ಯಾರು ಗೊಬ್ಬರ ಹಾಕುವುದಿಲ್ಲವೆಂದು ತಾವೇ ಒಂದು ಚೀಲ ಗೊಬ್ಬರವನ್ನು ಖರೀದಿ ಮಾಡಿಕೊಂಡು ತಂದು Demonstration plant ಹೊಲಕ್ಕೆ ಹಾಕಿಸಲಿಕ್ಕೆ ನಮ್ಮ ತಾಯಿಗೆ ಕೊಟ್ಟರು, ನಮ್ಮ ತಾಯಿಯವರು ಅದನ್ನು ಹೊಲಕ್ಕೆ ಹೇರಿಕೊಂಡು ಹೋಗಿ ಅಲ್ಲಿದ್ದ ಒಬ್ಬ ಆಳಿಗೆ ಹೇಳಿದರು, ನಮ್ಮ ಹುಡುಗರಿಗೆ ಇದರ ಬಗ್ಗೆ ಗೊತ್ತಿಲ್ಲ, ಈ ಗೊಬ್ಬರವನ್ನು ಹಾಕಬಾರದು ಹೊಲ ಕೆಡುತ್ತದೆಂದು ಹೇಳಿ ನಮ್ಮ ತಾಯಿಯವರು ಒಂದು ಗಟರ್ ಅನ್ನು ತೆಗೆದು ಅದರಲ್ಲಿ ಗೊಬ್ಬರವನ್ನು ಮುಚ್ಚಿಸಿಬಿಟ್ಟಿದ್ದರು ನಮ್ಮ ಅಣ್ಣನವರು ನೋಡಿದರು ಏನು ಬೆಳೆಯಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲವೆಂದು ಆಳುಗಳನ್ನು ಕೇಳಿದಾಗ, ಆತ ತಮ್ಮ ತಾಯಿಯವರು ಹೇಳಬಾರದೆಂದು ಹೇಳಿದ್ದಾರೆ ಎಂದ ಅದಕ್ಕೆ ಏನು ವಿಷಯವೆಂದು ಮತ್ತೆ ನಮ್ಮ ಅಣ್ಣ ಕೇಳಿದಾಗ ಆತ ಇಲ್ಲ ಆ ಗೊಬ್ಬರವನ್ನು ಹೊಲಕ್ಕೆ ಹಾಕಿದರೆ ಹೊಲ ಕೆಡುತ್ತದೆಂದು ಗಟರ್‌ನೊಳಗೆ ಹಾಕಿ ಮುಚ್ಚಿಸಿದ್ದಾರೆಂದು ಹೇಳಿದ ಆ ಮಾತು ಇವತ್ತು ನೆನಪಾಗುತ್ತದೆ ಸಾವಯುವ ಕೃಷಿಗೆ ನಾವು ಮತ್ತೆ ಮರಳಿ ಬರುತ್ತಿದ್ದೇವೆ ಆ ಕೃಷಿಯ ಬಗ್ಗೆ ಮಾತನಾಡುವುದಕ್ಕಿಂತ ಮೊದಲೇ ನಾವು ಅರಣ್ಯೀಕರಣದ ಬಗ್ಗೆ ಮಾತನಾಡಲು ಬಯಸುತ್ತೇನೆ ಬಹುಶಃ ಯಡಿಯೂರಪ್ಪನವರೇ,

ಬರೇ 137–00 ಕೋಟಿ ರೂ ಗಳನ್ನು ಇಟ್ಟಿದ್ದೀರಿ ಈ ಪರಿಸರದ ಬಗ್ಗೆ ನಾನು ಎಲ್ಲಾ ಅಂಕಿ ಸಂಖ್ಯೆಗಳನ್ನು ನೋಡಿದೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ 100% ಅನುದಾನದ ಅಂಕಿಯನ್ನು ಬಿಟ್ಟಿದ್ದೀರಿ ಇಲ್ಲಿದೆ, ಅದರ ಬಗ್ಗೆ ಮಾಹಿತಿಯನ್ನು ತೋರಿಸುತ್ತೇನೆ ಪರಿಸರದ ಬಗ್ಗೆ ಇಲ್ಲಿ ಯಾವುದೋ ಒಂದು ಮಾಲಿನ್ಯ ನಿಯಂತ್ರಣ ಮಂಡಳಿ ಎಂದು ಇದೆ ಪರಿಸರ, ಅರಣ್ಯ, ಜೀವಿಶಾಸ್ತ್ರ ಇಲಾಖೆಯ ವಾರ್ಷಿಕ ವರದಿಯಿದೆ ಇದರಲ್ಲಿ ಇವರ ಬಜೆಟ್ ಮುವತ್ತೆರಡುನೂರು ಲಕ್ಷರೂ ಗಳಿವೆ, ಅದರಲ್ಲಿ ಅವರು ಖರ್ಚು ಮಾಡಿರುವುದು ಕೇವಲ ಹದಿನಾರುನೂರು ಲಕ್ಷ ರೂಪಾಯಿಗಳು ಮಾತ್ರ ಯಡಿಯೂರಪ್ಪನವರೇ, ಏನು ಮಾಡುವುದು ಇದು ಯಾರ ತಪ್ಪು? ಇರುವುದೇ ಮುವತ್ತೆರಡು ನೂರು ಕೋಟಿ ರೂ ಗಳು, ಅರ್ಧ ಅದರಲ್ಲಿ 100% ಕೇಂದ್ರ ಸರ್ಕಾರದ ಅನುದಾನ ಅಂಕಿ ಸಂಖ್ಯೆಯನ್ನು ಬಿಡಲಾಗಿದೆ ಕೇಂದ್ರದಿಂದ ಬರತಕ್ಕಂಥ ಅನುದಾನವನ್ನು ಬಿಟ್ಟಿದ್ದೀರಿ ಬಹುಶಃ ನಿಮಗೆ ಹೇಳುತ್ತೇನೆ, ನಾವು ಈಗ ಹಿಂದಿನ ಮಹಾರಾಜರನ್ನು ನೆನಸಬೇಕು, ನಮ್ಮ ಬೆಂಗಳೂರಿನಲ್ಲಿ ಈ ರೀತಿ ಗಿಡಗಳನ್ನು ಬೆಳೆಸಿದ್ದಾರೆಂದು ತಿಳಿದುಕೊಂಡು ನಾವು ಇನ್ನು ಉಸಿರಾಡುತ್ತಿದ್ದೇವೆ ಈಗಲೂ ಕೂಡ ತಜ್ಞರ ವರದಿಯ ಪ್ರಕಾರ ನಮ್ಮ ಬೆಂಗಳೂರಿನಲ್ಲಿ ನೂರಕ್ಕೆ ಇಪ್ಪತ್ತು ಭಾಗ ಮಕ್ಕಳು ಇವತ್ತಿನ ದಿವಸ ಅಸ್ತಮಾದಿಂದ ನರಳುತ್ತಿದ್ದಾರೆ ಇವತ್ತು ಇಲ್ಲಿ ಆರೋಗ್ಯ ಸಚಿವರು ಇಲ್ಲ ಈ ಕಾರಣದಿಂದ ನಾವು ಅರಣ್ಯದ ಕಡೆ ಹೆಚ್ಚು ಗಮನವನ್ನು ಕೊಡದೇ ಹೋದರೆ ಮುಂಬರುವ ದಿನಗಳಲ್ಲಿ ಯಾವುದೇ ಯೋಜನೆಗಳು ಆಗುವುದಿಲ್ಲ ಈಗಾಗಲೇ ತಜ್ಞರ ವರದಿಯಂತೆ ಇಂದಿನ ಪ್ರಜಾವಾಣಿಯಲ್ಲಿ ಬಹಳ ಚೆನ್ನಾಗಿ ಬರೆದಿದ್ದಾರೆ, “ಪರಿಸರ ಉಳಿಸಲು, ಬನ್ನಿ ಸರ ಸರ“ ಇದನ್ನೆಲ್ಲಾ ನಾವು ಓದಬೇಕು ಇಲ್ಲದಿದ್ದರೆ ಇದರಿಂದ ಏನು ಅನಾಹುತವಾಗುತ್ತದೆ, ಎಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಅವೆಲ್ಲದರ ಬಗ್ಗೆ ನಾನು ವಿವರಣೆ ಮಾಡಲಿಕ್ಕೆ ಹೋಗುವುದಿಲ್ಲ ಆ ಕಾರಣದಿಂದ ನಾವೆಲ್ಲರೂ ಪರಿಸರ ಮತ್ತು ಅರಣ್ಯದ ಬಗ್ಗೆ ಕಾಳಜಿ ಮಾಡಬೇಕು ಬಹುಶಃ 50–60 ವರ್ಷದ ಮರ ಮಾನ್ಯ ಕೃಷಿ ಸಚಿವರು ಇದನ್ನು ಗಮನಿಸಬೇಕು ಆ ಮರದ ಕಿಮ್ಮತ್ತು ಎಷ್ಟಾಗುತ್ತದೆಂದು ನಾವು ಕೇಳಿ ಈಗ ಮಾರಲಿಕ್ಕೆ ಹೋದರೆ 10 ರಿಂದ 15,000 ಅಥವಾ 20,000–00 ರೂ ಗಳಿಗೆ ಮಾರುತ್ತೇವೆ ಅದರ ಕಿಮ್ಮತ್ತು ಇವತ್ತು ಒಂದು ಕೋಟಿ ಎರಡು ಲಕ್ಷ ರೂ ಗಳ ಬೆಲೆಯೆಂದು ಲೆಕ್ಕ ಮಾಡಿದ್ದಾರೆ ಒಂದು 60–70 ವರ್ಷದ ಹಳೆಯ ಮರದ ಕಿಮ್ಮತ್ತು ಎಷ್ಟೆಂದರೆ ಒಂದು ಕೋಟಿ ಎರಡು ಲಕ್ಷ ರೂ ಗಳು ಅದರಲ್ಲಿ ಅದರಿಂದ ಉತ್ಪನ್ನವಾಗುವ ಆಮ್ಲಜನಕದ ಪ್ರಮಾಣವೆಷ್ಟು? ಅದರಿಂದ ಏನೇನು ಉಪಯೋಗವಾಗುತ್ತದೆ? ಪರಿಸರವನ್ನು ಎಷ್ಟು ಶುದ್ಧತೆ ಮಾಡುತ್ತದೆ ಇವೆಲ್ಲ ಲೆಕ್ಕ ಹಾಕಿದರೆ ಒಂದು

ಕೋಟಿ ಎರಡು ಲಕ್ಷ ರೂ ಗಳು ಆಗುತ್ತದೆ ಆ ಕಾರಣದಿಂದ ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ಖಂಡಿತವಾಗಿ ಅರಣ್ಯಕ್ಕೆ ನಾವು ಮೊದಲ ಆದ್ಯತೆಯನ್ನು ಕೊಡಬೇಕು ಯಡಿಯೂರಪ್ಪನವರೇ, ಮುಂದಿನ ಬಜೆಟ್‌ನಲ್ಲಿ ನಾನು ಹೇಳುವುದು, ಸುಮ್ಮ ಸುಮ್ಮನೆ ವನ ಮಹೋತ್ಸವ ಮಾಡುವುದನ್ನು ನಾವು ನೋಡುತ್ತೀದ್ದೇವೆ, ವನ ಮಹೋತ್ಸವವನ್ನು 50 ವರ್ಷದಿಂದ ಹೇಗೆ ಮಾಡಿದ್ದಾರೆಂದು ಹೇಳಿದರೆ

ಶ್ರೀ ಕೆ.ಆರ್ ರಮೇಶ್ ಕುಮಾರ್ (ಕೆ ಆರ್ ಪೇಟೆ) · ಪಾಟೀಲರು ಬಹಳ ಪ್ರಮುಖವಾದ ತಮ್ಮ ಚಿಂತನೆಯನ್ನು ಹೇಳುತ್ತಿದ್ದಾರೆ ಆದ್ಯತೆ ಕೊಡುವುದು ಎಂದರೆ ಏನು ಮಾಡುವುದು Forest Department ಇನ್ನು 50 00 ಕೋಟಿ ರೂ ಗಳ ಹೆಚ್ಚು ಬಜೆಟ್ ಅನ್ನು ಕೊಡುವುದೇ? ಈ Forest Department ನವರ ಹತ್ತಿರ ಏನು action plan ಇದೆ? ಈಗ ಇರುವ Forest Department ನವರಿಗೆ Forest ಎಂದರೆ ಏನು? ಅದರ ಕಲ್ಪನೆ ಏನು ? ಅದರ commitment ಎಷ್ಟು? ಪ್ರಪಂಚ ಹೇಗಿದೆ? ಎಷ್ಟು percentage ಇರಬೇಕಾಗಿತ್ತು? ಯಾವ ರೀತಿಯಾದ species ಮೊದಲಿತ್ತು ಈಗ ಯಾವ species ಇಟ್ಟರೆ ಸಮಾಜಕ್ಕೆ, ರೈತನಿಗೆ ಕೆಲಸಕ್ಕೆ ಬರುತ್ತದೆ, ಅದರ ಬಗ್ಗೆ ಇವರ ತಲೆಯಲ್ಲಿ ಏನಾದರೂ ಇದೆಯೇ? ನೀವು ಹೇಳುವುದು ಸರಿ, ಅವರಿಗೆ ದುಡ್ಡು ಕೊಟ್ಟರೂ ಪ್ರಯೋಜನವಾಗುತ್ತದೆ

ಅಧ್ಯಕ್ಷರು ಅವರು ಎಷ್ಟು ವರ್ಷ ಓದಿ ಬಂದಿರುತ್ತಾರೆ? ಡಿಗ್ರಿಗಳನ್ನು ತೆಗೆದುಕೊಂಡು ಬಂದಿರುತ್ತಾರೆ ನೀವು ಹಾಗೆಂದರೆ ಹೇಗೆ?

ಶ್ರೀ ಕೆ.ಆರ್ ರಮೇಶ್ ಕುಮಾರ್ . ಅವರು ಏನಿಲ್ಲ, ಪೇಪರ್‌ನಲ್ಲಿ ಗುಣಿ ಒಡೆಯುವುದು ದುಡ್ಡು ಜೇಬಿನಲ್ಲಿಟ್ಟುಕೊಳ್ಳುವುದು, ಬೆಂಗಳೂರಿನಲ್ಲಿ ಆಸ್ತಿ ಮಾಡುವುದು, ಇಷ್ಟರಲ್ಲೇ, ಇದ್ದಾರೆ ಅವರು ಜಾಸ್ತಿ ಜನ ಬಂದುಬಿಟ್ಟು ಬೇರೆ ಬೇರೆ ಇಲಾಖೆಗಳಿಗೆ ಪೋಸ್ಟಿಂಗ್ಸ್ ತೆಗೆದುಕೊಳ್ಳುವುದು

ಅಧ್ಯಕ್ಷರು ಬೆಂಗಳೂರಿನಲ್ಲಿ ಅವರು ಆಸ್ತಿ ಮಾಡಿದ್ದರೆ ಅವರ ಮೇಲೆ ರೈಡ್ ಮಾಡಿ ಅವರನ್ನು ಜೈಲಿಗೆ ಹಾಕಿ, ಅದನ್ನು ಬಿಟ್ಟು ಸುಮ್ಮನೆ ಈ ರೀತಿ ಹೇಳಿದರೆ ಇದು ಉಪಯೋಗವಿಲ್ಲ ನಿಮ್ಮ ಕೈಯಲ್ಲಿರುವ ಅಧಿಕಾರವನ್ನು ಪ್ರಯೋಗ ಮಾಡಿ

ಶ್ರೀ ಕೆ ಆರ್. ರಮೇಶ್ ಕುಮಾರ್ · ನೀವು ತುಂಬಾ ಜಾಣರು, ನಿಮ್ಮ ಬಾಯಿಯಲ್ಲಿ ಬರಬೇಕಾದ ಮಾತುಗಳನ್ನು ನಮ್ಮ ಬಾಯಿಗೆ ಹಾಕಲಿಕ್ಕೆ ಪ್ರಯತ್ನಿಸುತ್ತಿದ್ದೀರಿ, ತಾವು ಜಾಣರಾಗದಿದ್ದರೆ ಅಧ್ಯಕ್ಷರಾಗಲಿಕ್ಕೆ ಆಗುತ್ತದೆಯೇ? ತಾವು ಜಾಣರು ಎಂಬ ಮಾತನ್ನು ನಾನು ಒಪ್ಪುತ್ತೇನೆ ಏನೆಂದರೆ ಯಾವ

ಪ್ರಯತ್ನವನ್ನು ಮಾಡಿಲ್ಲ ಯಡಿಯೂರಪ್ಪನವರೇ ಗುಬ್ಬಚ್ಚಿಗಳು ಎಂಥ ರೈತಮಿತ್ರ ಗೊತ್ತೇ ಅದರ ವಂಶಗಳು ಹಳ್ಳಿಗಳಲ್ಲಿ ಕಾಣುತ್ತಿಲ್ಲ ಜೇನು ಹೋಯಿತು, ಸೀತಾಫಲ, ಹೊಂಗೆ ಮರಗಳನ್ನು ಯಾರು ನೆಡುತ್ತಿರಲಿಲ್ಲ ತಮ್ಮಷ್ಟಕ್ಕೆ ತಾವೇ ಬೆಳೆಯುತ್ತಿದ್ದವು ಈಗ ಅವೆಲ್ಲಾ ಹೋಗಿಬಿಟ್ಟಿವೆ ಯುಕಲಿಪ್ಟಸ್ ಗಿಡಗಳನ್ನು ಇವರು ತಂದು ನೆಟ್ಟಿರು ಆ ಗಿಡಗಳನ್ನು ತಂದು ನೆಡುವುದು, ದುಡ್ಡು ಮಾಡುವುದು, ತಿರುಗುವುದು ವನಮಹೋತ್ಸವ ಮಾಡುತ್ತಾರೆ, ಇವತ್ತು ಎಲ್ಲಾದರೂ ನೋಡಿ ಒಂದು ಹತ್ತು ಎಕರೆ ಕಾಡು ಬೆಳೆಸುರುವುದನ್ನು ಎಲ್ಲಾದರೂ ನೋಡಿದ್ದೀರಾ? ಪುರಾತನ ಕಾಲದಲ್ಲಿ ತನ್ನಷ್ಟಕ್ಕೆ ತಾನೇ ಇದ್ದ ಕಾಡುಗಳನ್ನು ನೋಡಿದರೆ, ನಾನು ಈ ಸರ್ಕಾರ ಎಂದು ಹೇಳುವುದಿಲ್ಲ, ತಮ್ಮ ಸರ್ಕಾರ ಎರಡು ವರ್ಷಗಳದ್ದು, ಸತತವಾಗಿ ಆಡಳಿತ ಮಾಡಿ ಹೋದಂಥ ಎಲ್ಲಾ ಸರ್ಕಾರಗಳು ಇವರೆಲ್ಲರೂ ಸೇರಿ ಎಲ್ಲಾದರೂ ಒಂದು ಮರವನ್ನು ನೆಟ್ಟಿದ್ದಾರೆಯೇ? ಲೆಕ್ಕ ತೆಗೆದು ನೋಡಿ ಎಷ್ಟು ಖರ್ಚು ಮಾಡಿದ್ದಾರೆಂದು? ನಿಮಗೆ ಅವಿವೇಕಿಗಳು ಹಾಡುಹಗಲೇ ಎಲ್ಲಾ ನಾಚಿಕೆಬಿಟ್ಟು ಎಲ್ಲಾ ಹಾಗೆಯೇ ತಿನ್ನತಕ್ಕಂಥ ಲುಚ್ಚಾಗಳು ದೊರೆಯಬೇಕೆಂದರೆ ಮೊದಲು ಈ ಇಲಾಖೆಯಲ್ಲಿ ದೊರೆಯುತ್ತಾರೆ, Excise Department ನವರು ಕೂಡ ಇವರಾದ ನಂತರ ಬರುತ್ತಾರೆ ಅದರಿಂದ ಆದ್ಯತೆ ಕೊಡಬೇಕಾದರೆ ಮೊದಲು ಏನು ಮಾಡಬೇಕೆಂದು ಹೇಳಿ ನೀವು

ಅಧ್ಯಕ್ಷರು ಏನು ಪ್ರಯೋಜನ? ನೀವು ಈ ತರಹ gradation ಕೊಟ್ಟು ಬಿಟ್ಟು, ಸಲಹೆ ಕೊಟ್ಟರೆ ಏನು ಪ್ರಯೋಜನ?

ಶ್ರೀ ಎಸ್.ಎಸ್ ಪಾಟೀಲ್ · ಸನ್ಮಾನ್ಯ ಅಧ್ಯಕ್ಷರೆ, ನಾನು ರಮೇಶ್ ಕುಮಾರ್ ಅವರಂತೆ ಅಧಿಕಾರಿಗಳು ತೀರಾ ಏನೂ ಮಾಡುವುದಿಲ್ಲವೆಂದು ಹೇಳುವುದಿಲ್ಲ ಅದಕ್ಕೆ ನಾವೂ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ ಬರೀ ಅಧಿಕಾರಿಗಳಿಗೆ ಇದರ ಜವಾಬ್ದಾರಿ ಹೊರಿಸುವುದಿಲ್ಲ ಆದರೆ, ದುರ್ದೈವದಿಂದ ನಾವು ಏನು ಪಾಲಿಸಿ ಮಾಡುತ್ತೇವೆಂದರೆ, IFS Officer ಅವರನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು Administrative Officer ಎಂದು ನೇಮಿಸುತ್ತೇವೆ IPS Officer ಅವರನ್ನು ತೆಗೆದುಕೊಂಡು ಹೋಗಿ ಇನ್ನೊಂದಕ್ಕೆ ನೇಮಿಸುತ್ತೇವೆ IAS, KAS Officers ಇರುತ್ತಾರಲ್ಲ, ಅವರುಗಳು ಹೋಗಿ IPS Officers ಮಾಡುವ ಕೆಲಸ ಮಾಡುವುದಕ್ಕಾಗುತ್ತದೆಯೇ? IFS ಅವರ ಕೆಲಸವನ್ನು IAS ಅಧಿಕಾರಿಗಳು ಮಾಡುವುದಕ್ಕಾಗುತ್ತದೆಯೇ? ಬಹಳಷ್ಟು ಜನ ಅಧಿಕಾರಿಗಳನ್ನು ತೆಗೆದುಕೊಂಡು ಹೋಗಿ ಬೇರೆ ಬೇರೆ ಇಲಾಖೆಗಳಿಗೆ ನೇಮಿಸಿದ್ದಾರೆ ನಾನು ಅರಣ್ಯ ಇಲಾಖೆಯನ್ನು 3–4 ತಿಂಗಳ ಕಾಲ ನೋಡಿಕೊಂಡೆ ಬಹುಶ, ನಾನು ಮೈಸೂರಿನಿಂದ ಕಬಿನಿವರೆಗೆ ನಮ್ಮ DFO, ಇನ್ನಿತರ ಸಿಬ್ಬಂದಿಯನ್ನು

ಕರೆದುಕೊಂಡು ಹೋದೆ ಬಾ ಇಲ್ಲಿ ಹೋಗೋಣ, ಎಲ್ಲಿ ಗಿಡ ನೆಟ್ಟಿದ್ದೀ? ತೋರಿಸು ಬಾ ಎಂದು ರಸ್ತೆಯ ಎರಡೂ ಮಗ್ಗುಲುಗಳನ್ನು ನೋಡಿಕೊಂಡು ಹೋದೆ ರಸ್ತೆಯ ಎರಡೂ ಮಗ್ಗುಲಲ್ಲೂ ಕಳ್ಳಿ ಗಿಡ ಮಾತ್ರ ಸಿಕ್ಕಿತೇ ವಿನಾ ಬೇರೆ ಗಿಡಗಳಿಲ್ಲ ಅದೇ ತಗ್ಗಿನಲ್ಲಿ, ಅದರಲ್ಲೇ ಸುಮಾರು 50 ವರ್ಷಗಳ ಕಾಲ ಅದೇ ಉದ್ಯೋಗವನ್ನೇ ಮಾಡಿದ್ದೇವೆ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಮರಗಳನ್ನು ಬೆಳೆಸಲಿಲ್ಲ ಗಿಡಗಳನ್ನು ನೆಡುವುದು ಬೇಡ ತಾನಾಗೇ ಬೆಳೆದ ಮರಗಳನ್ನು ನಾವು ಉಳಿಸಿಕೊಂಡರೆ ಸಾಕು ಖಂಡಿತವಾಗಿಯೂ ಅರಣ್ಯ ಉಳಿಯುತ್ತದೆ ಅಧ್ಯಕ್ಷರೆ, ಅಲ್ಲಿ ನಾವು motivator ಎಂದು ನೇಮಿಸಿದ್ದೇವೆ

ಶ್ರೀ ಮಹಿಮಾ ಜ ಪಟೇಲ್ ಅಧ್ಯಕ್ಷರೆ, ಅರಣ್ಯ ಇಲಾಖೆಯನ್ನು ರೂಪಿಸಿದ್ದೇ ಬ್ರಿಟಿಷರ ಕಾಲದಲ್ಲಿ ಆಗ ನಮ್ಮಲ್ಲಿ ಕಾಡು ತುಂಬಾ ಇತ್ತೆಂದು ಕಾಡನ್ನು ಕಡಿಯುವುದಕ್ಕೆಂತಲೇ ಅರಣ್ಯ ಇಲಾಖೆಯನ್ನು ಸೃಷ್ಟಿಸಿದ್ದು! ಆಗಿನಿಂದಲೂ ಅದೇ ರೂಢಿಯಲ್ಲಿದೆ ಅರಣ್ಯ ಕಡಿಯುವುದೇ ರೂಢಿಯಾಗಿ ಬಿಟ್ಟಿದೆ ಅದರ attitude ಸ್ವಲ್ಪ ಬದಲಾವಣೆಯಾಗಬೇಕು

ಶ್ರೀ ಕೆ ಆರ್. ರಮೇಶ್ ಕುಮಾರ್ : ಮೈಸೂರು ಮಹಾರಾಜರು ಯಾವ ರಸ್ತೆಗಳನ್ನೂ ಬಿಡದೇ ರಸ್ತೆಯುದ್ದಕ್ಕೂ ಸಾಲು ಮರಗಳನ್ನು ನೆಟ್ಟು fibre content ಹೆಚ್ಚಿಗೆ ಇರುವ ಮರಗಳು ಬಹಳ ವರ್ಷ ಬಾಳಬೇಕು, ಅನಂತರ, ಅದು ಎಲ್ಲಿಯೂ ಪ್ರಯೋಜನಕ್ಕೆ ಬಾರದೇ ಹೋದರೆ, ಅದು ಟಿಂಬರ್ ಆಗಬೇಕು ಬದುಕಿದ್ದಾಗ ಹಣ್ಣು ಕೊಡಬೇಕು, ನೆರಳು ಕೊಡಬೇಕು, ನೇರಳೆ ಹಣ್ಣು, ಮಾವಿನ ಹಣ್ಣು, ಎಂತೆಂತಹ ಮರಗಳು, ಜಾಲಿ ಮರಗಳು, ಹಳೆಯ ಮೈಸೂರಿನ ವ್ಯಾಪ್ತಿಯಲ್ಲಿರುವ ಯಾವುದೇ ಒಂದು ಸಣ್ಣ ರಸ್ತೆಯಲ್ಲೂ ಮೈಸೂರು ಮಹಾರಾಜರು ಸಾಲು ಮರಗಳನ್ನು ನೆಡದೆ ಬಿಟ್ಟಿರಲಿಲ್ಲ ಆದರೆ, ಇವರು ಎಲ್ಲವನ್ನೂ ಬಾಯಿಗೆ ಹಾಕಿಕೊಂಡು ಬಿಟ್ಟರು ಎಲ್ಲವನ್ನೂ ಬಾಯಿಗೆ ಹಾಕಿಕೊಂಡು ಬಿಟ್ಟು ನೀಲಗಿರಿ ತಂದು ಇಟ್ಟಿದ್ದಾರೆ

ಶ್ರೀ ಮಹಿಮಾ ಜ ಪಟೇಲ್ . ನಮ್ಮ ಚನ್ನಗಿರಿಯಲ್ಲಿ ಕುಕ್ವಾಡೇಶ್ವರಿ ಎಂದು ಒಂದು ದೊಡ್ಡ ಕಾಡು ಇದೆ ಅದು ಸುಮಾರು 50 ಸಾವಿರ ಎಕರೆ ಇದೆ ಅಲ್ಲಿರುವ ಯಾವುದೇ ಮರಗಳು ಕೂಡ ಹತ್ತು ವರ್ಷಗಳಿಗಿಂತಲೂ ದೊಡ್ಡದಿಲ್ಲ ಆ ಸಣ್ಣ ಸಣ್ಣ ಮರಗಳೆಲ್ಲವೂ ಹೊಸ ಮರಗಳಾಗಿವೆ

ಶ್ರೀ ಎಸ್ ಎಸ್ ಪಾಟೀಲ್ ಅಧ್ಯಕ್ಷರೆ ಬಹುಶಃ ನಮ್ಮ ಮಹಿಮಾರವರು ಹೇಳುವ ಮಾತು

ಶ್ರೀ ಜೆ ಸಿ ಮಾಧುಸ್ವಾಮಿ . ಮಹಿಮಾ ಪಟೇಲ್ ಎಂದು ಹೇಳಿ, 'ಮಹಿಮಾ, ಎಂದರೆ, ಹೆಂಗಸರು ಆ ಹೆಸರನ್ನು ಇಟ್ಟುಕೊಳ್ಳುತ್ತಾರೆ

ಶ್ರೀ ಎಸ್ ಎಸ್ ಪಾಟೀಲ್ · ನಮ್ಮ ಕಡೆ ಹೆಂಗಸರೂ ಕೂಡ ಅಡ್ಡ ಹೆಸರನ್ನು 'ಪಟೇಲ್, ಎಂತಲೇ ಬರೆದುಕೊಳ್ಳುತ್ತಾರೆ ನಮ್ಮ ಕಡೆ 'ಹೆಂಗಸರು ಎಂದರೆ, ಬಹಳ danger ಶಬ್ದವಾಗಿದೆ ನೀವು ಹೆಂಗಸು ಎಂದು ಹೇಳಬೇಡಿ ನಮಗೆ ಬಹಳ ಸಿಟ್ಟು ಬರುತ್ತದೆ ನಮ್ಮ ಕಡೆ ಹೆಂಗಸು ಎಂದರೆ, ಬಹಳ ಕೆಟ್ಟ ಶಬ್ಧವಾಗಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇದಕ್ಕೆ ನಮ್ಮ objection ಇದೆ ಏಕೆಂದರೆ, ನಮ್ಮ ಕಡೆ ಹೆಣ್ಣು ಮಕ್ಕಳು dangerous ಎಂದು ಹೇಳುತ್ತಿದ್ದಾರೆ ನೀವೇನಾದರೂ ಆ ಕಡೆ ಹೋದಾಗ, ಬೆಂಗಳೂರು ಬಿಟ್ಟು ಗದಗಕ್ಕೆ ಹೋದರೆ, ಎಲ್ಲರೂ ಅವರಿಗೆ ಮುತ್ತಿಗೆ ಹಾಕುತ್ತಾರೆ ಆದ್ದರಿಂದ, ದಯವಿಟ್ಟು ಅವರಿಗೆ ರಕ್ಷಣೆ ಕೊಡಿ, ಆ ಶಬ್ಧವನ್ನು ವಾಪಸ್ಸು ತೆಗೆದುಕೊಳ್ಳಿ

ಶ್ರೀ ಎಸ್ ಎಸ್ ಪಾಟೀಲ್ . 'ಹೆಂಗಸು ಎಂದು ನಮ್ಮ ಕಡೆ ಹೇಳುವುದಿಲ್ಲ 'ಹೆಣ್ಣು ಮಗಳು ಇಲ್ಲವೇ 'ತಾಯಂದಿರು ಎಂದು ಕರೆಯುತ್ತೇವೆ ಆದರೆ, ನಿಮ್ಮಲ್ಲಿ ಹೇಗಿದೆ ಎಂದರೆ, ನಮ್ಮ ಹೆಂಗಸರು ಎಂದು ಬಿಡುತ್ತೀರಿ ನಮ್ಮ ದೃಷ್ಟಿಯಲ್ಲಿ ಅದು ಕೆಟ್ಟ ಶಬ್ಧವಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ : ಎಲ್ಲರನ್ನೂ ನಮ್ಮ ಹೆಂಗಸರು ಎಂದು ಹೇಳುವುದಕ್ಕಾಗುತ್ತದೆಯೇ ?

(ನಗು)

ಶ್ರೀ ಎಸ್ ಎಸ್ ಪಾಟೀಲ್ . ನೀವೆಲ್ಲರೂ ನಮ್ಮ ಹೆಂಗಸರು ಎಂದು ಹೇಳುತ್ತೀರೆಂದು ಹೇಳಿದೆ ಅಷ್ಟೇ ಎಲ್ಲರನ್ನೂ ಆ ರೀತಿ ಹೇಳುವುದಕ್ಕಾಗುತ್ತದೆಯೇ?

ಶ್ರೀ ಕೆ.ಆರ್ ರಮೇಶ್ ಕುಮಾರ್ ಒಬ್ಬೊಬ್ಬರು ಧಾರಾಳವಾಗಿ ಇರುವವರು ಹೇಳಬಹುದು ಎಲ್ಲರೂ ಹೇಳುವುದಕ್ಕಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ . ಇವರು ಮತ್ತೆ ಮತ್ತೆ ನಮ್ಮನ್ನು ತಮ್ಮೆದುರಿಗೆ ಎಳೆಯುತ್ತಿದ್ದಾರೆ ಯಡಿಯೂರಪ್ಪನವರೆ, ನಾನು ಅನೇಕ ವಿಚಾರಗಳನ್ನು ಮುಚ್ಚಿಟ್ಟುಕೊಂಡಿದ್ದೇನೆ ಅದು ನಿಮಗೂ ಗೊತ್ತಿದೆ ತಮಗೂ ಗೊತ್ತಿದೆ ನಮ್ಮ ರಮೇಶ್ ಕುಮಾರ್ ರವರ ವಿಚಾರ ನಿಮಗೂ ಗೊತ್ತಿದೆ, ಖರ್ಗೆಯವರಿಗೂ

ಗೊತ್ತಿದೆ ಬೇಡವೆಂದರೂ, ಅವರು ಮತ್ತೇ ಮತ್ತೇ ಆಸೆ ಪಟ್ಟರೆ, ನಾನು ಹೇಳಲು ಸಿದ್ಧ ಹೇಳಿ ಎಂದರೆ, ನಾನು ಹೇಳಲು ಸಿದ್ಧನಾಗಿದ್ದೇನೆ

ಅಧ್ಯಕ್ಷರು . ಸಾಕ್ಷಿಗಳಿದ್ದಾರೆ, ಹೇಳಿಬಿಡಿ

ಶ್ರೀ ಕೆ.ಆರ್ ರಮೇಶ್ ಕುಮಾರ್ · ಪಟೇಲರು ವಾಪಸ್ಸು ಬರಬೇಕು, ನಂಜೇಗೌಡರು ವಾಪಸ್ಸು ಬರಬೇಕು, ಹಾಗಿದ್ದರೆ, ಮಾತ್ರ discuss ಮಾಡಿ, ಇಲ್ಲದಿದ್ದರೆ, ಬೇಡ

ಶ್ರೀ ವಾಟಾಳ್ ನಾಗರಾಜ್ : ನನ್ನದೂ ಒಂದು condition ಅಲ್ಲಿಗೇ ಹೋಗಿ ಬಿಡೋಣ ಬನ್ನಿ ಪಟೇಲರು ಎಲ್ಲಿದ್ದಾರೋ ಅಲ್ಲಿಗೆ ಹುಡುಕಿಕೊಂಡು ಹೋಗೋಣ, ಆದದ್ದಾಗಲಿ

ಶ್ರೀ ಎಸ್ ಎಸ್ ಪಾಟೀಲ್ : ಅಧ್ಯಕ್ಷರೆ, ಇವರಿಬ್ಬರೂ ಅವರನ್ನು ಹುಡುಕಿಕೊಂಡು ಹೋಗುವವರಲ್ಲ ಸುಮ್ಮನೆ ಆ ರೀತಿ ಹೇಳುತ್ತಾರಷ್ಟೆ ಸನ್ಮಾನ್ಯ ಅಧ್ಯಕ್ಷರೆ, ಅದು ಒಂದೊಂದು ಭಾಗದಲ್ಲಿರುವ ಭಾಷೆಯಾಗಿದೆ ನಾವು ಸಿದ್ಧರಾಮಯ್ಯನವರನ್ನು ಕೊಪ್ಪಳದಲ್ಲಿ ಎಂ ಪಿ ಸ್ಥಾನಕ್ಕೆ ನಿಲ್ಲಿಸಿದ್ದೆವು ಇಬ್ಬರೂ ಸೇರಿಕೊಂಡು ಪ್ರಚಾರಕ್ಕೆ ಹೋಗುತ್ತಿದ್ದೆವು ಅಲ್ಲಿ ಜಾಸ್ತಿ ಸಂಖ್ಯೆಯಲ್ಲಿ ಜನರು ಸೇರಿದ್ದಾಗ, 'ಇಲ್ಲಿರುವ ಹೆಂಗಸರೆಲ್ಲರೂ ಸೇರಿ ನನಗೆ ಓಟು ಹಾಕಬೇಕು ಎಂದು ಹೇಳಿಬಿಡುತ್ತಿದ್ದರು ಆಗ ನಾನು, 'ಸಿದ್ಧರಾಮಯ್ಯನವರೆ, ನೀವು ಈ ರೀತಿ ಹೇಳಿದರೆ, ನಮಗೆ ಓಟು ಬೀಳುವುದಿಲ್ಲ, ನಾವು ಹೊಡೆಸಿಕೊಂಡು ಹೋಗುತ್ತೇವೆ ಎಂದು ಹೇಳಿದೆ ಪಾಪ! ಅವರಿಗೆ ಗೊತ್ತಿಲ್ಲ ಈ ಕಡೆ 'ಹೆಂಗಸರು ಎಂದು ಕರೆಯಬಾರದು 'ಹೆಣ್ಣು ಮಕ್ಕಳು ಇಲ್ಲವೇ 'ತಾಯಂದಿರು ಎಂದು ಕರೆಯಬೇಕೆಂದು ನಾನು ಅವರಿಗೆ ಕಲಿಸಿದೆ ಅದೇ ರೀತಿ ನಾನು, ಸಿದ್ಧರಾಮಯ್ಯನವರು ಮತ್ತು ದೇವೇಗೌಡರು ಸೇರಿ ಮೈಸೂರಿಗೆ ಹೊರಟಿದ್ದೆವು 'ಏ, ಭಾಳ ಬೆರಕಿ ಎಂದು ನಾನು ಹೇಳಿದೆ 'ಅಯ್ಯೋ ಪಾಟೀಲರೆ, ಹೀಗೆ ಹೇಳಬೇಡಿ, ಇಲ್ಲಿ ನಿಮ್ಮನ್ನು ಹೊಡೆಯುತ್ತಾರೆ, ಎಂದರು ನಮ್ಮ ಕಡೆ 'ಬೆರಕಿ ಎಂದರೆ, ಚುರುಕು, ಬುದ್ಧಿವಂತ ನನ್ನ ಮಗ ಬೆರಕಿ ಎಂದು ನಾವು ಕರೆಯುತ್ತೇವೆ ಈಗ ನಮ್ಮ ಕಡೆ ಭಾಷೆ ಮತ್ತು ನಿಮ್ಮ ಕಡೆ ಭಾಷೆ ಏನೆಂಬುದು ಗೊತ್ತಾಗಿದೆ ಮೊದಲು ಇಲ್ಲಿಗೆ ಬಂದಾಗ, ನಮಗೆಲ್ಲರಿಗೂ 'ಕಕ್ಕಸ ಎಂದರೆ ಗೊತ್ತಾಗುತ್ತಿರಲಿಲ್ಲ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಇಲ್ಲೇ ಇದ್ದಾರೆ ಬಹುಶಃ 2–3 ವರ್ಷಗಳಿಂದ ನಾನು ಕಾರ್ಯಕ್ರಮ ಹಾಕಿಕೊಂಡಿದ್ದೇನೆ

ಶ್ರೀ ವಾಟಾಳ್ ನಾಗರಾಜ್ : ಯಾವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿರುವುದು?

ಶ್ರೀ ಎಸ್ ಎಸ್ ಪಾಟೀಲ್ ವನ ಮಹೋತ್ಸವಕ್ಕೆ

ಶ್ರೀ ವಾಟಾಳ್ ನಾಗರಾಜ್ . ಓಹೋ, ವನಮಹೋತ್ಸವಕ್ಕೋ? ನಾನೆಲ್ಲೋ

ಶ್ರೀ ಎಸ್ ಎಸ್ ಪಾಟೀಲ್ . ಮಹಿಮಾ ಪಟೇಲ್‌ರವರು ಕೇಳಿದ್ದಕ್ಕೆ, ಅವರಿಗೆ ಉತ್ತರಿಸುತ್ತಿದ್ದೆ

ಒಬ್ಬ ಮಾನ್ಯ ಸದಸ್ಯರು ಅಧ್ಯಕ್ಷರೆ, ಮಹಿಳಾ ಮತ್ತು ಕಲ್ಯಾಣಕ್ಕೂ, ವನಮಹೋತ್ಸವಕ್ಕೂ ಎಲ್ಲಿಂದೆಲ್ಲಿಯ ಸಂಬಂಧ?

ಶ್ರೀ ಎಸ್ ಎಸ್ ಪಾಟೀಲ್ ವನಮಹೋತ್ಸವ ಕಾರ್ಯಕ್ರಮಕ್ಕೆ ನಾವೆಲ್ಲರೂ ಜವಾಬ್ದಾರಿ ಹೊರಬೇಕಾಗುತ್ತದೆ ಸುಮ್ಮನೆ ಹೇಳಿದರೆ ಏನೂ ಉಪಯೋಗವಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ವನ ಮಹೋತ್ಸವವೋ? ಒಣ ಮಹೋತ್ಸವವೋ?

ಶ್ರೀ ಎಸ್ ಎಸ್ ಪಾಟೀಲ್ ಇಷ್ಟು ವರ್ಷ ಆಗಿರುವುದು ಒಣ ಮಹೋತ್ಸವ ಅದು ಆಗಬಾರದು ವನ ಮಹೋತ್ಸವವಾಗಬೇಕು ರೈತ ಹಸಿರು ಕ್ರಾಂತಿ ಹೇಗೆ ಮಾಡಿದನೋ, ಹಾಗೆಯೇ, ಎಲ್ಲರೂ ಸೇರಿಕೊಂಡು ಅಡವಿಯಲ್ಲಿ ಹಸಿರು ಕ್ರಾಂತಿ ಮಾಡಬೇಕಾಗುತ್ತದೆ ಶೇಕಡ 33ರಷ್ಟು ಅರಣ್ಯ ಇರಬೇಕಾದದ್ದು, ಈಗ ನಮ್ಮವರ ಲೆಕ್ಕದ ಪ್ರಕಾರ ಶೇಕಡ 16ರಷ್ಟು ಇದೆಯೆಂದು ಹೇಳುತ್ತಾರೆ ಆದರೆ, ಅಷ್ಟೂ ಇಲ್ಲ ಇವರು ಶೇಕಡ 16 ಎಂದು ಯಾವುದನ್ನು ಹೇಳುತ್ತಾರೆಂದರೆ ನಾನು ಈಗ ಅರಣ್ಯ ಮತ್ತು ಪರಿಸರದ ಮೇಲೆ ಮಾತನಾಡಬೇಕೆಂದು ಎದ್ದು ನಿಂತಿದ್ದೇನೆ ದಯಮಾಡಿ ಕೇಳಿ, ಏನಾದರೂ ತಪ್ಪಿದ್ದರೆ, ಹೇಳಿ

ಶ್ರೀ ವಾಟಾಳ್ ನಾಗರಾಜ್ . ನಾವು ಕೇಳುತ್ತಲೇ ಇದ್ದೇವೆ ನಿಮ್ಮ ದಿಕ್ಕು ಬೇರೆ ಕಡೆಗೆ ಹೋಗುತ್ತಿದೆ ನೀವು ಮಾತನಾಡುತ್ತಾ, ಹೆಂಗಸು, ಕಕ್ಕಸು ಹೀಗೆ ಎಲ್ಲಿಗೋ ಹೋಗುತ್ತಿದ್ದೀರಿ ಇದೇನಿದು? ಇದೊಳ್ಳೇ ಕತೆಯಾಯಿತಲ್ಲ ನುಡಿದರೆ ಮುತ್ತಿನ ಹಾರದಂತಿರಬೇಕೆಂದು ಒಂದು ಕಡೆ ಹೇಳುತ್ತೀರಿ

ಶ್ರೀ ಜೆ ಸಿ ಮಾಧುಸ್ವಾಮಿ ಈ ವಯಸ್ಸಿನಲ್ಲಿ ಅಲ್ಲೆಲ್ಲಾ ಹೋಗುವುದೇಕೆ?

ಶ್ರೀ ವಾಟಾಳ್ ನಾಗರಾಜ್ ನುಡಿದಂತೆ ನಡೆಯದಿದ್ದರೆ?

ಶ್ರೀ ಎಸ್ ಎಸ್. ಪಾಟೀಲ್ ಅಧ್ಯಕ್ಷರೆ, ನಿಜವಾಗಿಯೂ ಹೇಳುತ್ತೇನೆ

ಶ್ರೀ ಕಳಕಪ್ಪ ಜಿ ಬಂಡಿ ಮಾನ್ಯ ಅಧ್ಯಕ್ಷರೆ, ಎಸ್ ಎಸ್ ಪಾಟೀಲರು ಕ್ಷೇತ್ರ ಕಳೆದುಕೊಂಡು, ಅದರ ಜೊತೆಗೆ ಸ್ವಲ್ಪ ಬುದ್ಧಿನೂ ಕಳೆದುಕೊಂಡು ಬಿಟ್ಟಿದ್ದಾರೇನೋ ಅನಿಸುತ್ತಿದೆ

ಶ್ರೀ ಎಸ್ ಎಸ್ ಪಾಟೀಲ್ · ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿನೋದವಾಗಿ ಮಾತನಾಡುವುದಲ್ಲ ಈಗ ನಾವೇನು ಹೊರಟಿದ್ದೇವೆ ಈಗಾಗಲೇ ಅವರು ಹೇಳಿದಂತೆ ಇನ್ನು 50 ವರ್ಷಗಳು ಕಳೆದರೆ, ಈಗಾಗಲೇ ನಾವು ಬಾಟಲಿ ನೀರನ್ನು ಕುಡಿಯಲು ಶುರು ಮಾಡಿದ್ದೇವೆ ಇನ್ನು 50 ವರ್ಷಗಳಾದ ನಂತರ ಆಕ್ಸಿಜನ್ ಇಟ್ಟುಕೊಂಡು ಹೋಗಬೇಕಾಗುತ್ತದೆ ಆಕ್ಸಿಜನ್ ಕಟ್ಟಿಕೊಂಡು ಹೋಗುವ ಕಾಲ ದೂರವಿಲ್ಲವೆಂದು ಈಗಾಗಲೇ ಅವರು ಹೇಳಿದ್ದಾರೆ ಇದು ಹುಡುಗಾಟಿಕೆಯ ಮಾತಲ್ಲ ಬಹುಶಃ ಏನಾದರೂ ಸರಿಯಾಗಿ ಜಾರಿಗೆ ಬರಬೇಕೆಂದರೆ, ಎಲ್ಲ ಯೋಜನೆಗಳು ಸರಿಯಾಗಿ ಅನುಷ್ಠಾನವಾಗಬೇಕೆಂದರೆ ನಿಮ್ಮ ಇಲಾಖೆ ಮುಖಾಂತರ ಆಗಬೇಕಾಗುತ್ತದೆ ಹೆಣ್ಣು ಮಕ್ಕಳನ್ನು ಇಲ್ಲಿ ತಯಾರು ಮಾಡಬೇಕಾಗುತ್ತದೆ, ತಾಯಂದಿರನ್ನು ತಯಾರು ಮಾಡಬೇಕಾಗುತ್ತದೆ ನಾನು ಪ್ರತಿ ದಿವಸವೂ ನಾಲ್ಕು ಊರುಗಳನ್ನು ಇಟ್ಟುಕೊಂಡಿದ್ದೇನೆ ಶಾಲಾ ಮಕ್ಕಳನ್ನು ಜೊತೆಗೆ ಊರಿನಲ್ಲಿರುವ ಎಲ್ಲ ಸ್ವಸಹಾಯ ಗುಂಪುಗಳನ್ನು ಕರೆದುಕೊಳ್ಳುವುದು ಎಲ್ಲರನ್ನೂ ಕರೆದುಕೊಂಡು ವನ ಮಹೋತ್ಸವ ಆಚರಿಸಿಕೊಂಡು ಅಡ್ಡಾಡುತ್ತಿದ್ದೇನೆ ಮಹಿಮ ಪಟೇಲರೆ, ನಿಮಗೆ ಹೇಳುವುದಾದರೆ, ನೀವು ಬ್ರಿಟಿಷರ ಕಡೆಯದು ಎಂದು ಏನೋ ಹೇಳಿದಿರಲ್ಲ,

ಶ್ರೀ ವಾಟಾಳ್ ನಾಗರಾಜ್ ಕಾಡು ಕಡಿಯುವುದಕ್ಕೂ ಮಹಿಮ ಪಟೇಲರಿಗೂ ಏನು ಸಂಬಂಧ? ಮಹಿಮ ಪಟೇಲರಿಗೆ ಹೇಳಿದರೆ ಪ್ರಯೋಜನವಿಲ್ಲ ಜೆ ಹೆಚ್ ಪಟೇಲರಿಗಾದರೂ ಹೇಳಿದ್ದರೆ, ಪ್ರಯೋಜನವಾಗುತ್ತಿತ್ತು

ಶ್ರೀ ಎಸ್ ಎಸ್. ಪಾಟೀಲ್ · ಜೆ ಹೆಚ್ ಪಟೇಲ್ ಅವರ ಬಳಿಯಲ್ಲೇ ಬೆಳೆದವರು ನಾವು ಅವರ ಮಗನೆಂದು ನಾನು ಹೇಳುತ್ತಿದ್ದೇನೆ ಸನ್ಮಾನ್ಯ ಅಧ್ಯಕ್ಷರೆ, ಮೊತ್ತಮೊದಲನೆಯದಾಗಿ, "ಅಪ್ಪಿಕೋ ಚಳವಳಿ ಮಾಡಿದವರು ಹೆಣ್ಣು ಮಕ್ಕಳು ಕಾಶ್ಮೀರದ ಮಹಾರಾಜ ಗಿಡಗಳನ್ನು ಕಡಿಯಲು ಆದೇಶ ಮಾಡಿದ್ದ ಆಗಿನ ಕಾಲದ ಮಹಾರಾಜರು ಆದೇಶ ಮಾಡಿದರೆ ಅವರವರ ಹೆಂಡಿರು ಹೋಗಿ ಅಪ್ಪಿಕೋ ಚಳುವಳಿ ಮಾಡಿದರು ಗಿಡಕ್ಕೆ ಕಟ್ಟುಬಿದ್ದರು ಹೆಂಡಿರ ಕೈಕಡಿಯುವುದಕ್ಕೆ ಹತ್ತಿದರು ಎಷ್ಟು ಜನರನ್ನು ಕಡಿಸುತ್ತಾನೆ? ಇದನ್ನು ನೋಡಿದರೆ ಇತಿಹಾಸದಲ್ಲಿ ಸಿಗುತ್ತದೆ ಆ ಕಾರಣದಿಂದ ನಾನು ಹೇಳುತ್ತೇನೆ, ಎಲ್ಲ ಸ್ವಸಹಾಯ ಗುಂಪುಗಳನ್ನು ತಯಾರು ಮಾಡಿ ನಾವು ಎಲ್ಲ ಹೋಗಿ ಜನತಾ ಮನೆಗೆ ಕೊಡುವುದು, ಗಿಡ

ಬೆಳಸಿ ಎಂದು ಆ ಹೆಣ್ಣುಮಗಳಿಗೆ ಹೇಳಿ ಕೊಡುತ್ತೇವೆ ಅವರೇ ಗಿಡ ಬೆಳೆಸುವುದು ಗಿಡ ಕಡಿಯುವ ಪ್ರಶ್ನೆ ಇಲ್ಲ ನಾವು ಕೂಡ ಅದನ್ನು ಜೋಪಾನ ಮಾಡಬೇಕು ಮಾತೆಯರನ್ನೆಲ್ಲ ಅದರಲ್ಲಿ ತೊಡಗಿಸಿಕೊಂಡರೆ ಖಂಡಿತವಾಗಿ ಇದು ಯಶಸ್ವಿಯಾಗುತ್ತದೆ ಈಗಾಗಲೇ ತಜ್ಞರು ಹೇಳಿದಂತೆ Ozone ಪದರ ಈಗಾಗಲೇ ತೂತು ಬಿದ್ದಿದೆ ಅದು ಎಷ್ಟು ಅಗಲ ರಂಧ್ರವಾಗಿದೆಯೆಂದರೆ ಏಷ್ಯಾ ಖಂಡದಷ್ಟು ಈ ವಿಚಾರವನ್ನು ನಾನು ಓದಿದ್ದು ಹತ್ತು ವರ್ಷಗಳ ಹಿಂದೆ ಇವತ್ತು ಅದು ಎಷ್ಟು ಅಗಲವಾಗಿದೆ ಎಂದು ನನಗೆ ಗೊತ್ತಿಲ್ಲ ಆ ಪ್ರಯೋಗ ಈ ಪ್ರಯೋಗ ಎಲ್ಲ ಮಾಡಿ ಇವತ್ತು Ozone ಪದರ ಹರಿದಿದೆ, ಇನ್ನೊಂದು ಸ್ವಲ್ಪ ಅಗಲವಾದರೆ ಭೂಮಿ ಕುದ್ದು ಹೋಗುತ್ತದೆ ಎಲ್ಲ ಪ್ರಾಣಿಗಳು ಸತ್ತುಹೋಗುತ್ತವೆಂದು ತಜ್ಞರು ಹೇಳುತ್ತಾರೆ ಆ ಕಾರಣದಿಂದ ನೀವು ಇಟ್ಟಂಥ 137 ಕೋಟಿ ಏನೇನು ಅಲ್ಲ ಬಜೆಟ್‌ನಲ್ಲಿ ಅದಕ್ಕೆ ಇದಕ್ಕೆ ಕೊಡುವುದನ್ನು ಬಿಟ್ಟು ಅವರಿಗೆಂದೇ ಸಾವಿರಾರು ಕೋಟಿ ರೂ ಗಳನ್ನು ಕೊಡಿ ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿ Motivator ಎಂದು ಇಟ್ಟಿದ್ದೇವೆ ಇದಕ್ಕೆ ಸಾವಿರ ಕೋಟಿ ರೂ ಗಳನ್ನು ಇಡಲಿ ಅಷ್ಟು ಇಟ್ಟರೆ ಸಾಕು ನನ್ನನ್ನು ಕೇಳಿದರೆ ಬಜೆಟ್‌ನ 50% ಹಣವನ್ನು ಅರಣ್ಯ, ಪರಿಸರಕ್ಕಾಗಿಯೇ ತೆಗೆದಿಡಬೇಕು ಅಂಥ ಕಾಲ ಈಗ ಬಂದಿದೆ ಇದಕ್ಕೆ ನೀವು 16ಕೋಟಿ ತೆಗೆದಿದ್ದಾರೆಂದು ಹೇಳಿದ್ದೀರಲ್ಲ ಅವರು ನೀರಾವರಿ ಮಾಡಿದಂಥ ವ್ಯವಸ್ಥೆ ಬಗ್ಗೆ ನೀವೇ ಹೇಳಿದಿರಲ್ಲ ನಮ್ಮ dam, ಕೆರೆಗಳು, ಕುಡಿಯುವ ನೀರಿಗೆ ಮಳೆಯಾದರೆ ಮಾತ್ರ ನೀರು ಸಿಗುತ್ತದೆ ಮಳೆಯಾದರೆ ಮಾತ್ರ ಕರೆಂಟ್ ಸಿಗುತ್ತದೆ ಇವತ್ತು ಅರಣ್ಯವನ್ನೆಲ್ಲ ನಾಶ ಮಾಡಿ ಮಳೆಯೇ ಇಲ್ಲದಂತಾಗಿದೆ ನಮ್ಮ ತುಂಗಾಭದ್ರಾ ನದಿ ಒಣಗುತ್ತಿದೆ ನಮಗೆ ಕುಡಿಯುವುದಕ್ಕೆ ನೀರಿಲ್ಲ ಈಗಾಗಲೇ ತಜ್ಞರು ಹೇಳಿದ ಪ್ರಕಾರ ಬೆಂಗಳೂರು ಕೂಡ ಆ ಪಟ್ಟಿಯಲ್ಲಿದೆ ಮುಂದಿನ 50 ವರ್ಷಗಳ ನಂತರ ಕುಡಿಯುವ ನೀರಿಲ್ಲದ ಪರಿಸ್ಥಿತಿ ಬರುತ್ತದೆಂದು ತಜ್ಞರು ಹೇಳಿದ್ದಾರೆ ಇವತ್ತು ನಾವು ಎಚ್ಚರವಾಗಬೇಕಾಗುತ್ತದೆ ಆ ಕಾರಣದಿಂದ ಮೂಲತಃ ನಮಗೇನೆಂದರೆ ಅರಣ್ಯೀಕರಣ, ಗಿಡಗಳನ್ನು ಬೆಳೆಸುವುದು ಮಾಡಬೇಕು ಎಲ್ಲಾ ರೀತಿಯಿಂದ ನಮ್ಮ ರಾಜ್ಯ, ರಾಷ್ಟ್ರ ಸುಖ ಸಮೃದ್ಧಿ ಆಗಬೇಕಾದರೆ ಅರಣ್ಯದ ಕಡೆಗೆ ಗಮನ ಕೊಡಬೇಕು ಗಿಡ ಕಡಿಯುವುದನ್ನು ನಿಲ್ಲಿಸಬೇಕು ಅರಣ್ಯಕ್ಕೆ ಬೆಂಕಿ ಹಚ್ಚುವ ಪದ್ಧತಿಯನ್ನು ನಿಲ್ಲಿಸಬೇಕು ಅರಣ್ಯ ಬೆಳೆಸುವ ವ್ಯವಸ್ಥೆಯನ್ನು ನಾವು ಎಲ್ಲಿಯವರೆಗೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ಎಲ್ಲಾ ಯೋಜನೆಗಳೂ ಹಾಳಾಗಿ ಹೋಗುತ್ತವೆ ಪರಿಸರದ ಬಗ್ಗೆ ಮಾತನಾಡುವುದಾದರೆ, ಭಾರತದ ಇತಿಹಾಸದಲ್ಲಿ ರಾಷ್ಟ್ರದಲ್ಲಿ ಮೊಟ್ಟಮೊದಲಿಗೆ ಪರಿಸರದ ಮಂತ್ರಿಯಾಗಿ ಪರಿಸರ ಎಂದರೇನೆಂದು ತೋರಿಸಿದವರು

ಶ್ರೀಮತಿ ಮೇನಕಾ ಗಾಂಧಿಯವರು, ಕರ್ನಾಟದಲ್ಲಿ ಬಸವಲಿಂಗಪ್ಪನವರಿಂದ ಎಲ್ಲಾ ಖಾತೆಗಳನ್ನು ಕಿತ್ತುಕೊಂಡರು, ಏನೂ ಕೆಲಸವಿಲ್ಲದ ಪರಿಸರ ಖಾತೆ ಕೊಟ್ಟರು ಪರಿಸರ ಖಾತೆ ಎಂದರೆ ಏನೂ ಕೆಲಸವಿಲ್ಲದ್ದು ಎಂದು ಸುಮ್ಮನೆ ಏನೋ ಒಂದು ಖಾತೆ ಕೊಡುವುದು ಎಂದು ಕೊಟ್ಟಿದ್ದರು ಅವರು ಅರಣ್ಯ, ಪರಿಸರ ಎಂದರೇನು? ಏನು ಮಾಡಬೇಕು? ಖಾತೆ ಎಂದರೇನೆಂಬುದನ್ನು ಅವರು ತೋರಿಸಿಕೊಟ್ಟರು ಅರಣ್ಯ ಪರಿಸರ ಖಾತೆ ಬಹಳ ಮಹತ್ವದ ಖಾತೆ ಇವತ್ತು ನಾವು ಬಸವಲಿಂಗಪ್ಪನವರನ್ನು ನೆನಸಿಕೊಳ್ಳಬೇಕು ಅವರು ಪರಿಸರದ ವಿಷಯದಲ್ಲಿ ಮಾಡಿದಂಥ ಕೆಲಸವನ್ನು ಮುಂದೆ ಬಂದಂಥ ಯಾವ ಮಂತ್ರಿಗಳೂ ಮಾಡಿಲ್ಲ ಮೇನಕಾ ಗಾಂಧಿಯವರ ನಂತರ ಯಾವ ಮಂತ್ರಿಗಳೂ ಸಹ ಅವರ ತರಹ ಕೆಲಸ ಮಾಡಲಿಲ್ಲ ಆ ಕಾರಣದಿಂದ ಪರಿಸರಕ್ಕೆ ಹೆಚ್ಚು ಒತ್ತು ಕೊಡಬೇಕಾಗುತ್ತದೆಂದು ಹೇಳುತ್ತೇನೆ ನಮ್ಮ ಶಾಸಕರ ಭವನದ ಪರಿಸರ ನೋಡುವುದಕ್ಕೆ ಹೋದರೆ ಅದನ್ನು ಅಲ್ಲಿ ನೋಡಬಾರದು ಇನ್ನೊಂದು ಸ್ವಲ್ಪ ದಿವಸ ಹೋದರೆ ಎಲ್ಲರೂ ಎಲ್ಲೆಂದರಲ್ಲಿ ಉಗುಳುತ್ತಾರೆ ಪರಿಸ್ಥಿತಿ ಇವತ್ತು ಇಷ್ಟು ಕೆಟ್ಟದಾಗಿದೆ ಮುರಿದು ಹೋಗಿವೆ ಅದರಲ್ಲೂ ಉಗುಳಿದ್ದಾರೆ ಇವತ್ತು ಪರಿಸ್ಥಿತಿ ಇಷ್ಟು ಕೆಟ್ಟದ್ದಾಗಿರುವುದರಿಂದ, ಜನರಿಗೆ ತಿಳುವಳಿಕೆ ಕೊಡಬೇಕಾಗುತ್ತದೆ ಆ ಹಿನ್ನೆಲೆಯಲ್ಲಿ ಇವತ್ತು ತಾವು ಕೂಡ ಆ ಶಾಸಕರ ಭವನದ ಬಗ್ಗೆ ಗಮನ ಹರಿಸಬೇಕು ನಿನ್ನೆಯೇ 6 ಮಂದಿ ಸಾಯುತ್ತಿದ್ದರು ಆ ವಿಷಯವನ್ನು ಪಾಟೀಲ್ ರವರು ಹೇಳುತ್ತಾರೆಂದು ಭಾವಿಸಿದ್ದೆ ಅದೇಕೋ ಅವರಿಗೆ ನೆನಪಾಗಲಿಲ್ಲವೆಂದು ಕಾಣುತ್ತದೆ ನಿಮ್ಮ lift ನಲ್ಲಿ ನಿನ್ನೆ ಐದಾರು ಮಂದಿ ಸಾಯುತ್ತಿದ್ದರು ಅವು ಹೊಸ lift ಗಳಂತೆ ನಾನು ಹಳೆಯ lift ಎಂದು ಭಾವಿಸಿದ್ದೆ ಹನುಮಂತಯ್ಯನವರ ಕಾಲದಲ್ಲಿ ಅಳವಡಿಸಿದ lift ಇನ್ನೂ ಸಹ ಚೆನ್ನಾಗಿದೆ ಮೊನ್ನೆ ನಾವು ದಿವಂಗತ ಹನುಮಂತಯ್ಯನವರು ಹಾಕಿ ಹೋಗಿದ್ದ lift ಬಗ್ಗೆ ನೆನಸಿಕೊಂಡೆವು

ಶ್ರೀ ಜೆ ಸಿ ಮಾಧುಸ್ವಾಮಿ ಅಶೋಕ್ ರವರನ್ನು ನೋಡಿ, ನಿಮ್ಮ ಇಲಾಖೆ ಮೇಲೆ ಮಾತನಾಡುತ್ತೀರೆಂದಿರಿ

ಶ್ರೀ ಎಸ್ ಎಸ್ ಪಾಟೀಲ್ ಅಶೋಕ್ ರವರಿಗೆ ಹೇಳುವುದು ಬೇರೆ ಇದೆ ಅಶೋಕ್ ರವರು ಈಗ ಬಂದಿದ್ದಾರೆ, ಪಾಪ ಅವರಿಗೆ ಅನ್ನುವುದಕ್ಕಾಗುವುದಿಲ್ಲ ರಾಷ್ಟ್ರಮಟ್ಟದಲ್ಲಿ ನಾವು ಕುಟುಂಬ ಕಲ್ಯಾಣದ ಬಗ್ಗೆ ಗಮನ ಕೊಡಲಿಲ್ಲ lift ಬಗ್ಗೆ ಹೇಳುತ್ತಿದ್ದೆ ಐದಾರು ಜನ ಸಾಯುತ್ತಿದ್ದರು ನಿನ್ನೆ Oxygen ಕೊಟ್ಟು ಕರೆದುಕೊಂಡು ಬಂದರು ಎನ್ನುವುದನ್ನು ಹೇಳಿದೆ ಎಂ ಎಲ್ ಎ ಗಳು ಸತ್ತರೆ ಜನ ನಗುತ್ತಾರೆ ಆ ಕಾರಣದಿಂದ ಅಶೋಕ್‌ರವರೆ, ನಾನು ಹೇಳುವುದೇನೆಂದರೆ, 2 ಇಲಾಖೆಗಳು ಮಹತ್ವದ್ದಾಗಿವೆ ಒಂದು ಕಡೆ

ನಾವು ಜನಸಂಖ್ಯೆಯನ್ನು ನಿಯಂತ್ರಣ ಮಾಡಬೇಕು ಜನಸಂಖ್ಯೆಯ ನಿಯಂತ್ರಣ ಮಾಡದಿರುವುದೇ ಇದಕ್ಕೆಲ್ಲ ಮೂಲ ಕಾರಣ ಕಳೆದ 55–60 ವರ್ಷಗಳ ಕಾಲ ನಾವು ಜನಸಂಖ್ಯೆ ನಿಯಂತ್ರಣ ಮಾಡಲಿಲ್ಲ ಆಗ ಜನಸಂಖ್ಯೆ ಈಗಿನ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಸೇರಿ ಭಾರತದ್ದು 33 ಕೋಟಿ ಇತ್ತು ಈಗ 108 ಕೋಟಿ ಎಂದು ಲೆಕ್ಕಕ್ಕೆ ಹೇಳುತ್ತಾರೆ ಸಂಚಾರಿ ಜನ ಕೆಲವರು ಲೆಕ್ಕಕ್ಕೆ ಸಿಕ್ಕಿರುವುದಿಲ್ಲ ಅವರೆಲ್ಲ 8–10 ಕೋಟಿ ಇರಬಹುದು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಈಗಾಗಲೇ ಎಸ್ ಎನ್ ಪಾಟೀಲರು 108 ಕೋಟಿ ಜನಸಂಖ್ಯೆ ಇದೆಯೆಂದು ಹೇಳಿದರು ಅದಕ್ಕೆ ವಾಟಾಳ್ ನಾಗರಾಜ್ ರವರು ತಮಗೆಷ್ಟಿವೆ ಎಂದು ನಿಧಾನವಾಗಿ ಕೇಳುತ್ತಿದ್ದರು ಅದಕ್ಕೆ, ವಾಟಾಳ್ ನಾಗರಾಜ್ ರವರ contribution ಏನಿದೆ ಎನ್ನುವುದನ್ನು ಹೇಳಬೇಕು ಎಸ್ ಎಸ್ ಪಾಟೀಲರೂ ಸಹ ಅವರ contribution ಎಷ್ಟೆಂಬುದನ್ನು ಹೇಳಬೇಕು 108 ಕೋಟಿ ಜನಸಂಖ್ಯೆಯಲ್ಲಿ ನಿಮ್ಮಿಬ್ಬರ contribution ಎಷ್ಟು?

ಶ್ರೀ ವಾಟಾಳ್ ನಾಗರಾಜ್ ಅವರು ನಮ್ಮೊಬ್ಬರಿಗೇ ಹೇಳಲಿಲ್ಲ ಜನಸಂಖ್ಯೆ ಯಾವ ರೀತಿಯಲ್ಲಿ ಬೆಳೆದಿದೆ, ಅದನ್ನು ಹೇಗೆ ತಡೆಹಿಡಿಯಬೇಕೆನ್ನುವ ಬಗ್ಗೆ ಎಸ್ ಎಸ್ ಪಾಟೀಲರು ಮಾತನಾಡುತ್ತಿದ್ದಾರೆ ಮಾತನಾಡುವಾಗ, ನಮ್ಮಿಬ್ಬರದೇ ಅಲ್ಲ, ಇಲ್ಲಿರುವ ಖರ್ಗೆಯವರಿಂದ ಹಿಡಿದು, ಪತ್ರಕರ್ತರು, ಅಧಿಕಾರಿಗಳು, ನಮ್ಮ ಅಧ್ಯಕ್ಷರು, ಶ್ರೀರಾಮರೆಡ್ಡಿಯವರಲ್ಲ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅದೇ ರೀತಿಯಾಗಿ ಪ್ರಶ್ನೆಗೆ ಉತ್ತರ ಕೊಡುವುದು ಬಿಟ್ಟು ಬೇರೆ ಎಲ್ಲಾ ಮಾತನಾಡುತ್ತಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ : ವಾಟಾಳ್ ರವರ ವಿರುದ್ಧ ನಾನು ಈಗ ಹಕ್ಕುಚ್ಯುತಿ ಮಂಡನೆ ಮಾಡಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ . ಅದು ಹೇಗೆ ಮಾಡುತ್ತೀರಿ? ನಾವು ಸಾಕ್ಷಿಗೆ ಇದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ನಾವು ಸಾಕ್ಷಿಗೆ ಇದ್ದೇವೆ

ಶ್ರೀ ವಾಟಾಳ್ ನಾಗರಾಜ್ ಅವರು ಹೇಳಲಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ತಾವು allow ಮಾಡುವುದಾದರೆ ನಾನು move ಮಾಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ · ತಂದು ನಿಲ್ಲಿಸಿ ಬಿಡುತ್ತೇನೆ ಇಲ್ಲಿ,

ನೋಡಿಯೇ ಬಿಡೋಣ ಆದ ಹಾಗೆ ಆಗಲಿ

ಶ್ರೀ ಜೆ ಸಿ ಮಾಧುಸ್ವಾಮಿ DNA test ಆಗುವವರೆಗೆ ಬಿಡುವುದಿಲ್ಲ

ಅಧ್ಯಕ್ಷರು ಶ್ರೀರಾಮರೆಡ್ಡಿಯವರಿಗೆ ಏಕೆ ಹೀಗೆ ಮಾಡುತ್ತೀರಿ?

ಶ್ರೀ ಎಸ್ ಎಸ್ ಪಾಟೀಲ್ ಅದರ ಬಗ್ಗೆ ಹೇಳಿಯೇ ಮುಂದೆ ಹೋಗುತ್ತೇನೆ ನಾನು ಮೊನ್ನೆ ನನ್ನ ಕ್ಷೇತ್ರದ ಸಿಂಗಟಾಲೂರು ಎಂಬ ಹಳ್ಳಿಗೆ ಹೋಗಿದ್ದೆ ಅಲ್ಲೆಲ್ಲ ಶಾಲೆ ಹುಡುಗರನ್ನು ಕೂರಿಸಿಕೊಂಡು, ಎಲ್ಲಾ ಪಂಚಾಯಿತಿಯವರನ್ನು, ಮಹಿಳಾ ಸಂಘದವರನ್ನೆಲ್ಲ ಕೂರಿಸಿಕೊಂಡು, ಅರಣ್ಯ ಇಲಾಖೆಯವರನ್ನು ಕರೆದುಕೊಂಡು "ಊರು ತುಂಬ ಅರಣ್ಯ ಬೆಳೆಸಿ" ಎಂದು board ಹಾಕಿರುತ್ತೇವೆಲ್ಲಾ ಅದರ ಬಗ್ಗೆ ಹೇಳಿಕೊಂಡು ಕೊನೆಗೆ ಅಡ್ಡಾಡಿ ಬಂದು ಒಂದು High school ನಲ್ಲಿ ಗಿಡ ಹಚ್ಚಿಕೊಳ್ಳುತ್ತಾ ಬಂದು ಕೊನೆಯ ಮೀಟಿಂಗ್ ಮಾಡಿದೆ ಅಲ್ಲಿ ಭಾಷಣದಲ್ಲಿ ಮಾತನಾಡುತ್ತಾ ಹುಡುಗರಿಗೆ, ನೋಡಿ, ವರದಕ್ಷಿಣೆ ತೆಗೆದುಕೊಳ್ಳಬಾರದು, ವರದಕ್ಷಿಣೆಯಿಂದ ಗಿಡಗಳು ಹೋದವು ಎಂದು ಹೇಳಿದೆ ನಮ್ಮಲ್ಲಿ ಮಾವಿನ ಗಿಡಗಳಿದ್ದವು ನಮ್ಮಲ್ಲಿ ಒಬ್ಬರು ಕೊಟ್ರಯ್ಯ ಎನ್ನುವವರಿದ್ದರು, ವರದಕ್ಷಿಣೆ ದಿನೆಯಿಂದ ಮಾರಾಟಕ್ಕೆ ಮಾವಿನ ಗಿಡ ಕೊಟ್ಟಿದ್ದರು ಹೋಗಿ ಬಿಡಿಸಿ, ನಾನು ಕೊಟ್ಟು ಉಳಿಸಿದೆ ಕಡೆಗೆ ಎರಡನೇ ಮಗಳಿಗೆ ಅದು ಹೋಗಿಯೇಬಿಟ್ಟಿತು ಅವು ವರದಕ್ಷಿಣೆಗೆ ಹೋಗಿವೆ ಆ ಕಾರಣದಿಂದ ಆ ಹುಡುಗರಿಗೆ, ನೀವ್ಯಾರೂ ವರದಕ್ಷಿಣೆ ತೆಗೆದುಕೊಳ್ಳಬೇಡಿ, ವರದಕ್ಷಿಣೆ ಇಲ್ಲದೇ ಲಗ್ನವಾಗಿ ಎಂದು ಹೇಳಿದೆ ಹೆಣ್ಣು ಮಕ್ಕಳಿಗೆ, ಯಾರಾದರೂ ವರದಕ್ಷಿಣೆ ಕೇಳಿದರೆ ಲಗ್ನವಾಗುವುದೇ ಇಲ್ಲವೆಂದು ಹೇಳಿ, ಏನು ಮಾಡುತ್ತಾರೋ ನೋಡೋಣವೆಂದು ಏನೋ ಹುಡುಗಾಟದಲ್ಲಿ ಹೇಳಿದೆ ಆಮೇಲೆ, ನೀವು ಎಲ್ಲರೂ ಒಂದೇ ಮಗುವನ್ನು ಹಡೆಯಿರಿ, ಹೆಣ್ಣಿರಲಿ, ಗಂಡಿರಲಿ, ಒಂದೇ ಮಗುವನ್ನು ಹಡೆಯಿರಿ ಎಂದು ಹೇಳಿ ಭಾಷಣ ಮಾಡಲು ಶುರು ಮಾಡಿದ್ದೆ ಆಗ ಒಬ್ಬ High School ಹುಡುಗ ಎದ್ದು, ನಮ್ಮನ್ನು ಶಾಲಾ ಹುಡುಗರು ಸುಮ್ಮನೆ ಬಿಡುವುದಿಲ್ಲ, ಸಾರ್, ನೀವೆಷ್ಟು ಹಡೆದಿದ್ದೀರಿ ಎಂದು ಕೇಳಿದ

ಶ್ರೀ ವಾಟಾಳ್ ನಾಗರಾಜ್ ಗಂಡಸರು ಎಲ್ಲಿ ಹಡೆಯುತ್ತಾರೆ? ಗಂಡಸರು ಎಲ್ಲಿಂಯಾದರೂ ಹೆರಲಿಕ್ಕಾಗುತ್ತದೆಂಯೇ? ಗಂಡಸರು ಗರ್ಭಿಣಿಯಾಗುವುದಕ್ಕಾಗುತ್ತದೆಯೇ? ಏನಿದು ಹುಡುಗಾಟ? ಈ ತರಹ ಶುರು ಮಾಡಿದರೆ ಈ ದೇಶದ ಗತಿಯೇನು?

ಶ್ರೀ ಜೆ ಸಿ ಮಾಧುಸ್ವಾಮಿ · ಹಾಗಾದರೆ ನೀವು ಸ್ವಾಮಿ ಅಯ್ಯಪ್ಪ ಆಗಿರಬೇಕು

ಶ್ರೀ ವಾಟಾಳ್ ನಾಗರಾಜ್ ಎಲ್ಲಿಯಾದರೂ ಗಂಡಸರು ಹಡೆಯುವುದಕ್ಕಾಗುತ್ತದೆಯೇ? ನೀವೇಕೆ ಹೀಗೆ ಮಾತನಾಡುತ್ತೀರಿ?

ಶ್ರೀ ಕೆ ಆರ್ ರಮೇಶ್ ಕುಮಾರ್ · ಮಾನ್ಯ ಎಸ್ ಎಸ್ ಪಾಟೀಲರು ಬಹಳ ಜಾಣರು ಅವರು ಉದ್ದೇಶಪೂರ್ವಕವಾಗಿಯೇ, ಇವರು ಎದ್ದೇಳಲಿ ಎಂದೇ ಹಾಗೆ ಮಾತನಾಡುತ್ತಿದ್ದಾರೆ ಇದೆಲ್ಲಾ ಸತ್ಯ ಅವರಿಗೆ ಗೊತ್ತಿದೆ

ಶ್ರೀ ಎಸ್ ಎಸ್ ಪಾಟೀಲ್ · ನಮ್ಮ ಕಡೆ ಭಾಷೆಯೇ ಹಾಗೆ ನೀನು ಎಷ್ಟು ಹಡೆದಿದ್ದೀಯಾ? ಎಂದೇ ನಮ್ಮ ಕಡೆ ಕೇಳುತ್ತಾರೆ ಯಾರೋ ಒಬ್ಬ ಹೆಣ್ಣುಮಗಳು ಹಡೆಯುವುದಕ್ಕಾಗುವುದಿಲ್ಲ, ಇಬ್ಬರೂ ಕೂಡಿದರೆ ಮಾತ್ರವೇ ಹಡೆಯಲಾಗುತ್ತದೆ ಒಬ್ಬರೇ ಹಡೆಯುವುದಕ್ಕಾಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ : ಹಡೆಯುವವರು ಹೆಂಗಸರು, ಇಬ್ಬರೂ ಅಲ್ಲ ಏನಿದು? ನೀವು ಹೀಗೆ ಮಾತನಾಡುತ್ತಿದ್ದೀರಿ?

ಶ್ರೀ ಎಸ್ ಎಸ್ ಪಾಟೀಲ್ . ನಮ್ಮ ಕಡೆ ಭಾಷೆಯೇ ಹಾಗಿದೆ ಯಾವಾಗಲೂ ಇಬ್ಬರಿಗೂ ಅಷ್ಟೇ ಜವಾಬ್ದಾರಿ ಇರುತ್ತದೆ ಎಂಬ ದೃಷ್ಟಿಯಿಂದ ಹಾಗೆನ್ನುತ್ತಾರೆ ನೀವು ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಹಡೆಯುವುದು ಕೇವಲ ಆಕೆ ಮಾತ್ರವಲ್ಲ, ಹಡೆಯಲಿಕ್ಕೆ ತಯಾರು ಮಾಡಿದಂತಹವನು ನೀನು, ನಿನಗೂ ಅಷ್ಟೇ ಜವಾಬ್ದಾರಿ ಇರುತ್ತದೆ ಎಂಬ ದೃಷ್ಟಿಯಿಂದ ನಮ್ಮಲ್ಲಿ ಆ ಮಾತು ಹೇಳುತ್ತಾರೆ

ಶ್ರೀ ವಾಟಾಳ್ ನಾಗರಾಜ್ ಜವಾಬ್ದಾರಿ ಬೇರೆ, ಕ್ರಿಯೆ ಬೇರೆ

ಶ್ರೀ ಎಸ್ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ಹುಡುಗ 'ನೀವೆಷ್ಟು ಹಡೆದಿದ್ದೀರಿ? ಎಂದು ಕೇಳಿದ ಆಮೇಲೆ 'ನಿಮ್ಮ ಮಕ್ಕಳನ್ನು ಲಗ್ನ ಮಾಡಿದ್ದೀರಲ್ಲಾ, ನೀವೇನು ವರದಕ್ಷಿಣೆ ತೆಗೆದುಕೊಂಡಿರೋ ಅಥವಾ ಬಿಟ್ಟಿರೋ ಎಂದು ಅವನು ಕೇಳಿದ ಹುಡುಗರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ, ಪ್ರಶ್ನೆ ಕೇಳುತ್ತಾರೆ ಆಗ ನಾನು ಅವನಿಗೆ 'ತಮ್ಮಾ ನಾನು ತಪ್ಪು ಮಾಡಿದ್ದೇನೆ ಎಂದು ಹೇಳಿದೆ ಏಕೆಂದರೆ, ಅವತ್ತೇನು ಮಾಡುತ್ತಿದ್ದರು ಎಂದರೆ, ಅವತ್ತು ಸ್ವಾಮಿಗಳು ಯಾರಾದರೂ ಬಂದರೆ, ಎಂಟು ಜನರನ್ನು ಹಡೆಯಿರಿ ಎಂದು ಆಶೀರ್ವಾದ ಮಾಡುತ್ತಿದ್ದರು ಈಗ ನನ್ನ ಎದುರಿಗೆ ಮತ್ಯಾರೋ ಸ್ವಾಮಿಗಳು ಮತ್ತೆ ಅದೇ ಶಬ್ದವನ್ನು ಹೇಳಿದರು ನಾನು ಅವರಿಗೆ ಹೀಗೆ ಹೇಳಿದರೆ ನಿಮಗೆ ಶಿಕ್ಷೆಯಾಗುತ್ತದೆ, ಆ ರೀತಿ ಹೇಳಬೇಡಿ ಎಂದು ಹೇಳಿದೆ ಆಗ ಪರಿಸ್ಥಿತಿ ಹಾಗೆಯೇ ಇತ್ತು ಆಗ ಹೆಣ್ಣುಮಕ್ಕಳು ಹೆಚ್ಚು ಜನರನ್ನು ಹಡೆಯುತ್ತಿದ್ದರು ಆದರೆ ಆಗ ನಮಗೆ ಕನ್ಯೆ ಸಿಗುತ್ತಿರಲಿಲ್ಲ ಅವತ್ತು ಕನ್ಯೆಯರೇ ಇರುತ್ತಿರಲಿಲ್ಲ ಆವತ್ತಿನ ಪರಿಸ್ಥಿತಿಯಲ್ಲಿ ಕನ್ಯೆಯನ್ನೇ ಕೊಡುತ್ತಿರಲಿಲ್ಲ ನನ್ನ ಲಗ್ನ ಆದಾಗ ವರದಕ್ಷಿಣೆ ತೆಗೆದುಕೊಳ್ಳುವುದು ದೂರವೇ ಉಳಿಯಿತು ನಮ್ಮ ಅಪ್ಪ ಹೋಗಿ ಅವರ ಅಣ್ಣನ ಮಗಳಿಗೆ ಹುಟ್ಟಿದ ಕೂಡಲೇ ತೊಟ್ಟಿಲಿನಲ್ಲಿ ಬಳೆ ಕಟ್ಟಿ ಬಂದು ಬಿಟ್ಟಿದ್ದರು. ನಮ್ಮದು ಇಂತಹ

ಲಗ್ನ ಇದರಿಂದಾಗಿ ನಾವು ವರದಕ್ಷಿಣೆ ತೆಗೆದುಕೊಳ್ಳುವುದು ದೂರವೇ ಉಳಿಯಿತು ಅದೇ ರೀತಿಯಾಗಿ ನಮ್ಮ ಹುಡುಗರಿಗೆ ಹೇಳಿದೆ ನಮ್ಮ ಮಕ್ಕಳಿಗಂತೂ ಯಾರಿಗೂ ವರದಕ್ಷಿಣೆ ತೆಗೆದುಕೊಂಡಿಲ್ಲ, ಅದು ನಿಜ ಆದರೆ ನಾನು 7–8 ಹಡೆದಿದ್ದೇನೆ ಎಂದು ಹೇಳಿದೆ ಆ ಕಾರಣದಿಂದ ಇವತ್ತು ನಿಜವಾಗಿ ಹೇಳುತ್ತೇನೆ ನಾವು ಇವತ್ತು ಎಲ್ಲರೂ ಕೂಡ ಮಾಡಬೇಕು ಅಷ್ಟೇ ಅಲ್ಲ, ಇವತ್ತು ನಮ್ಮಲ್ಲಿ ಯಾವುದೋ ರಾಜ್ಯದಲ್ಲಿ ಕಾಯಿದೆ ತಂದಿದ್ದಾರೆಂದು ಕಾಣುತ್ತದೆ ಚೈನಾದಲ್ಲಿ ಕೂಡ ಕಾಯಿದೆ ತಂದಿದ್ದಾರೆ ಒಂದೇ ಮಕ್ಕಳಿದ್ದವರು ಎಂ ಎಲ್ ಎ ಆಗಬೇಕು, ಎಂ ಪಿ ಆಗಬೇಕು ಎಂದು ಕಾಯಿದೆ ಮಾಡುವಂತಹ ಕಾಲ ಬಹಳ ದೂರವೇನಿಲ್ಲ ರಾಜಾಸ್ತಾನದಲ್ಲಿ ಪಂಚಾಯಿತಿಗೆ ಸ್ಪರ್ಧಿಸುವವರಿಗೆ ಎರಡೇ ಮಕ್ಕಳಿರಬೇಕೆಂದು ಕಾಯಿದೆ ಮಾಡಿದ್ದಾರೆ ಅದನ್ನು ನಾವು ಕೂಡ ಇನ್ನು ಮೇಲೆ ಅನಿವಾರ್ಯವಾಗಿ ಮಾಡಬೇಕಾಗುತ್ತದೆ ಏಕೆಂದರೆ, ನಮ್ಮದು ಮತ್ತು ನಿಮ್ಮದು, ಇಬ್ಬರದೂ ಮುಗಿದೇ ಹೋಗಿದೆ ಮುಂದಿನ ಹುಡುಗರಿಗಾದರೂ ಇದು ಲಾಗೂ ಆಗಲಿ ಆದರೂ ಕೂಡ ಆವತ್ತಿನ ಪರಿಸ್ಥಿತಿಯೇ ಬೇರೆ ಈಗ ಸ್ಪಷ್ಟವಾಗಿ ನಿಮಗೆ ಹೇಳುತ್ತೇನೆ ದಯವಿಟ್ಟು ನೀವು ಭ್ರೂಣ ಹತ್ಯೆ ತಡೆಯಬೇಕು ಇದು ಬಹಳ ಕೆಟ್ಟ ರೀತಿಯಿಂದ ನಡೆಯುತ್ತಿದೆ ಇವತ್ತು 1000ಕ್ಕೆ ಹೆಣ್ಣು ಮಕ್ಕಳ ಸಂಖ್ಯೆ 950–965 ಇದೆ ಎಂದು ಹೇಳುತ್ತಾರೆ ಸರಿಯಾದ ಸಂಖ್ಯೆಯನ್ನು ಮಾನ್ಯ ಅಶೋಕ್ ರವರೇ ಹೇಳಬೇಕು ಇವತ್ತಿನ ಲೆಕ್ಕದ ಪ್ರಕಾರ ಅದು ಇನ್ನೂ ಕಡಿಮೆಯಾಗಿದೆ ಇನ್ನು ಮುಂದಕ್ಕೆ ಎಂತಹ ಕೆಟ್ಟ ಕಾಲ ಬರುತ್ತವೆ ಎಂದರೆ, ಮುಂದೆ ಕನ್ಯೆಯೇ ಸಿಗದಂತಹ ಕಾಲ ಬಂದೀತು ನಮ್ಮಲ್ಲಿ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ್ ಹೆಣ್ಣಿರಲಿ ಗಂಡಿರಲಿ ಒಂದೇ ಇರಬೇಕೆಂದು ಹೇಳಲಿಕ್ಕೆ ನಾವು ಹೊರಟಿದ್ದೇವೆ ಗಂಡು ಮತ್ತು ಹೆಣ್ಣು ಎರಡೂ ಇರುವಂತೆ ಏನಾದರೂ ಒಂದು ವ್ಯವಸ್ಥೆ ಮಾಡಲಿಕ್ಕೆ ಹೇಳಿ

ಶ್ರೀ ಎಸ್ ಎಸ್ ಪಾಟೀಲ್ ಅದೇನೂ ಬೇಕಾಗಿಲ್ಲ ಒಂದೇ ಹಡೆಯುವುದೂ ಬಿಡಬೇಕಾಗುತ್ತದೆ ಇನ್ನು ಸ್ವಲ್ಪ ದಿವಸಗಳಲ್ಲಿ ಯಾರು ಹಡೆಯುವುದನ್ನು ಬಿಡುತ್ತಾರೋ ಅವರಿಗೆ ಸಬ್ಸಿಡಿ ಕೊಡುವಂತಹ ಪರಿಸ್ಥತಿ ಬರುತ್ತದೆ ಆ ಕಾಲ ಬಹಳ ದೂರವೇನೂ ಇಲ್ಲ ಹೀಗೆಯೇ ಜನಸಂಖ್ಯೆ ಬೆಳೆಯುತ್ತಿದ್ದರೆ ಆ ಕಾಲವೂ ಬರುತ್ತದೆ, ಇತ್ತೀಚೆಗೆಷ್ಟೇ ದೇಶದ ಜನಸಂಖ್ಯೆ 100 ಕೋಟಿ ಆಗಿತ್ತು, ಈಗ ಅದು 108 ಕೋಟಿಗೆ ಹೋಗಿದೆ ನಮ್ಮ ಭಾರತ ದೇಶದಲ್ಲಿ ಒಂದು ವರ್ಷದಲ್ಲಿ ಆಸ್ಟ್ರೇಲಿಯಾ ಖಂಡದಷ್ಟು ಜನಸಂಖ್ಯೆ ಹೆಚ್ಚಾಗುತ್ತದೆ ನಾವು ಈ ಪರಿಸ್ಥಿತಿಯಲ್ಲಿದ್ದೇವೆ ಗಂಡಂದಿರ ಬಗ್ಗೆ ಯಾರೂ ಸಂಶಯ ಪಡುವುದಿಲ್ಲ, ಸಂಶಯ ಪಡುವವರು ಅವರ ಹೆಂಡತಿಯರು ಮಾತ್ರ ಉಳಿದವರು ಏನೂ ತಿಳಿದುಕೊಳ್ಳುವುದಿಲ್ಲ ಮಾನ್ಯ ಅಶೋಕ್ ರವರೆ, ಅರಣ್ಯ ಮತ್ತು ಆರೋಗ್ಯ ಇಲಾಖೆ ಎರಡೂ ಕೂಡ ಬಹಳ

ಮಹತ್ವವಾದ ಇಲಾಖೆಗಳಾಗಿವೆ ಅರಣ್ಯ ಸರಿಯಾಗಿ ಬೆಳೆಸಿದರೆ ಆರೋಗ್ಯ ಇರುತ್ತದೆ, ನಿಮ್ಮ ಇಲಾಖೆ ವೆಚ್ಚ ಕಡಿಮೆ ಆಗುತ್ತದೆ ಆ ಕಾರಣದಿಂದ ಕಟ್ಟುನಿಟ್ಟಾಗಿ ಇವತ್ತಿನ ದಿವಸ ನಾವು ಜನಸಂಖ್ಯೆಯನ್ನು ನಿಯಂತ್ರಣ ಮಾಡಲೇಬೇಕು ಆದರೆ ದುರ್ದೈವದಿಂದ ಸರ್ಕಾರದಿಂದಲೂ ನಾವು ತಪ್ಪು ಮಾಡುತ್ತೇವೆ ಮೊನ್ನೆ ನಮ್ಮ ಜಿಲ್ಲೆಯಲ್ಲಿ 5 ಕ್ಷೇತ್ರ ಇದ್ದದ್ದು 4ಕ್ಕೆ ಇಳಿಯಿತು ಜನಸಂಖ್ಯೆ ಕಡಿಮೆಯಾಗಿರುವುದರಿಂದ ಆ ರೀತಿ ಆಯಿತು ಹಿಂದೆ ಮಾಡಿದ ಪ್ರಯತ್ನಗಳಿಂದಾಗಿ ಜನಸಂಖ್ಯೆ ನಿಯಂತ್ರಣದಲ್ಲಿ ಧಾರವಾಡ-ಗದಗ ಜಿಲ್ಲೆಯವರು ಬಹಳ ಪ್ರಗತಿಯಲ್ಲಿದ್ದೇವೆ ಆ ಕಾರಣದಿಂದ ಒಂದು ಕ್ಷೇತ್ರ ಕಡಿಮೆಯಾಯಿತು ನಾನು ಹಿಂದೆ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೆ ನಾನು ಅಗ ಒಮ್ಮೆ ಹಿರೇಕೆರೂರಿಗೆ ಹೋಗಿದ್ದೆ ಅಲ್ಲಿ ಒಂದು ದೊಡ್ಡ ಊರು ಪಂಚಾಯಿತಿ Head Quarters ಆಗಿತ್ತು, ಅದಲ್ಲದೇ ಇನ್ನೊಂದು ಸಣ್ಣ ಊರು ಸಹ ಇತ್ತು ಆ ಪಂಚಾಯಿತಿ ಛೇರ್ಮನ್ ಜನಸಂಖ್ಯೆ ನಿಯಂತ್ರಣದಲ್ಲಿ ತನ್ನ ಊರಿನಲ್ಲಿ ಬಹಳ ಪ್ರಗತಿ ಮಾಡಿ, ರಾಷ್ಟ್ರ ಮಟ್ಟದ ಪ್ರಶಸ್ತಿ ತೆಗೆದುಕೊಂಡ ಈ ಊರಿನ ಜನಸಂಖ್ಯೆ ಹೆಚ್ಚಾಯಿತು, ಆದರೆ ಆ ಊರಿನ ಜನಸಂಖ್ಯೆ ಕಡಿಮೆಯಾಯಿತು ಮುಂದೆ ಐದು ಸಾವಿರ ಜನಸಂಖ್ಯೆಗೊಂದರಂತೆ ಪಂಚಾಯಿತಿ ರಚಿಸಬೇಕು ಎಂದು ನಿಯಮ ಮಾಡಿದಾಗ, ಆ ಪಂಚಾಯಿತಿ ಕಿತ್ತು ಜನಸಂಖ್ಯೆ ಹೆಚ್ಚಾಗಿದ್ದ ಸಣ್ಣ ಊರೇ ಪಂಚಾಯಿತಿ Head Quarters ಆಗಿ ಬಿಟ್ಟಿತು ನಾನು ಸಹಕಾರ ಮಂತ್ರಿಯಾದ ಮೇಲೆ ಅವರಿಗೊಂದು ಹೊಸ ಸೊಸೈಟಿ ಮಾಡಿಕೊಟ್ಟೆ ಎಲ್ಲಿ ದೊಡ್ಡ ಊರು ಇರುತ್ತದೆಯೋ ಅಲ್ಲಿ ಮಾಡಬೇಕೆಂದು ಇದ್ದಿದ್ದರಿಂದ, ಅದೂ ಕೂಡ ಆ ಊರು ಬಿಟ್ಟು ಈ ಊರಿಗೇ ಬಂತು ಅದರ ಉದ್ಘಾಟನೆಗೆ ನನ್ನನ್ನು ಕರೆದುಕೊಂಡು ಹೋದರು ಆ ಊರಿನ ಛೇರ್ಮನ್ ನನ್ನ ಹತ್ತಿರ ಬಂದು, ನಾವು ಜನಸಂಖ್ಯೆ ನಿಯಂತ್ರಣ ಮಾಡಿದ್ದೇ ತಪ್ಪೇ ಎಂದು ಕೇಳಿದ ಅನಂತರ ನಾನು ಪಂಚಾಯಿತಿ ಸೊಸೈಟಿಯನ್ನು ಆ ಊರಿಗೇ transfer ಮಾಡಿಕೊಟ್ಟೆ, ಆ ರೀತಿಯಲ್ಲಿ ಇವತ್ತಿನ ದಿವಸ ನಾವೂ ಕೂಡ ಇಲ್ಲಿ ಜನಸಂಖ್ಯೆ ಆಧರಿಸಿ ಕ್ಷೇತ್ರ ರಚಿಸುತ್ತೇವೆಂದು ಹೇಳಿ, ಎಲ್ಲಾ ತಂದು ಬೆಂಗಳೂರಿಲ್ಲಿ ಕ್ಷೇತ್ರ ಹೆಚ್ಚು ಮಾಡಿದ್ದೇವೆ ಇನ್ನು ಮುಂದೆ ಹಳ್ಳಿ ಕ್ಷೇತ್ರಗಳೆಲ್ಲಾ ಹೋಗಿ ಬಿಡುತ್ತವೆ ಹಳ್ಳಿಯವರು ಆದಷ್ಟು ಬೆಂಗಳೂರಿಗೇ ಬಂದು ಬಿಡುತ್ತಾರೆ ಇದರಿಂದಾಗಿ ಮುಂದಿನ 5-10 ವರ್ಷಗಳಲ್ಲಿ ಬೆಂಗಳೂರಿನಲ್ಲೇ 100 ಕ್ಷೇತ್ರಗಳಾಗಿ ಬಿಡುವ ಸಂಭವ ಹೆಚ್ಚಾಗಿದೆ ನಮ್ಮ ಹಳ್ಳಿಗಳೆಲ್ಲಾ ಹಾಳಾಗಿ ಹೋಗುತ್ತವೆ ಈ ಕಾರಣದಿಂದಾಗಿ ಇವತ್ತು ಒಂದು ಕಡೆ ಜನಸಂಖ್ಯೆ ನಿಯಂತ್ರಣದ ಕಡೆ ಗಮನ ಕೊಡಬೇಕು ಇನ್ನೊಂದು ಕಡೆ ಅರಣ್ಯ ಬೆಳೆಸುವಂತಹ ಕೆಲಸವನ್ನು ನಾವು ಮಾಡಲೇಬೇಕಾಗುತ್ತದೆ

ಆ ಹಿನ್ನಲೆಯಲ್ಲಿ ಮಾನ್ಯ ಯಡಿಯೂರಪ್ಪನವರೆ, ದಯವಿಟ್ಟು ಇವೆರಡೂ ಇಲಾಖೆಗಳಿಗೆ ಹೆಚ್ಚು ಒತ್ತು ಕೊಡಿ ಇನ್ನು ಮಹಿಳಾ ಮತ್ತು ಮಕ್ಕಳ ಬಗ್ಗೆ ಹೇಳುವುದಾದರೆ, ಮಹಿಳೆಯರಿಂದಲೇ ಎಲ್ಲಾ ಆಗುತ್ತದೆ ಏನಾದರೂ ನಮ್ಮ ಪ್ರಗತಿ ಸಾಧಿಸಬೇಕಾದರೆ ಅದಕ್ಕೆ ಅವರೇ ಕಾರಣಕರ್ತರಾಗುತ್ತಾರೆ ನಮ್ಮ ಊರು ಸ್ವಚ್ಛವಾಗಬೇಕಾದರೆ, ನಮ್ಮ ಮನೆ ಸ್ವಚ್ಛವಾಗಬೇಕಾದರೆ ಅದಕ್ಕೆ ಮಹಿಳೆಯೇ ಕಾರಣ ಯಾರದ್ದಾದರೂ ಮನೆಯಲ್ಲಿ ಎತ್ತುಗಳು ಬಹಳ ಚೆನ್ನಾಗಿವೆ ಎಂದರೆ ಆ ಮನೆಯಲ್ಲಿ ಹೆಣ್ಣುಮಕ್ಕಳೇ ಎತ್ತುಗಳ ಜೋಪಾನ ಮಾಡುತ್ತಿರುತ್ತಾರೆ ಮತ್ತು ಒಕ್ಕಲುತನದ ಮೇಲುಸ್ತುವಾರಿ ನೋಡುತ್ತಿರುತ್ತಾರೆ ಬಹುಶಃ ಆ ಕಾರಣದಿಂದ ನಾನು ಮಂತ್ರಿಯಾಗಿದ್ದಾಗ ನನ್ನ ಹೆಂಡತಿ ಏನು ಮಾಡಿದರೂ ಇಲ್ಲಿಗೆ ಬರಲೇ ಇಲ್ಲ, ಇದು ಇಲ್ಲರಿಗೂ ಗೊತ್ತಿದೆ ಬೆಂಗಳೂರಿಗೆ ಬಂದರೆ ನಮ್ಮ ಒಕ್ಕಲುತನ ಹೋಗುತ್ತದೆಂದು ಆಕೆ ಹೇಳುತ್ತಿದ್ದಳು ಅದು ಈಗ ಸರಿ ಎನಿಸುತ್ತಿದೆ

ಶ್ರೀ ವಿ ಸೋಮಣ್ಣ · ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್ ಎಸ್ ಪಾಟೀಲ್ ರವರು ತಮ್ಮ ಹೆಂಡತಿ ಇಲ್ಲಿಗೆ ಬರಲೇ ಇಲ್ಲವೆಂದು ಸುಳ್ಳು ಹೇಳುತ್ತಿದ್ದಾರೆ ಏಕೆಂದರೆ, ನಾನು ಐದಾರು ಸಲ ಅವರ ಮನೆಯಲ್ಲಿ ತಿಂಡಿ ತಿಂದಿದ್ದೇನೆ, ಊಟ ಮಾಡಿದ್ದೇನೆ ನಾನು ಇಲ್ಲಿದ್ದವರೇ ಬೇರೆ, ಅಲ್ಲಿದ್ದವರೇ ಬೇರೆಯೇ ಎಂದು ಕೇಳೋಣವೆಂದುಕೊಂಡಿದ್ದೆ "ಅಲ್ಲ ಕಣಪ್ಪ ನಾನೇನು ಮಾಡಲಿ, ನಾನು ಬಾ ಎಂದರೂ ಕೂಡ, ಆಯಮ್ಮ ಬರುತ್ತೇನೆ ಎಂದರೂ ನಾನು ಬೇಡ ಬೇಡ ಎಂದು ಹೇಳುತ್ತೇನೆ ಎಂದರು ಏಕೆ ಹೇಳುತ್ತೇನೆ ಎಂದರೆ, "ಅವರು ಬರುತ್ತೇನೆ ಎಂದರೂ ನಾನು ಬೇಡ ಬೇಡ ಎಂದು ಹೇಳುತ್ತಿದ್ದೆ ಎಂದು ಅವತ್ತು ಹೇಳಿದರು

[ಗೊಂದಲ]

ಶ್ರೀ ಮಲ್ಲಿಕಾರ್ಜುನ ಖರ್ಗೆ ಇವತ್ತು ಹೆಣ್ಣುಮಕ್ಕಳ ಮೇಲೆ ಮುಕ್ತವಾಗಿ ಚರ್ಚೆ ನಡಿದಿದೆ ಏಕೆಂದರೆ, ಸದನದಲ್ಲಿ ಒಬ್ಬ ಮಹಿಳಾ ಸದಸ್ಯರೂ ಕೂಡ ಇಲ್ಲ ಮಂತ್ರಿಗಳಂತೂ ಇಲ್ಲವೇ ಇಲ್ಲ, ಆ ಮಾತು ಬೇರೆ ಆದ್ದರಿಂದಾಗಿ ಇವರೆಲ್ಲರಿಗೂ ಮಾತನಾಡುವುದಕ್ಕೆ liberty ಸಿಕ್ಕಿದೆ ಹೆಣ್ಣುಮಕ್ಕಳು ಬಂದರೆ ಇವರ ಪರಿಸ್ಥಿತಿ ಏನು ಎಂದು ಗೊತ್ತಾಗುತ್ತದೆ

ಶ್ರೀ ಎಸ್. ರಾಜೇಂದ್ರನ್ ಮಾನ್ಯ ಸೋಮಣ್ಣನವರು ಹೇಳುವುದು ನಿಜ ಇರಬೇಕು ಅವರು ನಿಮ್ಮ ಮನೆಯಲ್ಲಿ ಊಟ ಮಾಡುತ್ತಿದ್ದೆ ಎಂದು ಹೇಳಿದರು ಮನೆಯಲ್ಲಿ ಊಟ ಮಾಡಿದವರು ಯಾವಾಗಲೂ

ವಿಶ್ವಾಸವಾಗಿಯೇ ಮಾತನಾಡುತ್ತಾರೆ ಆದುದರಿಂದ ಅವರು ಹೇಳುವುದು ಸತ್ಯಾಂಶದಿಂದ ಕೂಡಿದೆ

ಶ್ರೀ ಎಸ್ ಎಸ್ ಪಾಟೀಲ್ ಈ ಸತ್ಯಾಂಶವನ್ನು ನೀವು ದಿವಂಗತ ಜೆ ಹೆಚ್ ಪಟೇಲ್‌ರಿಗೆ ಹೋಗಿ ಕೇಳಿ ಒಮ್ಮೆ ಹೀಗೆಯೇ ಹುಡುಗಾಟ ಮಾಡಿದರು ಹೀಗೆ ಎಲ್ಲರೂ ವಿನೋದ ಮಾಡುವಾಗ ಮಾನ್ಯ ಜೆ ಹೆಚ್ ಪಟೇಲ್ ರವರು, ಸುಮ್ಮನೆ ಆ ಶರಣನಿಗೆ ನೀವು ಆ ರೀತಿ ಏಕೆ ಸುಳ್ಳು ಹೇಳುವುದಕ್ಕೆ ಹೋಗುತ್ತೀರಿ? ಅವನ ಲೇಡಿ ಬಿಟ್ಟು ಬೇರೆ ಲೇಡಿಯೇ ಆತನಿಗೆ ಗೊತ್ತಿಲ್ಲ ಎಂದು ಹೇಳಿದರು

[ಗೊಂದಲ]

ಶ್ರೀ ಕೆ ಆರ್ ರಮೇಶ್ ಕುಮಾರ್ . ಆ ವಿಷಯ ತೆಗೆದುಕೊಳ್ಳಬೇಕೇನು?

[ಗೊಂದಲ]

ಶ್ರೀ ವಾಟಾಳ್ ನಾಗರಾಜ್ ಒಳ್ಳೆಯ ಮಾತನ್ನು ಹೇಳಿದಿರಿ ಮಾನ್ಯ ಸೋಮಣ್ಣನವರು ಹೇಳಿದಾಗ ಅದನ್ನು ನಂಬಬೇಕೋ ಬೇಡವೋ?

ಶ್ರೀ ಕೆ.ಆರ್. ರಮೇಶ್ ಕುಮಾರ್ ಇಡೀ ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ ಜಗದ್ಗುರುಗಳು ಮಾನ್ಯ ಸೋಮಣ್ಣನವರ ಮಾತು ಎಂದರೆ ಎಲ್ಲವೆನ್ನುವುದಿಲ್ಲ ಮಾನ್ಯ ಸೋಮಣ್ಣನವರು ಹೇಳಿದ ಮೇಲೆ ಅದು ಸುಳ್ಳಾಗಲಿಕ್ಕೆ ಸಾಧ್ಯವಾಗುವುದಿಲ್ಲ ಎಲ್ಲಾದರೂ ಉಂಟೇ ?

ಶ್ರೀ ಎಸ್.ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಅರಣ್ಯ ಸಂಪತ್ತಿನ ಬಗ್ಗೆ ನಾವು ಗಮನ ಹರಿಸಬೇಕಾಗಿದೆ ನಮ್ಮ ಕೃಷಿ ಸಚಿವರು ಇಲ್ಲೇ ಇದ್ದಾರೆ ಬೆಳೆಗಳಿಗೆ ಬರುವ ರೋಗಗಳು ಹೆಚ್ಚಾಗಿವೆ ಅದಕ್ಕೆ ಅರಣ್ಯ ನಾಶವಾಗಿದ್ದೇ ಕಾರಣವಾಗಿದೆ ಕೆಲವು ಕೀಟಗಳು ಅರಣ್ಯದಲ್ಲೇ ಬದುಕುತ್ತಿದ್ದವು ಯಾವಾಗ ಅದು ಇಲ್ಲ, ನಮ್ಮ ಮೇಲೆ ಅವಲಂಬಿಸುತ್ತವೆ, ಇದು ಕೂಡ ತಜ್ಞರು ವರದಿಯಲ್ಲಿದೆ ತಾವು ಹೇಳಿದಂತೆ ಯಾವ ಊರಿನಲ್ಲಿಯೂ ಗುಬ್ಬಿ ಉಳಿದಿಲ್ಲ, ಹಕ್ಕಿ ಉಳಿದಿಲ್ಲ ಸುಮಾರು 50 ವರ್ಷದಿಂದ ಅದೇ ಹೈಬ್ರಿಡ್ ತಂದು ಹಾಕಿದ್ದೆ, ಹಸಿರು ಕೀಟಗಳು ಬಂದವು ನಮ್ಮಲ್ಲಿ ಗೊರವಂಕವೆನ್ನುತ್ತೇವೆ, ಆ ಹಕ್ಕಿಗಳೆಲ್ಲಾ ಹೊಲಕ್ಕೆ ಬಂದು ಮುತ್ತಿಗೆ ಹಾಕಿದವು ನಾವು ಹಕ್ಕಿ ಕಾಯುವುದಕ್ಕೆ ಆಳನ್ನು ಇಟ್ಟಿದ್ದೇವೆ, ನಾನು

ಹೋಗಿ ಕುಳಿತುಕೊಂಡು ನೋಡಿದೆ, ಆಮೇಲೆ ಎಣ್ಣೆ ಹೊಡೆಯುವುದನ್ನೆಲ್ಲಾ ಮಾಡುತ್ತಿದ್ದರು, ಏನು ಹೊಡೆಯುವುದು ಬೇಡವೆಂದು ಬಿಡಿಸಿ, ಎರಡು ದಿವಸ ಕಾಯುವುದನ್ನು ಬಿಡಿಸಿಬಿಟ್ಟೆ ಎಲ್ಲಾ ಹುಳಗಳನ್ನು ತಿಂದು ಕಾಳನ್ನು ಮುಟ್ಟದೇ ಹೋದವು ಹೀಗೆ ಸೃಷ್ಟಿ ತಾನೇ ನಿಯಂತ್ರಣ ಮಾಡುತ್ತಿತ್ತು, ಇವತ್ತು ಅದನ್ನು ನಾವು ತೆಗೆದುಬಿಟ್ಟೇವು ಬಹುಶಃ ನಾವು ಈ ಬೆಳೆಗಳ ಮೇಲೆ ಇವನ್ನೆಲ್ಲಾ ಪ್ರಯೋಗ ಮಾಡಿದ್ದರಿಂದ ಈಗ ಇಲ್ಲಾ ಕ್ಯಾನ್ಸರ್ ಬೇರೆ ಬೇರೆ ರೋಗ ಬಂದಿರುವುದು ದಿಃ ಬೈರೇಗೌಡರು ಮತ್ತು ನಾವು ಕೂಡಿ, ನಮ್ಮ ಹಳ್ಳಿಯಲ್ಲಿ ಇರುವುದಿಲ್ಲ, ಇಲ್ಲೇ ಹದಿನೈದು ನೂರು, ಎರಡು ಸಾವಿರ ರೂಪಾಯಿಗಳ ಊಟವಿರುತ್ತದಲ್ಲ, ಅಲ್ಲಿ ಕೊಯಿ ಬೀಜ, ನವಿಲುಕೋಲು ಅವನ್ನೆಲ್ಲಾ ಇಟ್ಟಿದ್ದರು, ಭೈರೇಗೌಡರು, ಹುಡುಗಾಟಿಕೆಗೆ ಪಾಟೀಲರೆ, ಅದನ್ನು ತೆಗೆದುಕೊಂಡು ತಿನ್ನಬೇಡಿ ಎಂದರು, ಏಕೆ ಎಂದು ಕೇಳಿದೆ, ಅವನ್ನು ನಾವು ಬೆಳೆಯುತ್ತೇವೆ, ಅವಕ್ಕೆ ಎಣ್ಣೆ ಹೊಡೆದರೆ ಹೋಗುವುದೇ ಇಲ್ಲವೆಂದು ಹೇಳಿದರು ತಾಯಿಯ ಮೊಲೆ ಹಾಲಿನಲ್ಲಿ ಡಿಡಿಟಿ ಔಷಧಿ ಅಂಶ ಸಿಕ್ಕಿದೆಯಂತೆ, ಇದನ್ನು ಬಹುಶಃ ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇವೆ ಸಮುದ್ರದ ಮೀನಿನಲ್ಲಿ ಡಿಡಿಟಿ ಆಂಶ ಸಿಕ್ಕಿದೆ, ಆ ಕಾರಣಕ್ಕೆ ಡಿಡಿಟಿ ಅನ್ನು ಬಂದ್ ಮಾಡಿದರು ಈ ಎಲ್ಲಾ ಕಾರಣದಿಂದ ಇವತ್ತು ಈ ಅರಣ್ಯದ ಕಡೆಗೆ ಹೆಚ್ಚು ಒತ್ತು ಕೊಡಬೇಕು, ಅರಣ್ಯೀಕರಣ ಮಾಡಬೇಕು, ಅವರು ಹೇಳಿದಂತೆ ಸುಮ್ಮನೆ ಒಣಮಹೋತ್ಸವ ಆಗುವುದು ಬೇಡ, ವನಮಹೋತ್ಸವ ಮಾಡಬೇಕು ಇದಕ್ಕೆ ನಾವೆಲ್ಲರೂ ಸೇರಿದಂತೆ ಎಲ್ಲಾ ಅಧಿಕಾರಿಗಳು ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಅರಣ್ಯ ಬೆಳೆಸುವುದರ ಬಗ್ಗೆ ಅರಣ್ಯ ಇಲಾಖೆ ಒಂದೇ ಜವಾಬ್ದಾರಿ ತೆಗೆದುಕೊಳ್ಳುವುದಲ್ಲ, ಇದನ್ನು ಪ್ರತಿಯೊಂದು ಇಲಾಖೆಯವರು ತೆಗೆದುಕೊಳ್ಳಬೇಕು 25 ವರ್ಷಗಳ ಹಿಂದೆ ಎಲ್ಲಾ ಇಲಾಖೆಗಳಿಗೂ ಬರ್ತ್ ಕಂಟ್ರೋಲ್ ಸಂಬಂಧಿಸಿದಂತೆ ಇಂತಿಂಥ ಇಲಾಖೆಯವರು ಇಷ್ಟಿಷ್ಟು ಫಲಾನುಭವಿಗಳನ್ನು ಕರೆದುಕೊಂಡು ಬರಬೇಕೆಂದು ಹೇಳುತ್ತಿದ್ದೆವು ಹೀಗೆ ಎಲ್ಲಾ ಇಲಾಖೆಯವರು ಕೂಡಿ ಒಂದು ಕಡೆ ಅರಣ್ಯವನ್ನು ಬೆಳೆಸಬೇಕು ಒಂದು ಮಗು ಹುಟ್ಟಿದರೆ ನಾವು ಹತ್ತು ಗಿಡವನ್ನು ನೆಡಬೇಕು, ಅದರಲ್ಲಿ ಇವತ್ತು ಎರಡು ಉಳಿದರೂ ಖಂಡಿತವಾಗಿಯೂ ನಮಗೆ ಪ್ರಮಲ್ಲವಾದ ಅರಣ್ಯವಾಗುತ್ತದೆಂದು ಹೇಳುತ್ತೇನೆ ಇಷ್ಟೆ ಅಲ್ಲ, ಮೊನ್ನೆ ನಾನು ವಿದೇಶದ ವರದಿಯನ್ನು ನೋಡಿದೆ, ಎಲ್ಲಾ ಗಿಡಗಳನ್ನು ಬೆಳೆಯಲಾಗುವುದಿಲ್ಲ, ಕೆಲವು ಗಿಡಗಳು ಭೂಮಿಯಲ್ಲಿರುವ ನೀರನ್ನು ಇಂಗುತ್ತವಂತೆ, ಭೂಮಿಯಲ್ಲಿ ನೀರಿಲ್ಲದಂತೆ ಮಾಡಿ ಭೂಮಿಯನ್ನು ಬರಡು ಮಾಡತಕ್ಕ ಗಿಡಗಳು ಇದ್ದಾವೆ, ಅವನ್ನು ನೆಡಬಾರದೆಂದು ಹೇಳುತ್ತಾರೆ, ಯಾವ ಗಿಡ ನೆಡಬೇಕೆಂದು ಲೆಕ್ಕ ಇದೆ ನೀಲಗಿರಿ ನೆಡಬೇಕೆಂದು ಬರಿ ನೀಲಗಿರಿಯನ್ನೆ

18-13

ಬೆಳೆಸಿದರು, ನಮ್ಮ ಹಿಂದಿನ ವನಸ್ಪತಿಗಳು ಹೋದವು, ನಮ್ಮ ಬೇವಿನ ಗಿಡ ಹೋದವು, ಬೇರೆ ಬೇರೆ ರೀತಿಯ ಉತ್ತಮವಾದ ವೃಕ್ಷಗಳಿದ್ದವು, ಅವನ್ನು ಬೆಳೆಸಲಿಲ್ಲ, ಈಗ ಅರಣ್ಯ ಇಲಾಖೆಯುವರು ಸೇರಿದಂತೆ ಬೆಳೆಸುವುದಕ್ಕೆ ಆರಂಭಿಸಿದ್ದಾರೆ ಅದರಲ್ಲೂ ಕರ್ನಾಟಕ ಮಾದರಿಯಾಗಿ ಒಂದೇ ವರ್ಷದಲ್ಲಿ ಮೂರು ಫುಟ್, ನಾಲ್ಕು ಫುಟ್ ಎತ್ತರ ಬೆಳೆಯುವಂಥ ಟೆಕ್ನಾಲಜಿಯನ್ನು ಕಂಡುಹಿಡಿದಿದ್ದಾರೆ, ಅವನ್ನು ಹಾಕಿರುವುದಕ್ಕೆ ಇವತ್ತು ರಸ್ತೆಗಳ ವಕ್ಕದಲ್ಲಿ ಗಿಡಗಳಾಗಿವೆ ಇತ್ತೀಚಿಗೆ 25 ವರ್ಷಗಳಿಂದ ಈಚೆಗೆ ಸಾಮಾನ್ಯವಾಗಿ ಜನರಿಗೆ, ರೈತರಿಗೆ, ನಾವು ಅರಣ್ಯ ನಾಶ ಮಾಡಿದರೆ, ಗಿಡ ನಾಶ ಮಾಡಿದರೆ ಖಂಡಿತವಾಗಿಯೂ ನಾವು ಹಾಳಾಗುತ್ತೇವೆನ್ನುವ ಅರಿವು ಬಂದಿರುತ್ತದೆ ಇವತ್ತು ಯಾವ ಗಿಡಗಳನ್ನು ಬೆಳೆಯಬೇಕು, ಯಾವ ಗಿಡಗಳನ್ನು ಬೆಳೆಸಿದರೆ ಭೂಮಿಯಲ್ಲಿರುವ ನೀರು ಹೋಗುತ್ತದೆ ಎಂಬುದು ಗೊತ್ತಾಗಿದೆ ಭೂಮಿಯಲ್ಲಿ ನೀರು ಎಲ್ಲಿಂದ ಬಂತು? ಕೋಲಾರದಲ್ಲಿ ಸಾವಿರ ಅಡಿ ಕೊರೆದರೂ ನೀರು ಸಿಗುತ್ತದೆ, ನಮ್ಮಲ್ಲಿ 200-300 ಅಡಿಗಳಿಗೆ ನೀರು ಸಿಗುತ್ತದೆ 200-300 ಅಡಿಗಳ ಆಳಕ್ಕೆ ನೀರು ಎಲ್ಲಿಂದ ಹೋಯಿತು, ಮೇಲಿಂದ ಹೋಯಿತಾ, ಭೂಮಿಯಲ್ಲಿ ಹೇಗೆ ಹೋಯಿತು? ಇದರ ಬಗ್ಗೆಯೂ ತಜ್ಞರು ಹೇಳುವಂತೆ ಗಿಡಗಳು ಆ ಕೆಲಸವನ್ನು ಮಾಡುತ್ತವೆಂದು ಹೇಳುತ್ತಾರೆ ಭೂಮಿಯ ಮೇಲೆ ಬಿದ್ದಂತಹ ನೀರನ್ನು ತನ್ನ ತಾಯಿ ಬೇರಿನ ಮುಖಾಂತರ ಭೂಮಿಯ ಒಳಗೆ ನೀರನ್ನು ಕಳುಹಿಸುವುದು ಅದರ ಕೆಲಸ ಆಮೇಲೆ ಬೇಸಿಗೆಯಲ್ಲಿ ಸ್ವಲ್ಪ ಉಳಿಸಿಕೊಂಡು ಅದು ಬೆಳೆಯುತ್ತದೆ, ಉಳಿದದ್ದನ್ನೆಲ್ಲಾ ಭೂಮಿ ಒಳಗೆ ಬಿಡುತ್ತದೆ ಅದೇ ನೀರು ಭೂಮಿಯ ಒಳಗೆ ಇರುವುದು ಬಹುಶಃ ಇದೇ ರೀತಿ ನಾವು ಬೋರ್ ಕೊರೆಯುತ್ತಾ ಹೋದರೆ, ಈಗೇನು ಕೋಲಾರದಲ್ಲಿ 1000, 1200, 2000 ಅಡಿಗಳಷ್ಟು ಕೊರೆಯುತ್ತಾರೆ, ಬಹುಶಃ ಆ ಮಾವಿನ ತೋಮ ಕೂಡ ಒಣಗಿ ಹೋಗಬಹುದು, ಗಿಡಗಳೆಲ್ಲಾ ಒಣಗುತ್ತವೆ, ನೀರನ್ನು ಎಷ್ಟು ದಿವಸ ಹಾಯಿಸುತ್ತೀರಿ ಆ ಗಿಡಗಳಿಗೆ ನೀರು ಬೇಕಲ್ಲ ಅದರ ಕೆಳಗಿರುವ ಬೇರಿಗಿಂತ ಕೆಳಗೆ ಕೊರೆದರೆ ಗಿಡಗಳು ಒಣಗಿ ಹೋಗುತ್ತವೆಂದು ತಜ್ಞರು ಹೇಳುತ್ತಾರೆ ಈ ಕಾರಣಕ್ಕೆ ಎಲ್ಲರೂ ಆ ಬಗ್ಗೆ ಲಕ್ಷವಹಿಸಿ ಮಾಡಬೇಕೆಂದು ಹೇಳುತ್ತೇನೆ

ಇನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ಇದು ಮಹತ್ವದ ಇಲಾಖೆ, ಕೇವಲ ಮಹಿಳಾ ಸ್ವಸಹಾಯ ಸಂಘಗಳು ಇವನ್ನೆಲ್ಲಾ ಮಾಡಿದರೆ ಆಗಲಿಲ್ಲ ಮಹಿಳೆಯರ ಮೇಲಾಗುವ ಎಲ್ಲಾ ರೀತಿಯ ದೌರ್ಜನ್ಯಗಳ ಬಗ್ಗೆಯೂ ನೀವು ಗಮನ ಕೊಡಬೇಕಾಗುತ್ತದೆ ಬಹುಶಃ ಸಾಹಿತಿಗಳು ಮಹಿಳೆಯರ ಮೇಲೆ ಏನು ಬೇಕಾದರೂ ಬರೆಯುವುದಕ್ಕೆ

ಪ್ರಾರಂಭಿಸಿದ್ದಾರೆ ಮಹಿಳೆಯರ ಬಗ್ಗೆ ಯಾರು ಕೆಟ್ಟದ್ದಾಗಿ ಬರೆಯುತ್ತಾರೋ, ಆಗ ನಿಮ್ಮ ಇಲಾಖೆಯು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಖಂಡಿತವಾಗಿಯೂ ಮಹಿಳೆಯರ ತಾಯಿತನದ ಬಗ್ಗೆ ಕೆಟ್ಟದ್ದಾಗಿ ಬರೆದರೆ ನೀವು ಸುಮ್ಮನೆ ಕೂರಬಾರದು ನಿಮ್ಮ ಮಹಿಳಾ ಆಯೋಗದವರು ಚೆನ್ನಾಗಿ ಮಾಡಿ ನೋಟೀಸನ್ನೆ ಕೊಟ್ಟರು ಆದುದರಿಂದ, ಮಹಿಳೆಯರ ಬಗ್ಗೆ ಕೆಟ್ಟದ್ದಾಗಿ ಬರೆದರೆ, ಮಾತನಾಡಿದರೆ ಆ ಬಗ್ಗೆಯೂ ಕೂಡ ನಿಮ್ಮ ಇಲಾಖೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು "ನಾರಿ ಪರರ ಉಪಕಾರಿ ಸ್ವರ್ಗಕ್ಕೆ ದಾರಿ, ಮುನಿದರೆ ಆ ನಾರಿಯೆ ಮಾರಿ, ಸರ್ವಜ್ಞ ಎಂದು ಸರ್ವಜ್ಞ ಹೇಳುತ್ತಾನೆ ಆ ದೃಷ್ಟಿಯಿಂದ ತಮ್ಮದೂ ಕೂಡ ಬಹಳ ಮಹತ್ವದ ಇಲಾಖೆಯಾಗಿದೆ ಎನ್ನುವ ಮಾತನ್ನು ಹೇಳುತ್ತೇವೆ ನಮ್ಮ ಸಚಿವರಾದ ಅಶೋಕ್ ರವರು ಕೂಡ ಇಲ್ಲಿದ್ದಾರೆ, ಕೆಲವೇ ಮಂತ್ರಿಗಳಿದ್ದಾರೆ, ನಾನು ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ, ನಾನು ಹೆಸರು ಹೇಳುತ್ತಾ ಹೋದರೆ ಮತ್ತೆ ಉದಾಸಿಯಂಥವರು ಒಬ್ಬರ ಹೆಸರನ್ನು ಹೇಳಿಬಿಟ್ಟರೆಂದು ಸಿಟ್ಟಿಗೆದ್ದಾರು ಕೆಲವು ಮಂತ್ರಿಗಳು ಚೆನ್ನಾಗಿ ಕೆಲಸ ಮಾಡುತ್ತಾರೆ ಅಧ್ಯಕ್ಷರೆ, ನಿಮ್ಮ ಕಚೇರಿಯಿಂದ ಈಗ ನಾನು ಈ ಮಾಹಿತಿಯನ್ನು ತರಿಸಿಕೊಂಡೆ, ನನ್ನ ಕೇಳಿದರೆ ಈ ಬೇಡಿಕೆಗಳನ್ನು ಮಂಡಿಸುವ ಪದ್ಧತಿಯೇ ಬದಲಾವಣೆಯಾಗಬೇಕು ಬೇಕಾದರೆ, ಬಹಳ ಮಂತ್ರಿಗಳನ್ನು ಈಗ ಕೇಳಿ, ಅವರು ತಮ್ಮ ಬೇಡಿಕೆಗಳ ಮೇಲೆ ಹೇಳಿಬಿಡಲಿ ನೋಡೋಣ ಬಹಳ ಮಂದಿಗೆ ಗೊತ್ತಿರುವುದಿಲ್ಲ, ಸುಮ್ಮನೆ ನೀವು ಬರೆದುಕೊಡುತ್ತೀರಿ, ಅವರು ಇದ್ದರೂ ಇಲ್ಲವೆಂದರೂ ಬೇರೆ ಯಾರೋ ಇದ್ದವರು ಓದುತ್ತಾರೆ ಏಕೆಂದರೆ, ನಾನೇ ಅಲ್ಲಿ ಕುಳಿತು ಅದೇ ಮಾಡಿ ಬಂದಿದ್ದೇನೆ, ಅದಕ್ಕೆ ಹೇಳುತ್ತಿದ್ದೇನೆ, ಇದು ಬದಲಾವಣೆಯಾಗಬೇಕು ಸಂಬಂಧಪಟ್ಟ ಮಂತ್ರಿಗಳು ತಮ್ಮ ಬೇಡಿಕೆ ಏನಿದೆ ಎಂದು ವಿವರಣೆ ಕೊಟ್ಟ ಮೇಲೆ ಅದರ ಮೇಲೆ ನಮ್ಮ ಚರ್ಚೆ ಆರಂಭವಾಗಬೇಕು ಇದನ್ನು ಮುಂದಿನ ಅಧಿವೇಶನದಲ್ಲಿ ಮಾಡಿ, ದಿವಸ 4 ಬೇಡಿಕೆಗಳನ್ನೇ ಮಂಡಿಸಿ, ಯಾವುದು ಬೇಡ, ಆ ಬಗ್ಗೆ ಎರಡು ದಿವಸ ಚರ್ಚೆಯಾಗಲಿ, ಆ ಮೇಲೆ ಅದರ ಮೇಲೆ ಆಯಾ ಮಂತ್ರಿಗಳು ಉತ್ತರ ಕೊಟ್ಟು ಅದು ಮುಗಿದು ಬಿಡಬೇಕು ಯಾರೋ ಒಬ್ಬರು ಮುಖ್ಯಮಂತ್ರಿಗಳು ಅಥವಾ ಉಪ ಮುಖ್ಯಮಂತ್ರಿಗಳು ಇವರಿಂದ ಎಲ್ಲದಕ್ಕೂ ಉತ್ತರವನ್ನು ಕೊಡಿಸುತ್ತೀರಿ, ಈ ಸಲ ಆಯಾ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ

ಅಧ್ಯಕ್ಷರು : ಸ್ವಾಮಿ, 28 ಇಲಾಖೆಗಳಿವೆ, ಅವಕಾಶವೇ ಇಲ್ಲ, ಕೊನೆಯಪಕ್ಷ 28 ದಿವಸಗಳಾದರೂ ಚರ್ಚೆಯಾಗಬೇಕು

ಶ್ರೀ ಎಸ್.ಎಸ್ ಪಾಟೀಲ್ . ಇಡಿ, ತಪ್ಪೇನಾಗುತ್ತದೆ? ಇಲ್ಲವೆಂದರೆ ಈ ಚರ್ಚೆಯಿಂದ ಏನು ಉಪಯೋಗ ಸುಮ್ಮನೆ ಈ ಮುಂಗಡ ನಿರ್ವಹಣಾ ಪತ್ರವೆಂದು ಕೊಟ್ಟಿದ್ದಿರಿ, ಎಷ್ಟನ್ನು ತೆಗೆದು ನೋಡಿದೆ, ಇದರಲ್ಲಿ ಕೆಲವು ಸಿಗುತ್ತವೆ, ಕೆಲವು ಸಿಗುವುದಿಲ್ಲ ಅದೂ ಜೋರು ಮಾಡಿದ ಮೇಲೆ ಅವು ಬಂದಿದ್ದಾವೆ, ಇನ್ನು ಕೆಲವು ಇಲಾಖೆಯವು ಬಂದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ · ಸಂಸದೀಯ ಕಲಾಪಗಳು ಹೇಗೆ ಮಹತ್ವ ಕಳೆದುಕೊಳ್ಳುತ್ತಿದೆ ಎನ್ನುವುದಕ್ಕೆ, ಹಣಕಾಸು ಮಂತ್ರಿಯಾಗಿರುವವರು ಒಂದು ಸಲ ಬೇಡಿಕೆಗಳಿಗೆ ಬಜೆಟ್ ಗೆ ಅಪ್ರೂವಲ್ ತೆಗೆದುಕೊಂಡ ಮೇಲೆ ಸಂಬಂಧಪಟ್ಟ ಮಂತ್ರಿಗಳು ಬೇಡಿಕೆಯನ್ನು ಮೂವ್ ಮಾಡಿ "ಈ ವರ್ಷಕ್ಕೆ ನನಗೆ ಇಷ್ಟು ಹಣ ಬೇಕು, ನನಗೆ ಮಂಜೂರು ಮಾಡಿಕೊಡಿ,, ಎಂದು ಕೇಳಬೇಕು ಹಿಂದಿನ ವರ್ಷ ತಾವು ಏನು ಕೆಲಸ ಮಾಡಿರುತ್ತಾರೆಂಬುದಕ್ಕೆ ಈ ಸಭೆಯ ವಿಮರ್ಶೆಗೆ ಅವರು ಒಳಗಾಗಬೇಕು ನಾವು ಹಿಂದಿನ ವರ್ಷದಲ್ಲಿ ಕೊಟ್ಟ ಹಣವನ್ನು ಸಮರ್ಥವಾಗಿ ಖರ್ಚು ಮಾಡಿದ್ದಾರಾ, ದುರುಪಯೋಗ ಮಾಡಿದ್ದರಾ, ಸೋಮಾರಿತನ ತೋರಿಸಿದ್ದಾರಾ, ಈ ಸಲ ಅವರು ಕೇಳಿರುವ ಬೇಡಿಕೆಗೆ ಅರ್ಹರಾ ಎಂದು ಪರೀಕ್ಷೆಗೆ ಒಳಗಾಗಬೇಕು ನಾನು ಮೊದಲು 1978 ರಲ್ಲಿ ಸದನಕ್ಕೆ ಬಂದೆ, ಬೇಡಿಕೆ ಮೂವ್ ಮಾಡಿದ ಮಂತ್ರಿ, ಪರೀಕ್ಷೆ ಬರೆಯುವ ವಿದ್ಯಾರ್ಥಿ ರೀತಿ ಇಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು ಸ್ವತಃ ಪೆನ್ನು, ಪೇಪರ್ ಇಟ್ಟುಕೊಂಡು ನೋಟ್ಸ್ ಮಾಡಿಕೊಳ್ಳುತ್ತಿದ್ದರು ಅದಾದ ಮೇಲೆ ರಿಪ್ಲೈ ಮಾಡಿದ ದಿವಸ ಸಡಗರ, ಸಾಮಾನ್ಯವಾಗಿ ಅವತ್ತು ಸೂಟ್ ಹಾಕಿಕೊಳ್ಳುತ್ತಿದ್ದರು ಬಂದು ಕುಳಿತುಕೊಂಡು ಅದಾದ ಮೇಲೆ ಎಲ್ಲರಿಗೂ thanks ಹೇಳಿ ತಮಗೆ thanks ಹೇಳಿ ಹೋಗುತ್ತಿದ್ದರು ಆಯಿತು, ಸಮಯದ ಒತ್ತಡದಿಂದ ಎಲ್ಲಾ ಬೇಡಿಕೆಗಳನ್ನು ಮೂವ್ ಮಾಡಿದ್ದಿರಿ, ನಾನು ಮಂತ್ರಿಗಳಿಲ್ಲವೆಂದು ಯಾವಾಗಲೂ ಮಾತನಾಡುವುದಕ್ಕೆ ಹೋಗುವುದಿಲ್ಲ ತಮ್ಮ ಬೇಡಿಕೆಯನ್ನು ಮೂವ್ ಮಾಡಿ ಈ ಸದನ ಅದಕ್ಕೆ ಮಂಜೂರಾತಿ ಕೊಡಬೇಕೆಂದು ಕೇಳತಕ್ಕಂಥವರಿಗೆ ಇಲ್ಲಿದ್ದು ತಮ್ಮ ಬೇಡಿಕೆ ಬಗ್ಗೆ ಏನು ಹೇಳುತ್ತಾರೆಂದು ನೋಟ್ ಮಾಡಿಕೊಳ್ಳತಕ್ಕಂಥ ಸೌಜನ್ಯ ಕೂಡ ಇಲ್ಲ ಮೇಲ್ಮನೆಯಲ್ಲಿ ಬೇರೆ ಬಿಸಿನೆಸ್ ಇದೆ ಎಂದು ಅವರು ಅಲ್ಲಿ ಇದ್ದರೆ ಪರವಾಗಿಲ್ಲ ಅಧಿವೇಶನವಿರುವಾಗ ಅವರ ಬೇಡಿಕೆ ಮೂವ್ ಮಾಡಿದಾಗಲೂ ಅವರು ಇಲ್ಲಿ ಇಲ್ಲದೇ ಹೋದಾಗ ಈ ಸದನಕ್ಕೆ ಏನು ಮಹತ್ವ? ನಾವು ಏಕೆ ಅವರ ಬೇಡಿಕೆಗೆ ಮಂಜೂರಾತಿ ಕೊಡಬೇಕು, ನಿಮಗೆ ಸಂಖ್ಯಾಬಲವಿದೆ ಹಾಗೆ ಗಂಟನ್ನು ತೆಗೆದುಕೊಂಡು ಹೋಗಿರಪ್ಪ ಎಂದು ಕಳುಹಿಸಬಹುದಲ್ಲ It is very painful The most interesting eventful part of

the Parliamentary Democracy is sanctioning of the demands ಎಷ್ಟು ಬೇಸರವಾಗುತ್ತದೆ ನೋಡಿ, ಈಗ ಅವರು ಕೆಲವು valid suggestions ಕೊಡುತ್ತಾರೆ, ಅವರು ಇದ್ದರೆ ತಾನೇ ಅವರ officers ಹತ್ತಿರ interact ಆಗಿ ಮತ್ತೆ reply ಮಾಡುವಾಗ ಅವೆಲ್ಲಾ ಕವರ್ ಮಾಡಬೇಕು ಎಂತಹ ಘಟಾನುಘಟಿಗಳನ್ನು ನಾವು ನೋಡಿದ್ದೇವೆ Reply ಮಾಡಬೇಕೆಂದರೆ, ಯಡಿಯೂರಪ್ಪನವರೆ, ಮಾನ್ಯ ಸಿದ್ಧವೀರಪ್ಪನವರು ಮತ್ತೊಬ್ಬರು ಎಲ್ಲ, ನಾವು ಗ್ಯಾಲರಿಯಲ್ಲಿ ಕುಳಿತು ನೋಡುತ್ತಿದ್ದೆವು ಅವರಿಗೆ ಭಯ ಇರುತ್ತಿತ್ತು ಈಗ ಏನಾಗಿದೆ ಸಾರ್ವಜನಿಕರ ಹಣ ಎಂದರೆ ಭಯ ಇಲ್ಲ, ಅಸೆಂಬ್ಲಿ ಎಂದರೆ ಭಯ ಇಲ್ಲ ಅಸೆಂಬ್ಲಿಗೆ ಬರಬೇಕಾಗಿಲ್ಲ, ನೋಡಿ ಅವರು, ಬರುವುದೇ ಇಲ್ಲ, ನೀವಂತೂ ನಿಮಗೆ ಕೆಲಸದ ಒತ್ತಡ ಇದೆ, ನೀವು ಶೆಡ್ಯೂಲ್ಡ್ ಪೀರಿಯಡ್ ಒಳಗಾಗಿ ಡಿಮಾಂಡ್ಸ್ ಪಾಸ್ ಮಾಡಿ ಕೊಡಲೇಬೇಕು ನೀವು ನಮ್ಮ ಮೇಲೆ ಒತ್ತಡ ಹೇರುತ್ತೀರಿ, ಕೆಲಸಕ್ಕೆ ಬರುವುದೋ, ಬಾರದೋ ನಾಲ್ಕು ಮಾತನಾಡುತ್ತೇವೆ, ಡಿಮಾಂಡ್ ಪಾಸಾಯಿತು ಅವರಿಗೆ ಹೇಗೆ ಗೊತ್ತಾಗಬೇಕು? ಈ ಹಣ ಯಾರದು, ಎಲ್ಲಿಂದ ಬರುತ್ತದೆ, ಏಕೆ ಖರ್ಚು ಮಾಡಬೇಕು, ಏನು ಹೇಳಿದ್ದಾರೆಂದು ಅವರಿಗೆ ಗೊತ್ತಾಗುವುದಕ್ಕೆ ಅವಕಾಶವೆಲ್ಲಿದೆ ಹೇಳಿ Political parties ನಲ್ಲಿ training ಏನೂ ಇಲ್ಲ ಮಂತ್ರಿಗಳನ್ನು ಮಾಡಬೇಕಾದರೆ, ಯೋಗ್ಯತೆ ಅರ್ಹತೆಗಳನ್ನು ನೋಡಬೇಕಾದ್ದೇನೂ ಇಲ್ಲ ಜಾತಿ, ಗುಂಪು, ಜಿಲ್ಲೆ ಮತ್ತು ಸಾಮಾಜಿಕ ನ್ಯಾಯ ಇಂಥವೆಲ್ಲಾ ನೋಡುತ್ತೇವೆ ಯಾವ ಜವಾಬ್ದಾರಿ, ಲಂಗು ಲಗಾಮು ಇಲ್ಲದವರಿಗೆ ತಂದು ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಸಾರ್ವಜನಿಕರ ಹಣವನ್ನು ಖರ್ಚು ಮಾಡುವಂತಹ ಮಹತ್ವದ ಹೊಣೆಯನ್ನು ಕೊಟ್ಟುಬಿಟ್ಟು, ಅವರು ಎಲ್ಲ ಕಿತ್ತು ಬಿಸಾಕಿಬಿಟ್ಟು ಗಾಳಿಪಟಗಳ ಹಾಗೆ ಹೊರಗೆ ಹೊರಟು ಹೋಗಿ ಬಿಡುತ್ತಾರಲ್ಲಾ, ಈ ಸದನಕ್ಕೆ ಮರ್ಯಾದೆ ಏನು, ಬೆಲೆ ಏನು? ಗೌರವ ಏನು? ನಾವು ಅಲ್ಲಿ ಕುಳಿತುಕೊಂಡು ನೀವು ಇದ್ದೀರಲ್ಲಾ ಎಂದು ನಾವು ಬರುವುದು, ಪಾಪ ನೀವು ಒಬ್ಬರೇ ಕುಳಿತುಕೊಳ್ಳುತ್ತೀರಲ್ಲಾ, ನಿಮ್ಮನ್ನು ಬಿಟ್ಟು ನಾವು ಹೇಗೆ ಇರುವುದು ಎಂದು ನಾವು ಬರುವುದು ನಾವು ಇರುತ್ತೇವೆಂದು ಇವರೆಲ್ಲಾ ಬರುವುದು, ಏನು ಹೇಳುತ್ತಾರೋ ಬರೆದುಕೊಳ್ಳೋಣವೆಂದು ಅವರು ಬರುವುದು, ಸಂಬಳ ತೆಗೆದುಕೊಳ್ಳುವ ತಪ್ಪಿಗೆ ಅಧಿಕಾರಿಗಳು ಬರಲೇಬೇಕು On the whole, is their any sanctity for this? ಗೌರವ ಇದೆಯಾ ಹೇಳಿ It is most unfortunate ಇದಕ್ಕಿಂತ ಹೊಣೆಗೇಡಿತನ, ನಾನು ಇನ್ನೇನು ಪದವನ್ನು ಬಳಸುವುದಿಲ್ಲ, ಮತ್ತೊಂದು ಇರಲಿಕ್ಕೆ ಸಾಧ್ಯವಿಲ್ಲ ನಾವು ದತ್ತಿಗಳು We are trustees for the

public money ಕರ್ನಾಟಕ ಸರ್ಕಾರದ ಖಜಾನೆಯಲ್ಲಿರತಕ್ಕಂತಹ ಇಡೀ ಸಂಪತ್ತಿಗೆ ಈ ರಾಜ್ಯದ ಜನತೆಯ ಪರವಾಗಿ ನಾವು ದತ್ತಿಗಳು ಧರ್ಮದರ್ಶಿಗಳು ನಾವು Trustees ನಾವು ಅವರು ಹಣ ಖರ್ಚು ಮಾಡುವುದಕ್ಕೆ ನಾವು ಅಪ್ರೂವಲ್ ಕೊಡಬೇಕು ನಾವು ಎಲ್ಲಿಗೆ ಬಂದಿದ್ದೇವೆ? Administrative actions ಮಾಡುವಾಗ ಅವರವರ ಖುಷಿ ಬಂದ ಹಾಗೆ, ಹಾರ್ಟಿಕಲ್ಚರ್‌ಗೆ ಒಂದು ಯೂನಿವರ್ಸಿಟಿ ನಾಳೆ ವೀಳ್ಯದೆಲೆಗೆ ಒಂದು ಯೂನಿವರ್ಸಿಟಿ, Appleಗೆ ಒಂದು ಯೂನಿವರ್ಸಿಟಿ, ಇನ್ನೊಬ್ಬ ಬಂದ ಅವನ ಖುಷಿಗೆ 20 ಬೋರ್ಡ್ ಮಾಡಿದ, ಬೇಕಾದವರಿಗೆ ವೈಸ್ ಛಾನ್ಸಲರ್ ಮಾಡಬೇಕು, ಅದಕ್ಕೆ ಒಂದು ಯೂನಿವರ್ಸಿಟಿ ಈ ತರಹ ಸರ್ಕಾರದ ಹಾಗೂ ಸಾರ್ವಜನಿಕರ ಹಣವನ್ನು ಒಂದು ಚೂರು ಭಯ ಭಕ್ತಿ ಇಲ್ಲದೆ, ಗೌರವ ಘನತೆ ಇಲ್ಲದೆ ಖರ್ಚು ಮಾಡಲಾಗುತ್ತದೆ ಏನು ಮಾಡುವುದಕ್ಕಾಗುವುದಿಲ್ಲ ಅಪ್ಪ ಪೋಲಿಗಳ ಕೈಗೆ ಸರ್ಕಾರ ಕೊಟ್ಟಿದ್ದೇವೆಂದರೆ ತಪ್ಪಾಗುತ್ತದೆ ಬೇಸರವಾಗುತ್ತದೆ ಗೌರವಸ್ಥರ ಕೈಗೆ ಕೊಟ್ಟಿದ್ದೇವೆ ಎಂದು ಹೇಳುವುದಕ್ಕಾಗುತ್ತಾ?

ಶ್ರೀ ಸಿದ್ದರಾಮಯ್ಯ · ಮಾನ್ಯ ಅಧ್ಯಕ್ಷರೆ, ಅಧ್ಯಕ್ಷರಾದ ನೀವೂ ಮಂತ್ರಿಗಳಾಗಿದ್ದಿರಿ, ಶಾಸಕರಾಗಿ ಕೆಲಸ ಮಾಡಿದ್ದೀರಿ, MP ಆಗಿ ಲೋಕಸಭೆಯನ್ನು ಕೂಡ ನೋಡಿಕೊಂಡು ಬಂದಿದ್ದೀರಿ ಕನಿಷ್ಟಪಕ್ಷ ಡಿಮಾಂಡ್ಸ್‌ಗಳು ಬಂದಾಗ ಸಾವಿರಾರು ಕೋಟಿ ರೂಪಾಯಿಗಳನ್ನು ಇಲ್ಲಿ ಅಪ್ರೂವ್ ಮಾಡಿ ಕೊಡಬೇಕು ಕೆಲವು ಇಲಾಖೆಗಳಿಗೆ 2,000 ಕೋಟಿ, 3,000 ಕೋಟಿ 4,000 ಕೋಟಿ ರೂಪಾಯಿಗಳನ್ನು ಅಪ್ರೂವ್ ಮಾಡಿ ಕೊಡಬೇಕು ನೀರಾವರಿ ಇಲಾಖೆಗೆ 4,000 ಕೋಟಿ ರೂ PWD ಇಲಾಖೆಗೆ 2,500 ಕೋಟಿ, Agriculture department ಗೆ 1,250 ಕೋಟಿ ಪವರ್ ಗೆ 2 ಲಕ್ಷದ 3,000 ಕೋಟಿ ಇಷ್ಟು ಹಣವನ್ನು ನಾವು ಇಲ್ಲಿ ಅಪ್ರೂವ್ ಮಾಡಿ ಕೊಡುತ್ತೇವೆ ಸೋಷಿಯಲ್ ವೆಲ್‌ಫೇರ್‌ಗೆ 1000 ದಿಂದ 1,600 ಕೋಟಿ ರೂಪಾಯಿ ಇಷ್ಟು ಹಣವನ್ನು ಇಲ್ಲಿ ಅಪ್ರೂವ್ ಮಾಡಿಕೊಡಬೇಕು ಆ ಇಲಾಖೆಗಳು ಹೇಗೆ ನಡೆಯುತ್ತಿವೆ, ಹಣ ಸದುಪಯೋಗ ಆಗುತ್ತಿದೆಯೋ ಇಲ್ಲವೋ, ದುರುಪಯೋಗ ಆಗುತ್ತಿದೆಯೋ ಇಲ್ಲವೋ, ಆ ಕಾರ್ಯಕ್ರಮಗಳು ಜನರಿಗೆ ಮುಟ್ಟುತ್ತಿದೆಯೋ ಇಲ್ಲವೋ, ನಾವು ಕೊಟ್ಟಂತಹ ಹಣ ಎಲ್ಲಾ ಕಾರ್ಯಕ್ರಮಗಳ ಮೇಲೆ ಖರ್ಚಾಗುತ್ತದೋ ಇಲ್ಲವೋ, ಎಲ್ಲೆಲ್ಲಿ ಸೋರಿ ಹೋಗುತ್ತಿದೆ, ಯಾರ್‍ಯಾರು ತಿಂದು ಹಾಕುತ್ತಿದ್ದಾರೆ, ಸಾಮಾಜಿಕ ನ್ಯಾಯ ನಡೆಯುತ್ತದೆಯೋ ಇಲ್ಲವೋ, ಸಮಾನ ಬೆಳವಣಿಗೆ ಆಗುತ್ತಿದೆಯೋ ಇಲ್ಲವೋ ಇವುಗಳ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕಾಗಿದೆ ಮಾನ್ಯ ಮಾಧುಸ್ವಾಮಿಯವರು ಬೆಳಿಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ KPTCL ನಲ್ಲಿ ಏನೇನು ಅನ್ಯಾಯಗಳು ಆಗುತ್ತಿವೆ ಎನ್ನುವುದನ್ನು ತೆರೆದು ಇಟ್ಟಿದ್ದಾರೆ

ಒಂದು ಕಡೆ ನಾವು ಸಮಾನ ಬೆಳವಣಿಗೆ ಮಾಡುತ್ತೇವೆ, ಮಂಕುತಿಮ್ಮನಿಂದ ಹಿಡಿದು ಯಾರ್ಯಾರು ಕವಿಗಳಿದ್ದಾರೆ, ಬಸವಣ್ಣನವರಿಂದ ಹಿಡಿದು, ಡಿ ವಿ ಜಿ ಅವರಿಂದ ಹಿಡಿದು, ಕುವೆಂಪು ಅವರಿಂದ ಹಿಡಿದು, ಇವರೆಲ್ಲರ ಪದಗಳನ್ನು ಇಲ್ಲಿ ಬಳಸಿಬಿಡುವುದು ಇಲ್ಲಿ ರಾಜ್ಯ ಉಳಿಯುವಂತಹ ಕೆಲಸ ಅಲ್ಲ ಇದು ಇದು ಪ್ರಜಾಪ್ರಭುತ್ವ ಉಳಿಯುವಂತಹ ಕೆಲಸವಲ್ಲ ಹಿಂದೆ ನಾನು 1983ರಲ್ಲಿ ಚುನಾಯಿಸಿ ಬಂದು, ನಾವೆಲ್ಲಾ ಹೊಸ ಹೊಸ ಮಂತ್ರಿಗಳಾಗಿ ಬಂದಾಗ, ಒಂದೊಂದು ಬೇಡಿಕೆಯಲ್ಲಿ ಎರಡೆರಡು ಇಲಾಖೆಗಳು ಇರುತ್ತಿದ್ದವು Agriculture ಎಂದರೆ, Animal Husbandry, Agriculture, Sericulture ಮತ್ತು Horticulture ಇಷ್ಟೇ ಚರ್ಚೆಯಾಗುತ್ತಿತ್ತು ಇದು ಚರ್ಚೆಯಾಗಿ ಪಾಸಾದ ಮೇಲೆ ಇನ್ನೊಂದು important ಇಲಾಖೆಯನ್ನು ತೆಗೆದುಕೊಳ್ಳುತ್ತಿದ್ದರು ಸಂಬಂಧಪಟ್ಟ ಸಚಿವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ students ತರಹ ಕುಳಿತು ನೋಟ್ ಮಾಡಿಕೊಳ್ಳುತ್ತಿದ್ದರು ಉತ್ತರ ಹೇಳುವ ವರೆಗೆ ನಾವು ಭಯ ಭಕ್ತಿಯಿಂದ ಇರುತ್ತಿದ್ದೆವು ಈಗ ಒಬ್ಬರಿಗೂ ಮೂರು ಕಾಸಿನ ಭಯ ಇಲ್ಲ ಯಾರೂ ಉತ್ತರ ಹೇಳುವವರು ಇಲ್ಲ PWD ಇಲಾಖೆ 2,500 ಕೋಟಿ KEB ಗೆ ಮತ್ತು KPTCL ಗೆ 2,300 ಕೋಟಿ ರೂ ಕೊಟ್ಟಿದ್ದಾರೆ

ಶ್ರೀ ಮಹಿಮಾ ಜೆ ಪಟೇಲ್ ಇಲ್ಲಿ ಭಯ ಅಲ್ಲ, ಗೌರವ ಇದ್ದರೆ ಸಾಕು

ಶ್ರೀ ಸಿದ್ದರಾಮಯ್ಯ ಯಾರಿಗೆ ಗೌರವ ಇರಬೇಕು? ಇಲ್ಲಿ ಇದ್ದಾರಲ್ಲಾ ಅದೇ ಗೌರವ ಕೊಡುವುದು ಅದೇ ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಹೇಳುವುದು ಇದಕ್ಕೆ Kannada and Culture, Sports, ಅವರು ಯಾರೋ ಇರಲಿಲ್ಲವೆಂದು ಇಟ್ಟುಕೊಳ್ಳೋಣ ಇಲ್ಲಿ ಒಂದು ಹೊಸ ಪದ್ಧತಿ ಆಗಿ ಬಿಟ್ಟಿದೆ ಸಮಯ ಇಲ್ಲವೆಂತಲೋ, ಏನೋ ಗೊತ್ತಿಲ್ಲ 28 ಇಲಾಖೆಗಳನ್ನೂ ಹಾಕಿ ಬಿಟ್ಟಿದ್ದೀರಿ ಯಾವ ಇಲಾಖೆ ಮೇಲೆ ಮಾತನಾಡಬೇಕೆಂದು ಗೊತ್ತಾಗುವುದಿಲ್ಲ ದಯಮಾಡಿ ನೀವು ಮಂತ್ರಿಗಳೆಲ್ಲರೂ ಇಲ್ಲಿ ಬಂದು ಕುಳಿತುಕೊಳ್ಳುವ ಹಾಗೆ ಮಾಡಬೇಕು ನೀವು ಒಂದೊಂದು ಕಡೆ ಬಿಗಿ ಮಾಡುತ್ತೀರಿ, ಒಂದೊಂದು ಕಡೆ ಲೂಸ್ ಬಿಟ್ಟು ಬಿಡುತ್ತೀರಿ Will due respect to you, with due respect to the Ministers, I am making this appeal Please instruct all the Ministers ಕೆಲವರು ದೊಡ್ಡ ದೊಡ್ಡ ಇಲಾಖೆಗಳನ್ನು ಹೊತ್ತಿಕೊಂಡಿದ್ದಾರೆ

ಅಧ್ಯಕ್ಷರು ನಾನು ಸದನ ಪ್ರಾರಂಭವಾಗುವುದಕ್ಕಿಂತ ಮೊದಲೇ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಮಂತ್ರಿಮಂಡಲದ ಎಲ್ಲ ಸದಸ್ಯರು ಇರಬೇಕು, ಅವರವರ ಬೇಡಿಕೆಗಳು ಬಂದಾಗ

ಅವರು ಹಾಜರಿರಬೇಕೆಂದು ಬರೆದಿದ್ದೇನೆ Each and every point ನಾವು

ಶ್ರೀ ಬಸವರಾಜ ರಾಯರೆಡ್ಡಿ ಈ ತರಹ ಅಸಹಾಯಕರಾಗಿ ಮಾತನಾಡಿದರೆ ಆಗುವುದಿಲ್ಲ

ಅಧ್ಯಕ್ಷರು . ಅಸಹಾಯಕತೆ ಅಲ್ಲ ಈಗ ಏನಾಗಿದೆ ಎಂದರೆ,

ಶ್ರೀ ಬಸವರಾಜ ರಾಯರೆಡ್ಡಿ We are with you You are not helpless We are here to support you

ಅಧ್ಯಕ್ಷರು : ನಿನ್ನೆ ನಾನು ಒತ್ತಡ ಹಾಕಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಿ ಎಂದು ಹೇಳಬೇಕಾಯಿತು

ಶ್ರೀ ಸಿದ್ದರಾಮಯ್ಯ . ಬೇಡಿಕೆ ಹಾಕುವುದು ಬೇಡ ಬಿಡಿ ತೆಗೆದು ಹಾಕಿ ನೀವು ವಾಪಸ್ ತೆಗೆದುಕೊಂಡು ಬಿಡಿ

ಅಧ್ಯಕ್ಷರು ನಮ್ಮ ಡಿಮಾಂಡ್ಸ್ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸ ಬೇಕಾಯಿತು? ಡಿಮಾಂಡ್ಸ್ ಬಗ್ಗೆ ಇಷ್ಟು ಸಮಯ ಎಂದು ನಿರ್ಧಾರ ಮಾಡಿ ಚರ್ಚೆ ಮಾಡಬೇಕಾಗುತ್ತದೆ ಜವಾಬ್ದಾರಿ ಯಾರಿಗೂ ಇಲ್ಲ

ಶ್ರೀ ಸಿದ್ದರಾಮಯ್ಯ ಈ ತರಹ ಮಾಡಿದರೆ Parliamentary Democracy ಹೋಗಿ ಬಿಡುತ್ತದೆ ಪ್ರಜಾಪ್ರಭುತ್ವ ಹೋಗಿ ಬಿಡುತ್ತದೆ

ಅಧ್ಯಕ್ಷರು . ಇನ್ನು ಇದೆಯಾ ಅಪ್ಪ?

ಶ್ರೀ ಸಿದ್ದರಾಮಯ್ಯ : ಹಾಗಾದರೆ ನಡೀರಿ ಹೋಗೋಣ ಏಕೆ ಇಷ್ಟು ಲಘುವಾಗಿ ಮಾತನಾಡಿದರೆ ಹೇಗೆ ?

ಅಧ್ಯಕ್ಷರು . ಲಘುವಾಗಿ ಅಲ್ಲ ಜವಾಬ್ದಾರಿಯಿಂದ ನಡೆದುಕೊಳ್ಳ ತಕ್ಕಂತಹವರು ಆ ಕಡೆ ಆಗಲಿ, ಈ ಕಡೆ ಆಗಲಿ, ಕಡಿಮೆ ನಿನ್ನೆ ಮತ್ತು ಇವತ್ತಿಗೆ ಇದು ಎಷ್ಟನೇ ದಿನ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರ ಮಾತಿನ ಬೆಲೆ ಕೊಡದೇ ಇದ್ದರೆ ಆ ಇಲಾಖೆಯ ಬೇಡಿಕೆಯನ್ನೇ ತೆಗೆದುಕೊಳ್ಳುವುದು ಬೇಡ ಆ ಇಲಾಖೆಯ ಬೇಡಿಕೆಯನ್ನೇ ವಾಪಸ್ ತೆಗೆದುಕೊಂಡು ಬಿಡಿ ಆ ಬೇಡಿಕೆಯನ್ನು ಮತಕ್ಕೆ ಹಾಕಬೇಡಿ

ಅಧ್ಯಕ್ಷರು : ಮಾನ್ಯ ಉಪ ಮುಖ್ಯ ಮಂತ್ರಿಗಳು ಇಲ್ಲಿದ್ದಾರೆ ಈಗ ತಾನೆ ಆರಂಭವಾಗಿದೆ ಎಲ್ಲ ಮಂತ್ರಿಗಳು ಸದನದಲ್ಲಿದ್ದು, ಚರ್ಚೆಯಲ್ಲಿ ಭಾಗವಹಿಸಿ, ಅವರು ಉತ್ತರ ಕೊಡುವ ರೀತಿಯಲ್ಲಿ, ವ್ಯವಸ್ಥೆಯನ್ನು ಮಾಡತಕ್ಕಂಥಾದ್ದು ನಿಮ್ಮ ಜವಾಬ್ದಾರಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ನಿಮ್ಮ ಮಂತ್ರಿಮಂಡಲದ ಸದಸ್ಯರ ಜೊತೆ ಮಾತನಾಡಿ ಏನಾದರೂ ಒಂದು ವ್ಯವಸ್ಥೆ ಮಾಡಬೇಕು ಇದು ಚೆನ್ನಾಗಿ ಇರುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ . ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಗೌರವ ಕೊಡುತ್ತಿಲ್ಲ ಬಹಳ ಪ್ರಾಮುಖ್ಯವಾಗಿ ಈ ಸದನದ ನಾಯಕರು ಅವರು ಇಲ್ಲಿ ಇರಬೇಕಾಗುತ್ತದೆ ಅವರು ಬೆಂಗಳೂರು ಮತ್ತು ರಾಜ್ಯದ ಬೇರೆ ಬೇರೆ ಕಡೆ ನಡೆಯುವ ಸಮಾರಂಭಗಳಿಗೆಲ್ಲಾ ಹೋಗುತ್ತಿದ್ದಾರೆ

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಬೆಂಗಳೂರಿನಲ್ಲೇ ಈ ಸದನ ನಡೆಯುವಾಗ ಬೆಂಗಳೂರಿನಲ್ಲಿಯೇ ಅವರು ಅನೇಕ ಸಮಾರಂಭಗಳಿಗೆ ಹೋಗುತ್ತಿದ್ದಾರೆ ನನಗೆ ಅನಿಸುತ್ತದೆ, ಎಲ್ಲ ಸಮಾರಂಭಗಳನ್ನು ಬದಿಗೊತ್ತಬೇಕು ಸಂಸದೀಯ ನಡವಳಿಕೆಗಳ ಏನು ಪರಿಸ್ಥಿತಿಯಾಗಿದೆ ಎಂಬ ಬಗ್ಗೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆ ಹಿಂದೆ ವೀರೇಂದ್ರ ಪಾಟೀಲರಿಗೆ ಪಾರ್ಶ್ವ ವಾಯು ಆಗಿದ್ದರೂ ಕೂಡ ಅವರು ಇಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು ನೀವು ನಾವು ಅವರ ನಡವಳಿಕೆಯನ್ನು ನೋಡಿ ಕಲಿತುಕೊಳ್ಳಬೇಕಾಗಿದೆ ಅವರು ಇಲ್ಲಿ ಬಂದು ಕುಳಿತು ಕಾವೇರಿ ಬಗ್ಗೆ ಚರ್ಚೆಯನ್ನು ಕೇಳುತ್ತಿದ್ದರು ಅಂದರೆ ಈ ಸದನಕ್ಕೆ ಅವರು ಎಷ್ಟು ಗೌರವ ಮತ್ತು ಶಕ್ತಿಯನ್ನು ಹಿಂದೆ ವೀರೇಂದ್ರ ಪಾಟೀಲರು ಕೊಟ್ಟಿದ್ದಾರೆ ಅವರಂತೆ ಅನೇಕರು ಈ ಸದನಕ್ಕೆ ಗೌರವವನ್ನು ಕೊಟ್ಟಿದ್ದಾರೆ ಈಗ ಯಾರಿಗೂ ಇದರ ಬಗ್ಗೆ ಬೇಕಾಗಿಲ್ಲ ಮಂತ್ರಿಗಳಿಗೆ ಬೇಕಾಗಿಲ್ಲ, ಮುಖ್ಯ ಮಂತ್ರಿಗಳು ಬಹಳ ಪ್ರಾಮುಖ್ಯ, ನೀವು ಹೇಳಿ, ಎಷ್ಟು ದಿವಸ ಸದನಕ್ಕೆ ಮುಖ್ಯ ಮಂತ್ರಿಗಳು ಬಂದು ಈ ಒಂದು ಸದನದಲ್ಲಿರುವ ಮುಖ್ಯ ಮಂತ್ರಿಗಳ ಕುರ್ಚಿಯಲ್ಲಿ ಕುಳಿತಿದ್ದಾರೆ ? ಅವರ ಬಗ್ಗೆ ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ ತಾವೇ ಹೇಳಿ, ಎಲ್ಲಿಗೆ ಹೋಗಿದ್ದಾರೆ ಮುಖ್ಯ ಮಂತ್ರಿಗಳು ? ಯಾವ ಊರಿಗೆ ಹೋಗಿದ್ದಾರೆ ? ಏನು ಕಾರಣ ? ಸದನಕ್ಕೆ ಬರದೇ ಇರುವುದಕ್ಕೆ ಕಾರಣವೇನು ? ಮುಖ್ಯ ಮಂತ್ರಿಗಳದ್ದು ಇದು ಸರಿಯಾದ ಕ್ರಮವಲ್ಲ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಇಲಾಖೆಗಳು ಬೇಕಾದಷ್ಟು ಇವೆ ಬೇಕಾದಷ್ಟು ಇದೆ ಅವರು ಇವತ್ತು ಪೂರ್ತಿ ಸದನದಲ್ಲಿ ಇರಬೇಕು ನಾವು ಕೇಳುತ್ತೇನೆ, 5ನೇ ತಾರೀಖು ಸದನ ಆರಂಭವಾದ ದಿನದಿಂದ ಇಲ್ಲಿಯವರೆವಿಗೆ ಮುಖ್ಯಮಂತ್ರಿಗಳು ಎಷ್ಟು ಗಂಟೆ, ಎಷ್ಟು ಹೊತ್ತು ಕುಳಿತಿದ್ದಾರೆ ? ನೀವು ಹೇಳಿ, ಇದು ಸರಿಯಾದ ಕ್ರಮವಲ್ಲ ಈ ಸದನಕ್ಕೆ ಮುಖ್ಯಮಂತ್ರಿಗಳು ಗೌರವವನ್ನು ಕೊಡುತ್ತಿಲ್ಲ, ನಾನೇನು ಅವರ ಬಗ್ಗೆ ವೈಯಕ್ತಿಕವಾಗಿ ಟೀಕೆ ಮಾಡುತ್ತೇನಂದಲ್ಲ, ಸದನದ ಗತಿ ಏನು / ಅವರು ಬರುತ್ತಾರೆ, ಅವರು ಬಂದ ತಕ್ಷಣ ಒಂದು ದಂಡು ಒಳಗಡೆ ಬರುತ್ತದೆ, ಅವರು ಎದ್ದರೋ ಒಂದು ದಂಡು ಹೋಗುತ್ತದೆ ನೀವು ಅದನ್ನು ನೋಡಬೇಕು, ಅವರು ಬಂದ ತಕ್ಷಣ ಒಂದು ದಂಡು ದಡ ದಡನೇ ಬರುತ್ತದೆ, ಅವರು ಹತ್ತು ನಿಮಿಷ ಕುಳಿತುಕೊಳ್ಳುತ್ತಾರೆ, ಸುತ್ತ ಒಂದು ಸಾರಿ ಮುಖ ಆಡಿಸುತ್ತಾರೆ, ಅವರು ಹೊರಗಡೆ ಹೋದ ತಕ್ಷಣ ಅಲ್ಲಿ ಇನ್ನೊಂದು ದಂಡು ಕಾದಿದ್ದು ಅವರ ಜೊತೆ ಹೋಗುತ್ತದೆ ಇಲ್ಲೇನಾಗುತ್ತದೆ ಎಂದರೆ

ಅಧಿಕಾರಿಗಳಿಗೂ ಕೂಡ ಒಂದು ರೀತಿಯಲ್ಲಿ ಭಯವೇ ಇರುವುದಿಲ್ಲ ಅವರಿಗೆ ಅವರ ಬಗ್ಗೆಯೇ ಎಚ್ಚರ ಇಲ್ಲಿ ಸದನದಲ್ಲಿ ಇಂದು ಬೇಡಿಕೆಗಳ ಮೇಲೆ ಚರ್ಚೆ ಬಹಳ ಪ್ರಾಮುಖ್ಯ ಸಾಮಾನ್ಯ ಚರ್ಚೆಗಿಂತ ಹೆಚ್ಚಾಗಿ ಬೇಡಿಕೆಗಳ ಮೇಲಿನ ಚರ್ಚೆ ಏನಿದೆ ಅದು ಬಹಳ ಪ್ರಾಮುಖ್ಯ ನಾನು ಹೇಳುತ್ತೇನೆ ಮಾನ್ಯ ರಮೇಶ್‌ಕುಮಾರ್‌ರವರೆ, ಸಂಸದೀಯ ನಡವಳಿಕೆ, ಸಂಸದೀಯ ನಡವಳಿಕೆ ಎಂದು ಹೇಳುವಾಗ ನನಗನಿಸುತ್ತದೆ ನಿನ್ನೆ ಆಗಿರತಕ್ಕಂಥದ್ದು ಒಂದು ದೊಡ್ಡ ಅತ್ಯಂತ ನೋವಿನ ಸಂಗತಿ ಇದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ ವಿಧಾನ ಪರಿಷತ್ತಿನ ಸದಸ್ಯರೆಲ್ಲರೂ ಈ ಸದನವನ್ನು ಕಡೆಗಾಣಿಸಿ ಸದನದ ಕಾರ್ಯಕಲಾಪವನ್ನು ಧಿಕ್ಕರಿಸಿ ಈ ಸದನದ ಕಾರ್ಯಕಲಾಪದ ಬಗ್ಗೆ ಅವರು ರಾಜ್ಯಪಾಲರ ಬಳಿಗೆ ಮನವಿಯನ್ನು ತೆಗೆದುಕೊಂಡು ಹೋಗುತ್ತಾರೆ ಎಂದರೆ, ನಾವು ಇಂದು ವಿಧಾನ ಪರಿಷತ್ತಿನ ಬಗ್ಗೆ ನಿರ್ಣಯವನ್ನು ಮಂಡಿಸಬೇಕು ವಿಧಾನ ಪರಿಷತ್ತನ್ನು ಸಂಪೂರ್ಣವಾಗಿ ವಜಾ ಮಾಡಿದ್ದೇವೆ ಎಂದು ನಿರ್ಣಯ ಮಾಡಿ ಅವರು ಏನು ಮಾಡುವುದಕ್ಕಾಗುತ್ತದೆ ನೋಡೋಣ ನಮ್ಮ ಹಕ್ಕಿಗೆ ಚ್ಯುತಿಯಾಗಿದೆ ಏನಿದು ಈ ಪರಿಸ್ಥಿತಿ, ಯಾವ ಕಾರಣಕ್ಕೆ ಅವರು ನಿನ್ನೆ ಹೋಗಿದ್ದಾರೆ? ಆ ರೀತಿ ಅವರು ಹೋಗುವುದಕ್ಕೆ ಯಾರು ಅವರಿಗೆ ಅವಕಾಶ ಕೊಟ್ಟವರು? ಇರಬಹುದು, ಅವರೆಲ್ಲ ನಮ್ಮ ಸ್ನೇಹಿತರುಗಳೇ ಇರಬಹುದು, ಬೇರೆ ಇರಬಹುದು ಈ ಸದನ ಬಹಳ ಪ್ರಾಮುಖ್ಯವಾದ ಸದನ ಅನೇಕ ರಾಜ್ಯಗಳಲ್ಲಿ ವಿಧಾನ ಪರಿಷತ್ ಇಲ್ಲವೇ ಇಲ್ಲ ವಿಧಾನ ಪರಿಷತ್ತು ಇರಲಿ, ನಮ್ಮದೇನು ಅಭ್ಯಂತರವಿಲ್ಲ ಆದರೆ ವಿಧಾನ ಪರಿಷತ್ತಿನವರು ಹೋಗಿ ರಾಜ್ಯಪಾಲರಿಗೆ ನಿನ್ನೆ ಮನವಿಯನ್ನು ಕೊಡತಕ್ಕಂಥ ಮಟ್ಟಕ್ಕೆ ಅವರು ಹೋದರು ಎಂದರೆ ಸಂಸದೀಯ ವ್ಯವಸ್ಥೆ ಎಷ್ಟು ಕೆಳಗಿಳಿದಿದೆ ನೋಡಿ ಇದು ಒಳ್ಳೆಯದಲ್ಲ

ಶ್ರೀ ಜಿ ವಿ. ಶ್ರೀರಾಮರೆಡ್ಡಿ – ಈ ಸದನಕ್ಕೆ ಅಗೌರವ ಮಾಡಿದ್ದಾರೆ, ಅಪಚಾರ ಮಾಡಿದ್ದಾರೆ, ಈ ಸದನದ ಹಕ್ಕು ಚ್ಯುತಿಯಾಗುವಂತೆ ಅವರು ನಡೆದುಕೊಂಡಿದ್ದಾರೆ ಈ ಸದನದಲ್ಲಿ ಮಂಡನೆಯಾಗಿ ಪಾಸ್ ಆಗಿರತಕ್ಕಂಥ ಒಂದು ಕಾಯಿದೆಯ ಬಗ್ಗೆ ರಾಜ್ಯಪಾಲರ ಹತ್ತಿರ ಹೋಗಿ ನೀವು ಈ ಕಾಯಿದೆಗೆ ಅಂಕಿತ ಹಾಕಬಾರದು ಎಂದು ಹೇಳುವುದಕ್ಕೆ ವಿಧಾನ ಪರಿಷತ್ತಿನವರಿಗೆ ಯಾರು ಅಧಿಕಾರ ಕೊಟ್ಟವರು? ಈ ಸದನದ ಅಧಿಕಾರವನ್ನು ಅವರು ಪ್ರಶ್ನೆ ಮಾಡಿದ್ದಾರೆ ಈ ಸದನಕ್ಕೆ ಅಗೌರವ ತಂದಿದ್ದಾರೆ ಈ ಸದನದ ಹಕ್ಕಿಗೆ ಚ್ಯುತಿ ಮಾಡಿದ್ದಾರೆ ಅದಕ್ಕೋಸ್ಕರ ಇವತ್ತು ಮುಖ್ಯಮಂತ್ರಿಗಳು ಮತ್ತು ಇಡೀ ಸದನ ಅದರ ಮೇಲೆ ಗಂಭೀರವಾಗಿ ಚರ್ಚೆ ಮಾಡಿ ಆ ಪರಿಷತ್ ಬಗ್ಗೆ ಒಂದು ತೀರ್ಮಾನಕ್ಕೆ ಬರದೇ ಹೋದರೆ ನಾಳೆ ದಿವಸ ಅವರು ನಮ್ಮ ಮೇಲೆ ಸವಾರಿ ಮಾಡುತ್ತಾರೆ ಆದ ಕಾರಣ ಇದರ

ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು ಈ ಸದನದಲ್ಲಿ ಆಗಿರತಕ್ಕಂಥ ತೀರ್ಮಾನದ ಬಗ್ಗೆ ವಿರುದ್ಧವಾಗಿ ರಾಜ್ಯಪಾಲರ ಹತ್ತಿರ ಹೋಗಿ ಮನವಿಯನ್ನು ಕೊಟ್ಟರೆ ಈ ಸದನದ ಪರಿಸ್ಥಿತಿ ಏನು?

ಶ್ರೀ ವಾಟಾಳ್ ನಾಗರಾಜ್ – ರಾಜ್ಯಪಾಲರು ಅವರ ಮನವಿಗೆ ಯಾವುದೇ ಮನ್ನಣೆಯನ್ನು ಕೊಡದೇ ಅವರನ್ನು ವಾಪಸ್ಸು ಕಳುಹಿಸಿದ್ದಾರೆ ಅವರ ಮನವಿಗೆ ಮಾನ್ಯತೆ ಕೊಟ್ಟಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಆ ಬಿಲ್ ಅನ್ನು ವಾಪಸ್ ಕಳುಹಿಸಿದ್ದಾರೆ

ಶ್ರೀ ವಾಟಾಳ್ ನಾಗರಾಜ್ – ಮಸೂದೆ ವಾಪಸ್ ಬಂದಿದೆ ಏನು ಪರಿಸ್ಥಿತಿ ಇದು? ಇವತ್ತು 19ನೇ ತಾರೀಖು ಮುಖ್ಯಮಂತ್ರಿಗಳ ಕಾರ್ಯಕ್ರಮ ಇಲ್ಲಿದೆ ನೋಡಿ 11 00 ಗಂಟೆ, 11 30, 12 00, 12 30, 1 30 ಮತ್ತು ಸಂಜೆ 4 00 ಗಂಟೆಗೆ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಬೇಕು ಇದು ಬೆಂಗಳೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳು ಹೀಗಿರುವಾಗ ಆ ಸದನಕ್ಕೆ ಏನು ಗೌರವ? ಈ ಸದನಕ್ಕೆ ಏನು ಮರ್ಯಾದೆ? ಏನಿದು ಸಂಸದೀಯ ವ್ಯವಸ್ಥೆ? ಏನು ವ್ಯವಸ್ಥೆ ಹೇಳಿ ಅಧಿಕಾರಿಗಳೆಲ್ಲಾ ಅವರ ಹಿಂದೆ ಹೋಗುತ್ತಾರೆ ಯಾವ ಅಧಿಕಾರಿಗಳ ಬಗ್ಗೆ ಇವತ್ತು ಚರ್ಚೆ ಮಾಡಬೇಕು? ಇದು ಬಹಳ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ ಆದುದರಿಂದ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ, ವಿಧಾನ ಪರಿಷತ್ತಿನ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಇಲ್ಲಿ ಆ ಪಕ್ಷ ಈ ಪಕ್ಷ ಎನ್ನುವುದನ್ನೆಲ್ಲಾ ತಾವು ಬಿಟ್ಟುಬಿಡಿ, ಈ ಸದನದ ವಿಚಾರ ತೆಗೆದುಕೊಳ್ಳಿ ಏಕೆಂದರೆ ಈ ಸದನ ಸಾರ್ವಭೌಮತ್ವ ಹೊಂದಿರತಕ್ಕಂಥದ್ದು, ಈ ವಿಧಾನ ಸಭೆ ಏನಿದೆ, ಇದು ಸಾರ್ವಭೌಮತ್ವ ಹೊಂದಿರತಕ್ಕಂಥದ್ದಾಗಿದೆ ಇಲ್ಲಿ ಸಾಮಾನ್ಯ ಜನರಿಂದ ಚುನಾಯಿತರಾಗಿರತಕ್ಕಂಥ ಪ್ರತಿನಿಧಿಗಳು ಬರುವಂಥದ್ದು ಆದುದರಿಂದ ಅಲ್ಲಿ ಪಕ್ಷ ವಿಚಾರಗಳನ್ನು ಬಿಟ್ಟುಬಿಡೋಣ ನಾವೆಲ್ಲರೂ ಪಕ್ಷ ಬಿಟ್ಟು ಸೇರಿಕೊಂಡು ಮಾತನಾಡಿ ಇದರ ಬಗ್ಗೆ ತೀವ್ರವಾದಂಥ ಹಕ್ಕುಚ್ಯುತಿಯನ್ನು ಮಂಡಿಸಬೇಕಾಗಿದೆ ವಿಧಾನ ಪರಿಷತ್ತು ನಮಗೆ ಬೇಕಾಗಿಲ್ಲ ಏನಾಗುತ್ತದೆ ನೋಡೋಣ ಅವರೇನು ನಮ್ಮ ಮೇಲೆ ಸವಾರಿ ಮಾಡುತ್ತಾರೇನು? ಈ ಸದನದ ಮೇಲೆ ಸವಾರಿ ಮಾಡುತ್ತಾರೇನು? ಯಾವ ಉದ್ದೇಶಕ್ಕೆ? ಇದು ಸರಿಯಾದ ಕ್ರಮವಲ್ಲ ಆದುದರಿಂದ ಈ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ತೀರ್ಮಾನ ತೆಗೆದುಕೊಳ್ಳಬೇಕು ಮಾನ್ಯ ಯಡಿಯೂರಪ್ಪನವರೆ, ಅತ್ಯಂತ ಕಳಕಳಿಯಿಂದ ನಾನು ನಿಮಗೆ ಹೇಳುತ್ತಿದ್ದೇನೆ ಇದರ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳಲಿಲ್ಲವೆಂದರೆ ಬಹಳ ಅಪಾಯಕಾರಿಯಾದ

ಬೆಳವಣಿಗೆಯಾಗುತ್ತದೆ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಇತಿಹಾಸದಲ್ಲಿಯೇ ಇಂಥದ್ದು ನಡೆದಿರಲಿಲ್ಲ ಇಂಥ ಪರಿಸ್ಥಿತಿ ಇತಿಹಾಸದಲ್ಲಿಯೇ ಬಂದಿರಲಿಲ್ಲ ನಿನ್ನೆ ಅವರು ಯಾರನ್ನು ಕೇಳಿಕೊಂಡು ಹೋದರು? ಯಾರಾದರೂ ಅವರಿಗೆ ಸಲಹೆ ಮಾಡಬೇಕಾಗಿತ್ತು ಸಭಾಪತಿಗಳಾದರೂ ಅವರಿಗೆ ಹೇಳಬೇಕಾಗಿತ್ತು

ಉಪಾಧ್ಯಕ್ಷರು – ಈಗ ಆಯಿತು ನೀವು ಹೇಳಿದ್ದು ಅವರಿಗೆ ಅರ್ಥವಾಗಿದೆ ನೀವು ಹೇಳುವುದು ವಿಧಾನ ಪರಿಷತ್ ಬಗ್ಗೆ ಚರ್ಚೆಯಾಗಬೇಕೆಂದು ಈಗಾಗಲೇ ಮಾನ್ಯ ಎಸ್ ಎಸ್ ಪಾಟೀಲರು ಬೇಡಿಕೆ ಮೇಲೆ ಮಾತನಾಡುತ್ತಿದ್ದರು ಅವರು ಮುಂದುವರೆಸಲಿ

ಶ್ರೀ ವಾಟಾಳ್ ನಾಗರಾಜ್ – ಎಸ್ ಎಸ್ ಪಾಟೀಲರೆ, ತಾವು ಭಾಷಣ ಮಾಡುವಾಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಇರಬೇಕಲ್ಲವೇ? ಅವರುಗಳು ಇಲ್ಲದಿರುವುದು ಸರಿಯಾದ ಕ್ರಮವಲ್ಲ

ಉಪಾಧ್ಯಕ್ಷರು – ನೀವು ಹೇಳುವ ವಿಷಯ ಅರ್ಥವಾಗಿದೆ ಪಾಟೀಲರೆ, ನೀವು ಮುಂದುವರೆಸಿ

ಶ್ರೀ ಎಸ್ ಎಸ್. ಪಾಟೀಲ್ – ವಾಟಾಳ್ ನಾಗರಾಜ್‌ರವರೆ, ತಾವು ಹೇಳುವುದು ಸರಿ ಇದೆ ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದೇನೆಂದರೆ ಇವರು ಮೇಲ್ಮನೆ ಬಗ್ಗೆ ಇದುವರೆಗೆ ಹೇಳಿದರು ನಿನ್ನೆ ಇಲ್ಲಿ ಜಂಟಿ ಸದನ ಸಮಿತಿ ಮಾಡೋಣವೆಂದು ಎಲ್ಲರೂ ಹೇಳಿದರು, ಹಿಂದೆ ವಿಧಾನ ಪರಿಷತ್ತನವರುಗಳೇ ಇರುವಂತೆ ಹೆಚ್ ಡಿ ಎಂ ಸಿ ವಿಚಾರದಲ್ಲಿ ಅವರದೇ ಸದನ ಸಮಿತಿ ಮಾಡಿಕೊಂಡಿದ್ದಾರೆ ವಿಧಾನ ಸಭೆಯ ಸದಸ್ಯರನ್ನು ಯಾರನ್ನಾದರೂ ಆ ಸಮಿತಿಗೆ ನಾಮಿನೇಟ್ ಮಾಡಿದ್ದೀರೇನು? ಮಾಡಿಲ್ಲ ಹೇಗಿದೆ ನೋಡಿ? ವಿಧಾನ ಪರಿಷತ್ ಸದಸ್ಯರು ಮಾತ್ರ ಇರುವಂತೆ ಅವರದೇ ಒಂದು ಸಮಿತಿ ಮಾಡಿಕೊಂಡರು ಅವರು ಹೇಳಿದ್ದನ್ನೇ ಈ ರಾಜ್ಯ ಒಪ್ಪಬೇಕೆ? ಇದೇ ರೀತಿಯಾದರೆ ವಿಧಾನ ಸಭೆ ಏಕೆ ಬೇಕು? ನಾವು ಇಲ್ಲಿ ಪ್ರತಿಯೊಂದು ವಿಚಾರದಲ್ಲಿ ಜಂಟಿ ಸದನ ಸಮಿತಿ ಎಂದಾಗ ವಿಧಾನ ಪರಿಷತ್ ಸದಸ್ಯರು ಕೂಡ ಜಂಟಿ ಸದನ ಸಮಿತಿಯ ಸದಸ್ಯರಾಗಲು ಅವಕಾಶ ಮಾಡಿಕೊಡುತ್ತೀರಿ ಆದರೆ ವಿಧಾನ ಪರಿಷತ್ ನವರು ಅವರದೇ ಸದನ ಸಮಿತಿ ಮಾಡಿಕೊಂಡು ನಾವಿಲ್ಲದೇ ಒಂದು ಮಹತ್ವದ ವಿಚಾರದಲ್ಲಿ ರಿಪೋರ್ಟ್‌ನ್ನು ಕೊಟ್ಟಿದ್ದಾರೆ ನೀವು ಆ ರಿಪೋರ್ಟ್‌ನ್ನು ಒಪ್ಪಿಕೊಳ್ಳಬೇಡಿ ಸುಮ್ಮನೇ ಇದನ್ನು ಹೇಳಿಬಿಟ್ಟರೆ ಏನು ಉಪಯೋಗವಿಲ್ಲ ಎಲ್ಲಾ ರೀತಿಯಿಂದಲೂ ಅವರ ಕಡೆಯಿಂದ ನಡೆದಿದೆ ಎಲ್ಲದಕ್ಕೂ ಶಾಸಕರೇನು, ನಮ್ಮನ್ನೂ ಅಧ್ಯಕ್ಷರನ್ನಾಗಿ

ಮಾಡಿ ಎಂದಿದ್ದಾರೆ ಹತ್ತು ತಾಲ್ಲೂಕು ಇದ್ದರ ಎಲ್ಲ ಕಡೆಯಲ್ಲಿಯೂ ಕಾರ್ಯಕ್ರಮಗಳಿಗೆ ನಾವು ಅವರನ್ನು ಕರೆಯಬೇಕಂತೆ ಹತ್ತು ತಾಲ್ಲೂಕು ಇರುತ್ತವೆ, ಹತ್ತು ಜಿಲ್ಲೆಗಳಿರುತ್ತವೆ ಎಲ್ಲೆಲ್ಲಿಗೆ ಎಂದು ಅವರನ್ನು ಕರೆಯುತ್ತೀರಿ? ಇಡೀ ರಾಜ್ಯ ಮಟ್ಟದಲ್ಲಿ ಒಬ್ಬರು ಇದ್ದಾರೆ, ಇಂಥದ್ದು ನಡೆಯುತ್ತಿದೆ ಮೊನ್ನೆ ಒಂದು ನಿರ್ಣಯವಾಗಿದೆ, ಎಲ್ಲಿ ಅವರು ವಸತಿ ಇರುತ್ತಾರೆ, ಅಲ್ಲಿ ಒಂದು ಕಡೆ ಕರೆಯಬೇಕೆಂದು ಆಗಿದೆ ಆಮೇಲೆ ಎಲ್ಲ ಕಡೆಗೂ ನಮ್ಮನ್ನು ಕರೆಯಬೇಕು ಎಂದು ವಿಧಾನ ಪರಿಷತ್ ಸದಸ್ಯರು ಹೇಳುತ್ತಾರೆ ಮೊನ್ನೆ ಒಂದು ಪ್ರಶ್ನೆ ಹಾಕಿದ್ದೆ ಅದಕ್ಕೆ ಇನ್ನೂ ಉತ್ತರ ಬಂದಿಲ್ಲ ಈಗ ಶಾಸಕರಿಗೆ ಸರಿಸಮಾನವಾಗಿ ವಿಧಾನ ಪರಿಷತ್ ಸದಸ್ಯರಿಗೆ ಸಮಾನವಾಗಿ ಒಂದು ಕೋಟಿ ರೂಪಾಯಿಗಳನ್ನು ಕೊಡಲಾಗಿದೆ ಅವರು ಅದನ್ನು ತೆಗೆದುಕೊಂಡು ಯಾವುದೋ ಒಂದು ತಾಲ್ಲೂಕಿಗೆ ಕೊಡುತ್ತಾರೆ ಹೀಗಾದರೆ ನಾವೇನು ಮಾಡಬೇಕು? ಎಲ್ಲಾ ತಾಲ್ಲೂಕುಗಳಿಗೂ ಹಂಚುವ ಬಗ್ಗೆ ನಿಯಮವನ್ನು ಹೊರಡಿಸಿ ಮೊನ್ನೆ ವಿಧಾನ ಪರಿಷತ್‌ವರು ತಮ್ಮದೇ ಒಂದು ಕಮಿಟಿಯನ್ನು ಮಾಡಿಕೊಂಡಿದ್ದಾರೆ ಆ ರೀತಿ ಮಾಡಬಹುದೇ? ಇನ್ನು ಮುಂದೆ ನಾವು ಕೂಡ ವಿಧಾನ ಸಭೆ ಸದಸ್ಯರುಳ್ಳ ಕಮಿಟಿಗಳನ್ನಷ್ಟನ್ನೇ ಮಾಡೋಣ ಅವರನ್ನು ನೀವು ಬಿಟ್ಟುಬಿಡಿ ಜಂಟಿ ಸದನ ಸಮಿತಿ ಎಂದು ಏಕೆ ಮಾಡುತ್ತೀರಿ? ಅವರೂ ಕೂಡ ಜಂಟಿ ಸದನ ಸಮಿತಿಯನ್ನು ಮಾಡಬೇಕಾಗಿತ್ತು ಅವರು ಬಂದು ನಮ್ಮ ಅಧ್ಯಕ್ಷರನ್ನು ಕೇಳಬೇಕಾಗಿತ್ತು ಆ ರೀತಿ ಅವರು ಮಾಡಲಿಲ್ಲ ಆ ಕಾರಣಕ್ಕೆ ಆ ವಿಷಯ ಚರ್ಚೆ ಬಂದಾಗ ಮುಂದೆ ಆ ಬಗ್ಗೆ ಚರ್ಚೆ ಮಾಡುತ್ತೇನೆ ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದೇನೆಂದರೆ, ನಾಳೆ ಒಂದು ದಿವಸ ಎಲ್ಲ ಮಂತ್ರಿಗಳನ್ನು ಸದನದಲ್ಲಿ ಇರುವುದಕ್ಕೆ ಹೇಳಿ ಅವರು ಮಂಡಿಸಿದ್ದಾರಲ್ಲ, ಅದರ ಮೇಲೆ ಹತ್ತತ್ತು ನಿಮಿಷ ಕೇಳಿಬಿಡಲಿ ಅದನ್ನೂ ನೋಡೋಣ ಆ ಮಂತ್ರಿಗಳೇ ಹೇಳಬೇಕು ಉದಾಸಿಯವರೆ, ನೀವೇ ಹೇಳಿ ಹಿಂದೆ ನಾವೆಲ್ಲರೂ ಸಚಿವರುಗಳಾಗಿದ್ದೆವು, ಮೂರು ಮೂರು ತಾಸು, ನಾಲ್ಕು ನಾಲ್ಕು ತಾಸು ಒಂದೊಂದು ಇಲಾಖೆ ಮೇಲೆ ಉತ್ತರವನ್ನು ಕೊಟ್ಟಿದ್ದೇವೆ ಮೂರು ಮೂರು ತಾಸು, ನಾಲ್ಕು ನಾಲ್ಕು ತಾಸು ನಾನು ಸಹಕಾರ ಇಲಾಖೆ ಬೇಡಿಕೆ ಮೇಲೆ ಉತ್ತರವನ್ನು ಕೊಟ್ಟಿದ್ದೇನೆ ಕೃಷಿ ಇಲಾಖೆ ಬೇಡಿಕೆ ಮೇಲೆ ಮಾನ್ಯ ಬೈರೇಗೌಡರು ಒಂದು ದಿವಸ ಉತ್ತರವನ್ನು ಹೇಳಿದ್ದಾರೆ ಆದುದರಿಂದ ಇದನ್ನೆಲ್ಲಾ ಅವರು ತಿಳಿದುಕೊಳ್ಳಬೇಕಲ್ಲಾ ಉದಾಹರಣೆಗೆ, ನಾನು ನನ್ನ ಇಲಾಖೆ ಬಗ್ಗೆ ತಿಳಿದುಕೊಳ್ಳದಿದ್ದರೆ ನಾನು ಏನು ಕೆಲಸವನ್ನುಮಾಡುತ್ತೇನೆ ಹೇಳಿ ಇದು ಪ್ರಶ್ನೆ ಇರುವುದು ಯಾರೂ ಬರೆದುಕೊಳ್ಳುತ್ತಾರೆಂದರೆ ಇಲ್ಲಿ ಯಾರೂ ಇಲ್ಲ ಇನ್ನು ಕೆಲವರು ಸರಿಯಾಗಿ ಬರೆದುಕೊಂಡು ಉತ್ತರವನ್ನು ಹೇಳುತ್ತಾರೆ ಎಲ್ಲರೂ

ಬರೆದುಕೊಳ್ಳುವುದಿಲ್ಲವೆಂದು ನಾನು ಹೇಳುವುದಿಲ್ಲ ಎಲ್ಲ ಮಂತ್ರಿಗಳ ಬಗ್ಗೆ ನಾನು ಹೇಳುವುದಿಲ್ಲ ಈಗ ಇಲ್ಲಿ ಇರುವಷ್ಟು ಮಂತ್ರಿಗಳಿಂದ ಎಲ್ಲರಿಂದಲೂ ಅವರವರ ಇಲಾಖೆ ಮೇಲೆ ನಾವು ಕೇಳುತ್ತೇವೆ ನೀವು ಅವರಿಂದ ಉತ್ತರ ಹೇಳಿಸಿಬಿಡಿ ನೋಡೋಣ ನಾವು ಕೇಳುತ್ತೇವೆ ಆ ಅಧಿಕಾರಿಗಳೇನೋ ಬರೆದುಕೊಟ್ಟಿರುತ್ತಾರೆ, ಅದೂ ಸಂಬಂಧಪಟ್ಟ ಮಂತ್ರಿಗಳು ಇರುವುದೂ ಇಲ್ಲ ಇಲ್ಲಿ ಯಾರಾದರೊಬ್ಬರು ಅದನ್ನು ಸದನದಲ್ಲಿ ಮಂಡಿಸಿಬಿಡುತ್ತಾರೆ ಅದು ಏಷ್ಟು ಏನ್ನುವುದೇ ಅವರಿಗೆ ಗೊತ್ತಿರುವುದಿಲ್ಲ ಬರೀ ಬಂಡವಾಳ ಖಾತೆಯಲ್ಲಿ ಇಷ್ಟು, ಇದಕ್ಕೆ ಇಷ್ಟು ಏಂದು ಹೇಳಿಬಿಡುತ್ತಾರೆ ಅದನ್ನು ಕೇಳಿ ನಾವು ಆಯಿತು ಏಂದು ಬಿಡುವುದು ನಾವು ಏಲ್ಲ ಲೆಕ್ಕಗಳನ್ನು ಕೇಳಿದರೆ ಏಲ್ಲ ಲೆಕ್ಕಗಳು ನಮಗೆ ಸಿಗುವುದಿಲ್ಲ ನಮಗೆ 2006–07ನೇ ಸಾಲಿನದ್ದನ್ನು ಕಳುಹಿಸಿದ್ದಾರೆ ನಮಗೆ ಬಂದಿರುವ ಮಾಹಿತಿ ಏಲ್ಲವೂ 2006–07ನೇ ಸಾಲಿನದ್ದು 2007–08ನೇ ಸಾಲಿನ ಬೇಡಿಕೆಗಳ ಮೇಲೆ ನಾವು ಇಲ್ಲಿ ಚರ್ಚೆ ಮಾಡುತ್ತಿರುವುದು ಅದಕ್ಕೆ ನಾವು ಇಲ್ಲಿ ಮಂಜೂರಿ ಕೊಡಬೇಕಾಗಿದೆ ಆದರೆ ಮಾಹಿತಿ ಬಂದಿಲ್ಲ 2006–07ನೇ ಸಾಲಿನ ನಿರ್ವಹಣಾ ಮುಂಗಡ ಪತ್ರ ಏಂದು ಹಳೆಯದನ್ನು ನಮಗೆ ಕೊಟ್ಟಿದ್ದಾರೆ ಈ ವರ್ಷಕ್ಕೆ ಏನು ಮಾಡುತ್ತೀರಿ ಏಂಬ ಬಗ್ಗೆ ಬರಬೇಕಲ್ಲ ಅದಕ್ಕಾಗಿ ನನ್ನದೊಂದು ಸಲಹೆ ಇದೆ ನೀವು ವಿಷಯ ಸಮಿತಿಗಳನ್ನು ಮಾಡಿ ಹಿಂದೆ ಈ ರೀತಿ ಮಾಡಿದ್ದೆವು ಆ ವಿಷಯ ಸಮಿತಿ ವರದಿ ಸದನದಲ್ಲಿ ಮಂಡಿಸಿದ ಮೇಲೆ ಆ ವರದಿಯ ಮೇಲೆ ಚರ್ಚೆಯಾಗಬೇಕು ಯಾರು ಆ ವಿಷಯ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೋ ಅವರು ಆ ಮತ್ತೆ ಸದನದಲ್ಲಿ ಆ ವಿಷಯದ ಮೇಲೆ ಮಾತನಾಡಬಾರದು ಈ ವಿಷಯ ಸಮಿತಿಗಳ ವರದಿ ಮೇಲೆ ಇಲ್ಲಿ ಚರ್ಚೆ ಮಾಡಿ ಇತರ ಸದಸ್ಯರುಗಳೂ ಕೂಡ ತಿಳಿದುಕೊಳ್ಳಲು ಅನುಕೂಲವಾಗುತ್ತದೆ ಆ ಕಾರಣದಿಂದ ನೀವು ವಿಷಯ ಸಮಿತಿಗಳನ್ನು ಮಾಡಬೇಕು ಇದನ್ನು ಮಾಡುವುದಿಲ್ಲವೆಂದರೆ ಏಲ್ಲ ಇಲಾಖೆಗಳ ಮಂತ್ರಿಗಳೂ ಈ ಸದನದಲ್ಲಿ ಇರುವಂತೆ ಮಾಡಿ ಯಾವ ಇಲಾಖೆ ಮೇಲೆ ಚರ್ಚೆಯಾಗುತ್ತದೆಯೋ ಅದಕ್ಕೆ ಆ ಇಲಾಖೆಯ ಮಂತ್ರಿಗಳೇ ಏಲ್ಲ ಉತ್ತರವನ್ನೂ ಹೇಳಲಿ ಇಂತಿಂಥವುಗಳಿಗೆ ನಾವಿಷ್ಟು ಕೊಟ್ಟಿದ್ದೇವೆ, ಇಂತಿಂಥ ಕಾರ್ಯಕ್ರಮಗಳನ್ನು ನಾವು ಮಾಡುತ್ತಿದ್ದೇವೆ ಏಂದು ವಿಷಯ ಸಮಿತಿಗಳಿಗೆ ಅಧಿಕಾರಿಗಳು ಹಾಜರಾಗಿ ಹೇಗೆ ವಿವರಣೆಗಳನ್ನು ನಮಗೆ ಕೊಡುತ್ತಾರೋ ಅದನ್ನೇ ಅವರು ಓದಿಕೊಂಡು ಬಂದು ಮಂತ್ರಿಗಳು ವಿವರಣೆಯನ್ನು ಸದನದಲ್ಲಿ ಕೊಡಲಿ ಏಲ್ಲಾ ಮಂತ್ರಿಗಳು ವಿವರಣೆಯನ್ನು ಕೊಡಲಿ ಇಲ್ಲದಿದ್ದರೆ ವಿಷಯ ಸಮಿತಿಗಳನ್ನು ಮಾಡಿ ದಯವಿಟ್ಟು ವಿಷಯ ಸಮಿತಿಗಳನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ ಇನ್ನು ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರೇನಿದ್ದಾರೆ, ಅವರು ಹಿರಿಯ ಸಚಿವರಾಗಿದ್ದಾರೆ

ನಿಮ್ಮ ಹಣ ಪೂರ್ತಿ ಖರ್ಚಾಗಿಲ್ಲ ನಿಮಗೆ ಕೊಟ್ಟಿರುವ ಹಣ ನೋಡಿದರೆ ತುಂಬಾ ಉಳಿದಿದೆ ನೀವು ಹಿರಿಯ ಮಂತ್ರಿಗಳು, ಅದನ್ನು ತರಿಸಿ ನೋಡಿ ಇನ್ನು ಅಧಿಕಾರ ವಿಕೇಂದ್ರಿಕರಣ, ನಾವು ಖಂಡಿತವಾಗಿ ಅದರ ಪರವಾಗಿ ಇದ್ದವರು ಮೊದಲು ಪಂಚಾಯಿತಿಗಳು ಇದ್ದವು ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಅಭಿವೃದ್ಧಿ ಬಗ್ಗೆ ಇದ್ದಂತಹ ಕಲ್ಪನೆಯ ದೃಷ್ಟಿಯಿಂದ ಮಾಡಿದಂತಹ ವ್ಯವಸ್ಥೆ ಇದು ಹಿಂದೆ ನಮ್ಮಲ್ಲಿ ಪಂಚಾಯಿತಿಗಳು ಏನಿದ್ದವು, ಅವುಗಳಿಗೆ ಸರ್ಕಾರದಿಂದ ಯಾವುದೇ grant ಕೂಡ ಇರಲಿಲ್ಲ ಎಲ್ಲಾ ನಾವೇ ಮನೆ ಮನೆಗೂ ಹೋಗಿ ವಸೂಲು ಮಾಡುತ್ತಿದ್ದೆವು ಅದರ ಮೇಲೆ ದೀಪ ಹಚ್ಚುತ್ತಿದ್ದೆವು, ಅದರ ಮೇಲೆ ಕಸ ಹೊಡೆಯುತ್ತಿದ್ದೆವು ಆ ಕಸವನ್ನೆಲ್ಲಾ ತೆಗೆದುಕೊಂಡು ಹೋಗಿ ಗೊಬ್ಬರ ಮಾಡುತ್ತಿದ್ದೆವು ಆ ಗೊಬ್ಬರವನ್ನು ಮಾರಾಟ ಮಾಡಿ ಪಂಚಾಯಿತಿಗೆ ಜಮಾ ಮಾಡುತ್ತಿದ್ದೆವು ಈಗ ಆ ರೀತಿ ಮಾಡುವುದಿಲ್ಲ ಸರ್ಕಾರದಿಂದ ಹಣ ಬರುತ್ತದೆ ಆದರೆ ಇವತ್ತು ಅಧಿಕಾರದ ವಿಕೇಂದ್ರಿಕರಣವಾಗಿಲ್ಲ ಭ್ರಷ್ಟಾಚಾರ ವಿಕೇಂದ್ರಿಕರಣವಾಗಿದೆ ಇವತ್ತು ಅಧಿಕಾರ ವಿಕೇಂದ್ರಿಕರಣವಾಗಬೇಕು ಮಾನ್ಯ ಉದಾಸಿಯವರು ಮೊನ್ನೆ ಒಂದು amendment ತಂದು ಅದು ಬಹಳ ಗಲಾಟೆಯಾಗಿಬಿಟ್ಟಿದೆ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರಂತೆ ನನ್ನ ಕೇಳಿದರೆ ಅದರಿಂದ ಅಧಿಕಾರ ಮೊಟಕು ಆಗುವುದಿಲ್ಲ ಅದನ್ನು ನಾನು ನೋಡಿದ್ದೇನೆ, ಇಲ್ಲದಿದ್ದರೆ ನಾನು ಅದನ್ನು ಅವತ್ತೆ ವಿರೋಧ ಮಾಡುತ್ತಿದ್ದೆನು ಅದರಲ್ಲಿ ಏನಿದೆ, ಗ್ರಾಮ ಸಭೆಯಲ್ಲಿ ಆರಿಸದಿದ್ದರೆ ಮಾತ್ರ ಇವರು ಮಾಡಬೇಕು ಅವರು ಆರಿಸಿಬಿಟ್ಟರೆ ಮುಗಿದುಹೋಯಿತು ಇವತ್ತು ಮೂರು ಪಂಚಾಯಿತಿಯಲ್ಲಿ ಗ್ರಾಮ ಸಭೆಯಲ್ಲಿ ನಿರ್ಣಯವೇ ಆಗುವುದಿಲ್ಲ ಅದರಿಂದ ಮನೆ loss ಆಗುತ್ತದೆ ಗ್ರಾಮ ಪಂಚಾಯಿತಿಯವರು ನಿರ್ಣಯ ಮಾಡಿದರೆ ನಮಗೆ ಅಧಿಕಾರ ಬೇಕಾಗಿಲ್ಲ, ಅವರಿಗೆ ಕೊಡಿ ಶಾಸಕರಿಗೆ ಯಾವ ಅಧಿಕಾರ ಕೊಡಬೇಕಾಗಿಲ್ಲ ನಾವು ಹಳ್ಳಿಗೆ ಹೋದಾಗ ಯಾರೂ ಬಯ್ಯದ ಹಾಗೆ ಇರಲಿ ನಾನು ಆ ಅಧಿಕಾರ ವಿಕೇಂದ್ರಿಕರಣ ಪರವಾಗಿ ಇದ್ದಂತಹ ಮನುಷ್ಯ Amendment committee ನಲ್ಲಿ ನಾವೇ ಇದ್ದೆವು, ನಾವೇ ಆ report ಬರೆದಿದ್ದೇವೆ ಆದರೆ ದುರ್ದೈವ ಅದರಲ್ಲಿ ಏನಿದೆ, ಅದರಂತೆ ಹಳ್ಳಿಯಲ್ಲಿ ನಡೆಯುತ್ತಿಲ್ಲ ಇವತ್ತು ಅಧಿಕಾರವನ್ನು ಸರಿಯಾಗಿ ಬಳಸುತ್ತಿಲ್ಲ ಗ್ರಾಮಸಭೆಗೆ ಯಾರನ್ನು ಕರೆಯುವುದಿಲ್ಲ ತಾವೇ 25 ಮಂದಿ ಕುಳಿತುಕೊಂಡು ಮಾಡುತ್ತಾರೆ ಎಷ್ಟು ಗ್ರಾಮ ಸಭೆಗಳು ಪ್ರಾಮಾಣಿಕವಾಗಿ ನಡೆದಿವೆ ಎಂದು ಮಾನ್ಯ ಮಂತ್ರಿಗಳು ಹೇಳಿಬಿಡಿ ನೀವು ನಾಳೆ ನಮಗೆ ಉತ್ತರ ಹೇಳುವಾಗ ಲೆಕ್ಕವನ್ನು ತರಿಸಿ ಹೇಳಿಬಿಡಿ ನಾವು ಏನು ಹೇಳಿದ್ದೇವೆ ಆ ಪ್ರಕಾರ ಯಾವ

ಹಳ್ಳಿಯಲ್ಲಿ ಗ್ರಾಮ ಸಭೆಗಳು notice ಕೊಟ್ಟು ಎಷ್ಟು ಸಭೆಗಳು ಮಾಡಿವೆ? ಕೊನೆಗೆ ನಾವು report ನಲ್ಲಿ ಕೂಡ ಮನೆ ಮನೆಗೆ notice ಕೊಟ್ಟು ಬನ್ನಿ ಎಂದು ಹೇಳಿದ್ದೇವೆ ಆ ರೀತಿ ಮಾಡುವುದಿಲ್ಲ ಕೇವಲ ಡಂಗೂರ ಹೊಡೆಸುತ್ತಾರೆ Notice ಕೊಟ್ಟು ಎಲ್ಲಾ ಮಂದಿಯನ್ನು ಕೂರಿಸುವುದಿಲ್ಲ 25 ಮಂದಿ ಸೇರಿಕೊಂಡು ತಿಳಿದು ಬರೆದುಕೊಂಡು ಬಿಡುತ್ತಾರೆ ಎಂಟೆಂಟು ಎಕರೆ ಜಮೀನು ಇದ್ದವರಿಗೆ ಮನೆಯನ್ನು ಕೊಟ್ಟಿದ್ದಾರೆ ನಾವು ನಾಳೆ ಜನ ಸಂಪರ್ಕ ಸಭೆಯನ್ನು ಇಟ್ಟುಕೊಂಡು ಹೋದರೆ ನಮಗೆ ಖಂಡಿತವಾಗಿ ಜನ ಉಗುಳುತ್ತಾರೆ ಮಾನ್ಯ ಉದಾಸಿಯವರೆ, ಆ ರೀತಿಯಾಗಿ ಇವತ್ತು ವ್ಯವಸ್ಥೆ ಇರುವುದರಿಂದ ಅದನ್ನು ನಿಲ್ಲಿಸಿರಿ ಅದರ ವಿಚಾರದಲ್ಲಿ ನಮ್ಮ ಬೆಂಬಲ ಇದೆ ನಾವು ಎಂದಿಗೂ ಕೂಡ ಅವರ ಅಧಿಕಾರವನ್ನು ಕಸಿದುಕೊಳ್ಳುವುದು ಬೇಡ ಆದರೆ ಅವರು ಮಾಡತಕ್ಕಂಥ ವ್ಯವಹಾರ ಏನಿದೆ? ಹಳ್ಳಿ ಜನರ ಹತ್ತಿರ ಹೋಗೋಣ ನಡೆಯಿರಿ ಅವರನ್ನು ಕೇಳೋಣ, ಅವರು ಈ member ಬೇಡ, ನೀವು MLAಗಳು ಮಾಡಿ ಎಂದು ನಮ್ಮ ಹತ್ತಿರ ಶುರು ಮಾಡುತ್ತಾರೆ ಆ ತಲನೋವು ನಮಗೆ ಏಕೆ ಬೇಕಾಗಿದೆ? ನಮಗೆ ಬೇಕಾಗಿಲ್ಲ ನಾನು ಅವತ್ತೇ ಹೇಳಿದ್ದೇನೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡುವುದು ಬೇಕಾಗಿಲ್ಲ,ಅವರನ್ನೇ ಮಾಡಿ ಎಂದು ಹೇಳಿದ್ದೇನೆ ಆ ಮೇಲೆ ನೀವು ಮಾಡಿರುವುದು ಏನಾಗುತ್ತದೆ? ನೀವು ಕೂಡ ಅದರಲ್ಲಿ ಮಾಡಿ ಇಟ್ಟಿರಿ ಯಾವ ಸರ್ಕಾರ ಬಂದರೂ ನಾವೇ ಖಾಯಂ ಆಗಿ ಇರುತ್ತೇವೆ ಎಂದು ಮಾಡಿಬಿಡುತ್ತಾರೆ ಅವರೂ ಸೇರಿ ನಾಲ್ಕು ಮಂದಿಯನ್ನು ಹಾಕಿದ್ದಾರೆ ಅವರು ಹಂಚಿಕೊಂಡು ಬಂದಿರುತ್ತಾರೆ ಈಗ ಏನು ನಾಲ್ಕು ಮಂದಿ ಆಡುತ್ತಾರಲ್ಲ, ಅವರು ಏನೂ ಇಲ್ಲದೇ ಬಂದುಬಿಟ್ಟಿರುವುದಿಲ್ಲ ಅವರು ನಾಲ್ಕು ನಾಲ್ಕು ಹಂಚಿಕೊಂಡು ಬಂದು ಹೀಗೆ ಬರೆಯಿರಿ ಎಂದು ಶುರು ಮಾಡುತ್ತಾರ ಅದು ಆಡಳಿತ ಪಕ್ಷದವರಿಗೆ ನೋವಾಗುವುದಿಲ್ಲ ನಾವು ಅದನ್ನು ಆಡಳಿತ ಪಕ್ಷದಲ್ಲಿ ಇದ್ದಾಗ ನೋಡಿದ್ದೇವೆ, ವಿರೋಧ ಪಕ್ಷದಲ್ಲಿದ್ದಾಗ ಕೂಡ ನೋಡಿದ್ದೇವೆ ಖಂಡಿತವಾಗಿ ನೀವು ನಾಲ್ಕು ಮಂದಿ ಹಾಕುವುದು ತಪ್ಪು ಅಧಿಕಾರಿ ಇರುತ್ತಾರೆ, MLA ಇರುತ್ತಾರೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಇರುತ್ತಾರೆ, ಅವರು ಬರದೇ ಇದ್ದರೆ ಅದೇ listನಲ್ಲಿ ಮಾಡುವ ಹಾಗೆ ಮಾಡಿ ಈಗಾಗಲೇ list ಆರಿಸಿ ಇಟ್ಟಿದ್ದೇವೆ ಈಗ BPL list ಏನಿದೆ, ಆ list ನಲ್ಲೇ ಇವರು ಮಾಡಬೇಕು ಇವರು ಹೊಸ list ಮಾಡಬಾರದು ಇಲ್ಲದಿದ್ದರೆ ಇವರು ಬೇಕಾದ್ದು ಬರೆದುಕೊಳ್ಳುತ್ತಾರೆ

ಶ್ರೀ ಸಿ.ಎಂ ಉದಾಸಿ ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್ ಎಸ್ ಪಾಟೀಲರು ಹೇಳಿದ ಹಾಗೆ ನಾವು ಮಾಡಿರುವಂತಹ ತಿದ್ದುಪಡಿ ಕೂಡ ಗ್ರಾಮ ಸಭೆಗಳಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ವಿಫಲರಾದಾಗ ಈ ಸಮಿತಿಗೆ

ಆಯ್ಕೆ ಮಾಡುವಂತಹ ಹಕ್ಕನ್ನು ಕೊಡಲಾಗುತ್ತದೆ ಎಂದು ಹೇಳುವುದರ ಜೊತೆಗೆ ಆಯ್ಕೆ ಮಾಡಬೇಕಾದಂತಹ ಫಲಾನುಭವಿಗಳನ್ನು ಗ್ರಾಮಗಳಲ್ಲಿಯೇ ಗುರುತುಪಡಿಸಿದಂತಹ BPL ಯಾದಿಯಲ್ಲಿ ಇರುವಂತಹ ಹೆಸರುಗಳನ್ನು ತೆಗೆದುಕೊಂಡು ಮಾಡಬೇಕು ಎನ್ನುವುದನ್ನು ಸ್ಪಷ್ಟವಾಗಿ ಸೂಚನೆ ಕೊಟ್ಟಿದೆ

ಶ್ರಿ ಸಿದ್ದರಾಮಯ್ಯ Budget speechನಲ್ಲಿ ಯಾವುದೇ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ BPL cardಗಳನ್ನು ಆಧಾರವಾಗಿ ಇಟ್ಟುಕೊಳ್ಳಬಾರದೆಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ

ಶ್ರೀ ಸಿ ಎಂ ಉದಾಸಿ ಹೌದು

ಶ್ರೀ ಸಿದ್ದರಾಮಯ್ಯ. It is specifically mentioned ಈ ವರ್ಷದ ಬಜೆಟ್

speechನಲ್ಲಿ foodಗೆ ಮಾತ್ರ BPL card ಉಪಯೋಗಿಸಬೇಕು ಬೇರೆ ಯಾವುದೇ ವಿಚಾರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಅದನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ

ಶ್ರಿ ಸಿ ಎಂ ಉದಾಸಿ. ಮಾನ್ಯ ಸಿದ್ದರಾಮಯ್ಯನವರಿಗೆ ನಾನು ಹೇಳುವುದೇನೆಂದರೆ, ಅದು ತಮ್ಮ ಗಮನಕ್ಕೆ ಬಂತೋ ಇಲ್ಲವೋ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದಂತಹ BPL ಯಾದಿ ಪ್ರತಿಯೊಂದು ಗ್ರಾಮಗಳಲ್ಲಿ ಇದೆ ಆ ಗ್ರಾಮಗಳಲ್ಲಿ ಇರಬೇಕಾದಂತಹ ಯಾದಿಗಳಲ್ಲಿ ಇರುವಂತಹ ಫಲಾನುಭವಿಗಳನ್ನೇ ಆಯ್ಕೆ ಮಾಡುವಂತಹ ಅಧಿಕಾರ ಬರುತ್ತದೆಯೇ ಹೊರತು ಇವರಿಗೆ suo motu ಬೇರೆಯವರನ್ನು ಆಯ್ಕೆ ಮಾಡುವಂತಹ ಅಧಿಕಾರ ಇಲ್ಲವೆನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಗ್ರಾಮ ಪಂಚಾಯಿತಿಗಳು ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಗ್ರಾಮಸಭೆಗಳಲ್ಲಿ ವಿಫಲರಾದಂತಹ ಸಂದರ್ಭದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಮಾಡಿರುವಂತಹ ಸಮಿತಿಗಳಿಗೆ ಆಯ್ಕೆ ಮಾಡಬೇಕಾದರೆ ಈ ನಿಯಮಗಳನ್ನು ಮಾಡಿದ್ದೇವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಸಿದ್ದರಾಮಯ್ಯ ಶಾಸಕರು ಅಧ್ಯಕ್ಷರಾಗಿರುವಂತಹ ಸಮಿತಿಯವರು, BPL card ನಲ್ಲಿ ಯಾರು ಫಲಾನುಭವಿಗಳು ಇದ್ದಾರೆ, ಆ ಪಟ್ಟಿಯಿಂದ ತೆಗೆದುಕೊಳ್ಳಬೇಕು ಎಂದು ನೀವು ಹೇಳುತ್ತಿದ್ದೀರಿ ಇದಕ್ಕೆ ಬೇರೆ List ಯಾವುದು list ಇರುವುದಿಲ್ಲ, ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ ಇದರಿಂದಲೇ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತಿದ್ದೀರಿ Suppose ಅವರು ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡುವುದಕ್ಕೆ ಆಗದೇ ಹೋದರೆ ಆ ಸನ್ನಿವೇಶದಲ್ಲಿ ಮಾತ್ರ ಈ ರೀತಿ ಮಾಡಬೇಕೆಂದು ಮಾಡಿದ್ದೀರಿ ಆಗ BPL cardನಲ್ಲಿ ಇದ್ದವರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಮಾಡಿದ್ದೀರಿ

ಶ್ರೀ ಕೆ ಆರ್ ರಮೇಶ್ ಕುಮಾರ್. ಗ್ರಾಮ ಸಭೆಯನ್ನು ನಡೆಸುವುದಕ್ಕೆ avoid ಮಾಡುತ್ತಾರಲ್ಲ, ಅವರು ಏಕೆ ಹಾಗೆ ಮಾಡುತ್ತಾರೆಂದು ಯೋಚನೆ ಮಾಡಿದ್ದೀರ? ಅದಕ್ಕೆ ಮೂಲ ಕಾರಣ, ನಾನು ಹೇಳುತ್ತೇನೆ ಕೇಳಿ । ನೀವು ಒಂದು ಬಜೆಟ್‌ಗೆ, ಎಷ್ಟು ಮನೆ ಕೊಡುತ್ತೀರಿ? 60 ಮನೆ ಕೊಡುತ್ತೀರಿ ಸರಾಸರಿ ಒಂದು ಪಂಚಾಯಿತಿಗೆ 15 ರಿಂದ 16 ಹಳ್ಳಿ ಇರುತ್ತದೆ ಆಗ ಒಂದು ಊರಿಗೆ ಎಷ್ಟು ಬರುತ್ತದೆ ? ಮೂರು ಅಥವಾ ನಾಲ್ಕು ಬರುತ್ತದೆ ಅವನನ್ನು ಕರೆದು ಆ ಊರಿನಲ್ಲಿ ಕೇಳುವವರು 50 ಜನ ಇರುತ್ತಾರೆ ಅವನು ಯಾವ ಊರ ಜನರಿಗೆ ಕೊಡುವುದು? ಅದಕ್ಕೆ ಏನು ಮಾಡುತ್ತಾರೆ? member ಪಾಳೆಗಾರಿಕೆ system ಮಾಡಿಕೊಳ್ಳುತ್ತಾರೆ ಒಂದು ಆಳಿಗೆ ಇಷ್ಟು ಎಂದು ಹೇಳಿ ನಿನಗೆ ಮೂರು ನನಗೆ ನಾಲ್ಕು ಎಂದು

ಹಂಚಿಕೊಳ್ಳುತ್ತಾರೆ ದಯಮಾಡಿ ಹೇಳುತ್ತೇನೆ ಕೇಳಿ Particularly Housing Programme ಬಿಟ್ಟು ಇನ್ನು ಯಾವುದರಲ್ಲೂ ಕೂಡ ಇಷ್ಟು ತಗಾದೆ ಬರುವುದಿಲ್ಲ, ನೀವು ಇಂತಿಷ್ಟು ವರ್ಷದೊಳಗೆ ಎಂದು ಒಂದು ದಿನಾಂಕವನ್ನು ನಿಗದಿ ಮಾಡಿಕೊಂಡು, ಇಡೀ ರಾಜ್ಯದಲ್ಲಿ ವಸತಿಹೀನರು ಇಲ್ಲ ಎನ್ನುವಂತಹ ರೀತಿಯಲ್ಲಿ ಮಾಡುತ್ತೇವೆ, ಅದಕ್ಕೆ ಇಷ್ಟು ಕೋಟಿ ಹಣವನ್ನು ಮೀಸಲಿಡುತ್ತೇವೆ, ಎಷ್ಟೇ ಹಣವಾದರೂ ನಾವು phase by phase ಖರ್ಚು ಮಾಡುತ್ತೇವೆಂದು ನೀವು large scaleನಲ್ಲಿ housing programme ತೆಗೆದುಕೊಂಡರೆ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ ಹೊರತು ನೀವು ಈಗ ಒಂದು ಪಂಚಾಯಿತಿಗೆ 60 ಮನೆ ಕೊಡುವಂತಹ ಕೆಲಸ ಮಾಡಿದ್ದೀರಲ್ಲ, ಅದರಿಂದ ಜಗಳ ಹಚ್ಚುವುದೇ ಹೊರತು ಯಾರೂ ಕೂಡ ಗ್ರಾಮ ಸಭೆಯನ್ನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮಾಧುಸ್ವಾಮಿಯವರೆ, ಹೇಗೆ ಗ್ರಾಮ ಸಭೆಯನ್ನು ಮಾಡುತ್ತೀರಿ

ಒಬ್ಬರು ಮಾನ್ಯ ಸದಸ್ಯರು ಮಾನ್ಯ ರಮೇಶ್ ಕುಮಾರ್‌ರವರೆ, ನಿಮ್ಮ ಸರ್ಕಾರ ಇದ್ದಾಗ ಒಂದು ಗ್ರಾಮ ಪಂಚಾಯಿತಿಗೆ ಎಷ್ಟು ಮನೆಗಳನ್ನು ಕೊಡುತ್ತಿದ್ದಿರಿ?

ಶ್ರೀ ಸಿದ್ದರಾಮಯ್ಯ ಮಾನ್ಯ ಉದಾಸಿಯವರೇ, ಸರ್ಕಾರದ ಹತ್ತಿರ ಒಂದು report ಇದೆ ಇಡೀ ರಾಜ್ಯದಲ್ಲಿ 94–95ರಲ್ಲಿ ಅಥವಾ 95–96ರಲ್ಲಿ ಒಂದು survey ಮಾಡಿದ್ದಾರೆ

ಶ್ರಿ ಸಿ ಎಮ್ ಉದಾಸಿ 2003ರಲ್ಲಿ ಮಾಡಿದ್ದು

ಶ್ರೀ ಸಿದ್ದರಾಮಯ್ಯ 2003ರಲ್ಲಿ ಮಾಡಿದ್ದಾರೆ ಆ ಪಟ್ಟಿಯಲ್ಲಿ house less site less ಎಷ್ಟೋ ಲಕ್ಷ ಇದೆ ಎಂದು ಮಾಡಿದ್ದಾರೆ ಇಲ್ಲದವರಿಗೆಲ್ಲ ಹತ್ತು ವರ್ಷದಲ್ಲಿ site ಅಥವಾ ಮನೆ ಕೊಡಬೇಕು ಎಂದು ಇತ್ತು ಆ ಪಟ್ಟಿ ಈಗ ಏನಾಗಿದೆ? ಆ ಪಟ್ಟಿಯನ್ನು ಉಪಯೋಗಿಸುತ್ತಿಲ್ಲವೇ?

ಶ್ರೀ ಸಿ.ಎಂ ಉದಾಸಿ ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು ಏನು ಸಲಹೆ ಮಾಡುತ್ತಿದ್ದಾರೆ, ಈ ಸಮಸ್ಯೆಗಳಿಗೆ ಪರಿಹಾರ ಇತ್ತು ಗ್ರಾಮ ಸಭೆಗಳಲ್ಲಿ 60 ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದಂತಹ ಸಂದರ್ಭದಲ್ಲಿ ಒಂದು ಗ್ರಾಮಕ್ಕೆ ಜನಸಂಖ್ಯೆ ಆಧಾರದ ಮೇಲೆ ವಿಭಾಗ ಮಾಡಿ ಕೊಟ್ಟಿರಬೇಕಾದಂತಹ ಸಂದರ್ಭದಲ್ಲಿ ಐದು ಮನೆಗಳು ಇದ್ದಲ್ಲಿ ಗ್ರಾಮ ಸಭೆಯಲ್ಲಿ 50 ಜನ ಅನರ್ಹರು ಮತ್ತು ಅರ್ಹ ಫಲಾನುಭವಿಗಳನ್ನು ಹೆಸರುಗಳನ್ನು ಸೂಚನೆ ಮಾಡಬಹುದು ಅನರ್ಹರ ಹೆಸರುಗಳನ್ನು ತೆಗೆಯುವುದಕ್ಕೆ ಯಾರಾದರೂ ಪ್ರಯತ್ನ ಮಾಡಿದಾಗ ಯಾವಾಗಲೂ ಜಗಳ ಬಂದು, ಅಲ್ಲಿ ಗಲಾಟೆ ಆಗುತ್ತಿತ್ತು ಈ ರೀತಿ ಗಲಾಟೆ ಆಗಬಾರದು ಎಂದು ಅರ್ಹ ಫಲಾನುಭವಿಗಳನ್ನು ಆಯ್ಕೆ

ಮಾಡಬೇಕಾದಾಗ ಪಾರದರ್ಶಕವಾಗಿ ಲಾಟರಿ ಮುಖೇನ ಗ್ರಾಮದ ಜನರ ಸಮ್ಮುಖದಲ್ಲಿ ಆಯ್ಕೆ ಮಾಡಿದ್ದೆಯಾದರೆ ಈ ಸಮಸ್ಯೆ ಬರುತ್ತಿರಲಿಲ್ಲ ಈ ಸಮಸ್ಯೆ ಏಕೆ ಪ್ರಾರಂಭವಾಗುತ್ತಿದೆಯೆಂದರೆ 20 ಸಾವಿರ ರೂಪಾಯಿಯ ಲಾಭವನ್ನು ಪಡೆಯುವುದಕ್ಕೆ ಇರುವಂತಹ ಪೈಪೋಟಿ, ಅನರ್ಹರನ್ನು ಆಯ್ಕೆ ಮಾಡುವುದಕ್ಕೆ ಪಂಚಾಯಿತಿ ಸದಸ್ಯರ ಮೇಲೆ ಬರುವಂತಹ ಪ್ರಭಾವ, ಇದೆಲ್ಲಾ ಸೇರಿಕೊಂಡು ವಿಳಂಬವಾಗುತ್ತದೆ ಎನ್ನುವುದನ್ನು ಹೇಳುತ್ತೇನೆ ಇವತ್ತು ಮಾನ್ಯ ಎಸ್ ಎಸ್ ಪಾಟೀಲ್‌ರವರ ಕ್ಷೇತ್ರದಲ್ಲಿ ಎಂಟತ್ತು ಪಂಚಾಯಿತಿಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದೆ ಇದು ಕೇವಲ ಜಿಲ್ಲೆಯಾದ್ಯಂತ ಅಲ್ಲ, ರಾಜ್ಯದಾದ್ಯಂತ ಸಮಸ್ಯೆ ಇದೆ ಆದುದರಿಂದ ಇದಕ್ಕೆ ಪರಿಹಾರ ಕಂಡುಹಿಡಿಯಬೇಕು ಎನ್ನುವ ಉದ್ದೇಶ ಇದೆ ಗ್ರಾಮ ಸಭೆಯಲ್ಲಿ ವಿಫಲರಾದಾಗ ಮಾತ್ರ ಅಧಿಕಾರ ಬರುತ್ತದೆ, ಇಲ್ಲದಿದ್ದರೆ ಇಲ್ಲ ಎನ್ನುವಂತಹ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಉಪಾಧ್ಯಕ್ಷರು ಈಗ ಪ್ರಶ್ನೋತ್ತರ ವೇಳೆ ಇದೆ ಅದನ್ನು ತೆಗೆದುಕೊಳ್ಳಬೇಕು

ಶ್ರೀ ಕೆ.ಆರ್ ರಮೇಶ್ ಕುಮಾರ್.– ತಾವು ಲಾಟರಿಯನ್ನು ಎತ್ತುವುದಕ್ಕೆ

ಹೋಗಬೇಡಿ ನಾನು ತಮಗೆ ಏನು ಹೇಳುತ್ತೇನೆಂದರೆ, 3-4 ಜನ ಫಲಾನುಭವಿಗಳನ್ನು ನೀವು ಆಯ್ಕೆ ಮಾಡಬೇಕಾಗಿದ್ದಾಗ 15 ಜನ ಫಲಾನುಭವಿಗಳು ಅರ್ಹರಿದ್ದರೆ, ಆ 15 ಜನರಲ್ಲಿ ಲಾಟರಿಯನ್ನು ಎತ್ತುತ್ತೀರಾ?

ಶ್ರೀ ಸಿ ಎಂ ಉದಾಸಿ· ಹೌದು

ಶ್ರೀ ಆರ್ ಕೆ ರಮೇಶ್ ಕುಮಾರ್ ಅಂದರೆ ಬಡತನದ ವಿಚಾರದಲ್ಲಿ ನೀವು ಲಾಟರಿಯನ್ನು ಎತ್ತುವುದಕ್ಕೆ ಹೋಗುತ್ತೀರಾ?

ಶ್ರೀ ಸಿ.ಎಂ ಉದಾಸಿ· 15 ಜನರು ಬಡವರಿದ್ದರೆ ಏನು ಮಾಡುವುದು?

ಶ್ರೀ ಕೆ.ಆರ್ ರಮೇಶ್ ಕುಮಾರ್ As a Government ನೀವು ಯೋಚನೆ ಮಾಡಿ Housing programme ನೀವು ಹೆಚ್ಚಿಗೆ ಹಣವನ್ನು ಮೀಸಲು ಇಡಿ, ಕೆಲವು ಅನಗತ್ಯವಾಗಿರುವಂಥದ್ದನ್ನು ತೆಗೆದು ಹಾಕಿ ಒಂದು ಪಂಚಾಯತ್‌ಗೆ 60 ಮನೆಗಳನ್ನು ಕೊಡುವಂಥದ್ದು ಏನು ಇದೆ, ಅದನ್ನು 600 ಮನೆಗಳೆಂದು ಮಾಡಿಕೊಳ್ಳಿ ಮಾನ್ಯ ಬಸವರಾಜ ರಾಯರೆಡ್ಡಿರವರು ಬಹಳ ಚಿಕ್ಕ ವಯಸ್ಸಿನಲ್ಲೇ ಮಂತ್ರಿಯಾಗಿದ್ದರು ಅವರು ಬಹಳ ಉತ್ಸಾಹದಿಂದ ಕೆಲಸವನ್ನು ಮಾಡಿದ್ದಾರೆ ಆಗ ಹೊಸದಾಗಿ ಸೈಟ್ ಇಲ್ಲದೇ ಇರುವವರ ದೊಡ್ಡ ಪಟ್ಟಿಯನ್ನು ವೈಜ್ಞಾನಿಕವಾಗಿ ಮಾಡಿದ್ದಾರೆ ಅದನ್ನು update ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಿ ನಾನು ನಿಮಗೆ ಏನು ಹೇಳುತ್ತೇನೆಂದರೆ, ತಾವು ಒಂದು ಊರಿನಲ್ಲಿ ಗ್ರಾಮ ಸಭೆಯನ್ನು ಮಾಡುತ್ತೀರಿ ಅಲ್ಲಿ ಗ್ರಾಮ ಸಭೆಯನ್ನು ಮಾಡಿ, ಆ ಊರಲ್ಲಿ 15 ಜನರೋ, 21 ಜನರೋ, 24 ಜನರೋ, ಒಟ್ಟು ಫಲಾನುಭವಿಗಳು ಹೊರ ಬೀಳುತ್ತಾರೆ ಈ ಸಹಾಯಕ್ಕೆ ಇಂಥವರು ಅರ್ಹರೆಂದು ಆಗುತ್ತದೆ ಅದನ್ನು ಎರಡು ಫೇಸ್‌ನಲ್ಲೋ, ಮೂರು ಫೇಸ್‌ನಲ್ಲೋ ಮಾಡುವ ಹಾಗೆ ಇರಬೇಕು ಇದನ್ನು ಆರು ತಿಂಗಳುಗಳಾದ ಮೇಲೆ ಸೆಲೆಕ್ಟ್ ಮಾಡುತ್ತೇವೆಂದು ಅನೌನ್ಸ್ ಮಾಡಿದರೆ, ಆ ಊರಿನಲ್ಲಿ ಪ್ರಾಬ್ಲಂ ಕ್ಲೋಸ್ ಮಾಡಿದ ಹಾಗೆ ಆಗುತ್ತದೆ ನೀವು ಏನು ಮಾಡುತ್ತೀರೆಂದರೆ, 20 ಜನರು ಇರುತ್ತಾರೆ, ಅವರಲ್ಲಿ ಮೂರು ಜನರನ್ನು ಸೆಲೆಕ್ಟ್ ಮಾಡುತ್ತೀರಿ ನೀವು ಮತ್ತೆ ಬರುವಷ್ಟರಲ್ಲಿ ಅವರು 26 ಜನರಾಗಿರುತ್ತಾರೆ ಇದಕ್ಕೆ ನಾವು ಏನು ಮಾಡುತ್ತೇವೆಂದರೆ ಇದು poverty alleviation programme ಅಲ್ಲ Poverty ಜೊತೆಗೆ playing politics ಇದನ್ನು ನಾವು ಮಾನವೀಯತೆಯ ದೃಷ್ಟಿಯಿಂದ ನೋಡಲಿಲ್ಲ ಅವರು economically weaker sectionಗೆ ಸೇರಿದಂಥವರು ಅವರಿಗೆ purchasing power ಇಲ್ಲ ಅವರಿಗೆ ನಾವು ಸಹಾಯ ಮಾಡಬೇಕೆನ್ನುವಂಥಾದ್ದು ಪ್ರಾಮಾಣಿಕವೆಂಬುದು ಸರ್ಕಾರದ ಬದ್ಧತೆಯಾದರೆ, ಬೇರೆ ಕಾರ್ಯಕ್ರಮಗಳನ್ನು ತೆಗೆದು ಹಾಕಿ, taking housing on a massive scale ಅಥವಾ ಹುಡ್ಕೋ ಸಂಸ್ಥೆಗಳಿಂದ

ತೆಗೆದುಕೊಳ್ಳಿ ನೀವು ಎಲ್ಲಾ ಕ್ಯಾಬಿನೆಟ್‌ನಲ್ಲಿ ಇದ್ದೀರಿ ನೀವು ನನಗೆ ಶ್ರೀನಿವಾಸಮರದಲ್ಲಿ ಮಾಡಿಕೊಟ್ಟಿರಿ ಆದರೆ ದುರದೃಷ್ಟವಶಾತ್ ಅದನ್ನು implement ಮಾಡುವುದಕ್ಕೆ ಆಗಲಿಲ್ಲ ಅವರ ಹತ್ತಿರ ವಸೂಲು ಮಾಡಿ, ಒಂದು ವಾರಕ್ಕೆ 1 ರೂ, 2 ರೂ ಗಳನ್ನೋ ವಸೂಲು ಮಾಡಿ ಯಾರು ಫಲಾನುಭವಿಗಳು ಇರುತ್ತಾರೆ, ನೀವು ಲೋನ್ ತೆಗೆದುಕೊಂಡು ಕಟ್ಟಬಹುದು ಕೇರಳ ರಾಜ್ಯದಲ್ಲಿ ಮಾಡಿದ್ದಾರೆ, ಅದನ್ನು ಹೋಗಿ ನೋಡಿಕೊಂಡು ಬನ್ನಿ Housing Programme ಅನ್ನು ತೆಗೆದುಕೊಂಡು ಯಾರು ಫಲಾನುಭವಿಗಳು ಇರುತ್ತಾರೆ, ಅವರ ಹತ್ತಿರ ಪಿಗ್ಮಿ ಕಲೆಕ್ಷನ್‌ಗೆ ಹೋದಂತೆ ಒಂದು ವಾರಕ್ಕೆ ಒಂದು ರೂಪಾಯಿಯನ್ನೋ, ಎರಡು ರೂಪಾಯಿಗಳನೋ, ಕಲೆಕ್ಟ್ ಮಾಡಿದರೆ ನಿಮಗೆ ಹಣವೂ ಬರುತ್ತದೆ You can take up large scale housing

ಶ್ರೀ ಸಿ ಎಂ ಉದಾಸಿ ತಾವು ಸಾಲದ ಯೋಜನೆಗಳನ್ನು ಮಾಡಬೇಕೆಂಬ ಸಲಹೆಯನ್ನು ಕೊಟ್ಟಿದ್ದೀರಿ ಅದನ್ನು ನಾವು ಕಾರ್ಯಗತಗೊಳಿಸಬೇಕೆಂಬ ಪ್ರಯತ್ನವನ್ನು ಇವತ್ತು ಯಲ್ಬುರ್ಗಾ ಕ್ಷೇತ್ರದಲ್ಲಿ ಮಾಡಿದ್ದಾರೆ ಅದೇ ರೀತಿ 8–10 ತಾಲ್ಲೂಕುಗಳಲ್ಲಿ ಮಾಡುವುದಕ್ಕೆ ಸಾಧ್ಯವಾಗಿದೆ ತಾವು ತಮ್ಮ ಕ್ಷೇತ್ರದ ವಿಚಾರವನ್ನು ಹೇಳಿದ್ದೀರಿ, ತಮ್ಮ ಕ್ಷೇತ್ರದಲ್ಲಿ 10,000 ಮನೆಗಳನ್ನು ಮಾಡಬೇಕೆಂದು ಪ್ರಯತ್ನಪಟ್ಟಿದ್ದು ಇದೆ ನನಗೆ ಗೊತ್ತಿರುವ ಹಾಗೆ ಅದು 1996ರಿಂದ 1999ರ ಮಧ್ಯದಲ್ಲಿ ನಡೆದದ್ದು ನನ್ನ ಗಮನದಲ್ಲಿ ಇದೆ ಅದು ಕಾರ್ಯಗತ ಮಾಡಬೇಕೆನ್ನುವ ತಮ್ಮ ಸಲಹೆ ಏನು ಇದೆ, ಆ ಸಲಹೆಯನ್ನು ಮತ್ತು ಜನರಿಗೆ ಸಾಲ ವಾವತಿ ಮಾಡಬೇಕಾದಂಥ ವಿಚಾರದಲ್ಲಿ, educate ಮಾಡಬೇಕಾಗಿರುವಂಥ ವಿಚಾರದಲ್ಲಿ ಸಹಿತ ವಿಶೇಷವಾದ ಒಂದು ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆಯೆಂಬ ಭಾವನೆ ನನಗೆ ಇದೆ ಅದು ಏನಾದರೂ ಕಾರ್ಯಗತವಾದರೆ, ತಾವು ನಿರೀಕ್ಷೆ ಮಾಡಿದಂಥ ಫಲ ದೊರೆಯುವುದಕ್ಕೆ ಸಾಧ್ಯವಾಗುತ್ತದೆ ಆದರೆ ಇವತ್ತು 60 ಮನೆಗಳನ್ನು ಆಯ್ಕೆ ಮಾಡಬೇಕಾಗಿರುವಂಥದ್ದು ಅನಿವಾರ್ಯವಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ನೀವು ರಿಪ್ಲೈ ಕೊಡುವ ವೇಳೆಗೆ ಸರ್ಕಾರ, ನೀವು, Finance Minister, Chief Minister, ಮಾತನಾಡಿಕೊಳ್ಳಿ, ತಾವುಗಳು ಮಾತನಾಡಿಕೊಂಡು ಆ scheme ಅನ್ನು announce ಮಾಡಿ ಈಗಲೂ ನಿಮಗೆ ರಿಪ್ಲೈ ಕೊಡುವಾಗ ಅವಕಾಶವಿದೆ ಅದಕ್ಕೆ ಹುಡ್ಕೋದಂಥ ಯಾವುದಾದರೂ ಸಂಸ್ಥೆಯಿಂದ ಹಣವನ್ನು ತೆಗೆದುಕೊಂಡು ಬನ್ನಿ ನೀವು weekly basis ಮೇಲೆ, monthly basis ಮೇಲೆ recover ಮಾಡಿಕೊಳ್ಳಿ, ಪಿಗ್ಮಿ ಸಿಸ್ಟಂ ಅನ್ನು ಇಟ್ಟುಕೊಳ್ಳಿ ಈ ಬಗ್ಗೆ ಕೇರಳ ರಾಜ್ಯದಲ್ಲಿ ಹೇಗೆ ಮಾಡಿದ್ದಾರೆಂಬ ಬಗ್ಗೆ ತಿಳಿದುಕೊಂಡು

ಬರಲು, ಇಬ್ಬರು officers ಅನ್ನು despatch ಮಾಡಿ ಅದನ್ನು ನೀವು ತಿಳಿದುಕೊಂಡು ಮಾಡಿ Massive scale ನಲ್ಲಿ ಮಾಡಿ ಈ sysytem ಅನ್ನು ತೆಗೆದು large scale ನಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದರೆ solve ಆಯಿತು ಇದರಲ್ಲಿ ನಿಮಗೆ ಬದ್ಧತೆ ಇರಬೇಕು ಇಲ್ಲಿ ಯಾರು ಆಡಳಿತ ನಡೆಸುತ್ತಿದ್ದೀರಿ, ನೀತಿ ರೂಪಿಸತಕ್ಕಂಥವರು ನೀವು, ನಾವು ಏನಿದ್ದರೂ ಬೆಂಬಲವನ್ನು ಕೊಡುವುದಷ್ಟೆ ನಿಮಗೆ ಮನಸ್ಸು ಇದ್ದರೆ ನೀವು immediate ಆಗಿ ಈ ಬಗ್ಗೆ ಚರ್ಚೆಯನ್ನು ಮಾಡಿಕೊಂಡು, ಈ ರೀತಿ ತೆಗೆದುಕೊಳ್ಳುತ್ತೇವೆಂದು ಹೇಳಿದರೆ, ನೀವು ಶ್ರೀನಿವಾಸ ಮರಕ್ಕೆ ಕ್ಯಾಬಿನೆಟ್‌ನಲ್ಲಿ ಏನು ಮಾಡಿಕೊಟ್ಟಿದ್ದೀರಿ ? ಆಗ ಮಾನ್ಯ ಎಸ್ ಎನ್ ಪಾಟೀಲ್‌ರವರು ಇದ್ದರು ಸರ್ಕಾರ ಗ್ಯಾರಂಟಿಗೆ ನಿಲ್ಲುವಂಥಾದ್ದು, ಹುಡ್ಕೋ ಸಾಲ ಕೊಡುವಂಥದ್ದು, ಫಲಾನುಭವಿಗಳು ಸಾಲವನ್ನು ತೆಗೆದುಕೊಳ್ಳುವಂಥಾದ್ದು, ಅವರು ಒಂದು ವಾರದಲ್ಲಿ ಒಂದು ಕಾಲು ರೂಪಾಯಿಗಳನ್ನು ಕಟ್ಟುವಂಥದ್ದು ಇದು ಏನು ಕಷ್ಟವಾಗುವುದಿಲ್ಲ ಫಲಾನುಭವಿಗಳು ಯಾರು ಇದ್ದಾರೆ, ಅವರು ನಿಜವಾಗಿ ಮನೆಯನ್ನು ಕಟ್ಟಿಕೊಳ್ಳುತ್ತೇವೆ, ಬದುಕಿಕೊಳ್ಳುತ್ತೇವೆಂದು ಹೇಳುವವರು, ಸಾಲವನ್ನು ಕೊಡುವುದಿಲ್ಲವೆಂದು ಹೇಳುವುದಿಲ್ಲ ನಾವು ಒಂದೇ ಸಲ ನೋಟೀಸ್ ಕೊಟ್ಟು ಸಾವಿರಾರು ರೂಪಾಯಿಗಳನ್ನು ಕಟ್ಟಬೇಕೆಂದು ಹೇಳಿದರೆ, ಅವರು ಕಟ್ಟುವುದಿಲ್ಲ, ಅದು ಆಗುವುದಿಲ್ಲ ಈಗ ಮನೆಯನ್ನು ಕೊಡುವುದನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಿದ್ದೇವೆ ? ನಾವು ಜನ ಪ್ರತಿನಿದಿಗಳು, ದೊಡ್ಡ ಮಹಾರಾಜರುಗಳು ಇದ್ದ ಹಾಗೆ, ಅವನು ನಮ್ಮ ಹತ್ತಿರ ಬೆನ್ನು ಬಗ್ಗಿಸಿಕೊಂಡು ಬಂದು ನಮಗೆ ಅರ್ಜಿಯನ್ನು ಕೊಡುವುದು, ಅವನು ನಮ್ಮ ಮನೆ ನೋಡಿ, ನನಗೆ ಮನೆ ಕೊಡಿಯೆಂದು ಹೇಳುವುದು ನಾವು ಬಿಗುಮಾನದಿಂದ ಇವನಿಗೆ ಒಂದು ಮನೆಯನ್ನು ಕೊಡಿಯೆಂದು ಹೇಳುವುದು ನಾವು ಯಾರು ? ಅವರು ಯಜಮಾನರುಗಳು, ಅವರನ್ನು ದಯನೀಯ ಸ್ಥಿತಿಯಲ್ಲಿ ಇಟ್ಟು, ಅವರ ಕೃಪೆಯಲ್ಲಿ ನಾವು ದೊಡ್ಡ ಮನುಷ್ಯರಾಗಿ, ನಾವು ಮೇಲೆ ಯಜಮಾನಿಕೆಯನ್ನು ಮಾಡುವುದು ಇಲ್ಲಿ ಎಲ್ಲಾ reversal ಆಗಿ ನಾನು ಈಗಲೂ ನಿಮಗೆ ಏನು ಹೇಳುತ್ತೇನೆಂದರೆ, ಇಲ್ಲಿ Finance Minister ಇದ್ದಾರೆ ಮಾನ್ಯ ನಜೀರ್ ಸಾಬ್‌ರವರು ಸಾಯುವ ವೇಳೆಗೆ, ಅವರಿಗೆ Drinking water provide ಆದಮೇಲೆ ಇದ್ದಂಥ ಆಸೆ ಇದೇ ಆಗಿದೆ ಈ Housing Programme ಅನ್ನು ನಾವು phase-wise ತೆಗೆದುಕೊಳ್ಳಬೇಕು ರಾಜ್ಯದಲ್ಲಿ ವಸತಿ ಸಮಸ್ಯೆಯಿರುವ ಒಂದು ಕುಟುಂಬವೂ ಇರಬಾರದೆಂಬ ಕನಸನ್ನು ಅವರು ಕಂಡಿದ್ದರು ಆದರೆ ದೇವರು ಅವರಿಗೆ ಅಯಸ್ಸು ಕೊಡಲಿಲ್ಲ, ಅವರು ತೀರಿಕೊಂಡರು ನಾನು ನಿಮಗೆ ಹೇಳುವಂಥಾದ್ದು ಏನೆಂದರೆ, ನಿಮಗೆ ಮನಸ್ಸು ಇದ್ದರೆ, ಈಗಲೂ ನೀವು ರಿಪ್ಲೈ ಕೊಡುವಷ್ಟರಲ್ಲಿ ತಯಾರಾಗಿ ಬಂದು ಅನೌನ್ಸ್ ಮಾಡಬಹುದು

ನೀವು ಶಾಶ್ವತವಾಗಿ ಚರಿತ್ರೆಯಲ್ಲಿ ಉಳಿಯುತ್ತೀರಿ, ಜನರ ಮನಸ್ಸಿನಲ್ಲಿ ಉಳಿಯುತ್ತೀರಿ Think of that programme

ಶ್ರೀ ಸಿ ಎಸ್. ನಾಡಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಯವರು ಮಾತನಾಡುವಾಗ ಹೇಳಿದರು BPL Listನಲ್ಲಿ ಇರುವಂಥ ಫಲಾನುಭವಿಗಳನ್ನು ಆಯ್ಕೆ ಮಾಡಿ, ಅಂಥವರಿಗೆ ಮನೆಯನ್ನು ಕೊಡುವುದಕ್ಕೆ ಅಲ್ಲಿರುವಂಥ ಗ್ರಾಮ ಸಭೆಯಲ್ಲಿ ಬಂದಂಥ ಸೂಚನೆ ಮೇರೆಗೆ ಪಂಚಾಯತ್‌ನವರು ಶಿಫಾರಸ್ಸು ಮಾಡಬೇಕೆಂದು ಹೇಳಿದರು 1991ರಲ್ಲಿ ಮಾನ್ಯ ಬಂಗಾರಪ್ಪನವರು ಇದ್ದಾಗ, 1991ರಲ್ಲಿ ನಿವೇಶನಗಳನ್ನು ಕೊಟ್ಟಿದ್ದೇವೆ ಇವತ್ತು ಮುದ್ದೆಬಿಹಾಳ ಕ್ಷೇತ್ರದಲ್ಲಿ ಸುಮಾರು 5,6 ಹಳ್ಳಿಗಳಲ್ಲಿ ಇವತ್ತಿಗೂ ನಿವೇಶನವನ್ನು ಯಾರಿಗೆ ಕೊಟ್ಟಿದ್ದೇವೆ ಅವರಿಗೆ ಮನೆಗಳನ್ನು ಕೊಟ್ಟಿಲ್ಲ ಅವರು BPL Listನಲಿ ಇದ್ದವರೆಂದು ನಾವು ಅವರಿಗೆ ನಿವೇಶನಗಳನ್ನು ಕೊಟ್ಟಿದ್ದೇವೆ ಇವತ್ತಿಗೂ ಅವರಿಗೆ ಮನೆಗಳು ಇಲ್ಲ, ಇದು ಒಂದು ಇನ್ನು ಯಾರು ನಮಗೆ petition ಕೊಡಬೇಕು? ನಮಗೆ ಗ್ರಾಮ ಸಭೆ ಸಮರ್ಪಕವಾಗಿ ನಡೆಸಿಲ್ಲವೆಂದು ಹೇಳಿ, ನಮ್ಮ ಕಮಿಟಿಗೆ ಯಾರು Petition ಕೊಡಬೇಕು? ಜನರು ಕೊಡಬೇಕು ಆ ಜನರು ಕೊಡುವಾಗ, ಅಲ್ಲಿ ಪಂಚಾಯತ್ ಮೆಂಬರ್‌ಗಳು ಯಾರು ಇರುತ್ತಾರೆ ಅಲ್ಲಿ ಕಾಂಗ್ರೆಸ್, ಜನತಾ ದಳ, ಬಿಜೆಪಿ, ಎಂದು ಇಲ್ಲ ಅಲ್ಲಿ ಹೊಂದಾಣಿಕೆ ಮೇಲೆ ಮಾಡಿಕೊಂಡು, ಅಲ್ಲಿ ಅವರು ಪಟ್ಟಿಯನ್ನು ತಂದು ಅಲ್ಲಿಗೆ ಕೊಡುತ್ತಾರೆ ಅದಕ್ಕೆ ಅವರು ಯಾರು ತಕರಾರು ಮಾಡುವುದಿಲ್ಲ ಒಂದೆರಡು ಗ್ರಾಮಗಳಲ್ಲಿ ತಕರಾರು ಬಂದರೆ, ಅಲ್ಲಿಗೆ ನಾವು ಹೋದರೆ, ಅದನ್ನು ಅವತ್ತಿನ ದಿವಸವೇ ತೆಗೆದುಕೊಂಡು Petition ಪ್ರಕಾರ ತೆಗೆದುಕೊಂಡು BPL List ಪ್ರಕಾರವೇ ಮಾಡಿಕೊಟ್ಟರೆ, ಮಾರನೇ ದಿವಸವೆ ಊರಿನಲ್ಲಿ ಜಗಳ ಪ್ರಾರಂಭವಾಗುತ್ತದೆ ಅದಕ್ಕೆ ನಾನು ಹೇಳುತ್ತಿರುವಂಥಾದ್ದು, ಅವರು ಹೇಳಿದರು Finance schemes ಇವತ್ತು Localನಲ್ಲಿ ಇರುವಂಥ Nationalize Banksಗಳಿಗೆ tag ಮಾಡಿ, ಒಂದು targetಅನ್ನು ಇಟ್ಟುಕೊಳ್ಳಿ ಹಿಂದೆ ಇದ್ದವರು, ಮತ್ತು ಈಗ ಇರುವಂಥ ಸೆನ್ಸಸ್ ಪ್ರಕಾರ ಏನು ಇದೆಯೆಂಬ ಬಗ್ಗೆ, ಒಂದು BPL List ಅನ್ನು ಸರ್ವೆ ಮಾಡಿಸಿ ಇದರಲ್ಲಿ 14 ಅಂಶಗಳು ಇದೆ, ಇದರಲ್ಲಿ ಎಷ್ಟೊ ಜನ ಶ್ರೀಮಂತರು ಕೂಡ ಬಂದಿದ್ದಾರೆ ಅವರು ಹೇಳಿದರು, 4 ಎತ್ತು 5 ಎತ್ತು, 8 ಎತ್ತು ಇರುವ ಒಕ್ಕಲುತನದಲ್ಲಿರುವವರು ಕೂಡ BPL Listನಲ್ಲಿ ಇದ್ದಾರೆ ಆ List ಕಡಿಮೆ ಆಗಬೇಕು ನಾನು ನಿನ್ನೆ ಮಾತನಾಡುವಾಗ ಹೇಳಿದ್ದೆ ಈ BPL List ಕಡಿಮೆಯಾಗುತ್ತಿಲ್ಲ, ಇದು ಹೆಚ್ಚಾಗುತ್ತಿದೆ ಇದು ಹೇಗೆ ಹೆಚ್ಚಾಗುತ್ತಿದೆ? Housing Scheme ಏನು ಆಗುತ್ತಾ ಇದೆ? ಅದನ್ನು ಸಮರ್ಪಕವಾಗಿ ಮಾಡುವುದಕ್ಕೋಸ್ಕರ, ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ ಅವರು ಬರೀ ಉತ್ತರವನ್ನು ಹೇಳಿದರೆ ಆಗುವುದಿಲ್ಲ

ಶ್ರೀ ಎಸ್.ಎಸ್. ಪಾಟೀಲ್ ಮಾನ್ಯ ಉದಾಸಿಯವರೆ, ನಾನು ಈ BPL List ಹೇಗೆ ಇದೆಯೆಂಬುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ ನಾನು ಒಂದು ಊರಿಗೆ ಹೋದೆ

ಉಪಾಧ್ಯಕ್ಷರು ಈಗ ರಾಜ್ಯಪಾಲರಿಂದ ಬಂದಿರುವ ಒಂದು message dated 19th July 2007 ಇದೆ ಅದನ್ನು ಸಭೆಯ ಗಮನಕ್ಕೆ ತರುತ್ತೇನೆ

5 ರಾಜ್ಯಪಾಲರಿಂದ ಬಂದ ಸಂದೇಶ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ 2007ನ್ನು ಮರುಪರಿಶೀಲನೆಗಾಗಿ ಹಿಂತಿರುಗಿಸುವ ಬಗ್ಗೆ

MESSAGE

Message under Article 200 of the Constitution of India to the Karnataka Legislative Assembly and the Karnataka Legislative Council in respect of The Karnataka Panchayat Raj (Amendment) Bill, 2007 (L A Bill No 29 of 2007)

Greetings, Hon Members

After going through The Karnataka Panchayat Raj (Amendment) Bill, 2007, I believe that there are important points and relevant issues which merit attention and serious consideration by Hon Members and hence I am constrained to bring them to your kind notice The relevant provisions of the Bill read as follows

"2 Amendment of Section 3 - In the Karnataka Panchayat Raj Act, 1993 (Karnataka Act 14 of 1993) (hereinafter referred to as the principal Act), in Section3, in sub-section (3), after clause (b), the following provisos shall be inserted, namely -

"Provided that in the case of any housing scheme or programme funded by the Government and entrusted to the Gram Panchayat, Taluk Panchayat or the Zilla Panchayat, for implementation any committee or authority of Government constituted in this behalf by notification, may be empowered to select the beneficiaries of such housing scheme or programme from among the eligible persons identified by the concerned Gram Panchayat

Provided further that where the Gram Panchayat fails to identify eligible persons for a housing scheme or programme as required by the guidelines of the scheme, the Government may authorize any officer or authority to be constituted under the Chairmanship of the Member, Legislative Assembly of the constituency to make such identification in accordance with the guidelines of the scheme"

3 Amendment of Section 3A - In section 3A of the Principal Act in

sub-section (3), after clause (c), the following provisos shall be inserted namely -

> "Provided that in the case of any housing scheme or programme funded by the Government and entrusted to the Gram Panchayat, Taluk Panchayat or the Zilla Panchayat, for implementation, any committee or authority of the Government constituted in this behalf by notification, may be empowered to select the beneficiaries of such housing scheme or programme from among the eligible persons identified by the concerned Gram Panchayat
>
> Provided further that where the Gram Panchayat fails to identify eligible persons for a housing scheme or programme as required by the guidelines of the scheme, the Government may authorize any officer or authority to be constituted under the Chairmanship of the Member, Legislative Assembly of the constituency to make such identification in accordance with the guidelines of the scheme"

I have received several petitions and representations criticizing and opposing the aforesaid amendments from citizens, Panchayat, NGOs and concerned intellectuals urging that any move that obviously leads to curtailing the powers of the Panchayat is retrogressive and runs counter to the tends towards the historical process of democratic decentralization A number of their representatives and spokespersons also met me to explain their objections Quite a few Hon Members of the State Legislature also met me and registered their opposition to the Bill The State Panchayat Minister also met me on June 1, 2007 along with the Secretary of Department concerned and the Secretary, Department of Parliamentary Affairs to explain the purpose of the amending articles After detailed discussion, I was assured that a note again would be submitted to me putting forth the justification for the amendment that it has only a limited object The note after sometime was received and I went throuth it with necessary care According to the note furnished

> "The scope of the proposed amendments to sections 3 and 3A is limited to the identification and selection of beneficiaries for schemes or programmes relating to housing only The amendments will no way affect the identification and selection of beneficiaries by the Grama Panchayaths in respect of other poverty alleviation or development programmes of Government"

As the Hon Members are aware, the movement towards Panchayat Raj can be traced back in recent times to Mahatma Gandhi's concept of Gram Swaraj After a long history of debate and development it found ultimate enshrinement in our Constitution through the 73rd Constitution Amendment enacted with almost near unanimity by Parliament in 1992 and embodied as Part IX in the Constitution

It may be worthwhile to recall the Statement of Objects and Reasons that accompanied the aforesaid Constitution Amendment Bill in order to appreciate in right perspective the scope, perspective and purpose of the 73rd and 74th amendments

> "Article 40 of the Constitution which enshrines one of the Directive Principles of State Policy lays down that the State shall take steps to organize village panchayats and endow them with such powers and authority as may be necessary to enable them to function as units self-government In the light of the experience in the last forty years and in view of the shortcomings, which have been observed, it is considered that there is an imperative need to enshrine in the Constitution certain basic and essential features of Panchayat Raj Institutions to impart certainity, continuity and strength to them ".

This provides constitutional validity to the long cherished dream of participatory local democracy It may also be brought to the notice of the Hon Members that even in the Constituent Assembly, Shri K Santanam described Article 40 as " a definite and unequivocal direction" to the State The likely impact and approach of the amendment made by the Karnataka Panchayat Raj (Amendment) Bill, 2007, also require to be properly studied in the broad historical context and constitutional perspective

The State of Karnataka has been hailed as a pioneer in Panchayat Raj reforms and in the implementation of decentralized governance as enshrined in the Constitution Many other States have largely followed Karnataka's example and have established decentralized local bodies based on the Karnataka model As the Hon Members are aware, in 2001, the then Minister for Rural Development and Panchayat Raj constituted a Working Group under the Chairmanship of a senior officer, the Development Commissioner, to make recommendations on Panchayat Raj reform The Working Group recommended several measures for strengthening Gram Sabhas, including changes in the law to provide for Ward Sabhas below Gram Sabhas at the neighbourhood level and elaborate processes for beneficiary selection by Ward and Gram Sabhas under government programmes Amendments based on these recommendations were intensely debated both inside the legislature and outside by intellectuals and Ward Groups In 2003, while presenting the draft Amendment Bill, the then Hon Minister suggested they be referred to a Select Committee After a thorough scrutiny by the Joint Select Committee, the Bill met unanimous approval of both the Houses of the Legislature in September 2003 Hence, the existing arrangement is a product of very thorough work, dicerning scrutiny and the combined wisdom of the legislature, keeping in mind the principle of transfer of power to people and trying to make a substantial contribution towards decentralization and grassroots democracy The rationale of the role of the Gram Panchayats and, more so, the Gram Sabhas in beneficiary schemes, was be-

cause of their proximity to each and every inhabitant of a Gram (village) As such they are in a more advantageous and realistic position to identify the deserving beneficiaries for all schemes including housing The law as it exists at present is unamiguous and is in keeping with the spirit of the 73rd amendment

Hon Members, it will seem that the "Statement of Objects and Reasons" in the present The Karnataka Panchayat Raj (Amendment) Bill, 2007, does not make out adequate justification necessitating the proposed changes except the bald assertion "The Gram Panchayats are required to select beneficiaries for various schemes through Ward Sabhas and Gram Sabhas The Gram Panchayats have not been functioning effectively which has affected the implementation of these programmes Hence, ti is considered necessary to make a provision for constitution of Ashraya Committees to select the beneficiar'es " It is not known or what basis such a conclusion has been arrived at No committee, official or otherwise, was appointed to make a thorough study to come to such a drastic conclusion, when we in the State of Karnataka rightly take pride about the working of our Gram Panchayats and Panchayat Raj in general Commendation and appreciation have been received from different quarters by the system It is not known if the situation was any better in respect of housing programmes before the amendment was made in 2003 unanimously Moreover, it is not known as to how and why the Gram Sabhas and Gram Panchayats have not been able to discharge their duties satisfactorily, if it is really so Was any objective and independent study made as to the possible difficulties, programmatic, administrative financial or infrastructural, that might have been faced by these local bodies? Was anything done to remedy them? Nothing definite is known Was any consultation with the concerned bodies held at any level or at any time on the issue to enable the members of these local bodies or NGOs, experts and others to give their view points? No authentic material seems to be available for scrutiny in this regard, which could provide justification to changes in present system that was instituted through the Karnataka Panchayat Raj Act, 2003 The sweeping indictment of these local bodies in these circumstances, the Hon'ble Members will agree, does not carry conviction Amendment in the existing statute on the basis of sundry observations or personal impressions will not be fair to the Panchayats which form the bedrock of the democratic system in which the higher political representatives are also expected by the people to provide motivation, guidance and support to the grassroots local democratic bodies for them to achieve their objectives effectively

Hon'ble Members, I have to bring to your kind notice that, while going through the present Karnataka Panchayat Raj (Amendment) Bill 2007, it evidently seems to undermine the Constitutional mechanism for rural develop-

ment governance as enshrined in Part IX of the Constitution of India and the Karnataka Panchayat Raj Act, 1993 which are intended to implement the 73rd amendment with the twin objectives of broader democratic representation (Articles 243C-243F) and direct empowerement through conferment of decision making powers to Panchayats The 73rd amendment does not envisage that parallel insututions be invented to discharge functions even in the guise of a <u>default power,</u> where and when duties are alleged to be not discharged effectively by Panchayats The correct approach must be to devise ways and means to enable the panchayats to function effectively, rather than to bring in higher legislators/officials into the system It will obviously be considered as regressive step in the march towards strengthening local democracy and striking at the root of the 73rd amendment It may not be out of order also to mention that the reinstatement of legislators and officials in the set up in this manner and vesting them with authority on the pleat that Gram Sabhas and Gram Panchayats have not worked satisfactorily may even be misconstrued as conflict of interests between the former and panchayats

The existing law, The Karnataka Panchayat Raj Act, 1993, is quite clear as regards the process and authority for the selection of beneficiaries However, the proposed amendments and insertion of proviso to Section 3(3)(b) and 3(A)3(C) state that, if the Gram Panchayat fails to discharge its duties in respect of Housing Schemes or programmes funded by the government, then a committee headed by a Member of the Legislative Assembly of the constituency shall select the beneficiaries from the list prepared by the Gram Panchayat This obviously gives overriding authority to the legislator and he becomes the final arbiter this is seemingly a very open-ended provisons Questions arise as to who will decide that the panchayat has failed to discharge its duties and who will constitute the committee Why select simply housing schemes when according to the "Statement of Objections and Reasons" of the Karnataka Panchayat Raj (Amendment) Bill, 2007, Panchayats have not been fucntioning effectively and these programmes are affected? What about other poverty alleviation and social justice schemes? Is not rural housing a social justice and poverty alleviation programme? This kind of approach can be with ease extended, it is apprehended, to other programmes funded by the government and thus defeat the very purpose of the 73rd amendment

As is reported, the State is implementing three housing schemes, viz, Indira Awas Yojana substantially funded by the Central Government, Dr Ambedkar housing Scheme for Scheduled Castes and Scheduled Tribes funded by the State Government, and Ashraya Housing Scheme also funded partly by the State Government and partly through Institutional Fiance and also subsidy Are the proposed amenuments intended to cover all the three schemes or

do they exclude Indira Awas Yojana which has its own guidelines issued by the Government of india, and specifically require that the beneficiaries shall be selected by the Gram Panchyats through the Gram Sabhas? Is it not invidious and discriminatory as all funds are primarily public funds? If the two schemes initiated by the State are to be improved, how will the Indira Awas Yojana be put on a better footing, in view of the assumption underlying The Karnataka Panchayat Raj (Amendment) Bill, 2007, that housing programmes in Karnataka are not being implemented properly by Panchayats?

The taking away or depriving of powers to panchyats and Gram Sabhas signifies a major reversal and retreat of Panchayat Raj and seems to violate the spirit of Panchayat Raj as enshrined in the Constitution

Moreover, the taking away of powers specifically in respect of housing schemes or programmes seem to contravene Article 14 of the Constitution

It may be pointed out that in 2002, a Standing Committee of Parliament (with MPs across parties and from both Lok Sabha and Rajya Sabha) while reviewing the progress of implementation of the 73rd Amendment relating to Panchayats, quoted in its 37th Report the Hon Supreme Court having held in a judgment, "Any legislative device of the government which comes into direct conflict with the mandatory provisions of Article 243E of the Constitution, such device has to be declared as ultra vires of the said provision of the Constitution" The same ought to hold good if there is a departure from Article 243G of the Constitution This Article constitutes the essence, the ethos and the very soul of Panchayat Raj Article 243G uses the operational words "endow" and "devolution" with respect to powers given to Panchayats Broadly, the scope of these words would cover the transfer of power over funds, power over functions and power over functionaries It is intended to enable Panchayats to serve better as units of local self-government, and not disable them

While Article 243G gives the power to States to determine the scope and ambit of Panchayat Raj, this ought not to be interpreted as authority to include or initiate the reversal of Panchayat Raj It is not meant to curtail and circumscribe Panchayat Raj but to give it the requisite momentum It will be unfortunate and stretching it too far if recourse to this Article is taken to justify the virtual withdrawal and deprivation of powers endowed earlier on Panchayats as it does not conform to the entire spirit of the 73rd Constitution Amendment

The Pahcnayat Raj system rests on the faith, like democracy itself, that it is a self-correcting mechanism with civil society pressure, increasing people's awakening and public participation as the ultimate and effective democratic means of ensuring both transparency and accountability of local

government institutions The entire Part IX dealing with the Panchayats is a well-conceived, well-knit and well-structured creative exercise aimed at the strengthening, broadening and deepening of the democratic system of Panchayats and has to be viewed as such

It may be pertinent to quote in this context only a brief extract from the impassioned speech of the then Prime Minister Rajiv Gandhi in Parliament in 1989 while introducing the 73rd Amendment While referring to his tour to hundreds of villages and discussions with countless people in the country, he said

> "We learnt that a grassroot administration without political authority was like a mean without salt We learnt that however well-intentioned our district bureaucracy might be, without effective elected authority the gap between the people and the bureaucracy could not be closed We learnt that the vacuum created by the absence of local level political authority had spawned the power brokers who occupy the gap between the people and their representatives in distant Vidhan Sabhas and the ever more remote Parliament We learnt that corruption could only be ended by giving power to the panchayats and making panchayats responsible to the people We learnt that inefficiency could only be ended by entrusting the people at the grassroot level with the responsibility for their own development **We learnt that callousness could only be ended by empowering the people to send their own representatives to institutions of local self-government** "

The Karnataka Panchayat Raj (Amendment) Bill, 2007, Hon'ble Members, is not obviously consistent with this forward looking democratic approach

While expressing and affirming highest regards for the Hon'ble Members of the State Legislature, I, T N Chaturvedi, Governor of Karnataka, in exercise of the power conferred under Article 200 of the Constitution of India hereby return The Karnataka Panchayat Raj (Amendment) Bill, 2007, with the request to hon'ble legislators for reconsideration in their wisdom about its need, propriety, timeliness and relevance, keeping in view the aforesaid explanatory observations, serious wideranging implications, the consititutional mandate and the likely longterm impact the amendments may have on the future of Panchayat Raj in our State of Karnataka.

6 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾದ ಪ್ರಶ್ನೆಗಳು

ಮೊರಾರ್ಜಿ ವಸತಿ ಶಾಲೆಗಳನ್ನು ಪ್ರಾರಂಭಿಸುವುದು

122 (1005) ಶ್ರೀ ಹೂನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) -ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರೆಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹೊಸದಾಗಿ ಮೊರಾರ್ಜಿ ವಸತಿ ಶಾಲೆಗಳನ್ನು ಪ್ರಾರಂಭಿಸಲಿಕ್ಕೆ ಅನುಮತಿ ನೀಡಲಾಗಿದೆಯೇ (ಜಿಲ್ಲಾವಾರು ವಿವರ ನೀಡು ವುದು) ,

ಆ) 2005-06 ರವರೆಗೆ ಸರ್ಕಾರ ಅನುಮತಿ ನೀಡಿದ ಮೊರಾರ್ಜಿ ವಸತಿ ಶಾಲೆಗಳು ಎಷ್ಟು ಪ್ರಾರಂಭವಾಗಿರುತ್ತದೆ ಪ್ರಾರಂಭಗೊಂಡ ಶಾಲೆಗಳಿಗೆ ಸರ್ಕಾರಿ ಸ್ವಂತ ಕಟ್ಟಡ ಕಟ್ಟುವ ಪ್ರಕ್ರಿಯ ಪ್ರಾರಂಭ ಮಾಡಿದೆಯೇ ಯಾವ ಯಾವ ಶಾಲೆಗಳಿಗೆ ಸ್ವಂತ ಕಟ್ಟಡ ಕಟ್ಟಲಿಕ್ಕೆ ಕ್ರಮ ಕೈಗೊಳ್ಳ ಲಾಗಿದೆ ಇಲ್ಲವಾದರೆ ಕಾರಣಗಳೇನು ,

ಇ) ಪ್ರಸ್ತುತ ಸಾಲಿನಲ್ಲಿ ಮೊರಾರ್ಜಿ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆದ ಮಕ್ಕಳ ಸಂಖ್ಯೆ ಎಷ್ಟು (ಶಾಲಾವಾರು ವಿವರ ನೀಡುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-

ಅ) 2007-08ನೇ ಸಾಲಿಗೆ ಈ ಕೆಳಕಂಡ ಸ್ಥಳಗಳಲ್ಲಿ7 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯಲು ಸರ್ಕಾರಿ ಆದೇಶ ಹೊರಡಿಸಲಾಗಿದೆ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಗ್ರಾಮ
1	ಬಿಜಾಪೂರ	ಇಂಡಿ	ಚಡಚಣ
2	ಗುಲಬರ್ಗಾ	ಚಿತ್ತಾಪೂರ	ದಂಡೋತಿ
3	ತುಮಕೂರು	ಕುಣಿಗಲ್	ಕುಣಿಗಲ್
4	ಹಾಸನ ಜಿಲ್ಲೆ	ಅರಕಲಗೂಡು	ಅರಕಲಗೂಡು
5	ಮೈಸೂರು	ಪಿರಿಯಾಪಟ್ಟಣ	ಹಲಗನಹಳ್ಳಿ
6	ಕೋಲಾರ	ಮುಳಬಾಗಿಲು	ಮುಳಬಾಗಿಲು
7	ಬೆಂಗಳೂರು	ಚನ್ನಪಟ್ಟಣ	ಚನ್ನಪಟ್ಟಣ

ಆ) 2005-06 ನೇ ಸಾಲಿನವರೆಗೆ ಒಟ್ಟು 22 ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆಗಳು ಮಂಜೂರಾಗಿದ್ದು ಎಲ್ಲಾ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ

ಪ್ರಾರಂಭಗೊಂಡ 22 ಅಲ್ಪಸಂಖ್ಯಾತರ ವಸತಿ ಶಾಲೆಗಳ ಪೈಕಿ 3 ವಸತಿ ಶಾಲೆಗಳಿಗೆ ಈಗಾಗಲೇ ಸ್ವಂತ ಶಾಲಾ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಕಾರ್ಯ ಆದೇಶ ನೀಡಲಾಗಿದ್ದು 3 ವಸತಿ ಶಾಲೆಗಳಿಗೆ ಸ್ವಂತ ಶಾಲಾ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ವಿವರಗಳು ಕೆಳಕಂಡಂತಿದೆ

ಜಿಲ್ಲೆ	ತಾಲ್ಲೂಕು	ಕ್ರ ಸಂ	ಸ್ಥಳ	ಷರಾ
ಶಿವಮೊಗ್ಗ	ಶಿವಮೊಗ್ಗ	1	ಮೇಲಿನ ಹನಸವಾಡಿ	ಸ್ವಂತ ಶಾಲಾ
ಬೆಳಗಾಂ	ಬೈಲಹೊಂಗಲ	2	ಹುಲಿಕಟ್ಟೆ	ಸಂಕೀರ್ಣ
ಬಳ್ಳಾರಿ	ಬಳ್ಳಾರಿ	3	ಕೂಳೆಗಲ್ಲು	ಗಳನ್ನು ನಿರ್ಮಾಣ ಮಾಡಲಾಗಿದೆ
ಚಿಕ್ಕಮಗಳೂರು	ಚಿಕ್ಕಮಗಳೂರು	4	ಚಿಕ್ಕಮಗಳೂರು	ಪ್ರಗತಿಯಲ್ಲಿವೆ
ಹಾಸನ	ಹಾಸನ	5	ಹಾಲುವಾಗಲು	
ಚಾಮರಾಜನಗರ	ಗುಂಡ್ಲುಪೇಟೆ	6	ಗುಂಡ್ಲುಪೇಟೆ	
ದಾವಣಗೆರೆ	ದಾವಣಗೆರೆ	7	ಕೆನೆಬಿಳಚಿ	
ಕೊಪ್ಪಳ	ಯಲ್ಬುರ್ಗಾ	8	ಕುಕನೂರು	ಟೆಂಡರ್
	ಯಲ್ಬುರ್ಗಾ	9	ಕುಕನೂರು	ಪ್ರಕ್ರಿಯೆ
	ಗಂಗಾವತಿ	10	ಹಿರೇಬೆಣಕಲ್	ಅಂತಿಮ ಹಂತದಲ್ಲಿದೆ
	ಬೆಂಗಳೂರು	11		ಸದರಿ
	ಗ್ರಾಮಾಂತರ	12		ವಸತಿ

	ಬಾಗಲಕೋಟೆ	13		ನಿಯಮ
	ಬೀದರ್	14		ಗಳು
	ಚಿತ್ರದುರ್ಗ	15		ಬಾಡಿಗೆ
	ಧಾರವಾಡ	16		ಕಟ್ಟಡದಲ್ಲಿ
	ಗದಗ್	17		ಪ್ರಾರಂಭಿಸ
	ಗುಲ್ಬರ್ಗ	18		ಲಾಗಿದೆ
	ಕೋಲಾರ	19		ಈ ವಸತಿ
	ಮೈಸೂರು	20		ನಿಲಯಗಳಿಗೆ
	ರಾಯಚೂರು	21		ಸ್ವಂತ ಕಟ್ಟಡ
	ರಾಯಚೂರು	22		ಕಟ್ಟಲು ಕ್ರಮ
	ಮಾನ್ವಿ	23		ಕೈಗೊಳ್ಳಲಾ
	ಉತ್ತರ ಕನ್ನಡ	24		ಗುತ್ತಿದೆ

ಇ) ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಪ್ರವೇಶ ಪಡೆದಿರುವ ಮಕ್ಕಳ ಸಂಖ್ಯೆ 3072 ಇರುತ್ತದೆ (ಶಾಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ರವರ ಪ್ರಶ್ನೆ ಸಂಖ್ಯೆ 1005ಕ್ಕೆ ಅನುಬಂಧ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಸ್ಥಳ	2007-08ನೇ ಸಾಲಿನಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ
1	ಬೆಂಗಳೂರು ನಗರ	ಬೆಂಗಳೂರು (ಉ)	ಬೆಂಗಳೂರು (ಉ)	ಪ್ರಾರಂಬಿಸಲು ಕ್ರಮವಹಿಸಲಾಗಿದೆ
2	ಬೆಂಗಳೂರು (ಗ್ರಾ)	ಮಾಗಡಿ	ಮಾಗಡಿ	53
3	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	54
4	ಕೋಲಾರ	ಕೋಲಾರ	ಕೋಲಾರ	87
5	ಶಿವಮೊಗ್ಗ	ಶಿವಮೊಗ್ಗ	ಮೇಲಿನಹನಸವಾಡಿ	176
6	ತುಮಕೂರು	ಶಿರಾ	ಶಿರಾ	ಪ್ರಾರಂಬಿಸಲು ಕ್ರಮವಹಿಸಲಾಗಿದೆ
7	ದಾವಣಗೆರೆ	ದಾವಣಗೆರೆ	ಕೆರೆಬಿಳಚಿ	98
8	ದಾವಣಗೆರೆ	ಹರಿಹರ	ಹರಿಹರ	80
9	ದಾವಣಗೆರೆ	ದಾವಣಗೆರೆ	ದಾವಣಗೆರೆ	ಪ್ರಾರಂಬಿಸಲು ಕ್ರಮವಹಿಸಲಾಗಿದೆ
10	ಮೈಸೂರು	ಮೈಸೂರು	ಮೈಸೂರು	44
11	ಚಿಕ್ಕಮಗಳೂರು	ಚಿಕ್ಕಮಗಳೂರು	ಚಿಕ್ಕಮಗಳೂರು	150
12	ದಕ್ಷಿಣ ಕನ್ನಡ	ಮಂಗಳೂರು	ಉಳ್ಳಾಲ	ಪ್ರಾರಂಬಿಸಲು ಕ್ರಮವಹಿಸಲಾಗಿದೆ

13	ಹಾಸನ	ಹಾಸನ	ಹಾಸನ	93
14	ಹಾಸನ	ಹೊಳೆನರಸೀಮರ	ಹೊಳೆನರಸೀಪುರ	100
15	ಮಂಡ್ಯ	ನಾಗಮಂಗಲ	ನಾಗಮಂಗಲ	ಪ್ರಾರಂಭಿಸಲು ಕ್ರಮವಹಿಸಲಾಗಿದೆ
16	ಚಾಮರಾಜನಗರ	ಗುಂಡ್ಲುಪೇಟೆ	ಗುಂಡ್ಲುಪೇಟೆ	46
17	ಉಡುಪಿ	ಉಡುಪಿ	ಬ್ರಹ್ಮಾವರ	ಪ್ರಾರಂಭಿಸಲು ಕ್ರಮವಹಿಸಲಾಗಿದೆ
18	ಕೊಡಗು	ವಿರಾಜಪೇಟೆ	ವಿರಾಜಪೇಟೆ	ಪ್ರಾರಂಭಿಸಲು ಕ್ರಮವಹಿಸಲಾಗಿದೆ
19	ಬೆಳಗಾಂ	ಬೈಲಹೊಂಗಲ	ಹುಲಿಕಟ್ಟೆ (ಶ್ರೀನಗರ)	220
20	ಬಿಜಾಮರ	ಬಿಜಾಮರ	ಬಿಜಾಪುರ	ಪ್ರಾರಂಭಿಸಲು ಕ್ರಮವಹಿಸಲಾಗಿದೆ
21	ಧಾರವಾಡ	ಹುಬ್ಬಳ್ಳಿ	ಹುಬ್ಬಳ್ಳಿ	186
22	ಧಾರವಾಡ	ಹುಬ್ಬಳ್ಳಿ	ಹುಬ್ಬಳ್ಳಿ	99
23	ಉತ್ತರ ಕನ್ನಡ	ಹಳಿಯಾಳ	ದಾಂಡೇಲಿ	40
24	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟೆ	80
25	ಗದಗ	ಗದಗ	ಗದಗ	89
26	ಹಾವೇರಿ	ಹಾವೇರಿ	ಹಾವೇರಿ	70
27	ಗುಲ್ಬರ್ಗಾ	ಜೇವರ್ಗಿ	ಜೇವರ್ಗಿ	146
28	ಬಳ್ಳಾರಿ	ಬಳ್ಳಾರಿ	ಕೊಳಗಲ್ಲು	210
29	ಬೀದರ್	ಬೀದರ್	ಬೊಮ್ಮಳಗಿ	150
30	ಬೀದರ್	ರಾಯಚೂರು	ರಾಯಚೂರು	100
31	ರಾಯಚೂರು	ಮಾನ್ವಿ	ಮಾನ್ವಿ	150
32	ರಾಯಚೂರು	ರಾಯಚೂರು	ಗಿಲ್ಲೇಸಗೂರು	100
33	ಕೊಪ್ಪಳ	ಕೊಪ್ಪಳ	ಕೊಪ್ಪಳ	130
34	ಕೊಪ್ಪಳ	ಯಲಬುರ್ಗಾ	ಕುಕನೂರು	140
35	ಕೊಪ್ಪಳ	ಗಂಗಾವತಿ	ಗಂಗಾವತಿ	99
36	ಕೊಪ್ಪಳ	ಯಲಬುರ್ಗಾ	ತಳಕಲ್	82
		ಒಟ್ಟು		3072
37	ಬಿಜಾಮರ	ಇಂಡಿ	ಚಡಚಣ	ಷರಾ ಸರ್ಕಾರಿ ಆದೇಶ ನಂ ಸಕಇ 105 ಅಸಂಯೋ 2007 ದಿ 30–6–2007 ರಂದು ಮಂಜೂರಾಗಿದ್ದು ಈ ಶಾಲೆಗಳನ್ನು ಪ್ರಾರಂಬಿಸಲು ಪ್ರತ್ಯೇಕ ಕ್ರಮ ಕೈಗೊಳ್ಳಲಾಗುತ್ತಿದೆ
38	ಮೈಸೂರು	ಪಿರಿಯಾ ಪಟ್ಟಣ	ಹಲಗನಹಳ್ಳಿ	
39	ಗುಲ್ಬರ್ಗಾ	ಚಿತ್ತಾಮರ	ದಂಡೋತಿ	
40	ಕೋಲಾರ	ಮುಳಬಾಗಿಲು	ಮುಳಬಾಗಿಲು	
41	ತುಮಕೂರು	ಕುಣಿಗಲ್	ಕುಣಿಗಲ್	
42	ಬೆಂಗಳೂರು (ಗ್ರಾ)	ಚನ್ನಪಟ್ಟಣ	ಚನ್ನಪಟ್ಟಣ	
43	ಹಾಸನ	ಅರಕಲಗೂಡು	ಅರಕಲಗೂಡು	

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಆದರೆ, ನನಗೆ ಬಹಳ ಖೇದ ಏನೆಂದರೆ ಇಡೀ ರಾಜ್ಯದ ಮೊರಾರ್ಜಿ ಶಾಲೆಯಲ್ಲಿ 3070 ಬಾಲಕರ ಸಂಖ್ಯೆ ಇದೆ

ಈ ಶಾಲೆಗಳಲ್ಲಿ ವಿಶೇಷವಾಗಿ ದಾಂಡೇಲಿ ಶಾಲೆಯಲ್ಲಿ 10 ಹುಡುಗರಿದ್ದಾರೆ, ಮತ್ತೊಂದು ಕಡೆ 11 ಮಕ್ಕಳು ಇದ್ದಾರೆ ಈ ರೀತಿ ಒಂದೊಂದು ಶಾಲೆಯಲ್ಲಿ 10–11 ಹುಡುಗರು ಇರಲು ಕಾರಣವೇನು ? ಅಲ್ಲಿ ಯಾವುದೇ ಸೌಲಭ್ಯವನ್ನು ಒದಗಿಸಿಲ್ಲವೆಂದು ನನಗನ್ನಿಸುತ್ತದೆ ಇದಕ್ಕೆ ಯಾರು ಜವಾಬ್ದಾರರು ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು ಮೊರಾರ್ಜಿ ದೇಸಾಯಿ ಶಾಲೆಗೆ 5ನೇ ತರಗತಿ ಪಾಸ್ ಆದ ಮೇಲೆ ಪ್ರವೇಶ ಕೊಡತ್ತಾರೆ ನನ್ನ ಅಭಿಪ್ರಾಯದ ಪ್ರಕಾರ ಬಡ ಮಕ್ಕಳು 5ನೇ ತರಗತಿಯವರೆಗೆ ಬರುವುದರೊಳಗೇ drop out ಆಗಿಬಿಡುತ್ತಾರೆ ಆದ್ದರಿಂದ 5ನೇ ತರಗತಿಗೆ ಪ್ರವೇಶ ಕೊಡುವ ಬದಲು 3ನೇ ತರಗತಿಯಿಂದ ಪ್ರಾರಂಬಿಸಿದರೆ ಈ ಸಂಖ್ಯೆಯನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯತೆ ಇದೆಯೆಂದು ಭಾವಿಸುತ್ತೇನೆ ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಅದೇ ಪ್ರಕಾರ ಈಗ ಮೊರಾರ್ಜಿ ಶಾಲೆ ವಿಶೇಷವಾಗಿ ಅಲ್ಪಸಂಖ್ಯಾತರ ಸಲುವಾಗಿಯೇ ಇದೆ ಅಲ್ಲಿ ಕನ್ನಡ ಮಾಧ್ಯಮದಲ್ಲಿ ನಡೆಯುತ್ತಿತ್ತು ಅಲ್ಪಸಂಖ್ಯಾತರಾದ ಕೆಲವರು ಉರ್ದು ಮಾಧ್ಯಮದಲ್ಲಿ ಶಾಲೆಯಲ್ಲಿ ಕಲಿಯುತ್ತಾರೆ 5ನೇ ತರಗತಿಯಿಂದ ಪಾಸಾಗಿ ಅಲ್ಲಿ ಕನ್ನಡ ಮಾಧ್ಯಮ ಬಂದರೆ ಅವರಿಗೆ pick up ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ, ಕನ್ನಡ ಮತ್ತು ಉರ್ದು ಎರಡೂ ಮಾಧ್ಯಮವನ್ನು ಪ್ರಾರಂಭಿಸಿದರೆ ಆ ಸಂಖ್ಯೆಯನ್ನು ಗಳಿಸಲಿಕ್ಕೆ ಸಾಧ್ಯವಾಗುತ್ತದೆ ಕರ್ನಾಟಕ ರಾಜ್ಯದೊಳಗೆ ಎಲ್ಲಾ ಅಲ್ಪಸಂಖ್ಯಾತರ ಜನಸಂಖ್ಯೆಯ ಪ್ರಕಾರ ನಾವು 15 ರಿಂದ 16% ಇದ್ದರೆ ಇಲ್ಲಿ ಕೇವಲ 22 ಮೊರಾರ್ಜಿ ಶಾಲೆ ಇರುವುದೆಂದರೆ ಬೇರೆ percentage ಪ್ರಕಾರ ಬೇರೆ ಹಿಂದುಳಿದ ಸಮಾಜಕ್ಕಾಗಲಿ, 1700,2000 ಎಸ್ ಸಿ ಎಸ್ ಟಿ ಗೆ ಈ ತರಹ ಹಾಸ್ಟೆಲ್ ಇರುವುದರಿಂದ ಇರುವ 22 ಮೋರಾರ್ಜಿ ಶಾಲೆಗಳಿಗೂ ಸಹ ಸ್ವಂತ ಕಟ್ಟಡವಿಲ್ಲ, ಅಲ್ಲಿ ಸ್ವಂತ ಹಾಸ್ಟೆಲ್ ಇಲ್ಲ ಅಲ್ಲಿ ಎಲ್ಲಾ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ ಹುಬ್ಬಳ್ಳಿಯಲ್ಲಿ ಎರಡು ಶಾಲೆಗಳನ್ನು ಕೊಟ್ಟಿದ್ದರೂ ಸಹ ಸ್ವಂತ ಕಟ್ಟಡವಿಲ್ಲ ಈ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕೆಂದು ಕೋರುತ್ತೇನೆ

ಶ್ರೀ ಇಕ್ಬಾಲ್ ಅನ್ಸಾರಿ – ಸುಮಾರು 43 ಮೊರಾರ್ಜಿ ಶಾಲೆಗಳು ಇಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತವೆ ಅದರಲ್ಲಿ, ತಾವು ಹೇಳಿದ ಪ್ರಕಾರ ಒಂದೂಂದು ಶಾಲೆಯಲ್ಲಿ 10 ಹುಡುಗರು ಇದ್ದಾರೆಂಬುದು ನಿಜ ಏಕೆಂದರೆ, ರಾಜ್ಯಸರ್ಕಾರ ಅಲ್ಪಸಂಖ್ಯಾತರಿಗೆ ವಿಶೇಷವಾಗಿ ಮೊರಾರ್ಜಿ ವಸತಿ ಶಾಲೆಯನ್ನು ಕಲ್ಪಿಸಿಕೂಟ್ಟರೆ ಹೆಚ್ಚಿನ drop out ಆಗುವುದರಿಂದ ಅನುಕೂಲ ಆಗುತ್ತದೆಂದು ಮಾಡಲಾಗಿದೆ ಸ್ಥಳೀಯರು ಸಹ ಜನರಿಗೆ ಮನವರಿಕೆ ಮಾಡುವ ಕೆಲಸವನ್ನು ಸಹ

ಮಾಡಬೇಕಾಗುತ್ತದೆ ಕೆಲವರಿಗೆ ಇದರ ಬಗ್ಗೆ ಅರಿವು, ಜಾಗೃತಿ ಇಲ್ಲದೇ ಈ ಸಂಖ್ಯೆ ಕಡಿಮೆಯಾಗಿದೆ ಕ್ರಮೇಣವಾಗಿ ನಾವು ಅದನ್ನು ಹೆಚ್ಚಿಸಬೇಕಾಗಿದೆ ಅದರ ಕಡೆಗೆ ನಾವು ಲಕ್ಷ್ಯವನ್ನು ಕೊಡಬೇಕಾಗಿದೆ ಎರಡನೆಯದಾಗಿ, ಕನ್ನಡ, ಉರ್ದು, ಆಂಗ್ಲ ಮಾಧ್ಯಮ ಸಹ ಇರಬೇಕೆಂದು ತಾವು ಕೇಳಿದ್ದೀರಿ ಈಗಾಗಲೇ ನಾವು ಆಂಗ್ಲ ಮಾಧ್ಯಮವನ್ನು ಹೊಸದಾಗಿ ತೆಗೆದಿದ್ದೇವೆ ಅದರಲ್ಲಿ ಆಂಗ್ಲ ಮಾಧ್ಯಮವೆಂದು ಹೇಳಿದರೂ ಕೂಡ first language Kannada ಇದೆ, options ನಲ್ಲಿ ನಿಮಗೆ ಉರ್ದು or Hindi ಎಂದು ಇರುತ್ತದೆ Other subjects ನ್ನೆಲ್ಲ ನಿಮಗೆ English ನಲ್ಲಿ ಬೋಧಿಸಲಾಗುತ್ತದೆ ಅದರಿಂದೇನೂ ತೊಂದರೆಯಾಗುವುದಿಲ್ಲ ಇದನ್ನು ನೋಡಿಕೊಂಡೇ ನಾವು ಆಂಗ್ಲ ಮಾಧ್ಯಮವೆಂದು ತೆಗೆದಿದ್ದೇವೆಂದು ಭಾವಿಸುತ್ತೇನೆ ಇನ್ನು ತಾವು ಹೇಳಿದ ಪ್ರಕಾರ 2005-06ನೇ ಸಾಲಿನವರೆಗೆ 22 ವಸತಿ ಶಾಲೆಗಳಿದ್ದು, ಅವುಗಳಲ್ಲಿ ಕೆಲವೊಂದು ಕಡೆ ನಾವು ಸ್ವಂತ ಕಟ್ಟಡವನ್ನು ಪ್ರಾರಂಭಿಸಿದ್ದೇವೆ, ಇನ್ನು ಕಲವು ಕಡೆ ಪ್ರಾರಂಭಿಸಿಲ್ಲ ಅದಕ್ಕೆ ಹಣದ ಕೊರತೆ ಏನೂ ಇಲ್ಲ ಆದರೆ, ಜಾಗದ ಕೊರತೆ ಇದೆ ಅದಕ್ಕೆ 10 ಎಕರೆ ಭೂಮಿಯನ್ನು ತಾವು, ಅಲ್ಲಿರುವವರು, ಸರ್ಕಾರಿ ಭೂಮಿಯನ್ನು ನಮಗೆ ಕೊಡಿಸಿದರೆ ಮತ್ತು ನಾವು DC ಗೆ ಸಹ ಪತ್ರ ಬರೆದಿದ್ದೇವೆ, ತಕ್ಷಣ ನಾವು ಅಲ್ಲಿ ಖರೀದಿ ಮಾಡುವ ವ್ಯವಸ್ಥೆಯೂ ಆಗಬೇಕು ಅವರು committeeಯ Chairman ಆಗಿರುತ್ತಾರೆ ಅದನ್ನು ಮಾಡಿ ಇಲ್ಲಿಗೆ ತರಿಸಿದರೆ ನಾವು ತಕ್ಷಣ ಕಬ್ಜಾ ಮಾಡಿಕೊಂಡು ಸರ್ಕಾರದ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಲಿಕ್ಕೆ ಸರ್ಕಾರದಲ್ಲಿ ಹಣ ಇದೆ ಎಂದು ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ – ನಾನು 3ನೇ ತರಗತಿಯಿಂದ ಪ್ರಾರಂಭಿಸಿ ಎಂದು ಕೇಳಿದ್ದೆ 5ನೇ ತರಗತಿಯಿಂದ ಎಂದರೆ ಅವರು 5 ವರ್ಷ ಶಾಲೆ ಕಲಿಯಲಿಕ್ಕೆ ಬಡವರಿಗೆ ಸಾಧ್ಯವಾಗುವುದಿಲ್ಲ 5ನೇ ತರಗತಿಗೆ ಬರುವುದರೊಳಗೆ ಅವರು drop ಆಗುತ್ತಾರೆ ಆದ್ದರಿಂದ, 3ನೇ ತರಗತಿಯಿಂದ ಪ್ರಾರಂಭಿಸಬೇಕು ಇನ್ನು, ಕೇವಲ ಸರ್ಕಾರದ ಶಾಲೆಯಲ್ಲದೇ ಕನ್ನಡ ಮಾಧ್ಯಮವಲ್ಲದೇ ಉರ್ದು ಮಾಧ್ಯಮವನ್ನೂ ಪ್ರಾರಂಭಿಸಿದರೆ, ಅವರಿಗೆ ಕಲಿಯಲು ಸರಳವಾಗುತ್ತದೆ ಇಲ್ಲವಾದರೆ, ಅವರು 5ನೇ ತರಗತಿವರೆಗೆ ಉರ್ದು ಮಾಧ್ಯಮದಲ್ಲಿ ಕಲಿತು 6ನೇ ತರಗತಿಯಿಂದ ಕನ್ನಡ ಕಲಿಯಿರಿ ಎಂದರೆ ಬಾಲಕರಿಗೆ ಸಾಧ್ಯವಾಗುವುದಿಲ್ಲ ಮಾತೃ ಭಾಷೆಯಲ್ಲಿ ಕಲಿಸಬೇಕೆಂದು ನೀವೇ ಹೇಳುತ್ತೀರಿ ಈಗ ಮಾತೃ ಬಾಷೆ ಬಿಟ್ಟು ಬೇರೆ ಮಾಧ್ಯಮದಲ್ಲಿ ಕಲಿಯಿರಿ ಎಂದರೆ ಅವರಿಗೆ ಸಾಧ್ಯವಾಗುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ ಕೇವಲ 22 ಮೊರಾರ್ಜಿ ವಸತಿ ಶಾಲೆಗಳಿವೆ ಅವುಗಳೂ ಪೂರ್ಣವಾಗುವುದಿಲ್ಲವೆಂದರೆ ಹೇಗೆ ? ಜಾಗವಿದೆ ಎಂದು ಹೇಳಿದರೆ ಸರ್ಕಾರದವರು ಅದನ್ನು ತೆಗೆದುಕೊಳ್ಳಬೇಕು ಸಾಮಾನ್ಯವಾಗಿ ನಮ್ಮ ಖಾಸಗಿ ವಿಷಯದಲ್ಲಿ ನಾವು ಜಾಗ ನೋಡಬಹುದು ಆದರೆ, ಬೇರೆ

ಖಾಸಗಿ ವಿಷಯದಲ್ಲಿ ಅಲ್ಲಿ ಜಾಗ ತೆಗೆದುಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದ್ದು ಅದನ್ನು ಸರ್ಕಾರ ತೆಗೆದುಕೊಳ್ಳಬೇಕು 22 ಮೊರಾರ್ಜಿ ಶಾಲೆಗಳನ್ನು ಕಟ್ಟುವುದಿಲ್ಲ ಮತ್ತು ಅದಕ್ಕೆ ವಸತಿಯನ್ನೂ ಪೂರೈಸುವುದಿಲ್ಲವೆಂದರೆ ಬಹಳ ಅನ್ಯಾಯವಾಗುತ್ತದೆ ಬೇರೆ ಸಮಾಜದ ಪ್ರಕಾರ 1700 ಶಾಲೆಗಳು, ಎರಡೆರಡು ಸಾವಿರ ಹಾಸ್ಟಲ್‌ಗಳಿವೆ 22 ಶಾಲೆಗಳನ್ನೂ ನೀವು ಕಟ್ಟುವುದಕ್ಕಾಗುವುದಿಲ್ಲವೆಂದರೆ ಸರ್ಕಾರ ಏನು ಅಲ್ಪ ಸಂಖ್ಯಾತರ Ministry ಎಂದೇನು ಮಾಡಿದೆ, ಅದಕ್ಕೆ ಶೋಭೆ ಬರುವುದಿಲ್ಲವೆಂದು ನಾನು ಭಾವಿಸುತ್ತೇನೆ

ಶ್ರೀ ಬಸವರಾಜ ರಾಯರೆಡ್ಡಿ .- ಮಾನ್ಯ ಸಚಿವರು 7 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಈ ವರ್ಷ ಮಂಜೂರಾತಿ ಮಾಡಿಕೊಟ್ಟಿದೆ ಇದರಲ್ಲಿ ಗುಲ್ಬರ್ಗಾ ಮತ್ತು ಬಿಜಾಪುರ ಬಿಟ್ಟರೆ ಉಳಿದದ್ದನ್ನೆಲ್ಲ ನೀವು ಹಳೆ ಮೈಸೂರು ಕಡೆಗೆ ಕೊಟ್ಟಿದ್ದೀರಿ ಆಯಿತು ನೀವು ಎಲ್ಲಿಯಾದರೂ ಕೊಟ್ಟುಕೊಳ್ಳಿ ಆದರೆ, ಅತ್ಯಂತ ಹಿಂದುಳಿದ ಜಿಲ್ಲೆಗಳಾವುವುವೆಂದರೆ, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ ಮತ್ತು ಬಾಗಲಕೋಟೆ, ಚಾಮರಾಜನಗರ, ಇಲ್ಲಿ 39 ತಾಲ್ಲೂಕುಗಳು ಏನು ಅತ್ಯಂತ ಹಿಂದುಳಿದಿವೆ, ಅವುಗಳ ಪೈಕಿ 33 ತಾಲ್ಲೂಕುಗಳು ಇದರಲ್ಲಿಯೇ ಬರುತ್ತವೆ ಒಂದೂ ಕೂಡ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ಶಾಲೆಯನ್ನು ಇಲ್ಲಿಗೆ ಕೊಟ್ಟಿಲ್ಲ ಜೊತೆಗೆ, ಅಲ್ಪ ಸಂಖ್ಯಾತರು ಎಂದರೆ ಯಾರು ? ಮುಸ್ಲಿಮರು, ಕ್ರಿಶ್ಚಿಯನ್ ಮತ್ತು ಜೈನರು, ಬೌದ್ಧರು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಮುಸ್ಲಿಮರು ಇರುವಂಥ ಜಿಲ್ಲೆಗಳೆಂದರೆ, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಿಜಾಪುರ, ಬಾಗಲಕೋಟೆ, ಧಾರವಾಡ, ಬೆಂಗಳೂರುನಗರ ಬಿಟ್ಟು ಮತ್ತು ಮೈಸೂರು ಬಿಟ್ಟು, ಎಲ್ಲಿ ಅಲ್ಪಸಂಖ್ಯಾತರು ಇದ್ದಾರೆ, ಅಲ್ಲಿಗೆ ನೀವು ಒಂದೂ ಸಹ ಶಾಲೆ ಕೊಟ್ಟಿಲ್ಲ ಅದಕ್ಕೆ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, 7 ಶಾಲೆಗಳು ಸಾಕಾಗುವುದಿಲ್ಲ ಅಲ್ಪಸಂಖ್ಯಾತರ ಜನಾಂಗದಲ್ಲಿ 16% ಬರೀ Muslims ಇದ್ದಾರೆ Christians 2% ಇದ್ದಾರೆ ಬೌದ್ಧರು, ಜೈನರು ಸೇರಿದರೆ 17% ಇದ್ದಾರೆ 17% ಜನಸಖ್ಯೆಗೆ ಕೇವಲ 7 ಶಾಲೆಗಳು ಸಾಕಾಗುವುದಿಲ್ಲ ಇನ್ನೂ ಹೆಚ್ಚಿನ ಶಾಲೆಗಳಿಗೆ ಮಂಜೂರಾತಿಯನ್ನು ಮಾಡಬೇಕು ಮತ್ತು ಈಗಾಗಲೇ ನಾನು ಹೇಳಿದ ಹಾಗೆ ನಂಜುಂಡಪ್ಪ ವರದಿಯ ಪ್ರಕಾರ ಅತ್ಯಂತ ಹಿಂದುಳಿದ 7 ಜಿಲ್ಲೆಗಳಿಗೆ ಮಾನ್ಯ ಸಚಿವರು ಇದೇ ವರ್ಷ ಮಾಡಿಕೊಡುತ್ತಾರೆಯೇ ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕು

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) – ನಾನು ಕೇಳುತ್ತಿರುವುದೇನೆಂದರೆ, ಇದಕ್ಕೆ ಮಾನದಂಡವೇನು ? What is the parameters for this? ನೀವು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ? ಮುಸ್ಲಿಂ ಅಲ್ಪಸಂಖ್ಯಾತರ ಜನಸಂಖ್ಯೆ ಆಧಾರದ

ಮೇಲೆ ಕೊಟ್ಟಿದ್ದೀರೋ ಅಥವಾ ನಿಮ್ಮ ವಿವೇಚನೆ ಎಂದು ಹೇಳಿಕೊಡುತ್ತೀರೊ ? ಏಕೆ ಈ ಪ್ರಶ್ನೆ ಕೇಳುತ್ತೇನೆಂದರೆ, ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಅದು ತಾಳಿಕೋಟೆ ಭಾಗದಲ್ಲಿ ಸುಮಾರು 20 ಸಾವಿರ ಅಲ್ಪಸಂಖ್ಯಾತ ಜನರು ಇದ್ದರೂ ಇವತ್ತಿಗೂ ಅಲ್ಲಿ ಒಂದು ಮೊರಾರ್ಜಿ ದೇಸಾಯಿ ಶಾಲೆಯನ್ನು ಪ್ರಾರಂಭಿಸಲಿಕ್ಕೆ ಆಗಿಲ್ಲ ನಾನು ಕೂಡ ಪತ್ರವನ್ನು ಕೊಟ್ಟಿದ್ದೆ ನಾನು ಕೂಡ ಪ್ರತಿ ಇಲಾಖೆಗೂ ಹೋಗಿ ಕೇಳಿಕೊಂಡಿದ್ದೆ ಹಾಗೂ ತಮ್ಮನ್ನು ಕೂಡ ಭೇಟಿ ಮಾಡಿ ಕೇಳಿಕೊಂಡಿದ್ದೆ ಆದರೆ ದುರ್ದೈವದಿಂದ ಬಂದಿಲ್ಲ ಇದಕ್ಕೇನು ಪ್ಯಾರಾಮೀಟರ್ಸ್ ? ಇದಕ್ಕೆ ಉತ್ತರ ಬೇಕಲ್ಲವೆ ? ಜನ ನಮ್ಮನ್ನು ಕೇಳುತ್ತಾರೆ ಆಮೇಲೆ ಇವರು ಉತ್ತರಗಳನ್ನು ಕೊಡುತ್ತಾರೆ ಹೋದ ಅಸೆಂಬ್ಲಿಯಲ್ಲಿ ಕೆಲವು ಕಮಿಟ್‌ಮೆಂಟ್ಸ್‌ನ್ನು ಮಾಡುತ್ತಾರೆ ಇಲ್ಲಿ ಕೆಲವು ಆಶ್ವಾಸನೆ ಕೊಡುತ್ತಾರೆ, ಆದರೆ ಉತ್ತರ ಕೊಡುವಾಗ ಇದು ನಿರಂತರ ಪ್ರಕ್ರಿಯೆ ಎಂದು ಮತ್ತೊಂದರಲ್ಲಿ ಉತ್ತರ ಕೊಡುತ್ತಾರೆ ಇದೇನು ಅರ್ಥವಾಗುತ್ತಿಲ್ಲ ಸಮರ್ಪಕವಾದ ಉತ್ತರವೇ ಬರುವುದಿಲ್ಲ ಅದಕ್ಕೆ ಇದರ ಬಗ್ಗೆ ನೀವು ಹೆಚ್ಚಿನ ಗಮನ ಕೊಡಬೇಕಾಗುತ್ತದೆ ಈದು ಪಕ್ಷಾತೀತವಾಗಿ ಎಂದು ಹೇಳುವುದು ಬೇರೆ ಆದರೆ, ಎಲ್ಲಾ ಪಕ್ಷದ ಆಧಾರದ ಮೇರೆಯೇ ಇವತ್ತುನಡೆಯುತ್ತಿರುವುದು

ಶ್ರೀ ಇಕ್ಬಾಲ್ ಅನ್ಸಾರಿ – ಜಬ್ಬಾರ್ ಖಾನ್ ಹೊನ್ನಾಳಿಯವರು ಕೇಳಿದ ಪ್ರಶ್ನೆಯ ಪ್ರಕಾರ ಉರ್ದು ಮಾಧ್ಯಮದಲ್ಲಿ ಪ್ರಾರಂಭಿಸಬೇಕೆಂದು ಹೇಳಿದ್ದಾರೆ ಇದು ಭಾಷಾ ನೀತಿಯಡಿಯಲ್ಲಿ ಬರುವುದರಿಂದ, ನಮ್ಮ ರಾಜ್ಯದ ಭಾಷೆ ಕನ್ನಡ ಭಾಷೆ ನಾವು ನಮ್ಮ ಭಾಷೆಗೆ ಪ್ರಾಮುಖ್ಯತೆಯನ್ನು ಕೊಡಬೇಕಾಗುತ್ತದೆ First language Kannada, second language English, ಉರ್ದು ಅವರ ಮಾತೃ ಭಾಷೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ ಆಂಗ್ಲ ಮಾಧ್ಯಮ ಏಕೆ ಮಾಡಿದ್ದೇವೆಂದರೆ, ಕೇವಲ ಉರ್ದುನಲ್ಲಿ ಹುಡುಗರು ಓದಿದರೆ ಕಷ್ಟವಾಗುತ್ತದೆ ತಾವು ಹೇಳಿದ್ದು ನಾನು ಅರ್ಥಮಾಡಿಕೊಂಡೆ, 3,4,5,ನೇ ತರಗತಿಯಿಂದ ಉರ್ದು ಓದಿಕೊಂಡಿರುವ ಮಕ್ಕಳು ನಂತರ ಆಂಗ್ಲ ಮಾಧ್ಯಮದಲ್ಲಿ ಸೇರಿಕೊಂಡಾಗ ಅವರಿಗೆ ಕಷ್ಟವಾಗುತ್ತದೆ ಆದರೆ ಆ ಕಷ್ಟಕ್ಕಿಂತ ಅವರು ಬೆಳೆದು ಮುಂದೆ ಅವರೇನು ಡಿಗ್ರಿ ಮುಗಿಸುತ್ತಾರೆ, ನಂತರ ಅವರಿಗೇನು ಸೌಲಭ್ಯಗಳು ಸಿಗುತ್ತವೆ, ನೌಕರಿ ಸಿಗುವುದಕ್ಕೆ ಅನುಕೂಲತೆಯಾಗುತ್ತದೆ, ಎಲ್ಲಿಯಾದರೂ ಜೀವನ ಮಾಡಲಿಕ್ಕೆ ಸೌಲಭ್ಯ ಸಿಗುತ್ತದೆ ಆ ದೃಷ್ಟಿಯಿಟ್ಟುಕೊಂಡು ಸರ್ಕಾರ ಮಾಡಿರುತ್ತದೆ ಉರ್ದು ಮಾಧ್ಯಮದಲ್ಲಿಯೇ ನಾವು ಮಾಡಿದರೆ ಪ್ರತ್ಯೇಕವಾಗಿ ಅವರು ಉರ್ದುಭಾಷೆಯಲ್ಲಿ ಓದಿ ಡಿಗ್ರಿ ತೆಗೆದುಕೊಂಡರೆ ಅಲ್ಲಿ ಸಮಸ್ಯೆ ಉಂಟಾಗುತ್ತದೆ ನಾಳೆ ಅವರಿಗೆ ಜೀವನ ಮಾಡಲಿಕ್ಕೆ ಕೂಡ ಕಷ್ಟವಾಗುತ್ತದೆ ಅದಕ್ಕಾಗಿ ಬೇರೆ ಭಾಷೆಯಲ್ಲಿ ಅವರು ಓದಿಕೊಂಡು ತಮ್ಮ ವಿಧ್ಯಾಭ್ಯಾಸವನ್ನು ಮುಗಿಸಿಕೊಂಡು ಜೀವನ ನಡೆಸುವುದಕ್ಕೆ ಅನುಕೂಲವಾಗುತ್ತದೆ ಅದಕ್ಕೆ ಪ್ರಥಮ ಕನ್ನಡ ಭಾಷೆಯಲ್ಲಿ ಅವರಿಗೆ ಬೋಧನೆ

ಕೊಡಬೇಕಾಗಿದೆ ಎರಡನೆಯದಾಗಿ ಮಾತೃ ಭಾಷೆ option ಇರುತ್ತದೆ, ಅದರ ಜೊತೆಯಲ್ಲಿ ನಮ್ಮ ರಾಷ್ಟ್ರಭಾಷೆ ಇರುತ್ತದೆ ಅದರ ಜೊತೆಯಲ್ಲಿ ಇಂಗ್ಲೀಷ್ ಭಾಷೆ ಇರುತ್ತದೆ ನಾವು ಇಡೀ ರಾಜ್ಯದ ಅಲ್ಪ ಸಂಖ್ಯಾತ ಜನಾಂಗದ ವಿದ್ಯಾರ್ಥಿಗಳಿಗೆ ಮುಂದೆ ಅನುಕೂಲವಾಗುವ ದೃಷ್ಟಿಯಿಂದ ಈ ರೀತಿಯ policy decision ಅನ್ನು ತೆಗೆದುಕೊಂಡಿರುತ್ತೇವೆ ತಾವು ಹೇಳಿದ ಪ್ರಕಾರ ಹುಡುಗರು 3ನೇ ತರಗತಿ drop out ಆಗುತ್ತಾರೆ, ಇದನ್ನು 5ನೇ ತರಗತಿಯವರೆಗೆ ವಿಸ್ತರಿಸಬೇಕೆಂದು ಹೇಳಿದ್ದಾರೆ, ನಾವು ಇದನ್ನು ಪರಿಶೀಲಿಸುತ್ತೇವೆ ಏಕೆಂದರೆ, ಇದೊಂದು Policy decision, ಮಾನ್ಯ ಸದಸ್ಯರಾದ ರಾಯರೆಡ್ಡಿಯವರು ಹೇಳಿದ ಪ್ರಕಾರ, ಇದು ನಂಜುಂಡಪ್ಪನವರ ವರದಿಯಾಧಾರದ ಪ್ರಕಾರ ಇದೆಯೆ ಎಂದು ಕೇಳಿದರು ನಂಜುಂಡಪ್ಪನವರ ವರದಿಯಾಧಾರದ ಪ್ರಕಾರ ಮಾಡಲಾಗುತ್ತದೆ ಅಲ್ಪಸಂಖ್ಯಾತರು ಎಲ್ಲಿ ಇದ್ದಾರೆ, ಅದನ್ನು ನೋಡಿ ಮಾಡಬೇಕಾಗುತ್ತದೆ ಮತ್ತು ಹಣಕಾಸಿನ ಇಲಾಖೆಯಿಂದ ವರ್ಷಕ್ಕೆ 6,7,8, ಈ ರೀತಿ ಕೊಡುವುದರಿಂದ, ಏನಾಗುತ್ತದೆ, ಅದರಲ್ಲಿ ರಾಜಕೀಯ ಇರುತ್ತದೆ, ಒತ್ತಡ ಇರುತ್ತದೆ, ಇದು ಎಲ್ಲಾ ತಮಗೆ ಹಾಗೂ ನಮಗೂ ಗೊತ್ತಿರುವಂಥ ವಿಷಯವಾಗಿದೆ ಮಾನ್ಯ ರಾಯರೆಡ್ಡಿಯವರ ಪ್ರಕಾರ, ಕೊಪ್ಪಳ ಹಿಂದುಳಿದ ತಾಲ್ಲೂಕುಗಳಲ್ಲಿ ಬರುತ್ತದೆ, ಯಲಬುರ್ಗಾದಲ್ಲಿ ಎರಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಇವೆ ಯಲ್‌ಬುರ್ಗಾ ತಾಲ್ಲೂಕಿನಲ್ಲಿ ಒಂದು ತಳಕಲ್ಲುನಲ್ಲಿದೆ, ಮತ್ತೊಂದು ಕುಕ್ಕನೂರಿನಲ್ಲಿದೆ ಹೀಗಾಗಿ ಕೊಪ್ಪಳ ಜಿಲ್ಲೆಗೆ ನಾಲ್ಕು ವಸತಿ ಶಾಲೆಗಳನ್ನು ಕೊಟ್ಟದ್ದೇವೆ

ಶ್ರೀ ಬಸವರಾಜ್ ಎಸ್ ರಾಯರೆಡ್ಡಿ – ಯಲ್‌ಬುರ್ಗಾ ತಾಲ್ಲೂಕಿನ ಬಗ್ಗೆ ನಾನು ಹೇಳಿಲ್ಲ ನಾನು ಹೇಳಿದ್ದು ಅಲ್ಪಸಂಖ್ಯಾತರ ಜನಸಂಖ್ಯೆ ನಮ್ಮ ರಾಜ್ಯದಲ್ಲಿ ಒಟ್ಟು 17% ಇದೆ ಜೈನ್, ಕ್ರಿಶ್ಚಿಯನ್ ಮತ್ತು ಬೌದ್ಧ ಧರ್ಮದವರು ಸೇರಿ 17% ಇದೆ 14% ಮುಸ್ಲಿಂ ಜನಸಂಖ್ಯೆ ಇದೆ ಒಟ್ಟು17% ಇರುವಂಥ ಅಲ್ಪಸಂಖ್ಯಾತರಿಗೆ ಈ ವರ್ಷ ಕೇವಲ ಏಳು ಕೊಟ್ಟಿದ್ದೀರಿ, ಇದು ಸಾಲದು, ಮತ್ತು ಮುಸ್ಲಿಂ ಜನಾಂಗ ಜಾಸ್ತಿಯಾಗಿ ಎಲ್ಲಿದೆ ಎಂದರೆ, ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಿಜಾಪುರ, ಹುಬ್ಬಳ್ಳಿ–ಧಾರವಾಡ, ಮೈಸೂರು ಮತ್ತು ಬೆಂಗಳೂರು ನಗರ, ಈ ಜಿಲ್ಲೆಗಳಿಗೆ ನೀವು ಪ್ರಾಶಸ್ತ್ಯ ಕೊಟ್ಟಿಲ್ಲ ಅದನ್ನು ನಾನು ಹೇಳಿದ್ದು, ನೀವು ಬೇರೆ ಕಡೆ ಕೊಟ್ಟಿದ್ದಕ್ಕೆ ನನ್ನದು ಆಕ್ಷೇಪವಿಲ್ಲ ಏಳು ಸಾಕಾಗುವುದಿಲ್ಲ ತ್ವರಿತವಾಗಿ ಇನ್ನೊಂದು ಹದಿನೈದು ಮಾಡಿ ಎಂದು ನಿಮ್ಮ ಇಲಾಖೆಗೆ ಹೇಳಿದೆ ಏಕೆ ಹೇಳುತ್ತೇನೆಂದರೆ, ಇಷ್ಟು ದೊಡ್ಡ ಅಲ್ಪಸಂಖ್ಯಾತರ ಜನಸಂಖ್ಯೆ ಇರುವಂಥದ್ದಕ್ಕೆ ಏಳು ಸಾಕಾಗುವುದಿಲ್ಲ ಇದಕ್ಕೆ ಕಾರಣ ಏನು ? ನನಗೆ ಅನ್ನಿಸುತ್ತದೆ, ಯಡಿಯೂರಪ್ಪನವರು ನಿಮ್ಮ ಹಾಗೂ ನಿಮ್ಮ ಇಲಾಖೆಯ ಬಗ್ಗೆ ಸಹಮತವಿಲ್ಲ ಹಾಗಾದರೆ ಅದನ್ನು ಜಾಸ್ತಿ ಮಾಡಿಸಿ

ಉಪಾಧ್ಯಕ್ಷರು . ರಾಯರೆಡ್ಡಿಯವರೆ ಪ್ರಶ್ನೆ ಕೇಳಿ, ಇನ್ನು ಅದಕ್ಕೆಲ್ಲ ಡೈವರ್ಟ್ ಮಾಡಬೇಡಿ ಅವರೇನು ಹೇಳುತ್ತಾರೆ ಮೊದಲು ನೀವು ಕೇಳಿ ನೀವು ಈಗ ಪ್ರಶ್ನೆ ಕೇಳಿದ್ದಿರಲ್ಲಾ ಅವರು ಉತ್ತರ ಹೇಳುತ್ತಾರೆ ಬಿಡಿ ಅವರಿಗೆ ಸಮಸ್ಯೆ ಅರ್ಥವಾಯಿತು

ಶ್ರೀ ಬಸವರಾಜ ಎಸ್ ರಾಯರೆಡ್ಡಿ: ಅವರೇನು ಹಣಕಾಸಿನ ಲಭ್ಯ ಎಷ್ಟು ಇದೆ ಅಷ್ಟು ಮಾಡುತ್ತೇನೆಂದು ಹೇಳಿದರು He is not cooperating with the Minister

ಶ್ರೀ ಅಪ್ಪಾಜಿ ಎಸ್. ನಾಡಗೌಡ· ಅವರು ಅಷ್ಟೆ ಹೇಳಲಿಲ್ಲ, ಇದರಲ್ಲಿ ರಾಜಕೀಯ ಒತ್ತಡ ಇದೆ ಎಂದರು

ಶ್ರೀ ಬಸವರಾಜ್ ಎಸ್ ರಾಯರೆಡ್ಡಿ ನೀವು ಅಲ್ಪಸಂಖ್ಯಾತ ಮಂತ್ರಿಗಳಾಗಿದ್ದೀರಿ, ನೀವು ಅದನ್ನು ಮಾಡಿ ಇಲ್ಲಾಂದ್ರೆ ಮಂತ್ರಿಗಳಾಗಿ ಪ್ರಯೋಜನವಾಗುವುದಿಲ್ಲ

ಶ್ರೀ ಇಕ್ಬಾಲ್ ಅನ್ಸರಿ ತಮ್ಮ ಕಳಕಳಿ ಅರ್ಥವಾಗುತ್ತದೆ

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ . ನನ್ನ ಪ್ರಶ್ನೆ ಏನೆಂದರೆ, ಹಿಂದಿ ಅಥವಾ ಇಂಗ್ಲೀಷ್ ಮತ್ತು ಉರ್ದು ಅವರ ಮಾತೃಭಾಷೆ ಇದ್ದೇ ಇರುತ್ತದೆ ಮೀಡಿಯಂ, ಯಾವ ಮೀಡಿಯಂನಲ್ಲಿ first standard ನಿಂದ ಹುಡುಗರು ಕಲಿಯುತ್ತಾರೆ, ಆ ಮೀಡಿಯಂ ಕಂಟಿನ್ಯೂ ಮಾಡಿದರೆ ನೀವು ಉರ್ದು 5ನೇ ತರಗತಿಯವರೆಗೆ ಪಾಸ್ ಆಗಿ, ಕನ್ನಡ ಮಾಡಿಬಿಟ್ಟರೆ ಕನ್ನಡ ಕಂಪಲ್‌ಸರಿ ಮಾಡಿ, ಆದರೆ ಮೀಡಿಯಂ ಏನು ಇದೆ, ಅದನ್ನು ಮಾತೃಭಾಷೆ ಮಾಡಿದರೆ ಅವರಿಗೆ ಕಲಿಯುವುದಕ್ಕೆ ಸಾಧ್ಯವಾಗುತ್ತದೆ ನಾವು ಕೂಡ ಉರ್ದು ಮೀಡಿಯಂನಲ್ಲಿ ಎಸ್ ಎಸ್ ಎಲ್ ಸಿ ಯವರೆಗೆ ಕಲಿತ ಮೇಲೆ ಇಂಗ್ಲೀಷ್ ಬಂದೇ ಬರುತ್ತದೆ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಎಲ್ಲಿಯೂ ಇಲ್ಲವೇ ಇಲ್ಲ ಯಾರಿಗೂ ಅಷ್ಟು ಯೋಗ್ಯತೆಯೂ ಇಲ್ಲ ಆಂಗ್ಲ ಮಾಧ್ಯಮದವರು ಕಲಿತವರು ಅಲ್ಲಿ ಬರುವುದೇ ಇಲ್ಲ ಆದ್ದರಿಂದ ನಾನು ಹೇಳುವುದು ಏನೆಂದರೆ, ಮೀಡಿಯಂ ಉರ್ದು, ಕನ್ನಡ ಕಂಪಲ್‌ಸರಿ, ಮತ್ತು ಇಂಗ್ಲೀಷ್ ಅಥವಾ ಹಿಂದಿ ಕಂಪಲ್‌ಸರಿ ಮಾಡಿ ಆದರೆ ಮೀಡಿಯಂ ಬಗ್ಗೆ ನಾನು ಹೇಳಿದೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಒಂದು ನಿಮಿಷ

ಉಪಾಧ್ಯಕ್ಷರು · ಇಲ್ಲ ಇಲ್ಲ, ನೀವು ಉತ್ತರ ಕೊಡಿ ಇದನ್ನು ಅರ್ಧಗಂಟೆ ಚರ್ಚೆ ಮಾಡುವುದಕ್ಕಾದರೂ ಇಟ್ಟುಕೊಳ್ಳಿ ಇದು ಬಹಳ ಸೊಗಸಾಗಿರುವ ಪ್ರಶ್ನೆ

ಶ್ರೀ ಪ್ರಕಾಶ್ ಬಿ ಹುಕ್ಕೇರಿ ಈಗಾಗಲೇ ನೀವು 10, 15 ಕೊಟ್ಟಿದ್ದೀರಿ

೨೨ - ೨೦

ಎಲ್ಲಿ ಅಲ್ಪಸಂಖ್ಯಾತರ ಮಕ್ಕಳು ಸಿಕ್ಕುತ್ತಾರೆ, ಅಲ್ಲಿ ಆ ಶಾಲೆಗಳನ್ನು ವರ್ಗಾಯಿಸಿ ನಾವು ಬೇಕಾದರೆ ಬೆಳಗಾವಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಅಲ್ಪಸಂಖ್ಯಾತರ ಮಕ್ಕಳ ಸಂಖ್ಯೆ ಜಾಸ್ತಿ ಇದೆ, ಅದರ ಬಗ್ಗೆ ಮಾಹಿತಿ ಕೊಡುತ್ತೇವೆ ಎಲ್ಲಿ ಮಕ್ಕಳ ಸಂಖ್ಯೆ ಇಲ್ಲ, ಅಲ್ಲಿಗೆ ವರ್ಗಾವಣೆ ಮಾಡಿ ಬೇರೆ ಕಡೆ ಕೊಡುವಂಥ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತೇನೆ

ಶ್ರೀ ಇಕ್ಬಾಲ್ ಅನ್ಸಾರಿ – ಮಾನ್ಯ ಸದಸ್ಯರಾದಂಥ ಪ್ರಕಾಶ್ ಬಿ ಹುಕ್ಕೇರಿಯವರು ಹೇಳಿದರು ಈ ಸಮಸ್ಯೆಗಳು ಯಾವ ರೀತಿ ಬರುತ್ತವೆಂದರೆ, ಎಲ್ಲಿ ಅಲ್ಪಸಂಖ್ಯಾತರ ಸಂಖ್ಯೆ ಸಿಗುತ್ತದೆ, ಅಲ್ಲಿಗೆ ಕೊಡಿ ಎಂದು ಹೇಳುತ್ತಾರೆ ಅದರ ಪ್ರಕಾರವೂ ಕೊಡಬೇಕಾಗುತ್ತದೆ ಎಲ್ಲಿ ಹಿಂದುಳಿದ ವರ್ಗ ನಂಜುಂಡಪ್ಪ ವರದಿಯ ಪ್ರಕಾರ ಇದೆ, ಅಲ್ಲಿಯೂ ನಾವು ನೋಡಬೇಕಾಗುತ್ತದೆ ಇಂಥ ಸಮಸ್ಯೆಗಳು ಏನು ಬರುತ್ತವೆ, ಅದರ ಆಧಾರದ ಮೇಲೆಯಾದರೂ ಸಹಿತ ವರ್ಷದಲ್ಲಿ ಏಳು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನೀಡುತ್ತೇವೆ ಒಂದು ನಿಮಿಷ, ನಾನು ರಾಯರೆಡ್ಡಿ ಹೇಳಿದ ಪ್ರಕಾರ ಕೊಪ್ಪಳಕ್ಕೆ ಕೇಳಿದ್ದಾರೆಂದರಲ್ಲ ಏಕೆಂದರೆ, ರಾಜ್ಯದ ಬಗ್ಗೆ ಅವರು ಕೇಳಿರುವುದು ನನಗೆ ಅರ್ಥವಾಗುತ್ತದೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ರಾಜ್ಯದ ಬಗ್ಗೆ ಏನೂ ಇಲ್ಲ ನಿಮ್ಮಿಬ್ಬರದೂ understanding ಇದೆ

ಶ್ರೀ ಬಸವರಾಜ್ ಎಸ್ ರಾಯರೆಡ್ಡಿ – ಮಾನ್ಯ ಖರ್ಗೆಯವರಿಗೆ ನಾನು ಆಶ್ವಾಸನೆ ಕೊಡುತ್ತೇನೆ I don't want Murarji school ಅಲ್ಪಸಂಖ್ಯಾತರದ್ದು ಏನು ಬೇಕಾಗಿಲ್ಲ

ಶ್ರೀ ಹಂಪನಗೌಡ ಬಾದರ್ಲಿ – ಹೇಳುವುದು ಬಿಡುವುದಿಲ್ಲ, ಮಂಜೂರು ಮಾಡುವುದು ಬಿಡುವುದಿಲ್ಲ

ಶ್ರೀ ಇಕ್ಬಾಲ್ ಅನ್ಸಾರಿ – ಮಲ್ಲಿಕಾರ್ಜುನ ಖರ್ಗೆಯವರಾಗಲಿ, ರಾಯರೆಡ್ಡಿಯವರಾಗಲಿ, ನಾವಾಗಲಿ, ಬಾದರ್ಲಿಯವರಾಗಲಿ, ನಾವು ಎಲ್ಲಾ ಕೇವಲ ನಂಜುಂಡಪ್ಪನವರ ವರದಿಯಲ್ಲಿ ಬರುವ ತಾಲ್ಲೂಕು, ಜಿಲ್ಲೆಗಳಿಂದ ಬಂದಿರತಕ್ಕಂಥವರು ನಮ್ಮ ಕಳಕಳಿ ಒಂದೇ ಆದರೆ, ಆ ಜಿಲ್ಲೆಗಳಲ್ಲಿ ಇವತ್ತು ವಸತಿ ಶಾಲೆಗಳು ನಡೆಯುತ್ತಿವೆ ನಮ್ಮ ಜಬ್ಬಾರ್ ಖಾನ್ ಹೊನ್ನಾಳಿಯವರು ಹೇಳಿದ ಪ್ರಕಾರ, ಉರ್ದು ಮೀಡಿಯಂ ಎಂದೇನುಹೇಳಿದಿರಿ, ಬಹುಶಃ ತಮ್ಮ ಕಳಕಳಿ ಒಂದು ಕಡೆ ಇದೆ ಆದರೆ ರಾಜ್ಯದಲ್ಲಿ ಹುಡುಗರಿಗೆ ಎಲ್ಲಾ ಭಾಷೆಗಳ ಬೋಧನೆ ಕೊಡುವಂಥ ಕೆಲಸ ಮಾಡಿದರೆ ನಮ್ಮ ವಿಷನ್, ಯಶಸ್ವಿಯಾಗುತ್ತದೆ ಮುಂದಿನ ದಿನಗಳಲ್ಲಿ ಇವತ್ತುಅಲ್ಪಸಂಖ್ಯಾತರೆ ಹೆಚ್ಚಿಗೆ ಕಾಡುತ್ತಿರುವುದೇ ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಿದ್ದಾರೆ ಹೀಗಾಗಿ ನಾವು ಇಂಥ ಮೊರಾರ್ಜಿ ದೇಸಾಯಿ ಶಾಲೆಯಾಗಲೀ, ಬೇರೆಯಾಗಲೀ, ಮಾಧ್ಯಮಗಳು ಬೇರೆ ಬೇರೆ, ಕನ್ನಡ ಮೊದಲು ಕಲಿಸಬೇಕು, ನಂತರ ಆಂಗ್ಲ ಮಾಧ್ಯಮ ಕೊಟ್ಟರೆ, ಅವರಿಗೆ ಮಾತೃ ಭಾಷೆ ಇದ್ದೇ ಇರುತ್ತದೆ, ಅವರ ಅನುಕೂಲತೆ ಮತ್ತು ಸರಳತೆ ಸಹಾ ಇರುತ್ತದೆ ಬೇರೆ ಭಾಷೆಯನ್ನು

ಅವರಿಗೆ ಬಾಲ್ಯ ಜೀವನದಿಂದ ಕಲಿಸಿದರೆ ಮುಂದಿನ ಜೀವನದಲ್ಲಿ ಅವರಿಗೆ ಬಹಳ ಸಹಕಾರಿಯಾಗುತ್ತದೆ ಆ ಉದ್ದೇಶದಿಂದ ಇವತ್ತು ನಾವು ಉರ್ದು ಮೀಡಿಯಂ ಮಾಡಿದ್ದೇವೆ, ನಾಳೆ ಎಸ್ ಎಸ್ ಎಲ್ ಸಿ, ಪಿ ಯು ಸಿ ಗೆ ಹೋದ ನಂತರ ಮುಂದೆ ಅವರಿಗೆ ಕಷ್ಟವಾಗುತ್ತದೆ ಎಲ್ಲಿಯಾದರೂ ಹೋದಾಗ ಕನ್ನಡ ಮಾತನಾಡು ಎಂದರೆ ಅವನಿಗೆ ಬರುವುದಿಲ್ಲ, ಬೇರೆ ಭಾಷೆ ಮಾತನಾಡು ಎಂದರೆ ಅವನಿಗೆ ಬರುವುದಿಲ್ಲ, ಬರಿ ತನ್ನ ಉಪ ಜೀವನಕ್ಕೆ ಮಾತ್ರ ಇದನ್ನು ಮಾಡಿಕೊಂಡು ಕುಳಿತರೆ ಆಗುವುದಿಲ್ಲ ಆ ಉದ್ದೇಶದಿಂದ ಎಲ್ಲಾ ದೃಷ್ಟಿಕೋನದಿಂದ ಈ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನಾವು ಮಾಡಿದ್ದೇವೆ ಇಡೀ ರಾಜ್ಯದಲ್ಲಿ ಬಹಳಷ್ಟು ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ನಮ್ಮ ರಾಯರೆಡ್ಡಿಯವರು ಹೇಳಿದ ಪ್ರಕಾರ,

ಶ್ರೀ ಹೊನ್ನಳಿ ಜಬ್ಬಾರ್ ಖಾನ್ ಹಯಾತ್ ಖಾನ್ · ಯಾವ ತರಗತಿಯಿಂದ ಮಾಡುತ್ತೀರಿ?

ಉಪಾಧ್ಯಕ್ಷರು ಅವರ ಉತ್ತರ ಮುಗಿಯಲಿ ಕುಳಿತುಕೊಳ್ಳಿ ಅವರು ಪೂರ್ಣ ಮಾಡಲಿ ನಂತರ ನೀವು ಮಾತನಾಡಿ ಮಧ್ಯದಲ್ಲಿ ನಿಂತುಕೊಂಡು ಯಾವ್ಯಾವುದೊ ಕೇಳುತ್ತರಲ್ಲ ? ಈ ಪ್ರಶ್ನೆಗೆ ಸುಮಾರು 15-20 ನಿಮಿಷವಾಯಿತು

ಶ್ರೀ ಇಕ್ಬಾಲ್ ಅನ್ಸಾರಿ - ನಮ್ಮ ರಾಜ್ಯದಲ್ಲಿ 15 2% ನಷ್ಟು ಅಲ್ಪಸಂಖ್ಯಾತರಿದ್ದಾರೆ ಇದರಲ್ಲಿ ಜೈನ್ ಮತ್ತು ಕ್ರಿಶ್ಚಿಯನ್‌ಗಳು ಸೇರಿದ್ದಾರೆ 2001ರ ಸೆನ್ಸ್‌ಸ್ ಪ್ರಕಾರ ಅಲ್ಪಸಂಖ್ಯಾತರಲ್ಲಿ 12 5%ನಷ್ಟು ಮುಸಲ್ಮಾನರು ಇದ್ದಾರೆ ಮಾನ್ಯ ಯಡಿಯೂರಪ್ಪನವರು ನಮ್ಮ ಇಲಾಖೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಆದರೆ, ಅವರು ನನ್ನ ಇಲಾಖೆಗೆ ಕೊಟ್ಟಿರುವ ಸಹಕಾರ ಬೇರೆ ಯಾವುದೇ ಇಲಾಖೆಗೆ ಕೊಟ್ಟಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ ರಾಜ್ಯದಲ್ಲಿ ಜನತೆಗೆ ಏನೇನು ಅವಶ್ಯಕತೆ ಇದೆ ಎಂಬುದರ ಬಗ್ಗೆ ಸರ್ಕಾರವನ್ನು ನಡೆಸತಕ್ಕಂಥವರು ನೋಡಿಕೊಂಡು ಅದರ ಬಗ್ಗೆ ಚಿಂತನೆ ಮಾಡತಕ್ಕಂಥ ಈ ಸರ್ಕಾರದಲ್ಲಿ ಹಣಕಾಸಿನ ಬಗ್ಗೆ ತೊಂದರೆ ಇಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ ಮಾನ್ಯ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್‌ರವರಿಗೆ ಹೇಳುವುದೇನೆಂದರೆ, ಕಟ್ಟಡ ಕಟ್ಟುವುದಕ್ಕೆ ನಮ್ಮ ಹತ್ತಿರ ಹಣ ಇದೆ ಆದರೆ, ನಮಗೆ ಸರ್ಕಾರಿ ಭೂಮಿ 10 ಎಕರೆ ಬೇಕಾಗುತ್ತದೆ ಸರ್ಕಾರಿ ಭೂಮಿ 10 ಎಕರೆ ಇಲ್ಲದಿದ್ದರೆ ಖಾಸಗಿಯವರ ಭೂಮಿಯನ್ನು ಖರೀದಿ ಮಾಡಬೇಕು ಖಾಸಗಿ ಭೂಮಿಯನ್ನು ಖರೀದಿ ಮಾಡುವುದಕ್ಕೋಸ್ಕರ ಡಿ ಸಿ ಯವರ ನೇತೃತ್ವದಲ್ಲಿ ಒಂದು ಕಮಿಟಿ ಇದೆ ಆದ್ದರಿಂದ, ಯಾವ ಭೂಮಿಯೆಂದು ಗುರುತು ಮಾಡಿ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ನಾವು ತೀವ್ರಗತಿಯಲ್ಲಿ ಅಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡುವುದಕ್ಕೆ ಪ್ರಯತ್ನಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ

ಉಪಾಧ್ಯಕ್ಷರು - ಮುಂದಿನ ಪ್ರಶ್ನೆ ಶ್ರೀಮತಿ ಕೆ ಎಸ್ ಪರಿಮಳರವರದು, ಅವರು ಇಲ್ಲ ಮುಂದಿನ ಪ್ರಶ್ನೆ ಮಾನ್ಯ ರಮೇಶ್ ಕುಮಾರ್‌ರವರದು

ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯ

124 (817) ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ನಡೆಯುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಇವುಗಳು ಯಾವ ಯಾವ ಊರಿನಲ್ಲಿರುತವೆ ,

(ಆ) ಈ ತಾಲ್ಲೂಕಿನಲ್ಲಿ ಇನ್ನೂ ಎಷ್ಟು ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳ ಅವಶ್ಯಕತೆ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳಿಗೆ ಸಂಬಂಧಿಸಿದಂತೆ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಯಾವುದೇ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳಿರುವುದಿಲ್ಲ

(ಆ) ತಾಲ್ಲೂಕಿನ ಶ್ರೀನಿವಾಸಪುರ ಟೌನ್‌ಗೆ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಒಂದು ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದ ಅವಶ್ಯಕತೆ ಇರುವುದು ಗಮನಕ್ಕೆ ಬಂದಿರುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಈ ವರ್ಷದಲ್ಲಿ ಶ್ರೀನಿವಾಸಪುರ ಟೌನ್‌ನಲ್ಲಿ ಪ್ರಾರಂಭ ಮಾಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ ಮತ್ತೆ ಇದರ ಜೊತೆಗೆ ಇನ್ನೂ ಎರಡು ಊರುಗಳಲ್ಲಿ ಪ್ರಾರಂಭ ಮಾಡತಕ್ಕಂಥ ಅವಶ್ಯಕತೆ ಇದೆ ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಸರಿಯಾಗಿ ಮಾಹಿತಿ ಕೊಟ್ಟಿಲ್ಲವೆಂದು ಭಾವಿಸಿಕೊಳ್ಳುತ್ತೇನೆ ಯಳಂದೂರು ಮತ್ತು ಗೌನಿಪಲ್ಲಿ ಊರುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದಾರೆ ಆದ್ದರಿಂದ, ಇಲ್ಲಿಯೂ ಕೂಡ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ ಮಾನ್ಯ ಸಭಾಧ್ಯಕ್ಷರೆ, ಶ್ರೀನಿವಾಸಪುರ ಟೌನ್‌ನಲ್ಲಿ ಈ ವರ್ಷದಿಂದ ಹಾಸ್ಟೆಲ್‌ನ್ನು ಪ್ರಾರಂಭ ಮಾಡಲಾಗುತ್ತದೆಯೇ ಎಂದು ಹಿರಿಯ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಕೇಳಿದ್ದಾರೆ ಈಗಾಗಲೇ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ 100 ಹಾಸ್ಟೆಲ್‌ಗಳನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ ಇದರ ಜೊತೆಗೆ ಸೇವಿಂಗ್ಸ್ ಮಾಡಿ ಮತ್ತೆ

25 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಇದರಲ್ಲಿ ಮೊದಲನೇ ಆದ್ಯತೆಯನ್ನು ಶ್ರೀನಿವಾಸಪುರ ಟೌನ್‌ಗೆ ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಕೆ ಆರ್ ರಮೇಶ್ ಕುಮಾರ್ – ಯಳಂದೂರು ಮತ್ತು ಗೌನಿಪಲ್ಲಿ ಊರುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದಾರೆ ಆದ್ದರಿಂದ ಇಲ್ಲಿಯೂ ಕೂಡ ಹಾಸ್ಟೆಲ್‌ಗಳ ವ್ಯವಸ್ಥೆ ಮಾಡಿಕೊಡುತ್ತೀರಾ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ – ಮತ್ತೆ 25 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುವಾಗ ಅಲ್ಲಿಗೊಂದು ಬಿಸಿಎಂಸಿ ಹಾಸ್ಟೆಲ್‌ನ್ನು ಮಾಡಿಕೊಡುತ್ತೇವೆ ತಾವು ಹೇಳಿದ 2 ಊರುಗಳಲ್ಲಿ ಒಂದೇ ಸಾರಿ ಮಾಡಿಕೊಡುವುದಕ್ಕೆ ಕಷ್ಟವಾಗುತ್ತದೆ

ಶ್ರೀ ಕೆ ಆರ್ ರಮೇಶ್ ಕುಮಾರ್ – ಇಲ್ಲಿಯವರೆಗೂ ಹಾಸ್ಟೆಲ್‌ಗಳನ್ನು ವೈಜ್ಞಾನಿಕ ರೀತಿಯಲ್ಲಿ ಮಾಡಿಲ್ಲ ಮನಸೋ ಇಚ್ಛೆ ಅಥವಾ ಯಾರಿಂದಾದರೂ ಪ್ರಬಲ ಇರುವ ಕಡೆ ಮಾಡುವುದಕ್ಕಿಂಥ ಅಗತ್ಯ ಇರುವ ಕಡೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ ಯಾವ ಮಕ್ಕಳು ವಿದ್ಯಾಭ್ಯಾಸ ಮಾಡಬೇಕೆಂದು ಇರುತ್ತಾರೆಯೋ ಅವರಿಗೆ ಹಾಸ್ಟೆಲ್ ವ್ಯವಸ್ಥೆ ಇಲ್ಲದಿದ್ದರೆ ಓದುವುದನ್ನು ನಿಲ್ಲಿಸಿಬಿಡುತ್ತಾರೆ ಆದ್ದರಿಂದ ಇಂಥ ಮಕ್ಕಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಹಾಸ್ಟೆಲ್‌ನ್ನು ಪ್ರಾರಂಭ ಮಾಡಲಾಯಿತು ಆದರೆ, ಇಲ್ಲಿ ಏನಾಗಿದೆ ಎಂದರೆ ಜಂಗಿ ಕುಸ್ತಿಯಲ್ಲಿ ಯಾರು ಪ್ರಬಲ ಇರುತ್ತಾರೋ ಅವರು 10, 20 ಹಾಸ್ಟೆಲ್ ಎಂದು ಬರೆದುಕೊಳ್ಳುತ್ತಾ ಹೋಗುತ್ತಾರೆ ಆ ರೀತಿಯಾಗಿ ಮಾಡುವುದಕ್ಕೆ ತಾವು ಹೋಗಬೇಡಿ ಇದೆಲ್ಲಾ ಅವಿವೇಕ ನಾನು ತಮಗೆ ಹೇಳುವುದೇನೆಂದರೆ, ನಿಮ್ಮ ಅಧಿಕಾರಿಗಳ ಒಂದು ತಂಡವನ್ನು ಅಲ್ಲಿಗೆ ಕಳುಹಿಸಿ ಮಾಹಿತಿಯನ್ನು ತರಿಸಿಕೊಳ್ಳಿ ಅಗತ್ಯ ಇರುವ ಕಡೆ ಹಾಸ್ಟೆಲ್‌ಗಳನ್ನು ನೀವು ಪ್ರಾರಂಭ ಮಾಡದಿದ್ದರೆ ನಿಮ್ಮ ಇಲಾಖೆ ಮತ್ತು ನೀವು ಇದ್ದರೇನು, ಇಲ್ಲದಿದ್ದರೇನು? ಶ್ರೀನಿವಾಸಪುರ ಟೌನ್‌ನಲ್ಲಿ ಮತ್ತು ಯಳಂದೂರು ಹಾಗೂ ಗೌನಿಪಲ್ಲಿ ಊರಿನಲ್ಲಿ ಈ ವರ್ಗಕ್ಕೆ ಸೇರಿದಂಥ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಹೆಣ್ಣುಮಕ್ಕಳ ವಿದ್ಯಾಬ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವುದು ನಿಮ್ಮ ನಮ್ಮೆಲ್ಲರ ಕರ್ತವ್ಯವಾಗಿದೆ ಆದ್ದರಿಂದ, ಹಣಕಾಸಿನ ವ್ಯವಸ್ಥೆ ಬಗ್ಗೆ ನೀವು ಏನು ಬೇಕಾದರೂ ಮಾಡಿಕೊಳ್ಳಿ, ಅದು ನನಗೆ ಗೊತ್ತಿಲ್ಲ ಏಕೆಂದರೆ, ಇದು ಸರ್ಕಾರದ ಜವಾಬ್ದಾರಿ ಅಲ್ಲಿ ಪ್ರಾರಂಭ ಮಾಡುತ್ತೇವೆಂದು ಈಗ ತಾವು ವಾಗ್ದಾನ ಕೊಡಬೇಕು ಈ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭ ಮಾಡುತ್ತೇನೆಂದು ಹೇಳಿದರೆ ಆಗ ನಿಮ್ಮ ಮಂತ್ರಿ ಸ್ಥಾನಕ್ಕೆ ಧೈರ್ಯ ಮತ್ತೆ ಮೆರುಗು ಬರುತ್ತದೆ

ಶ್ರೀ ಬಾಲಚಂದ್ರ ಲ ಜಾರಕಿಹೊಳಿ – ಸನ್ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರು ಕೊಟ್ಟಿರುವ ಸಲಹೆ ಪ್ರಕಾರ

ಅಧಿಕಾರಿ ವರ್ಗದವರನ್ನು ಅಲ್ಲಿಗೆ ಕಳುಹಿಸಿ ಅಲ್ಲಿನ ವರದಿಯನ್ನು ಶೀಘ್ರವಾಗಿ ತರಿಸಿಕೊಂಡು ಅಲ್ಲಿ ಹಾಸ್ಟೆಲ್‌ನ ಅವಶ್ಯಕತೆ ಇದ್ದರೆ ಈ ಶೈಕ್ಷಣಿಕ ವರ್ಷದಲ್ಲಿಯೇ ಖಂಡಿತ ಪ್ರಾರಂಭ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಡಿ ಕೆ ಶಿವಕುಮಾರ್ ಈ ವರ್ಷದಲ್ಲಿಯೇ ಮಾಡುತ್ತೇವೆಂದು ಹೇಳಿ ಅದನ್ನು ಹೇಳುವುದಕ್ಕೆ ತಾವು ಏತಕ್ಕೆ ಹೆದರಿಕೊಳ್ಳುತ್ತೀರಾ?

ಉಪಾಧ್ಯಕ್ಷರು ಮುಂದಿನ ಪ್ರಶ್ನೆ ಮಾನ್ಯ ಎಸ್ ಎಂ ಮುನಿಯಪ್ಪನವರದು, ಅವರು ಇಲ್ಲ ಮಾನ್ಯ ಬಿ ಆರ್ ಪಾಟೀಲ್‌ರವರ ಪ್ರಶ್ನೆ, ಅವರು ಇಲ್ಲ ಶ್ರೀಮತಿ ಟಿ ಭಾಗೀರಥಿರವರ ಪ್ರಶ್ನೆ, ಅವರು ಇಲ್ಲ ಮಾನ್ಯ ಮಿರಾಜುದ್ದೀನ್ ಪಟೇಲ್‌ರವರ ಪ್ರಶ್ನೆ, ಅವರೂ ಕೂಡ ಇಲ್ಲ ಮುಂದಿನ ಪ್ರಶ್ನೆ ವಿ ಸುನೀಲ್ ಕುಮಾರ್‌ರವರದು

ಪರಿಶಿಷ್ಟ ಜಾತಿ ಹಾಗೂ ಪಂಗಡ ವಿದ್ಯಾರ್ಥಿಗಳ ಶುಲ್ಕ ಸಬ್ಸಿಡಿ

129 (925) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) 2006–07ನೇ ಸಾಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶುಲ್ಕ ಸಬ್ಸಿಡಿ ನೀಡಲು ಬಾಕಿ ಇರುವ ಹಣ ಎಷ್ಟು,

(ಆ) ಯಾವ ಯಾವ ಕಾಲೇಜುಗಳಿಗೆ ಎಷ್ಟೆಷ್ಟು ನೀಡಲು, ಬಾಕಿ ಇದೆ, (ವಿವರ ನೀಡುವುದು)

(ಇ) ಈ ಹಣ ನೀಡದೇ ಇರುವುದರಿಂದ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಗೆ ತಲುಪಿ ಶಿಕ್ಷಣವನ್ನು ತೆರೆಯುವ ಸ್ಥಿತಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಈ) ಹಾಗಿದ್ದಲ್ಲಿ, ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ಸಬ್ಸಿಡಿ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ 1 00 ಲಕ್ಷದ ಮಿತಿಯೊಳಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಆಯಾ ಸಾಲಿಗೆ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಸರ್ಕಾರಿ ಸೀಟಿಗೆ

ನಿಗದಿಪಡಿಸುವ ಬೋಧನಾ ಶುಲ್ಕ ಹಾಗೂ ಇತರೆ ಕಡ್ಡಾಯ ಶುಲ್ಕಗಳನ್ನು ಭರಿಸುತ್ತದೆ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ 1 00 ಲಕ್ಷ ಮೀರಿರುವ ವೃತ್ತಿ ಶಿಕ್ಷಣ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವಂತಹ ವಿದ್ಯಾರ್ಥಿಗಳಿಗೆ ಆಯಾ ಕೋರ್ಸಿಗೆ ಸಂಬಂಧಪಟ್ಟ ಪ್ರಾಧಿಕಾರ/ಇಲಾಖೆಯು ಶುಲ್ಕವನ್ನು ಭರಿಸುತ್ತದೆ

(ಆ) ಉದ್ಭವಿಸುವುದಿಲ್ಲ

(ಇ) ಉದ್ಭವಿಸುವುದಿಲ್ಲ

(ಈ) ಉದ್ಭವಿಸುವುದಿಲ್ಲ

ಶ್ರೀ ವಿ ಸುನೀಲ್ ಕುಮಾರ್ – ಮಾನ್ಯ ಉಪಾಧ್ಯಕ್ಷರೆ, ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಅಡ್ಮಿಷನ್ ಆಗಿರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆಲ್ಲಾ ಶುಲ್ಕವನ್ನು ಸರ್ಕಾರ ಪಾವತಿಸಬೇಕೆಂಬ ನಿರ್ಣಯವನ್ನು 1994 ರಲ್ಲಿ ಸರ್ಕಾರ ಮಾಡಿತ್ತೆಂಬುದು ಮಾನ್ಯ ಸಚಿವರಿಗೆ ಗೊತ್ತಿದೆ ಎಂದು ನಾನು ಭಾವಿಸುತ್ತೇನೆ 2006–07 ನೇ ಸಾಲಿನಲ್ಲಿ ಈ ಎಲ್ಲಾ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಸರ್ಕಾರ ಭರಿಸುವುದಕ್ಕೋಸ್ಕರ 24 ಕೋಟಿ ರೂಪಾಯಿಗಳನ್ನು ಸರ್ಕಾರ ನಿಗದಿ ಮಾಡಿತ್ತು ಆದರೆ, ಇಲ್ಲಿಯವರೆಗೆ ಒಂದು ರೂಪಾಯಿಯನ್ನೂ ಸಹ ಕಾಲೇಜುಗಳಿಗೆ ಕಟ್ಟಿಲ್ಲ ಇದರ ಪರಿಣಾಮವಾಗಿ ಈ ಕೋರ್ಸ್‌ಗಳನ್ನು ಪಡೆದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ 4000 ಜನ ವಿದ್ಯಾರ್ಥಿಗಳು ಇವತ್ತಿನ ದಿವಸ ಅತಂತ್ರರಾಗುವಂಥ ಸ್ಥಿತಿ ನಿರ್ಮಾಣವಾಗಿದೆ ಆ ಎಲ್ಲಾ ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿಸಬೇಕೆಂದು ಆಡಳಿತ ಮಂಡಳಿಗಳು ಒತ್ತಡವನ್ನೂ ಸಹ ಹಾಕುತ್ತಿವೆ ಈ ಒಂದು ಹಿನ್ನಲೆಯಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಸ್ಥಿತಿಗೆ ತಲುಪಿದ್ದಾರೆ ಇದಕ್ಕೆ ಸಂಬಂಧಪಟ್ಟಂತೆ ಪತ್ರಿಕೆಗಳಲ್ಲಿಯೂ ಕೂಡ ದೊಡ್ಡ ದೊಡ್ಡ ಲೇಖನಗಳೂ ಸಹ ಬಂದಿವೆ ಆದ್ದರಿಂದ, 2006–07ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕದ ಸಬ್ಸಿಡಿ ಹಣವನ್ನು ಪಾವತಿ ಮಾಡುವುದಕ್ಕೋಸ್ಕರ ಸರ್ಕಾರ ನಿಗದಿ ಮಾಡಿದ ಹಣವನ್ನು ಯಾವತ್ತು ಬಿಡುಗಡೆ ಮಾಡಲಾಗುತ್ತದೆಂಬುದನ್ನು ಇವತ್ತಿನ ದಿವಸ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ

ಶ್ರೀ ಬಾಲಚಂದ್ರ ಲ ಜಾರಕಿಹೊಳಿ – ಮಾನ್ಯ ಉಪಾಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ಆದಾಯ 1 ಲಕ್ಷ ರೂಪಾಯಿ ಮೀರಿರದ ವಿದ್ಯಾರ್ಥಿಗಳಿಗೆ ನಮ್ಮ ಇಲಾಖೆಯಿಂದ ವಿವಿಧ ಕೋರ್ಸ್‌ಗಳಿಗೆ ಶುಲ್ಕವನ್ನು ಭರಿಸಲಾಗುತ್ತದೆ ಆದ್ದರಿಂದ, ಮಾನ್ಯ ಸುನೀಲ್ ಕುಮಾರ್‌ರವರು ಹೇಳಿದ ಹಾಗೆ ಕಳೆದ ವರ್ಷದ್ದು 23 ಕೋಟಿ ರೂಪಾಯಿ

ಬಾಕಿಯಿರುತ್ತದೆ ಪೂಲ್ ಫಂಡ್‌ನಿಂದ ಹಣವನ್ನು ವ್ಯವಸ್ಥೆ ಮಾಡಿಕೊಂಡು ಬಾಕಿಯಿರುವ 23 ಕೋಟಿ ರೂಪಾಯಿ ಮತ್ತು 2007-08 ನೇ ಸಾಲಿನಲ್ಲಿ ಬರುವಂಥ ಯಾವುದೇ ಶುಲ್ಕವನ್ನು ಸರ್ಕಾರ ಈ ವರ್ಷ ಅತೀ ಶೀಘ್ರದಲ್ಲಿಯೇ ಭರಿಸುತ್ತದೆಂದು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ

ಉಪಾಧ್ಯಕ್ಷರು – ಮಾನ್ಯ ಸುನೀಲ್ ಕುಮಾರ್‌ರವರೆ, ಈ ವರ್ಷದಲ್ಲಿಯೇ ಕ್ಲೀಯರ್ ಮಾಡುತ್ತೇನೆಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ, ಮತ್ತೇಕೆ ಪ್ರಶ್ನೆ?

ಶ್ರೀ ವಿ ಸುನೀಲ್ ಕುಮಾರ್ – ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಇತ್ತೀಚೆಗೆ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು ಅದೇನೆಂದರೆ, ವಿದ್ಯಾರ್ಥಿಗಳಿಗೆ ಕೊಡಬೇಕಾಗಿರತಕ್ಕಂಥ ಹಣವೆಲ್ಲವನ್ನು ವಿದ್ಯಾರ್ಥಿಗಳಿಗೆ ನೇರವಾಗಿ ಮನೆಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದರು ಆದ್ದರಿಂದ, ಆ ಹಣವನ್ನು ವಿದ್ಯಾರ್ಥಿಗಳ ಮನೆಗಳಿಗೆ ತಲುಪಿಸುವ ಪ್ರಯತ್ನವನ್ನು ಮಾಡುತ್ತೀರಾ ಅಥವಾ ನೇರವಾಗಿ ಶಾಲೆಗಳ ಆಡಳಿತ ಮಂಡಳಿಗೆ ಕೊಡುತ್ತೀರಾ ಎಂಬುದನ್ನು ತಿಳಿಸಬೇಕು ಏಕೆಂದರೆ, ಇದರ ಬಗ್ಗೆ ಗೊಂದಲ ಉಂಟಾಗಿದೆ ಆದ್ದರಿಂದ, ಎಲ್ಲಿಗೆ ಹಣವನ್ನು ತಲುಪಿಸಲಾಗುತ್ತದೆಂಬುದನ್ನು ಮಾನ್ಯ ಸಚಿವರಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಧ್ರುವನಾರಾಯಣ್ – ಮಾನ್ಯ ಉಪಾಧ್ಯಕ್ಷರೆ, 2006-07ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಕೊಡಬೇಕಾಗಿರತಕ್ಕಂಥ ಶುಲ್ಕ 24 ಕೋಟಿ ರೂಪಾಯಿಗಳನ್ನು ಬಾಕಿ ಇದೆ ಎಂದು ಮಾನ್ಯ ಸುನೀಲ್‌ಕುಮಾರ್‌ರವರು ಹೇಳಿದರು ಈ ವರ್ಷದಲ್ಲಿಯೇ ಸದರಿ ಬಾಕಿಯನ್ನು ಭರಿಸುತ್ತೇವೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಮತ್ತೆ ನಮ್ಮಲ್ಲಿ ಹಣಕಾಸಿನ ಸ್ಥಿತಿ ಕೂಡ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ ಆದ್ದರಿಂದ, ಈ ಹಣವನ್ನು ಕಳೆದ ವರ್ಷವೇ ಏತಕ್ಕಾಗಿ ಭರಿಸಲಿಲ್ಲವೆಂದು ಕೇಳುವುದಕ್ಕೆ ಬಯಸುತ್ತೇನೆ ವಿದ್ಯಾರ್ಥಿಗಳು ಬಹಳ ಸಂಕಷ್ಟದಲ್ಲಿದ್ದಾರೆಂದು ಮಾನ್ಯ ಸದಸ್ಯರು ಈಗಾಗಲೇ ಹೇಳಿದರು ಸರ್ಕಾರಕ್ಕೆ ಎಸ್ ಸಿ /ಎಸ್ ಟಿ ಜನರೆಂದರೆ ಅಸಡ್ಡೆಯೇ ಎನ್ನತಕ್ಕಂಥದ್ದು ನನ್ನ ಪ್ರಶ್ನೆ ಒಂದು ಲಕ್ಷ ರೂಪಾಯಿ ಇದ್ದಂಥ ಆದಾಯ ಮಿತಿಯನ್ನು ಈಗ 2 ಲಕ್ಷ ರೂಪಾಯಿಗೆ ಕೇಂದ್ರ ಸರ್ಕಾರ ನಿಗದಿ ಪಡಿಸಿದೆ ಈ ಬಗ್ಗೆ ಆದೇಶ ಕೂಡ ಮಾಡಿದೆ ಸದರಿ ಆದೇಶ ಕೂಡ ಮಾಡಿದೆ ಸದರಿ ಆದೇಶ ತಮಗೆ ತಲುಪಿದೆಯೇ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಬಾಲಚಂದ್ರ ಲ ಜಾರಕಿಹೊಳಿ – ಮಾನ್ಯ ಉಪಾಧ್ಯಕ್ಷರೆ, ವಿದ್ಯಾರ್ಥಿಗಳ ಮನೆಗೆ ಶುಲ್ಕದ ಹಣವನ್ನು ಕಳುಹಿಸಿಕೊಡಲಾಗುತ್ತದೆಂದು ಮಾನ್ಯ

ಶಿಕ್ಷಣ ಸಚಿವರು ಹೇಳಿಕೆಯನ್ನು ಕೊಟ್ಟಿದ್ದಾರೆ ಆದ್ದರಿಂದ, ಇದರ ಬಗ್ಗೆ ಏನು ತೀರ್ಮಾನ ಮಾಡಲಾಗಿದೆ ಎಂಬುದರ ಬಗ್ಗೆ ತಿಳಿಸಬೇಕೆಂದು ಮಾನ್ಯ ಸುನೀಲ್‌ಕುಮಾರ್‌ರವರು ಕೇಳಿದ್ದಾರೆ ವಿದ್ಯಾರ್ಥಿಗಳ ಮನೆಗೆ ಹಣವನ್ನು ತಲುಪಿಸುವಂಥ ಕಾರ್ಯಕ್ರಮವನ್ನು ನಮ್ಮ ಇಲಾಖೆ ಹೊಂದಿಲ್ಲ ವಿದ್ಯಾರ್ಥಿಗಳು ಓದುತ್ತಿರುವ ಶಿಕ್ಷಣ ಸಂಸ್ಥೆಗೆ ಹಣವನ್ನು ಇಲಾಖೆಯಿಂದ ಕಳುಹಿಸಿಕೊಡುತ್ತೇವೆ ಆದಾಯದ ಮಿತಿಯನ್ನು ಕೇಂದ್ರ ಸರ್ಕಾರ ಜಾಸ್ತಿ ಮಾಡಿದೆ ಎಂದು ಮಾನ್ಯ ಧ್ರುವನಾರಾಯಣರವರು ಹೇಳಿದರು ಮೆಡಿಕಲ್ ಕೋರ್ಸ್ ಓದುವ ವಿದ್ಯಾರ್ಥಿಗಳಿಗೆ ಆದಾಯದ ಮಿತಿಯನ್ನು 2 ಲಕ್ಷ ರೂಪಾಯಿವರೆಗೆ ಮಾಡಿದೆ ಆದರೆ, ನಮ್ಮಲ್ಲಿರತಕ್ಕಂಥ ಕೆಲವು ಕೋರ್ಸ್‌ಗಳಿಗೆ ಆದಾಯದ ಲಿಮಿಟ್ ಅನ್ನು ಜಾಸ್ತಿ ಮಾಡಿಲ್ಲ ಕಳೆದ ಸಾಲಿನ ಶುಲ್ಕವನ್ನು ಭರಿಸುವುದಕ್ಕಾಗಿ ಏತಕ್ಕಾಗಿ ತೊಂದರೆಯಾಯಿತೆಂಬುದರ ಬಗ್ಗೆ ಮಾನ್ಯ ಸದಸ್ಯರು ಕೇಳಿದರು ಈ ಸಾರಿ ಮಾಡುವುದಕ್ಕೆ ಪುಲ್‌ಫಂಡ್‌ನಿಂದ ಜಾಸ್ತಿ ಹಣವನ್ನು ತೆಗೆದುಕೊಂಡಿದ್ದೇವೆ 2007-08ನೇ ಸಾಲಿನಲ್ಲಿ ಎಸ್ ಸಿ /ಎಸ್ ಟಿ ವಿದ್ಯಾರ್ಥಿಗಳಿಗೆ ಕೊಡಬೇಕಾಗಿರತಕ್ಕಂಥ ಯಾವುದೇ ಶುಲ್ಕ ಬಾಕಿ ಉಳಿಯುವುದಿಲ್ಲ ಎಲ್ಲವನ್ನೂ ಕ್ಲಿಯರ್ ಮಾಡಿ ಕೊಡಲಾಗುವುದೆಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಬಯಸುತ್ತೇನೆ

ಆಸ್ಪತ್ರೆಯನ್ನು ಪ್ರಾರಂಭಿಸುವ ಬಗ್ಗೆ

130 (708) ಶ್ರೀ ಎಂ ವೈ ಪಾಟೀಲ್ (ಅಫಜಲ್‌ಪುರ) – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮವು ಯಾತ್ರಾ ಸ್ಥಳವಾಗಿದ್ದು ಅಲ್ಲದೆ ಇಲ್ಲಿ ರೇಣುಕಾ ಶುಗರ್ ಸ್ಥಾಪನೆಯಾಗಿದ್ದು, ಇಲ್ಲಿನ ಕಾರ್ಮಿಕರಿಗೆ, ಯಾತ್ರಿಕರಿಗೆ ಹಾಗೂ ರೈತರಿಗೆ ಅನುಕೂಲವಾಗಲು ಆಸ್ಪತ್ರೆ ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯಾ ,

(ಆ) ಹಾಗಿದ್ದಲ್ಲಿ ಆಸ್ಪತ್ರೆಗಳನ್ನು ಯಾವಾಗ ಪ್ರಾರಂಭಿಸುವಿರಿ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ಘತ್ತರಗಾ ಗ್ರಾಮದಲ್ಲಿ ಹೊಸ ಆಸ್ಪತ್ರೆ ಸ್ಥಾಪಿಸಲು ಯಾವ ಪ್ರಸ್ತಾವನೆ ಇರುವುದಿಲ್ಲ

(ಆ) ಉದ್ಭವಿಸುವುದಿಲ್ಲ

ಶ್ರೀ ಎಂ ವೈ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ಅಫಜಲಪುರ ತಾಲ್ಲೂಕಿನ ಘತ್ತರಗಾ ಗ್ರಾಮವು ಒಂದು ಯಾತ್ರಾ ಸ್ಥಳವಾಗಿದ್ದು, ಅಲ್ಲಿ ಒಂದು

ರೇಣುಕಾ ಷುಗರ್ ಪ್ಯಾಕ್ಟರಿ ಕೂಡ ಬಂದಿದೆ ಜನರ ಆರೋಗ್ಯದ ಸಲುವಾಗಿ ಅಲ್ಲಿ ಯಾವುದೇ ಅನುಕೂಲತೆಗಳು ಇಲ್ಲ ಆದರೆ ಅಲ್ಲಿ ಒಂದು ಆಸ್ಪತ್ರೆ ಅವಶ್ಯಕತೆ ಇದೆ ಅವರು ತಮ್ಮ ಉತ್ತರದಲ್ಲಿ ಪ್ರಸ್ತಾವನೆ ಬಂದಿಲ್ಲವೆಂದು ಹೇಳುತ್ತಾರೆ ನಾನು ಆ ಭಾಗದ ಶಾಸಕನಾಗಿ ಈ ಬೇಡಿಕೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಅಲ್ಲಿ ಒಂದು ಆಸ್ಪತ್ರೆಯ ಅವಶ್ಯಕತೆ ಇದೆ, ಅಲ್ಲಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಆರ್ ಅಶೋಕ್ – ಮಾನ್ಯ ಉಪಾಧ್ಯಕ್ಷರೆ, ಘತ್ತರಗಾ ಗ್ರಾಮದಲ್ಲಿ ಜಾತ್ರೆ ನಡೆಯುತ್ತದೆ ಆ ಸಂದರ್ಭದಲ್ಲಿ ಡಾಕ್ಟರ್ ವ್ಯವಸ್ಥೆಯನ್ನು ಜಾತ್ರೆ ದಿವಸ ಮಾಡಬಹುದು ಮತ್ತು ನಮ್ಮ ಸರ್ಕಾರದ ಆದೇಶದ ಪ್ರಕಾರ ಗ್ರಾಮ ಪಂಚಾಯತಿ 4 ಎಕರೆ ಜಮೀನು ಒಂದು ಲಕ್ಷಗಳ ಅನುದಾನವನ್ನು ಕೊಡಬೇಕಾಗುತ್ತದೆ ಅದನ್ನು ಒದಗಿಸಿದರೆ ಅಲ್ಲಿ ಆಸ್ಪತ್ರೆಯನ್ನು ತೆಗೆಯುವುದಕ್ಕೆ ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಎಂ ವೈ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ಜಾತ್ರೆಯ ದಿವಸ ಅಷ್ಟೇ ಅಲ್ಲ, ಅಲ್ಲಿ ದಿನಾಲೂ ಸಾವಿರಾರು ಸಂಖ್ಯೆಯಲ್ಲಿ ಜನ ಬರುತ್ತಾರೆ 4 ಎಕರೆ ಜಮೀನು ಒಂದು ಲಕ್ಷ ರೂಗಳ contribution ಅನ್ನು ಗ್ರಾಮ ಪಂಚಾಯಿತಿಯಿಂದ ಒದಗಿಸುತ್ತೇವೆಂದು ಮಾನ್ಯ ಸಚಿವರಿಗೆ ನಾನು ಭರವಸೆ ಕೊಡುತ್ತೇನೆ

ಶ್ರೀ ಆರ್ ಅಶೋಕ್ – ಮಾನ್ಯ ಉಪಾಧ್ಯಕ್ಷರೆ, ಮಾಡುತ್ತೇವೆ

ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವುದು

131 (1019) ಶ್ರೀ ಕೆ ಎಸ್ ಕಿರಣ್ ಕುಮಾರ್ (ಕಳ್ಳಂಬೆಳ್ಳ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಹುಳಿಯಾರು ಹೋಬಳಿ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ,

(ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ಪ್ರಸ್ತಾವನೆ ಬಂದಿರುತ್ತದೆ

(ಆ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಶ್ರೀ ಕಿರಣ್‌ಕುಮಾರ್ ಕೆ ಎಸ್ – ಮಾನ್ಯ ಉಪಾಧ್ಯಕ್ಷರೆ, ಹುಳಿಯಾರು ಹೋಬಳಿ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ಎಂದು ಕೇಳಿದರೆ ಅದಕ್ಕೆ ಉತ್ತರವಾಗಿ ಪ್ರಸ್ತಾವನೆ ಬಂದಿರುತ್ತದೆಂದು ಹೇಳಿರುತ್ತಾರೆ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನೆಂದು ಕೇಳಿದರೆ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ ಅದೊಂದು ಗ್ರಾಮೀಣ ಪ್ರದೇಶ ತಮಗೂ ಗೊತ್ತಿರಬಹುದು ಈ ಹುಳಿಯಾರು ಗ್ರಾಮ ಒಂದು ತಾಲ್ಲೂಕು ಆಗುತ್ತಿರುವ ಪ್ರದೇಶ, ಆಗಬೇಕಾಗಿತ್ತು ಅದು ಇನ್ನುವರೆಗೆ ಆಗಿಲ್ಲ ಆದ್ದರಿಂದ ಅಂತಹ ಒಂದು ಪ್ರದೇಶದಲ್ಲಿ 15 ಹಾಸಿಗೆಗಳ ಆಸ್ಪತ್ರೆ ಅಲ್ಲಿ ಇನ್ನುವರೆಗೆ ಇಲ್ಲದಿರುವುದರಿಂದ ನಿಜಕ್ಕೂ ಅಲ್ಲಿಯ ಬಡ ಜನತೆಗೆ ಬಹಳ ತೊಂದರೆಯಾಗಿದೆ ಈಗಾಗಲೇ ಅಲ್ಲಿಗೆ ಒಂದು Lady Medical Officer post section ಆಗಿದ್ದರೂ ಕೂಡ ಅಲ್ಲಿಗೆ posting ಮಾಡಿಲ್ಲ ಅಂತಹ ಜಾಗದಲ್ಲಿ ಅದನ್ನು ಉನ್ನತೀಕರಿಸಿ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮಾಡಿದರೆ ನಿಜವಾಗಲೂ ನಾವು ಅಲ್ಲಿರುವ ಬಡ ಜನತೆಗೆ ಸಹಾಯ ಮಾಡಲಿಕ್ಕೆ ಅನುಕೂಲವಾಗುತ್ತದೆ ಇವರು ಮಾರ್ಗಸೂಚಿಯ ಪ್ರಕಾರವೆಂದು ಹೇಳದೇ, ಅಲ್ಲಿಯ ಅವಶ್ಯಕತೆಗೆ ಅನುಗುಣವಾಗಿ need base ಎಂದು ತೆಗೆದುಕೊಂಡು ಮಾಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಆರ್ ಅಶೋಕ್ – ಮಾನ್ಯ ಉಪಾಧ್ಯಕ್ಷರೆ, ಹುಳಿಯಾರು ಗ್ರಾಮದ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಈಗಾಗಲೇ ಮಾನ್ಯ ಶಾಸಕರು ನಮಗೆ ಪ್ರಸ್ತಾವನೆಯನ್ನು ಕೊಟ್ಟಿದ್ದಾರೆ ನಾವು ಸಹ ಈ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ 2007–08ನೇ ಸಾಲಿಗೆ ಅದನ್ನು ಆಧಿಕಾರಿ ಸಮಿತಿಯ ಮುಂದೆ ಇಡುತ್ತಿದ್ದೇನೆ ಅದನ್ನು ಅಪ್ರೂವಲ್ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಮತ್ತು ತಮ್ಮ ಅವಶ್ಯಕತೆಯನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ

ಬೀಡಿ ಕಾರ್ಮಿಕರಿಗೆ ವಸತಿ ಯೋಜನೆ

132 (639) ಶ್ರೀ ಹೆಚ್ ಹಾಲಪ್ಪ (ಹೊಸನಗರ) – ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗೆ ವಸತಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ,

(ಆ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು (3) ವರ್ಷಗಳಲ್ಲಿ ಜಾರಿಗೊಳಿಸಲಾದ ಈ ಯೋಜನೆಯ ತಾಲ್ಲೂಕುವಾರು ವಿವರ ನೀಡುವುದು ,

(ಇ) ವಸತಿ ನಿರ್ಮಾಣಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು,

(ಈ) ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು ಹಾಗೂ ಮಾನದಂಡವೇನು ,

(ಉ) ಬಾಕಿ ಉಳಿದಿರುವ ಅರ್ಜಿಗಳ ಫಲಾನುಭವಿಗಳಿಗೆ ವಸತಿ ನಿರ್ಮಿಸಿಕೊಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

(ಅ) ಹೌದು

(ಆ) ಕೇವಲ 2005–06ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಎಂ ಗುಡಿಕೊಪ್ಪ ಗ್ರಾಮದ ಬೀಡಿ ಕಾರ್ಮಿಕರಿಂದ ಮಾತ್ರ 14 ಅರ್ಜಿಗಳನ್ನು ಸ್ವೀಕರಿಸಲಾಗಿದೆ

(ಇ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿ ಸಂಖ್ಯೆ 1248

(ಈ) ಈ ಯೊಜನೆಯಡಿ ಮಂಜೂರಾದ ಫಲಾನುಭವಿಗಳ ಒಟ್ಟು ಸಂಖ್ಯೆ 1160 ಈ ಯೋಜನೆಯಡಿ ಸಬ್ಸಿಡಿ ಹಣವನ್ನು ಪಡೆಯಲು ಬೀಡಿ ಕಾರ್ಮಿಕರು ಈ ಕೆಳಕಂಡ ಷರತ್ತುಗಳನ್ನು ಪೂರೈಸಬೇಕಾಗುವುದು -

(1) ಬೀಡಿ ಕಾರ್ಮಿಕರ ಕುಟುಂಬದ ಮಾಸಿಕ ಆದಾಯವು ರೂ 6500/- ಮಿತಿಯೊಳಗಿರಬೇಕು

(2) ಬೀಡಿ ಕಾರ್ಮಿಕರು ಅವರ ಹೆಸರಿನಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು ಅಲ್ಲದೆ, ಹಿಂದೆ ಈ ಯೋಜನೆಯಡಿ ಯಾವುದೇ ಸೌಲಭ್ಯವನ್ನು ಪಡೆದಿರಬಾರದು

(3) ಕನಿಷ್ಟ 1 ವರ್ಷದ ಅವಧಿಯವರೆಗೂ ಬೀಡಿ ಉದ್ದಿಮೆಯ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರು ಈ ಯೋಜನೆಯಡಿ ಲಭ್ಯವಿರುವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ ಬೀಡಿ ಕಾರ್ಮಿಕರು ತಮ್ಮ ಹೆಸರಿನಲ್ಲಿ ಅಥವಾ ಅವರ ಕುಟುಂಬದ ಹೆಸರಿನಲ್ಲಿ ಕನಿಷ್ಟ 60 ಚದರ ಯಾರ್ಡ್ ರಷ್ಟು ನಿವೇಶನವನ್ನು ಹೊಂದಿರಬೇಕು ಹಾಗೊಮ್ಮೆ ಕಡಿಮೆ ಪ್ರಮಾಣದಲ್ಲಿ ನಿವೇಶನ ಹೊಂದಿದ್ದರೆ, ಸದರಿ ಕಟ್ಟಡದ ಸಂಪೂರ್ಣ ನಿರ್ಮಾಣವು 160 ಚದರ ಅಡಿಗೆ ಮೀರುವಂತಿಲ್ಲ

(4) ಬೀಡಿ ಕಾರ್ಮಿಕರು ಕನಿಷ್ಟ 50 ಮಂದಿ ಸದಸ್ಯರಿಗಿಂತ ಕಡಿಮೆ ಇಲ್ಲದಂತೆ ಗುಂಪು ವಸತಿ ಸಹಕಾರ ಸಂಘವನ್ನು ರಚಿಸಿಕೊಂಡು, ಈ ಯೋಜನೆಯಡಿ ಲಭ್ಯವಿರುವ ಸೌಲಭ್ಯವನ್ನು ಪಡೆಯಬಹುದಾಗಿದೆ ಆದರೆ, ವಸತಿ ನಿರ್ಮಾಣಕ್ಕಾಗಿ ಜಮೀನನ್ನು ರಾಜ್ಯ ಸರ್ಕಾರದಿಂದ ಅಥವಾ ಗೃಹ ಮಂಡಳಿಯ ವತಿಯಿಂದ ಪಡೆಯಬೇಕಾಗುತ್ತದೆ

(5) ಪ್ರತಿಯೊಬ್ಬ ಕಾರ್ಮಿಕರಿಗೆ ಕೇಂದ್ರ ಸರ್ಕಾರದ ವತಿಯಿಂದ 40 ಸಾವಿರ ರೂ ಗಳ ಸಬ್ಸಿಡಿ ಹಣವನ್ನು ಕಾರ್ಮಿಕರು ತಮ್ಮ ವತಿಯಿಂದ 5000 ರೂ ಗಳನ್ನು ಕಾರ್ಮಿಕರ ವಂತಿಗೆಯೆಂದು ರೇವಣಿ ಮಾಡಬೇಕಾಗುತ್ತದೆ ಅನಂತರ ಮೊದಲನೇ ಕಂತಿನ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲಾಗುತ್ತದೆ ಮನೆಯ ನಿರ್ಮಾಣ ಕಾರ್ಯವು ಛಾವಣಿಯ ಹಂತಕ್ಕೆ ತಲುಪಿದ ನಂತರ 2ನೇ ಕಂತಿನ 20,000/- ರೂ ಗಳ ಸಬ್ಸಿಡಿ ಹಣದ ಜೊತೆಗೆ ಕಾರ್ಮಿಕರ ವಂತಿಗೆ ಹಣ ರೂ 5000/- ಅನ್ನು ವಾಪಸ್ಸು ನೀಡಲಾಗುತ್ತದೆ

(6) ವಸತಿ ನಿರ್ಮಾಣದ ಸಂಪೂರ್ಣ ವೆಚ್ಚವು 1 00 ಲಕ್ಷ ರೂಪಾಯಿಗಳನ್ನು ಮೀರುವಂತಿಲ್ಲ

(7) ಮನೆಯ ಸಂಪೂರ್ಣ ನಿರ್ಮಾಣ ಕಾರ್ಯವು 18 ತಿಂಗಳಿನ ಕಾಲಾವಧಿಯೊಳಗೆ ಪೂರ್ಣಗೊಳ್ಳಬೇಕು

(ಉ) ಅರ್ಜಿಗಳನ್ನು ಪರಿಗಣಿಸಿ ಕೇಂದ್ರ ಸರ್ಕಾರದಿಂದ ಸಬ್ಸಿಡಿ ಹಣವು ಮಂಜೂರಾದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು

ಶ್ರೀ ವಿ ಸುನೀಲ್ ಕುಮಾರ್ (ಹೆಚ್ ಹಾಲಪ್ಪನವರ ಪರವಾಗಿ) – ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ರಾಜ್ಯದಲ್ಲಿರುವ ಬೀಡಿ ಕಾರ್ಮಿಕರಿಗೆ ಮನೆಯನ್ನು ಕಟ್ಟಿಕೊಡುವುದಕ್ಕೋಸ್ಕರ ಭಾರತ ಸರ್ಕಾರ ಒಂದು ಯೋಜನೆಯನ್ನು ರೂಪಿಸಿದ್ದು ಆ ಹಿನ್ನಲೆಯಲ್ಲಿ ಸಾವಿರಾರು ಅರ್ಜಿಗಳು ಇವತ್ತು ರಾಜ್ಯದ ಎಲ್ಲಾ ಭಾಗದಿಂದ ಬಂದಿವೆ ಮಾನ್ಯ ಸಚಿವರಿಗೆ ಅದು ಗೊತ್ತಿರಬಹುದು ಆ ಎಲ್ಲಾ ಫಲಾನುಭವಿಗಳು 5 ಸಾವಿರ ರೂ ಗಳನ್ನು DD ರೂಪದಲ್ಲಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಾಗಿದೆ ಉಡುಪಿ ಜಿಲ್ಲೆಯಿಂದ ಇಂತಹ ಸಾವಿರಾರು ಅರ್ಜಿಗಳು ಬಾಕಿ ಇದೆ ಶಿವಮೊಗ್ಗ ಜಿಲ್ಲೆಯಿಂದ 14 ಅರ್ಜಿಗಳು ಬಾಕಿ ಇದೆ ಎಂದು ತಿಳಿಸಿರುತ್ತೀರಿ

ಇಲ್ಲಿಗೆ ಒಂದು ವರ್ಷವಾದರೂ ಕೂಡ 5 ಸಾವಿರ ರೂಗಳ ಡಿಡಿಯನ್ನು ಕಟ್ಟಿದ ಎಲ್ಲಾ ಫಲಾನುಭವಿಗಳು ನಮಗೆ ಮನೆಯ ಆದೇಶ ಯಾವಾಗ ಬರುತ್ತದೆಂದು ನಿರೀಕ್ಷೆಯನ್ನು ಮಾಡುತ್ತಿದ್ದಾರೆ ದಯಮಾಡಿ ಅವರಿಗೆ ಮನೆಯನ್ನು ಕಟ್ಟಿಸಿಕೊಳ್ಳುವುದಕ್ಕೆ ಹಣವನ್ನು ಬಿಡುಗಡೆ ಮಾಡುತ್ತದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು ಇದು ಶಿವಮೊಗ್ಗ ಜಿಲ್ಲೆಯಲ್ಲಿ ಜಾರಿ ಆಗುವುದಿಲ್ಲವೆಂದು ಹೇಳಿರುತ್ತೀರಿ ಶಿವಮೊಗ್ಗ ಜಿಲ್ಲೆಯಲ್ಲಿ ಸಾಕಷ್ಟು ಜನ ಬೀಡಿ ಕಾರ್ಮಿಕರು ಇರುವುದರಿಂದ ಏಕೆ ಈ ಯೋಜನೆಯನ್ನು ಶಿವಮೊಗ್ಗ ಜಿಲ್ಲೆಗೆ ಜಾರಿಗೊಳಿಸಿಲ್ಲವೆನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು

ಶ್ರೀ ರಾಜಶೇಖರ ಸಿಂಧೂರ್ - ಮಾನ್ಯ ಉಪಾಧ್ಯಕ್ಷರೆ, ಈ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಿಸಿ ಕೊಡುವ ಒಂದು ವಸತಿ ಯೋಜನೆ ಕಾರ್ಯರೂಪಕ್ಕೆ ಬರುತ್ತಿಲ್ಲ ಏಕೆಂದರೆ ನಾನು ಕೂಡ ಬೀಡಿ ಕಾರ್ಮಿಕರ ಉದ್ಯಮದಲ್ಲಿ ಪಾಲುದಾರನಾಗಿದ್ದೇನೆ ಆ ಯೋಜನೆ ಏನು ಇದೆ, ಆ ಯೋಜನೆ ನಿಜವಾಗಲೂ ಫಲಾನುಭವಿಗಳಿಗೆ ಮುಟ್ಟುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು ಸುಮ್ಮನೆ ಅರ್ಜಿಯನ್ನು ಕರೆಯುತ್ತೇವೆ, ಸಭೆಯನ್ನು ಮಾಡಿಸುತ್ತೇವೆ, ನಿಮ್ಮ ಇಲಾಖೆಯಿಂದ ಸಾಕಷ್ಟು ಸಲ ಬಂದು ಸಭೆಯನ್ನು ಮಾಡಿಕೊಂಡು ಹೋಗಿದ್ದಾರೆ ಇನ್ನುವರೆಗೆ ಸವಣೂರು, ಶಿಗ್ಗಾಂವ, ಲಕ್ಷ್ಮೇಶ್ವರದ ಯಾವ ಕಾರ್ಮಿಕರಿಗೂ ಇನ್ನುವರೆಗೆ ಒಂದು ಮನೆ ಕೂಡ ಸಿಕ್ಕಿಲ್ಲ ಇದರ ಬಗ್ಗೆ ತಾವು ಕಾಳಜಿಯನ್ನು ವಹಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಮಹಾದೇವಪ್ಪ ಶಿವಲಿಂಗಪ್ಪ ಯಾದವಾಡ - ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ಸಚಿವರನ್ನು ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ಬೀಡಿ ಕಾರ್ಮಿಕರಿಗೆ ಮನೆ ಕಟ್ಟುವ ಬಗ್ಗೆ ಅಡಿಗಲ್ಲು ಸಮಾರಂಭವನ್ನು ಇಟ್ಟುಕೊಂಡಿದ್ದೆವು ಅಲ್ಲಿಗೆ 200 ಮನೆಗಳನ್ನು ಕೊಟ್ಟ ಮೇಲೆ ಇನ್ನುವರೆಗೆ ಆ ಕಟ್ಟಡಗಳನ್ನು ಚಾಲು ಮಾಡಿಲ್ಲ ಅದನ್ನು ನಿರ್ಮಿತ ಕೇಂದ್ರದವರಿಗೆ ಕೊಟ್ಟರು ನಾವು ಹೋಗಿ ಅವರನ್ನು ಕೇಳಿದರೆ, ಜಾಗದ ಬಗ್ಗೆ ಸ್ವಲ್ಪ ತೊಂದರೆ ಇದೆ ಎಂದು ಹೇಳುತ್ತಿದ್ದಾರೆ ನಾವು ಎಲ್ಲಿ ಕೇಳಿದರೂ ಕೂಡ ಅದಕ್ಕೆ ಉತ್ತರವೇ ಸಿಗುತ್ತಿಲ್ಲ ಅದಕ್ಕೆ ಮಾನ್ಯ ಸಚಿವರು ಬಂದು ಅಡಿಗಲ್ಲು ಸಮಾರಂಭವನ್ನು ಮಾಡಿದರು ಕಟ್ಟಡದ ಯಾವ ಒಂದು ಕಾರ್ಯಕ್ರಮವನ್ನು ಇಲ್ಲಿಯವರೆಗೆ ಹಾಕಿಕೊಳ್ಳಲಿಲ್ಲ ಮಾನ್ಯ ಸಚಿವರು ಅಧಿಕಾರಿಗಳನ್ನು ಕರೆಸಿ ಅದನ್ನು ಶೀಘ್ರದಲ್ಲಿ ಹಾಕಿಕೊಳ್ಳುವ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಇಕ್ಬಾಲ್ ಅನ್ಸಾರಿ - ಮಾನ್ಯ ಉಪಾಧ್ಯಕ್ಷರೆ, ಈ ಒಂದು ಬೀಡಿ ಕಾರ್ಮಿಕರಿಗೆ ಮನೆ ಕಟ್ಟಿಕೊಡುವಂಥ ಯೋಜನೆ ಏನು ಇದೆ, ಇದು ರಾಜ್ಯ ಸರ್ಕಾರದ ಯೋಜನೆ ಅಲ್ಲ ಇದನ್ನು ನಾನು ಮೊಟ್ಟಮೊದಲನೆಯದಾಗಿ ಹೇಳುವುದಕ್ಕೆ ಬಯಸುತ್ತೇನೆ ಇದು ಕೇಂದ್ರ ಸರ್ಕಾರದ ಯೋಜನೆ ಇದು

ಕರ್ನಾಟಕ ಸರ್ಕಾರದ ಸಹಭಾಗಿತ್ವದಿಂದ ನಡೆಯುತ್ತಿರುವಂಥ ಒಂದು ಯೋಜನೆ ಈ ಯೋಜನೆಗೆ ಹಣವಾಗಲಿ, ಸಬ್ಸಿಡಿ ಕೊಡುವುದಾಗಲಿ ಎಲ್ಲಾ ಕೇಂದ್ರ ಸರ್ಕಾರದಿಂದ ಬರುತ್ತದೆ ಅದನ್ನು ಕೊಡಲಾಗುತ್ತದೆ ಕರ್ನಾಟಕ ಸರ್ಕಾರದ ಕೆಲಸ ಏನೆಂದರೆ, ಕಾರ್ಮಿಕ ಇಲಾಖೆಯಲ್ಲಿ ಈ ಬೀಡಿ ಕಾರ್ಮಿಕರು ಏನು ಇರುತ್ತಾರೆ, ಅವರು ತಮಗೆ ಮನೆ ಬೇಕು ಎಂದು ಹೇಳಿ ಯಾರು ಇಚ್ಛೆಯನ್ನು ಪಟ್ಟಿರುತ್ತಾರೆ, ಅವರು 5 ಸಾವಿರ ರೂ ಗಳನ್ನು ಡೆಪಾಸಿಟ್ ಮಾಡಿದ ನಂತರ ಅವರು ಅರ್ಜಿಗಳನ್ನು ಸಲ್ಲಿಸಬಹುದು ಆ ಎಲ್ಲಾ ಅರ್ಜಿಗಳನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಲಾಗುತ್ತದೆ ಕೇಂದ್ರ ಸರ್ಕಾರದಿಂದ ಮಂಜೂರು ಆಗಿ ಬಂದ ನಂತರ ಅವರಿಗೆ ಮನೆಗಳನ್ನು ಕೊಡಲಾಗುತ್ತದೆ ಆ ಮನೆಗಳನ್ನು ಕೊಡಬೇಕಾದರೆ ಕೆಲವೊಂದು ಕಂಡೀಷನ್ಸ್‌ಗಳು ಇವೆ ಅದಕ್ಕೆ ಅವರು ಮೂರು ವರ್ಷ ಆ ಸಂಸ್ಥೆಯಲ್ಲಿ ದುಡಿದಿರಬೇಕು ಆ ಫ್ಲಾಟ್ ಏನಿದೆ, ಅವರ ಹೆಸರಿನಲ್ಲಿ ಇರಬೇಕಾಗುತ್ತದೆ ಇನ್ನೊಬ್ಬರ ಹೆಸರಿನಲ್ಲಿ ಇದ್ದದ್ದು ಪರಿಗಣಿಸಲಾಗುವುದಿಲ್ಲ ಆಮೇಲೆ ಮಾನ್ಸನ್ ಆಗಿಲಿ, ಕಟ್ಟಡವಾಗಲಿ, ಎಲ್ಲಾ ಖರ್ಚು ಒಂದು ಲಕ್ಷಕ್ಕಿಂತ ಮೀರಿರಬಾರದು ಎಂದು ಕೆಲವೊಂದು ನಿಬಂಧನೆಗಳು ಇವೆ ಈಗಾಗಲೇ ರಾಜ್ಯದಲ್ಲಿ ಇಲ್ಲಿಯವರೆಗೆ ಸ್ವೀಕೃತವಾದ ಅರ್ಜಿಗಳು ಎಂದರೆ, 1248 ಮಾತ್ರ, ಇವತ್ತು ಶಿವಮೊಗ್ಗ ಜಿಲ್ಲೆಯಿಂದ 2005-06ನೇ ಸಾಲಿನಲ್ಲಿ 14 ಅರ್ಜಿಗಳು ಸ್ವೀಕೃತವಾಗಿವೆ ಈ ಒಟ್ಟು ಅರ್ಜಿಗಳಲ್ಲಿ 1160 ಅರ್ಜಿಗಳು ಸ್ವೀಕೃತವಾಗಿದ್ದು ಅವು ಸ್ಯಾಂಕ್ಷನ್ ಆಗಿ ಬಂದ ತಕ್ಷಣ ಶೀಘ್ರದಲ್ಲಿ ಆ ಕಾಮಗಾರಿ ಸಹಿತ ಪ್ರಾರಂಭವಾಗುತ್ತದೆ ನಮ್ಮ ಯಾದವಾಡರವರು ಹೇಳಿದಂತೆ, ಅಲ್ಲಿ ಮನೆಗಳು ಸ್ಯಾಂಕ್ಷನ್ ಆಗಿದ್ದವು ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿದ್ದರು ಅಲ್ಲಿ ಅಡಿಗಲ್ಲು ಹಾಕಿದರೂ ಅದು ಇನ್ನುವರೆಗೆ ಪ್ರಾರಂಭವಾಗಿಲ್ಲ ನಿರ್ಮಿತ ಕೇಂದ್ರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಅದು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಶನ್‌ದವರಿಗೆ ಟೈಅಪ್ ಆಗಿರುತ್ತದೆ ಅವರ ಜೊತೆಯಲ್ಲಿ ನಾವು ಶೀಘ್ರದಲ್ಲಿ ಸಂಪರ್ಕ ಮಾಡಿ ಏಕೆ ಕೆಲಸ ಪ್ರಾರಂಭವಾಗಿಲ್ಲವೆಂದು ಕೇಳುತ್ತೇವೆ ಇದುವರೆಗೂ ಇದು ನಮ್ಮ ಗಮನಕ್ಕೆ ಬಂದಿರಲಿಲ್ಲ ನೀವು ಕರೆದುಕೊಂಡು ಹೋದಿರಿ, ಅಡಿಗಲ್ಲು ಹಾಕಿ ಎಂದಿರಿ, ನಾವು ಹಾಕಿ ಬಿಟ್ಟೆವು ಆಮೇಲೆ ಅಲ್ಲಿ ಕಾಮಗಾರಿ ಪ್ರಾರಂಭವಾಗಿಲ್ಲವೆಂದು ಹೇಳಿದಿರಿ ಕಾಮಗಾರಿ ಆಗಿಲ್ಲವೆಂದು, ನೀವು ಈಗ ಬೇರೆಯವರು ಪ್ರಶ್ನೆ ಕೇಳಿದಾಗ ಹೇಳಿದ್ದೀರಿ ನಾನು ಕಾರ್ಪೋರೇಶನ್‌ದವರನ್ನು ಕರೆಸಿ ಸೀರಿಯಸ್ಸಾಗಿ ಏಕೆ ಕಾಮಗಾರಿ ಪ್ರಾರಂಭವಾಗಿಲ್ಲವೆಂದು ಕೇಳುತ್ತೇನೆ ಅದು ನಿರ್ಮಿತ ಕೇಂದ್ರಕ್ಕೆ ಹೋಗಿದೆಯೋ, ಲ್ಯಾಂಡ್ ಆರ್ಮಿಗೆ ಹೋಗಿದೆಯೋ, ಈಗ ಕೇಳಿದರೆ ನಮಗೆ ಅದರ ಮಾಹಿತಿ ಇರುವುದಿಲ್ಲ ತಕ್ಷಣ ಇದರ ಬಗ್ಗೆ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಂಡು ಅಡಿಗಲ್ಲು ಏನು ಹಾಕಿದ್ದೇವೆ, ಅದನ್ನು ತೀವ್ರಗತಿಯಲ್ಲಿ ಪ್ರಾರಂಭವಾಗುವಂತೆ ಮಾಡುತ್ತೇವೆ

ಶ್ರೀ ವಿ ಸುನೀಲ್ ಕುಮಾರ್ - ಮಾನ್ಯ ಉಪಾಧ್ಯಕ್ಷರೆ, ಬೀಡಿ ಕಾರ್ಮಿಕರು ಎಂದರೆ ಮಾನ್ಯ ಸಚಿವರಿಗೆ ಗೊತ್ತಿರಬಹುದು ಕಡಿಮೆ ಕೂಲಿಯನ್ನು ಮಾಡಿಕೊಂಡು ಬದುಕುವಂಥ ಮಹಿಳಾ ಕೂಲಿ ಕಾರ್ಮಿಕರೇ ಹೆಚ್ಚು 2005-06 ರಲ್ಲಿ ಮನೆಗಳನ್ನು ಕೊಡಬೇಕು ಎನ್ನುವ ಕಾರಣಕ್ಕೋಸ್ಕರವಾಗಿ 5 ಸಾವಿರ ರೂ ಗಳನ್ನು ಈಗಾಗಲೇ ಡಿ ಡಿ ರೂಪದಲ್ಲಿ ಕೊಟ್ಟಾಗಿದೆ ಸುಮಾರು ಇದು ಎರಡು ವರ್ಷಗಳ ಮೇಲಾಯಿತು ಇಲ್ಲಿಯವರೆಗೆ ಅವರಿಗೆ ಯಾವುದೇ ರೀತಿಯ ಒಂದು ಆದೇಶ ಬಂದಿಲ್ಲ ಮತ್ತು ಅದರ ಸರ್ವೇ ಕೂಡ ನಡೆದಿಲ್ಲ ಇದು ಕೇಂದ್ರ ಸರ್ಕಾರದ ಯೋಜನೆ ಆದರೂ ಕೂಡ ಕರ್ನಾಟಕದಿಂದ ಹೆಚ್ಚು ಒತ್ತಾಯವನ್ನು ಮಾಡಿ ಎರಡು ವರ್ಷದಿಂದ ಡಿ ಡಿ ಯನ್ನು ಕಟ್ಟಿದರೂ ಸಹ ಉತ್ತರ ಯಾವುದೇ ಸರ್ಕಾರದಿಂದ ಬಂದಿಲ್ಲ ದಯಮಾಡಿ ಅಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಿರುವುದರಿಂದ ತಕ್ಷಣ ಅದಕ್ಕೆ ಸ್ಪಂದನ ಕೊಟ್ಟು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕಿ ಈಗೇನು ಅರ್ಜಿಗಳು ಸ್ವೀಕೃತವಾಗಿವೆ ಎಂದು ಹೇಳಿದರು, ಆ ಎಲ್ಲಾ ಮನೆಗಳನ್ನು ಮಂಜೂರಾತಿ ಮಾಡುವುದಕ್ಕೆ ವಿಶೇಷವಾದ ಪ್ರಯತ್ನವನ್ನು ಮಾನ್ಯ ಸಚಿವರು ಮಾಡಬೇಕು

ಶ್ರೀ ಇಕ್ಬಾಲ್ ಅನ್ಸಾರಿ - ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ, ಅದೆಲ್ಲಾ ನನಗೆ ಅರ್ಥವಾಗುತ್ತಿದೆ ಇದು ಹೆಚ್ಚಿಗೆ ಏಕೆ ನೋಂದಣಿಯಾಗುತ್ತಿಲ್ಲವೆಂದರೆ, ಇದೇ ಕಾರಣಕ್ಕೆ 5 ಸಾವಿರ ರೂ ಗಳನ್ನು ಮೊದಲೇ ಡೆಪಾಸಿಟ್ ಕಟ್ಟಿ ಆಮೇಲೆ ಅರ್ಜಿ ಕೊಡಬೇಕೆಂದರೆ, ಮನೆ ಬರುತ್ತದೊ ಇಲ್ಲವೋ ಎಂದು ಯೋಚಿಸುತ್ತಾರೆ ಅವರು ಬಹಳ ಕಷ್ಟದಲ್ಲಿ ಜೀವನ ನಡೆಸುವಂಥದ್ದರಿಂದ ಅರ್ಜಿಗಳು ಬಹಳ ಕಡಿಮೆ ಸ್ವೀಕೃತವಾಗುತ್ತವೆ ನಮ್ಮ ಕೆಲಸ ಏನೆಂದರೆ, ಅಲ್ಲಿ ಏನು ಅರ್ಜಿಗಳನ್ನು ಸ್ವೀಕರಿಸಿಕೊಂಡಿರುತ್ತೇವೆ, ಕಳೆದ ಮೂರು ವರ್ಷದಲ್ಲಿ ಸುಮಾರು 1248 ಅರ್ಜಿಗಳೆಲ್ಲವನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ ಅವರಿಗೆ ಮೇಲಿಂದ ಮೇಲೆ ಒತ್ತಡವನ್ನು ಹಾಕುತ್ತಿದ್ದೇವೆ ಶೀಘ್ರದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ ಅದು ಬಂದ ತಕ್ಷಣ ನಾವು ಮನೆಯನ್ನು ಕಟ್ಟಿಸಿ ಕೊಡಬೇಕಾಗುತ್ತದೆ

ಕುಮಟಾದಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆ ಸ್ಥಾಪಿಸುವುದು

133 (1018) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) - ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಕುಮಟಾ ತಾಲ್ಲೂಕಿನ ಅಪಾರ ಸಂಖ್ಯೆಯ ವಿದ್ಯಾರ್ಥಿಗಳ ಬಹು ನಿರೀಕ್ಷೆಯ ಐ ಟಿ ಐ ಯನ್ನು (ಕೈಗಾರಿಕಾ ತರಬೇತಿ ಸಂಸ್ಥೆ) ಸರಕಾರ ಈವರೆಗೆ ಮಂಜೂರು ಮಾಡದಿರಲು ಕಾರಣವೇನು?

(ಆ) ಈ ಭಾಗದ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಒಂದು ವೃತ್ತಿಪರ ಸಂಸ್ಥೆಯಾದ ಐ ಟಿ ಐ ಯನ್ನು ಕುಮಟಾದಲ್ಲಿ ಸ್ಥಾಪಿಸುವುದನ್ನು ಸರಕಾರ ಮನಗಂಡಿದೆಯೇ?

(ಇ) ಹಾಗಿದ್ದಲ್ಲಿ ಕುಮಟಾದಲ್ಲಿ ಐ ಟಿ ಐ ಯನ್ನು ಸ್ಥಾಪಿಸುವ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮವೇನು?

(ಈ) ಯಾವಾಗ ಐ ಟಿ ಐ ಯನ್ನು ಸ್ಥಾಪಿಸಲಾಗುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

(ಅ) ಅನುದಾನದ ಕೊರತೆ

(ಆ) ಹೌದು

(ಇ) ರಾಜ್ಯದ ವಿವಿಧ ಪ್ರದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪ್ರಸ್ತಾವನೆಯಲ್ಲಿ ಕುಮಟಾ ಸಹ ಇದ್ದು ಅನುದಾನ ಲಭ್ಯತೆ ಹಿನ್ನೆಲೆಯಲ್ಲಿ ಪರಿಶೀಲನೆಯಲ್ಲಿದೆ

(ಈ) ಅನುದಾನ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವುದು

6–00 PM

ಶ್ರೀ ಮೋಹನ್ ಕೃಷ್ಣ ಶೆಟ್ಟಿ – ಉತ್ತರವನ್ನು ಒದಗಿಸಿದ್ದಾರೆ "ಈ ಭಾಗದ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಒಂದು ವೃತ್ತಿಪರ ಸಂಸ್ಥೆಯಾದ ಐ ಟಿ ಐ ಯನ್ನು ಕುಮಟಾದಲ್ಲಿ ಸ್ಥಾಪಿಸುವುದನ್ನು ಸರ್ಕಾರ ಮನಗಂಡಿದೆಯೇ" ಎಂದರೆ "ಹೌದು" ಎಂದು ಉತ್ತರಿಸಿದ್ದಾರೆ "ಹಾಗಿದ್ದಲ್ಲಿ ಕುಮಟಾದಲ್ಲಿ ಐ ಟಿ ಐ ಯನ್ನು ಸ್ಥಾಪಿಸುವ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮವೇನು" ಎನ್ನುವ ಪ್ರಶ್ನೆಗೆ "ರಾಜ್ಯದ ವಿವಿಧ ಪ್ರದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪ್ರಸ್ತಾವನೆಯಲ್ಲಿ ಕುಮಟಾ ಸಹ ಇದ್ದು ಅನುದಾನ ಲಭ್ಯತೆ ಹಿನ್ನೆಲೆಯಲ್ಲಿ ಪರಿಶೀಲನೆಯಲ್ಲಿದೆ" ಎಂದು ಹೇಳುತ್ತಿದ್ದಾರೆ ಆದರೆ ಹಿಂದಿನ ಸಲ ಲಿಖಿತ ಮೂಲಕ ಉತ್ತರದಲ್ಲಿ ಮಾನ್ಯ ಸಚಿವರು ಪ್ರಾಮೀಸ್ ಮಾಡಿದ್ದರು ಈಗ ಕೇಳಿದರೆ ಅನುದಾನಿತ ಎಂದು ಹೇಳುತ್ತಾರೆ ಅನುದಾನಿತ ಎಂದ ಮೇಲೆ ಬಾಕಿ ಎಲ್ಲಾ ಕ್ಷೇತ್ರಕ್ಕೆ ಕೊಡಲಿಕ್ಕೆ ಇವರಿಗೆ ಸಾಧ್ಯವಾಗುತ್ತದೆ, ನಮ್ಮ ಕ್ಷೇತ್ರಕ್ಕೆ ಆಗುತ್ತಿಲ್ಲ ನಮ್ಮ ಕ್ಷೇತ್ರದಲ್ಲಿ ಕನಿಷ್ಟ 2,000 ಕ್ಕಿಂತ ವಿದ್ಯಾರ್ಥಿಗಳು ಹೈಸ್ಕೂಲ್ ನಿಂದ ಎಸ್ ಎಸ್ ಎಲ್ ಸಿ ಪಾಸಾಗಿ ಬರುತ್ತಿದ್ದಾರೆ ಅವರಿಗೆ ಅಲ್ಲಿ ಸ್ವಂತ ಉದ್ಯೋಗ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಅಂಥವರಿಗೆ ವೃತ್ತಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಅಲ್ಲಿ ಸಣ್ಣ ಪುಟ್ಟ ಉದ್ಯೋಗ ಮಾಡಿಕೊಂಡು ಹೋಗಲಿಕ್ಕೆ ಇವತ್ತಿನ ದಿವಸದಲ್ಲಿ ಅವಕಾಶ ಇದೆ ಹಾಗಾಗಿ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ನಮ್ಮ ಕುಮಟಾದಲ್ಲಿ ಒಂದು ಆಯಕಟ್ಟಿನ ಸ್ಥಳ ಬಹಳ ಒಳ್ಳೆಯ ವಿದ್ಯಾರ್ಥಿಗಳು ಇರುತ್ತಾರೆ ಅವರಿಗೊಂದು ಐ ಟಿ ಐ ಸಂಸ್ಥೆ

ಕೊಡಬೇಕು ಯಾವಾಗ ಕೊಡುತ್ತಾರೆಂದು ಅವರು ನಮಗೆ ತಿಳಿಸಬೇಕಾಗುತ್ತದೆ ನಾಲ್ಕೈದು ವರ್ಷಗಳಿಂದ ಇದರ ಬಗ್ಗೆ ನಾನು ಪ್ರಯತ್ನ ಮಾಡುತ್ತಿದ್ದೇನೆ ಪ್ರಶ್ನೆಯನ್ನು ಕೂಡ ಮಾಡುತ್ತಿದ್ದೇನೆ ಮಾನ್ಯ ಸಚಿವರು ಸ್ಪೆಸಿಫಿಕ್ ಆಗಿ ಯಾವಾಗ ಕೊಡುತ್ತಾರೆ? ಹೇಳಬೇಕು, ಇಲ್ಲವಾದಲ್ಲಿ ಇದೇ ರೀತಿಯಾದರೆ ಮುಂದೆ ಆ ವಿದ್ಯಾರ್ಥಿಗಳಿಗೆ ಭವಿಷ್ಯ ಇಲ್ಲ ಅವರ ಭವಿಷ್ಯದ ಸಲುವಾಗಿ ಸರ್ಕಾರ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕು ಈ ರೀತಿ ಮಹತ್ವ ಕೊಡದೇ ಹೋದರೆ ಇವರೇ ಮುಂದೆ ನಕ್ಸಲೈಟ್ ಆಗಲಿಕ್ಕೆ ಇದೇ ಕಾರಣವಾಗುತ್ತದೆ ಹಾಗಾಗಿ ಇದಕ್ಕೆ specific ಉತ್ತರ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಡಿ ಕೆ ಶಿವಕುಮಾರ್ – ಇಲ್ಲಿ ನನಗೆ ತಿಳಿದ ಹಾಗೆ ಅನ್ಸಾರಿಯವರಿಗೆ ಐ ಟಿ ಐ ಸಂಸ್ಥೆಗಳನ್ನು ಕೊಡಲಿಕ್ಕೆ ಏನು ಪವರ್ಸ್ ಇಲ್ಲವೆಂದು ಕಾಣುತ್ತದೆ ಅಥವಾ ಅನ್ಸಾರಿಯವರಿಗೆ ಪವರ್ ಇದ್ದರೆ ಅವರು ರಾಜಕಾರಣ ಮಡುತ್ತಿದ್ದಾರೆಂದು ಅನ್ನಿಸುತ್ತದೆ ಏಕೆಂದರೆ ಕಾಂಗ್ರೆಸ್ ಪಕ್ಷದ ಯಾವ ಕ್ಷೇತ್ರದಲ್ಲಿಯೂ ಕೂಡ ಇಲ್ಲಿ ವಿರೋಧ ಪಕ್ಷದಲ್ಲಿರುವ ಸದಸ್ಯರು, ಒಬ್ಬರಿಗೂ ಕೂಡ ಒಂದು ಐ ಟಿ ಐ ಸಂಸ್ಥೆಯನ್ನು ಕೊಟ್ಟಿದ್ದನ್ನು ಲಿಸ್ಟ್‌ನಲ್ಲಿ ನೋಡಿಲ್ಲ ಅವರಿಗೆ ಬೇಕಾದವರಿಗೆ ಕೊಡುತ್ತಾರೆ ನಮಗೆ ತಿಳಿದ ಹಾಗೆ ಯಾರೋ ಒಬ್ಬರು senior most minister ಮುಂದಕ್ಕೆ CM, DCM ಆಗುತ್ತಾರೆ ಅವರು ಎಲ್ಲಾ ಫೈಲ್ಸ್ ತರಿಸಿಕೊಂಡು ಅವರಿಗೆ ಬೇಕಾದುದನ್ನು ಕ್ಲಿಯರ್ ಮಾಡುತ್ತಾರೆಂದು ಪತ್ರಿಕೆಗಳಲ್ಲಿದೆ ಎಂದು ಕೆಲವು ಸ್ನೇಹಿತರು ಹೇಳಿದರು ಅನ್ಸಾರಿಯವರಿಗೆ ಜವಾಬ್ದಾರಿ ಇದ್ದರೆ ನ್ಯಾಯಬದ್ಧವಾಗಿ ಎಲ್ಲೆಲ್ಲಿ ಅವಶ್ಯಕತೆ ಇದೆ, ಇಲ್ಲವೇ ಎಂ ಎಲ್ ಎ ಗಳು ಎಲ್ಲೆಲ್ಲಿ ಕೇಳುತ್ತಾರೆ ಅಲ್ಲಲ್ಲಿ ಸ್ವಲ್ಪ ರಾಜಕಾರಣವನ್ನು ಬದಿಗೊತ್ತಿ ಐ ಟಿ ಐ ಸಂಸ್ಥೆ ಕೊಡಬೇಕು ಐ ಟಿ ಐ ಕೊಡುವುದರಿಂದ, ರಸ್ತೆ ಮಾಡುವುದರಿಂದ ಯಾವುದೇ ರಾಜಕಾರಣ ಏನೂ ಆಗುವುದಿಲ್ಲ ಆದುದರಿಂದ ಇಂಥ ವಿಚಾರದಲ್ಲಿ ತಮ್ಮ ಹೃದಯ ಶ್ರೀಮಂತಿಕೆಯನ್ನು ತೋರಿಸಿ ಇಂಥ ಕ್ಷೇತ್ರಗಳಲ್ಲಿ ಐ ಟಿ ಐ ಕೊಡುವ ಬಗ್ಗೆ ಅನೌನ್ಸ್‌ಮೆಂಟ್ ಮಾಡಬೇಕು

ಶ್ರೀ ಹೆಚ್ ಸಿ ಬಾಲಕೃಷ್ಣ – ಇವರ ಕಾಲದಲ್ಲಿ ಎಷ್ಟು ಟಿ ಸಿ ಹೆಚ್, ಬಿ ಎಡ್ ಕಾಲೇಜುಗಳನ್ನು ಎಲ್ಲೆಲ್ಲಿ ಕೊಟ್ಟಿದ್ದಾರೆಂದು ದಯಮಾಡಿ ಹೇಳಬೇಕು ನಮಗೆ ನೀವೇನು ಕೊಟ್ಟಿಲ್ಲ ಯಾರ್‍ಯಾರಿಗೋ ಕೊಟ್ಟುಕೊಂಡಿದ್ದೀರಿ

ಶ್ರೀ ಡಿ ಕೆ ಶಿವಕುಮಾರ್ – ಆಗಲೂ ನಿಮಗೆ ಕೊಟ್ಟಿದ್ದೇವೆ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ – ಈ ರಾಜ್ಯಕ್ಕೆ ಐ ಟಿ ಐ ಕ್ಷೇತ್ರಗಳನ್ನು ಕೊಟ್ಟಿರುವುದು, ಬೇರೆ ರಾಜ್ಯಕ್ಕೆ ಏನು ಕೊಟ್ಟಿಲ್ಲ

(ಗೊಂದಲ)

ಶ್ರೀ ಇಕ್ಬಾಲ್ ಅನ್ಸಾರಿ (ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) – ಮಾನ್ಯ ಸದಸ್ಯರಾದ ಮೋಹನ್ ಶೆಟ್ಟಿಯವರು ಕೇಳಿರುವ ಪ್ರಕಾರ ಕುಮಟಾದಲ್ಲಿ ಐ ಟಿ ಐ ಸಂಸ್ಥೆ ನೀಡುವಂತೆ ಹಿಂದೆಯು ಪ್ರಸ್ತಾವನೆ ಸಲ್ಲಿಸಿದ್ದರು, ಈಗಲೂ ಸಹ ಹೇಳಿದ್ದಾರೆ ನಿಜ, ಮಾನ್ಯ ಉಪಾಧ್ಯಕ್ಷರೇ, ಆದರೆ ಹಣಕಾಸಿನ ಲಭ್ಯತೆಯನ್ನು ನಾವು ನೋಡಬೇಕು ಎಲ್ಲೆಲ್ಲಿ ಅವಶ್ಯಕತೆ ಇದೆ, ಎಲ್ಲಿ ಐ ಟಿ ಐ ಕಾಲೇಜುಗಳು ಇಲ್ಲ, ಅದಕ್ಕನುಗುಣವಾಗಿ ನಾವು ಕೊಟ್ಟಿದ್ದೇವೆ ಈಗಾಗಲೇ ನಮ್ಮ ಉತ್ತರ ಕನ್ನಡದಲ್ಲಿ ಸುಮಾರು 16 ವಿವಿಧ ಐ ಟಿ ಐ ಕಾಲೇಜುಗಳು ಇವೆ ಆರು ಸರ್ಕಾರಿ ಐ ಟಿ ಐ ಕಾಲೇಜುಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ನಡೆಯುತ್ತಿವೆ ಹೊನ್ನಾವರ, ಹಳಿಯಾಳ, ಪಾಳಗ್ರಾಮ, ಮುನಗೋಳದಲ್ಲಿ ಇವೆ, ದಾಂಡೇಲಿಯಲ್ಲಿ ಮಹಿಳಾ ಐ ಟಿ ಐ ಸಂಸ್ಥೆ ಇದೆ ಇನ್ನು ಅನುದಾನಿತ

ಶ್ರೀ ಡಿ ಕೆ ಶಿವಕುಮಾರ್ – ಚರಿತ್ರೆ ಬೇಡ, ಕುಮಟಾಕ್ಕೆ ಕೊಡಲಿಕ್ಕಾಗುತ್ತದೆಯೇ ಇಲ್ಲವೇ? ಅಷ್ಟು ಹೇಳಿ ಸ್ವಾಮಿ? ನಿಮ್ಮ ಚರಿತ್ರೆಯೆಲ್ಲಾ ಯಾರಿಗೆ ಬೇಕು ಏಕೆಂದರೆ ಈಗ ತಾನೆ ಹೇಳಿದಿರಿ, ಯಡಿಯೂರಪ್ಪನವರು ನಾನು ಹೇಳಿದ ಹಾಗೆ ಕೇಳುತ್ತಾರೆಂದು ನಮಗೆ ಬಹಳ ಸಹಾಯ ಮಾಡುತ್ತಾರೆಂದು, ನಿಮಗೂ ಯಡಿಯೂರಪ್ಪನವರಿಗೂ ಇರುವ ನಂಟಸ್ಥಿಕೆ ಬಗ್ಗೆ ನಮಗೆ ಗೊತ್ತಿದೆ, ನೀವು ನೇರವಾಗಿ ಕೊಡಲಿಕ್ಕಾಗುತ್ತದೆಯೇ ಇಲ್ಲವೇ ಅಷ್ಟನ್ನು ಹೇಳಿ

ಶ್ರೀ ಇಕ್ಬಾಲ್ ಅನ್ಸಾರಿ – ಈಗ ಕಡಿಮೆ ಉತ್ತರ ಕೊಟ್ಟರೆ ಇಷ್ಟೇ ಉತ್ತರ ಕೊಟ್ಟರು ಎನ್ನುತ್ತೀರಿ ದೀರ್ಘವಾಗಿ ಉತ್ತರ ಕೊಟ್ಟರೆ ಚರಿತ್ರೆಯನ್ನು ಹೇಳಬೇಡಿ ಎಂದು ಹೇಳುತ್ತೀರಿ ಇದೆಂಥಾ ವಿಪರ್ಯಾಸ

ಶ್ರೀ ಡಿ ಕೆ ಶಿವಕುಮಾರ್ – ನಾವು ಕೊಡುತ್ತೇವೆಂದು ಅನೌನ್ಸ್‌ಮೆಂಟ್ ಮಾಡಿ ಅಷ್ಟೇ ನಿಮ್ಮದು ಇನ್ನೇನು ಬೇಡ

ಉಪಾಧ್ಯಕ್ಷರು – ಈಗ ಪ್ರಶ್ನೆಗೆ ಉತ್ತರವನ್ನು ಹೇಳಿಬಿಡಿ, ಹಿಂದಕ್ಕೆ ಹೋಗಬೇಡಿ

ಶ್ರೀ ಡಿ ಕೆ ಶಿವಕುಮಾರ್ – ಕುಮಟಾಕ್ಕೆ ಐ ಟಿ ಐ ಸಂಸ್ಥೆ ಕೊಡುತ್ತೇವೆ, ಇಲ್ಲವಾದರೆ ಇಲ್ಲ ಅಷ್ಟು ಹೇಳಿ

ಶ್ರೀ ಇಕ್ಬಾಲ್ ಅನ್ಸಾರಿ – ಇದರಲ್ಲಿ ಬಹಳ ಮಹತ್ವ ಇದೆ ಅದಕ್ಕೆ ಮಾಧ್ಯಮದಲ್ಲಿ ಏನು ಮಾಹಿತಿ ಹೋಗಬೇಕಾಗುತ್ತದೆ

ಉಪಾಧ್ಯಕ್ಷರು – ಮಹತ್ವ ಕಟ್ಟಿಕೊಂಡು ಅವರಿಗೆ ಏನಾಗಬೇಕು ಉತ್ತರ ಕೊಡಿ ಅಷ್ಟೆ

ಶ್ರೀ ಇಕ್ಬಾಲ್ ಅನ್ಸಾರಿ – ಈಗಾಗಲೇ ಆರು ಸರ್ಕಾರಿ ಐ ಟಿ ಐ ಸಂಸ್ಥೆಗಳಿವೆ ಎರಡು ಅನುದಾನಿತ ಇದೆ, ಅನುದಾನಿತವೂ ಸರ್ಕಾರದ್ದು ಇದ್ದ

ಹಾಗೆ 8 ಖಾಸಗಿ ಇವೆ ಸರ್ಕಾರ ಒಳ್ಳೆಯ ರೀತಿಯಿಂದ ಐ ಟಿ ಐ ಸಂಸ್ಥೆ ಕೊಡಲಿಕ್ಕೆ ಕೆಲಸ ಮಾಡುತ್ತೇವೆ ಕುಮಟಾಗೆ ಏನು ಕೊಡಬೇಕಾಗಿದೆ 20 ಕಿ ಮೀ ದೂರದಲ್ಲಿದೆ ಅಲ್ಲಿಗೆ ಕೊಡಬೇಕಾಗಿತ್ತು ನಾವು ಏನು ಮಾಡಿದ್ದೇವೆ, ಅಂದರೆ ಅಲ್ಲಿ ಕೊಡಬೇಕಾಗಿದೆಯೆಲ್ಲ, ಅದಕ್ಕಿಂತ ಇನ್ನೂ ಜರೂರಾಗಿರುವ ಕಡೆ ಅವಶ್ಯಕತೆ ಎಲ್ಲಿದೆ, ಈ ಸಾರಿ ಅಲ್ಲಿಗೆ ಕೊಡೋಣ Next ಅಲ್ಲಿಗೆ ಕೊಡೋಣ ಏಕೆಂದರೆ ಅಲ್ಲೇನು ಕೆಲಸ ನಿಂತಿಲ್ಲ 18 ಸಂಸ್ಥೆಗಳು ಈಗಾಗಲೇ ಕೆಲಸ ನಿರ್ವಹಿಸುತ್ತಿವೆ

(ಗೊಂದಲ)

ಶ್ರೀ ಡಿ ಕೆ ಶಿವಕುಮಾರ್ – ಇಲ್ಲೇ ಕೊಡಿ ಸ್ವಾಮಿ

ಶ್ರೀ ಹೆಚ್ ಸಿ ಬಾಲಕೃಷ್ಣ – ಯಾರ ಪ್ರಶ್ನೆ, ಯಾರು ಪ್ರಶ್ನೆಯನ್ನು ಕೇಳುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ

(ಗೊಂದಲ)

ಉಪಾಧ್ಯಕ್ಷರು – ಈಗ ಉತ್ತರ ಕೊಡುತ್ತಾರೆ ಕುಳಿತುಕೊಳ್ಳಿ

ಶ್ರೀ ಇಕ್ಬಾಲ್ ಅನ್ಸಾರಿ – ಶ್ರೀ ಡಿ ಕೆ ಶಿವಕುಮಾರ್ ಸಾಹೇಬರಿಗೆ ಹೇಳಲಿಕ್ಕೆ ಬಯಸುತ್ತಿದ್ದೇನೆ ಅಲ್ಲಿ ಅನ್ಸಾರಿಯವರ ಹತ್ತಿರವಿರುವ ಖಾತೆಗೆ ಪವರ್ ಇಲ್ಲ ಅದಕ್ಕೋಸ್ಕರ ಏನೋ ರಾಜಕೀಯ ಮಾಡುತ್ತಾರೆಂದು ಅವರು ಹೇಳಿದರು ನಾನು ಇಲ್ಲಿ ರಾಜಕೀಯ ಮಾಡುತ್ತಿಲ್ಲ ಸಾಕಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದೇನೆ ನಮ್ಮ ಕೆಲಸ ನೋಡಿ, ಕೆಲಸದ ಕಡೆ ಗಮನ ಕೊಡಿ

ಶ್ರೀ ಡಿ ಕೆ ಶಿವಕುಮಾರ್ – ನಿಮಗೆ ಪವರ್ ಇದ್ದರೆ, ನಿಮಗೆ ನಂಬಿಕೆ ಇದ್ದರೆ ಕೊಡಿ

ಶ್ರೀ ಎಂ ಟಿ ಕೃಷ್ಣಪ್ಪ – ನೀವು ಹೇಳಿದ ಹಾಗೆ ಎಲ್ಲೆಂದರಲ್ಲಿ ಕೊಡಲಿಕ್ಕಾಗುವುದಿಲ್ಲ

ಶ್ರೀ ಇಕ್ಬಾಲ್ ಅನ್ಸಾರಿ – ಈಗಾಗಲೇ ನಾವು ಐ ಟಿ ಐ ಕಾಲೇಜುಗಳನ್ನು ಕೊಟ್ಟಿದ್ದೇವೆ ಕಾಂಗ್ರೆಸ್ ಪಕ್ಷ ಇದ್ದ ಕಡೆ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ ಹೋದ ಅಧಿವೇಶನದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಔರಾದ್‌ನಲ್ಲಿ ಬೇಕು ಎಂದು ಕೇಳಿದರು, ಈ ವರ್ಷ ನಾವು ಔರಾದ್, ಯಲ್‌ಬರ್ಗ, ಇನ್ನು ಅನೇಕ ಕಡೆಗಳಲ್ಲಿ ಕೊಟ್ಟಿದ್ದೇವೆ ಇಷ್ಟೆಲ್ಲಾ ಕೊಟ್ಟರೆ ಇದು ಕಾಂಗ್ರೆಸ್ ಪಕ್ಷದವರಿಗೆ ಕೊಟ್ಟಿದ್ದು ಅಲ್ಲವೇ?

ಉಪಾಧ್ಯಕ್ಷರು – ಈಗ ಕೊಟ್ಟಿದ್ದೀರಿ, ಇಲ್ಲವೆಂದು ಹೇಳಿಲ್ಲ ಪರಿಶೀಲನೆ ಮಾಡಿ ಕೊಡುತ್ತೇವೆ ಎಂದು ಹೇಳಿ ಈಗ ಆಯಿತು, ಒಪ್ಪಿಕೊಂಡಿದ್ದಾರೆ ಕೊಡುತ್ತೇವೆಂದು ಹೇಳಿದ್ದಾರೆ

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ನಂಜುಂಡಪ್ಪ ವರದಿಯ ಪ್ರಕಾರ ಕೊಡಬೇಕು ಈ ರೀತಿ ನಾವು ಒಪ್ಪಿಕೊಳ್ಳುವುದಿಲ್ಲ

ಉಪಾಧ್ಯಕ್ಷರು ಒಪ್ಪಿಕೊಂಡಿದ್ದಾರೆ ಕೊಡುತ್ತೇವೆಂಯು ಹೇಳಿದ್ದಾರಲ್ಲ ಕುಳಿತುಕೊಳ್ಳಿ ದಯವಿಟ್ಟು ಕುಳಿತುಕೊಳ್ಳಿ ನಾಳೆ ಮಾತನಾಡಿ

ಶ್ರೀ ಬಿ ಕೆ ಸಂಗಮೇಶ್ – ನಮ್ಮ ಕ್ಷೇತ್ರದಲ್ಲಿ ಐ ಟಿ ಐ ಸಂಸ್ಥೆಗಳು ಇಲ್ಲ, ಕಾಲೇಜುಗಳಿವೆ ಅದನ್ನು ಮೇಲ್ದರ್ಜೆಗೇರಿಸಬೇಕಾಗಿದೆ ಸರ್ಕಾರಕ್ಕೆ ನಾಲ್ಕು ಸಾರಿ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ ರಾತ್ರಿ ರಾಮನಗರಕ್ಕೆ ಹೋಗಿದೆ ಏನಾಯಿತು ಎಂಬುದು ನಮಗೆ ಅರ್ಥವಾಗುತ್ತಿಲ್ಲ ದಯವಿಟ್ಟು ನಮ್ಮ ಕಾರ್ಮಿಕ ಸಚಿವರು ತಿಳಿಸಬೇಕು

ಶ್ರೀ ಹೆಚ್ ಸಿ ಬಾಲಕೃಷ್ಣ – ಸಾತನೂರಿಗೆ ಹೋಗಿಲ್ಲ

(ಗೊಂದಲ)

ಶ್ರೀ ಡಿ ಕೆ ಶಿವಕುಮಾರ್ – ಇಲ್ಲ

ಉಪಾಧ್ಯಕ್ಷರು – ಕುಳಿತುಕೊಳ್ಳಿ ಉತ್ತರ ಹೇಳುತ್ತಾರೆ

ಶ್ರೀ ಇಕ್ಬಾಲ್ ಅನ್ಸಾರಿ ಅವರು ಹೇಳಿರುವುದನ್ನು ಪರಿಶೀಲಿಸುತ್ತೇವೆ ಮೇಲ್ದರ್ಜೆಗೇರಿಸಲಿಕ್ಕೆ ಕೇಳಿದ್ದಾರೆ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ – ಎಲ್ಲರೂ ಮಾಡುವುದು ಅದನ್ನೇ, ಸುಮ್ಮನಿರಿ, ಮಾತನಾಡುವುದೊಂದು, ಮಾಡುವುದೇ ಒಂದು ಯಾರ್ಯಾರು ಏನೇನು ಮಾತನಾಡಿದ್ದಾರೆ ಎಲ್ಲರಿಗೂ ಗೊತ್ತು

(ಗೊಂದಲ)

ಉಪಾಧ್ಯಕ್ಷರು – ಬಾಲಕೃಷ್ಣರವರೇ, ನೀವು ಡಿ ಕೆ ಶಿವಕುಮಾರ್‌ರವರು ಈ ರೀತಿ ಮಾತನಾಡುತ್ತೀರಿ, ಇನ್ನು ಅರ್ಧ ಗಂಟೆಗೆ ನೀವು ಅವರ ಪಕ್ಕ ಕುಳಿತುಕೊಳ್ಳುತ್ತೀರಿ, ಯಾರನ್ನು ನಾವು ನಂಬಬೇಕು ಇಲ್ಲಿ

ಶ್ರೀ ಡಿ ಕೆ ಶಿವಕುಮಾರ್ – ನಾವಿಬ್ಬರು ಒಂದೇ ಜಿಲ್ಲೆಯವರು, ನನ್ನನ್ನು ತೆಗೆದುಕೊಂಡು ಹೋಗಿ ರಾಮನಗರಕ್ಕೆ ಸೇರಿಸಿದ್ದಾರೆ

ಉಪಾಧ್ಯಕ್ಷರು – ಇವರಿಬ್ಬರದು ಇದು friendly ವಾಗ್ಯುದ್ಧ

(ಗೊಂದಲ)

ಉಪಾಧ್ಯಕ್ಷರು – ಈಗ ಆಯಿತು, ಪರಿಶೀಲನೆ ಮಾಡಿಸಿ ಅಪ್‌ಗ್ರೇಡ್ ಮಾಡಿಸುತ್ತೇವೆಂದು ಹೇಳಿದ್ದಾರೆ ಒಪ್ಪಿಕೊಂಡಿದ್ದಾರೆ

ಹಿಂದುಳಿದ ತಾಲ್ಲೂಕುಗಳಲ್ಲಿ ಪಶು ಸಂಪತ್ತು

134 (1011) ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) – ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಡಾ॥ ಡಿ ಎಂ ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಪಶು ಸಂಪತ್ತನ್ನು ಅಭಿವೃದ್ಧಿಪಡಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

(ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ರೇವು ನಾಯಕ್ ಬೆಳಮಗಿ (ಪಶು ಸಂಗೋಪನಾ ಸಚಿವರು) –

(ಅ) ಡಾ॥ ನಂಜುಂಡಪ್ಪ ವರದಿಯನ್ವಯ ಪಶು ಸಂಪತ್ತನ್ನು ಅಭಿವೃದ್ಧಿಪಡಿಸಲು ಹಲವು ಯೋಜನೆಗಳು ಸರ್ಕಾರದ ಮುಂದಿದೆ

(ಆ) ಡಾ॥ ನಂಜುಂಡಪ್ಪ ಇವರ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಪಶು ಸಂಪತ್ತನ್ನು ಅಭಿವೃದ್ಧಿಪಡಿಸುವ ಸಂಬಂಧ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

(1) ಪಶು ಚಿಕಿತ್ಸಾಲಯ ಕೊರತೆ ಇರುವ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ 318 ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಬೇಕಾಗಿದ್ದು, 2006–07ನೇ ಸಾಲಿನಲ್ಲಿ ಈಗಾಗಲೇ 69 ಪಶು ಚಿಕಿತ್ಸಾಲಯಗಳನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ ಬಾಕಿ ಉಳಿದ 249 ಪಶು ಚಿಕಿತ್ಸಾಲಯಗಳನ್ನು ಕೊರತೆ ಇರುವ ತಾಲ್ಲೂಕುಗಳಲ್ಲಿ ಮುಂದಿನ 8 ವರ್ಷಗಳಲ್ಲಿ ಹಂತ ಹಂತವಾಗಿ ತೆರೆಯಲು ಕ್ರಮವಹಿಸಿದೆ

(2) ಉತ್ತರ ಕರ್ನಾಟಕದಲ್ಲಿನ ಡೈರಿ ಅಭಿವೃದ್ಧಿ ಚಟುವಟಿಕೆಗಳನ್ನು ಬಲಪಡಿಸಲು ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಹಾಲು ಮಹಾಮಂಡಳಿ ಮುಖಾಂತರ ರೂ 600 00 ಲಕ್ಷಗಳ ಅನುದಾನದಲ್ಲಿ ಬಳ್ಳಾರಿ, ರಾಯಚೂರು, ಕೊಪ್ಪಳ, ಬೀದರ್, ಗುಲ್ಬರ್ಗಾ ಜಿಲ್ಲೆ ಹಾಲು ಒಕ್ಕೂಟಗಳ ಅಡಿಯಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಿದೆ

(3) ಸಂಚಾರಿ ಪಶು ಚಿಕಿತ್ಸಾಲಯ ಬಲವರ್ಧನೆಗಾಗಿ 102 ಸಂಚಾರಿ ಪಶು ಚಿಕಿತ್ಸಾಲಯ ವಾಹನಗಳನ್ನು ಪ್ರಸ್ತುತ ಸಾಲಿನಲ್ಲಿ ಡಾ॥ ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸಿನನ್ವಯ ಅತಿ ಹಿಂದುಳಿದ ತಾಲ್ಲೂಕುಗಳು ಮತ್ತು ಮಲೆನಾಡಿನ 13 ಜಿಲ್ಲೆಯ ತಾಲ್ಲೂಕುಗಳಿಗೆ ಒದಗಿಸಲು ಪ್ರಸ್ತಾಪಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ

(4) ಪಶುವೈದ್ಯ ಪದವೀಧರರ ಕೊರತೆ ಸರಿದೂಗಿಸಲು ಹೆಚ್ಚಿನ ಪಶು ವೈದ್ಯಕೀಯ ಕಾಲೇಜು ಸ್ಥಾಪಿಸಲು ಶಿಫಾರಸ್ಸು ಇದ್ದು, ಈ ನಿಟ್ಟಿನಲ್ಲಿ ಬೀದರ್‌ನಲ್ಲಿ ಪಶು ವೈದ್ಯಕೀಯ ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಈಗಾಗಲೇ ಸ್ಥಾಪನೆ ಮಾಡಲಾಗಿದೆ ಮತ್ತು ಶಿವಮೊಗ್ಗ ಹಾಗೂ ಹಾಸನದಲ್ಲಿ 2 ಹೊಸ ಪಶು ವೈದ್ಯಕೀಯ ಕಾಲೇಜುಗಳನ್ನು ಸಹ ಸ್ಥಾಪಿಸಲಾಗಿದೆ

(5) ಖಾಲಿ ಇರುವ ಪಶುವೈದ್ಯರ ಹುದ್ದೆಗಳನ್ನು ಭರ್ತಿ ಮಾಡುವ ಹಿನ್ನೆಲೆಯಲ್ಲಿ 2006-07 ಮತ್ತು 2007-08 ನೇ ಸಾಲಿನಲ್ಲಿ ಈಗಾಗಲೇ 419 ಪಶುವೈದ್ಯರನ್ನು ನೇಮಕಾತಿ ಮಾಡಿ ಸ್ಥಳ ನಿಯುಕ್ತಿ ಸಹ ಮಾಡಲಾಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ – ನಂಜುಂಡಪ್ಪ ವರದಿಯ ಆಧಾರದ ಪಶು ಸಂಪತ್ತನ್ನು ಅಭಿವೃದ್ಧಿಗೊಳಿಸಲಿಕ್ಕೆ ತಮ್ಮ ಕಾರ್ಯಕ್ರಮ ಏನು ಎಂದು ಕೇಳಿದ್ದೆ ಇದು ಅವರಿಗೆ ಅರ್ಥ ಆಗುತ್ತಿದೆಯೋ ಇಲ್ಲವೋ ಗೊತ್ತಿಲ್ಲ ಪಶು ಸಂಗೋಪನಾ ಆಸ್ಪತ್ರೆಯನ್ನು ಮಾಡುತ್ತಿದ್ದೇವೆ ಡಾಕ್ಟರ್ಸ್ ಕೊಡುತ್ತಿದ್ದೇವೆ KMFಗೆ ಹಣ ಕೊಡುತ್ತಿದ್ದೇವೆ ಈ ಉತ್ತರಗಳನ್ನು ನೀವು ಕೊಟ್ಟಿದ್ದೀರಿ Actual ಆಗಿ ನಮ್ಮ breeding policy ಏನು? ಜನಗಳಿಗೇನಾದರು ಪಶು ಸಂಪತ್ತನ್ನು ಸಾಲ, ಸಬ್ಸಿಡಿ ಕೊಟ್ಟು ಕೊಡಿಸುವಿರಾ? ಹಳ್ಳಿಕಾರ್ ಬ್ರೀಡ್ ಮಾಡುವಿರಾ? ಅಮೃತಮಹಲ್ breed ಮಾಡುವಿರಾ? ಅಥವಾ ಎಲ್ಲಾ H F breed introduce ಮಾಡುವಿರಾ? ಅಲ್ಲಿರುವ ಜನಗಳ ಜೀವನ ಮಟ್ಟ ಸುಧಾರಿಸಲಿಕ್ಕೆ ಜಾನುವಾರುಗಳನ್ನು ಕೊಡಿಸಲಿಕ್ಕೆ ನಿಮಗೇನಾದರೂ ಕಾರ್ಯಕ್ರಮ ಇದೆಯೇ? ಹಿಂದುಳಿದ ವರ್ಗದ ಕುಟುಂಬ ಮೇಲೆ ಬರಬೇಕೆಂದರೆ subsidiary occupations ಮಾಡಬೇಕು ಬರೀ ಕೃಷಿಯಿಂದ ಮಾಡಲಿಕ್ಕಾಗುವುದಿಲ್ಲ ಎಂದು ನಂಜುಂಡಪ್ಪನವರು ಸ್ಪಷ್ಟವಾಗಿ ಬರೆದಿದ್ದಾರೆ ಆ ಕುಟುಂಬಗಳಿಗೆ ಏನಾದರೂ ಹಸು ಕೊಡಿಸಲಿಕ್ಕೆ, ಸ್ಥಳಿಯ ಕರು ಕೊಡಿಸಲಿಕ್ಕೆ ಸಹಾಯ ಮಾಡುವಿರಾ? ಏಕೆಂದರೆ ಅವರು ಸಾಕಬೇಕಲ್ಲವೆ 40 ಕೆ ಜಿ product ತಿನ್ನುವ ಹಸು ತಂದು 40,000/- ಕೊಟ್ಟು ಬದುಕಿಸಲಿಕ್ಕಾಗುವುದಿಲ್ಲ ಅಂಥವರಿಗೆ ಸರ್ಕಾರದವರು ಏನಾದರೂ ಕಾರ್ಯಕ್ರಮ ಹಾಕಿಕೊಂಡಿದೆಯೇ ಎಂಬುದನ್ನು ಸರ್ಕಾರ ಹೇಳಬೇಕು

ಶ್ರೀ ರೇವು ನಾಯಕ್ ಬೆಳಮಗಿ (ಮಾನ್ಯ ಪಶು ಸಂಗೋಪನಾ ಸಚಿವರು) – ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪ ವರದಿ ಆಧಾರಿತ ಅವರು ಕೇಳಿರುವ ಪ್ರಶ್ನೆಗೆ ನಾನು ಸವಿಸ್ತಾರವಾಗಿ ಉತ್ತರವನ್ನು ಹೇಳಿದ್ದೇನೆ ಅವರು ಓದಿಕೊಂಡಿದ್ದಾರೆ ಆದರೂ ಅವರು ಇಲ್ಲಿ ಇರದಿದ್ದ ಪ್ರಶ್ನೆಗಳನ್ನು ಕೇಳಿದ್ದಾರೆ ಏನು ಕೇಳಿದ್ದಾರೆಂದರೆ ಬಡಜನರಿಗೆ ಮೇಲೆ ತರಲಿಕ್ಕೆ ಏನಾದರೂ ಕಾರ್ಯಕ್ರಮ, ಹಿಂದುಳಿದ ತಾಲ್ಲೂಕುಗಳಿಗೆ ಏನಾದರೂ ಮಾಡಿರುವಿರಾ ಹೇಳಿ ಎಂದು ಕೇಳಿದ್ದಾರೆ ಜನರ ಸಲುವಾಗಿ ಏನು ಕಾರ್ಯಕ್ರಮ ಮಾಡಿದ್ದೀರಿ ಎಂದು ಕೇಳಿದ್ದಾರೆ? ಈ

ಹೈನುಗಾರಿಕೆ ಬಗ್ಗೆ ಗುಲಬರ್ಗಾ, ರಾಯಚೂರು, ಕೊಪ್ಪಳ, ಬೀದರ್, ಬಳ್ಳಾರಿ ಜಿಲ್ಲೆಗಳಿಗೆ 600 ಲಕ್ಷ ರೂ ಗಳನ್ನು ಅಭಿವೃದ್ಧಿಗೋಸ್ಕರ ನಂಜುಂಡಪ್ಪ ವರದಿಯಾಧಾರಿತ ಏನು ಇಟ್ಟಿದ್ದೇವೆ ಅವೆಲ್ಲಾ ಮೂಲಭೂತ ಸೌಕರ್ಯಗಳು ಸಿಗಬೇಕು ಸಂಘ ಸಂಸ್ಥೆಗಳು ಮುಚ್ಚಿಹೋಗಿವೆ ಅವುಗಳನ್ನು ಮೇಲ್ದರ್ಜೆಗೆ ತರಬೇಕು ಎಲ್ಲರಿಗೂ ಉಚಿತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಈ ನಂಜುಂಡಪ್ಪ ವರದಿಯಾಧಾರದ ಮೇಲೆ ಕೂಡ ನಾವು ಮಾಡಿದ್ದೇವೆ ನಂಜುಂಡಪ್ಪ ವರದಿಯಾಧಾರದ ಮೇಲೆ ದವಾಖಾನೆ, ಡಾಕ್ಟರ್‌ಗಳ ಬಗ್ಗೆ ಹೇಳಿದ್ದಾರೆ ಬಡಜನರಿಗೆ ಸಹಾಯ ಮಾಡಲೆಂದು ಅಮೃತಮಹಲ್ ಇರುವ ಅಮೃತ್ ಎಂಬ ಯೋಜನೆಯನ್ನು ನಾವು ತಂದಿದ್ದೇವೆ 50,000 ಮಹಿಳೆಯರಿಗ 10,000–00 ರೂ ಸಹಾಯಧನ 10,000–00ರೂ ಬ್ಯಾಂಕ್ ಸಾಲದಿಂದ ಒಂದು ಹಸು ಕೊಡಬೇಕು ಎನ್ನುವ ಈ ಸಮ್ಮಿಶ್ರ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ ಅದರೊಂದಿಗೆ ಸುವರ್ಣ ಕರ್ನಾಟಕ ಗೋಮೂತ್ರ ಸಂರಕ್ಷಣಾ ತಳಿ ಯೋಜನೆಯನ್ನು ಕೂಡ ನಾವು ಮಾಡಿದ್ದೇವೆ ಅವರು 20 ಎಕರೆ ಜಮೀನು ಹೊಂದಿರಬೇಕು ನೋಂದಾಯಿತ ಸಂಸ್ಥೆಯಾಗಿರಬೇಕು ನಮ್ಮ ಕರ್ನಾಟಕ ರಾಜ್ಯದ ಹಸು 100 ತಳಿಗಳ ಹಸುಗಳಿದ್ದರೆ 10 00 ಲಕ್ಷ ರೂ ಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಘೋಷಣೆಯನ್ನು ಮಾಡಿದ್ದೇವೆ ಇಡೀ ರಾಜ್ಯದಲ್ಲಿ 27 ಜಿಲ್ಲೆಗಳಲ್ಲಿ 17 ಜಿಲ್ಲೆಗಳಿಗೆ ಈಗಾಗಲೇ ಕೊಟ್ಟಿದ್ದೇವೆ ಇದೇ ಯೋಜನೆಗಳನ್ನು ಮುಂದುವರೆಸಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ಕರ್ನಾಟಕ ಪಯೋನೀರ್ ರಾಜ್ಯದಲ್ಲಿ 1969 ರಿಂದ insemination ನಲ್ಲಿ ರಾಷ್ಟ್ರದಲ್ಲಿ ಮೊದಲಿದ್ದ ರಾಜ್ಯ, ಸ್ಥಳೀಯ ತಳಿಯನ್ನು ಅಭಿವೃದ್ಧಿ ಪಡಿಸಲಿಕ್ಕೆ ತಮ್ಮ ಕಾರ್ಯಕ್ರಮ ಏನು? Calf Raring Scheme ಅಂದರೆ ಕರು ತಂದು ಸಾಕಿ ಹಸುಗಳನ್ನು ಮಾಡಿದರೆ, 1,000, 1,500–00 ರೂ ಗಳಿಗೆ ಕರು ತಂದು ಜಮೀನು ಇರುವವರು ಕಟ್ಟಿಕೊಂಡು ಸಾಕಿದರೆ ರೂ 10,000 00 ದಿಂದ 20,000–00 ರೂ ಹಸು ಆಗುತ್ತದೆ ಅದಕ್ಕೆ ತಮ್ಮ stress ಏನು? ಪ್ರತಿ ತಾಲ್ಲೂಕಿಗೆ Calf Raring Scheme ನಲ್ಲಿ ಸರ್ಕಾರ ಹಣ ಇಡುತ್ತಿತ್ತು ಈಗ ಒಂದು ಕರು, ಎರಡು ಕರುಗಳಿಗೆ ಹಣ ಇಡುವುದಿಲ್ಲ ಮೇವು ಪ್ಯಾಕ್‌ಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಹಣವನ್ನು ಸರ್ಕಾರ ಇಡುತ್ತಿತ್ತು 5 ಪ್ಯಾಕ್‌ಗೆ ಹಣ ಕೊಡುತ್ತಿಲ್ಲ ಅದನ್ನೇನಾದರೂ rejuvenate ಮಾಡುವಿರೋ? ಆ ಯೋಜನೆಗಳನ್ನು ಮತ್ತೆ ಅಭಿವೃದ್ಧಿ ಮಾಡುವಿರಾ? ಉತ್ತರ ಕರ್ನಾಟಕ ಡೈರಿಗಳು ಇವತ್ತು ಮಾತ್ರ ಲಾಸ್‌ನಲ್ಲಿರುವುದು, ನಾನು ಸಹ ಕೆ ಎಂ ಎಫ್ ಅಧ್ಯಕ್ಷನಾಗಿದ್ದೆನು ಉತ್ತರ ಕರ್ನಾಟಕದ ಡೈರಿಗಳು ಯಾವಾಗಲೂ ನಷ್ಟದಲ್ಲೇ ಬರುತ್ತಿವೆ ಅದಕ್ಕೆ ಬೇಕಾದಷ್ಟು ಕಾರಣಗಳಿವೆ, ಅದು ಅವರ ತಪ್ಪು ಎಂದು ಹೇಳುವುದಿಲ್ಲ ಕುಟುಂಬಗಳನ್ನು ಮೇಲೆ ತರಲಿಕ್ಕೆ ಡೈರಿಗಳಿಗೆ 6 00 ಕೋಟಿ ರೂ ಗಳನ್ನು ಕೊಟ್ಟರೆ ಇವರೆಲ್ಲ ಮೇಲೆ

ಬರಲಿಲ್ಲ ಏನಾದರೂ ಈ ರೀತಿ ಕರುಗಳನ್ನು ತಂದು ಸಾಕಲಿಕ್ಕೆ ಹಣ ಕೊಡುವಿರಾ? ಮೇವು ಪ್ಯಾಕ್ ಅಭಿವೃದ್ಧಿ ಮಾಡಲಿಕ್ಕೆ ಕರು ಸಾಕಲಿಕ್ಕೆ ಏನಾದರೂ ಹಣವನ್ನು ಕೊಡುವಿರಾ? ಅದಕ್ಕೆ ನೀರಾವರಿ ಸೌಕರ್ಯಗಳನ್ನು ಒದಗಿಸಿಕೊಡುವಿರಾ? ನಾಟಿ ಹಸುವನ್ನು ಅಭಿವೃದ್ಧಿ ಮಾಡಲಿಕ್ಕೆ ಏನಾದರೂ insemination ಮಾಡಿ ಅಭಿವೃದ್ಧಿ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಅದನ್ನು ಹೇಳಬೇಕು Fodder develop ಮಾಡುವಿರಾ? Calf rare ಮಾಡುವಿರಾ? ಅವರಿಗೆ special package ಏನು ಕೊಡುತ್ತಿದ್ದೀರಿ?

ಶ್ರೀ ರೇವು ನಾಯಕ್ ಬೆಳಮಗಿ (ಮಾನ್ಯ ಪಶು ಸಂಗೋಪನಾ ಸಚಿವರು) – ಹೈನುಗಾರಿಕೆ ಅಭಿವೃದ್ಧಿಗೆ ಮಿಲ್ಕ್ ಕೂಲರ್ ಕೇಂದ್ರಗಳ ಸ್ಥಾಪನೆ, ಹಳ್ಳಿಗಳಲ್ಲಿ ಹಾಲು ಉತ್ಪಾದನೆ ಮಾಡುತ್ತಾರೆ ಹಳ್ಳಿಗಳಲ್ಲಿರುವ ಮಹಿಳೆಯರ ಸಂಘ ಸಂಸ್ಥೆಗಳಲ್ಲಿ 6 ಲಕ್ಷ ಲೀಟರ್‌ಗಳಷ್ಟು ಹಾಲನ್ನು ಸಂರಕ್ಷಿಸುವ ಸಲುವಾಗಿ ಮಿಲ್ಕ್ ಕೂಲರ್‌ಗಳನ್ನು ಕೊಡುವ ಯೋಜನೆಯನ್ನು ಮಾಡಿದ್ದೇವೆ ಅವರ ಅಭಿವೃದ್ಧಿಗೋಸ್ಕರ ನಾವು ಆ ಯೋಜನೆಯನ್ನು ಮಾಡಿದ್ದೇವೆ ತಾವು ಹಿರಿಯ ಸದಸ್ಯರು ಕೇಳುತ್ತಿರುವ ವಿಚಾರವಾಗಿ ಸವಿಸ್ತಾರವಾಗಿ ಮಾಹಿತಿಯನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ

135 (1124) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ) – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

(ಅ) ಹಾವೇರಿ ಜಿಲ್ಲೆಯಾದ್ಯಂತ ಈ ಹಿಂದೆ ಡೆಂಗಿ ಜ್ವರ ಹಾಗೂ ಚಿಕೂನ್ ಗೂನ್ಯಾ ರೋಗ ಹರಡಿ ಸಾರ್ವಜನಿಕರು ಸಾಕಷ್ಟು ತೊಂದರೆ ಅನುಭವಿಸಿದ್ದು, ಪುನಃ ಹಾವೇರಿ ಜಿಲ್ಲೆಯಲ್ಲಿ ಈ ಎರಡೂ ರೋಗಗಳು ಕಾಣಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

(ಆ) ಹಾಗಿದ್ದಲ್ಲಿ, ರೋಗ ಬರುವುದಕ್ಕಿಂತ ಮುಂಚಿತವಾಗಿಯೇ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸರಕಾರ ಕೈಗೊಳ್ಳುತ್ತಿರುವ ಕ್ರಮವೇನು?

(ಇ) ಡೆಂಗ್ಯೂ ಜ್ವರದ ತಪಾಸಣಾ ಸಾಮಗ್ರಿ (ಡೈಗ್ನೋಸ್ಟಿಕ್ ಕಿಟ್)ಗಳನ್ನು ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿತರಿಸಲು ಸರಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ಹಾವೇರಿ ಜಿಲ್ಲೆಯಲ್ಲಿ ಕಳೆದ ಏಪ್ರಿಲ್ 2007 ರಿಂದ 2 ಚಿಕುನ್‌ಗುನ್ಯ ಖಚಿತ ಪ್ರಕರಣಗಳು ದೃಢಪಟ್ಟಿರುತ್ತವೆ ಹಾಗೂ ಯಾವುದೇ ಮರಣ ಸಂಭವಿಸಿರುವುದಿಲ್ಲ

2007ನೇ ಸಾಲಿನಲ್ಲಿ ಇದುವರೆಗೆ 1 ಡೆಂಗ್ಯೂ ಪ್ರಕರಣ ದೃಢಪಟ್ಟಿದ್ದು, ಯಾವುದೇ ಮರಣ ಸಂಭವಿಸಿರುವುದಿಲ್ಲ

(ಆ) ಚಿಕುನ್‌ಗುನ್ಯ ಹಾಗೂ ಡೆಂಗ್ಯೂ ಕಾಯಿಲೆಗಳ ತಡೆಗಟ್ಟುವಿಕೆಗಾಗಿ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ

(1) ರೋಗ ಹತೋಟಿಗಾಗಿ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಿ ಕಾಲಕಾಲಕ್ಕೆ ಸಭೆ ಸೇರಿಸಿ ಅವಶ್ಯಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

(2) ಜೀವರಕ್ಷಕ ಔಷಧಿಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಇರಿಸಲಾಗಿದೆ ಅಲ್ಲದೆ ಆಯುರ್ವೇದ ವೈದ್ಯರುಗಳು ಇರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಯುರ್ವೇದ ಔಷಧ ಚಿಕಿತ್ಸೆಯನ್ನೂ ಸಹ ನೀಡಲು ವ್ಯವಸ್ಥೆ ಮಾಡಲಾಗಿದೆ

(3) ಸ್ಥಳೀಯವಾಗಿ ಜ್ವರ ಪೀಡಿತರಿಗೆ ಚಿಕಿತ್ಸೆ ಸಿಗಲು ಅನುಕೂಲವಾಗುವಂತೆ ಔಷಧಿ ವಿತರಣಾ ಕೇಂದ್ರಗಳು ಹಾಗೂ ಜ್ವರ ಚಿಕಿತ್ಸಾ ಕೇಂದ್ರಗಳನ್ನು ಸಮಾಜ ಸೇವಕರು, ಸ್ವಯಂ ಸೇವಕರು, ಶಾಲಾ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಾಯದಿಂದ ಸ್ಥಾಪಿಸಿ ಕಾರ್ಯನಿರ್ವಹಿಸಲಾಗುತ್ತಿದೆ

(4) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್ ಆರ್ ಹೆಚ್ ಎಂ) ಅಡಿಯಲ್ಲಿ ಪ್ರತಿಯೊಂದು ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಿಗೆ ಬಿಡುಗಡೆಯಾಗಿರುವ ರೂ 10,000/- ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬಿಡುಗಡೆಯಾಗಿರುವ ರೂ 75,000/-ಗಳ ಅನುದಾನದಲ್ಲಿ ನೈರ್ಮಲ್ಯ ಹಾಗೂ ನೀರಿನ ನಿರ್ವಹಣೆ ಸಮರ್ಪಕವಾಗಿ ನಡೆಸಿ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡಲು ಸೂಚಿಸಲಾಗಿದೆ

(5) 2007ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಇದುವರೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು 18 ಧೂಮೀಕರಣ ಯಂತ್ರಗಳು 150 ಲೀಟರ್ ಧೂಮೀಕರಣ ಕೀಟನಾಶಕ ದ್ರಾವಣಗಳು ಹಾಗೂ 70 ಲೀಟರ್ ಲಾರ್ವಾನಾಶಕ ಕೀಟನಾಶಕ ದ್ರಾವಣಗಳು ಲಭ್ಯವಿದ್ದು ಎಲ್ಲಾ ಸಮಸ್ಯಾತ್ಮಕ ಪ್ರದೇಶಗಳಲ್ಲಿ ರೋಗ ನಿಯಂತ್ರಣ ಕಾರ್ಯ ಕೈಗೊಳ್ಳಲಾಗಿದೆ

(6) ರೋಗದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಹಾಗೂ ಮನೆಗಳಲ್ಲಿ ನೀರು ಶೇಖರಣಾ ತೊಟ್ಟಿಗಳಲ್ಲಿ ಭದ್ರವಾದ ಮುಚ್ಚಳದಿಂದ ಮುಚ್ಚುವ ಬಗ್ಗೆ ಮನೆಗಳ ಮೇಲ್ಛಾವಣಿಯಲ್ಲಿ ಬಿಸಾಡಿದ ತ್ಯಾಜ್ಯ ವಸ್ತುಗಳಾದ ಹಳೆಯ ಟೈರುಗಳು, ಒಡೆದ ಪ್ಲಾಸ್ಟಿಕ್ ವಸ್ತುಗಳು, ತೆಂಗಿನ ಚಿಪ್ಪು ಮುಂತಾದ ಮಳೆನೀರು ಸಂಗ್ರಹವಾಗುವಂತಹ ಮುಂತಾದವುಗಳನ್ನು ವಿಲೇವಾರಿ ಮಾಡುವ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿದಿನ ಆಕಾಶವಾಣಿಯಲ್ಲಿ ಪ್ರಚಾರ ಮಾಡಲಾಗುತ್ತಿದೆ ಫೋನ್ ಇನ್ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ ದಿನಪತ್ರಿಕೆಗಳಲ್ಲಿ ಜಾಹೀರಾತು ಬಿತ್ತಿಪತ್ರ/ಕರಪತ್ರಗಳ ಮೂಲಕ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ

(7) ರೋಗ ಸಮೀಕ್ಷೆ ಕಾರ್ಯಗಳನ್ನು ತ್ವರಿತಗೊಳಿಸಲಾಗಿದೆ

(8) ಜಿಲ್ಲಾ ಕೀಟಶಾಸ್ತ್ರಜ್ಞರುಗಳು ಕಾವಲು ಸಮೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ರೋಗವಾಹಕ ಸೊಳ್ಳೆಗಳ ಸಮೀಕ್ಷೆ ಮಾಡುತ್ತಿದ್ದಾರೆ

(9) ಒಟ್ಟಾರೆ ಸೊಳ್ಳೆಗಳಿಂದ ಹರಡಬಹುದಾದ ರೋಗಗಳ ನಿಯಂತ್ರಣಕ್ಕೆ ಸೂಕ್ತ ಮೇಲ್ವಿಚಾರಣೆ ನಡೆಸಲು ಮಾರ್ಗದರ್ಶನವನ್ನು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ನೀಡಲಾಗಿದೆ

(ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಮಟ್ಟದಲ್ಲಿ ರಕ್ತಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ ಹಾಗೂ ಅವುಗಳನ್ನು ಹೆಚ್ಚಿನ ತಪಾಸಣೆಗಾಗಿ ಅಪೆಕ್ಸ್ ಲ್ಯಾಬೊರೇಟರಿಗಳಿಗೆ ಕಳಿಸಲಾಗುತ್ತದೆ

ಅಪೆಕ್ಸ್ ಲ್ಯಾಬೋರೇಟರಿಗಳಾದ ನಿಮ್ಹಾನ್ಸ್, ಬೆಂಗಳೂರು ಮತ್ತು ವಿಮ್ಸ್, ಬಳ್ಳಾರಿ ಮತ್ತು NIV, Field Station, Bangalore ಈ ಮೂರು ಕೇಂದ್ರಗಳಲ್ಲಿ ಸದರಿ ಪರೀಕ್ಷೆಯನ್ನು ಮಾಡಲಾಗುತ್ತಿದ್ದು ರೋಗವನ್ನು ದೃಢೀಕರಣ ಮಾಡಿಕೊಳ್ಳಲಾಗುತ್ತಿದೆ

ಶ್ರೀ ಸಿಂಧೂರ ಜಿ ರಾಜಶೇಖರ – ಉತ್ತರವನ್ನೇನೊ ಒದಗಿಸಿದ್ದಾರೆ ಹಾವೇರಿ ಜಿಲ್ಲೆಯಲ್ಲಿ ಚಿಕುನ್ ಗುನ್ಯಾ 2 ಪ್ರಕರಣಗಳು ಎಂದು ಹೇಳಿದ್ದಾರೆ, ಅದು ಸರಿಯಿದೆ, ಡೆಂಗ್ಯೂ ಮಾತ್ರ 67 ಪ್ರಕರಣಗಳಾಗಿವೆ ಅದಕ್ಕೆ ಮುಂಜಾಗ್ರತಾ ಕ್ರಮವಾಗಿ ಏನು ವ್ಯವಸ್ಥೆ ಮಾಡಿದ್ದಾರೆ, ಅದನ್ನು ಚೆನ್ನಾಗಿ ಮಾಡಿದ್ದಾರೆ ಆದರೆ ಡೆಂಗ್ಯೂ ಜ್ವರದಿಂದ ಇಬ್ಬರು ಸತ್ತಿದ್ದಾರೆ ಅದನ್ನು ದೃಢೀಕರಿಸಲು ಸಾಧ್ಯವಾಗಿಲ್ಲ ಏಕೆಂದರೆ ನಮ್ಮ ಕ್ಷೇತ್ರದಲ್ಲಿ ರಕ್ತ ತಪಾಸಣಾ ವ್ಯವಸ್ಥಾ ನಮ್ಮ ಕ್ಷೇತ್ರದಲ್ಲಿಲ್ಲ ಆ ಕಾರಣಕ್ಕೆ ಮಾನ್ಯ ಸಚಿವರು Karnataka Aids Prevention Society ಜೊತೆಗೆ ಒಂದು refrigerator ಕೊಡುವ ವ್ಯವಸ್ಥೆಯಾಗಬೇಕು ಅದರೊಂದಿಗೆ ಮಾನ್ಯ ಸಚಿವರು ಮುಂಜಾಗ್ರತಾ ಕ್ರಮವಾಗಿ ಏನು ಕ್ರಮ ಕೈಗೊಳ್ಳುತ್ತಾರೆ ಜನಗಳಿಗೆ ತಿಳುವಳಿಕೆ ಕೊಡಲು ಪ್ರಚಾರ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಜನರಿಗೆ ಹೇಳುವುದಲ್ಲ, ಸರ್ಕಾರದಲ್ಲಿ

ಉಪಾಧ್ಯಕ್ಷರು – ಸಮಸ್ಯೆ ಬಗ್ಗೆ ಹೇಳಿ

ಶ್ರೀ ಸಿಂಧೂರ ಜಿ ರಾಜಶೇಖರ – ನೀರು ನಿಲ್ಲದಂತೆ ಜನಜಾಗೃತಿ ಮಾಡಬೇಕೆಂದಿದ್ದಾರೆ ನಮ್ಮ ಶಾಸಕರ ಭವನದಲ್ಲಿ ಸಚ್ಚಿದಾನಂದ ಲಕೋತ ಅವರ ವಾಹನ ಅಪಘಾತವಾಗಿದ್ದು ಅದು ಹಾಗೇ ಇದ್ದು ಅದರಲ್ಲಿ ಸಹ ನೀರು ನಿಲ್ಲುತ್ತಿದೆ ಅಲ್ಲೇ ಮೂಲೆಯಲ್ಲಿ ಸ್ಕೂಟರ್ ಇಟ್ಟಿದ್ದಾರೆ ಅದರಲ್ಲಿಯೂ ನೀರು ನಿಂತಿದೆ ಇಂಥದ್ದಕ್ಕೆ ನಾವು ಜಾಗೃತಿ ಮಾಡುವುದು ನಮ್ಮ ಕರ್ತವ್ಯ ಇದರ ಬಗ್ಗೆ ಸರ್ಕಾರವು ಗಮನ ಹರಿಸಬೇಕು

ಶ್ರೀ ಆರ್ ಅಶೋಕ್ (ಮಾನ್ಯ ಆರೋಗ್ಯ ಸಚಿವರು) - ಚಿಕುನ್ ಗುನ್ಯಾ ಎರಡು ಪ್ರಕರಣ ಅಲ್ಲಿ ದೃಢಪಟ್ಟಿದೆ ಈ ಬಗ್ಗೆ ನಮ್ಮ ಶಾಸಕರಿಗೆ ಮಾಹಿತಿಯನ್ನು ಕೊಟ್ಟಿದ್ದೇನೆ ಕಳೆದ ಬಾರಿ ಇಡೀ ರಾಜ್ಯದಲ್ಲಿ ಚಿಕೂನ್ ಗುನ್ಯಾ ಹೆಚ್ಚಾಗಿತ್ತು ಈ ಬಾರಿ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ತಡೆಗಟ್ಟಿದ್ದೇವೆ ಕರ್ನಾಟಕ ರಾಜ್ಯದಲ್ಲಿ ಸಮಗ್ರವಾಗಿ ಈ ರೋಗವನ್ನು ತಡೆಗಟ್ಟಬೇಕೆನ್ನುವ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಈ ಸಾರಿ ಸುಮಾರು 1200 ಕ್ಕು ಮೇಲ್ಪಟ್ಟು fogging machine ಅನ್ನು ಎಲ್ಲಾ ಜಿಲ್ಲೆಗಳಿಗೆ ಕೊಟ್ಟಿದ್ದೇವೆ ಮೊದಲು ನಾವು ಈ ಇಲಾಖೆಯನ್ನು ತೆಗೆದುಕೊಳ್ಳುವ ಮುನ್ನ ಒಂದೊಂದು ಜಿಲ್ಲೆಯಲ್ಲಿ 2-3 fogging machine ಇತ್ತು ಇವತ್ತು 60-70 fogging machine ಅನ್ನು ಎಲ್ಲಾ ಜಿಲ್ಲೆಯಲ್ಲಿಯೂ ಈ ರೋಗಗಳನ್ನು ನಿಯಂತ್ರಿಸುವ ದೃಷ್ಟಿಯಿಂದ ಕೊಡಲಾಗಿದೆ ಈ ಜೀವ ರಕ್ಷಕ ಔಷಧಿಗಳಾದಂತಹ ಪ್ಯಾರಾಸಿಟಮಲ್, ಡೈಕ್ಲೋಫೆನಾಕ್ ಇಂಜೆಕ್ಷನ್ಸ್ ಸಹ ಎಲ್ಲಾ ಕಡೆ ಸರಿಯಾದಂಥ ರೀತಿಯಲ್ಲಿ ಸ್ಟಾಕ್ ಮಾಡಿದ್ದೇವೆ ಅದರ ಕೊರತೆ ಬರದ ಹಾಗೆ ವ್ಯವಸ್ಥೆ ಮಾಡಿದ್ದೇವೆ ಅದರೊಂದಿಗೆ ಕೆಲವು ರೋಗಿಗಳು ಆಯುರ್ವೇದ, ಅಲೋಪತಿ ಇರಬಹುದು, ಅವರು ಇಷ್ಟಪಡುವ ಔಷಧಿಗಳನ್ನು ಅವರಿಗೆ ಒದಗಿಸಲಿಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ ಮಾನ್ಯ ಶಾಸಕರು ಹೇಳಿದಂತೆ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ಹೇಳಿ ಮೊದಲನೇ ಬಾರಿ ನಮ್ಮ ಎಲ್ಲ ANM Centre ಗಳಿಗೆ 10,000 ರೂ ಬಿಡುಗಡೆ ಮಾಡಿದ್ದೇವೆ ನಮ್ಮ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 75,000/- ರೂ untied grant ಕೊಟ್ಟಿದ್ದೇವೆ ಇದನ್ನು ಉಪಯೋಗ ಮಾಡಿಕೊಂಡು ಆಸ್ಪತ್ರೆಯ ಸುತ್ತಮುತ್ತಲಿನ ಜಾಗ ಶುದ್ಧೀಕರಣ ಇರಬಹುದು, ಹಳ್ಳಿಗಳಲ್ಲಿ ಶುದ್ಧೀಕರಣ ಇರಬಹುದು ಇವೆಲ್ಲ ದೃಷ್ಟಿಯಿಂದ ವ್ಯವಸ್ಥೆ ಮಾಡುತ್ತಿದ್ದೇವೆ ಮುಂದಿನ ಯೋಜನೆಯಲ್ಲಿ ಮಲೇರಿಯಾ, ಡೆಂಗ್ಯೂ, ಚಿಕುನ್ ಗುನ್ಯಾ ಇರಬಹುದು ಇವೆಲ್ಲ ಪ್ರತಿಯೊಂದು ಭಾಗಗಳಲ್ಲಿ ಕಾಣಿಸಿಕೊಳ್ಳುವಂಥವು ಅದಕ್ಕೆ ಮಸ್ಕಿಟೊ ನೆಟ್‌ಗಳನ್ನು ಸರ್ಕಾರದ ವತಿಯಿಂದ free ಆಗಿ ಕೊಡಬೇಕೆಂಬ ಯೋಜನೆ ಮಾಡುತ್ತಿದ್ದೇವೆ ಸ್ಥಳೀಯವಾಗಿ diagnostic kit ಗಳನ್ನು ಪ್ರಾಥಮಿಕ ಕೇಂದ್ರಗಳಲ್ಲಿ ಕೊಡಬೇಕೆಂದು ಹೇಳಿದ್ದಾರೆ ಆದರೆ ಆ ರೀತಿ ಕೊಡಲಿಕ್ಕೆ ಅವಕಾಶವಿಲ್ಲ ಇದು ಬಹಳ important ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಬೇಕು ಯಾವುದೇ ರೀತಿಯ ವೈರಾಲಜಿಗೆ ಸಂಬಂಧಪಟ್ಟಂಥ ಲ್ಯಾಬ್‌ಗಳನ್ನು ಮಾಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಬೇಕು ಕೇಂದ್ರ ಸರ್ಕಾರದ ಅನುಮತಿ ಇರುವುದು ಬಳ್ಳಾರಿಯ VIMS ಗೆ ಇದೆ ಬೆಂಗಳೂರಿನ ವಿಕ್ಟೋರಿಯ, ನಿಮ್ಹಾನ್ಸ್‌ಗೆ ನಾವು ಹೊಸದಾಗಿ ಕೊಟ್ಟಿದ್ದೇವೆ ಮುಂದಿನ ವರ್ಷಗಳಲ್ಲಿ ನಾವು ಹೊಸದಾಗಿ 5 ಕೇಂದ್ರಗಳಲ್ಲಿ ವೈರಾಲಜಿ ಕೇಂದ್ರಗಳನ್ನು ಮಾಡಬೇಕೆಂದು ಕೇಂದ್ರ ಸರ್ಕಾರ ನಮಗೆ ಅನುಮತಿ ಕೊಟ್ಟಿದೆ ಬೆಳಗಾಂ, ಶಿವಮೊಗ್ಗ, ಮಂಗಳೂರು, ಕೋಲಾರ ಮತ್ತು ಬೆಂಗಳೂರು head quarters ನಲ್ಲಿ ಹೊಸದಾಗಿ ಮುಂದಿನ

ದಿನಗಳಲ್ಲಿ ವೈರಾಲಜಿ ಸೆಂಟರ್‌ಗಳನ್ನು ಮಾಡುತ್ತಿದ್ದೇವೆ ಈ Centres ಆದರೆ, ಇನ್ನೂ ಹೆಚ್ಚು blood test ಮಾಡಬಹುದು ಆದುದರಿಂದ, ಅದನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೊಡುವುದಕ್ಕೆ ಬರುವುದಿಲ್ಲ ಕೇಂದ್ರ ಸರ್ಕಾರ ಅದಕ್ಕೆ ಅನುಮತಿ ಕೊಡುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಅಧ್ಯಕ್ಷರೆ, ಶುಚಿತ್ವ ಕಾಪಾಡುವ ದಿಸೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸೂಚನೆಗಳನ್ನು ಕೊಡಬೇಕು ಸಭೆ ಕರೆದು ಹೇಳಿದರೂ, ಇದರಲ್ಲಿ ನಾವು ವಿಫಲರಾಗಿದ್ದೇವೆ ನಮ್ಮ ಹಳ್ಳಿಗಳಲ್ಲಿ ಕಳ್ಳಿ ಬೆಳೆಯುವುದು, ಚರಂಡಿಗಳು ಕ್ಲೀನ್ ಆಗದೇ ಇರುವುದು, ಈ ಪರಿಸ್ಥಿತಿ ಇದೆ ನೀವು ಏನೇ fogging ಮಾಡಿದರೂ, ಅದು 5–6 ದಿವಸಗಳ ಕಾಲ ಮಾತ್ರ ಇರುತ್ತದೆ ಪ್ರತಿ alternative week ನಲ್ಲಿ ನೀವು fogging ಮಾಡುವುದಕ್ಕಾಗುವುದಿಲ್ಲ, ಏನಾದರೂ ಮಾಡಿ ಆ ಊರಿನೊಳಗೆ ಬೆಳೆದಿರುವ ಕಸ ತೆಗೆಯಿರಿ, ಕಡ್ಡಿ ತೆಗೆಯಿರಿ ಎಂದು ಹೇಳದೇ ಹೋದರೆ, ತಿಪ್ಪೆ ತೆಗೆಸದೇ ಹೋದರೆ ತಾವು ಸೊಳ್ಳೆಗಳನ್ನು ನಿರ್ಮೂಲನೆ ಮಾಡುವುದಕ್ಕಾಗುವುದಿಲ್ಲ ಸೊಳ್ಳೆ ನಿರ್ಮೂಲನೆ ಆಗಲಿಲ್ಲವೆಂದರೆ, ಎಲ್ಲಾ ಕಾರ್ಯಕ್ರಮಗಳು ವಿಫಲವಾಗುತ್ತದೆ ತಾವೇನಾದರೂ ಒಂದು action ತೆಗೆದುಕೊಳ್ಳಬೇಕು ಗ್ರಾಮ ಪಂಚಾಯಿತಿಗಳಿಗೆ ಕಟ್ಟುನಿಟ್ಟಿನ ಆದೇಶ ಕೊಡಬೇಕು

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ವಿಶೇಷವಾಗಿ ಚಿಕುನ್ ಗುನ್ಯಾ ಕಳೆದ ವರ್ಷ ಬಂದಿರುವಂಥಾದ್ದು ಈಗ ಮಲೇರಿಯಾ, ಫೈಲೇರಿಯಾ, ಡೆಂಗ್ಯೂ ರೋಗಗಳನ್ನು ನಮ್ಮ ರಾಜ್ಯದಲ್ಲಿ ಬಹಳಷ್ಟು ವರ್ಷಗಳಿಂದ ತಪ್ಪಿಸುವುದಕ್ಕೆ ಯಾವುದೇ ಸರ್ಕಾರಗಳಿಂದ ಸಾಧ್ಯವಾಗಿಲ್ಲ ಇದರಲ್ಲಿ ಮುಖ್ಯವಾಗಿ ನಾವು ಏಕೆ ವಿಫಲವಾಗಿದ್ದೇವೆಂದರೆ, mosquito control ಅನ್ನು ನಾವು effective ಆಗಿ ಮಾಡುವುದಕ್ಕಾಗಲಿಲ್ಲ ಎಂಬುದೇ ಮುಖ್ಯ ಕಾರಣವಾಗಿದೆ ಇವತ್ತು ಆರೋಗ್ಯ ಇಲಾಖೆಯಲ್ಲಿ Malaria Control Programme ಇದೆ ಅದಕ್ಕೋಸ್ಕರ, ನಾವು eradication programme ನಿಂದ control programme ಗೆ ಬಂದಿದ್ದೇವೆ ಅಂದರೆ, Malaria Control Programme effective ಆಗಿ ಕೆಲಸ ಮಾಡುತ್ತಿಲ್ಲದಿರುವುದನ್ನು ಪ್ರಮುಖವಾಗಿ ಮಾನ್ಯ ಸಚಿವರು ಗಮನಿಸಬೇಕು ಅನಂತರ, ನೀವು fogging ಮಾಡುವುದು ಬಹಳ ಒಳ್ಳೆಯದು fogging ನಿಂದಲೇ ನಾವು mosquito control ಮಾಡುವುದಕ್ಕಾಗುವುದಿಲ್ಲ ವಿಶೇಷವಾಗಿ ಏಕೆಂದರೆ larva breeding sites ಎಂದರೆ, ಅದೇ ಆಗಿದೆ ಅದಕ್ಕೆ ನೀವು ಯಾವ ರೀತಿ ಪರಿಹಾರ ಹುಡುಕಬೇಕೆಂದರೆ, ಗ್ಯಾಂಬೂಜಿಯನ್ ಫಿಶ್ ಅನ್ನು ನೀರು ನಿಲ್ಲುವ ಸ್ಥಳಗಳಲ್ಲಿ ಬಿಟ್ಟರೆ, ಅವುಗಳು mosquito larva ಗಳನ್ನು ತಿನ್ನುವ ಕೆಲಸ ಮಾಡುತ್ತವೆ ಇದರ ಬಗ್ಗೆ ತಾವು ಎಲ್ಲಾ ಜಿಲ್ಲೆಗಳಲ್ಲೂ war footing ನಲ್ಲಿ ಪರಿಶೀಲಿಸಬೇಕು ಈಗ ನಿಂತ ನೀರನ್ನು ತೆಗೆಯುವುದಕ್ಕಾಗುವುದಿಲ್ಲ ಕೆಲವು ಮಲಿನವಾಗಿರುತ್ತದೆ ಬಹಳಷ್ಟು ಕಡೆಗಳಲ್ಲಿ ನಾವು ಆ ನೀರನ್ನು ತೆಗೆಯುವುದಕ್ಕಾಗುವುದಿಲ್ಲ

ಅದಕ್ಕೋಸ್ಕರ, If you use this Gambusian Fish, it will take care of those mosquito larvas ಇದೊಂದು ಸಲಹೆ ಆಮೇಲೆ, ನಿಮ್ಮ Malaria Control Programme ಯಾವ ರೀತಿಯಿಂದಲೂ effective ಆಗಿ ಕೆಲಸ ಮಾಡುತ್ತಿಲ್ಲ ಸಿಬ್ಬಂದಿ ವರ್ಗದವರು ಆ ಓಣಿ ಪ್ರದೇಶಗಳಿಗೆ ಹೋಗಿ ನಿಂತ ನೀರಿಗೆ Chemical spray ಮಾಡುತ್ತಿಲ್ಲ ಅನಂತರ, ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯತಿಗೆ ಮಾಡುವುದಕ್ಕೆ ಇಚ್ಚೆ ಇದ್ದರೂ, ನೀವು ಅವರಿಗೆ technical support ನೀಡುತ್ತಿಲ್ಲ chemical supply ಸಮರ್ಪಕವಾಗಿ ಆಗುತ್ತಿಲ್ಲ ಆಗ ಕೇಂದ್ರ ಸರ್ಕಾರದಿಂದ ಹೊಸ ಕಾರ್ಯಕ್ರಮ ಬಂದಿದೆ ಅದರಲ್ಲೂ ನೀವು ನೆರವು ಪಡೆದುಕೊಂಡು ಮಾಡುವುದಕ್ಕೆ ಪ್ರಯತ್ನ ಮಾಡಬೇಕು

ಶ್ರೀ ಡಿ ಕೆ ಶಿವಕುಮಾರ್ – ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ಯಾವುದೋ ಒಂದು ಮೀಟಿಂಗ್ ಕರೆದಿದ್ದ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಟ್ಟಿದ್ದೆ ಏನೆಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬೆಂಗಳೂರು ಸುತ್ತಮುತ್ತಲೂ ಇರುವಂತಹ ಜಿಲ್ಲೆಗಳಲ್ಲಿ ಈಗ 15 Medical Colleges ಇವೆ ಒಂದೊಂದು Medical College ನವರು ಎರಡೆರಡು ತಾಲ್ಲೂಕುಗಳನ್ನು ಈ ವಿಚಾರಕ್ಕೆ adopt ಮಾಡಿಕೊಳ್ಳಬೇಕು ಏಕೆಂದರೆ, ಅವರ ಬಳಿ ಸಾಕಷ್ಟು infrastructure ಇದೆ ಹೊಸ ಡಾಕ್ಟರುಗಳನ್ನು ತಯಾರು ಮಾಡುತ್ತಿರುತ್ತಾರೆ ಒಂದು ಕಾಲೇಜು ಎಂದ ಕೂಡಲೇ ಸುಮಾರು 500 ಡಾಕ್ಟರುಗಳಿರುತ್ತಾರೆ ಹೊಸ ಡಾಕ್ಟರುಗಳಿರುತ್ತಾರೆ Nursing Colleges ಇರುತ್ತವೆ ಇವೆಲ್ಲಾ ವ್ಯವಸ್ಥೆಗಳಿರುತ್ತದೆ ಒಂದೊಂದು ಮೆಡಿಕಲ್ ಕಾಲೇಜಿನವರು ಎರಡೆರಡು ತಾಲ್ಲೂಕುಗಳನ್ನು adopt ಮಾಡಿಕೊಳ್ಳುವ ಸಂಬಂಧವಾಗಿ ತಾವು ಇಲ್ಲವೇ Chief Minister ಅವರು ಒಂದು ಮೀಟಿಂಗ್ ಮಾಡಿ, ಅವರುಗಳಿಗೆ ಎರಡೆರಡು ತಾಲ್ಲೂಕುಗಳನ್ನು ಹಂಚಿದರೆ 15 ಕಾಲೇಜುಗಳೆಂದರೂ, 30 ತಾಲ್ಲೂಕುಗಳಾಗುತ್ತದೆ ಅರ್ಧ major problem solve ಆಗುತ್ತದೆ ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಬೆಂಗಳೂರಿನ sewerage ಎಲ್ಲವೂ ರಾಮನಗರ ಆದಿಯಾಗಿ ವೃಷಭಾವತಿ ಆದಿಯಾಗಿ ಕನಕಪುರದ ಮೇಲೆ ಹೋಗುತ್ತದೆ ನಮ್ಮಲ್ಲಿ ಇದು major problem ಆಗಿದೆ ಅರ್ಕಾವತಿಯಿಂದ ನೀರು ಕುಡಿಯುವುದಕ್ಕೂ ಜನರಿಗೆ ಆಗುತ್ತಿಲ್ಲ ಮೈಯಲ್ಲಿ ಕೆರೆತ ಉಂಟಾಗಿದೆ ಇದರಿಂದಾಗಿ ಜನರೆಲ್ಲರೂ ಬೆಂಗಳೂರಿಗೆ ವಲಸೆ ಬರುತ್ತಿದ್ದಾರೆ ಇಂತಹ ಒಂದು ಪರಿಸ್ಥಿತಿ ಇದೆ ಅದಕ್ಕೆ ಏನಾದರೂ ಮಾಡಿ ತಾವು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಕರೆಯುವ ಮೂಲಕ ಇದನ್ನು ಏನಾದರೂ ಮಾಡಿ ಕೆಲವು ಕಾಲೇಜುಗಳಿಗೆ ಒಂದೊಂದು ತಾಲ್ಲೂಕನ್ನು ವಹಿಸಿ ಬಿಟ್ಟರೆ ಒಳ್ಳೆಯದು ಏಕೆಂದರೆ, social institution ನವರದ್ದು social service ಮಾಡಬೇಕೆಂಬ major responsibility ಇರುತ್ತದೆ ಅವರ Trust ಸಹ ಇರುತ್ತದೆ ಸರ್ಕಾರ ಕೂಡ ಅವರಿಗೆ ಉತ್ತೇಜನ ಬರುವಂತೆ ತಾವು ಮತ್ತು ಆಚಾರ್ಯ ಇಬ್ಬರೂ ಸೇರಿ ಏನಾದರೂ ಮಾಡಿದರೆ, ಇದೊಂದು ಯಶಸ್ಸು ತಮ್ಮ ಕಾಲದಲ್ಲಿ

ಚಿರಾಯುವಾಗಿರುತ್ತದೆ ಮಾನ್ಯ ಅಶೋಕ್‌ರವರು ಮಂತ್ರಿಯಾಗಿದ್ದರು ಆಚಾರ್ಯರವರು ಮಂತ್ರಿಯಾಗಿದ್ದರು, ಅವರುಗಳು ಇಂತಹ ತಾಲ್ಲೂಕನ್ನು adopt ಮಾಡಿಕೊಂಡಿದ್ದರು ಇವತ್ತು ಇದರಿಂದಾಗಿ ನಮ್ಮ ಜನರಿಗೆ ಅನುಕೂಲವಾಗುತ್ತಿದೆ ಎಂದು ನಿಮ್ಮ ಹೆಸರು ಶಾಶ್ವತವಾಗಿರುತ್ತದೆ ಏನಾದರೊಂದು ವ್ಯವಸ್ಥೆ ಮಾಡಿ ಇದು ನನ್ನ ಚಿಕ್ಕ ಸಲಹೆಯಾಗಿದೆ

ಶ್ರೀ ಸಿಂಧೂರ ಜಿ ರಾಜಶೇಖರ – ಅಧ್ಯಕ್ಷರೆ, ಜನರಲ್ಲಿ ಜಾಗೃತಿ ಮೂಡಿಸಲು ಇಷ್ಟೆಲ್ಲಾ ಕಾರ್ಯಕ್ರಮ ಹಮ್ಮಿಕೊಂಡಿದ್ದಾರಲ್ಲ, ಈ ವಿಷಯವಾಗಿ ಇನ್ನೂ ಸಾಕಷ್ಟು ಜನಜಾಗೃತಿ ಮೂಡಿಸುವ ಅವಶ್ಯಕತೆ ಬಹಳ ಇದೆ ಏಕೆಂದರೆ, ಶಾಸಕರ ಭವನಕ್ಕೆ ವಿಧಾನಸೌಧದಿಂದ ಕಾಲು ದಾರಿ ಮೂಲಕ ಏನು ಹೋಗುತ್ತೇವೆ, ಹೋಗುವ ದಾರಿಯಲ್ಲಿ ಸಿಗುವ ಕಟ್ಟಡದಿಂದಿಡಿದು ಶಾಸಕರ ಭವನದ ರೂಮಿನವರೆಗೂ ಮೂಗು ಮುಚ್ಚಿಕೊಂಡು ಹೋಗಬೇಕಾಗುತ್ತದೆ ರಾಜ್ಯಪಾಲರ ಭವನದ ಗೋಡೆ ಅಷ್ಟು ವಾಸನೆ ಎಬ್ಬಿಸುತ್ತದೆ! ಅದೊಂದು ಮಲ, ಮೂತ್ರ ವಿಸರ್ಜಿಸುವ ಸ್ಥಾನವಾಗಿ ಮಾರ್ಪಟ್ಟಿದೆ ಅದಕ್ಕೋಸ್ಕರ, ಅಂತಹ ಜಾಗಗಳನ್ನೆಲ್ಲವನ್ನೂ ಗುರ್ತಿಸಿ ಸೂಕ್ತ ವ್ಯವಸ್ಥೆ ಮಾಡಬೇಕು ಮತ್ತು ಪ್ಲಾಸ್ಟಿಕ್ ಬಿದ್ದಿರುವ ಬಹಳ ಜಾಗಗಳಿವೆ ಅವು ಬಂದ್ ಆಗಬೇಕು ಅನಂತರ, ನೋಟಿಗೆ ಉಗುಳು ಹಚ್ಚಿ ಎಣಿಸುವುದು, ಪೇಪರ್ ತೆಗೆಯುವಾಗಲೂ ಉಗುಳು ಹಚ್ಚಿ ತೆಗೆಯುವುದು, ಇವೆಲ್ಲದರ ಬಗ್ಗೆಯೂ ಜನಜಾಗೃತಿ ಮೂಡಿಸುವುದು ಬಹಳ ಅವಶ್ಯಕತೆ ಇದೆ ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆಂದು ತಮ್ಮ ಮುಖಾಂತರ ಸಚಿವರ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಆರ್ ಅಶೋಕ್ – ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಡಾಕ್ಟರ್ ಶರಣ ಪ್ರಕಾಶ್‌ರವರು ಹೇಳಿದ್ದಾರೆ ಈಗ larva centers ಏನಿದೆ, ಅದರ ಬಗ್ಗೆ ನಾವು ಹೆಚ್ಚು ಗಮನ ಕೊಡಬೇಕಾಗಿದೆ ವಿಶೇಷವಾಗಿ, ಚಿಕೂನ್ ಗುನ್ಯ ರೋಗವಲ್ಲ ಮಲೇರಿಯ ಇರಬಹುದು, ಡೆಂಗ್ಯು ಇರಬಹುದು, ಈ ಎಲ್ಲಾ ಕಾಯಿಲೆಗಳಿಗೂ ಸೊಳ್ಳೆ ಮೂಲವಾಗಿರುತ್ತದೆ Larva centers ಏನಿದೆ, ಸೊಳ್ಳೆಗಳು ಮೊಟ್ಟೆಗಳನ್ನಿಡುವ ಜಾಗಗಳೇನಿವೆ, ಅದನ್ನು ಮೊದಲು ನಿರ್ಮೂಲನ ಮಾಡುವುದಕ್ಕೆ ನಾವು ಕ್ರಮ ಕೈಗೊಳ್ಳಬೇಕಾಗಿದೆ ಈಗಾಗಲೇ ಕೇಂದ್ರ ಸರ್ಕಾರದ ಜೊತೆಗೂ ಮಾತುಕತೆಯಾಡಿದ್ದೇವೆ ನಮ್ಮ Principal Secretary ಅವರೂ ಸಹ ಮೀಟಿಂಗ್‌ಗೆ ಹೋಗಿದ್ದಾರೆ ಅವರು ಸಹಾಯ ಮಾಡುವುದಾಗಿ ಹೇಳಿದ್ದಾರೆ ಈ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಸಹ ನಮಗೆ ಪೂರ್ತಿ ಔಷಧಿಗಳನ್ನು ಕೊಡುವುದಾಗಿ ಪ್ರಾಮಿಸ್ ಮಾಡಿದ್ದಾರೆ, ಕೊಡುತ್ತಿದ್ದಾರೆ ಅದೇನೂ ಸಮಸ್ಯೆ ಇಲ್ಲ ಮತ್ತು ಕೇಂದ್ರ ಸರ್ಕಾರ ಸಹ ಪ್ರತಿ ಗ್ರಾಮದಲ್ಲೂ ಒಂದೊಂದು ಆರೋಗ್ಯ ಸಮಿತಿಯನ್ನು ನೇಮಿಸಬೇಕೆಂದು ಹೇಳಿದೆ ಇದುವರೆಗೂ 12,000 ಸಮಿತಿಗಳನ್ನು ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ನಾವು constitute

ಮಾಡಿದ್ದೇವೆ ಅವರೆಲ್ಲರಿಗೂ ನಾವು 10,000 ರೂಪಾಯಿಗಳನ್ನು ಕೊಡುತ್ತಿದ್ದೇವೆ ಅದರ ಉಪಯೋಗ ಪಡೆದು ಆ ಗ್ರಾಮಗಳಲ್ಲಿ ನೈರ್ಮಲ್ಯ ಕಾಪಾಡುತ್ತಿದ್ದೇವೆ ಮಾನ್ಯ ಶಿವಕುಮಾರ್‌ರವರು ಕಳೆದ ಬಾರಿ ಈ ಸಲಹೆಯನ್ನು ಕೊಟ್ಟಿದ್ದರು ಅವರು ಸಲಹೆ ಕೊಡುತ್ತಿದ್ದಂತಯೇ ಚಿಕೂನ್ ಗುನ್ಯ ಹೋದ ಸಲ ಹೊರಟು ಹೋಯಿತು ಈ ಸಲ ಚಿಕೂನ್ ಗುನ್ಯ ಬಾರದಂತೆ ತಡೆಗಟ್ಟಲು ನಾವು ಹೆಚ್ಚು ಮುಂಜಾಗ್ರತಾ ಕ್ರಮಗಳನ್ನು ಕೊಟ್ಟಿದ್ದೇವೆ ಏಕೆಂದರೆ, ಹೋದ ಸಲ ನಮಗೆ experience ಆಗಿದೆ ಶಿವಕುಮಾರ್‌ರವರು ಹೇಳಿದಂತೆ, ವಿಶೇಷವಾಗಿ ಬೆಂಗಳೂರಿನಲ್ಲಿ ಬೇಕಾದಷ್ಟು ಕಾಲೇಜುಗಳಿವೆ ಮತ್ತು ಬೇರೆ ಜಿಲ್ಲೆಗಳಲ್ಲೂ ಕಾಲೇಜುಗಳಿವೆ ಅವುಗಳ ಉಪಯೋಗವನ್ನು ನಾವು ಇದುವರೆಗೂ ಮಾಡಿಕೊಳ್ಳುತ್ತಿಲ್ಲ ಅವರಿಗೆ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಲ್ಯಾಂಡ್ ಕೊಡುವುದಾಗಿರಬಹುದು, ಬೇರೆ ಬೇರೆ facilities ಕೊಟ್ಟರೂ ಸಹ ಅವರನ್ನು sufficient ಆಗಿ ಉಪಯೋಗಿಸಿಕೊಳ್ಳುವುದರಲ್ಲಿ ನಾವು ಎಲ್ಲಿಯೋ ವಿಫಲರಾಗಿದ್ದೇವೇನೋ ಎಂದೆನಿಸುತ್ತದೆ ಮುಂದೆ ಬರತಕ್ಕಂಥ ದಿನಗಳಲ್ಲಿ ವಿ ಎಸ್ ಆಚಾರ್ಯರವರು ಮಂತ್ರಿಗಳಾಗಿರುವುದರಿಂದ ಅವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕರೆದು, ಆರೋಗ್ಯಕ್ಕೆ ಸಂಬಂಧಿಸಿದಂತೆ at least ಚಿಕೂನ್ ಗುನ್ಯ ಇರಬಹುದು, ಬೇರೆ ಯಾವುದೇ disease ಇರಬಹುದು, ಬೇರೆ ಸಮಸ್ಯೆಗಳಿರಬಹುದು, ಆ ಸಂದರ್ಬದಲ್ಲಿ ಆರೋಗ್ಯಕ್ಕಾಗಿ ಒಟ್ಟಾಗಿ ದುಡಿಯೋಣ ಎನ್ನುವ ದೃಷ್ಟಿಯಿಂದ ನಾವು ಇವರೆಲ್ಲರನ್ನೂ

ಶ್ರೀ ಡಿ ಕೆ ಶಿವಕುಮಾರ್ – ಅವರಿಗೂ patients ಸಿಗುತ್ತಾರೆ Patients ಇಲ್ಲದೇ ಆ ಕಾಲೇಜುಗಳೆಲ್ಲವನ್ನೂ ಮುಚ್ಚುವ ಸಂದರ್ಭ ಬಂದಾಗ, MCI ನವರು Inspection ಬಂದಾಗ ಯಾರ್‍ಯಾರನ್ನೋ ಕರೆದುಕೊಂಡು ಬಂದು ಕೆಲಸದವರನ್ನೆಲ್ಲಾ ಮಲಗಿಸಿಬಿಟ್ಟು ತೋರಿಸುತ್ತಿದ್ದಾರೆ ಆದುದರಿಂದ ಇದರಿಂದಾಗಿ ಅವರಿಗೆ patients ಸಿಗುತ್ತಾರೆ ಇದರ ಬಗ್ಗೆ ತಾವು ಗಮನಹರಿಸಬೇಕು ದಯವಿಟ್ಟು ನೀವಿಬ್ಬರೂ ಸೇರಿಕೊಂಡು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು

ಶ್ರೀ ಆರ್ ಅಶೋಕ್ – ತಾವು ಒಳ್ಳೆಯ ಸಲಹೆಯನ್ನೇ ಕೊಟ್ಟಿದ್ದೀರಿ ಈ ಸಂದರ್ಭದಲ್ಲಿ ನಾವು ಮಾಧುಸ್ವಾಮಿಯವರ ಮಾತುಗಳನ್ನೂ ಸ್ವಲ್ಪ ಕೇಳಬೇಕಾಗುತ್ತದೆ, ಏಕೆಂದರೆ, ಹೊದ ಸಲ ನಾವು private Doctors ಅನ್ನು ಉಪಯೋಗಿಸಿಕೊಂಡಾಗ ಯಾರನ್ನು ಉಪಯೋಗಿಸಿಕೊಳ್ಳಬೇಕೆಂದು ಕೇಳುತ್ತಿದ್ದರು ಈ ಸಲ ಸರ್ಕಾರವೇ ತೀರ್ಮಾನ ತೆಗೆದುಕೊಂಡಿದೆ Evening clinics ಅನ್ನು ಏನು ನಡೆಸಲಾಗುತ್ತಿದೆ, ಅಲ್ಲಿಗೇನಾದರೂ ನಮ್ಮ Doctors ಬರುವುದಿಲ್ಲವೆಂದರೆ, private Doctors ಅನ್ನು ತೆಗೆದುಕೊಳ್ಳಬಹುದೆಂದು ಸರ್ಕಾರದವರಾದ ನಾವು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ ಬೇರೆ staff ಇಲ್ಲ ಆದರೆ, ನಾವು ವೈದ್ಯರನ್ನು ಮಾತ್ರ ತೆಗೆದುಕೊಳ್ಳುವುದು ಈ ಸಂದರ್ಭದಲ್ಲಿ ಕೆಲವು

ಸದಸ್ಯರುಗಳಿಗೆ ತಪ್ಪು ಅಭಿಪ್ರಾಯವಿರುತ್ತದೆ ನಾವು ಯಾರಾದರೂ Doctor ಅನ್ನು ತೆಗೆದುಕೊಂಡಾಗ, ಇವರೇನೋ privatization ಮಾಡುತ್ತಿದ್ದಾರೆ, ನಮ್ಮ ಆಸ್ಪತ್ರೆಗಳಿಗೆ ಇವರು ಗಿರಾಕಿಗಳನ್ನು ಹಿಡಿದುಕೊಳ್ಳುವುದಕ್ಕೋಸ್ಕರ ಬರುತ್ತಾರೆಂಬ ಭಾವನೆ ಇದೆ ಆ ಭಾವನೆಗಳನ್ನು ನಾವು ತೊಡೆದು ಹಾಕಬೇಕಾಗಿದೆ ಅದನ್ನೂ ನಾವು ಮತ್ತೊಂದು ದೃಷ್ಟಿಕೋನದಿಂದ ಯೋಚಿಸಬೇಕು ಆ ದೃಷ್ಟಿಯಿಂದ adopt ಮಾಡಿಕೊಳ್ಳುವ ಸಂದರ್ಭದಲ್ಲಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳುತ್ತಿದ್ದೇನೆ

ಆ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಅಲ್ಪಸಂಖ್ಯಾತ ಮತ್ತು ವಕ್ಫ್ ಸಚಿವರು) – ಮಾನ್ಯ ಅಧ್ಯಕ್ಷರೆ, ದಿನಾಂಕ 19–7–2007 ರಂದು 9ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 80 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಉಪಾಧ್ಯಕ್ಷರು – ಮಂಡಿಸಲಾಯಿತು

ಶ್ರೀ ಅಪ್ಪಾಜಿ ಎಸ್ ನಾಡಗೌಡ – ಲಿಖಿತ ಮೂಲಕ ಉತ್ತರಿಸುತ್ತೇನೆಂದು ಹೇಳುತ್ತಾರೆ ಆದರೆ, ಇಲ್ಲಿ ನಮಗೆ ಉತ್ತರಗಳೇ ಸಿಗುವುದಿಲ್ಲ ನನಗೆ ಮೂರು ದಿವಸಗಳಿಂದಲೂ ಬಂದಿಲ್ಲ ಇದರ ಬಗ್ಗೆ ಯಾರಾದರೂ ಸಚಿವರು ಹೇಳಬೇಕು Parliamentary Affairs Minister ಸಹ ಇಲ್ಲ ಯಾರೂ ಇಲ್ಲ

ಉಪಾಧ್ಯಕ್ಷರು ನಿಮಗೆ ಲಿಖಿತ ಮೂಲಕ ಉತ್ತರಿಸುವ ಪಟ್ಟಿ ಬಂದಿಲ್ಲವೇ?

ಶ್ರೀ ಅಪ್ಪಾಜಿ ಎಸ್ ನಾಡಗೌಡ – ಪಟ್ಟಿ ಇಲ್ಲ, ಪಟ್ಟಿಯಲ್ಲಿ ಉತ್ತರಗಳೇ ಇರುವುದಿಲ್ಲ ಎರಡಕ್ಕೆ ಉತ್ತರ ಕೊಡುತ್ತಾರೆ, ಮತ್ತೆರಡಕ್ಕೆ ಉತ್ತರ ಕೊಡುವುದಿಲ್ಲ

ಉಪಾಧ್ಯಕ್ಷರು – ಕೊಡಿಸುತ್ತೇನೆ

ಉಪಾಧ್ಯಕ್ಷರು – 12ನೇ ಜುಲೈ 2007 ರಂದು ತಡೆಹಿಡಿಯಲಾದ ಪ್ರಶ್ನೆಗಳು ಪಿ ಸಿ ಮೋಹನ್

(ಸದಸ್ಯರು ಗೈರುಹಾಜರಿದ್ದರು)

7 ಗಮನ ಸೆಳೆಯುವ ಸೂಚನೆ

ವಿಷಯ ಅರ್ಕಾವತಿ ಜಲಾಶಯದಲ್ಲಿ ಮುಳುಗಡೆಯಾದ ಸಂತ್ರಸ್ತರಿಗೆ ಪುನರ್‌ವಸತಿ ಕಲ್ಪಿಸುವ ಬಗ್ಗೆ

ಉಪಾಧ್ಯಕ್ಷರು ಡಿ ಕೆ ಶಿವಕುಮಾರ್‌ರವರೆ, ಜಲಸಂಪನ್ಮೂಲ ಸಚಿವರು ಇಲ್ಲ

ಶ್ರೀ ಡಿ ಕೆ ಶಿವಕುಮಾರ್ (ಸಾತನೂರು) – ಏನು ಸ್ವಾಮಿ? ನಿನ್ನೆಯೂ ಇಲ್ಲ, ಇವತ್ತೂ ಇಲ್ಲ

ಉಪಾಧ್ಯಕ್ಷರು – ನಿನ್ನೆ ಗಮನ ಸೆಳೆಯುವ ಸೂಚನೆಯಲ್ಲಿ ನಿಮ್ಮ ಪ್ರಶ್ನೆ ಇತ್ತು ತಾವು ಇರಲಿಲ್ಲ ಮಂತ್ರಿಗಳು ಇದ್ದರು ಆದ್ದರಿಂದ ಹಾಗೇ continue ಆಗಿದೆ

ಶ್ರೀ ಸಿ ಎಸ್ ನಾಡಗೌಡ – ಮೂರು ದಿವಸಗಳಿಂದ ಲಿಖಿತ ಮೂಲಕ ಉತ್ತರ ಬಂದಿಲ್ಲ ಅದರ ಬಗ್ಗೆ ಯಾರಾದರೂ ಹೇಳಲಿ ಪಾರ್ಲಿಮೆಂಟರಿ ಮಂತ್ರಿಗಳು ಇಲ್ಲ ಯಾರೂ ಇಲ್ಲ

ಉಪಾಧ್ಯಕ್ಷರು – ಅದರ ಪಟ್ಟಿ ಬಂದಿಲ್ಲವೇ?

ಶ್ರೀ ಸಿ ಎಸ್ ನಾಡಗೌಡ – ಉತ್ತರಗಳೇ ಇರುವುದಿಲ್ಲ ಎರಡಕ್ಕೆ ಉತ್ತರ ಕೊಡುತ್ತಾರೆ ಮತ್ತೆ ಎರಡಕ್ಕೆ ಇರುವುದಿಲ್ಲ

ಉಪಾಧ್ಯಕ್ಷರು – ಉತ್ತರ ಕೊಡಿಸುತ್ತೇನೆ ಡಿ ಕೆ ಶಿವಕುಮಾರ್ ಮಾತನಾಡಿ

ಶ್ರೀ ಡಿ ಕೆ ಶಿವಕುಮಾರ್ – ಡಾ॥ ಆಚಾರ್ಯರವರು ಸೆಮಿನಾರ್‌ಗೆ ಹೋಗಿದ್ದಾರೆಂದು ಈ ಪಾಂಪ್ಲೆಟ್‌ನ್ನು ತೋರಿಸುತ್ತಿದ್ದಾರೆ ನಮಗೆ ತಾವು ಸರ್ಕಾರದ ಪರವಾಗಿ ಜವಾಬ್ದಾರಿ ತೆಗೆದುಕೊಂಡು ಇಲ್ಲಿ ಉತ್ತರ ಕೊಡಬೇಕು ಕಂದಾಯ ಕಾರ್ಯದರ್ಶಿಯವರೇನಿದ್ದಾರೆ, ಅವರನ್ನು ಕರೆದು ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕು ಕಂದಾಯ ಕಾರ್ಯದರ್ಶಿಯವರೇನಿದ್ದಾರೆ ಏನಾದರೂ ಮಾಡಿ ಸಾತನೂರು ಕ್ಷೇತ್ರಕ್ಕೆ ತೊಂದರೆ ಕೊಡಬೇಕು ಎಂದೇ ಅವರು ಕಾರ್ಯಕ್ರಮವನ್ನು ಹಾಕಿದಂತಿದೆ ಏಕೆಂದರೆ, ಅವರ ಹತ್ತಿರ ಫೈಲ್ ಹೋಗಿ ಎರಡು ವರ್ಷವಾಯಿತು

ಶ್ರೀ ಹೆಚ್ ಸಿ ಬಾಲಕೃಷ್ಣ – ಮಾನ್ಯ ಅಧ್ಯಕ್ಷರೆ, ಅವರು

ಉಪಾಧ್ಯಕ್ಷರು – ಅವರು ಮಾತನಾಡುತ್ತಿದ್ದಾರೆ ಇದು ಗಮನ ಸೆಳೆಯುವ ಸೂಚನೆ ಅವರು ಏನೋ ಕೇಳುತ್ತಿದ್ದಾರೆ

ಶ್ರೀ ಡಿ ಕೆ ಶಿವಕುಮಾರ್ – ಬಡವರಿಗೆ ಪುನರ್ವಸತಿ ಕಲ್ಪಿಸುವ ವಿಚಾರದಲ್ಲಿ, ಹಣಕೊಡುವ ವಿಚಾರದಲ್ಲಿ ಅವರ ಹತ್ತಿರ ಫೈಲ್ ಇದೆ ನಮ್ಮನ್ನು

ಕರೆದು ಅದನ್ನು ಪರಿಶೀಲನೆ ಮಾಡಿ ಆ ರೈತರಿಗೆ ಹಣವನ್ನು ಕೊಟ್ಟರೆ ಸಾಕಾಗಿದೆ ಏಕೆಂದರೆ ಡ್ಯಾಂ ಕಟ್ಟಿ ಇದುವರೆಗೆ ನೀರನ್ನು ನಿಲ್ಲಿಸಲು ಆಗಿಲ್ಲ Exgratia amount ನ್ನು ಏನು Finance Department, Irrigation Department clear ಮಾಡಿದೆ, ಆ ಫೈಲನ್ನು Revenue Secretary ಇಟ್ಟುಕೊಂಡು ಕುಳಿತ್ತಿದ್ದಾರೆ ಅದರ ಬಗ್ಗೆ ಕರೆದು ಒಂದು ಸಭೆ ಮಾಡುವುದಾಗಿ ಹೋದ ಸಲ ಹೇಳಿದ್ದರು ಆ ಸಭೆಯನ್ನು ಮಾಡಿಲ್ಲ ಇದರ ಬಗ್ಗೆ ವಿ ಎಸ್ ಆಚಾರ್ಯರವರು ಜವಾಬ್ದಾರಿ ತೆಗೆದುಕೊಂಡು ಬಗೆಹರಿಸಿಕೊಡುತ್ತೇವೆ ಎಂದರೆ ಸಾಕು

ಶ್ರೀ ಹೆಚ್ ಸಿ ಬಾಲಕೃಷ್ಣ – ಅವರು ಇದ್ದಾಗ

ಶ್ರೀ ಡಿ ಕೆ ಶಿವಕುಮಾರ್ – ನೀನು ಮಂತ್ರಿಯಲ್ಲ ನೀನು ಮಂತ್ರಿಯಾದ ಮೇಲೆ ಮಾತನಾಡುವಿಯಂತೆ ಇದು ಗಮನ ಸೆಳೆಯುವ ಸೂಚನೆ ಅಧ್ಯಕ್ಷರೆ, ಅವರು ಮಾತನಾಡಲು ಅವಕಾಶ ಇಲ್ಲ

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ – ಅವರು ಅನಂತರ ಉತ್ತರ ಕೊಡಲಿ, ನನ್ನದು ಒಂದೇ ಒಂದು ಮಾತು ಒಂದೇ ಒಂದು ನಿಮಿಷ

ಉಪಾಧ್ಯಕ್ಷರು ನೀವು ಕುಳಿತುಕೊಳ್ಳಿ ಅವರು ಮಾತನಾಡಿದ ಮೇಲೆ ಮಾತನಾಡಿ ಮಂತ್ರಿಗಳು ನಿಂತಿದ್ದಾರೆ ನೀವು ಅರ್ಥ ಮಾಡಿಕೊಳ್ಳಿ

ಶ್ರೀ ಹೆಚ್ ಸಿ ಬಾಲಕೃಷ್ಣ – ಇದು ನಮ್ಮ ಜಿಲ್ಲೆಗೆ ಸಂಬಂಧಪಟ್ಟಿದ್ದು

(ಗೊಂದಲ)

ಉಪಾಧ್ಯಕ್ಷರು ಹಾಗಲ್ಲ

ಶ್ರೀ ಹೆಚ್ ಸಿ ಬಾಲಕೃಷ್ಣ – ಮಾನ್ಯ ಡಿ ಕೆ ಶಿವಕುಮಾರ್‌ರವರು ಅಲ್ಲಿ ಬಹಳ ವರ್ಷಗಳ ಕಾಲ ಉಸ್ತುವಾರಿ ಸಚಿವರಾಗಿದ್ದರು ಮುಖ್ಯಮಂತ್ರಿಗಳ ಆಪ್ತರಾಗಿದ್ದರು ಆವತ್ತೂ Finance Secretary ಎಲ್ಲರೂ ಇದ್ದರು ಅವತ್ತು ಅವರು ಇದನ್ನು ಕ್ಲಿಯರ್ ಮಾಡಬಹುದಿತ್ತು ಇವತ್ತಿನವರೆಗೆ ಕಾಯುವ ಅವಶ್ಯಕತೆ ಇರಲಿಲ್ಲ ಈ ಸರ್ಕಾರಕ್ಕೋಸ್ಕರ ಏಕೆ ಕಾದುಕೊಂಡು ಕುಳಿತರು? ಈಗ ಏಕೆ ಸುಮ್ಮನೆ ನಮ್ಮ ಮೇಲೆ ಆರೋಪ ಹೊರಿಸುತ್ತಾರೆ? ಅವರೇ ಆಗ ಮಾಡಬಹುದಿತ್ತಲ್ಲಾ? ಆಗ ಅವರಿಗೆ ಮಾಡಲು ಇಚ್ಛಾಶಕ್ತಿ ಇರಲಿಲ್ಲ ಈಗ ಸುಮ್ಮನೆ ನಮ್ಮ ಮೇಲೆ ಆರೋಪ ಮಾಡುತ್ತಾರೆ

ಶ್ರೀ ಡಿ ಕೆ ಶಿವಕುಮಾರ್ – ನೀವು ಮಂತ್ರಿಯಾದ ಮೇಲೆ ಮಾತನಾಡಿ ಈಗ ನೀವು ಮಂತ್ರಿಯಲ್ಲ ಅಕ್ಟೋಬರ್ 3 ಆದಮೇಲೆ

ಡಾ॥ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ ಕೆ ಶಿವಕುಮಾರ್‌ರವರ ಗಮನ ಸೆಳೆಯುವ

ಪ್ರಶ್ನೆಯ ಬಗ್ಗೆ ಮತ್ತು ಅವರು ಈಗ ಹೇಳಿರುವ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಅತೀ ಶೀಘ್ರವಾಗಿ ಅದಕ್ಕೆ ಬೇಕಾದ ಉತ್ತರವನ್ನು ನಾನು ಕೊಡಿಸುತ್ತೇನೆ ಇದನ್ನು held over ಮಾಡುತ್ತೇನೆ

ಆ) ವಿಷಯ : ಅಫಜಲಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಗಳ ಕೊರತೆ ಬಗ್ಗೆ

ಶ್ರೀ ಎಂ ವೈ ಪಾಟೀಲ್ (ಅಫಜಲಪುರ) – ಮಾನ್ಯ ಅಧ್ಯಕ್ಷರೆ, ನಮ್ಮ ಅಫಜಲ್‌ಪುರ ತಾಲ್ಲೂಕಿನಲ್ಲಿ ಬಹಳಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳೇ ಇಲ್ಲ ಎಂ ಬಿ ಬಿ ಎಸ್ ಮತ್ತು ಪಿ ಜಿ ಡಾಕ್ಟರ್‌ಗಳು ಇಲ್ಲ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿದ್ದಾರೆ ಔಷಧಿಗಳ ಕೊರತೆ ಇಲ್ಲ ಅದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದಿಸುತ್ತಿದ್ದೇನೆ ಆದರೆ ಡಾಕ್ಟರ್ ಇಲ್ಲದೇ ನಾವು ಮತ್ತೆ ಶಿಲಾಯುಗಕ್ಕೆ ಹೋಗಿದ್ದೇವೆ ಮಂತ್ರ, ಯಂತ್ರ ಹಾಕಿಸಿಕೊಳ್ಳಲು ಹೋಗುತ್ತಿದ್ದೇವೆ ಬರೆ ಹಾಕಿಸಿಕೊಳ್ಳಲು ಹೋಗುತ್ತಿದ್ದೇವೆ ಈ ರೀತಿಯ ವ್ಯವಸ್ಥೆಯನ್ನು ಮತ್ತೆ ನಾವು ಪ್ರಾರಂಭ ಮಾಡಬೇಕಾಗಿದೆ ಉಡಚರಿ ಎಂಬಲ್ಲಿ ಒಂದು ಆಸ್ಪತ್ರೆ ಇದೆ ಅದು ಪ್ರಾರಂಭವಾಗಿ 25 ವರ್ಷಗಳಾಗಿದ್ದರೂ ಅಲ್ಲಿ ಡಾಕ್ಟರ್ ಇಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ ಈ ರೀತಿ ನಡೆದರೆ ಜನರ ಆರೋಗ್ಯ ಕಾಪಾಡುವುದು ಹೇಗೆ ಎಂದು ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) – ಮಾನ್ಯ ಅಧ್ಯಕ್ಷರೆ, ಅಪಜಲಪುರ ತಾಲ್ಲೂಕಿನಲ್ಲಿ 1,93,378 ಜನಸಂಖ್ಯೆ ಇದ್ದು 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎರಡು ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಅಫಜಲಪುರ ಆಸ್ಪತ್ರೆಯನ್ನು ನೂರು ಹಾಸಿಗೆಯ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಲಾಗಿದೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 11 ವೈದ್ಯರ ಹುದ್ದೆಯನ್ನು ಮಂಜೂರು ಮಾಡಲಾಗಿದ್ದು ಇದರ ಜೊತೆ ಎನ್ ಆರ್ ಹೆಚ್ ಎಂ ಅಡಿಯಲ್ಲಿ 8 ಹುದ್ದೆಗಳನ್ನು ನೇಮಕ ಮಾಡಲು ಅನುಮತಿ ದೊರಕಿದ್ದು ಒಟ್ಟು 19 ಆಗುತ್ತದೆ ಇದರಲ್ಲಿ 13 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ ಇವರಲ್ಲಿ 7 ವೈದ್ಯರು ಎಂ ಬಿ ಬಿ ಎಸ್ ಪದವೀಧರರಾಗಿದ್ದು ಉಳಿದವರು ಆಯುಷ್ ವೈದ್ಯರುಗಳಾಗಿರುತ್ತಾರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎರಡು ಸಮುದಾಯ ಆರೋಗ್ಯ ಕೇಂದ್ರಗಳು ಸ್ಟೇಷನ್ ಗಾಣಗಾಪುರ ಮತ್ತು ಟಿ ಗಾಣಗಾಪುರ ಒಟ್ಟು 8 ವೈದ್ಯರ ಹುದ್ದೆಗಳೂ ಮಂಜೂರಾಗಿದ್ದು ಇದರ ಜೊತೆಯಲ್ಲಿ ಎನ್ ಆರ್ ಹೆಚ್ ಎಂ ಅಡಿಯಲ್ಲಿ ಎರಡು ಹುದ್ದೆಗಳನ್ನು ನೇಮಕ ಮಾಡಲು ಅನುಮತಿ ದೊರಕಿದ್ದು ಒಟ್ಟು ಇದರಲ್ಲಿ ಮೂರು ವೈದ್ಯರು ಕಾರ್ಯನಿರ್ವಹಿಸುತ್ತಿದ್ದು ಇವರಲ್ಲಿ ಇಬ್ಬರು ಎಂ ಬಿ ಬಿ ಎಸ್

ಪದವೀಧರರಾಗಿದ್ದು ಉಳಿದವರು ಆಯುಷ್ ವೈದ್ಯರುಗಳಾಗಿರುತ್ತಾರೆ ಈ ಹಿಂದೆ ಇದ್ದ 50 ಹಾಸಿಗೆಯುಳ್ಳ ಆಸ್ಪತ್ರೆಗೆ ಏಳು ವೈದ್ಯರ ಹುದ್ದೆ ಮಂಜೂರಾಗಿದ್ದು ಮೂರು ವೈದ್ಯರು ಹಾಲಿ ಕಾರ್ಯನಿರ್ವಹಿಸುತ್ತಿದ್ದಾರೆ ಅಫಜಲಪುರ ತಾಲ್ಲೂಕಿನ ಆಸ್ಪತ್ರೆ ನೂರು ಹಾಸಿಗೆಯ ಆಸ್ಪತ್ರೆಗೆ ತಕ್ಕಂತೆ ಏಳು ವೈದ್ಯರ ಹುದ್ದೆಗಳು ಹೆಚ್ಚುವರಿಯಾಗಿ ಮಂಜೂರಾಗಿರುತ್ತದೆ ಈ ಹುದ್ದೆಗಳನ್ನು ಶೇಕಡ 60 ರಷ್ಟು ಕಾಮಗಾರಿ ಮುಗಿದ ನಂತರ ಹೆಚ್ಚುವರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಹೆಚ್ಚುವರಿ ವೈದ್ಯರುಗಳ ಹುದ್ದೆಯನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿಯ ಮೂಲಕ 500 ವೈದ್ಯಾಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಲಾಗಿದ್ದು ಮೊದಲ ಹಂತದಲ್ಲಿ 250 ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎರಡನೇ ಹಂತದಲ್ಲಿ 250 ವೈದ್ಯಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಲು ಸಂದರ್ಶನವನ್ನು ನಡೆಸಲಾಗಿದ್ದು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿ ಇರುತ್ತದೆ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಆಯಾಯ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ನೀಡಲಾಗಿದೆ ಮತ್ತು ಎಂ ಬಿ ಬಿ ಎಸ್ ವೈದ್ಯರುಗಳು ಇಲ್ಲದ ಕಡೆ ಆಯುಷ್ ವೈದ್ಯರುಗಳನ್ನು ನೇಮಕ ಮಾಡಲಾಗುತ್ತಿದೆ ಹೊಸದಾಗಿ ನಾವು ನೇಮಕಾತಿಯನ್ನು ಮಾಡಿದ್ದೇವೆ ಈ ವರ್ಷ ಏನು ಗುತ್ತಿಗೆ ಆಧಾರದ ಮೇಲೆ 800 ಡಾಕ್ಟರ್‌ಗಳಿದ್ದರು, ಅವರನ್ನು ಕನ್‌ಫರ್ಮ್ ಮಾಡಿದ್ದೇವೆ ಅದರ ಜೊತೆಗೆ ಹೊಸದಾಗಿ 500 ಡಾಕ್ಟರ್‌ಗಳನ್ನು ನೇಮಕ ಮಾಡುತ್ತಿದ್ದೇವೆ ಜಿಲ್ಲಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ನೇರವಾಗಿ ನೇಮಕಾತಿ ಮಾಡಿಕೊಳ್ಳಲು ಅಧಿಕಾರವನ್ನು ಕೊಟ್ಟಿದ್ದೇವೆ ಗುತ್ತಿಗೆ ಆಧಾರದಲ್ಲಿ ಹೆಚ್ಚಾಗಿ ಕೆಲಸ ಮಾಡುವ ಡಾಕ್ಟರ್‌ಗಳು ಎಂ ಬಿ ಬಿ ಎಸ್ ನವರು, ಅವರು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಬೇಕು ಎಂಬ ದೃಷ್ಟಿಯಿಂದ ಅವರಿಗೆ ವೇತನವನ್ನೂ ಜಾಸ್ತಿ ಮಾಡಿದ್ದೇವೆ ಆ ದೃಷ್ಟಿಯಿಂದ ಮುಂದೆ ಬರುವ ದಿವಸಗಳಲ್ಲಿ ಡಾಕ್ಟರ್‌ಗಳನ್ನು ತುಂಬಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ

ಶ್ರೀ ಎಂ ವೈ ಪಾಟೀಲ್ – ಅಫಜಲ್‌ಪುರ ತಾಲ್ಲೂಕು ಕೇಂದ್ರವಾಗಿದ್ದು 100 ಬೆಡ್‌ನ ಆಸ್ಪತ್ರೆಯಾಗಿ ಮಾನ್ಯ ಸಚಿವರು ಮೇಲ್ದರ್ಜೆಗೆ ಏರಿಸಿದ್ದಾರೆ ಅದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸಿದ್ದೇವೆ ಅಲ್ಲಿ ಔಷಧ ಕೊರತೆ ಸಹ ಇಲ್ಲ ಆದರೆ ಇಬ್ಬರೇ ಇಬ್ಬರು ಎಂ ಬಿ ಬಿ ಎಸ್ ಡಾಕ್ಟರ್ ಇದ್ದಾರೆ, ಪಿ ಜಿ ಡಾಕ್ಟರ್ ಒಬ್ಬರೂ ಇಲ್ಲ ತಾಲ್ಲೂಕು ಆಸ್ಪತ್ರೆ ಈ ರೀತಿ ನಡೆದರೆ ಜನರ ಆರೋಗ್ಯ ಯಾವ ರೀತಿಯಾಗಿ ಬಗೆಹರಿಸಬಹುದು ಎಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಅಧ್ಯಕ್ಷರೆ, ನಾನು ಈ ಹಿಂದೆ ಸಹ ಒಂದು ಸಲಹೆ ಕೊಟ್ಟಿದ್ದೆ ನಾವು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇವೆ ಬಹಳಷ್ಟು ಗುತ್ತಿಗೆ ಆಧಾರದ ಮೇಲಿನ ಡಾಕ್ಟರ್‌ಗಳಿಗೆ ಕನ್‌ಫರ್ಮ್

ಮಾಡಿದ್ದಾರೆ 500 ಜನ ವೈದ್ಯರನ್ನು ನೇರ ನೇಮಕಾತಿ ಮಾಡಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅದನ್ನು ಸ್ವಾಗತ ಮಾಡುತ್ತೇವೆ ಈಗ ತಾಲ್ಲೂಕು ಆಸ್ಪತ್ರೆಗಳಲ್ಲಿ ಮತ್ತು ಕಮ್ಯುನಿಟಿ ಹೆಲ್ತ್ ಸೆಂಟರ್‌ಗಳಲ್ಲಿ specialist post ಎಲ್ಲಾ ಕಡೆ ಖಾಲಿ ಇದೆ ಅದಕ್ಕೆ ನಾನು ಒಂದು ಸಲಹೆ ಏನು ಕೊಟ್ಟಿದ್ದೆ ಎಂದರೆ, ನಮ್ಮ ರಾಜ್ಯದಲ್ಲಿ ಏನು ಸಿ ಇ ಟಿ ಮೂಲಕ ಯಾರು Post Graduation free seat ನ್ನು ತೆಗೆದುಕೊಳ್ಳುತ್ತಾರೆ ಅವರಿಗೆ ಸರ್ಕಾರ ಸುಮಾರು ಹಣವನ್ನು ಖರ್ಚು ಮಾಡುತ್ತದೆ ಒಂದು Post Graduate ನಮ್ಮ ರಾಜ್ಯದಲ್ಲಿ ಪಾಸ್ ಆಗಬೇಕಾದರೆ 5–10 ಲಕ್ಷ ಹಣವನ್ನು ಸರ್ಕಾರ ಅವರ ಮೇಲೆ ಖರ್ಚು ಮಾಡುತ್ತದೆ ಆದರೆ, ಅವರು ಪಾಸ್ ಆದಮೇಲೆ ಯಾವುದೇ ಜವಾಬ್ದಾರಿ ಅವರ ಮೇಲೆ ಇಲ್ಲ ಮಾನ್ಯ Medical Education Minister ರವರು ಇದರ ಬಗ್ಗೆ ಸ್ವಲ್ಪ ಗಮನಕೊಡಬೇಕು ಏಕೆಂದರೆ ಆರೋಗ್ಯ ಸಚಿವರು ಇದು ತಮಗೆ ಬರುತ್ತದೆ ಎಂದು ಹೇಳಿದ್ದರು ಇದಕ್ಕೆ ಸಂಬಂಧಿಸಿದಂತೆ ತಾವು ಒಂದು ಬಿಲ್ಲನ್ನು ತರಬೇಕು ಯಾರು Common Entrance Test ನಲ್ಲಿ free seat ನ್ನು ತೆಗೆದುಕೊಂಡು, Post Graduate ಆಗಿ ಈ ರಾಜ್ಯದಲ್ಲಿ pass ಆಗುತ್ತಾರೆ ಅವರು ಕಡ್ಡಾಯವಾಗಿ, ಅವರಿಗೆ ಏನಾದರೂ ಸಂಬಳ ಕೊಡಿ, ಅವರಿಗೆ 20–25 ಸಾವಿರ ಸಂಬಳ ಕೊಡಿ, ಆದರೆ 1–2 ವರ್ಷ ಕಡ್ಡಾಯವಾಗಿ Community Health Centre ಮತ್ತು Taluk Hospital ನಲ್ಲಿ ಕೆಲಸ ಮಾಡಬೇಕೆಂದು ಬಿಲ್ಲನ್ನು ತಂದರೆ ಈ ಸಮಸ್ಯೆಗೆ ಶಾಶ್ವತವಾಗಿರತಕ್ಕ ಪರಿಹಾರ ಸಿಗುತ್ತದೆ ಇಲ್ಲದಿದ್ದರೆ ಇದಕ್ಕೆ ಪರಿಹಾರ ಸಿಗಲು ಸಾಧ್ಯವೇ ಇಲ್ಲ ಎಲ್ಲಾ ಆಸ್ಪತ್ತೆಯಲ್ಲಿ nurses ಹುದ್ದೆಗಳು ಖಾಲಿ ಇದೆ ANMs ಹುದ್ದೆಗಳು ಖಾಲಿ ಇದೆ ಆ ಹುದ್ದೆಗಳಿಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಬೇಕು Staff Nurses ನ್ನು Diploma Nursing Private College ನಲ್ಲಿ ಪಾಸ್ ಆಗಿರುವವರಿಗೆ ನೇಮಕಾತಿ ಮಾಡಿಕೊಳ್ಳಲು ಡಿ ಸಿ ಗಳಿಗೆ ಆದೇಶ ಇಲ್ಲ ಆದ್ದರಿಂದ ಯಾರೂ ಬರುತ್ತಿಲ್ಲ ಆದ್ದರಿಂದ ರೂಲ್‌ನ್ನು ಸಡಿಲ ಮಾಡಿ ANMs ನ್ನು ಕೂಡ Diploma Nursing ಮಾಡಿದವರಿಗೆ appointment ಮಾಡಲು ಅವಕಾಶ ಕೊಡಬೇಕು ಅದಲ್ಲದೇ ಗುತ್ತಿಗೆ ಆಧಾರದ ಮೇಲೆ ಎಲ್ಲೆಲ್ಲಿ ತಾಲ್ಲೂಕು ಆಸ್ಪತ್ರೆಯಲ್ಲಿ, C S C, P H C ಗಳಲ್ಲಿ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ, ಅಲ್ಲಿ ಡಿ ಸಿ ಗಳಿಗೆ ಆದೇಶ ಕೊಡಬೇಕು ಇದನ್ನು ಮಾಡಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ ತಾವು ದಯವಿಟ್ಟು ಈ ರೀತಿ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ

ಶ್ರೀ ಬಸವರಾಜ್ ರಾಯರೆಡ್ಡಿ – ಮಾನ್ಯ ಉಪಾಧ್ಯಕ್ಷರೆ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಸಚಿವರು ಉತ್ತರ ಹೇಳಲಿ

ಉಪಾಧ್ಯಕ್ಷರು – ಅವರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನೇ ಕೊಟ್ಟಿಲ್ಲ ಮತ್ತೆ ನೀವೂ ಕೂಡ ಏಕೆ ಪ್ರಸ್ತಾಪಿಸುತ್ತೀರಿ?

ಶ್ರೀ ಬಸವರಾಜ್ ರಾಯರೆಡ್ಡಿ – ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ನಿಮಿಷ ಪ್ರಸ್ತಾಪಿಸಿಬಿಡುತ್ತೇನೆ ಮಾನ್ಯ ಸಚಿವರು 500 ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡುತ್ತೇವೆ ಎಂದು ಹೇಳಿದರು ಬಹಳ ಸಂತೋಷ ಈಗ ನೀವು ಆರೋಗ್ಯ ಮಂತ್ರಿಗಳಾದ ಮೇಲೆ, ಪ್ರತಿ ತಾಲ್ಲೂಕಿಗೆ 100 bed hospital ಅನ್ನು ಮಂಜೂರು ಮಾಡಿಕೊಟ್ಟಿದ್ದೀರಿ All the taluk hospitals have been upgraded as 100 bed hospitals ಇದು ಸಂತೋಷದ ವಿಚಾರ

ಶ್ರೀ ಆರ್ ಅಶೋಕ್ – ಅದರಲ್ಲೇನಾರೂ partiality ಆಗಿದೆಯೇ?

ಶ್ರೀ ಬಸವರಾಜ್ ರಾಯರೆಡ್ಡಿ – ನಾನು ನೀವು ಎಲ್ಲಾ ತಾಲ್ಲೂಕುಗಳಿಗೂ ಮಾಡಿದ್ದೀರಿ, ಸಂತೋಷ ಎಂದಷ್ಟೇ ಹೇಳುತ್ತಿದ್ದೇನೆ ನೀವು partiality ಮಾಡಿದ್ದೀರಿ ಎಂದು ನಾನೇನೂ ಹೇಳಿಲ್ಲ ಅದನ್ನು ಇಲ್ಲಿಗೇ ಬಿಡಿ

ಉಪಾಧ್ಯಕ್ಷರು – ಅವರು ಇದರಿಂದ ಸಂತೋಷವಾಗಿದೆ ಎಂದಷ್ಟೇ ಹೇಳಿದರು

ಶ್ರೀ ಬಸವರಾಜ್ ರಾಯರೆಡ್ಡಿ – ಈಗ ಏನಾಗಿದೆ ಎಂದರೆ, ವೈದ್ಯರ ನೇಮಕಾತಿ ಆಗಬೇಕು 500 ಜನ ವೈದ್ಯರನ್ನು ನಾವು ನೇಮಕಾತಿ ಮಾಡಿಕೊಳ್ಳುತ್ತೇವೆ, M B B S Doctors ಬರದಿದ್ದರೆ ಯಾರು ಆಯುಷ್ ಡಾಕ್ಟರ್ಸ್ ಎಂದು ಇರುತ್ತಾರೋ, ಆ ಆಯುರ್ವೇದ ಡಾಕ್ಟರನ್ನು ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಹೇಳಿದಿರಿ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ ತಾವು ಏನು ಮಾಡಬೇಕಾಗುತ್ತದೆ ಎಂದರೆ, ಯಾರು M B B S ಅನ್ನು

ಶ್ರೀ ಆರ್ ಅಶೋಕ್ – ಒಂದು ಸ್ಪಷ್ಟೀಕರಣ ನೀಡಬಯಸುತ್ತೇನೆ 500 ಜನ M B B S ಆದ ವೈದ್ಯರನ್ನೇ ನೇಮಿಸಿಕೊಳ್ಳಲು ಅರ್ಜಿ ಕರೆಯಲಾಗಿದೆ ಅದರಲ್ಲಿ ಯಾವುದೂ ಆಯುರ್ವೇದ ವೈದ್ಯರಿಗೆ ಇಲ್ಲ 500 ಜನರೂ M B B S ಆದವರನ್ನೇ ನೇಮಿಸಿಕೊಳ್ಳುತ್ತೇವೆ

ಶ್ರೀ ಬಸವರಾಜ್ ರಾಯರೆಡ್ಡಿ – ದಯಮಾಡಿ ಆಯುರ್ವೇದ ಡಾಕ್ಟರ್ ಅನ್ನು ಆಯುರ್ವೇದ ದವಾಖಾನೆಗೆ ಹಾಕಿ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ ಎಲ್ಲಿ ತಾವು M B B S ಡಾಕ್ಟರ್ಸ್ ಅನ್ನು ನೇಮಕಾತಿ ಮಾಡಬೇಕಾಗಿದೆಯೋ, ಅಲ್ಲಿ ನೀವು M B B S ಆದವರನ್ನೇ ನೇಮಕಾತಿ ಮಾಡಬೇಕು ಏಕೆಂದರೆ, ಇವತ್ತು

ಉಪಾಧ್ಯಕ್ಷರು – ನೀವು ಮತ್ತೆ details ಗೆ ಹೋಗುತ್ತಿದ್ದೀರಿ

ಶ್ರೀ ಬಸವರಾಜ್ ರಾಯರೆಡ್ಡಿ – ಮಾನ್ಯ ಉಪಾಧ್ಯಕ್ಷರೆ, ಬೇಗ ಮುಗಿಸಿಬಿಡುತ್ತೇನೆ

ಉಪಾಧ್ಯಕ್ಷರು – ನೀವು ಪೇಪರ್ ಕೆಳಗೆ ಇಟ್ಟಿರಿ ಎಂದರೆ, details ಗೆ ಹೋಗುತ್ತೀರಿ ಎಂದೇ ಅರ್ಥ

ಶ್ರೀ ಬಸವರಾಜ್ ರಾಯರೆಡ್ಡಿ – ಆ ತರಹ ಏನೂ ಇಲ್ಲ ದಯಮಾಡಿ ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕಾಗುತ್ತದೆ Government quota ನಲ್ಲಿ M B B S selection ಆದವರಿಗೆ ಇನ್ನು ಮೇಲೆ compulsory ಯಾಗಿ, ಹೇಗೆ 6 ತಿಂಗಳು compulsory Houseman ship ಇದೆಯೋ, ಆ ತರಹ ಇವರಿಗೂ ಎರಡು ವರ್ಷ ಕನಿಷ್ಠ ಗ್ರಾಮೀಣ ಸೇವೆಯನ್ನು ಕಡ್ಡಾಯವಾಗಿ ಮುಗಿಸಿದ ಮೇಲೆಯೇ ನೀವು ಅವರಿಗೆ degree confirm ಮಾಡಬೇಕು ಇಲ್ಲದಿದ್ದರೆ ಯಾವ ಡಾಕ್ಟರ್ಸ್ ಕೂಡ ಬರುವುದಿಲ್ಲ ಸುಮ್ಮನೆ ನೀವು upgrade ಮಾಡುತ್ತೀರಷ್ಟೇ Posts create ಮಾಡುತ್ತೀರಿ ಆದರೆ ಒಬ್ಬ ಡಾಕ್ಟರ್ ಸಹ ಬರುವುದಿಲ್ಲ ಆಮೇಲೆ ಅದರ ಜೊತೆಗೆ ಒಬ್ಬ ಡಾಕ್ಟರ್‌ಗೆ 15 ಸಾವಿರ ರೂಪಾಯಿಗಳನ್ನಾದರೂ ಕನಿಷ್ಟ ಪಗಾರ ಕೊಡಿ ಇಲ್ಲದಿದ್ದರೆ ಯಾರೂ ಬರುವುದಿಲ್ಲ ನೀವು ಈಗ 11 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ ನಮ್ಮ ಜಿಲ್ಲೆಯಲ್ಲಿ ಆಗಿರುವುದನ್ನು ನಾನಿಲ್ಲಿ ಹೇಳುತ್ತಿದ್ದೇನೆ ಅದಕ್ಕೆ compulsory ಆಗಿ ಎರಡು ವರ್ಷ ಸೇವೆ ಸಲ್ಲಿಸಬೇಕೆಂದು ಮಾಡಿ ಮತ್ತು M B B S ಡಾಕ್ಟರ್‌ಗೆ ಹೆಚ್ಚಿನ ಪಗಾರವನ್ನು ಕೊಡಿ ಅದಕ್ಕೆ ನಾನು ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ

ಡಾ॥ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) – ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಇಬ್ಬರು ಸದಸ್ಯರು ಬಹಳ ಪ್ರಮುಖ ವಿಷಯದ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ ನಾವು ಸರ್ಕಾರದಿಂದ ಕೊಡತಕ್ಕಂಥ ಉಚಿತ ಸೀಟುಗಳನ್ನು ಪಡೆದುಕೊಂಡಿರತಕ್ಕಂಥವರು, ಸರ್ಕಾರಿ ಕಾಲೇಜಿನಲ್ಲಿ ಇರಲಿ ಅಥವಾ ಖಾಸಗಿ ಕಾಲೇಜಿನಲ್ಲಿ Government appropriate ಮಾಡುವಂತಹ ಸೀಟುಗಳಲ್ಲಿ M B B S ಅಥವಾ M D , M S ಇತ್ಯಾದಿ post graduation ಸೀಟುಗಳನ್ನು ಪಡೆಯುವವರಿಗ ನಾವು ಇಷ್ಟು ಅವಧಿಗೆ, ಅಂದರೆ ಎರಡು ವರ್ಷ ಸರ್ಕಾರಿ ಸೇವೆಯನ್ನು ಕಡ್ಡಾಯವಾಗಿ ಮಾಡಬೇಕು, ಅವರಿಗೆ ಎಲ್ಲಾ ಸಂಬಳ ಸಾರಿಗೆಗಳನ್ನು ಕೊಡುತ್ತೇವೆ ಎಂದು ಹೇಳುವಂತಹದ್ದರ ಬಗ್ಗೆ ನಾವು ಈಗಾಗಲೇ ಪಕ್ಕದ ರಾಜ್ಯದಿಂದ ಅದಕ್ಕೆ ಸಂಬಂಧಪಟ್ಟಂತಹ ಅಲ್ಲಿ ಈಗಾಗಲೇ ಚಾಲೂ ಇರುವಂತಹ ನಿಯಮಾವಳಿಗಳನ್ನು ತರಿಸಿದ್ದೇವೆ ಆ ಬಗ್ಗೆ ಸೂಕ್ತ ಗಮನವನ್ನು ಕೊಡುತ್ತೇವೆ ಇದು ಸರಿಯಾದ ಸಲಹೆಯಾಗಿದೆ ಸರ್ಕಾರ ಅದೇ ದಾರಿಯಲ್ಲಿ ಚಿಂತನೆ ಮಾಡುತ್ತಿದೆ

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ – ಇದೇ ಅಧಿವೇಶನದಲ್ಲೇ ಸದರಿ ಮಸೂದೆಯನ್ನು ನೀವು ಮಂಡನೆ ಮಾಡಬೇಕು ಡಿಲೇ ಮಾಡದೇ ಈ ಅಧಿವೇಶನದಲ್ಲೇ ನೀವು introduce ಮಾಡಿ

ಶ್ರೀ ಆರ್ ಅಶೋಕ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಯರೆಡ್ಡಿಯವರು contract doctors ಗಳಿಗೆ ಸಂಬಳ ಜಾಸ್ತಿ ಮಾಡಬೇಕೆಂದು ಕೇಳಿದರು ಈಗಾಗಲೇ ಅದಕ್ಕೆ ಆದೇಶ ಹೊರಡಿಸಲಾಗಿದೆ ಮೊದಲು 11 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೆವು, ಈಗ ಅವರಿಗೆ 16,217 ರೂಪಾಯಿಗಳನ್ನು ಕೊಡುತ್ತಿದ್ದೇವೆ Specialist ಗಳಿಗೆ 17,554 ರೂಪಾಯಿಗಳಿಗೆ ಸಂಬಳವನ್ನು ಜಾಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ನಮ್ಮಲ್ಲಿ ಇರತಕ್ಕಂಥ ಎಲ್ಲಾ ಸಮಸ್ಯೆಗೆ ಪರಿಹಾರ ಆಗಬೇಕಾದರೆ, ನಮ್ಮ ಸರ್ಕಾರಿ ಕೋಟಾದಲ್ಲಿ ಏನು ಓದುತ್ತಾರೆ, MBBS ಇರಬಹುದು ಅಥವಾ PG seat ಇರಬಹುದು ಇವರಿಗೆ ಸರ್ಕಾರ ವರ್ಷಕ್ಕೆ ಸುಮಾರು 4 ಲಕ್ಷ ರೂಪಾಯಿಗಳ ಮೇಲೆ ಖರ್ಚು ಮಾಡುತ್ತಿದೆ ಇದೆಲ್ಲಾ tax payers ಹಣ ಬಡವ ಕಟ್ಟುವಂತಹ ಹಣ ಸುಮಾರು 5 ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷ ಅವರ ಮೇಲೆ ಹಾಕುತ್ತೇವೆ ಆದರೆ ಅವರು ವಿದ್ಯಾಭ್ಯಾಸ ಮಾಡಿದ ತಕ್ಷಣ ಅವರು ಬೇರೆ ಬೇರೆ private ಕಡೆ ಬಹಳ ಸಂಬಳಕ್ಕೆ ಹೋಗುತ್ತಾರೆ ಅದನ್ನು ತಡೆಗಟ್ಟಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ ಈಗಾಗಲೇ ಮಾನ್ಯ Medical Education Minister ಹೇಳಿದ್ದಾರೆ ಆ ಬಿಲ್ ಅನ್ನು ತರುತ್ತೇವೆ ಗ್ರಾಮೀಣ ಸೇವೆ mandatory ಮಾಡುತ್ತೇವೆ ಸರ್ಕಾರಿ ಕೋಟಾದಲ್ಲಿ ಸರ್ಕಾರದಿಂದ ಹಣ ಪಡೆದು ಯಾರು MBBS ಮಾಡುತ್ತಾರೋ, ಅವರು ಎರಡು ವರ್ಷ ಈ ಆಸ್ಪತ್ರೆಗಳಲ್ಲಿ compulsory ಯಾಗಿ ಕೆಲಸ ಮಾಡುವಂತಾದರೆ ನಮ್ಮ ಎಲ್ಲಾ ಆಸ್ಪತ್ರೆಗಳಲ್ಲೂ ಡಾಕ್ಟರ್‌ಗಳಿಲ್ಲ ಎನ್ನುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ ಒಳ್ಳೆಯ ಸಲಹೆಯನ್ನು ತಾವು ಕೊಟ್ಟಿದ್ದೀರಿ ಅದನ್ನು ಈ ಸರ್ಕಾರ ಜಾರಿಗೆ ತರುತ್ತದೆ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಸಚಿವರು ದಯವಿಟ್ಟು ನರ್ಸ್‌ಗಳ ಬಗ್ಗೆ ಹೇಳಬೇಕು

ಶ್ರೀ ಎಂ ವೈ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಮಾನ್ಯ ಸಚಿವರು ಉತ್ತರಿಸಬೇಕು ಅಫಜಲಪುರದಲ್ಲಿ specialist doctor ಯಾರೂ ಇಲ್ಲ ಎಷ್ಟು ದಿವಸಗಳಲ್ಲಿ ಆ P.G. doctors ಗಳನ್ನು ನೇಮಕಾತಿ ಮಾಡುತ್ತೀರಿ? ನಮ್ಮಲ್ಲಿ ಉಡಚಣ ಎಂಬ ಗ್ರಾಮದಲ್ಲಿ ಆಸ್ಪತ್ರೆಯೊಂದಿದೆ ಅಲ್ಲಿ ಕಳೆದ 25 ವರ್ಷಗಳಿಂದ ಡಾಕ್ಟರ್ ಇಲ್ಲ ಅಲ್ಲಿಗೆ ಯಾರಾದರೂ ಒಬ್ಬ ಆಯುರ್ವೇದ ಡಾಕ್ಟರ್ ಆದರೂ ಕೊಡಿ ಅದನ್ನು ನಾವು ನಡೆಸಿಕೊಂಡು ಹೋಗುತ್ತೇವೆ ಎಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಿದ್ದೇನೆ

ಶ್ರೀ ಆರ್ ಅಶೋಕ್ – ಈಗಾಗಲೇ ಅಫಜಲಪುರ ಆಸ್ಪತ್ರೆಯನ್ನು 50 bed ನಿಂದ 100 bed ಗೆ ಏರಿಸುವ ಕೆಲಸ ನಡೆಯುತ್ತಿದೆ ಕಾಮಗಾರಿಯನ್ನು ಪ್ರಾರಂಭ ಮಾಡಿ ಕೆಲಸ ಬೇಗ ನಡೆಯುತ್ತಿದೆ ಆಯುರ್ವೇದ ಡಾಕ್ಟರ್‌ಗಳನ್ನು ನೇಮಕಾತಿ ಮಾಡುವುದಕ್ಕೆ ನಿಮ್ಮ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ ನಮ್ಮ ಶಾಸಕರು ಜಿಲ್ಲಾಧಿಕಾರಿಗಳ ಮುಖಾಂತರ ಆಯುರ್ವೇದ ಡಾಕ್ಟರ್‌ಗಳ

ನೇಮಕ ಮಾಡುವುದಕ್ಕೆ ನಮ್ಮಲ್ಲಿ ಯಾವುದೇ restrictions ಇಲ್ಲ ಎಲ್ಲಿ ಖಾಲಿ ಇದೆಯೋ, M B B S doctor ಬಂದಿಲ್ಲದಿರುವ ಕಡೆ ಆಯುರ್ವೇದ ಡಾಕ್ಟರ್‌ಗಳನ್ನು ನೇಮಕ ಮಾಡುವುದಕ್ಕೆ ನಾವು ಅನುಮತಿಯನ್ನು ಕೊಟ್ಟು ಬಿಟ್ಟಿದ್ದೇವೆ ನಾನೂ ಸಹ ಜಿಲ್ಲಾಧಿಕಾರಿಗಳಿಗೆ ನೇಮಕಾತಿ ಮಾಡುವುದಕ್ಕೆ ಸಂದೇಶವನ್ನು ಕೊಡುತ್ತೇನೆ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಸಚಿವರು ನರ್ಸ್‌ಗಳ ಬಗ್ಗೆ ಹೇಳಬೇಕು

ಶ್ರೀ ಕುಮಾರ್ ಬಂಗಾರಪ್ಪ – ಮಾನ್ಯ ಉಪಾಧ್ಯಕ್ಷರೆ, ನೀವು ಈಗ M B B S doctor ಇರತಕ್ಕಂಥ ಜಾಗದಲ್ಲಿ ಆಯುರ್ವೇದ ವೈದ್ಯರನ್ನು ನೇಮಿಸುವುದಾಗಿ ಹೇಳುತ್ತಿದ್ದೀರಿ ಬೇರೆ ಕಡೆ we are filing criminal cases as far as the Ayurvedic doctors are concerned ಈಗ ನೀವು ಹೇಗೆ ಅಲ್ಲಿ ಆ ಜಾಗಗಳಿಗೆ M B B S doctor ಬದಲು ಆಯುರ್ವೇದ doctors ಗಳನ್ನು appointment ಮಾಡುತ್ತೀರಿ? They are not eligible persons to practice Alopathy ಎಂದು we are filing criminal cases against them ಆದರೆ ಈಗ ಸರ್ಕಾರವೇ ಹೇಗೆ ಅಲೋಪತಿಗೆ ಬದಲಾಗಿ ಆಯುರ್ವೇದ ಡಾಕ್ಟರ್‌ಗಳನ್ನು appointment ಮಾಡುತ್ತದೆ? You better clarify yourself Whether you want to practice on Ayurvedic ಎಂದರೆ ಆಯುರ್ವೇದಿಕ್ ಇರಲಿ, ಇಲ್ಲವೆಂದರೆ ಅಲೋಪತಿ ಬೇಕಾಗಿದ್ದರೆ ಅಲೋಪತಿಯವರನ್ನೇ ನೇಮಿಸಿ, ಸರ್ಕಾರಕ್ಕೆ ಅನುಕೂಲವಾದ ರೀತಿಯಲ್ಲಿ ಮಾಡಬಹುದು ಗ್ರಾಮೀಣ ಭಾಗಗಳಲ್ಲಿ ಆಯುರ್ವೇದಿಕ್ ಹಾಸ್ಪಿಟಲ್‌ಗಳಿವೆ You stick to that ಇಲ್ಲವೆಂದರೆ ಏನಾಗುತ್ತದೆ ಎಂದರೆ, ಅದನ್ನು use ಮಾಡಿಕೊಂಡು ಬೇರೆ ಕಡೆಗೆ ವರ್ಗಾವಣೆ ಮಾಡಿಸಿಕೊಳ್ಳಲಾಗುತ್ತದೆ ಎಲ್ಲೆಲ್ಲಿ ಈ ತರಹ ಅನೈತಿಕ ಡಾಕ್ಟರ್ಸ್ ಇದ್ದಾರೋ, ಅವರೆಲ್ಲರ ಮೇಲು criminal case file ಮಾಡಬೇಕು ಎಂದು ನೀವೇ district wise list out ಮಾಡಿದ್ದೀರಿ ಇದರ ಬಗ್ಗೆ ಹೇಳಿ

ಉಪಾಧ್ಯಕ್ಷರು – ಮಾನ್ಯ ಅಶೋಕ್‌ರವರೆ, ತಮ್ಮ ಉತ್ತರ ಆಯಿತೇ?

ಶ್ರೀ ಕುಮಾರ್ ಬಂಗಾರಪ್ಪ – ಇವರು ಅವರನ್ನೇ appointment ಮಾಡುತ್ತೇವೆ ಎನ್ನುತ್ತಿದ್ದಾರೆ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ನರ್ಸ್‌ಗಳ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಲಿಲ್ಲ

ಉಪಾಧ್ಯಕ್ಷರು – ಮಾನ್ಯ ಸಚಿವರ ಉತ್ತರ ಕೊಟ್ಟಿದ್ದಾರೆ ಅದರ ಬಗ್ಗೆ ಆಗಲೇ ಪ್ರಸ್ತಾಪ ಮಾಡಿದ್ದೀರಲ್ಲಾ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಏನೋ commit ಮಾಡುತ್ತಿದ್ದಾರೆ ರಾಜ್ಯದ ಹಿತದೃಷ್ಟಿಯಿಂದ ನಾವು

ಮಾತನಾಡುತ್ತಿದ್ದೇವೆ ನಾನೇನು ನನ್ನ ಸ್ವಂತ constituency ಬಗ್ಗೆ ಮಾತನಾಡುತ್ತಿಲ್ಲ ಮಾನ್ಯ ಸಚಿವರು ನರ್ಸ್‌ಗಳ ಬಗ್ಗೆ ಒಂದು ಕಮಿಟ್‌ಮೆಂಟ್ ಮಾಡಲಿ

ಉಪಾಧ್ಯಕ್ಷರು – ಆಯಿತು ಅದರ ಬಗ್ಗೆ ಹೇಳಿ

ಶ್ರೀ ಆರ್ ಅಶೋಕ್ – ಮಾನ್ಯ ಉಪಾಧ್ಯಕ್ಷರೆ, ನರ್ಸ್‌ಗಳ ನೇಮಕಾತಿ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ ಅದರ ಬಗ್ಗೆ ಒಳ್ಳೆಯ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಇದರಿಂದ ಏನು ನಮ್ಮ contract nurse ಗಳನ್ನು ತೆಗೆದುಕೊಳ್ಳುತ್ತೇವೋ, ಆ ಸಂದರ್ಭದಲ್ಲಿ ಈ ಪ್ರಸ್ತಾವನೆ ಪರಿಶೀಲನೆ ಮಾಡುತ್ತಿದ್ದೇವೆ ಆದಷ್ಟು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ

(ಗೊಂದಲ)

ಶ್ರೀಮತಿ ಪರಿಮಳ ನಾಗಪ್ಪ – ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಪ್ರಶ್ನೆಯನ್ನು ಈಗ ತೆಗೆದುಕೊಳ್ಳಿ

ಉಪಾಧ್ಯಕ್ಷರು – ಮಾನ್ಯ ಸಚಿವರುಗಳು ಯಾರೂ ಇಲ್ಲ ಈಗಾಗಲೇ ಪ್ರಶ್ನೋತ್ತರ ಮುಗಿದು ನಾವು Calling Attentions ಬಗ್ಗೆ ಚರ್ಚಿಸುತ್ತಿದ್ದೇವೆ

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ – ಸರ್ಕಾರಿ ಜಮೀನು ಒತ್ತುವರಿ ಬಗ್ಗೆ ಅರ್ಧ ಗಂಟೆ ಕಾಲಾವಧಿಯ ಚರ್ಚೆಯನ್ನು ಈಗ ತೆಗೆದುಕೊಳ್ಳಿ

ಉಪಾಧ್ಯಕ್ಷರು – ಅವಕಾಶ ನೋಡಿಕೊಂಡು ನಾಳೆ ಅದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ ನಾಳೆ ಬೆಳಿಗ್ಗೆ ಅದರ ಬಗ್ಗೆ ಚರ್ಚಿಸಲು ಅವಕಾಶ ಕೊಡುತ್ತೇನೆ

(ಗೊಂದಲ)

ಶ್ರೀ ಬಸವರಾಜ್ ರಾಯರೆಡ್ಡಿ – ಮಾನ್ಯ ಉಪಾಧ್ಯಕ್ಷರೆ, ಕಾನೂನುಬಾಹಿರವಾಗಿ ಸರ್ಕಾರ ಜಮೀನು ಹರಾಜು ಮಾಡುತ್ತಿದೆ ಇದು ಬಹಳ ಪ್ರಮುಖವಾದಂತಹ ವಿಷಯವಾಗಿದೆ ನಾಳೆ ಬೆಳಿಗ್ಗೆಯೇ ಅದನ್ನು ತೆಗೆದುಕೊಳ್ಳಿ

ಉಪಾಧ್ಯಕ್ಷರು ಆಯಿತು

(ಗೊಂದಲ)

ಶ್ರೀ ಎಂ ವೈ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಅಫಜಲಪುರ ತಾಲ್ಲೂಕು ಆಸ್ಪತ್ರೆ ಬಗ್ಗೆ ಏನೂ ಹೇಳಲಿಲ್ಲ

ಉಪಾಧ್ಯಕ್ಷರು – ಮಾನ್ಯ ಸಚಿವರೆ, ಡಿ ಸಿ ಯವರಿಗೆ ಆ ಬಗ್ಗೆ phone ಮಾಡಿ ಅಲ್ಲಿಗೆ ವೈದ್ಯರನ್ನು ನೇಮಿಸತಕ್ಕ ವ್ಯವಸ್ಥೆ ಮಾಡಿ

(ಗೊಂದಲ)

ಶ್ರೀ ನೆ ಲ ನರೇಂದ್ರಬಾಬು – ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಲಾಗಿದೆ ಎಂದು ಹೇಳುತ್ತಾರೆ ಆದರೆ ಬಹಳಷ್ಟು ಪ್ರಶ್ನೆಗಳಿಗೆ ಉತ್ತರಗಳೇ ಬಂದಿರುವುದಿಲ್ಲ ಇವತ್ತೂ ಹಾಗೆಯೇ ಆಗಿದೆ ನಿನ್ನೆ ಮತ್ತು ಮೊನ್ನೆಯೂ ಹಾಗೆಯೇ ಆಗಿತ್ತು ದಯವಿಟ್ಟು ಉತ್ತರಗಳನ್ನು ಒದಗಿಸಿಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ 'ಉತ್ತರಗಳನ್ನು ಮಂಡಿಸುತ್ತಿದ್ದೇವೆ' ಎಂದು ಹೇಳುತ್ತಾರೆ, ಆದರೆ ಇಲ್ಲಿ ಉತ್ತರಗಳೇ ಇರುವುದಿಲ್ಲ

(ಗೊಂದಲ)

ಶ್ರೀಮತಿ ಟಿ ಭಾಗೀರಥಿ – ಮಾನ್ಯ ಉಪಾಧ್ಯಕ್ಷರೆ, ನಮ್ಮದೊಂದು ಪ್ರಶ್ನೆ ಇದೆ

ಉಪಾಧ್ಯಕ್ಷರು – ನಿಮ್ಮ ಪ್ರಶ್ನೆಗೆ ಉತ್ತರಿಸಲು ಸಂಬಂಧಪಟ್ಟ ಸಚಿವರು ಸದನದಲ್ಲಿ ಇಲ್ಲ

ಶ್ರೀಮತಿ ಪರಿಮಳ ನಾಗಪ್ಪ – ಮಾನ್ಯ ಉಪಾಧ್ಯಕ್ಷರೆ, ನಮ್ಮದೊಂದು ಪ್ರಶ್ನೆ ಇದೆ ಮಾನ್ಯ ಮಂತ್ರಿಗಳೂ ಇದ್ದಾರೆ

ಉಪಾಧ್ಯಕ್ಷರು – ಆಯಿತು ಕೇಳಿ

ಶ್ರೀಮತಿ ಪರಿಮಳ ನಾಗಪ್ಪ – ಮಾನ್ಯ ಉಪಾಧ್ಯಕ್ಷರೆ, 699ನೇ ಸಂಖ್ಯೆಯ ಪ್ರಶ್ನೆಯನ್ನು ಮಾನ್ಯ ಆರೋಗ್ಯ ಸಚಿವರಿಗೆ ಕೇಳುತ್ತಿದ್ದೇನೆ

ಉಪ ಸಭಾಧ್ಯಕ್ಷರು – ಈಗ ತಾವೇನು ಪ್ರಶ್ನೆಯನ್ನು ಕೇಳಿದಿರಿ, ಅದನ್ನು ಸೋಮವಾರ ತೆಗೆದುಕೊಳ್ಳೋಣ ನೀವು ಬಂದಿರುವುದೇ ತಡವಾಗಿ ನಾವೇನು ಮಾಡೋಣ ಗಮನ ಸೆಳೆಯುವ ಸೂಚನೆಗಳು ಪ್ರಾರಂಭವಾದ ಮೇಲೆ ಮತ್ತೆ ಹೇಗೆ ಪ್ರಶ್ನೋತ್ತರ ತೆಗೆದುಕೊಳ್ಳುವುದಕ್ಕೆ ಬರುತ್ತದೆ? ಈಗ ನಾಳೆ ಬೆಳಿಗ್ಗೆ 9–30 ಕ್ಕೆ ಪುನಃ ಸೇರುವಂತೆ ಸದನವನ್ನು ಮುಂದೂಡಲಾಗಿದೆ

(ಸದನವು ಸಂಜೆ 6 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡಿತು ಮತ್ತೆ ದಿನಾಂಕ 20ನೇ ಶುಕ್ರವಾರ 2007ರ ಬೆಳಿಗ್ಗೆ 9–00 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

* * * * * * * *

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2007

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 29)

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ,

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು

1 **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**-(1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2007 ಎಂದು ಕರೆಯತಕ್ಕದ್ದು

2 ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು

2 **3ನೇ ಪ್ರಕರಣದ ತಿದ್ದುಪಡಿ**- ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ (ಬಿ) ಖಂಡದ ತರುವಾಯ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ -

"ಪರಂತು, ಸರ್ಕಾರವು ಹಣ ಒದಗಿಸಿದ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ಗ್ರಾಮ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ ಅಥವಾ ಜಿಲ್ಲಾ ಪಂಚಾಯಿತಿಗೆ ವಹಿಸಿಕೊಡಲಾದ ಯಾವುದೇ ವಸತಿ ಯೋಜನೆ ಅಥವಾ ಕಾರ್ಯಕ್ರಮದ ಸಂಬಂಧದಲ್ಲಿ ಈ ಬಗ್ಗೆ ಅಧಿಸೂಚನೆಯ ಮೂಲಕ ರಚಿಸಲಾದ ಸರ್ಕಾರದ ಯಾವುದೇ ಸಮಿತಿ ಅಥವಾ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯು ಗುರುತಿಸಿದ ಅರ್ಹ ವ್ಯಕ್ತಿಗಳ ಪೈಕಿಯಿಂದ ಅಂಥ ವಸತಿ ಯೋಜನೆ ಅಥವಾ ಕಾರ್ಯಕ್ರಮದ ಫಲಾನುಭವಿಗಳನ್ನು ಆಯ್ಕೆ ಮಾಡಲು ಪ್ರಾಧಿಕಾರ ನೀಡಬಹುದು

ಮತ್ತು ಪರಂತು, ಯೋಜನೆಯ ಮಾರ್ಗಸೂಚಿಗಳ ಮೂಲಕ ಅಗತ್ಯಪಡಿಸಲಾದಂತೆ ವಸತಿ ಯೋಜನ ಅಥವಾ ಕಾರ್ಯಕ್ರಮಕ್ಕಾಗಿ ಅರ್ಹ ವ್ಯಕ್ತಿಗಳನ್ನು ಗುರುತಿಸಲು ಗ್ರಾಮ ಪಂಚಾಯಿತಿಯು ವಿಫಲವಾಗಿದ್ದಲ್ಲಿ, ಸರ್ಕಾರವು

ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಯೋಜನೆಯ ಮಾರ್ಗಸೂಚಿಗಳಿಗನುಸಾರವಾಗಿ ಅಂಥ ಗುರುತಿಸುವಿಕೆಯನ್ನು ಮಾಡಲು ಪ್ರಾಧಿಕಾರ ನೀಡಬಹುದು "

3 **3ಎ ಪ್ರಕರಣದ ತಿದ್ದುಪಡಿ** _ ಮೂಲ ಅಧಿನಿಯಮದ 3ಎ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ (ಸಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ -

"ಪರಂತು, ಸರ್ಕಾರವು ಹಣ ಒದಗಿಸಿದ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ಗ್ರಾಮ ಪಂಚಾಯಿತಿಗೆ, ತಾಲ್ಲೂಕು ಪಂಚಾಯಿತಿಗೆ ಅಥವಾ ಜಿಲ್ಲಾ ಪಂಚಾಯಿತಿಗೆ ವಹಿಸಿಕೊಡಲಾದ ಯಾವುದೇ ವಸತಿ ಯೋಜನೆ ಅಥವಾ ಕಾರ್ಯಕ್ರಮದ ಸಂಬಂಧದಲ್ಲಿ ಈ ಬಗ್ಗೆ ಅಧಿಸೂಚನೆಯ ಮೂಲಕ ರಚಿಸಲಾದ ಸರ್ಕಾರದ ಯಾವುದೇ ಸಮಿತಿ ಅಥವಾ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯು ಗುರುತಿಸಿದ ಅರ್ಹ ವ್ಯಕ್ತಿಗಳ ಪೈಕಿಯಿಂದ ಅಂಥ ವಸತಿ ಯೋಜನೆ ಅಥವಾ ಕಾರ್ಯಕ್ರಮದ ಫಲಾನುಭವಿಗಳನ್ನು ಆಯ್ಕೆ ಮಾಡಲು ಪ್ರಾಧಿಕಾರ ನೀಡಬಹುದು

ಮತ್ತು ಪರಂತು, ಯೋಜನೆಯ ಮಾರ್ಗಸೂಚಿಗಳ ಮೂಲಕ ಅಗತ್ಯ ಪಡಿಸಲಾದಂತೆ ವಸತಿ ಯೋಜನೆ ಅಥವಾ ಕಾರ್ಯಕ್ರಮಕ್ಕಾಗಿ ಅರ್ಹ ವ್ಯಕ್ತಿಗಳನ್ನು ಗುರುತಿಸಲು ಗ್ರಾಮ ಪಂಚಾಯಿತಿಯು ವಿಫಲವಾಗಿದ್ದಲ್ಲಿ, ಸರ್ಕಾರವು, ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಯೋಜನೆಯ ಮಾರ್ಗಸೂಚಿಗಳಿಗನುಸಾರವಾಗಿ ಅಂಥ ಗುರುತಿಸುವಿಕೆಯನ್ನು ಮಾಡಲು ಪ್ರಾಧಿಕಾರ ನೀಡಬಹುದು "

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 3ನೇ ಪ್ರಕರಣದ (3)ನೇ ಉಪ ಪ್ರಕರಣ ಮತ್ತು 3ಎ ಪ್ರಕರಣದ (3)ನೇ ಉಪ ಪ್ರಕರಣಗಳು ಅನುಕ್ರಮವಾಗಿ ವಾರ್ಡ್ ಸಭೆಯ ಮತ್ತು ಗ್ರಾಮಸಭೆಯ ಅಧಿಕಾರಗಳು ಮತ್ತು ಪ್ರಕಾರ್ಯಗಳ ಬಗ್ಗೆ ಉಪಬಂಧ ಕಲ್ಪಿಸುತ್ತವೆ ಗ್ರಾಮ ಪಂಚಾಯಿತಿಗಳು, ವಾರ್ಡ್ ಸಭೆಗಳ ಮತ್ತು ಗ್ರಾಮ ಸಭೆಗಳ ಮೂಲಕ ವಿವಿಧ ಯೋಜನೆಗಳಿಗಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿದೆ ಗ್ರಾಮ ಪಂಚಾಯಿತಿಗಳು ಪರಿಣಾಮಕಾರಿಯಾಗಿ ಪ್ರಕಾರ್ಯಗಳನ್ನು ನಿರ್ವಹಿಸದೇ ಇದ್ದುದರಿಂದ ಈ ಕಾರ್ಯಕ್ರಮಗಳ ಅನುಷ್ಠಾನದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ ಆದ್ದರಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲು ಆಶ್ರಯ ಸಮಿತಿಗಳನ್ನು ರಚನೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ

ಆದ್ದರಿಂದ ಈ ವಿಧೇಯಕ

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ

ಸಿ ಎಂ ಉದಾಸಿ
ಗ್ರಾಮೀಣ ಅಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಎಸ್ ಬಿ ಪಾಟೀಲ್
ಅಪರ ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ (1993ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

XX XX XX

3 **ವಾರ್ಡ್ ಸಭೆ** – (1) ಸರ್ಕಾರದ ಸಾಮಾನ್ಯ ಆದೇಶಗಳಿಗೊಳಪಟ್ಟು ವಾರ್ಡ್ ಸಭೆಯು ಕೊನೆಪಕ್ಷ ಆರು ತಿಂಗಳುಗಳಿಗೆ ಒಂದು ಸಲ ಸಭೆ ಸೇರತಕ್ಕದ್ದು

(2) ವಾರ್ಡ್ ಸಭೆಯು ಸಭೆ ಸೇರುವಾಗ, ವಾರ್ಡ್ ಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೆಯ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅದು ಸಭೆಯ ಕೋರಂ ಆಗಿರತಕ್ಕದ್ದು ಸಾಧ್ಯವಾದಷ್ಟು ಮಟ್ಟಿಗೆ, ವಾರ್ಡ್ ಸಭೆಗೆ ಹಾಜರಾಗುವ ಮತದಾರರಲ್ಲಿ ಶೇಕಡಾ ಮೂವತ್ತಕ್ಕೆ ಕಡಿಮೆಯಿಲ್ಲದಷ್ಟು ಸಂಖ್ಯೆಯಲ್ಲಿ ಮಹಿಳೆಯರಿರತಕ್ಕದ್ದು ಸಾಧ್ಯವಾದಷ್ಟು ಮಟ್ಟಿಗೆ ಅನುಸೂಚಿತ ಜಾತಿಗಳು ಮತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು, ವಾರ್ಡ್ ಸಭೆಯಲ್ಲಿನ ಅವರ ಜನಸಂಖ್ಯೆಯ ಅನುಪಾತಕ್ಕನುಸಾರವಾಗಿ ಪ್ರತಿನಿಧಿಸತಕ್ಕದ್ದು

(3) ನಿಯಮಿಸಬಹುದಾದಂತೆ ಅಂತಹ ನಿಯಮಗಳಿಗೊಳಪಟ್ಟ, ವಾರ್ಡ್ ಸಭೆಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ –

(ಎ) ವಾರ್ಡ್ ಸಭೆಯ ಪ್ರದೇಶದೊಳಗೆ ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವಗಳನ್ನು ಮಾಡುವುದು ಮತ್ತು ಅವುಗಳ ಅದ್ಯತೆಯನ್ನು ನಿರ್ಧರಿಸುವುದು ಮತ್ತು ಗ್ರಾಮಪಂಚಾಯಿತಿಯ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಅದನ್ನು ಗ್ರಾಮಸಭೆಯ ಮುಂದಿಡಲು ಕಳುಹಿಸಿಕೊಡುವುದು

(ಬಿ) ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಫಲಾನುಭವಿ ಆಧಾರಿತ ಯೋಜನೆಗಳಿಗಾಗಿ ವಾರ್ಡ್ ಸಭೆಯ ಪ್ರದೇಶದಿಂದ ಅತ್ಯಂತ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಆದ್ಯತೆಯ ಕ್ರಮಕ್ಕನುಸಾರ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಗ್ರಾಮ ಪಂಚಾಯಿತಿಯ ಅಭಿವೃದ್ಧಿಯೋಜನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಅದನ್ನು ಗ್ರಾಮಸಭೆಯ ಮುಂದಿಡಲು ಕಳುಹಿಸಿಕೊಡುವುದು

XX XX XX

3 ಎ ಗ್ರಾಮ ಸಭೆ – (1) ಗ್ರಾಮ ಸಭೆಯು ಕೊನೆಯಪಕ್ಷ ಆರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು ,

ಪರಂತು, ಗ್ರಾಮ ಸಭೆಯ ವಿಶೇಷ ಸಭೆಗಾಗಿ ಗ್ರಾಮ ಸಭೆಯ ಸದಸ್ಯರ ಶೇಕಡ ಹತ್ತಕ್ಕಿಂತ ಕಡಿಮೆಯಲ್ಲದ ಸದಸ್ಯರ ಕೋರಿಕೆಯನ್ನು ಸಲ್ಲಿಸಿ ಅಂತಹ ಕೋರಿಕೆಯಲ್ಲಿ ಕಲಾಪಗಳ ವಿಷಯಗಳನ್ನು ನಿರ್ದಿಷ್ಟಪಡಿಸಿದ್ದರೆ ವಿಶೇಷ ಸಭೆಯನ್ನು ಕರೆಯತಕ್ಕದ್ದು ಹಾಗೂ ಒಂದು ವಿಶೇಷ ಸಭೆಗೂ ಮತ್ತೊಂದು ವಿಶೇಷ ಸಭೆಗೂ ಕನಿಷ್ಠ ಮೂರು ತಿಂಗಳ ಅಂತರ ಇರತಕ್ಕದ್ದು

(2) ಗ್ರಾಮ ಸಭೆಯು ಸಭೆ ಸೇರುವಾಗ ಗ್ರಾಮ ಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕೆ ಕಡಿಮೆಯಿಲ್ಲದಷ್ಟು ಅಥವಾ ನೂರು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅದು ಸಭೆಯ ಕೋರಂ ಆಗಿರತಕ್ಕದ್ದು ಸಾಧ್ಯವಾದಷ್ಟು ಮಟ್ಟಿಗೆ ಪಂಚಾಯತ್ ಪ್ರದೇಶದಲ್ಲಿಯ ಪ್ರತಿಯೊಂದು ವಾರ್ಡ್ ಸಭೆಯಿಂದ ಕನಿಷ್ಠ ಹತ್ತು ಸದಸ್ಯರು ಸಭೆಗೆ ಹಾಜರಾಗತಕ್ಕದ್ದು ಮತ್ತು ಗ್ರಾಮ ಸಭೆಗೆ ಹಾಜರಾಗುವ ಸದಸ್ಯರಲ್ಲಿ ಶೇಕಡ ಮೂವತ್ತಕ್ಕೆ ಕಡಿಮೆಯಿಲ್ಲದಷ್ಟು ಮಹಿಳೆಯರಿರತಕ್ಕದ್ದು ಸಾಧ್ಯವಾದಷ್ಟು ಮಟ್ಟಿಗೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಗ್ರಾಮ ಸಭೆಯಲ್ಲಿ ತಮ್ಮ ಜನ ಸಂಖ್ಯೆಯ ಅನುಪಾತಕ್ಕನುಸಾರವಾಗಿ ಪ್ರತಿನಿಧಿಸತಕ್ಕದ್ದು

(3) ನಿಯಮಿಸಬಹುದಾದಂತಹ ಅಂತಹ ನಿಯಮಗಳಿಗೊಳಪಟ್ಟ ಗ್ರಾಮಸಭೆಯು ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ಅಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ –

(ಎ) ಗ್ರಾಮ ಪಂಚಾಯತಿಯು ತಯಾರಿಸಿದ ವಾರ್ಷಿಕ ಯೋಜನೆಯನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು,

(ಬಿ) ಗ್ರಾಮ ಪಂಚಾಯಿತಿಯ ಮೂಲಕ ವಾರ್ಡ್ ಸಭೆಗಳ ಶಿಫಾರಸ್ಸುಗಳು ಮತ್ತು ಸಲಹೆಗಳನ್ನು ಪಡೆದುಕೊಂಡು ಮತ್ತು ಪರಿಗಣಿಸಿದ ತರುವಾಯ, ಜಿಲ್ಲಾ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಮೂಲಕ ಪಂಚಾಯಿತಿ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವಗಳನ್ನು ಸೃಜಿಸುವುದು ಮತ್ತು ಅವುಗಳ ಆದ್ಯತೆಯನ್ನು ನಿರ್ಧರಿಸುವುದು ,

(ಸಿ) ಗ್ರಾಮ ಪಂಚಾಯಿತಿಯು ತಾಲ್ಲೂಕು ಪಂಚಾಯತಿಯು, ಜಿಲ್ಲಾ ಪಂಚಾಯತಿಯು ಅಥವಾ ಸರ್ಕಾರವು ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಫಲಾನುಭವಿ ಆಧಾರಿತ ಯೋಜನೆಗಳಿಗಾಗಿ ಪಂಚಾಯತಿ ಪ್ರದೇಶದಿಂದ ಅತ್ಯಂತ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ವಾರ್ಡ್ ಸಭೆಗಳು ಕಳುಹಿಸಿದ ವೈಯಕ್ತಿಕ ಫಲಾನುಭವಿಗಳ ಆದ್ಯತಾ ಪಟ್ಟಿಯನ್ನು ಪರಿಗಣಿಸಿದ ತರುವಾಯ ಆದ್ಯತಾ ಕ್ರಮಕ್ಕನುಸಾರವಾಗಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಸಂಬಂಧವಾಗಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಥವಾ ಸಂದರ್ಭಾನುಸಾರ ಸರ್ಕಾರವು ಅಂತಹ ಪಟ್ಟಿಗೆ ಬದ್ಧವಾಗಿರತಕ್ಕದ್ದು ,

XX XX XX

ಅನುಬಂಧ-1

ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ವಿವರ

616 (631) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) –

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಟ್ಟಿಸಿದ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ,

ಆ) ಪ್ರಸಕ್ತ ವರ್ಷದಲ್ಲಿ ಹೂಸದಾಗಿ ಎಷ್ಟು ಹಾಸ್ಟೆಲ್‌ಗಳು ಆರಂಭವಾಗಲಿವೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ರಾಜ್ಯದಲ್ಲಿ ಹೊಸದಾಗಿ ಆರಂಭವಾಗುವ ಮೊರಾರ್ಜಿ ವಸತಿ ಶಾಲೆಗಳ ಸಂಖ್ಯೆ ಎಷ್ಟು ? (ವಿವರಗಳನ್ನು ನೀಡುವುದು)

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 1179 ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಲಾಗಿದೆ

ಆ) ಪ್ರಸಕ್ತ ಸಾಲಿನಲ್ಲಿ 75 ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಗಳು ಹೊಸದಾಗಿ ಆರಂಭವಾಗಲಿವೆ ತಾಲ್ಲೂಕುವಾರು ವಿವರ ಅನುಬಂಧ-1ರಲ್ಲಿ ನೀಡಲಾಗಿದೆ

ಇ) ಪ್ರಸಕ್ತ ಸಾಲಿನಲ್ಲಿ 52 (ಪರಿಶಿಷ್ಟ ಜಾತಿ-25, ಪರಿಶಿಷ್ಟ ವರ್ಗ-5 ಮತ್ತು ಹಿಂದುಳಿದ ವರ್ಗ-22) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಬಿಸಲು ಆದೇಶ ಹೊರಡಿಸಲಾಗಿದೆ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ

ವಿಧಾನ ಸಭಾ ಸದಸ್ಯರಾದ ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ

(ಕುಂದಗೋಳ) ಪ್ರಶ್ನೆ ಸಂ 631 'ಆ' ಗೆ

ಅನುಬಂಧ-1

2007-08ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ರಾಜ್ಯದಲ್ಲಿ ಪ್ರಾರಂಭಿಸಲಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ -

ಕ್ರ ಸಂ	ಜಿಲ್ಲೆಯ ವಿವರ	ತಾಲ್ಲೂಕಿನ ಹಸರು	ವಿದ್ಯಾರ್ಥಿ ನಿಲಯಗಳ ಸಂಖ್ಯೆ
1	2	3	4
1	ಬೆಂಗಳೂರು ಗ್ರಾಮಾಂತರ	ರಾಮನಗರ	4
		ಮಾಗಡಿ	2
		ದೇವನಹಳ್ಳಿ	1
2	ಚಿತ್ರದುರ್ಗ	ಹಿರಿಯೂರು	1
		ಮೊಳಕಾಲ್ಮೂರು	1
		ಚಿತ್ರದುರ್ಗ	1
3	ದಾವಣಗೆರೆ	ಜಗಳೂರು	1
4	ಕೋಲಾರ	ಮುಳಬಾಗಿಲು	1
		ಬಂಗಾರಪೇಟೆ	2
		ಬಾಗೇಪಲ್ಲಿ	1
		ಶಿಡ್ಲಘಟ್ಟ	1
5	ತುಮಕೂರು	ಪಾವಗಡ	1
		ಗುಬ್ಬಿ	1
		ಮಧುಗಿರಿ	1
		ಕುಣಿಗಲ್	1
		ತಿಪಟೂರು	1
		ಚಿಕ್ಕನಾಯಕನಹಳ್ಳಿ	1
6	ಶಿವಮೊಗ್ಗ	ಶಿವಮೊಗ್ಗ	1
		ಶಿಕಾರಿಪುರ	1
		ಸೊರಬ	1

1	2	3	4
7	ಮೈಸೂರು	ನಂಜನಗೂಡು	1
		ಟಿ ನರಸೀಪುರ	1
		ಹೆಚ್ ಡಿ ಕೋಟೆ	1
		ಹುಣಸೂರು	1
8	ಚಾಮರಾಜನಗರ	ಚಾಮರಾಜನಗರ	1
		ಕೊಳ್ಳೇಗಾಲ	2
		ಗುಂಡ್ಲುಪೇಟೆ	1
9	ಮಂಡ್ಯ	ಮದ್ದೂರು	1
		ಮಳವಳ್ಳಿ	1
		ಪಾಂಡವಪುರ	1
		ಕೆ ಆರ್ ಪೇಟೆ	1
		ಶ್ರೀರಂಗಪಟ್ಟಣ	1
10	ಹಾಸನ	ಬೇಲೂರು	1
		ಚನ್ನರಾಯಪಟ್ಟಣ	1
		ಹೊಳೆನರಸೀಪುರ	1
		ಸಕಲೇಶಪುರ	1
		ಅರಸೀಕೆರೆ	1
11	ಚಿಕ್ಕಮಗಳೂರು	ಕಡೂರು	1
12	ದಕ್ಷಿಣ ಕನ್ನಡ	ಸುಳ್ಯ	1
13	ಬೆಳಗಾಂ	ಗೋಕಾಕ್	3
		ರಾಯ್‌ಭಾಗ್	1
		ಹುಕ್ಕೇರಿ	1
		ಚಿಕ್ಕೋಡಿ	1
		ಬೆಳಗಾಂ	1
14	ಬಿಜಾಪುರ	ಇಂಡಿ	1
15	ಬಾಗಲಕೋಟೆ	ಜಮಖಂಡಿ	1
		ಬೀಳಗಿ	1
		ಮುಧೋಳ	1

1	2	3	4
16	ಹಾವೇರಿ	ಹಾವೇರಿ	1
		ರಾಣೆಬೆನ್ನೂರು	1
		ಬ್ಯಾಡಗಿ	1
		ಹಿರೇಕೆರೂರು	1
17	ಉತ್ತರ ಕನ್ನಡ	ಹಳಿಯಾಳ	1
18	ಗುಲ್ಬರ್ಗಾ	ಅಫಜಲ್‌ಪುರ	1
		ಯಾದಗಿರಿ	2
		ಚಿತ್ತಾಪುರ	1
		ಗುಲ್ಬರ್ಗಾ	1
		ಶಹಾಪುರ	1
		ಜೇವರ್ಗಿ	1
		ಸುರಪುರ	1
19	ರಾಯಚೂರು	ದೇವದುರ್ಗ	1
		ರಾಯಚೂರು	1
20	ಕೊಪ್ಪಳ	ಗಂಗಾವತಿ	1
		ಕುಷ್ಟಗಿ	1
21	ಬಳ್ಳಾರಿ	ಹೂವಿನಹಡಗಲಿ	1
22	ಬೀದರ್	ಬೀದರ್	1
		ಹುಮನಾಬಾದ್	1
		ಬಸವಕಲ್ಯಾಣ	2
		ಒಟ್ಟು	75

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) ರವರ ಪ್ರಶ್ನೆ ಸಂಖ್ಯೆ 631ಕ್ಕೆ ಅನುಬಂಧ-2

ಕ್ರ ಸಂಖ್ಯೆ	ಜಿಲ್ಲ	ತಾಲ್ಲೂಕು	ವಸತಿ ಶಾಲೆಗಳ ಸಂಖ್ಯ
1	2	3	4
1	ಬೆಂಗಳೂರು (ಗ್ರಾ)	ರಾಮನಗರ	2
		ಚನ್ನಪಟ್ಟಣ	1
2	ಚಿತ್ರದುರ್ಗ	ಚಿತ್ರದುರ್ಗ	1
3	ಕೋಲಾರ	ಮುಳಬಾಗಿಲು	1
4	ಶಿವಮೊಗ್ಗ	ಶಿಕಾರಿಪುರ	2
5	ತುಮಕೂರು	ಶಿರಾ	1
		ಪಾವಗಡ	1
6	ಮೈಸೂರು	ಟಿ ನರಸೀಪುರ	1
		ಹುಣಸೂರು	1
		ಹೆಚ್ ಡಿ ಕೋಟೆ	1
		ಕೆ ಆರ್ ನಗರ	1
7	ಚಿಕ್ಕಮಗಳೂರು	ಕಡೂರು	2
		ಶೃಂಗೇರಿ	1
8	ದಕ್ಷಿಣ ಕನ್ನಡ	ಪುತ್ತೂರು	1
9	ಹಾಸನ	ಹೊಳೆನರಸೀಪುರ	2
		ಅರಕಲಗೂಡು	1
		ಚನ್ನರಾಯಪಟ್ಟಣ	2
		ಸಕಲೇಶಪುರ	2
10	ಮಂಡ್ಯ	ಮಳವಳ್ಳಿ	1
		ಮಂಡ್ಯ	1
		ಶ್ರೀರಂಗಪಟ್ಟಣ	1
		ಕೆ ಆರ್ ಪೇಟೆ	1
		ನಾಗಮಂಗಲ	1
		ಪಾಂಡವಪುರ	

1	2	3	4
11	ಚಾಮರಾಜನಗರ	ಕೊಳ್ಳೆಗಾಲ	2
		ಗುಂಡ್ಲುಪೇಟೆ	1
12	ಉಡುಪಿ	ಕುಂದಾಪುರ	1
13	ಕೊಡಗು	ಸೋಮವಾರಪೇಟೆ	1
14	ಬೆಳಗಾಂ	ಗೋಕಾಕ್	3
15	ಬಾಗಲಕೋಟೆ	ಮುಧೋಳ್	1
16	ಹಾವೇರಿ	ಹಾನಗಲ್	1
		ಹಿರೇಕೆರೂರ್	1
17	ಗುಲ್ಬರ್ಗ	ಶಹಪುರ	1
		ಚಿತ್ತಾಪುರ	1
		ಸುರಪುರ	1
		ಯಾದಗಿರಿ	1
		ಜೇವರ್ಗಿ	1
18	ಬಳ್ಳಾರಿ	ಹಡಗಲಿ	1
		ಸಂಡೂರು	1
		ಕೂಡ್ಲಗಿ	1
19	ಬೀದರ್	ಬೀದರ್	1
20	ರಾಯಚೂರು	ದೇವದುರ್ಗ	1
		ಲಿಂಗಸಗೂರು	1
		ಒಟ್ಟು	52

617 (633) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಆ) ಖಾಲಿಯಿರುವ ಆಯಾಗಳ ಹುದ್ದೆಗಳೆಷ್ಟು , ಆಯಾ ಹುದ್ದೆಗಳನ್ನು ತುಂಬಲು ಅನುಸರಿಸುವ ಮಾನದಂಡವೇನು ?

ಇ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ಥಿಗಾಗಿ ಸರ್ಕಾರ ಮೀಸಲಿಟ್ಟಿರುವ ಹಣವೆಷ್ಟು ? (ವಿವರ ನೀಡುವುದು)

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ 500 ವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಸರ್ಕಾರದಿಂದ ಅನುಮತಿ ದೊರೆತಿದ್ದು ಮೊದಲನೇ ಹಂತದಲ್ಲಿ 250 ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ 2ನೇ ಹಂತದಲ್ಲಿ 250 ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ

ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ

ಆ) ಇಲಾಖೆಯಲ್ಲಿ ಆಯಾ ಹುದ್ದೆಗಳೆಂದು ಮಂಜೂರಾಗಿರುವುದಿಲ್ಲ ಗ್ರೂಪ್ 'ಡಿ' ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳನ್ನೇ ಆಯಾಗಳೆಂದು ಕರೆಯಲಾಗುತ್ತದೆ

ಗ್ರೂಪ್ 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ನಿರ್ಬಂಧ ವಿಧಿಸಲಾಗಿದೆ ಸದರಿ ಕೆಲಸಗಳನ್ನು ಬಾಹ್ಯ ಮೂಲಗಳಿಂದ ನಿರ್ವಹಿಸಲಾಗುತ್ತಿದೆ

ಇ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ಥಿಗಾಗಿ 2007-08ನೇ ಸಾಲಿನಲ್ಲಿ ರೂ 722 31 ಲಕ್ಷಗಳನ್ನು ಮೀಸಲಿಡಲಾಗಿದೆ ಹಾಗೂ ಎನ್ ಆರ್ ಎಚ್ ಎಂ ಅಡಿಯಲ್ಲಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರೂ 75,000 ಗಳನ್ನು ನಿರ್ವಹಣೆಗಾಗಿ ನೀಡಲಾಗಿದೆ ಇದರಲ್ಲಿಯೂ ಸಹ ಸಣ್ಣ ಪುಟ್ಟ ದುರಸ್ತಿಗಳನ್ನು ಮಾಡಿಕೊಳ್ಳಲು ಅವಕಾಶವಿರುತ್ತದೆ

ಪೈಲಟ್ ಯೋಜನೆಯ ವಿವರ

618 (634) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಲು ನೇರವಾಗಿ ಫಲಾನುಭವಿಗಳಿಗೆ ಸರಕಾರ ಹಣ ಒದಗಿಸಲಾಗುವುದೇ,

ಆ) ರಾಜ್ಯದಲ್ಲಿ ಪೈಲಟ್ ಯೋಜನೆಗೆ ಯಾವ ಯಾವ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ,

ಇ) ಎಷ್ಟು ಕೊಳವೆಬಾವಿಗಳು ಈ ಯೋಜನೆಗೆ ಸೀಮಿತಗೊಂಡಿವೆ (ವಿವರಗಳನ್ನು ಒದಗಿಸುವುದು) ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಪರಿಶೀಲನೆಯಲ್ಲಿದೆ

ಆ) ಪ್ರಶ್ನೆ (ಅ)ಗೆ ನೀಡಿದ ಉತ್ತರದ ಹಿನ್ನೆಲೆಯಲ್ಲಿ ಇದು ಉದ್ಭವಿಸುವುದಿಲ್ಲ

ದೇವರ ಭೂಪುರ ಗ್ರಾಮದ ಮೂರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭಿಸುವುದು

619 (640) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸುಗೂರು) .– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ದೇವರಭೂಪುರ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ನಿರ್ಮಾಣ ಮಾಡಲು ಸ್ಥಳವನ್ನು ಗುರುತಿಸಲಾಗಿದೆಯೇ ,

ಆ) ಕೃಷ್ಣಾ ಭಾಗ್ಯ ಜಲ ನಿಗಮದವರು ದೇವರಭೂಪುರ ಗ್ರಾಮದ ಅವರ ವಶದಲ್ಲಿರುವ ಉಚಿತ ನಿವೇಶನವನ್ನು ತೆಗೆದುಕೊಳ್ಳುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಗುರುತಿಸಲಾಗಿದೆ

ಆ) ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ

620 (153) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) – ಮಾನ್ಯ ಶ್ರೀ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯ ಅತ್ಯಾಧುನಿಕ ಉಪಕರಣ ಇತ್ಯಾದಿಗಳಿಗೆ 2005–06 ಹಾಗೂ 2006–07ರಲ್ಲಿ ಖರ್ಚು ಮಾಡಿದ ಹಣವೆಷ್ಟು ,

ಆ) ಬಿಜಾಪುರ ಜಿಲ್ಲಾ ಅಸ್ಪತ್ರೆಯಲ್ಲಿ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಇ) ಹಾಗಿದ್ದಲ್ಲಿ, ಈ ಖಾಲಿ ಇರತಕ್ಕಂತ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ,

ಈ) 2007–08ರಲ್ಲಿ ಮೂಲಭೂತ ಸೌಕರ್ಯ ಇತ್ಯಾದಿಗಳನ್ನು ಒದಗಿಸಲು ಖರ್ಚು ಮಾಡಲಿರುವ ಹಣವೆಷ್ಟು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ 2005-06 ರಲ್ಲಿ ರೂ 16,72,125 ಹಾಗೂ 2006–07ರಲ್ಲಿ ರೂ 15,97,936 ಹಣವನ್ನು ಖರ್ಚು ಮಾಡಲಾಗಿದೆ ಅತ್ಯಾಧುನಿಕ ಉಪಕರಣಗಳಿಗಾಗಿ 2005–06ರಲ್ಲಿ ರೂ 92,10,538 ಹಾಗೂ 2006–07ರಲ್ಲಿ ರೂ 1,46,640 ಹಣವನ್ನು ಖರ್ಚು ಮಾಡಲಾಗಿದೆ

ಆ) ಬಂದಿದೆ

ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ 27 ವೈದ್ಯರ ಹುದ್ದೆ ಮಂಜೂರಾಗಿದ್ದು 18 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ 9 ವೈದ್ಯರ ಹುದ್ದೆ ಖಾಲಿ ಇರುತ್ತವೆ ಇತರೆ ಸಿಬ್ಬಂದಿಗಳ 291 ಹುದ್ದೆ ಮಂಜೂರಾಗಿದ್ದು 230 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ 61 ಸಿಬ್ಬಂದಿಗಳ ಹುದ್ದೆ ಖಾಲಿ ಇದೆ

ಇ) ವಿಶೇಷ ನೇರ ನೇಮಕಾತಿಯಿಂದ 500 ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕ ಮಾಡಲು ಅನುಮತಿ ನೀಡಲಾಗಿದ್ದು ಅದರಲ್ಲಿ ಈಗಾಗಲೇ 250 ವೈದ್ಯಾಧಿಕಾರಿಗಳ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ ಉಳಿದ 250 ವೈದ್ಯಾಧಿಕಾರಿಗಳ ಹುದ್ದೆಯ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತವೆ ಹಾಗೂ ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಹಾಗೂ 2807 ಅರೆ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ನೇಮಕಾತಿ ಕಾರ್ಯ ಅಂತಿಮ ಹಂತದಲ್ಲಿದ್ದು ನೇಮಕಾತಿ ಕಾರ್ಯ ಮುಗಿದ ಕೂಡಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು

ಈ) 2007–08ರಲ್ಲಿ ಮೂಲಭೂತ ಸೌಕರ್ಯ ಇತ್ಯಾದಿಗಳನ್ನು ಒದಗಿಸಲು ಖರ್ಚು ಮಾಡಲಿರುವ ಹಣ ಸುಮಾರು ರೂ 65,00,000

ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಗಳನ್ನು ಪ್ರಾರಂಭಿಸುವುದು

621 (713) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) – ಮಾನ್ಯ ಶ್ರೀ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ತಿಳಿಸುವರೇ ?

ಅ) ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿರುವ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ಸಂಖ್ಯೆ ಎಷ್ಟು ,

ಆ) ಯಾವ ಯಾವ ಊರುಗಳಲ್ಲಿ ಸದರಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ,

ಇ) ಮುದ್ದೇಬಿಹಾಳ್ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಬಡಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು ಈವರೆವಿಗೂ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಮುಂದೂಡಲು ಕಾರಣವೇನು ,

ಈ) ಹಾಗಿದ್ದಲ್ಲಿ, ಈಗಲಾದರೂ ಪ್ರಾರಂಭಿಸಲು ಸರ್ಕಾರ ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ ?

ಶ್ರೀ ಇಕ್ಬಾಲ್ ಅನ್ಸಾರಿ (ಧಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) ಸರ್ಕಾರಿ ಆದೇಶ ಸಂಖ್ಯೆ ಸಕಇ 8 ಅಸಯೋ 2007, ದಿನಾಂಕ 08–03–2007ರಲ್ಲಿ ಬಿಜಾಪೂರ ತಾಲ್ಲೂಕು, ಬಿಜಾಪೂರ ಜಿಲ್ಲೆಗೆ ಆಂಗ್ಲ ಮಾಧ್ಯಮದ ಅಲ್ಪಸಂಖ್ಯಾತರ ಹೆಣ್ಣು ಮಕ್ಕಳ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು 2007–08ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ

ಆ) ಬಿಜಾಪೂರ ನಗರದಲ್ಲಿ ಪ್ರಾರಂಭಿಸಲಾಗಿದೆ

ಇ) ಈ ಕುರಿತು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ ಆಯವ್ಯಯದಲ್ಲಿ ನೀಡಲಾಗಿರುವ ಅನುದಾನದ ಲಭ್ಯತೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ವಸತಿ ಶಾಲೆಗಳನ್ನು ಮಂಜೂರು ಮಾಡಲ್ಪಡುತ್ತವೆ

622 (1102) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಔಷಧಿಗಳ ಮಾರಾಟಕ್ಕೆ ನಿರ್ಬಂಧ ವಿಧಿಸಲಾಗಿದೆ ,

ಆ) ನಿರ್ಬಂಧ ವಿಧಿಸಿದ ನಂತರ ಅವುಗಳ ಪುನರ್ ಮಾರಾಟವಾಗದಂತೆ ಸರಕಾರ ಕೈಗೊಂಡಿರುವ ಕ್ರಮಗಳೇನು ,

ಇ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರುಗಳನ್ನು ಬದಲಾಯಿಸಿ ಪುನರ್ ಮಾರಾಟ ಮಾಡುತ್ತಿರುವ ಎಷ್ಟು ಪ್ರಕರಣಗಳನ್ನು ದಾಖಲಿಸಿ ಕ್ರಮ ಜರುಗಿಸಲಾಗಿದೆ

ಈ) ಹಾಗಿದ್ದಲ್ಲಿ, ಪುನರ್ ಮಾರಾಟದ ಪ್ರಕರಣಗಳನ್ನು ದಾಖಲಿಸಿದ ನಂತರ ಆಪಾದಿತರ ಮೇಲೆ ಕೈಗೊಳ್ಳುವ ಕಾನೂನು ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940ರ ಸೆಕ್ಷನ್ 26ಎ ಅನ್ವಯ ಯಾವುದೇ ಔಷಧಿಯ ಮಾರಾಟಕ್ಕೆ ನಿರ್ಬಂಧ ವಿಧಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ

ಕಳೆದ 03 ವರ್ಷಗಳಲ್ಲಿ ಕೇಂದ್ರ ಸರ್ಕಾರ ಅಧಿಸೂಚನೆ ಸಂಖ್ಯೆ (1) ಜಿಎಸ್ಆರ್ 810 (ಇ) ದಿನಾಂಕ 13/12/2004 ಮತ್ತು (2) ಜಿಎಸ್ಆರ್ 510 (ಇ) ದಿನಾಂಕ 25/7/2005ರ ಪ್ರಕಾರ ಅನುಕ್ರಮವಾಗಿ ಈ ಕೆಳಕಂಡ 02 ಔಷಧಿಗಳನ್ನು ನಿರ್ಬಂಧಿಸಿದೆ

ಅ) ರೋಫೆಕಾಕ್ಸಿಬ್ (Rofecoxib)

ಆ) ವ್ಯಾಲ್ಡೆಕಾಕ್ಸಿಬ್ (Valdecoxib)

ಆ) (1) ನಿರ್ಬಂಧಿಸಿದ ಔಷಧಗಳ ಪಟ್ಟಿಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುತ್ತದೆ

(2) ಸದರಿ ನೋಟಿಫಿಕೇಷನ್‌ಗಳನ್ನು ರಾಜ್ಯದಲ್ಲಿರುವ ಔಷಧ ತಯಾರಕರ ಸಂಘ ಮತ್ತು ಔಷಧ ವ್ಯಾಪಾರಿಗಳ ಸಂಘಗಳಿಗೆ ಕಳುಹಿಸಲಾಗಿದೆ ಹಾಗೂ ಇಲಾಖೆಯ ಎಲ್ಲಾ ಅಮಲುಜಾರಿ ಅಧಿಕಾರಿಗಳಿಗೆ ನೀಡಿದೆ ಯಾವುದೇ ನಿರ್ಬಂಧ ವಿಧಿಸಿದ ಔಷಧಿಗಳು ಮಾರುಕಟ್ಟೆಯಲ್ಲಿ ಕಂಡುಬಂದರೆ ಆ ಔಷಧಿಗಳನ್ನು ಜಪ್ತಿ ಮಾಡಿ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಅಮಲು ಜಾರಿ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಔಷಧ ನಿಯಂತ್ರಣ ಇಲಾಖೆ ಅಮಲು ಜಾರಿ ಅಧಿಕಾರಿಗಳು ಈ ಕುರಿತು ಸದಾ ನಿಗಾ ಇಟ್ಟಿರುತ್ತಾರೆ

ಇಂತಹ ಔಷಧಿಗಳ ಹೆಸರನ್ನು ಕೇಂದ್ರ ಸರ್ಕಾರದ ಔಷಧ ನಿಯಂತ್ರಣ ಇಲಾಖೆಯ ವೆಬ್‌ಸೈಟ್‌ನಲ್ಲೂ ಪ್ರದರ್ಶಿಸಲಾಗಿದೆ

ಇ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರನ್ನು ಬದಲಾಯಿಸಿ ಪುನರ್ ಮಾರಾಟ ಮಾಡಿರುವ/ಮಾಡುತ್ತಿರುವ ಯಾವುದೇ ಪ್ರಕರಣ ಇದುವರೆಗೂ ಕಂಡುಬಂದಿಲ್ಲ ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಈ) ನಿರ್ಬಂಧ ವಿಧಿಸಲಾದ ಔಷಧಿಗಳ ಹೆಸರನ್ನು ಬದಲಾಯಿಸಿ, ಪುನರ್ ಮಾರಾಟ ಮಾಡುತ್ತಿರುವ ಪ್ರಕರಣ ಕಂಡುಬಂದಲ್ಲಿ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ 1940ರ ಪ್ರಕಾರ ಸೆಕ್ಷನ್ 26ಎ ಉಲ್ಲಂಘನೆಗಾಗಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗುವುದು ಹಾಗೂ ಸೆಕ್ಷನ್ 28ಬಿ ಪ್ರಕಾರ ಗರಿಷ್ಠ 03 ವರ್ಷ ಸಜೆ ಹಾಗೂ ರೂ 5000/–ದವರೆಗೆ ದಂಡಕ್ಕೆ ಗುರಿಯಾಗುತ್ತಾರೆ

624 (1131) ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಚಿಕಿತ್ಸಾಲಯ ಹಾಗೂ ಪಶುಘಟಕಗಳ ಸಂಖ್ಯೆ ಎಷ್ಟು ?

ಆ) ಈ ಚಿಕಿತ್ಸಾಲಯ ಹಾಗೂ ಘಟಕಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಮುಂದಾಗಿದೆಯೇ ?

ಇ) ಹಾಗಿದ್ದಲ್ಲಿ, ಎಷ್ಟು ಕೇಂದ್ರ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗುವುದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

ಈ) ಈ ಚಿಕಿತ್ಸಾಲಯಗಳಲ್ಲಿ ಅಗತ್ಯ ಸಿಬ್ಬಂದಿವರ್ಗ ಇದೆಯೇ , ಇಲ್ಲದಿದ್ದಲ್ಲಿ, ಸಿಬ್ಬಂದಿಯ ನೇಮಕಕ್ಕೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

ಶ್ರೀ ರೇವೂ ನಾಯಕ ಬೆಳಮಗಿ (ಪಶುಸಂಗೋಪನಾ ಸಚಿವರು) –

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ಒಟ್ಟು 20 ಪಶುಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ ಅವುಗಳು ಈ ಕೆಳಗಿನಂತಿವೆ –

(1)	ಪಶು ಆಸ್ಪತ್ರೆ	01
(2)	ಪಶುಚಿಕಿತ್ಸಾಲಯಗಳು	14
(3)	ಸಂಚಾರಿ ಪಶುಚಿಕಿತ್ಸಾಲಯಗಳು	03
(4)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	01
(5)	ಕೃತಕ ಗರ್ಭಧಾರಣಾ ಕೇಂದ್ರ	01
	ಒಟ್ಟು	20

ಆ) ಇಲಾಖೆಯಲ್ಲಿ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶುಚಿಕಿತ್ಸಾಲಯ/ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೆ ಏರಿಸುವ ಕಾರ್ಯಕ್ರಮವಿದ್ದು ಹಂತಹಂತವಾಗಿ ಮಾಡಲಾಗುತ್ತಿದೆ

ಇ) ಪ್ರಸ್ತುತ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರು, ಚಿಕ್ಕಜೋಗಿಹಳ್ಳಿ, ಗುಡೇಕೋಟೆ, ಹೊಸಹಳ್ಳಿ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ರಾಂಪುರ, ಬಡಲೇಡಕು, ನಿಂಬಳಗೇರಿ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೇಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು ಈ ಬಗ್ಗೆ ಯಾವುದೇ ಕಾಲಮಿತಿ ನಿಗದಿಪಡಿಸಿರುವುದಿಲ್ಲ ಆದರೆ ಅವಶ್ಯಕತೆಗನುಗುಣವಾಗಿ ಪದವೀಧರರ ಪಶುವೈದ್ಯರ ಲಭ್ಯತೆ ಮೇಲೆ ಮಾಡಲಾಗುತ್ತಿದ್ದು ಉನ್ನತೀಕರಣ ಮಾಡುವ ವೇಳೆಯಲ್ಲಿ ಕೂಡ್ಲಗಿ ತಾಲ್ಲೂಕಿನ ಈ ಮೇಲ್ಕಂಡ ಪಶುವೈದ್ಯ ಸಂಸ್ಥೆಗಳನ್ನು ಉನ್ನತೀಕರಿಸಲು ಕ್ರಮವಹಿಸಲಾಗುವುದು

ಈ) ಈ ಪಶುವೈದ್ಯ ಸಂಸ್ಥೆಗಳಲ್ಲಿ ಹಲವು ಹುದ್ದೆಗಳು ಭರ್ತಿಯಾಗಿದ್ದು, ಇನ್ನು ಹಲವು ಹುದ್ದೆಗಳು ಭರ್ತಿಯಾಗದೇ ಖಾಲಿ ಇರುತ್ತದೆ ತಾಲ್ಲೂಕಿನಲ್ಲಿ ಒಟ್ಟು 75 ಮಂಜೂರಾದ ಹುದ್ದೆಗಳಲ್ಲಿ 46 ಭರ್ತಿಯಾಗಿದ್ದು, 29 ಹುದ್ದೆಗಳು ಖಾಲಿ ಇರುತ್ತವೆ ಅವುಗಳ ವಿವರ ಈ ಕೆಳಕಂಡಂತೆ ಇದೆ –

ಕ್ರ ಸಂ	ಹುದ್ದೆಯ ಹೆಸರು		ಮಂ	ಭರ್ತಿ	ಖಾಲಿ
(1)	ಸಹಾಯಕ ನಿರ್ದೇಶಕರು		01	01	01
(2)	ಪಶುವೈದ್ಯಾಧಿಕಾರಿ	-	16	03	13
(3)	ಪಶುವೈದ್ಯಕೀಯ ಮೇಲ್ವಿಚಾರಕರು	-	01	00	01
(4)	ಹಿರಿಯ ಪಶುವೈದ್ಯಕೀಯ ಪರೀಕ್ಷಕರು		09	09	00
(5)	ಪಶುವೈದ್ಯಕೀಯ ಪರೀಕ್ಷಕರು		08	03	05
(6)	ಪಶುವೈದ್ಯಕೀಯ ಸಹಾಯಕರು		04	03	01

(7)	ವಾಹನ ಚಾಲಕರು	01	00	01
(8)	ಡಿ–ದರ್ಜೆ ನೌಕರರು	35	27	08
	ಒಟ್ಟು	75	46	29

4 ಸಹಾಯಕ ನಿರ್ದೇಶಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಕಟಣೆ ಹೊರಡಿಸಲಾಗಿದೆ ಅಲ್ಲದೆ ನೇರ ನೇಮಕಾತಿ ಕೋಟಾದ ಲಡಿಯಲ್ಲೂ 90 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ ನೇರ ನೇಮಕಾತಿಯ ಮುಖಾಂತರ ಖಾಲಿ ಹುದ್ದೆಗಳನ್ನು ತುಂಬಲು ವೇಳೆ ತಗಲುವುದರಿಂದ ಸದ್ಯಕ್ಕೆ ಖಾಲಿ ಇರುವ ಸಹಾಯಕ ನಿರ್ದೇಶಕ ಹುದ್ದೆಗಳನ್ನು ಪಶುವೈದ್ಯಾಧಿಕಾರಿಗಳಿಗೆ ಮುಂಬಡ್ತಿ ಮುಖೇನ ತಾತ್ಕಾಲಿಕವಾಗಿ ಸ್ವಯಂವೇತನ ಶ್ರೇಣಿ ಮೇರೆ (ಓಪಿಜಿ) ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ ಮತ್ತು ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮದಡಿ ರಾಜ್ಯಾದ್ಯಂತ 276 ಪಶುವೈದ್ಯಾಧಿಕಾರಿಗಳನ್ನು ತುಂಬಲು ಪ್ರಕಟಣೆ ಹೊರಡಿಸಿ ಅರ್ಜಿ ಆಹ್ವಾನಿಸಲಾಗಿದ್ದು, ಬಂದಿರುವ ಅರ್ಜಿಗಳು ಪರಿಶೀಲನೆಯಲ್ಲಿವೆ ಮುಂಬಡ್ತಿ ಪ್ರಕ್ರಿಯೆ ಮತ್ತು ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಕೂಡ್ಲಿಗಿ ತಾಲ್ಲೂಕಿನಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರುಗಳು ಮತ್ತು ಪಶುವೈದ್ಯಾಧಿಕಾರಿಗಳ ಹುದ್ದೆಗೆ ನೇಮಕ ಮಾಡಲು ಸಹ ಕ್ರಮ ವಹಿಸಲಾಗುವುದು

625 (626) ಶ್ರೀ ಧ್ರುವನಾರಾಯಣ, ಆರ್ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕವನ್ನು (ವಿದ್ಯಾರ್ಥಿ ವೇತನ) ಭರಿಸಲು ಸರ್ಕಾರ ಕೈಗೊಂಡ ನಿರ್ಣಯುವನ್ನು ಅನುಷ್ಠಾನಗೊಳಿಸಲಾಗಿದೆಯೇ ,

ಆ) ಅನುಷ್ಠಾನಗೊಳಿಸದಿದ್ದಲ್ಲಿ ಕಾರಣವೇನು ,

ಇ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಅನುದಾನ ದೊರೆತಿದೆಯೆ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಹೌದು ,

ವೈದ್ಯಕೀಯ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ 1 00 ಲಕ್ಷದ ಮಿತಿಯೊಳಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಕೇಂದ್ರ ಪುರಸ್ಕೃತ ಯೋಜನೆಯಡಿ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಸದರಿ ಕೋರ್ಸುಗಳಿಗೆ ಸರ್ಕಾರಿ ಸೀಟಿಗೆ ನಿಗಧಿಪಡಿಸಿದ ಶುಲ್ಕವನ್ನು ಮಂಜೂರು ಮಾಡಲಾಗುತ್ತದೆ ಹಾಗೂ ಪರಿಶಿಷ್ಟ

ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ 100 ಲಕ್ಷ ಮೀರಿದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳು ಶುಲ್ಕವನ್ನು ಭರಿಸುತ್ತವೆ

ಆ) ಉದ್ಭವಿಸುವುದಿಲ್ಲ

ಇ) ದೊರೆತಿದೆ

626 (627) ಶ್ರೀ ಧ್ರುವನಾರಾಯಣ, ಆರ್ (ಸಂತೇಮರಳ್ಳಿ) – ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ನಡೆಸಲಾಗುತ್ತಿರುವ ಪೋಸ್ಟ್ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ,

ಆ) ಇವುಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ವಿದ್ಯಾರ್ಥಿನಿಲಯಗಳೆಷ್ಟು,

ಇ) ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳೆಷ್ಟು,

ಈ) ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳಿಗೆ ಮಾಹೆಯಾನ ಒಟ್ಟು ಎಷ್ಟು ಬಾಡಿಗೆಯನ್ನು ಪಾವತಿಸಲಾಗುತ್ತಿದೆ

ಉ) 2007–08 ನೇ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 291 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ

ಆ) ಇವುಗಳಲ್ಲಿ 157 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿರುತವೆ

ಇ) ಬಾಡಿಗೆ ಕಟ್ಟಡಗಳಲ್ಲಿ 134 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ

ಈ) ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿನಿಲಯಗಳಿಗೆ ಮಾಹೆಯಾನ ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿದ ದರದನ್ವಯ ಒಟ್ಟು ರೂ 6,90,636 ಗಳನ್ನು ಪಾವತಿಸಲಾಗುತ್ತಿದೆ

ಉ) 2007–08ನೇ ಸಾಲಿನಲ್ಲಿ 10 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಿಸಲು ಗುರಿಹೊಂದಿದ್ದು ನಿವೇಶನ ಹಾಗೂ ಅನುದಾನದ ಲಭ್ಯತೆಯನ್ನು ಅನುಸರಿಸಿ ಹೆಚ್ಚುವರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುವುದು

628 (629) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ವಿದೇಶಗಳಲ್ಲಿ ಉನ್ನತ ವ್ಯಾಸಂಗ ಪಡೆಯಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರೂಪಿಸಿರುವ ಯೋಜನೆಯು ಕಾರ್ಯಗತವಾಗುತ್ತಿದೆಯೇ ,

ಆ) ವಾರ್ಷಿಕ ಎಷ್ಟು ವಿದ್ಯಾರ್ಥಿಗಳನ್ನು ಈ ಯೋಜನೆಯಡಿ ಪರಿಗಣಿಸಲಾಗುತ್ತಿದೆ (ಇತ್ತೀಚಿನ ಸಾಲಿನಲ್ಲಿ ಈ ಯೋಜನೆಯಡಿ ಅನುಕೂಲಪಡೆದ ಅಭ್ಯರ್ಥಿಗಳ ಹೆಸರು ಜಿಲ್ಲಾವಾರು ಉನ್ನತ ವ್ಯಾಸಂಗದ ಪದವಿ ಇತರೆ ಅಗತ್ಯ ವಿವರಗಳನ್ನು ಒದಗಿಸುವುದು) ,

ಇ) ಈ ಯೋಜನೆಯಡಿಯಲ್ಲಿ ನಿಗದಿಗೊಳಿಸಲಾಗಿರುವ ಆದಾಯದ ಮಿತಿಯೆಷ್ಟು , ಈ ಮಿತಿಯನ್ನು ಹೆಚ್ಚಿಸಲಾಗುವುದೆ ,

ಈ) ಈ ಯೋಜನೆಯಲ್ಲಿ ಒಂದು ಪದವಿ ವಿದ್ಯಾರ್ಥಿಗೆ ಎಷ್ಟು ಸಹಾಯಧನ ನೀಡಲಾಗುತ್ತಿದೆ, ಸಹಾಯಧನದ ಪ್ರಮಾಣವನ್ನು ಹೆಚ್ಚಿಸಲಾಗುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಹೌದು

ಆ) 1 ಸಮಾಜ ಕಲ್ಯಾಣ ಇಲಾಖೆ –

ಅರ್ಜಿ ಸಲ್ಲಿಸಿಗ ಪರಿಶಿಷ್ಟ ಜಾತಿಯ ಎಲ್ಲಾ ಅರ್ಹ ಅಭ್ಯರ್ಥಿಗಳನ್ನು ಈ ಯೋಜನೆಯಡಿ ಪರಿಗಣಿಸಲಾಗುತ್ತಿದೆ ಈ ವರೆವಿಗೆ ಒಟ್ಟು 34 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ಧನ ಸಹಾಯ ನೀಡಲಾಗಿದೆ ಇತ್ತೀಚಿನ ಸಾಲಿನಲ್ಲಿ ಪ್ರಯೋಜನ ಪಡೆದ ಅಭ್ಯರ್ಥಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

2 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ –

ವಾರ್ಷಿಕ ಐದು ವಿದ್ಯಾರ್ಥಿಗಳನ್ನು ಈ ಯೋಜನೆಯಡಿ ಆಯ್ಕೆ ಮಾಡುವ ಗುರಿ ಹೊಂದಲಾಗಿದೆ ಇತ್ತೀಚಿನ ವರ್ಷಗಳಲ್ಲಿ ಈ ಯೋಜನೆಯಡಿ ಪ್ರಯೋಜನ ಪಡೆದ 5 ಅಭ್ಯರ್ಥಿಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಇ) ವಿದ್ಯಾರ್ಥಿ ಹಾಗೂ ಆತನ ಕುಟುಂಬದ ಆದಾಯ ಮಿತಿ ಮಾಸಿಕ ರೂ 12,000 ಆದಾಯ ಮಿತಿ ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ

ಈ) ವಾರ್ಷಿಕ ರೂ 3 50 ಲಕ್ಷ ಅಥವಾ ವ್ಯಾಸಂಗದ ಸಂಪೂರ್ಣ ಅವಧಿಗೆ ಒಬ್ಬ ವಿದ್ಯಾರ್ಥಿಗೆ ಗರಿಷ್ಠ ರೂ 10 00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ ಈ ಸಹಾಯಧನ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ

ಸಮಾಜ ಕಲ್ಯಾಣ ಇಲಾಖೆ –

ವಿಧಾನಸಭಾ ಸದಸ್ಯರಾದ ಶ್ರೀ ಧ್ರುವನಾರಾಯಣ ಆರ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 629ಕ್ಕೆ

ಅನುಬಂಧ

ಕ್ರ ಸಂ	ವಿದ್ಯಾರ್ಥಿಯ ಹೆಸರು	ಜಿಲ್ಲೆಯ ಹೆಸರು	ವ್ಯಾಸಂಗ ಕೈಗೊಂಡ ವಿಶ್ವವಿದ್ಯಾಲಯದ ಹೆಸರು ಮತ್ತು ದೇಶ	ವ್ಯಾಸಂಗಮಾಡುತ್ತಿರುವ/ ವ್ಯಾಸಂಗ ಪೂರೈಸಿದ ಕೋರ್ಸಿನ ವಿವರ
1	ಕೆ ಎಂ ಹರೀಶ್ ಕುಮಾರ್ ಬಿನ್ ಮಹದೇವಸ್ವಾಮಿ	ಮೈಸೂರು	ಮುಂಬೈ ವಿಶ್ವವಿದ್ಯಾಲಯ	ಮಾಸ್ಟರ್ ಡಿಗ್ರಿಇನ್ ರಿಮೋಟ್ ಸೆನ್ಸಿಂಗ್ ಇನ್ ಇಮೇಜ್ ಪ್ರೋಸೆಸಿಂಗ್ ಅಂಡ್ ಅಪ್ಲಿಕೇಶನ್
2	ವಿ ಕೆ ಶ್ರೀನಿವಾಸ ಬಿನ್ ಕಾಳಯ್ಯ	ಮಂಡ್ಯ	ವಾಗವನ್ ವಿಶ್ವವಿದ್ಯಾನಿಲಯ	ಎಂ ಎಸ್ಸಿ ಇನ್ ಜಿಯೋ ಇನ್ ಫಾರ್ಮೇಷನ್ ಸೈನ್ಸ್
3	ಚಂದ್ರಶೇಖರ ಕೆ ಬಿನ್ ಕೆಂಚಪ್ಪ	ಬೆಂಗಳೂರು ನಗರ	ಕೂಪನ್ ಹೇಗನ್ ವಿಶ್ವವಿದ್ಯಾಲಯ ಡೆನ್ಮಾರ್ಕ್	ಪಿ ಹೆಚ್ ಡಿ ಬಯೋ ಟೆಕ್ನಾಲಜಿ
4	ಅವಿನಾಶ್ ಎಂ ಬಿನ್ ಲೇ ಪಿ ಟಿ ಮಂಜುನಾಥ್	ಚಿತ್ರದುರ್ಗ	ಬೆನ್‌ಸ್ಟಾರ್ ವಿಶ್ವ ವಿದ್ಯಾಲಯ ಯು ಕೆ	ಎಂ ಎಸ್ಸಿ ಇನ್ ಅಡ್ವಾನ್ಸ್ಡ್ ಕಂಪ್ಯೂಟರ್ ಸೈನ್ಸ್
5	ರಾಜ್ ಕುಮಾರ್ ಜಿ ಎಸ್ ಬಿನ್ ಗಂಗಪ್ಪ	ಬೆಂಗಳೂರು(ಗ)	ಕಾರ್ಡಿನ್ ವಿಶ್ವವಿದ್ಯಾನಿಲಯ ಯು ಕೆ	ಪಿ ಹೆಚ್ ಡಿ ಇನ್ ಕೈನೆಟಿಕ್ ಇಂಜಿನಿಯರಿಂಗ್

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

1	ಪಿ ಸಿ ಪ್ರಮೋದ್ ಕುಮಾರ್	ಬೆಂಗಳೂರು (ನ)	ಕಾನ್ ಫೀಲ್ಡ್ ಯೂನಿವರ್ಸಿಟಿ ಇಂಗ್ಲೆಂಡ್	ಎಂ ಎಸ್ ಸಿ ಮೆಡಿಕಲ್ ಡಯಾಗ್ನೋಸ್ಟಿಕ್
2	ಶೈಲೇಂದ್ರ ಮನಸೂರ್	ಹುಬ್ಬಳ್ಳಿ ಧಾರವಾಡ ಜಿಲ್ಲೆ	ಐ ಎಂ ಎಸ್ ಮಾಸ್ಕೋ ಮೆಡಿಕಲ್ ಅಕಾಡೆಮಿ ರಷ್ಯಾ	ಎಂ ಎಸ್ ಸಿ , ರೇಡಿಯಾಲಜಿ
3	ರಮೇಶ್	ರಾಯಚೂರು	ಯೂನಿವರ್ಸಿಟಿ ಆಫ್ ಸಿಡ್ನಿ	ಮಾಸ್ಟರ್ ಡಿಸೈನ್‌ಸೈನ್ಸ್ (ಎನರ್ಜಿಕನ್ವರ್ಷನ್)
4	ರಘುಕುಮಾರ್ ವಾಲ್ಮೀಕಿ	ರಾಯಚೂರು	ಲಿವರ್‌ಪೂಲ್ ಯೂನಿವರ್ಸಿಟಿ ಫ್ಲೋರಿಡಾ ಅಮೇರಿಕ	ಎಂ ಎಸ್ ಸಿ ಇಂಜನಿಯರಿಂಗ್ ಅಪ್ಲಿಕೇಷನ್ಸ್ ಆಪ್ ಲೇಸರ್ಸ್
5	ನಮ್ರತ ಭಕ್ತರಾಮೇಗೌಡ	ಬೆಂಗಳೂರು	ಎಂಬ್ರಿರಿಡ್ಡಲ್ ಯೂನಿವರ್ಸಿಟಿ ಫ್ಲೋರಿಡಾ ಅಮೇರಿಕಾ	ಎಂ ಎಸ್ ಸಿ ಏರೋಸ್ಪೇಸ್ ಇಂಜನಿಯರಿಂಗ್
6	ಮಂಜುನಾಥ್ ವಿ.ರಣ್ಣ	ತುಮಕೂರು	ಯೂನಿವರ್ಸಿಟಿ ಆಪ್ ಆಸ್ಟ್ರೇಲಿಯಾ	ಮಾಸ್ಟರ್ ಆಫ್ ಅಡ್ವಾನ್ಸ್ಡ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಾಲಜಿ
7	ಡಾ ಬಿ ಎನ್ ದೇವೇಂದ್ರ	ಗುಲ್ಬರ್ಗಾ	INRA ಫ್ರಾನ್ಸ್	ಪೋಸ್ಟ್ ಡಾಕ್ಟರಲ್ ರಿಸರ್ಚ್ ಇನ್ ಬಯೋಟೆಕ್ನಾಲಜಿ/ ಜೆನೆಟಿಕ್ ಇಂಜನಿಯರಿಂಗ್

629 (630) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) - ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ತಳಿಗಳು ಎಂದು ಗುರುತಿಸಲಾಗಿರುವ ಗೋತಳಿಗಳು ಯಾವುವು?

ಆ) ರಾಜ್ಯದಲ್ಲಿರುವ ವಿವಿಧ ತಳಿಗಳ ಒಟ್ಟು ಸಂಖ್ಯೆ ಎಷ್ಟು ?

ಇ) ರಾಜ್ಯದ ತಳಿಗಳು ಎಂದು ಗುರುತಿಸಲಾಗಿರುವ ಎಮ್ಮೆ ತಳಿಗಳು ಯಾವುವು? ಈ ವಿವಿಧ ತಳಿಗಳ ಒಟ್ಟು ಸಂಖ್ಯೆ ಎಷ್ಟು ?

ಈ) ಗೋತಳಿಗಳ ಸಂರಕ್ಷಣೆಗೆ ಯೋಜನೆ ರೂಪಿಸಿರುವಂತೆ ಎಮ್ಮೇ ತಳಿಗಳ ರಕ್ಷಣೆಗೆ ಸರ್ಕಾರ ಯೋಜನೆ ರೂಪಿಸಿದೆಯೆ ?

ಉ) ಹಾಗಿದ್ದಲ್ಲಿ, ಈ ಯೋಜನೆ ರೂಪುರೇಷೆಗಳೇನು ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) -

ಅ) ರಾಜ್ಯದ ತಳಿಗಳು ಎಂದು ಗುರುತಿಸಲಾಗಿರುವ ಗೋತಳಿಗಳು ಆರು ಅವುಗಳು 1 ಹಳ್ಳಿಕಾರ್, 2 ಅಮೃತ ಮಹಲ್, 3 ಕಿಲಾರ್, 4 ದೇವಣಿ, 5 ಕೈಪ್ಲವ್ಯಾಲಿ ಮತ್ತು 6 ಮಲೆನಾಡು ಗಿಡ್ಡ ಎಂಬ ತಳಿಗಳು ರಾಜ್ಯದಲ್ಲಿರುವ ವಿವಿದ ಗೋತಳಿಗಳ ಒಟ್ಟು ಸಂಖ್ಯೆ 96,95,930 ಅವುಗಳ ತಳಿವಾರು ವಿವರ ಈ ಕೆಳಗಿನಂತಿವೆ -

ಮಿಶ್ರ ತಳಿಗಳು		ವಿದೇಶಿ ತಳಿಗಳು		ಸ್ಥಳೀಯ ತಳಿಗಳು	
ಜರ್ಸಿ	7,11,049	ಜರ್ಸಿ	787	ಹಳ್ಳಿಕಾರ್	21,08,399
ಹೆಚ್ ಎಫ್	8,42,928	ಹೆಚ್ ಎಫ್	849	ಅಮೃತ ಮಹಲ್	68,669
ಇತರೆ	56,473	ಇತರೆ	484	ಕಿಲಾರಿ	2,90,136
				ದೇವಣಿ	35,768
				ಮಲೆನಾಡು ಗಿಡ್ಡ	14,41,482
				ಕೃಷ್ಣ ವ್ಯಾಲಿ	281
				ಇತರೆ	40,38,625

ಇ) ಎಮ್ಮೆಗಳಲ್ಲಿ ರಾಜ್ಯದ ತಳಿಗಳು ಎಂದು ಗುರುತಿಸಲಾದ ಯಾವುದೇ ತಳಿಗಳು ಇರುವುದಿಲ್ಲ, ಆದರೆ ಎಮ್ಮೆಗಳಲ್ಲಿ ಸೂರ್ತಿ, ಮುರ್ರಾ, ಪಂಡರಾಪುರಿ, ಮೆಹಸಾನಾ ಮತ್ತು ಇತರೆ ಎಮ್ಮೆ ತಳಿಗಳನ್ನು ಹೈನುಗಾರಿಕೆಗಾಗಿ ನಿರ್ವಹಣೆ ಮಾಡಲಾಗುತ್ತಿದೆ ಇವುಗಳ ಒಟ್ಟು ಸಂಖ್ಯೆ 40,23,832 ಇದ್ದು ತಳಿವಾರು ಈ ಕೆಳಕಂಡಂತೆ ಇವೆ

1	ಸೂರ್ತಿ	1,47,782
2	ಮುರ್ರಾ	38,673
3	ಪಂಡರಾಪುರಿ	4,574
4	ಮೆಹಸಾನಾ	838
5	ಸ್ಥಳೀಯ ಎಮ್ಮೆಗಳು	38,31,965
	ಒಟ್ಟು	40,23,832

ಈ) ಗೋತಳಿ ಸಂರಕ್ಷಣೆಗೆ ಯೋಜನೆ ರೂಪಿಸಿದಂತೆ ಎಮ್ಮೆ ತಳಿ ರಕ್ಷಣೆಗೆ ಯಾವುದೇ ವಿಶೇಷ ಯೋಜನೆ ರೂಪಿಸಲಾಗಿಲ್ಲ ಆದರೆ ಈ ಎಮ್ಮೆ ತಳಿಗಳ ಸಂವರ್ಧನೆಗಾಗಿ ಸೂರ್ತಿ ಮತ್ತು ಮುರ್ರಾ ಘನೀಕೃತ ವೀರ್ಯನಳಿಕೆಗಳನ್ನು ರಾಜ್ಯದಲ್ಲಿರುವ ಎಲ್ಲಾ ಪಶು ಚಿಕಿತ್ಸಾ ಕೇಂದ್ರಗಳಿಗೆ ಸರಬರಾಜು ಮಾಡಿ ಕೃತಕ ಗರ್ಭಧಾರಣೆ ಮುಖಾಂತರ ತಳಿ ಸಂವರ್ಧನೆಗೆ ಕ್ರಮವಹಿಸಲಾಗಿದೆ

ಉ) ಅನ್ವಯಿಸುವುದಿಲ್ಲ

630 (1135) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಈ ಹಿಂದೆ ಹೇಳಿಕೆ ನೀಡಿದಂತೆ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ 151 ಮಂದಿ ಅನರ್ಹರಿಗೆ ನೇಮಕಾತಿ ನೀಡಿದ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಪದೋನ್ನತಿಯನ್ನು ತನಿಖಾ ವರದಿ ಬರುವವರೆಗೂ ತಡೆಹಿಡಿಯಲಾಗಿದೆಯೇ ?

ಆ) ಸಿ ಓ ಡಿ ತನಿಖಾ ವರದಿಯನ್ನು ಮೂರು ತಿಂಗಳೊಳಗೆ ಪಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಭರವಸೆ ನೀಡಿದ್ದು ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಇ) ತನಿಖಾ ಸಂಸ್ಥೆಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆಯೇ ? ಅಂತಿಮ/ಮಧ್ಯಂತರ ವರದಿ ಸಲ್ಲಿಸಿದ್ದಲ್ಲಿ ವರದಿಯಾನುಸಾರ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಈ) ವರದಿ ಇನ್ನೂ ಬಾರದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು , ತನಿಖೆ ಪೂರ್ಣಗೊಳ್ಳದೆ ಹಾಗೂ ತನಿಖಾ ವರದಿಯನ್ನು ಪಡೆಯದೆ ತಪ್ಪಿತಸ್ಥ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿರುವುದು ಅಲ್ಲದೆ, ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದು ನಿಜವೇ?

ಉ) ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳನ್ನು ಅಮಾನತುಗೊಳಿಸುವುದರ ಬದಲಿಗೆ ವಿಚಾರಣೆ ಪೂರ್ಣಗೊಳ್ಳುವ ಮೊದಲೇ ಇವರುಗಳಿಗೆ ಬಡ್ತಿ ನೀಡಿ ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದೇ ತನಿಖೆ ವಿಳಂಬಗೊಳ್ಳಲು ಪ್ರಮುಖ ಕಾರಣವಾಗಿರುತ್ತದೆ ಎಂಬುದು ನಿಜವೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) –

ಅ) ಲಭ್ಯವಿರುವ ಮಾಹಿತಿ ಪ್ರಕಾರ ಈ ರೀತಿ ಹೇಳಿಕೆ ನೀಡಿರುವುದಿಲ್ಲ

ಇಲ್ಲ

ಆ) 3 ತಿಂಗಳೊಳಗಾಗಿ ವರದಿ ನೀಡುವಂತೆ ಸಿ ಒ ಡಿ ಗೆ ಆದೇಶಿಸಲಾಗಿದೆ ತನಿಖೆ ಪ್ರಗತಿಯಲ್ಲಿದೆ

ಇ) ಇಲ್ಲ

ಈ) 151 ಅಭ್ಯರ್ಥಿಗಳ ಪೈಕಿ 140 ಅಭ್ಯರ್ಥಿಗಳನ್ನು ವಿಚಾರಿಸಲಾಗಿದೆ ಉಳಿದ ಅಭ್ಯರ್ಥಿಗಳನ್ನು ಪತ್ತೆ ಮಾಡಬೇಕಾಗಿರುವುದರಿಂದ ಮತ್ತು ವಿಚಾರಣೆಗೋಸ್ಕರ ಇನ್ನು ಹೆಚ್ಚು ಮಾಹಿತಿ ಸಂಗ್ರಹಿಸಬೇಕಾಗಿರುವುದರಿಂದ ತನಿಖೆ ವಿಳಂಬವಾಗಿದೆ

ಇಲಾಖೆಯ ಅಧಿಕಾರಿಗಳು ಭಾಗಿಯಾಗಿರುವ ಬಗ್ಗೆ ತನಿಖಾ ವರದಿ ಬಂದಿರುವುದಿಲ್ಲ ಯಾವುದೇ ಅಧಿಕಾರಿಗಳು ತಪ್ಪಿತಸ್ಥರೆಂದು ವರದಿಯಾಗಿರುವುದಿಲ್ಲದ ಕಾರಣ ಬಡ್ತಿ ನೀಡಿ ರಿಕ್ತ ಸ್ಥಾನಗಳಲ್ಲಿ ಅದೇ ಸ್ಥಳಗಳಲ್ಲಿ ಮುಂದುವರಿಸಲಾಗಿದೆ

ಉ) ಇಲ್ಲ

631 (915) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿರಹಟ್ಟಿಯ ಮತಕ್ಷೇತ್ರದ ಯಳವತ್ತಿಯ ಆರೋಗ್ಯ ಕೇಂದ್ರಕ್ಕೆ ಮಂಜೂರಾದ ಕಟ್ಟಡದ ಅಂದಾಜು ಮೊತ್ತ ಎಷ್ಟು ,

ಆ) ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿದೆ ,

ಇ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ವಿನಿಯೋಗಿಸಲಾದ ಹಣ ಎಷ್ಟು

ಈ) ಕಾಮಗಾರಿಯು ಈಗ ಯಾವ ಹಂತದಲ್ಲಿದೆ ,

ಉ) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿ ಪಡಿಸಲಾದ ಕಾಲಾವದಿ ಎಷ್ಟು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಶಿರಹಟ್ಟಿಯ ಮತಕ್ಷೇತ್ರದ ಯಳವತ್ತಿಯು ಆರೋಗ್ಯ ಕೇಂದ್ರಕ್ಕೆ ಮಂಜೂರಾದ ಕಟ್ಟಡಕ್ಕೆ ಅಂದಾಜು ಮೊತ್ತ 34 26 ಲಕ್ಷ ರೂ ಗಳು ಮಂಜೂರಾಗಿರುತ್ತದೆ

ಆ) ಈ ಕಾಮಗಾರಿಯನ್ನು ಗದಗ ಜಿಲ್ಲೆಯ ಕಾರ್ಯನಿರ್ವಾಹಕ ಅಭಿಯಂತರ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದೆ

ಇ) ಇಲ್ಲಿಯವರೆಗೆ ರೂ 10 24 ಲಕ್ಷ ಹಣ ವಿನಿಯೋಗಿಸಲಾಗಿದೆ

ಈ) ಪ್ಲಿಂತ್ ಹಂತದವರೆಗೆ ಕೆಲಸ ಆಗಿರುತ್ತದೆ

ಉ) 12 ತಿಂಗಳು (ಮಳೆಗಾಲ ಸೇರಿ)

ವಸತಿ ನಿಲಯಗಳಲ್ಲಿ ಪ್ರವೇಶಾವಕಾಶವನ್ನು ಹೆಚ್ಚಿಸುವುದು

632 (916) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿರಹಟ್ಟಿ ಮತಕ್ಷೇತ್ರದಲ್ಲಿ ಇರುವ ಒಟ್ಟು ವಸತಿ ನಿಲಯಗಳೆಷ್ಟು

ಆ) ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ವಿವರ ನೀಡುವುದು ,

ಇ) ಪ್ರತಿ ವಸತಿ ನಿಲಯಕ್ಕೆ ಮಂಜೂರಾದ ಪ್ರವೇಶ ಸಂಖ್ಯೆ ಎಷ್ಟು ,

ಈ) ಪ್ರತಿ ವಸತಿ ನಿಲಯಕ್ಕೆ ಪ್ರವೇಶ ಕೋರಿ ಬಂದ ವಿದ್ಯಾರ್ಥಿಗಳೆಷ್ಟು ,

ಉ) ಮಂಜೂರಾದ ಸಂಖ್ಯೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆ ಇದ್ದು ಪ್ರವೇಶ ದೊರಕದೆ ಅನೇಕ ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮೊಟಕುಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಊ) ಬಂದಿದ್ದಲ್ಲಿ, ಬಡ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ವಸತಿ ನಿಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ಬಾಲಚಂದ್ರ ಲ ಜಾರಕಿ ಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಒಟ್ಟು 13 ವಿದ್ಯಾರ್ದಿನಿಲಯಗಳಿರುತ್ತದೆ

ಆ) **1 ಸಮಾಜ ಕಲ್ಯಾಣ ಇಲಾಖೆ –**

5 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳು ಮತ್ತು 1 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಇರುತ್ತದೆ

2 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ –

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಶಿರಹಟ್ಟಿ ತಾಲ್ಲೂಕು ಹೆಬ್ಬಾಳ ಗ್ರಾಮದಲ್ಲಿ ಒಂದು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಇರುತ್ತದೆ ಸದರಿ ವಿದ್ಯಾರ್ಥಿನಿಲಯ 2007–08ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ

3 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ –

4 ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳು, 1 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಮತ್ತು 1 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಇರುತ್ತದೆ

ಇ) 1 ಸಮಾಜ ಕಲ್ಯಾಣ ಇಲಾಖೆವತಿಯಿಂದ ಇರುವ ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಂಜೂರಾದ ಪ್ರವೇಶ ಸಂಖ್ಯೆ ಈ ಕೆಳಕಂಡಂತಿದೆ

ಅ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ (ಶಿರಹಟ್ಟಿ) ಮಂಜೂರಾತಿ ಸಂಖ್ಯೆ 100

ಆ) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದ (ಶಿರಹಟ್ಟಿ) ಮಂಜೂರಾತಿ ಸಂಖ್ಯೆ 75

ಇ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ (ಕಡಕೋಳ) ಮಂಜೂರಾತಿ ಸಂಖ್ಯೆ 75

ಈ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ (ಬನ್ನಿಕೊಪ್ಪ) ಮಂಜೂರಾತಿ ಸಂಖ್ಯೆ 50

ಉ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ದಿನಿಲಯದ (ಬಾಳೆಹೊಸೂರು) ಮಂಜೂರಾತಿ ಸಂಖ್ಯೆ 65

ಊ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದ (ಸೊರಣಗಿ) ಮಂಜೂರಾತಿ ಸಂಖ್ಯೆ 65

2. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಇರುವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ : 50

3. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಇರುವ ಪ್ರತಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ : 50

ಈ) ಸಮಾಜ ಕಲ್ಯಾಣ ಇಲಾಖೆ :–

ಸಮಾಜ ಕಲ್ಯಾಣ ಇಲಾಖಾವತಿಯಿಂದ ಇರುವ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಕೋರಿ ಬಂದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ :–

ಅ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ (ಶಿರಹಟ್ಟಿ) 42

ಆ) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ (ಶಿರಹಟ್ಟಿ) 43

ಇ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ (ಕಡಕೋಳ) 51

ಈ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ (ಬನ್ನಿಕೊಪ್ಪ) 17

ಉ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ (ಬಾಳೆ ಹೊಸೂರು)17

ಊ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ (ಸೂರಣಗಿ) 18

2. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :–

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಶಿರಹಟ್ಟಿ ತಾಲ್ಲೂಕು ಹೆಬ್ಬಾಳ ಗ್ರಾಮದಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಕೋರಿ ಬಂದ ವಿದ್ಯಾರ್ಥಿಗಳ ಸಂಖ್ಯೆ 40

3. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಪ್ರವೇಶ ಕೋರಿ ಬಂದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಕಂಡಂತಿದೆ :–

ಅ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ (ಶಿರಹಟ್ಟಿ) 72

ಆ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ (ಯಾರಡಿ) 79

ಇ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ (ಲಕ್ಮೇಶ್ವರ) 66

ಈ) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ (ಬೆಳ್ಳಟ್ಟಿ) 110

ಉ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ
(ಶಿರಹಟ್ಟಿ) (ಪರಿವರ್ತಿತ) 70

ಊ) ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ,
(ಲಕ್ಮೇಶ್ವರ) 90

ಉ) ಹೌದು,

ಊ) 2006–07ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಗಣಿಸಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ 10 ರಿಂದ 15 ಸಂಖ್ಯೆ ಮೀರದಂತೆ ಸಂಖ್ಯಾಬಲವನ್ನು ಹೆಚ್ಚಿಸಿ ಕ್ರಮ ಕೈಗೊಂಡಿದೆ.

633 (917) ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿರಹಟ್ಟಿ ಮತಕ್ಷೇತ್ರದ ಲಕ್ಷ್ಮೇಶ್ವರವು ಸುಮಾರು 42 ಸಾವಿರ ಜನಸಂಖ್ಯೆ ಹೊಂದಿದ್ದು ಸುಮಾರು 30–35 ಗ್ರಾಮಗಳ ಮಧ್ಯವರ್ತಿ ಸ್ಥಳವಾಗಿದ್ದು ಇಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯರ ಹುದ್ದೆ ಅನೇಕ ವರ್ಷಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಶಿರಹಟ್ಟಿ ತಾಲ್ಲೂಕು ಆಸ್ಪತ್ರೆಯಲ್ಲಿ ಮತ್ತು ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒಟ್ಟು ಮಂಜೂರಾದ ಹುದ್ದೆಗಳೆಷ್ಟು ? ಎಷ್ಟು ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು ? (ವಿವರ ನೀಡುವುದು)

ಇ) ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯರ ಹುದ್ದೆ ಖಾಲಿ ಇರುವುದರಿಂದ ಅನೇಕ ಬಡ ಮಹಿಳಾ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರು ಇಲ್ಲದೇ ಇದ್ದರೂ ಸಹ 2006 ಮತ್ತು 2007ರಲ್ಲಿ ಎಷ್ಟು ಜನ ಮಹಿಳೆಯರು ಚಿಕಿತ್ಸೆ ಪಡೆದಿರುವರು (ಒಳರೋಗಿ + ಹೊರ ರೋಗಿಗಳ ವಿವರ ನೀಡುವುದು)

ಉ) ಮಹಿಳೆಯರ ಆರೋಗ್ಯ ಹಿತದೃಷ್ಟಿಯಿಂದ ಇಲ್ಲಿಗೆ ಒಬ್ಬ ಮಹಿಳಾ ವೈದ್ಯರ ಅವಶ್ಯಕತೆ ಇದ್ದು , ಈ ಹುದ್ದೆಯ ನೇಮಕಕ್ಕಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಬಂದಿದೆ, (ದಿನಾಂಕ 11–07–2007ರಂದು ಒಬ್ಬ ಮಹಿಳಾ ಸ್ತ್ರೀರೋಗ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದ್ದು ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ)

ಆ) ಶಿರಹಟ್ಟಿ ತಾಲ್ಲೂಕು ಆಸ್ಪತ್ರೆಯಲ್ಲಿ 4 ತಜ್ಞ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು 2 ತಜ್ಞ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಒಂದು ಎಂ ಎಸ್ (ಜಿಎಸ್) ಹುದ್ದೆ ಖಾಲಿ ಇದೆ

ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಒಟ್ಟು 5 ತಜ್ಞ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, 4 ತಜ್ಞ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಒಂದು ಎಸ್ಎಂಒ ಹುದ್ದೆ ಖಾಲಿ ಇರುತ್ತದೆ

ಇ) 'ಅ' ಉಪ ಪ್ರಶ್ನೆಯಲ್ಲಿ ಉತ್ತರ ನೀಡಲಾಗಿದೆ

ಈ)

2006		
ಹೊರ ರೋಗಿಗಳು	ಒಳ ರೋಗಿಗಳು	ಒಟ್ಟು
22296	11531	23451

2007		
ಹೊರ ರೋಗಿಗಳು	ಒಳ ರೋಗಿಗಳು	ಒಟ್ಟು
11531	679	12210

ಉ) 'ಅ' ಉಪ ಪ್ರಶ್ನೆಯಲ್ಲಿ ಉತ್ತರ ನೀಡಲಾಗಿದೆ

ಹಿಂದುಳಿದ ವರ್ಗಗಳ ವಸತಿ ನಿಲಯಗಳು ಮಂಜೂರು ಮಾಡುವುದು

634 (638) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಾರವಾರ ಹಾಗೂ ಜೋಯಿಡಾ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ವಸತಿ ನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ,

ಆ) ಹಾಗಿದ್ದಲ್ಲಿ, ಯಾವಾಗ ವಸತಿ ನಿಲಯುಗಳನ್ನು ಮಂಜೂರು ಮಾಡಲಾಗುವುದು (ವಿವರ ನೀಡುವುದು) ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) 2007–08ನೇ ಸಾಲಿನಲ್ಲಿ ಕಾರವಾರ ಟೌನ್‌ಗೆ ಒಂದು ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಮಂಜೂರು ಮಾಡಲಾಗಿದೆ ಬೇರೆ ಯಾವುದೇ ಪ್ರಸ್ತಾವನೆಗಳಿರುವುದಿಲ್ಲ

ಆ) ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯುಗಳ ಬೇಡಿಕೆ ಮತ್ತು ಆಯವ್ಯಯದ ಲಭ್ಯತೆ ಅನುಸರಿಸಿ ಪರಿಶೀಲಿಸಲಾಗುವುದು

635 (1006) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಂಯಾತ್‌ಖಾನ್ (ಹುಬ್ಬಳ್ಳಿ) –ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು , ಜಿಲ್ಲಾವಾರು ವಿವರ ನೀಡುವುದು ,

ಆ) ಕಳೆದ 2005-2006, 2006-07, 2007-08ನೇ ಸಾಲಿನಲ್ಲಿ ಬೀಡಿ ಕಾರ್ಮಿಕರ ಮಕ್ಕಳಿಗೆ ನೀಡಿದ ವಿದ್ಯಾರ್ಥಿ ಮಾಶಾಸನವೆಷ್ಟು (ಜಿಲ್ಲಾವಾರು ವಿವರ ನೀಡುವುದು),

ಇ) ರಾಜ್ಯದಲ್ಲಿ ಪ್ರತಿಯೊಬ್ಬ ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಗೊಳಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ , ಹಾಗಿದ್ದಲ್ಲಿ, ಈ ಬಗ್ಗೆ ನೀತಿ ನಿರೂಪಣೆಯನ್ನು ಸಿದ್ಧಪಡಿಸಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) -

ಅ) 2,61,208 (ಜಿಲ್ಲಾವಾರು ವಿವರಗಳನ್ನು ಅನುಬಂಧ – 'ಅ' ದಲ್ಲಿ ನೀಡಲಾಗಿದೆ)

ಆ) ಮಾಹಿತಿಯನ್ನು ಅನುಬಂಧ-'ಬಿ' ರಲ್ಲಿ ನೀಡಲಾಗಿದೆ

ಇ) ಹೌದು, 1948ರ ಕನಿಷ್ಠ ವೇತನ ಕಾಯ್ದೆಯ ಅನುಸೂಚಿಯಲ್ಲಿ ಸೇರಿಸಲಾಗಿರುವ ವಿವಿಧ ಉದ್ದಿಮೆಗಳ ಜೊತೆಗೆ ಬೀಡಿ ಉದ್ದಿಮೆಯನ್ನು ಕೂಡ ಸೇರಿಸಲಾಗಿದೆ

ಪ್ರಸ್ತುತ ಬೀಡಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗಧಿಪಡಿಸುವ ಸಲುವಾಗಿ ಸದರಿ ಅಧಿನಿಯಮದ ಪ್ರಾವದಾನಗಳ ಮೇರೆಗೆ ಒಂದು ವಿಶೇಷ ಸಮಿತಿಯನ್ನು ರಚಿಸಲಾಗಿತ್ತು ಸದರಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಬೀಡಿ ಉದ್ದಿಮೆಯಲ್ಲಿ ತೊಡಗಿರುವ ಕಾರ್ಮಿಕರ ಕನಿಷ್ಠ ವೇತನವನ್ನು ಸರ್ಕಾರದ ಅಧಿಸೂಚನೆಯ ಸಂಕಂಇ 165 ಎಲ್ಎಂಡಬ್ಲ್ಯೂ 2006, ದಿನಾಂಕ 6-10-2006 ರಲ್ಲಿ ನಿಗಧಿಪಡಿಸಲಾಗಿದೆ

ಸಾಮಾನ್ಯವಾಗಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕನಿಷ್ಠ ವೇತನ ಕಾಯ್ದೆ 1948ರ ಪ್ರಾವಧಾನಗಳ ಪ್ರಕಾರ ಹಾಗೂ ಅದರಲ್ಲಿರುವ ಮಾನದಂಡಗಳ ಪ್ರಕಾರ ನಿಗಧಿಪಡಿಸಲಾಗುತ್ತದೆ ಈ ಬಗ್ಗೆ ಬೀಡಿ ಉದ್ದಿಮೆಗೆ ಕನಿಷ್ಠ ವೇತನವನ್ನು ನಿಗಧಿಪಡಿಸಲು ಯಾವುದೇ ಪ್ರತ್ಯೇಕ ನೀತಿ ನಿರೂಪಣೆಯು ಸದರಿ ಕಾಯ್ದೆಯಡಿ ನಿಗಧಿಪಡಿಸಿರುವುದಿಲ್ಲ

ANNEXURE-A

Sl	Name of the District	No of Beedi Workers
1	Bangalore (Urban)	Nil
2	Bangalore (Rural)	5,480
3	Mysore	10,753
4	Mandya	7,313
5	Shimoga	776
6	Kolar	3,759
7	Tumkur	8,010
8	Hassan	822
9	Mangalore	1,70,547
10	Udupi	37,572
11	Hubli	543
12	Bellary	276
13	Davangere	4,695
14	Gulbarga	92
15	Bijapur	75
16	Belgaum	2,008
17	Chikmagalur	87
18	Haveri	1,182
19	Gadag	47
20	Koppala	
21	Bagalkot	452
22	Chamarajanagar	6,713
23	Raichur	Nil
24	Mercara	Nil
25	Karwar	Nil
26	Bidar	Nil
27	Chitradurga	Nil
	Total	2,61,198

ANNEXURE-B

State showing the details of sanction of Financial Assistance issued to the Childrens of Beedi Workers for Three Years From 2005-06 to 2007-08

D Code	District	2005-06		2006-07		2007-08	
		Applns	Amount	Applns	Amount	Applns	Amount
1	Bangalore Urban	1703	18,38,540	960	10,22,900	2388	29,00,840
2	Bangalore Rural	3938	37,01,760	3965	36,24,100	5008	54,45,760
3	Belgaum	1004	10,96,000	266	2,16,360	869	12,00,040
4	Bijapur	Nil	Nil	Nil	Nil	Nil	Nil
5	Bidar	Nil	Nil	Nil	Nil	1	8,000
6	Bellary	142	1,19,680	244	2,09,280	222	2,84,720
7	Bagalkot	265	2,51,260	186	1,69,340	77	81,720
8	Chamarajanagar	2442	24,00,620	2191	21,04,620	3002	30,08,360
9	Chitradurga	2412	26,32,020	2809	25,00,200	3624	45,31,060
10	Chickmagalur	203	2,30,340	220	2,58,200	286	2,63,230
11	Coorg	40	50,080	26	24,080	29	35,260
12	Dakshin Kannada (DK)	25313	2,58,61,780	29154	2,99,84,960	55556	6,52,83,780
13	Davangere	2874	28,07,380	2688	23,18,080	5888	82,18,700
14	Dharwad	296	2,97,860	208	1,72,280	408	4,57,710
15	Gulbarga	113	1,09,020	43	51,840	214	2,13,740
16	Gadag	2	1,200	Nil	Nil	4	7,820
17	Hassan	180	2,28,020	238	2,24,520	837	7,93,580
18	Haveri	894	8,81,380	1040	8,99,860	1377	14,18,960
19	Kolar	3267	30,78,520	3323	30,00,300	8243	80,48,400
20	Koppal	1	500	Nil	Nil	Nil	Nil
21	Mysore	3262	31,14 780	3125	29,40,140	5418	58,78,180
22	Mandya	2445	23,48 700	2,000	20,12,660	3648	3786020
23	Raichur	Nil	Nil	Nil	Nil	Nil	Nil
24	Shimoga	303	3,85,000	278	3,05,140	357	4,80,240
25	Tumkur	5500	55,80,580	5930	59,98,440	25355	2,80,89,880
26	Udupi	7641	86,31,900	2807	34,41,000	19104	2,29,97,850
27	Uttara Kannada (UK)	8	15,420	6	7720	21	28,040
28.	Misc	Nil	Nil	1	1,840	4	10,380

636 (1007) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) –ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಎ ವಿ ಟಿ ಎಸ್ ಕೇಂದ್ರಗಳು ಕಳೆದ ಮೂರು ವರ್ಷಗಳಿಂದ ಮುಚ್ಚಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದಕ್ಕೆ ಕಾರಣವೇನು ,

ಆ) ಎ ವಿ ಟಿ ಎಸ್ ಕೇಂದ್ರಗಳನ್ನು ಸರ್ಕಾರ ಪುನಃ ಪ್ರಾರಂಭಿಸುವ ವಿಚಾರ ಮಾಡಿದೆಯೇ ಹಾಗಿಲ್ಲದಿದ್ದಲ್ಲಿ ಯಾವಾಗ ಪ್ರಾರಂಭಮಾಡಲಾಗುವುದು ?

ಇ) ಕೋಟಿಗಟ್ಟಲೆ ಬೆಲೆಬಾಳುವ ಯಂತ್ರೋಪಕರಣ, ಪೀಠೋಪಕರಣ ಹಾಗೂ ಸಾಮಗ್ರಿಗಳು ನಷ್ಟದ ಅಂಚಿನಲ್ಲಿರುವುದಕ್ಕೆ ಹೊಣೆಗಾರರು ಯಾರು ಹಾಗೂ ಇದಕ್ಕೆ ಕಾರಣಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಎಲ್ಲಾ ಯಂತ್ರೋಪಕರಣಗಳು ಮತ್ತು ಪೀಠೋಪಕರಣ ಸುಸ್ಥಿತಿಯಲ್ಲಿದ್ದು ತರಬೇತಿಗೆ ಉಪಯೋಗಿಸಲಾಗುತ್ತಿದೆ

ಭಿಕ್ಷಾಟನಾ ಪದ್ಧತಿಯ ನಿರ್ಮೂಲನೆ

637 (121) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಿಕ್ಷಾಟನೆಯ ಅದಿನಿಯಮದ ಉಪಬಂಧಗಳನ್ವಯ ಬಿಕ್ಷಾಟನೆಯನ್ನು ನಿರ್ಮೂಲನೆಗೊಳಿಸಲು ತೆಗೆದುಕೊಂಡ ಕ್ರಮಗಳು ,

ಆ) ಕಳೆದ ಮೂರು ವರ್ಷಗಳಲ್ಲಿ ನಿಗದಿಗೊಳಿಸಲಾದ ಮೊತ್ತ ,

ಇ) ಬಿಕ್ಷಾಟನಾ ಪದ್ಧತಿಯನ್ನು ನಿರ್ಬಂಧಿಸಲು ಸರ್ಕಾರದಲ್ಲಿ ಏನಾದರೂ ಕ್ರಮವಿದೆಯೇ ,

ಈ) ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಬಿಕ್ಷಾಟನಾ ಪದ್ಧತಿ ಬದಲಾಗದೇ ಹೆಚ್ಚಾಗಿದ್ದು, ಪ್ರತಿಯೊಬ್ಬರಿಗೂ ಉಪದ್ರವ ಉಂಟುಮಾಡುತ್ತಿದ್ದರೂ, ಸರ್ಕಾರವು ಅಧಿನಿಯಮ/ ಯೋಜನೆಯನ್ನು ಏಕೆ ಅನುಷ್ಠಾನಗೊಳಿಸುತ್ತಿಲ್ಲ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಕರ್ನಾಟಕ ಬಿಕ್ಷಾಟನೆ ನಿಷೇಧ ಅಧಿನಿಯಮ 1975ರಲ್ಲಿನ ಅವಕಾಶಗಳಂತೆ ಕೇಂದ್ರ ಪರಿಹಾರ ಸಮಿತಿಯು ಬಿಕ್ಷಾಟನಾ ಪದ್ಧತಿಯನ್ನು ಹೋಗಲಾಡಿಸಲು ಕ್ರಮಕೈಗೊಳ್ಳುತ್ತಿದೆ ಮೇಲೆ ತಿಳಿಸಿದ ಅಧಿನಿಯಮದಡಿ ಅದಿಕಾರ ಕೊಡಲ್ಪಟ್ಟ ಅಧಿಕಾರಿಗಳು ಬಿಕ್ಷಾಟನೆಯಲ್ಲಿ ತೊಡಗಿದ ವ್ಯಕ್ತಿಗಳನ್ನು ಬಂದಿಸಿ, ತಾಲ್ಲೂಕು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸುತ್ತಾರೆ ಪ್ರಾಧಮಿಕ ತನಿಖೆಯ ನಂತರ ಮ್ಯಾಜಿಸ್ಟ್ರೇಟ್‌ರವರ ಆದೇಶದ ಮೇರೆಗೆ ಅವರನ್ನು ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಬಂಧನದಲ್ಲಿಡಲಾಗುವುದು ಬಂಧಿತ ಭಿಕ್ಷುಕರಿಗೆ ಉಚಿತ ಆಹಾರ, ವಸತಿ, ಹಾಸಿಗೆ, ಸಮವಸ್ತ್ರ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಅಲ್ಲದೆ ಪುನರ್ವಸತಿ ಕಾರ್ಯಕ್ರಮದಡಿ ದೃಢಕಾಯ

ಬಿಕ್ಷುಕರಿಗೆ ಸಾಕ್ಷರತೆ, ಹೊಲಿಗೆ, ಬುಕ್ ಬೈಂಡಿಂಗ್, ಕಮ್ಮಾರಿಕೆ, ತೆಂಗಿನ ನಾರಿನ ಮ್ಯಾಟ್ ತಯಾರಿಕೆ, ಕೃಷಿ ಮತ್ತು ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುತ್ತದೆ

ಆ) ನಗರ ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿ ಹಾಗೂ ಪಾವತಿಸುವ ಬಿಕ್ಷುಕರ ಕರದಿಂದ ಕೇಂದ್ರ ಪರಿಹಾರ ಸಮಿತಿಯು ಅದರ ಖರ್ಚು-ವೆಚ್ಚಗಳನ್ನು ಭರಿಸುತ್ತಿದೆ ಕಳೆದ ಮೂರು ವರ್ಷಗಳಲ್ಲಿ ಈ ರೀತಿ ಸಂಗ್ರಹಿಸಿದ ಹಾಗೂ ಖರ್ಚು ಮಾಡಲಾದ ಮೊತ್ತದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ –

ವರ್ಷ	ಸಂಗ್ರಹಿಸಲ್ಪಟ್ಟ ಮೊತ್ತ ರೂ	ವೆಚ್ಚ ರೂ
2004–05	5,76,39,500	2,72,07,200
2005–06	6,35,22,000	4,33,94,400
2006–07	8,33,07,000	5,92,00,800

ಇ) ಮೇಲಿನ ಪ್ರಶ್ನೆ (ಅ)ಕ್ಕೆ ನೀಡಿದ ಉತ್ತರದಲ್ಲಿ ಕಾಣಿಸಿದ ಕ್ರಮಗಳ ಜೊತೆಗೆ ಜೂನ್ 2007ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಭೆಯನ್ನು ಆಯೋಜಿಸಲಾಗಿತ್ತು

(1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು, (2) ಬೆಂಗಳೂರು ಪೊಲೀಸ್ ಕಮೀಷನರ್, (3) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ, (4) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, (5) ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು, (6) ಡೈರೆಕ್ಟರ್ ಜನರಲ್ ಅಂಡ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಮತ್ತು ಇತರೆ ಸಂಬಂಧಪಟ್ಟ ಅಧಿಕಾರಿಗಳು

ಸದರಿ ಸಭೆಯಲ್ಲಿ ಬಿಕ್ಷಾಟನಾ ಅಧಿನಿಯಮವನ್ನು ಅನುಷ್ಠಾನಗೊಳಿಸುವಂತೆ ಹಾಗೂ ರಾಜ್ಯದಲ್ಲಿ ಬಿಕ್ಷಾಟನಾ ಪದ್ಧತಿಯನ್ನು ನಿರ್ಬಂಧಿಸಲು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ ಅದರಂತೆ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು ಪೊಲೀಸ್ ಕಮೀಷನರ್, ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇವರು ಜೂನ್ ಮತ್ತು ಜುಲೈ 2007ರಲ್ಲಿ ಬಿಕ್ಷುಕರನ್ನು ಬಂಧಿಸಲು ಮತ್ತು ಅವರಿಗೆ ಪರಿಹಾರವನ್ನು ನೀಡಲು ವಿಶೇಷ ಅಂದೋಲನವನ್ನು ಹಮ್ಮಿಕೊಂಡಿದ್ದರು

ಈ) ಕರ್ನಾಟಕ ಬಿಕ್ಷಾಟನಾ ನಿಷೇಧ ಅದಿನಿಯಮ 1975ನ್ನು ಸರ್ಕಾರವು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುತ್ತಿದೆ

638 (462) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) - ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಉದ್ಯೋಗ ವಿನಿಮಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ?

ಆ) ಕಳೆದ ಎರಡು ವರ್ಷಗಳಲ್ಲಿ ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಎಷ್ಟು ಅಭ್ಯರ್ಥಿಗಳು ನೋಂದಾಯಿಸಿದ್ದಾರೆ ? ಮತ್ತು ಎಷ್ಟು ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಕಳೆದ 02 ವರ್ಷಗಳಲ್ಲಿ ನೇಮಕಗೊಂಡಿದ್ದಾರೆ?

ಇ) ನಿರುದ್ಯೋಗಿಗಳಿಗಾಗಿ ಹೊಸ ತರಬೇತಿ ಪ್ರಸ್ತಾವನೆಯು ಸರ್ಕಾರದಲ್ಲಿಯೇ? ಮತ್ತು ಶಿಷ್ಯ ವೇತನ ಏನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) 30

ಆ)

ವರ್ಷ	ನೋಂದಾಯಿಸಿರುವವರು	ಉದ್ಯೋಗ ಪಡೆದಿರುವವರು
2005	1,45,415	1,725
2006	1,07,767	2,290
ಒಟ್ಟು	2,53,182	4,015

ಇ) ಅಂತಹ ಕಾರ್ಯಕ್ರಮ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಇರುವುದಿಲ್ಲ

640 (1008) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗ್ರಾಮೀಣ ಯುವ ಜನತೆಗೆ ತರಬೇತಿಗೊಳಿಸಲು ಕೌಶಲ್ಯ ಆಧಾರಿತ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದ ಅಥವಾ ಮುಂದೆ ಬಂದ ಟ್ರಸ್ಟ್ ಅಥವಾ ಸಂಘಕ್ಕೆ ಹಣಕಾಸಿನ ನೆರವು ನೀಡುವ ಕಾರ್ಯಕ್ರಮಗಳನ್ನೇನಾದರೂ ಸರ್ಕಾರವು ಹೊಂದಿದೆಯೇ ? ಹಾಗಿದ್ದಲ್ಲಿ ವಿವರಗಳನ್ನು ಮತ್ತು ಮಾನದಂಡಗಳನ್ನು ದಯವಿಟ್ಟು ಒದಗಿಸಿ ,

ಆ) ಇಲ್ಲದಿದ್ದಲ್ಲಿ, ಅನೇಕ ಕಾರ್ಖಾನೆಗಳಲ್ಲಿ ಅನೇಕ ಖಾಲಿ ಹುದ್ದೆಗಳು ಇರುವುದರಿಂದ ಶಾಲೆಯಿಂದ ಹೊರಗುಳಿದ ಅನಾನುಕೂಲ ಗ್ರಾಮೀಣರಿಗೆ ಅನುಕೂಲವಾಗುವಂತಹ ಕಾರ್ಯಕ್ರಮವನ್ನು ರೂಪಿಸಲು ಸರ್ಕಾರಕ್ಕೆ ಸಲಹಾತ್ಮಕವಲ್ಲವೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅಂತಹ ಯೋಜನೆ ಇಲ್ಲ

ಆ) ಮಾಡ್ಯುಲಾರ್ ಎಂಪ್ಲಾಯೆಬಲ್ ಸ್ಕಿಲ್ ಯೋಜನೆಯನ್ನು ರೂಪಿಸಲಾಗುತ್ತಿದೆ

641 (1009) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) –ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ನೆರೆ ರಾಜ್ಯವಾದ ಕೇರಳದಲ್ಲಿ ಉನ್ನತ ಶಿಕ್ಷಣದ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯಕ್ಕಿಂತ ಹೆಚ್ಚು ಸೀಟುಗಳ ಕೋಟಾವನ್ನು ಪಡೆದು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರವು ವೈದ್ಯಕೀಯ, ಇಂಜಿನಿಯರಿಂಗ್, ಬಯೋಟೆಕ್ನಾಲಜಿ, ಬಿ ಎಸ್ಸಿ, (ನರ್ಸಿಂಗ್) ಮತ್ತು ದಂತ ವೈದ್ಯಕೀಯ ಇತ್ಯಾದಿ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ಸ್‌ಗೆ ವ್ಯಾಸಂಗ ಮಾಡಲು ಕೋಟಾ ಸೀಟುಗಳನ್ನು ಹೆಚ್ಚಿಸಿ ಏಕೆ ಅವಕಾಶವನ್ನು ನೀಡಬಾರದು ?

ಶ್ರೀ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

ಅ) ಇಲ್ಲ ಉದ್ಭವಿಸುವುದಿಲ್ಲ

642 (283) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) –ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜಾತಿ ಅಲ್ಪಸಂಖ್ಯಾತ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳಿಗೆ ಸರ್ಕಾರವು ಸೀಟ್ ಮ್ಯಾಟ್ರಿಕ್ಸ್ ನೀಡಲಾಗಿತ್ತು (ಕಾಲೇಜುವಾರು ವಿವರ ನೀಡುವುದು) ?

ಶ್ರೀ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

	ವೈದ್ಯಕೀಯ ಕಾಲೇಜುಗಳು	
ಅ)	ಧಾರ್ಮಿಕ ಅಲ್ಪಸಂಖ್ಯಾತ	3
	ಭಾಷಾ ಅಲ್ಪಸಂಖ್ಯಾತ	7
	ದಂತ ವೈದ್ಯಕೀಯ ಕಾಲೇಜುಗಳು	
	ಧಾರ್ಮಿಕ ಅಲ್ಪಸಂಖ್ಯಾತ	3
	ಭಾಷಾ ಅಲ್ಪಸಂಖ್ಯಾತ	9

ಕಾಲೇಜುವಾರು ವಿವರಗಳು ಕೆಳಕಂಡಂತಿದೆ

ವೈದ್ಯಕೀಯ

ಧಾರ್ಮಿಕ ಅಲ್ಪಸಂಖ್ಯಾತ

ಕ್ರ ಸಂ	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1	ಅಲ್-ಅಮೀನ್ ಮೆಡಿಕಲ್ ಕಾಲೇಜ್, ಬಿಜಾಪುರ	100	40
2	ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜು, ಮಂಗಳೂರು	100	40
3	ಖಾಜಾ ಬಂದೇನವಾಜ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಗುಲ್ಬರ್ಗ	100	40

ಭಾಷಾ ಅಲ್ಪಸಂಖ್ಯಾತ

ಕ್ರ ಸಂ	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1	ವೈದೇಹಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬೆಂಗಳೂರು	100	40
2	ಕೆ ಎಸ್ ಹೆಗ್ಡೆ ಮೆಡಿಕಲ್ ಅಕಾಡೆಮಿ, ಮಂಗಳೂರು	100	40
3	ನವೋದಯ, ಮೆಡಿಕಲ್ ಕಾಲೇಜ್, ರಾಯಚೂರು	100	40
4	ಎಸ್ ಡಿ ಎಂ ಮೆಡಿಕಲ್ ಕಾಲೇಜ್, ಧಾರವಾಡ	100	40
5	ಎ ಜೆ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಮಂಗಳೂರು	100	40
6	ಎಂ ವಿ ಜೆ ಮೆಡಿಕಲ್ ಕಾಲೇಜ್, ಬೆಂಗಳೂರು	100	40
7	ರಾಜರಾಜೇಶ್ವರಿ ಮೆಡಿಕಲ್ ಕಾಲೇಜ್, ಬೆಂಗಳೂರು	100	40

ದಂತ ವೈದ್ಯಕೀಯ

ಧಾರ್ಮಿಕ ಅಲ್ಪಸಂಖ್ಯಾತ

ಕ್ರ ಸಂ	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1	ಆಲ್-ಅಮೀನ್ ಡೆಂಟಲ್ ಕಾಲೇಜ್, ಬಿಜಾಪುರ	40	16
2	ಅಲ್-ಬದಾರ್ ರೂರಲ್ ಡೆಂಟಲ್ ಕಾಲೇಜ್,	40	16
3	ಫರೂಕೀಯ ಡೆಂಟಲ್ ಕಾಲೇಜ್, ಮೈಸೂರು	40	16

ಭಾಷಾ ಅಲ್ಪಸಂಖ್ಯಾತ

ಕ್ರ ಸಂ	ಕಾಲೇಜುಗಳು	ಒಟ್ಟು ಸೀಟುಗಳ ಸಂಖ್ಯೆ	ಸರ್ಕಾರಿ ಸೀಟುಗಳ ಸಂಖ್ಯೆ
1	ಎಂ ಡಿ ಎಂ ಡೆಂಟಲ್ ಕಾಲೇಜ್, ಧಾರವಾಡ	100	40
2	ಎ ಬಿ ಶೆಟ್ಟಿ ಮೆಮೋರಿಯಲ್ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಮಂಗಳೂರು	100	40
3	ಆಕ್ಸ್‌ಫರ್ಡ್ ಡೆಂಟಲ್ ಕಾಲೇಜ್, ಬೆಂಗಳೂರು	100	40
4	ಮಾರುತಿ ಡೆಂಟಲ್ ಕಾಲೇಜ್, ಬೆಂಗಳೂರು	100	40

1	2	3	4
5	ಎ ಜೆ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಮಂಗಳೂರು	100	40
6	ಕೂರ್ಗ್ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ವಿರಾಜಪೇಟೆ	40	16
7	ರಾಜರಾಜೇಶ್ವರಿ ಡೆಂಟಲ್ ಕಾಲೇಜ್, ಬೆಂಗಳೂರು	60	24
8	ಬೆಂಗಳೂರು ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಬೆಂಗಳೂರು	60	24
9	ವೈದೇಹಿ ಇನ್ಸ್‌ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಬೆಂಗಳೂರು	60	24

ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕಿರುವ ನಿಯಮಗಳು

643 (1136) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ದಾಖಲಾತಿಗೆ ಅನುಸರಿಸುವ ನಿಯಮಗಳೇನು ,

ಆ) ಪ್ರತಿ ಮೊರಾರ್ಜಿದೇಸಾಯಿ ವಸತಿ ಶಾಲೆಗೆ ಪ್ರತಿವರ್ಷ ಎಷ್ಟು ವಿದ್ಯಾರ್ದಿಗಳನ್ನು ದಾಖಲಾತಿ ಮಾಡಲಾಗುತ್ತಿದೆ ,

ಇ) ಈ ವರ್ಷ ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಎಷ್ಟು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ , ಅವರುಗಳ ವಿಳಾಸವೇನು ,

ಈ) ಯಾವ ಮಾನದಂಡವನ್ನು ಅನುಸರಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ,

ಉ) ಇವರುಗಳು ಆಯ್ಕೆ ಪರೀಕ್ಷೆಯಲ್ಲಿ ಪಡೆದ ಅಂಕಗಳ ವಿವರವನ್ನು ನೀಡುವುದು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ರಾಜ್ಯದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಶಿಕ್ಷಣ ಇಲಾಖೆಯ ಡಯಟ್ ಸಂಸ್ಥೆ ಮುಖಾಂತರ ಪ್ರವೇಶ ಪರೀಕ್ಷೆ ನಡೆಸಿ ಅಂಕಗಳ ಅರ್ಹತೆ ಮತ್ತು ಮೀಸಲಾತಿಗನುಗುಣವಾಗಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ ಹಾಗೂ ಜಿಲ್ಲಾ ಮಟ್ಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಅಧ್ಯಕ್ಷತೆಯಲ್ಲಿ ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸಿ ಸಮಿತಿಯ ಮುಖಾಂತರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು ಇದಲ್ಲದೆ ಕೆಳಕಂಡ ನಿಯಮಗಳನ್ನು ಅನುಸರಿಸಲಾಗುತ್ತಿದೆ

1) ಮಂಜೂರಾದ ಎಲ್ಲಾ ಸೀಟುಗಳನ್ನು ಆಯಾಯ ಜಿಲ್ಲೆಯ ಅರ್ಹ ಮಕ್ಕಳಿಗೆ ಮೀಸಲಿಡಲಾಗುವುದು

2) ಪ್ರತಿ ವರ್ಗದ ಒಟ್ಟು ಸೀಟಿನಲ್ಲಿ ಶೇ 50 ರಷ್ಟು ಸೀಟುಗಳನ್ನು ಹೆಣ್ಣು ಮಕ್ಕಳಿಗೆ ಮೀಸಲಿಡಲಾಗಿದೆ

ಆ) ಪ್ರತಿವರ್ಷ 6ನೇ ತರಗತಿಗೆ 50 ವಿದ್ಯಾರ್ಥಿಗಳನ್ನು 25/25ರ ಅನುಪಾತದಲ್ಲಿ ಬಾಲಕ ಹಾಗೂ ಬಾಲಕಿಯರನ್ನು ದಾಖಲಾತಿ ಮಾಡಿಕೊಳ್ಳಲಾಗುವುದು

ಇ) ಪ್ರಸಕ್ತ ಸಾಲಿನಲ್ಲಿ ಒಟ್ಟು 80 ವಿದ್ಯಾರ್ಥಿಗಳನ್ನು ವಿವಿಧ ತರಗತಿಗಳಿಗೆ ಆಯ್ಕೆ ಮಾಡಲಾಗಿದ್ದು ಅವರುಗಳ ಹೆಸರು ಹಾಗೂ ವಿಳಾಸವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಈ) ಬ್ರಹ್ಮಾವರ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಪರಿಶಿಷ್ಟ ಜಾತಿಯ ಶಾಲೆಯಾಗಿರುವುದರಿಂದ ಈ ವಸತಿ ಶಾಲೆಗೆ ಶೇ 75% ಪರಿಶಿಷ್ಟ ಜಾತಿ ಹಾಗೂ ಶೇ 25% ಪರಿಶಿಷ್ಟ ವರ್ಗ ಹಾಗೂ ಇತರೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಹಾಗೂ ಪ್ರಶ್ನೆ 'ಅ'ಗೆ ನೀಡಿರುವ ಉತ್ತರದಲ್ಲಿನ ನಿಯಮಗಳನ್ನು ಅನುಸರಿಸಲಾಗಿದೆ

ಉ) ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳ ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಮಾನ್ಯ ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ರವರ ಪ್ರಶ್ನೆ ಸಂಖ್ಯೆ 1136ಕ್ಕೆ ಅನುಬಂಧ - I
ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ, 52 ಹೇರೂರು, ಬ್ರಹ್ಮಾವರ ಉಡುಪಿ ತಾಲ್ಲೂಕು/ಜಿಲ್ಲೆ ಇಲ್ಲಿನ 2007-08ನೇ ಸಾಲಿಗೆ ಪ್ರವೇಶ ದಾಖಲಾತಿಗಾಗಿ ದಿನಾಂಕ 20-05-2007 ರಂದು ನಡೆದ ಫಲಿತಾಂಶ

6ನೇ ತರಗತಿ

ಕ್ರಮ ಸಂ	ವಿದ್ಯಾರ್ಥಿಗಳ ಹೆಸರು	ತಂದೆಯ ಹೆಸರು/ವಿಳಾಸ	ಜಾತಿ	ಲಿಂಗ	ಪಡೆದ ಅಂಕಗಳು (100)ರಲ್ಲಿ	ಫಲಿತಾಂಶ
1	2	3	4	5	6	7
1	ದೀಪಕ್	ಮಹೇಶ ಕೋಡ್ಲುಗುಡ್ಡೆ, ಅಂಚೆ ಕನ್ಯಾನ ತಲ್ಲೂರು, ಕುಂದಾಪುರ ತಾಲೂಕು	ಪ ಜಾತಿ	ಗಂಡು	69	ಉತ್ತೀರ್ಣ
2	ಕೆ ಅವಿನಾಶ್	ರವಿ ಕೊಡ್ಲುಗುಡ್ಡ, ಅಂಚೆ ಕನ್ಯಾನ ತಲ್ಲೂರು, ಕುಂದಾಪುರ ತಾಲೂಕು	ಪ ಜಾತಿ	ಗಂಡು	69	ಉತ್ತೀರ್ಣ
3	ಎಸ್ ಅಶ್ವಿನಿ	ಶೀನಾ ಬೆಳಗೊಳ, ಚಿಕ್ಕಮಗಳೂರು ಲಕ್ಷ್ಮಣ ಬೊಗಸೆ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	64	ಉತ್ತೀರ್ಣ
4	ಬಿ ಎಲ್ ರಾಧಾ	ಲಕ್ಷ್ಮಣ ಬೊಗಸೆ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	63	ಉತ್ತೀರ್ಣ

1	2	3	4	5	6	7
5	ಬಿ ಆರ್ ಚೈತ್ರಾ	ಬಿ ಕೆ ರಮೇಶ್ ಬೆಳಗೊಳ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	62	ಉತ್ತೀರ್ಣ
6	ಶ್ರೀಧರ	ನೀಲಕಂಠ ಕೊಡ್ಲುಗುಡ್ಡ, ಅಂಚೆ ಕನ್ಯಾನ ತಲ್ಲೂರು, ಕುಂದಾಪುರ ತಾಲೂಕು	ಪ ಜಾತಿ	ಗಂಡು	61	ಉತ್ತೀರ್ಣ
7	ಅಶ್ವಿನಿ	ಗಣಪ ಕಬ್ಬಿನಾಲೆ, ಹಳ್ಳಿಹೊಳೆ ಹೊಸಬಾಳು, ಕುಂದಾಪುರ	ಪ ಜಾತಿ	ಹೆಣ್ಣು	61	ಉತ್ತೀರ್ಣ
8	ಹೇಮಲತಾ	ಗೋವಿಂದ ಹಸ ಕಾರಿಬೈಲು ಕೆರಾಡಿ ಗ್ರಾಮ ಕುಂದಾಪುರ ತಾಲೂಕು	ಪ ಜಾತಿ	ಹೆಣ್ಣು	61	ಉತ್ತೀರ್ಣ
9	ತಾರಾನಾಥ	ಯಂಕಹಸ್ಲ ಕಾರಿಬೈಲು, ಕರಾಡಿ ಗ್ರಾಮ ಕುಂದಾಪುರ ತಾಲೂಕು	ಪ ಜಾತಿ	ಗಂಡು	60	ಉತ್ತೀರ್ಣ
10	ಟಿ ರಾಘವೇಂದ್ರ	ಟಿ ತಿಪ್ಪಸ್ವಾಮಿ ಟಿ ವಿ ಹಳ್ಳಿ ಅಂಚೆ ಚಳ್ಳಕೆರೆ ತಾಲೂಕು ಚಿತ್ರದುರ್ಗ ಜಿಲ್ಲೆ	ಪ ಜಾತಿ	ಗಂಡು	58	ಉತ್ತೀರ್ಣ
11	ದೀಪ	ಲಕ್ಷ್ಮಣ ಗಣಪತಿ ಕಟ್ಟೆ, ಕಟ್‌ಬೆಲ್ತೂರು, ಕುಂದಾಪುರ ತಾಲೂಕು	ಪ ಜಾತಿ	ಹೆಣ್ಣು	58	ಉತ್ತೀರ್ಣ

1	2	3	4	5	6	7
12	ಆಶಾ ಎಸ್	ಶೇಖರ ಬೊಗಸೆ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	58	ಉತ್ತೀರ್ಣ
13	ಸಂಗೀತಾ	ಶಂಕರ ಮೊಗವೀರ	ಪ ಜಾತಿ	ಹೆಣ್ಣು	55	ಉತ್ತೀರ್ಣ
14	ಬಿ ಸಿ ಪ್ರವೀಣ	ಚಂದ್ರಯ್ಯ ಬೊಗಸೆ, ಚಿಕ್ಕಮಗಳೂರು ಜಿಲ್ಲೆ	ಪ ಜಾತಿ	ಗಂಡು	48	ಉತ್ತೀರ್ಣ
15	ಆರ್ ಮಂಜುನಾಥ	ರುದ್ರಪ್ಪ ಕೊಡಿಹಳ್ಳಿ, ಚಳ್ಳಕೆರೆ, ಚಿತ್ರದುರ್ಗ	ಪ ಜಾತಿ	ಗಂಡು	45	ಉತ್ತೀರ್ಣ

ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ, 52 ಹೇರೂರು, ಬ್ರಹ್ಮಾವರ ಉಡುಪಿ ತಾಲ್ಲೂಕು/ಜಿಲ್ಲೆ ಇಲ್ಲಿನ 2007-08ನೇ ಸಾಲಿಗೆ ಪ್ರವೇಶ ದಾಖಲಾತಿಗಾಗಿ ದಿನಾಂಕ 20-05-2007 ರಂದು ನಡೆದ ಫಲಿತಾಂಶ

7ನೇ ತರಗತಿ

ಕ್ರಮ ಸಂ	ವಿದ್ಯಾರ್ಥಿಗಳ ಹೆಸರು	ತಂದೆಯ ಹನರು/ವಿಳಾಸ	ಜಾತಿ	ಲಿಂಗ	ಪಡೆದ ಅಂಕಗಳು (100)ರಲ್ಲಿ	ಫಲಿತಾಂಶ
1	2	3	4	5	6	7
1	ಎನ್ ವಿ ಮಹೇಶ್	ವಸಂತ ಚಿಕ್ಕಮಗಳೂರು, ಬೊಗಸೆ	ಪ ಜಾತಿ	ಗಂಡು	57	ಉತ್ತೀರ್ಣ
2.	ಶಶಿಕಲಾ	ಗಿರಿಜಾ ಕಾರಿಬ್ಯೈಲು, ಕೆರಾಡಿ ಗ್ರಾಮ ಹಳ್ಳಿಹೊಳೆ, ಕುಂದಾಮರ	ಪ ಜಾತಿ	ಹೆಣ್ಣು	55	ಉತ್ತೀರ್ಣ
3	ಡಿ ಜ್ಯೋತಿ	ದಾನು ಹರಿಜನ	ಪ ಜಾತಿ	ಹೆಣ್ಣು	54	ಉತ್ತೀರ್ಣ
4	ಶೈಲಜ	ಗೋವಿಂದ ಕಬ್ಬಿನಾಲೆ ಹಳ್ಳಿಹೊಳೆ, ಕುಂದಾಮರ ತಾಲೂಕು	ಪ ಜಾತಿ	ಹೆಣ್ಣು	53	ಉತ್ತೀರ್ಣ
5	ಸೂರ್ಯ	ರಾಮ ಕಾರಿಬ್ಯೈಲು, ಕೆರಾಡಿ ಗ್ರಾಮ, ಹಳ್ಳಿಹೊಳೆ, ಕುಂದಾಮರ	ಪ ಜಾತಿ	ಗಂಡು	50	ಉತ್ತೀರ್ಣ

1	2	3	4	5	6	7
6	ಸುಚಿತ್ರಾ	ಮಹಾಬಲ ಕಾರಿಬ್ಬೈಲ್, ಕೆರಾಡಿ, ಕುಂದಾಮರ	ಪ ಜಾತಿ	ಹೆಣ್ಣು	51	ಉತ್ತೀರ್ಣ
7	ಶ್ವೇತಾ	ಗೋವಿಂದ ಕತ್ತುಕೋಡು, ಕೆರಾಡಿ ಗ್ರಾಮ ಕುಂದಾಮರ ತಾಲೂಕು	ಪ ಜಾತಿ	ಹೆಣ್ಣು	50	ಉತ್ತೀರ್ಣ
8	ಸಂತೋಷ	ಸಂಜೀವ ಬೆಳಗೊಳ, ಬೊಗಸೆ ಚಿಕ್ಕಮಗಳೂರು	ಪ ಜಾತಿ	ಗಂಡು	48	ಉತ್ತೀರ್ಣ
9	ದಿನೇಶ	ಗಿರಿಜಾ, ಕತ್ತುಕೋಡು ಕೆರಾಡಿ ಗ್ರಾಮ, ಕುಂದಾಮರ ತಾಲೂಕು	ಪ ಜಾತಿ	ಗಂಡು	41	ಉತ್ತೀರ್ಣ
10	ಮೃತ್ಯುಂಜಯ	ಜಯಚಂದ್ರ, ಹರಿಜನ	ಪ ಜಾತಿ	ಗಂಡು	37	ಉತ್ತೀರ್ಣ
11	ದಿವಾಕರ	ಗಿರಿಜಾ, ಕತ್ತುಕೋಡು ಕೆರಾಡಿ ಗ್ರಾಮ, ಕುಂದಾಮರ ತಾಲೂಕು	ಪ ಜಾತಿ	ಗಂಡು	47	ಉತ್ತೀರ್ಣ
12	ಡಿ ಎಸ್ ಸವಿತಾ	ಬಿ ಕೆ ಸ್ವಾಮಿ ಬೆಳಗೊಳ, ಬೊಗಸೆ ಚಿಕ್ಕಮಗಳೂರು	ಪ ಜಾತಿ	ಹೆಣ್ಣು	46	ಉತ್ತೀರ್ಣ
13	ಯೋಗೀಶ	ಮಹಾಬಲ ಗುಡ್ಡೆಯಂಗಡಿ ಕನ್ಯಾನ ತಾಲೂಕು ಕುಂದಾಮರ	ಪ ಜಾತಿ	ಗಂಡು	46	ಉತ್ತೀರ್ಣ

1	2	3	4	5	6	7
14	ವಿಮಲಾಕ್ಷಿ	ಆನಂದ ಹಳ್ಳಿಹೊಳೆ, ಕುಂದಾಪುರ	ಪ ಜಾತಿ	ಹೆಣ್ಣು	42	ಉತ್ತೀರ್ಣ
		ಪರಿಶಿಷ್ಟ ಪಂಗಡ				
1	ನಾಗಭೂಷಣ ನಾಯ್ಕ	ಆನಂದ ನಾಯ್ಕ	ಪ ವರ್ಗ	ಗಂಡು	56	ಉತ್ತೀರ್ಣ

ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ, 52 ಹೇರೂರು, ಬ್ರಹ್ಮಾವರ ಉಡುಪಿ ತಾಲ್ಲೂಕು/ಜಿಲ್ಲೆ ಇಲ್ಲಿನ 2007-08ನೇ ಸಾಲಿಗೆ ಪ್ರವೇಶ ದಾಖಲಾತಿಗಾಗಿ ದಿನಾಂಕ 20-05-2007 ರಂದು ನಡೆದ ಫಲಿತಾಂಶ

8ನೇ ತರಗತಿ

ಕ್ರಮ ಸಂ	ವಿದ್ಯಾರ್ಥಿಗಳ ಹೆಸರು	ತಂದೆಯ ಹೆಸರು/ವಿಳಾಸ	ಜಾತಿ	ಲಿಂಗ	ಪಡೆದ ಅಂಕಗಳು (100)ರಲ್ಲಿ	ಫಲಿತಾಂಶ
1	2	3	4	5	6	7
1	ಇಂದುದರ ಪವಾರ್	ನಾಗರಾಜ ನಾಯ್ಕ ತಿಪ್ಪಯ್ಯನ ಹಳ್ಳಿ ಚಳ್ಳಕೆರೆ ತಾಲೂಕು ಚಿತ್ರದುರ್ಗ	ಪ ಜಾತಿ	ಗಂಡು	61	ಉತ್ತೀರ್ಣ
2.	ಬಿ ದಿವ್ಯ	ಬಾಬು ವಿ ವಿ ಎಸ್ ಸಂಸ್ಥೆ, ಸಿರವಾಸೆ, ಚಿಕ್ಕಮಂಗಳೂರು	ಪ ಜಾತಿ	ಹೆಣ್ಣು	58	ಉತ್ತೀರ್ಣ
3	ಕಾಳಯ್ಯ	ರಮೇಶ್ ಬಿದ್ರೆ, ಚಿಕ್ಕಮಗಳೂರು	ಪ ಜಾತಿ	ಗಂಡು	58	ಉತ್ತೀರ್ಣ
4	ಶೋಭಾ	ಸಂಜೀವ ಬೆಳಗೊಳ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	54	ಉತ್ತೀರ್ಣ
5	ಸುಜಾತ	ಬೊಂಜಿಲಾ ಬೆಳಗೊಳ, ಸಿರವಾಸೆ, ಬೊಗಸೆ	ಪ ಜಾತಿ	ಹೆಣ್ಣು	47	ಉತ್ತೀರ್ಣ
6	ಮನೋಹರ	ಲಕ್ಷ್ಮಣ ಗಣಪತಿ ಕಟ್ಟೆ, ಕಟ್‌ಬೆಲ್ತೂರು ಅಂಚೆ, ಕುಂದಾಪುರ ತಾಲ್ಲೂಕು	ಪ ಜಾತಿ	ಗಂಡು	47	ಉತ್ತೀರ್ಣ

1	2	3	4	5	6	7
7	ಸುರೇಂದ್ರ	ಸೋಮಶೇಖರ ಹರಿಜನ, ಉಡುಪಿ	ಪ ಜಾತಿ	ಗಂಡು	46	ಉತ್ತೀರ್ಣ
8	ಪ್ರಹ್ಲಾದ ಪಿ	ಪಾಪಯ್ಯ	ಪ ಜಾತಿ	ಗಂಡು	44	ಉತ್ತೀರ್ಣ
9	ಮಂಜುಳಾ	ರಘುನಾಥ, ಕೋಟ, ಉಡುಪಿ	ಪ ಜಾತಿ	ಹೆಣ್ಣು	43	ಉತ್ತೀರ್ಣ
10	ಜೆ ಕುಮಾರ್	ಗುಲಾಬಿ (ಜಾಗಪ್ಪ) ಬೊಗಸೆ, ಚಿಕ್ಕಮಂಗಳೂರು	ಪ ಜಾತಿ	ಗಂಡು	39	ಉತ್ತೀರ್ಣ
11	ಶೇಖರ	ಮಂಜ, ಹಳ್ಳಿಹೊಳೆ, ಕುಂದಾಪುರ	ಪ ಜಾತಿ	ಗಂಡು	38	ಉತ್ತೀರ್ಣ
12	ಕೆ ಸಿ ನಳಿನಿ	ಚಿಕ್ಕ, ಕಾರಿಬ್ಯೆಲ್, ಕೆರಾಡಿ ಕುಂದಾಪುರ	ಪ ಜಾತಿ	ಹೆಣ್ಣು	37	ಉತ್ತೀರ್ಣ
13	ವೀರೇಂದ್ರ ಎ ಎಂ	ಮೋಟಯ್ಯ, ಬೊಗಸೆ, ಚಿಕ್ಕಮುಗಳೂರು	ಪ ಜಾತಿ	ಗಂಡು	36	ಉತ್ತೀರ್ಣ
14	ರಾಧ ವಿ	ಫಿಸುರ ಬೆಳಗೊಳ, ಸಿರವಾಸೆ, ಬೊಗಸೆ	ಪ ಜಾತಿ	ಹೆಣ್ಣು	36	ಉತ್ತೀರ್ಣ
15	ಸವಿತ	ಮಂಜು ಹಳ್ಳಿಹೊಳೆ, ಕುಂದಾಪುರ	ಪ ಜಾತಿ	ಹೆಣ್ಣು	36	ಉತ್ತೀರ್ಣ

1	2	3	4	5	6	7
16	ಪ್ರಿಯಾಂಕ	ನಾರಾಯಣ ದರ್ಖಾಸ್ ಮನೆ, ದುರ್ಗದಬೆಟ್ಟ, ಕೊಪ್ಪ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	35	ಉತ್ತೀರ್ಣ
		ಪರಿಶಿಷ್ಟ ಪಂಗಡ 6ನೇ ತರಗತಿ				
1	ವಿದ್ಯಾವತಿ	ಬಾಬು ನಾಯ್ಕ ವಾಟೆಗುಂಡಿ, ಬೆಳ್ಕಲ್, ಮುದೂರು ಗ್ರಾಮ ಕುಂದಾಪುರ ತಾಲೂಕು (ನಕ್ಸಲ್ ಪ್ರದೇಶ)	ಪ ಪಂಗಡ	ಗಂಡು	74	ಉತ್ತೀರ್ಣ
2	ಸುಮಿತ್ರ	ಮಂಜು ನಾಯ್ಕ ವಾಟೆಗುಂಡಿ, ಜಡ್ಕಲ್ ಗ್ರಾಮ, ಕುಂದಾಪುರ (ನಕ್ಸಲ್ ಪ್ರದೇಶ)	ಪ ಪಂಗಡ	ಹೆಣ್ಣು	72	ಉತ್ತೀರ್ಣ
3	ಸಂಧ್ಯಾ	ಶೇಖರ ನಾಯ್ಕ ಕೂಡ್ಲಾಡಿ, ಕನ್ನಾಲು, ಕುಂದಾಪುರ ತಾಲೂಕು	ಪ ವರ್ಗ	ಹೆಣ್ಣು	65	ಉತ್ತೀರ್ಣ
4	ರವೀಂದ್ರ	ರಾಜು ನಾಯ್ಕ ಬೆಳಕಲ್, ಮುದೂರು ಗ್ರಾಮ, ಕುಂದಾಪುರ (ನಕ್ಸಲ್ ಪ್ರದೇಶ)	ಪ ಪಂಗಡ	ಗಂಡು	62	ಉತ್ತೀರ್ಣ
5	ಸುಪ್ರಿತಾ	ಶಿವರಾಮ ನಾಯ್ಕ ಕೊಡ್ಲಾಡಿ, ಕನ್ನಾಲು, ಕುಂದಾಪುರ ತಾಲೂಕು	ಪ ವರ್ಗ	ಹೆಣ್ಣು	61	ಉತ್ತೀರ್ಣ

1	2	3	4	5	6	7
6	ಸುಕನ್ಯಾ	ಶೇಖರ ನಾಯ್ಕ, ಕೊಡ್ಲಾಡಿ, ಕನ್ನಾಲು ಕುಂದಾಮರ, ತಾಲೂಕು	ಪ ವರ್ಗ	ಹೆಣ್ಣು	61	ಉತ್ತೀರ್ಣ
		ಪರಿಶಿಷ್ಟ ಪಂಗಡ- 8ನೇ ತರಗತಿ				
1	ಲತಾ	ಶಂಕರ ನಾಯ್ಕ ಕಳಹಂಗಾರು, ಕುಂದಾಮರ ತಾಲೂಕು	ಪ ವರ್ಗ	ಹೆಣ್ಣು	69	ಉತ್ತೀರ್ಣ
2	ಜಯಲಕ್ಷ್ಮಿ	ಶೇಷ ನಾಯ್ಕ ಬೆಳ್ಕಲ್ ಮನೆ, ಮುದೂರು ಗ್ರಾಮ, ಕುಂದಾಮರ ತಾಲೂಕು	ಪ ಪಂ	ಹೆಣ್ಣು	55	ಉತ್ತೀರ್ಣ
3	ಮನೋಜ್ ಕುಮಾರ್ ಜಿ ಎ	ಅಜ್ಜಣ್ಣ	ಪ ವರ್ಗ	ಗಂಡು	54	ಉತ್ತೀರ್ಣ
4	ಹನುಮಂತ	ಬುದ್ದಿವಂತಪ್ಪ ಅಂಬಿಗೆರೆ, ಕೊಟ್ನಹಳ್ಳಿ, ಬಾದಾಮಿ ತಾಲೂಕು, ಬಾಗಲಕೋಟೆ ಜಿಲ್ಲೆ	ಪ ಪಂ	ಗಂಡು	54	ಉತ್ತೀಣ
5	ಶ್ರೀನಿಧಿ	ನರಸಿಂಹ ನಾಯ್ಕ ಕಿರುಬೇರು, ಹಳ್ಳಿಹೊಳೆ ಗ್ರಾಮ ಕುಂದಾಮರ ತಾಲೂಕು (ನಕ್ಸಲ್ ಪ್ರದೇಶ)	ಪ ಪಂಗಡ	ಹೆಣ್ಣು	52	ಉತ್ತೀರ್ಣ

1	2	3	4	5	6	7
6	ರೂಪಶ್ರೀ	ರಘು ನಾಯ್ಕ ಸಾಬ್ರ ಅಂಗಡಿ, ಹಳ್ಳಿಹೊಳೆ, ಕುಂದಾಪುರ	ಪ ಪಂ	ಹೆಣ್ಣು	51	ಉತ್ತೀರ್ಣ
7	ಶೃತಿ	ಕೃಷ್ಣ ನಾಯ್ಕ, ಕುಂಡ್ಲಬೈಲು ಮನೆ, ಹಳ್ಳಿಹೊಳೆ, ಕು ಾಪುರ	ಪ ಪಂ	ಹೆಣ್ಣು	49	ಉತ್ತೀರ್ಣ
8	ನಯನ	ನ ರಾಯಣ ನಾಯ್ಕ ಕೊಡ್ಲಿ, ವ್ರಾಟೆಗುಂಡಿ ಕುಂದಾಪುರ ತಾಲೂಕು	ಪ ಪಂ	ಹೆಣ್ಣು	49	ಉತ್ತೀರ್ಣ
9	ಉದಯ	ಸೋಮ ನಾಯ್ಕ ಚಿತ್ತೂರು, ಕೆಪ್ಪೆಕೊಡ್ಲು, ಚಿತ್ತೂರು ಗ್ರಾಮ	ಪ ಪಂ	ಗಂಡು	48	ಉತ್ತೀರ್ಣ
10	ಯು ಶಾಂತ	ನಾಗೇಶ ನಾಯ್ಕ	ಪ ಪಂ	ಹೆಣ್ಣು	48	ಉತ್ತೀರ್ಣ
11	ದೀಪಾ	ಶಂಕರ ನಾಯ್ಕ ರಾಂಪೆಜಡ್ಡು, ಹೊಸಂಗಡಿ ಗ್ರಾಮ, ಕುಂದಾಪುರ ತಾಲೂಕು	ಪ ಪಂ	ಹೆಣ್ಣು	47	ಉತ್ತೀರ್ಣ

1	2	3	4	5	6	7
12	ಶಶಿಧರ ನಾಯ್ಕ	ರಾಮಚಂದ್ರ ನಾಯ್ಕ ಕಂಬಿನಬೇರು, ಹಯ್ಯಂಗಾರ್, ಕೆರಾಡಿ ಗ್ರಾಮ, ಕುಂದಾಪುರ ತಾಲೂಕು	ಪ ಪಂಗಡ	ಗಂಡು	47	ಉತ್ತೀರ್ಣ
13	ಸುರೇಶ ನಾಯ್ಕ	ಶೇಖರ ನಾಯ್ಕ ಕೊಡ್ಲಾಡಿ, ಕನ್ನಾಲು, ಕುಂದಾಪುರ ತಾಲೂಕು	ಪ ಪಂಗಡ	ಗಂಡು	44	ಉತ್ತೀರ್ಣ
14	ಸುಚೇತ	ಮಂಜುನಾಥ ನಾಯ್ಕ, ಯಳಜಿತ್, ಉಳ್ಳೂರೆ ಗ್ರಾಮ, ಕುಂದಾಪುರ ತಾಲೂಕು	ಪ ಪಂಗಡ	ಹೆಣ್ಣು	37	ಉತ್ತೀರ್ಣ

ವಿದ್ಯಾರ್ಥಿಗಳ ವಿವರ

ಇತರ (ಹಿಂದುಳಿದ ವರ್ಗ)

ಕ್ರ ಸಂ		ಅಭ್ಯರ್ಥಿಗಳ ಹೆಸರು	ತರಗತಿ	ತಂದೆಯ ಹೆಸರು/ವಿಳಾಸ	ಜಾತಿ	ಪಡೆದ ಅಂಕ
1		2	3	4	5	6
1	8	ದರ್ಶನ್ ಕುಮಾರ್	6 ನೇ	ರತ್ನಾಕರ ಶೆಟ್ಟಿ, ಮುದ್ದೂರು ಗ್ರಾಮ, ಕುಂದಾಪುರ ತಾಲೂಕು	ಒ ಬಿ ಸಿ	70
2.	1	ರಕ್ಷಿತ ವಿ ಶೆಟ್ಟಿ	7 ನೇ	ಪ್ರಭಾಕರ ಶೆಟ್ಟಿ, ಮುದೂರು ಬೆಳ್ವೆ, ಕುಂದಾಪುರ ತಾಲೂಕು	ಒ ಬಿ ಸಿ	67
3	9	ಅಕ್ಷತಾ	7 ನೇ	ಶಿವರಾಮು, ಕೆರಾಡಿ ಗ್ರಾಮ ಕುಂದಾಪುರ ತಾಲೂಕು	ಒ ಬಿ ಸಿ	49
4	12	ಪದ್ಮಾವತಿ	8 ನೇ	ನಾರಾಯಣ ಭೋವಿ, ಹಳ್ಳಿಹೊಳೆ ಕುಂದಾಪುರ ತಾಲೂಕು	ಒ ಬಿ ಸಿ	52
5	16	ನವೀನ ನಾಯ್ಕ	8 ನೇ	ಲಕ್ಷ್ಮಣ ನಾಯ್ಕ, ಅಲ್ಬಾಡಿ ಮೂರುಕೈ ಬೆಳ್ವೆ, ಕುಂದಾಪುರ	ಒ ಬಿ ಸಿ	50
6	18	ಪ್ರೇಮ	8 ನೇ	ಶೇಷ ಬೋವಿ, ಹಳ್ಳಿಹೊಳೆ ಕುಂದಾಪುರ ತಾಲೂಕು	ಒ ಬಿ ಸಿ	46
7	19	ಶಕೀಲಾ	8 ನೇ	ಸಂಜು ಬೋವಿ, ಹಳ್ಳಿಹೊಳೆ ಕುಂದ್ಲಬೈಲು, ಕುಂದಾಪುರ	ಒ ಬಿ ಸಿ	44

1		2	3	4	5	6
8	20	ಸುಮಿತ್ರ	8 ನೇ	ಶೀನಾ ಬೋವಿ, ಮುದ್ದೂರು ತಾರಿಕೊಪ್ಪ, ಜಡ್ಕಲ್	ಒ ಬಿ ಸಿ	43
9	8	ರೋಹಿತ್ ಆರ್ ಜತ್ತನ್	6 ನೇ	ರಘು ಬಿ ಜತ್ತನ್ ಹೆರ್ಯಾಭೆಟ್ಟು, ಉಪ್ಪೂರು, ಉಡುಪಿ	ಇತರ	63
10	11	ಬಾಮಿನಿ	6 ನೇ	ಲಕ್ಷ್ಮಿ ಪೂಜಾರ್ತಿ ಯಳಜಿತ್, ಕುಂದಾಮರ	ಇತರ	67
11	4	ಸಂಜನ್ ಕುಮಾರ್ ಶೆಟ್ಟಿ	6 ನೇ	ಚಂದ್ರಶೇಖರ ಶೆಟ್ಟಿ ಬಿಲ್ಲಾಡಿ ಗ್ರಾಮ	ಇತರ	76

ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ, 52 ಹೇರೂರು, ಬ್ರಹ್ಮಾವರ ಉಡುಪಿ ತಾಲ್ಲೂಕು/ಜಿಲ್ಲೆ ಇಲ್ಲಿನ 2007-08ನೇ ಸಾಲಿಗೆ ಪ್ರವೇಶ ದಾಖಲಾತಿಗಾಗಿ ದಿನಾಂಕ 20-05-2007 ರಂದು ನಡೆದ ಫಲಿತಾಂಶ

9ನೇ ತರಗತಿ

ಕ್ರಮ ಸಂ	ವಿದ್ಯಾರ್ಥಿಗಳ ಹೆಸರು	ತಂದೆಯ ಹೆಸರು/ವಿಳಾಸ	ಜಾತಿ	ಲಿಂಗ	ಪಡೆದ ಅಂಕಗಳು (100)ರಲ್ಲಿ	ಫಲಿತಾಂಶ
1	ಬಿ ಎಸ್ ವೇದ	ಬಿ ಕೆ ಸ್ವಾಮಿ ಬೆಳಗೊಳ, ಬೊಗಸೆ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	55	ಉತ್ತೀರ್ಣ
2.	ಪ್ರಿಯಾಂಕ	ಚಂದ್ರಯ್ಯ ಬೊಗಸೆ ಚಿಕ್ಕಮಗಳೂರು	ಪ ಜಾತಿ	ಹೆಣ್ಣು	51	ಉತ್ತೀರ್ಣ
3	ಬಿ ಎಂ ಪ್ರತೀಮಾ	ಮಂಜಯ್ಯ ಬೊಗಸೆ, ಚಿಕ್ಕಮಗಳೂರು	ಪ ಜಾತಿ	ಹೆಣ್ಣು	48	ಉತ್ತೀರ್ಣ

646 (706) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) :- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯ ಪ್ರತಿ ಆಸ್ಪತ್ರೆಗೆ ಮಂಜೂರಾಗಿರುವ ಎ ಎನ್ ಎಂ ಹುದ್ದೆಗಳ ಸಂಖ್ಯೆ ಎಷ್ಟು ಈ ಪೈಕಿ ಎಷ್ಟು ಹುದ್ದೆಗಳನ್ನು ಭರ್ತಿಯಾಗಿವೆ ಹಾಗೂ ಎಷ್ಟು ಹುದ್ದೆಗಳು ಎಷ್ಟು ಅವಧಿಯಿಂದ ಖಾಲಿ ಇವೆ ,

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು ?

ಇ) ಈಗ ಕಾರ್ಯನಿರ್ವಹಿಸುತ್ತಿರುವ ಎ ಎನ್ ಎಂ ಗಳು ಎಷ್ಟು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ (ಇವರ ಹೆಸರು ವಿವರಗಳನ್ನು ಒದಗಿಸುವುದು)

ಈ) ಸರ್ಕಾರದ ನಿಯಮಗಳಲ್ಲಿ ಒಂದೇ ಸ್ಥಳದಲ್ಲಿ ಎಷ್ಟು ವರ್ಷಗಳು ಸೇವೆ ಸಲ್ಲಿಸುವ ಅವಕಾಶವಿದೆ ?

ಉ) ಒಂದು ವೇಳೆ ಮೇಲ್ಕಂಡ ನಿಯಮಗಳನ್ನು ಮೀರಿ ಒಂದೇ ಸ್ಥಳದಲ್ಲಿ ಅವಧಿಗಳಂಥ ಹೆಚ್ಚು ಸಮಯದಿಂದ ಸೇವೆ ಸಲ್ಲಿಸುತ್ತಿರುವ ಎ ಎನ್ ಎಂ ಗಳನ್ನು ಸಾರ್ವಜನಿಕ ಮತ್ತು ಆಡಳಿತದ ಹಿತದೃಷ್ಟಿಯಿಂದ ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡಲಾಗುವುದೇ?

ಊ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ರಾಜ್ಯದಲ್ಲಿ 2006 ಏಪ್ರಿಲ್‌ದಿಂದ ಆಸ್ಪತ್ರೆಗಳ ದುರಸ್ತಿಗಾಗಿ ಮತ್ತು ಹೊಸ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು , (ತಾಲ್ಲೂಕುವಾರು ಮಾಹಿತಿ ಪೂರೈಸುವುದು)

(ಆ) ಜಮಖಂಡಿ ತಾಲ್ಲೂಕಿನಲ್ಲಿ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಜನರಲ್ ಆಸ್ಪತ್ರೆ ಮತ್ತು ಸಿ ಹೆಚ್ ಸಿ ಗಳು ದುರಸ್ತಿ ಇಲ್ಲದೇ

ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

(ಇ) ತೇರದಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದಲ್ಲಿ ಶೌಚಾಲಯಗಳು ಮತ್ತು ಸಿಬ್ಬಂದಿಯ ಮನೆಗಳು ಬೀಳುವ ಸ್ಥಿತಿಯಲ್ಲಿದ್ದು ದುರಸ್ತಿಯನ್ನು ಯಾವಾಗ ಕೈಕೊಳ್ಳಲಾಗುವುದು ,

(ಈ) ಈ ವರ್ಷವಾದರೂ ದುರಸ್ತಿಯನ್ನು ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ರಾಜ್ಯದಲ್ಲಿ 2006 ಎಪ್ರಿಲ್‌ದಿಂದ ಆಸ್ಪತ್ರೆಗಳ ದುರಸ್ತಿಗಾಗಿ ಮತ್ತು ಹೊಸ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಅನುದಾನ ರೂ 35,700 31 ಲಕ್ಷಗಳು (ವಿವರಗಳನ್ನು ಅನುಬಂಧ-1 ರಿಂದ 6ರಲ್ಲಿ ಲಗತ್ತಿಸಿದೆ)

(ಆ) ಜಮಖಂಡಿ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ದುರಸ್ತಿಗಾಗಿ 11 42 ಲಕ್ಷ ರೂ ಗಳನ್ನು 2007–08ನೇ ಸಾಲಿಗೆ ನಿಗದಿಪಡಿಸಲಾಗಿದೆ ಹಾಗೂ ಎನ್ ಆರ್ ಎಚ್ ಎಂ ಅಡಿಯಲ್ಲಿ ಒದಗಿಸಿರುವ ಹಣದಲ್ಲಿಯೂ ಸಹ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲಾಗುವುದು

(ಇ) ತೇರದಾಳ ಪ್ರಾಥಮಿಕ ಆರೋಗ್ಯ ಕೇಂದ್ರದ –ಕಟ್ಟಡ ದುರಸ್ತಿ ಕಾಮಗಾರಿಯನ್ನು 2007–08ನೇ ಸಾಲಿನ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದ್ದು 3 54 ಲಕ್ಷ ರೂ ಗಳನ್ನು ಸದರಿ ಕಾಮಗಾರಿಗಳಿಗಾಗಿ ನಿಗದಿಪಡಿಸಲಾಗಿದೆ

(ಈ) ಪ್ರಸಕ್ತ ಸಾಲಿನಲ್ಲಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು

ಅನುಬಂಧ-1

2006-07ನೆಯ ಸಾಲಿನಲ್ಲಿ ವಿವಿಧ ಜಿಲ್ಲೆಯ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು 4210-01-110-1-01 ಅಡಿಯಲ್ಲಿ ಒದಗಿಸಿರುವ ರೂ 67 50 ಕೋಟಿಗಳ ಅನುದಾನಕ್ಕೆ ಅನುಮೋದಿಸಿರುವ ಜಿಲ್ಲಾವಾರು ಕಾಮಗಾರಿಗಳ ವಿವರ

(ರೂ ಕೋಟಿಗಳಲ್ಲಿ)

ಆಸ್ಪತ್ರೆಗಳು	ಅಂದಾಜು ವೆಚ್ಚ
ಜಿಲ್ಲಾ ಆಸ್ಪತ್ರೆ, ಗುಲ್ಬರ್ಗ, ಮೇಲ್ದರ್ಜೆಯ ಕಾಮಗಾರಿಗಳು	24 00
ಜಿಲ್ಲಾ ಆಸ್ಪತ್ರೆ, ಹಾಸನ, ಮೇಲ್ದರ್ಜೆಯ ಕಾಮಗಾರಿಗಳು	43 50
ಜಿಲ್ಲಾ ಆಸ್ಪತ್ರೆ, ಚಾಮರಾಜನಗರ ಮೇಲ್ದರ್ಜೆಯ ಕಾಮಗಾರಿಗಳು	4 95
52 ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಮೇಲ್ದರ್ಜೆಯ ಕಾಮಗಾರಿಗಳು	163 0
43 ಸಮುದಾಯ ಆರೋಗ್ಯ ಕೇಂದ್ರಗಳ ಕಾಮಗಾರಿಗಳು	
ತಾಲ್ಲೂಕು ಮಟ್ಟದ ಆಸ್ಪತ್ರೆ, ಶಿಕಾರಿಪುರ ಮೇಲ್ದರ್ಜೆಯ ಕಾಮಗಾರಿಗಳು	4 95
49 ಹಳೇ ಸಮುದಾಯ ಆರೋಗ್ಯ ಕೇಂದ್ರಗಳ ಕಾಮಗಾರಿಗಳು	60 00
ಮೇಲ್ದರ್ಜೆಯ ತಾಲ್ಲೂಕು ಮಟ್ಟದ ಆಸ್ಪತ್ರೆ, ಹೊಳೆನರಸೀಪುರ	5 00
ಒಟ್ಟು	305 40

ಅನುಬಂಧ-2

2006-07 ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2210-01-110-1-21 ಯೋಜನೇತರ ಅಡಿಯಲ್ಲಿ ರಾಜ್ಯ ವಲಯದ ಆಸ್ಪತ್ರೆಗಳ ದುರಸ್ಥಿ ಕಾಮಗಾರಿಗಳು

(ರೂ ಲಕ್ಷಗಳಲ್ಲಿ)

1	ಬೆಂಗಳೂರು ನಗರ ಜಿಲ್ಲಾ ಆಸ್ಪತ್ರೆಗಳು	191 48
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	23 47
3	ಕೋಲಾರ	20 67
4	ತುಮಕೂರು	24 78
5	ಚಿತ್ರದುರ್ಗ	52 32
6	ಮೈಸೂರು	33 00
7	ಚಾಮರಾಜನಗರ	24 92
8	ಮಂಡ್ಯ	11 19
9	ಚಿಕ್ಕಮಗಳೂರು	3 00
10	ಉಡುಪಿ	20 82
11	ಮಡಿಕೇರಿ	2 44
12	ಹಾಸನ	23 42
13	ಬಿಜಾಪುರ	32 88
14	ಬಾಗಲಕೋಟೆ	12 30
15	ಹುಬ್ಬಳ್ಳಿ	13 84
16	ಧಾರವಾಡ	9 07
17	ಗದಗ	7 59
18	ಹಾವೇರಿ	14 81
19	ಗುಲ್ಬರ್ಗ	3 34
20	ಬೀದರ್	6 97
21	ರಾಯಚೂರು	24 92
22	ಕೊಪ್ಪಳ	10 34
	ಒಟ್ಟು	567 57

ಅನುಬಂಧ-3

2006-07 ನೆಯ ಕೇಂದ್ರದ 12ನೇ ಹಣಕಾಸು ಯೋಜನೆಯ ಅಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತುರ್ತು ನಿಗಾ ಘಟಕಗಳನ್ನು ನಿರ್ಮಿಸುವ ಜಿಲ್ಲಾವಾರು ಅಂದಾಜು ವಿವರಗಳು

ರೂ ಲಕ್ಷಗಳಲ್ಲಿ

		(ಲೆಕ್ಕ ಶೀರ್ಷಿಕೆ 2210-01-800-0-06)
1	ಬೆಂಗಳೂರು ನಗರ ಜಿಲ್ಲಾ ಆಸ್ಪತ್ರೆಗಳು	50 00
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	175 00
3	ತುಮಕೂರು	275 00
4	ಚಿತ್ರದುರ್ಗ	300 00
5	ಶಿವಮೊಗ್ಗ	100 00
6	ಕೋಲಾರ	250 00
7	ದಾವಣಗೆರೆ	198 50
8	ಮೈಸೂರು	150 00
9	ಚಾಮರಾಜನಗರ	50,00
10	ಮಂಡ್ಯ	150 00
11	ಚಿಕ್ಕಮಗಳೂರು	125 00
12	ಹಾಸನ	125 00
13	ದಕ್ಷಿಣ ಕನ್ನಡ	150 00
14	ಉಡುಪಿ	25 00
15	ಬೆಳಗಾವಿ	400 00
16	ಬಿಜಾಪುರ	125 00
17	ಬಾಗಲಕೋಟೆ	25 00
18	ಧಾರವಾಡ	50 00
19	ಗದಗ	25 00
20	ಹಾವೇರಿ	125 00
21	ಗುಲ್ಬರ್ಗ	400 00
22	ಬೀದರ್	75 00
23	ರಾಯಚೂರು	191 50
24	ಕೊಪ್ಪಳ	150 00
25	ಬಳ್ಳಾರಿ	75 00
	ಒಟ್ಟು	3765 00

ಅನುಬಂಧ-4

ಲೆಕ್ಕ ಶೀರ್ಷಿಕೆ 2210-01-800-0-52 ಹಾಗೂ 2210-03-103-0-73ರ ಅಡಿಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿ ಒಳಪಡುವ ಜಿಲ್ಲಾವಾರು ದುರಸ್ತಿ ಕಾಮಗಾರಿಗಳ ವಿವರಗಳು

(ರೂ ಲಕ್ಷಗಳಲ್ಲಿ)

ಕ್ರಮ	ಜಿಲ್ಲೆ	2210–03––800–0–52	2210–03–103–0–73
1	ಬೆಂಗಳೂರು ನಗರ	4 00	1 75
2	ಬೆಂಗಳೂರು (ಗ್ರಾ)	–	0
3	ಚಿತ್ರದುರ್ಗ	1 60	5 54
4	ಕೋಲಾರ	5 60	4 49
5	ದಾವಣಗೆರೆ	1 50	0
6	ತುಮಕೂರು	8 12	10 00
7	ಶಿವಮೊಗ್ಗ	–	1 08
8	ಮೈಸೂರು	2 50	6 35
9	ಚಿಕ್ಕಮಗಳೂರು	2 50	2 50
10	ಚಾಮರಾಜನಗರ	2 00	1 58
11	ಮಂಡ್ಯ	2 00	20 00
12	ಮಡಿಕೇರಿ	0	10 00
13	ಹಾಸನ	2 00	20 00
14	ದಕ್ಷಿಣ ಕನ್ನಡ	1 30	10 00
15	ಉಡುಪಿ	1 00	0 10
16	ಬೆಳಗಾವಿ	3 02	33 00
17	ಬಿಜಾಪುರ	1 50	5 26
18	ಧಾರವಾಡ	3 00	0
19	ಹಾವೇರಿ	1 60	38 49
20	ಬಾಗಲಕೋಟೆ	1 00	8 00
21	ಉತ್ತರ ಕನ್ನಡ	0	7 00
22	ಗದಗ	1 60	8 30
23	ಗುಲ್ಬರ್ಗ	1 60	5 00
24	ಬೀದರ್	1 50	5 00
25	ಕೊಪ್ಪಳ	1 80	9 77
26	ರಾಯಚೂರು	0	3 00
27	ಬಳ್ಳಾರಿ	0	2 33
	ಒಟ್ಟು	49 86	237 54

ಅನುಬಂಧ–5

2006–07 ಲೆಕ್ಕ ಶೀರ್ಷಿಕೆ 4210–01–110–7–01 ಅಡಿಯಲ್ಲಿ ಅನುಮೋದಿಸಿದ ಕಾಮಗಾರಿಗಳು

1	ಪ್ರಾಥಮಿಕ ಆರೋಗ್ಯ ಕೇಂದ್ರ ಮಸ್ಕಲ್, ತುಮಕೂರು ಜಿಲ್ಲೆ	40 77
2	ಪ್ರಾಥಮಿಕ ಆರೋಗ್ಯ ಕೇಂದ್ರ ಜಿನ್ನಾಗರ, ತುಮಕೂರು ಜಿಲ್ಲೆ	40 77
3	ಪ್ರಾಥಮಿಕ ಆರೋಗ್ಯ ಕೇಂದ್ರ ತೆರೇದಕುಪ್ಪೆ, ತುಮಕೂರು ಜಿಲ್ಲೆ	40 77
4	ಪ್ರಾಥಮಿಕ ಆರೋಗ್ಯ ಕೇಂದ್ರ ಹೊನ್ನಾವರ, ನಾಗಮಂಗಲ ತಾ ಮಂಡ್ಯ ಜಿಲ್ಲೆ	40 77
5	ಪ್ರಾಥಮಿಕ ಆರೋಗ್ಯ ಕೇಂದ್ರ ಕಾಳಿಂಗನಹಳ್ಳಿ, ಮಂಡ್ಯ ಜಿಲ್ಲೆ	40 77
6	ಪ್ರಾಥಮಿಕ ಆರೋಗ್ಯ ಕೇಂದ್ರ ಜಿ ಬೊಮ್ಮನಹಳ್ಳಿ, ಮಂಡ್ಯ ಜಿಲ್ಲೆ	40 77
7	ಪ್ರಾಥಮಿಕ ಆರೋಗ್ಯ ಕೇಂದ್ರ ಬ್ರಹ್ಮದೇವರಹಳ್ಳಿ, ಮಂಡ್ಯ ಜಿಲ್ಲೆ	40 77
8	ಪ್ರಾಥಮಿಕ ಆರೋಗ್ಯ ಕೇಂದ್ರ ಹರದನಹಳ್ಳಿ, ಹಾಸನ ಜಿಲ್ಲೆ	40 00
9	ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇನಲ್ಲೂರು, ಕಡೂರು ತಾ ಚಿಕ್ಕಮಗಳೂರು ಜಿಲ್ಲೆ	40 44
10	ಪ್ರಾಥಮಿಕ ಆರೋಗ್ಯ ಘಟಕ ಹಾಗೂ ವಸತಿ ಗೃಹ ದೊಡ್ಡಪಾಲನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಎಲೇರಾಮಪುರ, ಕೊರಟಗೆರೆ ತಾ ತುಮಕೂರು ಜಿಲ್ಲೆ	31 73
11	ರಾಮನಗರದ ಇಟ್ಟಮಡು ಗ್ರಾಮದಲ್ಲಿನ ವಸತಿ ಗೃಹಗಳು	39 64
	ಒಟ್ಟು	437 20

ಅನುಬಂಧ-6

2006-07ನೇ ಸಾಲಿನ ಲೆಕ್ಕ ಶೀರ್ಷಿಕೆ 4210-01-110-7-02 ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಸ ಆ ಕೇಂದ್ರಗಳ ಅಡಿಯಲ್ಲಿ ಜಿಲ್ಲಾವಾರು ಅನುದಾನದ ವಿವರಗಳು

		(ರೂ ಲಕ್ಷಗಳಲ್ಲಿ)
1	ಬೆಂಗಳೂರು ನಗರ	5 00
2	ಬೆಂಗಳೂರು ಗ್ರಾಮಾಂತರ	5 00
3	ತುಮಕೂರು	5 00
4	ಚಿಕ್ಕಮಗಳೂರು	5 00
5	ಬಾಗಲಕೋಟೆ	5 00
6	ಬಿಜಾಪುರ	5 00
7	ಧಾರವಾಡ	5 00
8	ಉತ್ತರ ಕನ್ನಡ	5 00
9	ಬೆಳಗಾವಿ	5 00
10	ಬಳ್ಳಾರಿ	5 00
11	ಗುಲ್ಬರ್ಗ	5 00
12	ಬೀದರ್	5 00
13	ಕೊಪ್ಪಳ	5 00
14	ರಾಯಚೂರು	5 00
15	ಚಿತ್ರದುರ್ಗ	5 00
16	ಕೋಲಾರ	5 00
17	ಶಿವಮೊಗ್ಗ	5 00
18	ಗದಗ್	5 00
19	ಹಾವೇರಿ	5 00
20	ಚಾಮರಾಜನಗರ	5 00
21	ದಕ್ಷಿಣ ಕನ್ನಡ	5 00
22	ಹಾಸನ	5 00
23	ಮಂಡ್ಯ	5 00
24	ಉಡುಪಿ	5 00
25	ಮೈಸೂರು	5 00
26	ದಾವಣಗೆರೆ	5 00
	ಒಟ್ಟು	153 00

ಮೊರಾರ್ಜಿ ವಸತಿ ಶಾಲೆ ಪ್ರಾರಂಭಿಸುವುದು

678 (1133) **ಶ್ರೀ ಸಿದ್ದು ಸವದಿ (ಜಮಖಂಡಿ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?**

(ಅ) ರಾಜ್ಯದಲ್ಲಿ ಪ್ರಾರಂಭಿಸಲಾದ ಒಟ್ಟು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು , (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಜಮಖಂಡಿ ತಾಲ್ಲೂಕು ಸುಮಾರು 4 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದರೂ ಸಹ ಕೇವಲ ಒಂದೇ ಒಂದು ವಸತಿ ಶಾಲೆಯನ್ನು ಮಂಜೂರು ಮಾಡಿರುವುದು ನಿಜವೇ ,

(ಇ) ಜಮಖಂಡಿ ತಾಲ್ಲೂಕಿನಲ್ಲಿ ಸುಮಾರು 50,000 ಅಲ್ಪಸಂಖ್ಯಾತ ಸಮುದಾಯುವಿದ್ದು ವಿದ್ಯಾರ್ಥಿಗಳಿಗಾಗಿ ಮೊರಾರ್ಜಿ ಶಾಲೆಯುನ್ನು ಪ್ರಾರಂಭಿಸಲಾಗುವುದೇ ,

(ಈ) ಸದರಿ ವಸತಿ ಶಾಲೆಯುನ್ನು ಪ್ರಾರಂಭಿಸಲು ಇರುವ ನಿಯಮಾವಳಿಗಳೇನು ,

(ಉ) ತಾಲ್ಲೂಕಿನಲ್ಲಿ ಎರಡು ಕಡೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯುನ್ನು ಪ್ರಾರಂಭಿಸುವ ಬೇಡಿಕೆ ಇದ್ದು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

(ಅ) ರಾಜ್ಯದಲ್ಲಿ ಒಟ್ಟು 327 ನವೋದಯ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ (ತಾಲ್ಲೂಕುವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

(ಆ) ಹೌದು

(ಇ) ಪ್ರಸ್ತಾವನೆ ಬಂದಿರುವುದಿಲ್ಲ

(ಈ) ವಸತಿ ಶಾಲೆಗಳನ್ನು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸಾಕ್ಷರತೆ ಪ್ರಮಾಣವನ್ನು ಆಧರಿಸಿ ಮತ್ತು ಡಾ ಡಿ ಎಂ ನಂಜುಂಡಪ್ಪನವರ ವರದಿ ಆಧರಿಸಿ ಮಂಜೂರು ಮಾಡಲಾಗುತ್ತಿದೆ

(ಉ) ಬೇಡಿಕೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಆಯವ್ಯಯದ ಲಭ್ಯತೆಗನುಗುಣವಾಗಿ ಪ್ರಾರಂಭಿಸಲು ತೀರ್ಮಾನಿಸಲಾಗುವುದು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಸಿದ್ದು ಸವದಿ (ಜಮಖಂಡಿ) ರವರ ಪ್ರಶ್ನೆ ಸಂಖ್ಯೆ 1133 ಕ್ಕೆ ಅನುಬಂಧ

ಕ್ರ. ಸಂ	ಜಿಲ್ಲೆ	ಕ್ರ. ಸಂ	ತಾಲ್ಲೂಕು	ವಸತಿ ಶಾಲೆಗಳ ಸಂಖ್ಯೆ
1	ಬೆಂಗಳೂರು (ನ)	1	ಆನೇಕಲ್	1
		2	ಬೆಂಗಳೂರು (ಉ)	2
		3	ಬೆಂಗಳೂರು (ದ)	1
2	ಬೆಂಗಳೂರು (ಗ್ರಾ)	4	ಕನಕಪುರ	5
		5	ಚನ್ನಪಟ್ಟಣ	2
		6	ರಾಮನಗರ	6
		7	ದೇವನಹಳ್ಳಿ	1
		8	ಹೊಸಕೋಟೆ	1
		9	ಮಾಗಡಿ	2
3	ಚಿತ್ರದುರ್ಗ	10	ಹಿರಿಯೂರು	1
		11	ಚಿತ್ರದುರ್ಗ	4
		12	ಚಳ್ಳಕೆರೆ	1
		13	ಮೊಳಕಾಲ್ಮೂರು	1
		14	ಹೊಳಲ್ಕೆರೆ	1
		15	ಹೊಸದುರ್ಗ	1
4	ಕೋಲಾರ	16	ಬಂಗಾರಪೇಟೆ	2
		17	ಚಿಂತಾಮಣಿ	1
		18	ಶ್ರೀನಿವಾಸಪುರ	1
		19	ಗೌರಿಬಿದನೂರು	1
		20	ಬಾಗೇಪಲ್ಲಿ	1
		21	ಶಿಡ್ಲಘಟ್ಟ	1
		22	ಮುಳಬಾಗಿಲು	2
		23	ಕೋಲಾರ	3

5	ಶಿವಮೊಗ್ಗ	24	ಶಿಕಾರಿಪುರ	5
		25	ಭದ್ರಾವತಿ	2
		26	ತೀರ್ಥಹಳ್ಳಿ	1
		27	ಶಿವಮೊಗ್ಗ	3
6	ತುಮಕೂರು	28	ಮಧುಗಿರಿ	1
		29	ಪಾವಗಡ	2
		30	ಕುಣಿಗಲ್	2
		31	ಶಿರಾ	5
		32	ಕೊರಟಗೆರೆ	2
		33	ಚಿಕ್ಕನಾಯಕನಹಳ್ಳಿ	1
		34	ತುರುವೆಕೆರೆ	1
7	ದಾವಣಗೆರೆ	35	ಚೆನ್ನಗಿರಿ	1
		36	ಹರಪ್ಪನಹಳ್ಳಿ	2
		37	ಹರಿಹರ	3
		38	ದಾವಣಗೆರೆ	4
		39	ಹೊನ್ನಾಳಿ	1
		40	ಜಗಳೂರು	1
8	ಮೈಸೂರು	41	ನಂಜನಗೂಡು	4
		42	ಮೈಸೂರು	3
		43	ಹೆಚ್ ಡಿ ಕೋಟೆ	2
		44	ಟಿ ನರಸೀಪುರ	2
		45	ಹುಣಸೂರು	2
		46	ಪಿರಿಯಾಪಟ್ಟಣ	1
		47	ಕೆ ಆರ್ ನಗರ	1
9	ಚಿಕ್ಕಮಗಳೂರು	48	ಕಡೂರು	8
		49	ಕೊಪ್ಪ	1

		50	ಮೂಡಿಗೆರೆ	1
		51	ಶೃಂಗೇರಿ	1
		52	ತರಿಕೆರೆ	1
		53	ನರಸಿಂಹರಾಜಪುರ	1
		54	ಚಿಕ್ಕಮಗಳೂರು	2
10	ದಕ್ಷಿಣ ಕನ್ನಡ	55	ಮಂಗಳೂರು	4
		56	ಬೆಳ್ತಂಗಡಿ	2
		57	ಪುತ್ತೂರು	1
		58	ಬೆಳ್ತಂಗಡಿ	1
11	ಹಾಸನ	59	ಹಾಸನ	4
		60	ಬೇಲೂರು	1
		61	ಹೊಳೆನರಸೀಪುರ	5
		62	ಅರಕಲಗೂಡು	2
		63	ಚೆನ್ನರಾಯಪಟ್ಟಣ	3
		64	ಅರಸೀಕೆರೆ	1
		65	ಸಕಲೇಶಪುರ	2
12	ಮಂಡ್ಯ	66	ಮಳವಳ್ಳಿ	3
		67	ಮಂಡ್ಯ	2
		68	ನಾಗಮಂಗಲ	4
		69	ಮದ್ದೂರು	2
		70	ಶ್ರೀರಂಗಪಟ್ಟಣ	3
		71	ಕೆ ಆರ್ ಪೇಟೆ	2
		72	ಪಾಂಡವಪುರ	3
13	ಚಾಮರಾಜನಗರ	73	ಗುಂಡ್ಲುಪೇಟೆ	4
		74	ಕೊಳ್ಳೆಗಾಲ	4
		75	ಯಳಂದೂರು	1

	76	ಚಾಮರಾಜನಗರ	1
14 ಉಡುಪಿ	77	ಉಡುಪಿ	2
	78	ಕಾರ್ಕಳ	1
	79	ಕುಂದಾಪುರ	1
15 ಕೊಡಗು	80	ಸೋಮವಾರಪೇಟೆ	3
	81	ವಿರಾಜಪೇಟೆ	1
16 ಬೆಳಗಾಂ	82	ಅಥಣಿ	1
	83	ಹುಕ್ಕೇರಿ	4
	84	ಸೌದತ್ತಿ	1
	85	ಬೈಲಹೊಂಗಲ	2
	86	ಗೋಕಾಕ್	7
	87	ಚಿಕ್ಕೋಡಿ	3
	88	ರಾಮದುರ್ಗ	1
	89	ರಾಯಭಾಗ್	1
	90	ಖಾನಾಪುರ	1
	91	ಬೆಳಗಾಂ	1
17 ಬಿಜಾಪುರ	92	ಇಂಡಿ	4
	93	ಮುದ್ದೇಬಿಹಾಳ	1
	94	ಬಿಜಾಪುರ	3
	95	ಬಸವನಬಾಗೇವಾಡಿ	1
	96	ಸಿಂಧಗಿ	1
18 ಧಾರವಾಡ	97	ಧಾರವಾಡ	2
	98	ಹುಬ್ಬಳ್ಳಿ	2
19 ಉತ್ತರ ಕನ್ನಡ	99	ಮುಂಡಗೋಡು	1
	100	ಕುಮಟ	1
	101	ಜೊಯಿಡಾ	1

		102	ಯಲ್ಲಾಪುರ	1
		103	ಹಳಿಯಾಳ	2
		104	ಭಟ್ಕಳ	1
		105	ಶಿರಸಿ	1
20	ಬಾಗಲಕೋಟೆ	106	ಬಾಗಲಕೋಟೆ	4
		107	ಜಮಖಂಡಿ	1
		108	ಮುಧೋಳ್	5
		109	ಬಿಳಗಿ	1
		110	ಬಾದಾಮಿ	1
21	ಗದಗ	111	ಗದಗ	3
		112	ರೋಣ	1
		113	ಶಿರಹಟ್ಟಿ	1
		114	ಮುಂಡರಗಿ	1
		115	ನರಗುಂದ	1
22	ಹಾವೇರಿ	116	ಹಾನಗಲ್	3
		117	ಬ್ಯಾಡಗಿ	1
		118	ಹಿರೇಕೆರೂರು	2
		119	ಸವಣೂರು	1
		120	ರಾಣೆಬೆನ್ನೂರು	1
		121	ಶಿಗ್ಗಾಂವ	1
		122	ಹಾವೇರಿ	3
23	ಗುಲ್ಬರ್ಗ	123	ಅಫಜಲ್ಪುರ	3
		124	ಶಹಪುರ	2
		125	ಯಾದಗಿರಿ	5
		126	ಚಿತ್ತಾಪುರ	4
		127	ಚಿಂಚೋಳಿ	1

		128	ಸುರಪುರ	3
		129	ಗುಲ್ಬರ್ಗ	3
		130	ಜೇವರ್ಗಿ	3
		131	ಆಳಂದ	1
		132	ಸೇಡಂ	1
24	ಬಳ್ಳಾರಿ	133	ಹಗರಿಬೊಮ್ಮನಹಳ್ಳಿ	1
		134	ಹೊಸಪೇಟೆ	2
		135	ಕೂಡ್ಲಿಗಿ	3
		136	ಹಡಗಲಿ	4
		137	ಸಂಡೂರು	4
		138	ಶಿರಗುಪ್ಪ	1
		139	ಬಳ್ಳಾರಿ	2
25	ಬೀದರ್	140	ಔರಾದ್	1
		141	ಬೀದರ್	4
		142	ಹುಮನಾಬಾದ್	1
		143	ಬಸವಕಲ್ಯಾಣ	3
26	ರಾಯಚೂರು	144	ಲಿಂಗಸಗೂರು	3
		145	ರಾಯಚೂರು	5
		146	ದೇವದುರ್ಗ	4
		147	ಮಾನ್ವಿ	3
		148	ಸಿಂದನೂರು	1
27	ಕೊಪ್ಪಳ	149	ಗಂಗಾವತಿ	3
		150	ಯಲ್ಬುರ್ಗ	5
		151	ಕೊಪ್ಪಳ	2
		152	ಕುಷ್ಟಗಿ	2
			ಒಟ್ಟು	327

ಕಾರ್ಯನಿರ್ವಾಹಕ ನಿರ್ದೇಶಕರು

679 (1122) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) – ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಭಾರತ ದೇಶವು ಶೇ 80ರಷ್ಟು ಕೃಷಿ ಅವಲಂಬಿತ ದೇಶ ಎಂದು ಖ್ಯಾತಿ ಪಡೆದಿದ್ದು, ಹೆಚ್ಚಿನ ಅನುಕೂಲವಾಗುವಂತಹ ಪಶುಸಂಗೋಪನಾ ಇಲಾಖೆಯ ಸೌಲಭ್ಯಗಳು ರೈತರಿಗೆ ಅತೀ ಕಡಿಮೆ ಪ್ರಮಾಣದಲ್ಲಿ ಸಿಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ,

(ಆ) ಹಾಗಿದ್ದಲ್ಲಿ, ಪಶು ಚಿಕಿತ್ಸಾಲಯ, ಔಷಧಿ ಸಾಮಗ್ರಿಗಳು ಹಾಗೂ ಸಿಬ್ಬಂದಿ ಕೊರತೆಯಿಂದಾಗಿ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ,

(ಇ) ಖಾಸಗಿಯವರಿಗೆ ಪಶು ಚಿಕಿತ್ಸಾಲಯ ತೆರೆಯಲು ಸರ್ಕಾರ ಅನುಮತಿ ಹಾಗೂ ಸಹಾಯಧನ ನೀಡಿ ಪ್ರೋತ್ಸಾಹಿಸಲು ಯಾವುದಾದರೂ ಯೋಜನೆಗಳನ್ನು ಹಾಕಿಕೊಂಡಿದೆಯೆ ,

(ಈ) ರಾಜ್ಯದಲ್ಲಿ ಎಲ್ಲಿಯೂ ಸಹ ಹಾವುಗಳ ಸಂಗ್ರಹಣಾ ಕೇಂದ್ರ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ,

(ಉ) ಹಾಗಿದ್ದಲ್ಲಿ, ಶಿಗ್ಗಾಂವದ ತಾಲ್ಲೂಕು ಬಂಕಾಪೂರ ಪಟ್ಟಣದಲ್ಲಿ ಸುಮಾರು 140 ಎಕರೆ ಭೂಮಿ ಹೊಂದಿದ ಕೋಟೆ ಇದ್ದು, ಖಿಲಾರಿ ತಳಿ ಸಂವರ್ಧನಾ ಕೇಂದ್ರ ಇದ್ದು, ಇಲ್ಲಿ, ನವಿಲುಧಾಮ ನಿರ್ಮಿಸಲು ಯೋಜನೆಯನ್ನು ಹಾಕಿಕೊಂಡಿರುವುದು ನಿಜವೇ ,

(ಊ) ಶಿಗ್ಗಾಂವ್ ತಾಲ್ಲೂಕು ಭಾಗಶಃ ಮಲೆನಾಡು ಪ್ರದೇಶವಾಗಿದ್ದು ಇಲ್ಲಿ ಹಾವುಗಳ ಸಂಖ್ಯೆಯೂ ಸಹ ಅಧಿಕವಾಗಿರುವುದರಿಂದ ಬಂಕಾಪೂರ ಕೋಟೆಯಲ್ಲಿ ಹಾವುಗಳ ಸಂಗ್ರಹಣಾ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

(ಋ) ಹಾವುಗಳ ವಿಷದಿಂದ ಔಷಧ ತಯಾರಿಸಿ ಸಾಕಷ್ಟು ರೋಗಗಳಿಗೆ ಅನುಕೂಲವಾಗುವುದರಿಂದ ಸರ್ಕಾರ ಹಾವುಗಳ ಸಂಗ್ರಹಣಾ ಕೇಂದ್ರ ಪ್ರಾರಂಭಿಸಲು ಯಾವಾಗ ಕ್ರಮ ಕೈಗೊಳ್ಳುತ್ತದೆ ?

ಶ್ರೀ ರೇವೂನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು) –

(ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ

(ಆ) ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಪಶುಪಾಲನಾ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಿರುವ ಯೋಜನೆಗಳು ಮತ್ತು ರೈತರಿಗೆ ಸಿಗುತ್ತಿರುವ ಸೌಲಭ್ಯಗಳ ವಿವರವಾದ ಮಾಹಿತಿಯನ್ನು ಅನುಬಂಧ-1 ರಲ್ಲಿ ಸಲ್ಲಿಸಿದೆ

(ಇ) ಖಾಸಗಿಯವರಿಗೆ ಪಶು ಚಿಕಿತ್ಸಾಲಯ ತೆರೆಯಲು ಪ್ರೋತ್ಸಾಹ ಧನ ನೀಡುವ ಯಾವುದೇ ಕಾರ್ಯಕ್ರಮ ಸರ್ಕಾರದ ಮುಂದೆ ಇರುವುದಿಲ್ಲ ಆದರೆ ಇದುವರೆವಿಗೂ ಯಾವುದೇ ಖಾಸಗಿ ವ್ಯಕ್ತಿಗಳು, ಟ್ರಸ್ಟ್‌ಗಳು, ಸಂಘ ಸಂಸ್ಥೆಗಳು ಮುಂದೆ ಬಂದಿರುವುದಿಲ್ಲ ಮುಂದೆ ಬಂದಲ್ಲಿ ಅನುಮತಿ ಮಾತ್ರ ನೀಡಲು ಕ್ರಮವಹಿಸಲಾಗುವುದು ಹಾಗೂ ಕರ್ನಾಟಕ ಪಶುವೈದ್ಯಕೀಯ ಪರಿಷತ್‌ನಲ್ಲಿ ನೋಂದಾಯಿತ ಪದವೀಧರ ಪಶುವೈದ್ಯರು ಖಾಸಗಿಯಾಗಿ ಪಶು ಚಿಕಿತ್ಸಾಲಯಗಳನ್ನು ತೆರೆದು ಚಿಕಿತ್ಸೆ ನೀಡಬಹುದಾಗಿದೆ ಇದಕ್ಕೆ ಯಾವುದೇ ಇಲಾಖೆಯ ಅನುಮತಿ ಅವಶ್ಯಕತೆ ಇರುವುದಿಲ್ಲ

(ಈ) ರಾಜ್ಯದಲ್ಲಿ ಹಾವುಗಳ ಸಂಗ್ರಹಣಾ ಕೇಂದ್ರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ

(ಉ) ಹೌದು, ನವಿಲು ಧಾಮ ನಿರ್ಮಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಹಾಗೂ ಇಲ್ಲಿ 139 ಎಕರೆ 10 ಗುಂಟೆ ಜಾಗವನ್ನು ನವಿಲು ಸುರಕ್ಷಿತ ಧಾಮ ಎಂದು ಘೋಷಿಸಲಾಗಿದೆ ಇದರ ಜೊತೆಗೆ ಖಿಲಾರಿ ತಳಿ ಅಭಿವೃದ್ಧಿ ಕಾರ್ಯಕ್ರಮವನ್ನು ಮುಂದುವರಿಸಲಾಗಿದೆ

(ಊ) ಸದ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ

(ಋ) ಉದ್ಭವಿಸುವುದಿಲ್ಲ

ಅನುಬಂಧ-1

ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರ ಈ ಕೆಳಗಿನಂತೆ ಹಲವಾರು ಕಾರ್ಯಕ್ರಮಗಳನ್ನು ಪಶುಪಾಲನಾ ಇಲಾಖೆಯ ಮುಖಾಂತರ ಹಮ್ಮಿಕೊಂಡಿದೆ

1) ಡಾ ಡಿ ಎಂ ನಂಜುಂಡಪ್ಪ, ಪ್ರಾದೇಶಿಕ ಅಸಮತೋಲನಾ ನಿವಾರಣ ಸಮಿತಿ ವರದಿಯನ್ವಯ ಪಶು ಚಿಕಿತ್ಸಾಲಯ ಕೊರತೆ ಇರುವ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಕ್ರಮ ವಹಿಸಿದ್ದು, ಪ್ರಥಮ ಹಂತದಲ್ಲಿ 2006-07ನೇ ಸಾಲಿನಲ್ಲಿ 69 ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗಿದೆ ಇನ್ನೂ ಕೊರತೆಯಿರುವ 249 ಪಶು ಚಿಕಿತ್ಸಾಲಯಗಳನ್ನು ಕೊರತೆ ಇರುವಂತಹ ತಾಲ್ಲೂಕುಗಳಲ್ಲಿ ಮುಂದಿನ ದಿನಗಳಲ್ಲಿ ಪ್ರಾರಂಭಿಸಲು ಕ್ರಮ ವಹಿಸಿದೆ ಅದೇ ರೀತಿ ಉತ್ತಮ ತಾಂತ್ರಿಕ ಸೇವೆ ನೀಡಲು 50 ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮತ್ತು 150 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ/ಕೃತಕ ಗರ್ಭಧಾರಣಾ ಕೇಂದ್ರಗಳನ್ನು 2006-07ನೇ ಸಾಲಿನಲ್ಲಿ ಉನ್ನತೀಕರಿಸಲಾಗಿದೆ ಉಳಿದ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ / ಕೃತಕ ಗರ್ಬಧಾರಣಾ ಕೇಂದ್ರಗಳನ್ನು ಹಂತ ಹಂತವಾಗಿ ಉನ್ನತೀಕರಿಸುವ ಯೋಜನೆ ಮುಂದುವರಿಯುತ್ತಿದೆ

2) ಜಾನಿವಾರು ಚಿಕಿತ್ಸೆಗೆ ನಿಗಧಿಯಾದ ಅನುದಾನ ಹೆಚ್ಚಿಸಲು ಕ್ರಮ ವಹಿಸಲಾಗಿದ್ದು, ಅದರಂತೆ 2004-05ನೇ ಸಾಲಿನಲ್ಲಿ ನಿಗಧಿಯಾದ 1220 11 ಲಕ್ಷ ರೂ ಗಳಿಂದ 2007-08ನೇ ಸಾಲಿನಲ್ಲಿ 1718 57 ಲಕ್ಷ ರೂ ಗಳಿಗೆ ಹೆಚ್ಚಿಸಿ ನಿಗಧಿಗೊಳಿಸಿದೆ

3) ಸಿಬ್ಬಂದಿ ಕೊರತೆ ನೀಗಿಸಲು 06-07ನೇ ಸಾಲಿನಲ್ಲಿ ಈಗಾಗಲೇ ಖಾಲಿ ಇದ್ದ ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ 419 ವೈದ್ಯರನ್ನು ನೇಮಕಾತಿ ಮುಖಾಂತರ ಭರ್ತಿ ಮಾಡಲಾಗಿದೆ ಮತ್ತೆ 276 ಪಶುವೈದ್ಯರನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದೆ ಕರ್ನಾಟಕ ಲೋಕಸೇವಾ ಆಯೋಗದಿಂದ 4 ಸಹಾಯಕ ನಿರ್ದೇಶಕರ ಹುದ್ದೆ ತುಂಬಲು ಅರ್ಜಿ ಕರೆಯಲಾಗಿದೆ ಮತ್ತು ಇನ್ನೂ 90 ಸಹಾಯಕ ನಿರ್ದೇಶಕರನ್ನು ಮತ್ತು 77 ಪಶು ವೈದ್ಯಾಧಿಕಾರಿಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ

4) ತಳಿ ಅಭಿವೃದ್ಧಿಗಾಗಿ ಎಲ್ಲಾ ಪಶು ಚಿಕಿತ್ಸಾ ಕೇಂದ್ರಗಳ ಮುಖಾಂತರ ಕೃತಕ ಗರ್ಭಧಾರಣೆಗೆ ವ್ಯವಸ್ಥೆಗೊಳಿಸಲಾಗಿದೆ

5) ಕೇಂದ್ರ ಸರ್ಕಾರದ ಶೇಕಡ 75 ಮತ್ತು ರಾಜ್ಯ ಸರ್ಕಾರದ ಶೇಕಡ 25 ಅನುದಾನದಲ್ಲಿ ಆಸ್ಕಾಡ್ ಯೋಜನೆಯಲ್ಲಿ ಜಾನುವಾರುಗಳ ಸಾಂಕ್ರಾಮಿಕ ರೋಗಗಳಾದ ಕಾಲುಬಾಯಿ ಜೇನೆ, ಗಂಟಲು ಬೇನೆ, ಪಿ ಪಿ ಆರ್ ಕುರಿ ಸಿಡುಬು ರೋಗಗಳಿಗೆ ಉಚಿತವಾಗಿ ಲಸಿಕೆ ಹಾಕಲು ಕ್ರಮ ವಹಿಸಿದೆ ಮತ್ತು ಇತರೆ ಜಾನುವಾರು ರೋಗಗಳಿಗೆ ಉಚಿತವಾಗಿ ರೋಗ ನಿರೋಧಕ ಲಸಿಕೆ ಹಾಕುವ ಮುಖಾಂತರ ಪಶು ಸಂಪತ್ತಿನ ರಕ್ಷಣೆಗಾಗಿ ಕ್ರಮ ವಹಿಸಿದೆ

6) ಜಾನುವಾರು ರೋಗಗಳ ನಿರ್ಧಾರ ಮತ್ತು ನಿಯಂತ್ರಣಕ್ಕಾಗಿ ದಕ್ಷಿಣ ಭಾರತದ ಜಾನಿವಾರು ರೋಗಗಳ ಪ್ರಯೋಗ ಶಾಲೆಯನ್ನು ಕೇಂದ್ರ ಸರ್ಕಾರದ ಸಹಾಯಧನದ ಅಡಿಯಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ ಅದೇ ರೀತಿ ಜಾನುವಾರು ರೋಗ ತಪಾಸಣೆ ಮತ್ತು ಲಸಿಕೆ ಸರಬರಾಜು ಮಾಡಲು ಬೀದರ್, ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಬೆಳಗಾಂ, ಮೈಸೂರು ಮತ್ತು ಮಂಗಳೂರಿನಲ್ಲಿ ಪ್ರಾಣಿ ರೋಗ ಪ್ರಯೋಗ ಶಾಲೆ ಸ್ಥಾಪನೆ ಮಾಡಿದ್ದು ಕಾರ್ಯ ನಿರ್ವಹಿಸುತ್ತಿವೆ

7) ಅಳಿವಿನಂಚಿನಲ್ಲಿರುವ ಸ್ಥಳೀಯ ಗೋತಳಿ ಅಭಿವೃದ್ಧಿ ಮತ್ತು ಸಂರಕ್ಷಣೆಗಾಗಿ ಸಹಾಯಾನುದಾನ ಒದಗಿಸಲು ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಯೋಜನೆ ಪ್ರಾರಂಭಿಸಲಾಗಿದೆ

8) ಪಶುವೈದ್ಯ ಪದವೀಧರರ ಕೊರತೆ ನೀಗಿಸಲು ಶಿವಮೊಗ್ಗ ಮತ್ತು ಹಾಸನದಲ್ಲಿ 2 ಹೊಸ ಪಶುವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದು, ಕಾರ್ಯಾರಂಭ ಮಾಡಿವೆ

9) ಮೂಲಭೂತ ಸೌಕರ್ಯ ಹೆಚ್ಚಿಸಲು ಗ್ರಾಮಾಂತರ ಪ್ರದೇಶದಲ್ಲಿರುವ ಕಟ್ಟಡಗಳಿಲ್ಲದ ಪಶು ಚಿಕಿತ್ಸಾ ಕೇಂದ್ರಗಳಿಗೆ ಹೊಸ ಕಟ್ಟಡ ನಿರ್ಮಾಣವನ್ನು ಆರ್ ಐ ಡಿ ಎಫ್ 11ರ ಅಡಿಯಲ್ಲಿ 14 83 ಕೋಟಿ ರೂ ಗಳಲ್ಲಿ ವೆಚ್ಚದಲ್ಲಿ 171 ಕಟ್ಟಡ ನಿರ್ಮಾಣಕ್ಕೆ, ಆರ್ ಐ ಡಿ ಎಫ್ 12ರ ಅಡಿಯಲ್ಲಿ 15 00 ಕೋಟಿ ರೂ ಗಳ ಅನುದಾನದಲ್ಲಿ 150 ಕಟ್ಟಡಗಳಿಗೆ ಮಂಜೂರಾತಿ ನೀಡಲಾಗಿದೆ

10) ಕುರಿಗಾರರ ಕುರಿಗಳಿಗೆ ಜನಶ್ರೀ ವಿಮಾ ರಕ್ಷಣೆ ಒದಗಿಸಲು 2006-07 ನೇ ಸಾಲಿನಿಂದ ಯೋಜನೆ ಜಾರಿಗೊಳಿಸಲಾಗಿದೆ

11) ಡೈರಿ ಅಭವೃದ್ಧಿ ಪ್ರೋತ್ಸಾಹಕ್ಕಾಗಿ ಗುಲ್ಬರ್ಗಾದಲ್ಲಿ 2007-08 ನೇ ಸಾಲಿನಿಂದ ಡೈರಿ ವಿಜ್ಞಾನ ಕಾಲೇಜು ಸ್ಥಾಪನೆಗೆ ಕ್ರಮ ವಹಿಸಿದೆ

12) ಜಾನುವಾರುಗಳಲ್ಲಿ ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಉತ್ಪಾದನೆಗಾಗಿ ಬೆಳಗಾಂನಲ್ಲಿ ಹುಚ್ಚುನಾಯಿ ಲಸಿಕೆ ಉತ್ಪಾದನಾ ಸಂಸ್ಥೆ ಸ್ಥಾಪನೆಗೆ 2007-08ನೇ ಸಾಲಿನಲ್ಲಿ ಕ್ರಮ ವಹಿಸಿದೆ

13) ಮಲೆನಾಡ ಪ್ರದೇಶದಲ್ಲಿ ಕಂಡು ಬರುವ ಜಾನುವಾರುಗಳ ನಿಗೂಢ ಖಾಯಿಲೆಗಳ ಸಂಶೋಧನೆಗಾಗಿ ಶಿವಮೊಗ್ಗದಲ್ಲಿ ಆರೋಗ್ಯ ಹಾನಿಕರ ವಸ್ತುಗಳ ಅಧ್ಯಯನ ಕೇಂದ್ರ ಸ್ಥಾಪನೆಗೆ ಕ್ರಮ ವಹಿಸಿದೆ

14) ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಡೈರಿ ಅಭಿವೃದ್ಧಿಗಾಗಿ ರೂ 600 00 ಲಕ್ಷಗಳ ಅನುದಾನ ನಿಗಧಿಪಡಿಸಿ ಕರ್ನಾಟಕ ಹಾಲು ಮಹಾ ಮಂಡಳಿ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ

15) ಮಹಿಳೆಯರಿಗಾಗಿ ಹೈನುಗಾರಿಕೆಗೆ ಅಮೃತ ಯೋಜನೆಯಡಿ ರೂ 50 00 ಕೋಟಿ ರೂ ಗಳ ಅನುದಾನದಲ್ಲಿ ಆನುಷ್ಠಾನಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆ

680 (1123) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಯಾವ ಯಾವ ನಗರಗಳಲ್ಲಿ ಮೆಡಿಕಲ್ ಕಾಲೇಜ್, ನರ್ಸಿಂಗ್ ಕಾಲೇಜ್ ಹಾಗೂ ಡಿ ಫಾರ್ಮಾ ಕಾಲೇಜ್‌ಗಳನ್ನು ಪ್ರಾರಂಭಿಸಲು ಸರ್ಕಾರ ಯೋಜನೆ ಹಾಕಿಕೊಂಡಿದೆ (ವಿವರ ಒದಗಿಸುವುದು) ,

(ಆ) ಧಾರವಾಡ ಜಿಲ್ಲೆ ಹುಬ್ಬಳ್ಳಿ ನಗರದಲ್ಲಿರುವ ಕಿಮ್ಸ್ ಆಸ್ಪತ್ರೆಯ ಹೊರ ರೋಗಿಗಳ ವಿಭಾಗದಿಂದ 2003-04, 2004-05, 2005-06, 2006-07ನೇ ಸಾಲಿನಲ್ಲಿ ರೂ 74,73,850/-ಗಳು ಸಂಗ್ರಹವಾಗಿದ್ದು, ಸಂಗ್ರಹವಾಗಿರುವ ಹಣದ ದುರುಪಯೋಗವಾಗಿರುವ ಸಂಶಯದ ಮೇಲೆ ತನಿಖೆಗೆ ಆದೇಶಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ಅಂತಾ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2538 ದಿನಾಂಕ 05-04-2007ರಂದು ತಿಳಿಸಿರುವುದು ಸರ್ಕಾರದ ಗಮನದಲ್ಲಿದೆಯೇ ,

(ಇ)ಹಾಗಿದ್ದಲ್ಲಿ, ಈವರೆಗೆ ತನಿಖೆಯಿಂದ ಆಗಿರುವ ವರದಿಯನ್ನು ಆಧರಿಸಿ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

(ಅ) ರಾಮನಗರದಲ್ಲಿ ಒಂದು ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಯೋಜನೆ ಸರ್ಕಾರದಲ್ಲಿ ಇರುತ್ತದೆ ರಾಮನಗರ ಮತ್ತು ಗುಲ್ಬರ್ಗಗಳಲ್ಲಿ ತಲಾ ಒಂದು ನರ್ಸಿಂಗ್ ಕಾಲೇಜ್ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆ ಮತ್ತು ರಾಜ್ಯದ ಯಾವುದೇ ನಗರದಲ್ಲಿ ಡಿ ಫಾರ್ಮ ಕಾಲೇಜನ್ನು ಪ್ರಾರಂಭಿಸುವ ಯೋಜನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ

(ಆ) ಹೌದು

(ಇ) ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗಿದ್ದು, ಅದು ಬಂದ ಕೂಡಲೇ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಮೀಸಲಾತಿ ಅವಕಾಶವನ್ನು ನ್ಯಾಯ ಸಮ್ಮತವಾಗಿ ದೊರಕಿಸಿಕೊಡುವುದು

681 (1125) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮೀಸಲಾತಿ ಅವಕಾಶವು ನ್ಯಾಯ ಸಮ್ಮತವಾಗಿ ದೊರೆಯದಿರುವ ರಾಜ್ಯದ ಅನುಸೂಚಿತ ಜಾತಿಗಳ ನಿರ್ದಿಷ್ಟ ಜಾತಿಗಳು, ಜನಾಂಗಗಳು ಹಾಗೂ ಬುಡಕಟ್ಟುಗಳಿಗೆ ಗುರುತಿಸುವುದಕ್ಕಾಗಿ ಈಗಾಗಲೆ ನಿವೃತ್ತ ನ್ಯಾಯಮೂರ್ತಿ ಶ್ರೀ ಎ ಜೆ ಸದಾಶಿವ ವಿಚಾರಣಾ ಆಯೋಗವನ್ನು ರಚಿಸಿದ್ದು, ಆಯೋಗವು ನೀಡುವ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 167 ದಿನಾಂಕ 01–02–2007ರಂದು ತಿಳಿಸಿದ್ದು ಈವರೆಗೂ ಕ್ರಮ ಕೈಗೊಳ್ಳದೇ ಇರುವುದು ಸರಕಾರದ ಗಮನದಲ್ಲಿದೆಯೇ ,

ಆ) ಹಾಗಿದ್ದಲ್ಲಿ, ನಿವೃತ್ತ ನ್ಯಾಯಮೂರ್ತಿ ಶ್ರೀ ಎ ಜೆ ಸದಾಶಿವ ವಿಚಾರಣಾ ಅಯೋಗದ ವರದಿಯನ್ನು ನೀಡಲು ಎಷ್ಟು ಕಾಲಾವಕಾಶವನ್ನು ನೀಡಲಾಗಿದೆ ಹಾಗೂ ವರದಿ ಬಂದನಂತರ ಎಷ್ಟು ಕಾಲಾವಕಾಶದಲ್ಲಿ ಕ್ರಮ ಕೈಗೊಳ್ಳಲಾಗುವುದು

ಇ) ಹಿಂದುಳಿದ ವರ್ಗಗಳಿಗೆ ಸಂಬಂದಪಟ್ಟಂತೆ ಸರಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಿದ್ದು, ಪ್ರಸ್ತುತ ಆಯೋಗದ ಅದ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುವ ವಿಷಯ ಪರಿಶೀಲನೆಯಲ್ಲಿದ್ದು, ನೇಮಕವಾದ ನಂತರ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮನೆ ಮನೆ ಸಮೀಕ್ಷಾ ಕಾರ್ಯವನ್ನು ನಡೆಸಿ ಆಯೋಗವು ನೀಡುವ ವರದಿಯನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಚುಕ್ಕೆ

ಗುರುತಿಲ್ಲದ ಪ್ರಶ್ನೆ ಸಂಖ್ಯೆ 167 ದಿನಾಂಕ 01-02-2007ರಂದು ತಿಳಿಸಿದ್ದು ಈವರೆಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸರಕಾರದ ಗಮನದಲ್ಲಿದೆಯೇ

ಈ) ಹಾಗಿದ್ದಲ್ಲಿ, ಶಾಶ್ವತ ಆಯೋಗವನ್ನು ರಚಿಸಿ ಅಧ್ಯಕ್ಷರು, ಸದಸ್ಯರನ್ನು ನೇಮಕ ಮಾಡಿ ಸಮೀಕ್ಷಾ ಕಾರ್ಯವನ್ನು ಪಡೆದು ವರದಿಯನ್ವಯ ಮುಂದಿನ ಕ್ರಮುವನ್ನು ತೆಗೆದುಕೊಳ್ಳಲು ಸರಕಾರ ಯಾವ ಕ್ರಮ ಕೈಗೊಳ್ಳುತ್ತದೆ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ನ್ಯಾಯಮೂರ್ತಿ ಶ್ರೀ ಎ ಜೆ ಸದಾಶಿವ ವಿಚಾರಣಾ ಆಯೋಗದ ವರದಿಯು ಇನ್ನೂ ಸ್ವೀಕೃತವಾಗಿರುವುದಿಲ್ಲ ಆದ್ದರಿಂದ, ಈ ಹಂತದಲ್ಲಿ ಮುಂದಿನ ಕ್ರಮ ಜರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

ಆ) ವರದಿಯನ್ನು ನೀಡಲು ದಿನಾಂಕ 23-09-2007ರ ವರೆಗೆ ಕಾಲಾವಕಾಶವಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲ್ಪಟ್ಟ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

ಇ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಅಧ್ಯಕ್ಷರು ಹಾಗೂ ಓರ್ವ ಸದಸ್ಯರನ್ನು ನೇಮಿಸಿ ದಿನಾಂಕ 10-07-07 ರಂದು ಅಧಿಸೂಚನೆಯನ್ನು ಹೊರಡಿಸಿದ್ದು, ಅವರುಗಳು ಕಾರ್ಯಭಾರವನ್ನು ವಹಿಸಿಕೊಂಡಿದ್ದಾರೆ

ಈ) ಪೂರ್ಣ ಪ್ರಮಾಣದಲ್ಲಿ ಆಯೋಗದ ಪುನರ್ ರಚನೆ ಮಾಡಿದ ನಂತರ ಮನೆ ಮನೆ ಸಮೀಕ್ಷಾ ಕಾರ್ಯ ಕುರಿತು ಸೂಕ್ತ ಕ್ರಮವನ್ನು ಆಯೋಗ ತೆಗೆದುಕೊಳ್ಳುವುದು ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು

682 (460) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) 2006-07ರಲ್ಲಿ ಹೊಸದಾಗಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಯಿತು ,

ಆ) ಇದರಿಂದ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಸಿಕ್ಕಲು ಅವಕಾಶವಾಯಿತು ,

ಇ) 2007-08ರಲ್ಲಿ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕಾಗಿ, ಎಂ ಸಿ ಐ ಹಾಗೂ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

ಅ) ಹಾಸನ, ಮಂಡ್ಯ ಮತ್ತು ಬೆಳಗಾಂ

ಆ) 300

ಇ) 2007–08ನೇ ಸಾಲಿನಲ್ಲಿ ಶಿವಮೊಗ್ಗ, ಬೀದರ್ ಮತ್ತು ರಾಯಚೂರುಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡಿ ಪ್ರತಿ ಕಾಲೇಜಿಗೆ 100 ಸೀಟುಗಳಂತೆ ಪ್ರವೇಶ ನಿಗದಿಪಡಿಸಿ ಭಾರತೀಯ ವೈದ್ಯಕೀಯ ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರದವರು ದಿನಾಂಕ 13–07–2007ರಂದು ಅನುಮತಿ ನೀಡಿರುತ್ತಾರೆ ಅದರಂತೆ ಈ ವೈದ್ಯಕೀಯ ಕಾಲೇಜುಗಳನ್ನು ಈ ವರ್ಷ ಪ್ರಾರಂಭಿಸಲಾಗುವುದು

683 (1012) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮೇಲ್ದರ್ಜೆಗೇರಿಸಿರುವ ಬಾಗೇಪಲ್ಲಿ ಮತ್ತು ಗುಡಿಬಂಡೆ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಈ ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) 2006–07ನೇ ಸಾಲಿನಲ್ಲಿ ಈ ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಿರುವುದರಿಂದ 2007–08ನೇ ಸಾಲಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ

ಆ) ಇದಕ್ಕೆ ಕಟ್ಟಡದ ಕಾಮಗಾರಿಯನ್ನು 2007–08 ನೇ ಸಾಲಿನಲ್ಲಿ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ ಇದಕ್ಕೆ ಅಗತ್ಯವಾಗಿರುವ ಸಿಬ್ಬಂದಿಗಳನ್ನು ಹಾಗೂ ಉಪಕರಣಗಳನ್ನು ಕಟ್ಟಡ ಕಾಮಗಾರಿ ಮುಗಿದ ನಂತರ ಪೂರೈಸಲು ಕ್ರಮ ಕೈಗೊಳ್ಳಲಾಗುವುದು

684 (1013) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಾಗೇಪಲ್ಲಿಯ ಸರ್ಕಾರಿ ಐಟಿಐ ಗೆ ಸ್ವಂತ ಕಟ್ಟಡ ಇಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಸದರಿ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) –

ಅ) ಹೌದು

ಆ) ಹೌದು

ಇ) ಅನುದಾನ ಲಭ್ಯತೆ ಆಧರಿಸಿ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು

685 (924) ಶ್ರೀ ಸುನಿಲ್ ಕುಮಾರ್ ವಿ (ಕಾರ್ಕಳ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ನರ್ಸಿಂಗ್ ಶಾಲೆಗಳ ಸಂಖ್ಯೆ ಎಷ್ಟು , (ತಾಲ್ಲೂಕುವಾರು ವಿವರ ನೀಡುವುದು) ,

ಆ) ಇವುಗಳಲ್ಲಿ ಎಷ್ಟು ಶಾಲೆಗಳು ಅನಧಿಕೃತ ಎಂದು ರಾಜ್ಯ ಹೈಕೋರ್ಟ್ ತೀರ್ಪು ನೀಡಿದೆ , (ಕಾಲೇಜುಗಳ ವಿವರ ನೀಡುವುದು)

ಇ) ಅನಧಿಕೃತ ಶಾಲೆಗಳು ಎಂದು ತೀರ್ಪು ನೀಡಲು ಕಾರಣವೇನು , (ವಿವರ ನೀಡುವುದು)

ಈ) ಈ ಶಾಲೆಗಳು ಪುನಃ 2007–08ನೇ ಸಾಲಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಬಂದಿದ್ದಲ್ಲಿ, ಈ ರೀತಿ ಸೇರಿಸಿಕೊಳ್ಳುತ್ತಿರುವ ಯಾವ ಯಾವ ಶಾಲೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆ ,

ಊ) ಈ ಶಾಲೆಗಳನ್ನು ಸಕ್ರಮಗೊಳಿಸಲು ಸರ್ಕಾರ ಪರಿಹಾರೋಪಾಯವನ್ನು ರೂಪಿಸಿದೆಯೇ , (ವಿವರ ನೀಡುವುದು)

ಶ್ರೀ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

ಅ) 671 (ಪಟ್ಟಿಯನ್ನು ಲಗತ್ತಿಸಿದೆ)

ಆ) ಇಲ್ಲಿಯವರೆಗೆ ಉಚ್ಚ ನ್ಯಾಯಾಲಯ ಯಾವುದೇ ನರ್ಸಿಂಗ್ ಶಾಲೆಯನ್ನು ಅನಧಿಕೃತ ಎಂದು ತೀರ್ಪು ನೀಡಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ

686 (1016) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) –

ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) –

ಶ್ರೀ ಬಿ ಶಿವರಾಮು (ಗಂಡಸಿ) – (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸಿ ಒ ಇ (ಸೆಂಟರ್ ಆಫ್ ಎಕ್ಸಲೆನ್ಸ್) ಅಡಿಯಲ್ಲಿ ಬರುವ ಸರಕಾರಿ ಕೈಗಾರಿಕಾ ಸರಬೇತಿ ಸಂಸ್ಥೆಗಳ ವಿವರಗಳನ್ನು ನೀಡುವುದು ,

ಆ) ಈ ಐ ಟಿ ಐ ಗಳಿಗೆ ಖರೀದಿಸಲಾದ ಯಂತ್ರೋಪಕರಣಗಳ (Tools & Equipments) ವಿವರಗಳನ್ನು ಹಾಗೂ ತಗಲುವ ವೆಚ್ಚದ ವಿವರಗಳನ್ನು ಐಟಂವಾರು ಹಾಗೂ ಐ ಟಿ ಐ ವಾರು ನೀಡುವುದು ,

ಇ) ಖರೀದಿಸಲಾದ ಯಂತ್ರೋಪಕರಣಗಳ ಸುಸ್ಥಿತಿಯ ಬಗ್ಗೆ ನಿಯಮಾನುಸಾರವಾಗಿ ಇದಕ್ಕೆ ಸಂಬಂಧಪಟ್ಟವರಿಂದ ಪ್ರಮಾಣೀಕರಿಸಲಾಗಿದೆಯೇ ,

ಈ) ಹಾಗಿದ್ದಲ್ಲಿ, ಇವುಗಳನ್ನು ಯಾರಿಂದ ಪ್ರಮಾಣೀಕರಿಸಲಾಗಿದೆ ಎಂಬ ಬಗೆಗಿನ ವಿವರಗಳನ್ನು ಐ ಟಿ ಐ ವಾರು ನೀಡುವುದು ,

ಉ) ಈ ಯಂತ್ರೋಪಕರಣಗಳು ಒದಗಿಸಿದ ಸರಬರಾಜುದಾರರ ವಿವರಗಳನ್ನು [ಸಂಸ್ಥೆಯ (firms) ಹೆಸರು, ವಿಳಾಸ ಮತ್ತು ಟಿನ್ ನಂ] ಐ ಟಿ ಐ ವಾರು ಒದಗಿಸುವುದು ,

ಊ) ಈ ಯಂತ್ರೋಪಕರಣಗಳು ಆಯಾ ಐ ಟಿ ಐ ಗಳಲ್ಲಿ ನೂರಕ್ಕೆ ನೂರರಷ್ಟು ಲಭ್ಯವಿದೆಯೇ ,

ಋ) ಈ ಯಂತ್ರೋಪಕರಣಗಳು ಸಂಬಂಧಪಟ್ಟ ಐ ಟಿ ಐ ಗಳಲ್ಲಿ ಸ್ಥಾಪಿಸಲಾಗಿದೆಯೇ ಹಾಗೂ ಇವುಗಳು ಉಪಯೋಗಕ್ಕೆ ಅರ್ಹವಾದ ಸ್ಥಿತಿಯಲ್ಲಿವೆಯೇ ,

ಎ) ಪ್ರಸ್ತುತ ಇವುಗಳನ್ನು ತರಬೇತಿ ನೀಡುವುದಕ್ಕೆ ಉಪಯೋಗಿಸಲಾಗುತ್ತಿದೆಯೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) –

ಅ) ಅನುಬಂಧ-1ರಲ್ಲಿ ನೀಡಿದೆ

ಆ) ಅನುಬಂಧ-2ರಲ್ಲಿ ನೀಡಿದೆ

ಇ) ಹೌದು

ಈ) ಅನುಬಂಧ-3ರಲ್ಲಿ ನೀಡಿದೆ

ಉ) ಅನುಬಂಧ-4ರಲ್ಲಿ ಒದಗಿಸಿದೆ

ಊ) ಹೌದು

ಋ) ಹೌದು

ಎ) ಹೌದು

ಅನುಬಂಧ-1

ಸಿ ಒ ಇ ಯೋಜನೆಯಡಿಯ ಕೈಗಾರಿಕಾ ತರಬೇತಿ ಸಂಸ್ಥೆಗಳು

2005-06

1 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ತುಮಕೂರು ರಸ್ತೆ, ಬೆಂಗಳೂರು-22

2 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಹಾಸನ

3 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಹೊಸೂರು ರಸ್ತೆ, ಬೆಂಗಳೂರು--29

4 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಗುಲ್ಬರ್ಗಾ

5 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಮೈಸೂರು-07

6 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಹುಬ್ಬಳ್ಳಿ

2006-07

1 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಳ್ಳಾರಿ

2 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಭದ್ರಾವತಿ

3 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬಿಜಾಪುರ

4 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ದಾವಣಗೆರೆ

5 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಮಂಗಳೂರು (ಪುರುಷ)

6 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ರಾಯಚೂರು

ಅನುಬಂಧ-2

ಕ್ರಮ ಸಂಖ್ಯೆ	ಕೈಗಾರಿಕಾ ತರಬೇತಿ ಸಂಸ್ಥೆಗಳ ಹಸರು	ಖರೀದಿ ವಿವರಗಳು	ಮೊತ್ತ	ಒಟ್ಟು ಮೊತ್ತ
1	ಬೆಂಗಳೂರು-29	ಯಂತ್ರೋಪಕರಣಗಳು	1615664	
		ಗಣಕ ಯಂತ್ರಗಳು	603938	2416725
		ಪೀಠೋಪಕರಣಗಳು	197123	
2	ಬೆಂಗಳೂರು-22	ಯಂತ್ರೋಪಕರಣಗಳು	13668608	
		ಗಣಕ ಯಂತ್ರಗಳು	930994	14867191
		ಪೀಠೋಪಕರಣಗಳು	267589	
3	ಮೈಸೂರು -7	ಯಂತ್ರೋಪಕರಣಗಳು	823417	
		ಗಣಕ ಯಂತ್ರಗಳು	767466	1774402
		ಪೀಠೋಪಕರಣಗಳು	183519	
4	ಹಾಸನ	ಯಂತ್ರೋಪಕರಣಗಳು	4326123	
		ಗಣಕ ಯಂತ್ರಗಳು	930994	5524706
		ಪೀಠೋಪಕರಣಗಳು	267589	
5	ಹುಬ್ಬಳ್ಳಿ	ಯಂತ್ರೋಪಕರಣಗಳು	5635398	
		ಗಣಕ ಯಂತ್ರಗಳು	644820	6463737
		ಪೀಠೋಪಕರಣಗಳು	183519	
6	ಗುಬ್ಬಿಗಾರ್	ಯಂತ್ರೋಪಕರಣಗಳು	2014758	
		ಗಣಕ ಯಂತ್ರಗಳು	440410	2628621
		ಪೀಠೋಪಕರಣಗಳು	173453	
				33675382

ಅನುಬಂಧ-3

ಯಂತ್ರೋಪಕರಣಗಳನ್ನು ಪ್ರಮಾಣೀಕರಿಸಿದ ಅಧಿಕಾರಿಗಳ ವಿವರ

ಕ್ರಮ ಸಂಖ್ಯೆ	ಕೈಗಾರಿಕಾ ತರಬೇತಿ ಸಂಸ್ಥೆಗಳ ಹೆಸರು	ಪ್ರಮಾಣೀಕರಿಸಿದ ಅಧಿಕಾರಿಗಳ ಹೆಸರು ಮತ್ತು ಪದನಾಮ
1	ಹೊಸೂರು ರಸ್ತೆ, ಬೆಂಗಳೂರು-29	ಸುನಿತಾ, ಕಿ ತ ಅ, ಬಿ ನಾಗರಾಜ್, ಕಿ ತ ಅ, ಸುಚಿತ್ರ, ಕಿ ತ ಅ, ಬಸವರಾಜ ಪಾಟೀಲ್, ಕಿ ತ ಅ
2	ತುಮಕೂರು ರಸ್ತೆ, ಬೆಂಗಳೂರು-22	ಕವಿತ, ಕಿ ತ ಅ, ಎಂ ಆರ್ ಸಂಜೀವ, ಕಿ ತ ಅ, ನಾಗಭೂಷಣ್ ಹೆಚ್ ಎಂ, ಕಿ ತ ಅ, ವೆಂಕಟೇಶ್, ಕಿ ತ ಅ, ಹೆಚ್ ಎನ್ ಪ್ರಕಾಶ್, ಕಿ ತ ಅ ಮಹಮದ್ ಹಸನ್, ಕಿ ತ ಅ
3	ಮೈಸೂರು-07	ಎ ಆರ್ ರವಿ, ಕಿ ತ ಅ, ಜಯೇಂದ್ರ, ತ ಅ, ರಮೇಶ್ ಎಸ್ ಎಸ್, ಕಿ ತ ಅ, ಕೆ ಬಿ ಶಿವರಾಂ, ಕಿ ತ ಅ, ನೀಲಪ್ಪ ಒ, ಕಿ ತ ಅ, ಚಂದ್ರಾವತಿ, ಕಿ ತ ಅ, ಪುಟ್ಟಸ್ವಾಮಿ ಆರ್, ಕಿ ತ ಅ, ಜವರಯ್ಯ ಕೆ, ಕಿ ತ ಅ
4	ಹಾಸನ	ಹೆಚ್ ಎನ್ ಲೋಕೇಶ್, ಕಿ ತ ಅ, ಸೋಮಶೇಖರ್, ಕಿ ತ ಅ, ಕೆ ಎಂ ಶ್ರೀನಿವಾಸ, ಕಿ ತ ಅ,
5	ಗುಲ್ಬರ್ಗಾ	ಬಸವರಾಜ ಡಿಗ್ಗೆ, ಕಿ ತ ಅ, ಕೃಷ್ಣದೇವರಾಯ, ರಮೇಶ ವೈ, ಕಿ ತ ಅ, ಪ್ರದೀಪ್, ಕಿ ತ ಅ
6	ಹುಬ್ಬಳ್ಳಿ	ಕೆ ಎಸ್ ನಾಡಿಗೇರ್, ಕಿ ತ ಅ, ಜಿ ಬಿ ಅರ್ಕಸಾಲಿ, ಕಿ ತ ಅ, ಎ ಎಂ ತಿಮ್ಮಾಪುರ್

ಅನುಬಂಧ-4

SUPPLIERS DETAILS

Sl No	Name of Firm	TIN Number
1	Micro Clinic India Pvt. Ltd , No 55, 1 Floor, 11th Main 29th 'A' Cross, 4th Block, Jayanagar, Bangalore-560 011	PI No 002
2	N S Engineering Works, No 219, 1st B Cross, 2nd Main Kasturinagar, N G E F East, Bangalore-43	29610094979
3	Techno Trade, No 183/1, 3rd Floor, Sampige Road, Malleswaram, Bangalore-560 003	29110086912
4	Variety Enterprises, No 140, Rajalakshmi Mansion, Behind Reddy Building, J C Road, Bangalore-560 002	29590075396
5	District Supply & Marketing Co -op Pvt Ltd , Bangalore Urban, Kalyani Cellar Floor, VITC Building, Kasturba Road, Bangalore-560 001	JRB-KJN_31/3/15996

687 (923) ಶ್ರೀ ಉಮಾಪತಿ ಎ ವಿ (ಹೊಳಲ್ಕೆರೆ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳ ಸಂಖ್ಯೆ ಎಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು) ,

ಆ) ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳಿಗೆ ಸೌಕರ್ಯ (ಸಿಬ್ಬಂದಿ, ಕಟ್ಟಡ, ಔಷಧಿಗಳು) ಗಳನ್ನು ಒದಗಿಸಿದೆಯೇ ,

ಇ) ಬಯಲು ಸೀಮೆ ಚಿತ್ರದುರ್ಗ ಸೇರಿದಂತೆ ಎಲ್ಲಾ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೆ ,

ಈ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳಿಗೆ ವ್ಯದ್ಯರುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ರಾಜ್ಯದಲ್ಲಿ 149 ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಗೂ 100ಕ್ಕಿಂತ ಹೆಚ್ಚಿನ ಹಾಸಿಗೆಗಳ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ 76 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ 516 ಪ್ರಾದಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ತಾತ್ವಿಕವಾಗಿ ಮೇಲ್ದರ್ಜೆಗೇರಿಸಲಾಗಿದೆ ಹಾಗೂ ಹಾಸನ ಜಿಲ್ಲಾ ಆಸ್ಪತ್ರೆಯನ್ನು 750 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ (ವಿವರಗಳನ್ನು ಅನುಬಂಧ-1ರಲ್ಲಿ ಕೊಡಲಾಗಿದೆ)

ಆ) ಮೇಲ್ದರ್ಜೆಗೇರಿಸಿದ ಆಸ್ಪತ್ರೆಗಳಿಗೆ ಸಿಬ್ಬಂದಿ ವರ್ಗದವರನ್ನು ಮಂಜೂರು ಮಾಡಲಾಗಿದೆ, ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು ಪೂರ್ಣಗೊಂಡ ನಂತರ ಸಿಬ್ಬಂದಿಗಳನ್ನು ನಿಯೋಜಿಸಲಾಗುವುದು ಹಾಗೂ ಔಷಧಿಗಳನ್ನು ಅದಕ್ಕನುಗುಣವಾಗಿ ವಿತರಿಸಲಾಗುವುದು

ಇ) ಬಂದಿದೆ

ಈ) ಮೇಲ್ದರ್ಜೆಗೇರಿಸಿರುವ ಆಸ್ಪತ್ರೆಗಳ ಕಟ್ಟಡ ಕಾಮಗಾರಿ 60% ರಷ್ಟು ಪೂರ್ಣಗೊಂಡ ನಂತರ ಹೆಚ್ಚುವರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು

688 (1020) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2007ನೇ ಸಾಲಿನ ಸಾಮಾನ್ಯ ಪರೀಕ್ಷಾ ಘಟಕದಲ್ಲಿ ವೈದ್ಯಕೀಯ ಸೀಟುಗಳು ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಹಾಗಿದ್ದಲ್ಲಿ ಈ ಸೀಟುಗಳು ಕಡಿತಗೊಳ್ಳಲು ಕಾರಣವೇನು ,

ಇ) ಸೀಟುಗಳು ಕಡಿತದಿಂದಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು ಭಾರತೀಯ ವೈದ್ಯಕೀಯ ಮಂಡಳಿಯಿಂದ ಕೆಲವು ಕಾಲೇಜುಗಳಿಗೆ ಮಾನ್ಯತೆ ದೊರಕದೇ ಇರುವ ಹಿನ್ನಲೆಯಲ್ಲಿ ಸರ್ಕಾರವು ಮಾನ್ಯತೆಗೋಸ್ಕರ ತೆಗೆದುಕೊಂಡ ಕ್ರಮಗಳೇನು ,

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ ,

ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

ಅ) ಹೌದು

ಆ) ಮೂರು ಸರ್ಕಾರಿ ಹಾಗೂ ಆರು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಭಾರತೀಯ ವೈದ್ಯಕೀಯ ಪರಿಷತ್ತು ಮಾನ್ಯತೆಯನ್ನು ತಡೆಹಿಡಿದಿದ್ದರಿಂದ ಮತ್ತು ಕೋಲಾರದ ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಡೀಮ್ಡ್ ಯೂನಿವರ್ಸಿಟಿ ಆದುದರಿಂದ, ಸಿಇಟಿ ಮೊದಲ ಸುತ್ತಿನ ಆಯ್ಕೆ ಸಮಯದಲ್ಲಿ ಸೀಟುಗಳನ್ನು ಕಡಿತಗೊಳಿಸಲಾಗಿತ್ತು

ಇ) ಈಗ ಭಾರತ ಸರ್ಕಾರವು ಈ ಮೇಲ್ಕಂಡ ಮೂರು ಸರ್ಕಾರಿ ವೈದ್ಯಕೀಯ ಕಾಲೇಜುಗಳೊಂದಿಗೆ ಪ್ರಸಕ್ತ ಸಾಲಿಗೆ ಹೊಸ ಮೂರು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಮಾನ್ಯತೆ ನೀಡಿರುತ್ತದೆ ಅದರೊಂದಿಗೆ, ನಾಲ್ಕು ಖಾಸಗಿ ವೈದ್ಯಕೀಯ ಕಾಲೇಜುಗಳಿಗೂ ಸಹ ಮಾನ್ಯತೆಯನ್ನು ನೀಡಿರುತ್ತದೆ ಅಲ್ಲದೆ, ಇನ್ನೂ ಎರಡು ಖಾಸಗಿ ಕಾಲೇಜುಗಳಿಗೆ ಶೀಘ್ರವೇ ಮಾನ್ಯತೆ ಸಿಗುವ ಸಂಭವವಿದೆ ಆದ್ದರಿಂದ ಸೀಟುಗಳ ಸಂಖ್ಯೆ ಹಿಂದಿನ ವರ್ಷಕ್ಕಿಂತ ಈ ವರ್ಷ ಹೆಚ್ಚಾಗುತ್ತದೆ

ಈ) ಉದ್ಭವಿಸುವುದಿಲ್ಲ

690 (1127) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಕಾರ್ಮಿಕ ಆಸ್ಪತ್ರೆಗಳೆಷ್ಟು ,

ಆ) ಈ ಆಸ್ಪತ್ರೆಗಳು ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿವೆ ,

ಇ) ರಾಜ್ಯದಲ್ಲಿರುವ ಕಾರ್ಮಿಕ ಆಸ್ಪತ್ರೆಗಳಲ್ಲಿ ಎಷ್ಟು ಜನ ವೈದ್ಯರ ಕೊರತೆ ಇದೆ

ಈ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅ) 07 (ಕರಾವಿ ಆಸ್ಪತ್ರೆ, ರಾಜಾಜಿನಗರ ಹೊರತುಪಡಿಸಿ)

ಆ) ಇಂದಿರಾನಗರ, ಬೆಂಗಳೂರು ಮೈಸೂರು, ಮಂಗಳೂರು, ದಾವಣಗೆರೆ, ಹುಬ್ಬಳ್ಳಿ, ಬೆಳಗಾಂ, ದಾಂಡೇಲಿ

ಇ) ಕಾರ್ಮಿಕ ಆಸ್ಪತ್ರೆಗಳಲ್ಲಿ 92 ಮಂದಿ ವೈದ್ಯರ ಕೊರತೆ ಇದೆ

ಈ) ಶಸ್ತ್ರಚಿಕಿತ್ಸಕರು, ಉಪ ಶಸ್ತ್ರಚಿಕಿತ್ಸಕರ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಉದ್ದೇಶಿಸಲಾಗಿದೆ ವಿಮಾ ವೈದ್ಯಾಧಿಕಾರಿಗಳ 32 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

691 (1128) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2003 ರಿಂದ 2006 ರವರೆಗೆ ರಾಜ್ಯದಲ್ಲಿರುವ ಕಾರ್ಖಾನೆಗಳಲ್ಲಿ ಇದುವರೆವಿಗೂ ಸಂಭವಿಸಿರುವ ಅಪಘಾತಗಳ ಸಂಖ್ಯೆ ಎಷ್ಟು ಗಾಯಗೊಂಡವರ ಹಾಗೂ ಅಪಘಾತದಿಂದ ಮರಣ ಹೊಂದಿದವರ ಸಂಖ್ಯೆ ಎಷ್ಟು ,

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) –

ಅವಧಿ	ಸಂಭವಿಸಿರುವ ಒಟ್ಟು ಅಪಘಾತಗಳು	ಗಾಯ ಗೊಂಡವರ ಸಂಖ್ಯೆ	ಮರಣ ಹೊಂದಿದವರ ಸಂಖ್ಯೆ	Period	Total number of accidents incurred	Number of persons injured	Number of deaths
2003-04	1575	1518	57	2003-04	1575	1518	57
2004-05	1480	1428	52	2004-05	1480	1428	52
2005-06	1351	1300	51	2005-06	1351	1300	51

692 (1129) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಾರ್ವಜನಿಕ ಆಸ್ಪತ್ರೆಗಳಿಗೆ ಧಾರಾಳವಾಗಿ ಕಲಬೆರಕೆ ಔಷಧಿ ಸರಬರಾಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಇ) ಕಲಬೆರಕೆ ಔಷಧಿ ತಯಾರು ಮಾಡುತ್ತಿರುವವರ ಮೇಲೆ ಇದುವರೆಗೂ ಸರಕಾರ ಕೈಗೊಂಡ ಕ್ರಮಗಳೇನು ?

ಈ) ಪ್ರತಿವರ್ಷ ಎಷ್ಟು ಮೊತ್ತದ ಔಷಧಿಯನ್ನು ಸರಕಾರ ಆಸ್ಪತ್ರೆಗಳಿಗೆ ಖರೀದಿಸಲಾಗುತ್ತಿದೆ , (ವಿವರ ಒದಗಿಸುವುದು)

ಉ) ಯಾವ ವಿಧಾನದ ಮೂಲಕ ಔಷಧಿಯನ್ನು ಖರೀದಿಸಲಾಗುತ್ತಿದೆ ,

ಊ) ಪ್ರತಿವರ್ಷ ಔಷಧಿ ಖರೀದಿಸಲು ಸರಕಾರದಿಂದ ಮೀಸಲಿಟ್ಟಿರುವ ಹಣವೆಷ್ಟು ? (ಸಂಪೂರ್ಣ ವಿವರ ಒದಗಿಸುವುದು)

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಸಾರ್ವಜನಿಕ ಆಸ್ಪತ್ರೆಗಳಿಗೆ ಕಲಬೆರಕೆ ಔಷಧಿ ಸರಬರಾಜಾಗಿರುವುದು ಕಂಡು ಬಂದಿಲ್ಲ

ಆ) ಔಷಧ ಪರಿವೀಕ್ಷಕರು ಹಾಗೂ ಸಹಾಯಕ ಔಷಧ ನಿಯಂತ್ರಕರು ಸರ್ಕಾರಿ ಆಸ್ಪತ್ರೆ ಹಾಗು ಡ್ರಗ್ಸ್ ಲಾಜಿಸ್ಟಿಕ್ ಸೊಸೈಟಿಗಳಿಂದ ಔಷದಿ ಮಾದರಿಗಳನ್ನು ಪಡೆದು ವಿಶ್ಲೇಷಣೆಗೆ ಸಲ್ಲಿಸಿರುತ್ತಾರೆ ಕಲಬೆರಕೆ ಎಂದು ಕಂಡು ಬಂದಲ್ಲಿ, ಔಷಧ ಮತ್ತು ಕಾಂತಿವರ್ಧಕ ಆಧಿನಿಯಮದ ಮೇರೆಗೆ ತಯಾರಕರು ಮತ್ತು ವಿತರಕರ ಮೇಲೆ ಕ್ರಮ ಜರುಗಿಸಲಾಗುವುದು ಕಳೆದ 06 ತಿಂಗಳಿನಲ್ಲಿ ವಿವಿಧ ಆಸ್ಪತ್ರೆಗಳಿಂದ 330 ಔಷಧಿಗಳ ಮಾದರಿ ವಿಶ್ಲೇಷಣೆಗೆ ಪಡೆಯಲಾಗಿದೆ ಹಾಗೂ 58 ಮಾದರಿಗಳು ಉತ್ತಮ ಗುಣಮಟ್ಟದ್ದಲ್ಲವೆಂದು ಕಂಡು ಬಂದಿವೆ ಆದರೆ ಕಲಬೆರಕೆ ಪ್ರಕರಣಗಳು ಕಂಡು ಬಂದಿಲ್ಲ

ಇ) ಇತ್ತೀಚೆಗೆ ಇಂತಹ ಪ್ರಕರಣಗಳು ಕಂಡು ಬಂದಿಲ್ಲ 1995–96ರ ಸಾಲಿನಲ್ಲಿ ಒಂದು ಕಲಬೆರಕೆ ಔಷಧಿ ಮಾರುಕಟ್ಟೆಯಲ್ಲಿ ಕಂಡು ಬಂದಿದ್ದು, ಸದರಿ ಔಷಧಿ ತಯಾರಕರ ವಿರುದ್ಧ ಸಿ ಸಿ ಸಂಖ್ಯೆ 29/98 ಗುಡಿಬಂಡೆ ನ್ಯಾಯಾಲಯ ಮತ್ತು ಸಿ ಸಿ ಸಂಖ್ಯೆ 656/98 ಶಿರಗುಪ್ಪ ನ್ಯಾಯಾಲಯದಲ್ಲಿ ಖಟ್ಲೆಗಳನ್ನು ಹೂಡಲಾಗಿದೆ

ಈ) ಆರೋಗ್ಯ - 2006-07ನೇ ಸಾಲಿಗೆ ರೂ 61,23,73,777/- ಗಳ ಮೌಲ್ಯದ ಔಷಧಿಗಳನ್ನು ಖರೀದಿಸಿ ಪೂರೈಸಲಾಗಿದೆ

2007-08ನೇ ಸಾಲಿಗೆ ರೂ 7,74,45,550/- ಗಳ ಮೌಲ್ಯದ ಔಷಧಿಗಳನ್ನು ಖರೀದಿಸಲಾಗಿದೆ (ದಿನಾಂಕ 16-07-07 ರವರೆಗೆ)

ವೈದ್ಯಕೀಯ ಶಿಕ್ಷಣ 2006-07ನೇ ಸಾಲಿಗೆ ರೂ 19,08,04,192/- ಗಳ ಮೌಲ್ಯದ ಔಷಧಿಯನ್ನು ಕರೀದಿಸಿ ಪೂರೈಸಲಾಗಿದೆ

2007-08ನೇ ಸಾಲಿಗೆ ರೂ 3,74,83,175/- ಗಳ ಮೌಲ್ಯದ ಔಷಧಿಗಳನ್ನು ಖರೀದಿಸಲಾಗಿದೆ (ದಿನಾಂಕ 16-7-07 ರವರೆಗೆ)

ಉ) ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಕಾಯ್ದೆ 1999 ನಿಯಮ 2000ರ ಅನ್ವಯ ರಾಷ್ಟ್ರೀಯ ಮಟ್ಟದಲ್ಲಿ ಮೂಲ ಉತ್ಪಾದಕರಿಂದ ಟೆಂಡರ್‌ನ್ನು ಆಹ್ವಾನಿಸಿ ದರಗುತ್ತಿಗೆ ನಿಗದಿಪಡಿಸಿ ರಾಜ್ಯದ ಆರೋಗ್ಯ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಔಷಧಿಗಳನ್ನು ಖರೀದಿ ಮಾಡಲಾಗುವುದು

ಊ) 2006-07ನೇ ಸಾಲಿನ ಅಯವ್ಯಯದಲ್ಲಿ ಔಷಧಿ ಮತ್ತು ರಾಸಾಯನಿಕಗಳ ಖರೀದಿಯ ಮೊತ್ತದ ವಿವರ

	ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚವಾಗಿರುವ ಅನುದಾನ
ಆರೋಗ್ಯ	70,81,32,600	65,98,07,000	61,23,73,777
ವೈದ್ಯಕೀಯ ಶಿಕ್ಷಣ	19,68,72,200	19,05,18,600	19,08,01,192
ಒಟ್ಟು	90,50,04,800	85,03,25,600	80,31,77,969

2007-08ನೇ ಸಾಲಿನ ಆಯವ್ಯಯದಲ್ಲಿ ಔಷಧಿ ಮತ್ತು ರಾಸಾಯನಿಕಗಳ ಖರೀದಿಯ ಮೊತ್ತದ ವಿವರ (ದಿನಾಂಕ 16-7-2007 ರವರೆಗೆ)

	ಒದಗಿಸಿರುವ ಅನುದಾನ	ಬಿಡುಗಡೆಯಾದ ಅನುದಾನ	ವೆಚ್ಚವಾಗಿರುವ ಅನುದಾನ
ಆರೋಗ್ಯ	77,31,36,400	15,00,00,000	7,74,45,550
ವೈದ್ಯಕೀಯ ಶಿಕ್ಷಣ	20,52,00,000	6,63,56,600	3,74,83,175
ಒಟ್ಟು	97,83,36,400	21,63,56,600	11,49,28,725

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಕೊಳವೆ ಬಾವಿ ಮಂಜೂರಾತಿ

693 (1014) **ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?**

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿಗೆ ಮಂಜೂರಾಗಿರುವ (ಗಂಗಾ ಕಲ್ಯಾಣ ಯೋಜನೆ) ಕೊಳವೆ ಬಾವಿಗಳ ಸಂಖ್ಯೆ ಎಷ್ಟು ,

ಆ) ಸದರಿ ಯೋಜನೆಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ , ಅವುಗಳಲ್ಲಿ ನೀರು ಸಿಗದೇ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ,

ಇ) ಮಂಜೂರಾದ ಕೊಳವೆ ಬಾವಿಗಳಲ್ಲಿ ಇದುವರೆಗೂ ಕೊರೆಯದೇ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು, ಇದುವರೆಗೂ ಕೊರೆಯದಿರಲು ಕಾರಣವೇನು ,

ಈ) ಸದರಿ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) -

ಅ) 2005–06 ಮತ್ತು 2006–07ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿಗೆ ಮಂಜೂರಾಗಿರುವ ಕೊಳವೆ ಬಾವಿಗಳ ಸಂಖ್ಯೆ ಈ ಕೆಳಗಿನಂತಿದೆ ,

	2005–06	2006–07
ಪರಿಶಿಷ್ಟ ಜಾತಿ	113	115
ಪರಿಶಿಷ್ಟ ವರ್ಗ	06	17
ಒಟ್ಟು	119	132

ಆ) 2005–06ನೇ ಸಾಲಿನಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊರೆಯಲಾದ ಸಫಲ ಕೊಳವೆಬಾವಿಗಳ ಸಂಖ್ಯೆ 119 ವಿಫಲ ಕೊಳವೆಬಾವಿಗಳ ಸಂಖ್ಯೆ 08

2006–07ನೇ ಸಾಲಿನಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಕೊರೆಯಲಾದ ಸಫಲ ಕೊಳವೆಬಾವಿಗಳ ಸಂಖ್ಯೆ 28 ಮತ್ತು ವಿಫಲ ಕೊಳವೆಬಾವಿಗಳ ಸಂಖ್ಯೆ 02

ಇ) ಮಂಜೂರಾದ ಕೊಳವೆಬಾವಿಗಳಲ್ಲಿ ಕೊರೆಯದೇ ಇರುವ ಕೊಳವೆಬಾವಿಗಳ ಸಂಖ್ಯೆ 104

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ನೀರಿನ ಅಂತರ್ಜಲ ಮಟ್ಟ ತೀರಾ ಕುಸಿದಿದ್ದು, ಕನಿಷ್ಟ ಆಳ 800 ರಿಂದ 900 ಅಡಿಗಳವರೆಗೆ ಕೊಳವೆಬಾವಿಯನ್ನು ಕೊರೆಯಬೇಕಾಗಿರುತ್ತದೆ ಹಾಗೂ ಅಳವಡಿಸಬೇಕಾದ ಕೇಸಿಂಗ್ ಪೈಪಿನ ಉದ್ದ ಹೆಚ್ಚಾಗಿರುತ್ತದೆ ಈ ಹಿನ್ನಲೆಯಲ್ಲಿ ವೈಯಕ್ತಿಕ ಕೊಳವೆಬಾವಿ ಯೋಜನೆಯಡಿ ನಿಗದಿಪಡಿಸಿದ ರೂ 86,000/– ಸಹಾಯಧನದ ಮಿತಿಯಲ್ಲಿ ಕೊಳವೆಬಾವಿ ಕೊರೆದು, ಪಂಪ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಲು ಹಣ ಸಾಕಾಗುತ್ತಿಲ್ಲ ಸಹಾಯಧನಕ್ಕಿಂತ ಹೆಚ್ಚುವರಿ ಹಣವನ್ನು ಭರಿಸಲು ಹೆಚ್ಚಿನ ಫಲಾನುಭವಿಗಳು ಮುಂದೆ ಬಾರದ ಪ್ರಯುಕ್ತ ಪ್ರಗತಿ ಕುಂಠಿತವಾಗಿರುತ್ತದೆ

ಈ) ಪ್ರಶ್ನೆ (ಇ) ಗೆ ನೀಡಿದ ಉತ್ತರದಲ್ಲಿನ ಕಾರಣಗಳಿಂದಾಗಿ ಪ್ರಗತಿ ಕುಂಠಿತಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಕೊಳವೆಬಾವಿ ಕೊರೆಯಲು ಹಣವನ್ನು ನೇರವಾಗಿ ಫಲಾನುಭವಿಗಳಿಗೆ ನೀಡುವುದು

694 (1015) ಶ್ರೀ ವೆಂಕಟಮುನಿಯಪ್ಪ ಬಿ ಪಿ – ಸಮಾಜ ಕಲ್ಯಾಣ ಸಚಿವರು ದಯಿಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯುವ ಕೊಳವೆ ಬಾವಿಗಳಿಗೆ ನೀಡುವ ಒಂದು ಲಕ್ಷ ರೂ ಗಳನ್ನು ಏಜೆನ್ಸಿಗಳಿಗೆ ನೀಡುವ ಬದಲಾಗಿ ನೇರವಾಗಿ ಫಲಾನುಭವಿಗಳಿಗೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಆ) ಹಾಗಿದ್ದಲ್ಲಿ, ಸರ್ಕಾರ ಈ ಪ್ರಸ್ತಾವನೆಯನ್ನು ಯಾವಾಗ ಜಾರಿಗೆ ತರುವುದು ,

ಇ) ಇಲ್ಲದಿದ್ದಲ್ಲಿ ಈಗಿರುವ ವ್ಯವಸ್ಥೆಗೆ ಪರ್ಯಾಯವಾಗಿ ಬೇರೆ ವಿಧಾನವನ್ನು ಅನುಸರಿಸಿ ಫಲಾನುಭವಿಗಳಿಗೆ ತ್ವರಿತವಾಗಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆಬಾವಿ ಘಟಕ ವೆಚ್ಚ ರೂ 1 00 ಲಕ್ಷವೆಂದು ನಿಗದಿಪಡಿಸಲಾಗಿದೆ ಇದರ ಪೈಕಿ 86,000/– ರೂ ಗಳು ಫಲಾನುಭವಿಗಳಿಗೆ ಸಹಾಯಧನ ರೂಪದಲ್ಲಿದ್ದು, ಉಳಿದ ಹಣವು ಅವಧಿ ಸಾಲ ರೂಪದಲ್ಲಿರುತ್ತದೆ ಪಲಾನುಭವಿಗಳಿಗೆ ಈ ಯೋಜನೆಯಡಿ ನೇರವಾಗಿ ಹಣ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಅ) ಅಂತಿಮ ನಿರ್ಧಾರವಾಗಿರುವುದಿಲ್ಲ

ಇ) ಹಣವನ್ನು ನೇರವಾಗಿ ಫಲಾನುಭವಿಗಳಿಗೆ ನೀಡುವ ಕುರಿತಾದ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ

1 ಸಂತಾಪ ಸೂಚನೆ

ವಿಷಯ ಶ್ರೀಮತಿ ಸುಶೀಲ ಚೆಲುವರಾಜು ಅವರ ನಿಧನದ ಬಗ್ಗೆ

ಮಾನ್ಯ ಸಭಾಧ್ಯಕ್ಷರು

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸುಶೀಲ ಚೆಲುವರಾಜು ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಯಬಯಸುತ್ತೇನೆ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸುಶೀಲ ಚೆಲುವರಾಜು ಅವರು 1937ನೇ ನವೆಂಬರ್ 5 ರಂದು ಮೈಸೂರಿನಲ್ಲಿ ಜನಿಸಿದ್ದು, ಸ್ನಾತಕೋತ್ತರ ಪದವಿ ಹೊಂದಿ ಸಾಮಾಜಿಕ ಕಾರ್ಯಕರ್ತರಾಗಿದ್ದರು ಶ್ರೀಮತಿಯವರು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್, ಮೈಸೂರು ಜಿಲ್ಲಾ ಅಭಿವೃದ್ಧಿ ಮಂಡಳಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಸಮಾಜ ಕಲ್ಯಾಣ ಮಂಡಳಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಆಯುಕ್ತರಾಗಿ, ಕರ್ನಾಟಕ ರಾಜ್ಯ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕಿಯಾಗಿ, ಹೆಗ್ಗಡದೇವನ ಕೋಟೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಿಣಿಯಾಗಿ, ಕರ್ನಾಟಕ ರಾಜ್ಯ ಮಹಿಳಾ ಸಲಹಾ ಮಂಡಳಿಯ ಉಪಾಧ್ಯಕ್ಷರಾಗಿ ಹಾಗೂ ಇನ್ನಿತರೆ ಹಲವಾರು ಸಾಮಾಜಿಕ ಸಂಘಟನೆಗಳಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸಿದ್ದರು 1978 ರಲ್ಲಿ ಆರನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಹೆಗ್ಗಡದೇವನ ಕೋಟೆ ಕ್ಷೇತ್ರದಿಂದ ಚುನಾಯಿತರಾಗಿ ಕಾರ್ಯನಿರ್ವಹಿಸಿದ್ದರು

ಶ್ರೀಮತಿಯವರು ದಿನಾಂಕ 10–5–2007 ರಂದು ನಿಧನ ಹೊಂದಿದರು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಸುಶೀಲ ಚೆಲುವರಾಜುರವರು ನಿಧನ ಹೊಂದಿರುವಂತಹ ಸಂತಾಪ ಸೂಚನೆಯನ್ನು ತಾವು ಮಂಡಿಸಿದ್ದೀರಿ ಶ್ರೀಮತಿ ಸುಶೀಲ ಚೆಲುವರಾಜುರವರು 1937ನೇ ನವೆಂಬರ್ 5 ರಂದು ಮೈಸೂರಿನಲ್ಲಿ ಜನಿಸಿದ್ದು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೇರೆ ಬೇರೆ ರೀತಿಯಲ್ಲಿ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿಗಾಗಿ ಬಹಳ ದುಡಿದಂತಹ ಒಬ್ಬ ದಕ್ಷ ಮಹಿಳೆಯನ್ನು ನಾವು ಕಳೆದುಕೊಂಡು ಕರ್ನಾಟಕವು ಬಡವಾಗಿದೆ ತಾವು ತಂದಿರುವಂತಹ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಶ್ರೀಮತಿ ಸುಶೀಲ ಚೆಲುವರಾಜುರವರು ನಮ್ಮ ಜೊತೆಯಲ್ಲಿ ವಿಧಾನಸಭೆಯ ಸದಸ್ಯರಾಗಿದ್ದರು ಆಗ ನಾನು ನಗರಾಭಿವೃದ್ಧಿ ಸಚಿವನಾದಾಗ ಬಹಳಷ್ಟು ಸಲ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸಮಸ್ಯೆಗಳ ಬಗ್ಗೆ ಸಮಾಲೋಚನೆಯನ್ನು ಮಾಡುತ್ತಿದ್ದರು ಅದು ಅಷ್ಟೇ ಅಲ್ಲ, ಇವತ್ತು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮೆಂಬರ್ ಆಗಿ ಅಲ್ಲಿಯ ಡೆವಲಪ್‌ಮೆಂಟ್ ಬೋರ್ಡ್‌ನ ಸದಸ್ಯರಾಗಿ, ಜಿಲ್ಲಾ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಆಯುಕ್ತರಾಗಿ ಬಹಳಷ್ಟು ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿಯನ್ನು ವಹಿಸಿ ಕೆಲಸ ಮಾಡುತ್ತಿದ್ದಂತಹ ಮಹಿಳೆಯಾಗಿದ್ದರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಪಟ್ಟಂತಹ ಮಹಿಳೆಯಾಗಿದ್ದರು ತಮಗೆ ಗೊತ್ತಿದ್ದ ಹಾಗೆ ಹೆಗ್ಗಡದೇವನ ಕೋಟೆಯಲ್ಲಿ ಈ ಒಂದು tribals problems ಬಹಳ ಸಮಸ್ಯೆ ಇತ್ತು ಆಗ ಮಾನ್ಯ ಡಿ ದೇವರಾಜ ಅರಸುರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು ಅಂತಹ ಒಂದು ಕಾಲದಲ್ಲಿ ಇವರು ಮಹಿಳಾ ಸದಸ್ಯರಾಗಿ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಅವರು ನಮ್ಮನ್ನು ಅಗಲಿ ಹೋಗಿದ್ದಾರೆ ತಾವು ಮಂಡಿಸಿದಂತಹ ಸಂತಾಪ ಸೂಚನೆಯನ್ನು ನಾನು ಕೂಡ ಬೆಂಬಲಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಶ್ರೀಮತಿ ಸುಶೀಲ ಚೆಲುವರಾಜುರವರು ನಿಧನರಾಗಿರುವ ಬಗ್ಗೆ ನಾನೂ ಕೂಡ ಸಂತಾಪ ಸೂಚನೆಯನ್ನು ನನ್ನ ಹಾಗೂ ನನ್ನ ಪಕ್ಷದ ಪರವಾಗಿ ಅರ್ಪಿಸುತ್ತಾ ಮಹಿಳೆಯರು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿರುಸುವುದೇ ಕಷ್ಟವೆನ್ನುವಂತಹ ಕಾಲದಲ್ಲಿ, ಮೈಸೂರಿನಲ್ಲಿ ಸುಮಾರು ಜನರು ಮಹಿಳೆಯರು ಸಕ್ರಿಯವಾಗಿರುವಂತಹ ಕಾಲ ಅದು ನಾವೆಲ್ಲರೂ ವಿದ್ಯಾರ್ಥಿಗಳಾಗಿದ್ದಾಗ ಶ್ರೀಮತಿ ಯಶೋದಮ್ಮನವರ ಬಗ್ಗೆ ಶ್ರೀಮತಿ ಸುಶೀಲರವರ ಬಗ್ಗೆ ಏನು ಅವರುಗಳು ಸಾರ್ವಜನಿಕ ಕ್ಷೇತ್ರದಲ್ಲಿದ್ದರು, ಅವರ ಬಗ್ಗೆ ನಾವೆಲ್ಲರೂ ಬಹಳಷ್ಟು ಮಾತನಾಡಿಕೊಳ್ಳುತ್ತಿದ್ದೆವು ಅವರು ಬಹಳ ವರ್ಷಗಳು ನೇಪಥ್ಯದಲ್ಲಿದ್ದರು ಅವರು ಇನ್ನೂ ಮೊನ್ನೆ ತೀರಿಕೊಂಡಿರುವ ಬಗ್ಗೆ ಕೇಳಿದಾಗ ನನಗೆ ಆಘಾತವಾಯಿತು ಒಂದು ಬಹಳ ಕೆಳಸ್ತರದ ಸಮಾಜವನ್ನು ಪ್ರತಿನಿಧಿಸಿ ಸಾರ್ವಜನಿಕ ಸೇವೆ ಮಾಡಿ ನಮ್ಮ ಮಧ್ಯದಿಂದ ಏನು ಅಗಲಿಹೋಗಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಮುಂದೆ ಬರುವಂತಹ ಮಹಿಳೆಯರಿಗೆ ಅವರು ಮಾರ್ಗದರ್ಶಕವಾಗಿರಲಿ, ಅವರು ನಡೆದ ದಾರಿಯನ್ನು ಅನುಸರಿಸುತ್ತಿರುವಂತಹ ಸ್ಥಿತಿ ನಿರ್ಮಾಣವಾಗಲಿ ಎಂದು ಆಶಿಸಿ, ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು ದಿವಂಗತರಾದ ಶ್ರೀಮತಿ ಸುಶೀಲ ಚೆಲುವರಾಜುರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು

2 ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

ಅ) ವಿಷಯ 2007ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಹಿಂದಿರುಗಿಸಲ್ಪಟ್ಟಿರುವ ಕುರಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಒಂದು adjournment motion ಇದೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಎರಡೂ ಸದನಕ್ಕೆ ಮಾನ್ಯ ರಾಜ್ಯಪಾಲರು ಒಂದು ಮೆಸೇಜ್‌ನ್ನು ಕಳುಹಿಸಿಕೊಟ್ಟಿದ್ದಾರೆ ತಾವು ಇದನ್ನು ಕೇಳಬೇಕು ಇದು ಮಹತ್ವವಾದ ವಿಚಾರವಾಗಿದೆ

ಅಧ್ಯಕ್ಷರು ಇದನ್ನು Question Hour ಆದ ಮೇಲೆ ತೆಗೆದುಕೊಳ್ಳಬಹುದಲ್ಲಾ?

ಶ್ರೀ ಎನ್ ಧರ್ಮಸಿಂಗ್ ಇಲ್ಲಾ, ಇಲ್ಲಾ ಅದನ್ನು ಬದಿಗಿಟ್ಟು ಮಾಡಬೇಕಾಗುತ್ತದೆ ಮಾನ್ಯ ರಾಜ್ಯಪಾಲರ ಪತ್ರಕ್ಕೆ ಹಾಗೂ ಸಂದೇಶಕ್ಕೆ ಸದನ ಗೌರವವನ್ನು ಕೊಡಬೇಕಾಗುತ್ತದೆ ಹಾಗೂ ಮಹತ್ವವನ್ನು ಕೊಡಬೇಕಾಗುತ್ತದೆ ಗ್ರಾಮ ಪಂಚಾಯಿತಿಯಿಂದ, ತಾಲ್ಲೂಕು ಪಂಚಾಯಿತಿಯಿಂದ ಹಾಗೂ ಜಿಲ್ಲಾ ಪಂಚಾಯಿತಿಯಿಂದ ಇವತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ಹೋಗಿ ರಾಜ್ಯಪಾಲರನ್ನು ಭೇಟಿಯಾದ ಮೇಲೆ, ಮೊಟ್ಟಮೊದಲನೆಯದಾಗಿ ರಾಜ್ಯಪಾಲರು ಒಂದು ಸಂದೇಶವನ್ನು ಈ ಸದನಕ್ಕೆ ಕಳುಹಿಸಿಕೊಟ್ಟಿದ್ದಾರೆ ನಾವು ಯಾರ ಮೇಲೂ ಅಲಿಗೇಷನ್ನ್‌ನ್ನು ಮಾಡುವುದಕ್ಕೆ ಹೋಗುತ್ತಿಲ್ಲ ನಾನು ಮೊನ್ನೆ ದಿನವೂ ಕೂಡ ಶೂನ್ಯ ವೇಳೆಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದೆ ಮಾನ್ಯ ಉದಾಸಿಯವರು ಈ ಬಗ್ಗೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು ಇವತ್ತು ಏನಾಗಿದೆ ಎಂದರೆ, ಶ್ರೀ ರಾಜೀವ್ ಗಾಂಧಿಯವರು ಇವತ್ತು ಸಂವಿಧಾನದಲ್ಲಿ ತಿದ್ದುಪಡಿಯನ್ನು ಮಾಡಿದರು ಸುಪ್ರೀಂ ಕೋರ್ಟಿನಲ್ಲಿ ಕೂಡ ತೀರ್ಪು ಇದೆ ಯಾವ ಸಂವಿಧಾನದ ತಿದ್ದುಪಡಿ ಲೋಕಸಭೆಯಲ್ಲಿ ಆಗಿದೆ, ಅದಕ್ಕೆ ಮತ್ತೆ ಬೇರೆ ತರಹ ಆರ್ಟಿಕಲ್ 40ರಲ್ಲಿ ತಿದ್ದುಪಡಿ ತರುವಂತಹ ಅವಶ್ಯಕತೆಯಿಲ್ಲ ಈ ಬಗ್ಗೆ ನಾವು ಸಾಕಷ್ಟು ಪ್ರತಿಪಾದನೆಯನ್ನು ಮಾಡಿದ್ದೇವೆ ಇವತ್ತು ಸಂಖ್ಯಾಬಲದ ಮೇಲೆ, ಶಾಸಕರನ್ನು ತೃಪ್ತಿ ಮಾಡುವಂತಹ ರೀತಿಯಲ್ಲಿ ರಾಜ್ಯದಲ್ಲಿ ನಡೆಯುತ್ತಿರುವಂತಹ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಗೆ ಇವತ್ತಿನ ದಿವಸ ಧಕ್ಕೆ ತರುವಂತಹ ಕೆಲಸ ಕರ್ನಾಟಕ ರಾಜ್ಯದಲ್ಲಿ ಆಗಿದೆ ಪ್ರಧಾನ ಮಂತ್ರಿಗಳು

ಕರೆದಂತಹ ಸಭೆಗೆ ನಾವು ಹೋಗಿ ಭಾಗವಹಿಸಿದ್ದೇವೆ ಕರ್ನಾಟಕ ರಾಜ್ಯಕ್ಕೆ ಪಂಚಾಯತ್‌ರಾಜ್ ಅಧಿಕಾರ ವಿಕೇಂದ್ರೀಕರಣ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ವರದಿಯನ್ನು ಕೊಟ್ಟಿದ್ದಾರೆ ನನ್ನ ಕಾಲದಲ್ಲಿಯೂ ಕೂಡ ಇಂತಹ ಪ್ರಶ್ನೆ ಉದ್ಭವವಾದರೂ ಕೂಡ ಅದಕ್ಕೆ ನಾನು yield ಆಗಲಿಲ್ಲ ಸಂಖ್ಯಾಬಲದ ಮೇಲೆ ಆಡಳಿತವನ್ನು ನಡೆಸುವಂತಹ ರೀತಿಯಲ್ಲಿ ನಾವೇನು ತಿದ್ದುಪಡಿಯನ್ನು ಮಾಡಿದ್ದೇವೆ, ಅದು ಕ್ರಮಬದ್ಧವಲ್ಲ ಅದನ್ನು ಮಾಡತಕ್ಕಂತಹ ಹಕ್ಕು ತಮಗೆ ಇಲ್ಲವೆನ್ನತಕ್ಕಂತಹ ರೀತಿಯಲ್ಲಿ ಮಾನ್ಯ ರಾಜ್ಯಪಾಲರು ಬಹಳ ಸವಿಸ್ತಾರವಾಗಿ ಒಂದು ಪತ್ರವನ್ನು ಬರೆದಿದ್ದಾರೆ ಆ ಪತ್ರವನ್ನು ತಾವು ಕೂಡ ಓದಿ ಸದನದ ಸದಸ್ಯರಿಗೆ ಹೇಳಿದ್ದೀರಿ ಇವತ್ತು ನಾವು ಬೇಡಿಕೆಯ ಮೇಲೆ ಚರ್ಚೆಯನ್ನು ಮಾಡುತ್ತೇವೆ ಇವತ್ತು ಜಿಲ್ಲಾ ಪಂಚಾಯಿತಿಯನ್ನು ಮಾಡುತ್ತೇವೆ ಅದನ್ನು ಯಾವ ಆಧಾರದ ಮೇಲೆ ಮಾಡುತ್ತೇವೆ ಇವತ್ತಿನ ದಿವಸ ಮೊಟ್ಟ ಮೊದಲನೆಯದಾಗಿ ರಾಜ್ಯಪಾಲರಿಗೆ ಸಮಸ್ತ ಜನರ ಪರವಾಗಿ, ಸದನದ ಪರವಾಗಿ ವಂದನೆಗಳನ್ನು ಸಲ್ಲಿಸಬೇಕಾಗುತ್ತದೆ ಇವತ್ತು ಇಂತಹ ಗುರುತರವಾದಂತಹಸಮಸ್ಯೆಗಳ ಬಗ್ಗೆ ಕಿವಿಗೊಟ್ಟು ಕೇಳಿದ್ದಾರೆ ಇದರ ಬಗ್ಗೆ ಅವರು ಪತ್ರವನ್ನು ರವಾನೆ ಮಾಡಿದ್ದಾರೆ ಮೊದಲು ಇದರ ಬಗ್ಗೆ ಚರ್ಚೆಯಾಗಬೇಕು ಇದು ಬಹಳ ಗುರುತರವಾದಂತಹ ಮಹತ್ವವಾದಂತಹ ವಿಚಾರ ಇವತ್ತು ಮಾನ್ಯ ರಾಜ್ಯಪಾಲರು ಕಳುಹಿಸಿರುವಂತಹ ಪತ್ರಕ್ಕೆ ಸದನದಲ್ಲಿ ಯಾವ ರೀತಿಯಾಗಿ ಚರ್ಚೆಯಾಗುತ್ತದೆ ಎಂದು ಗ್ರಾಮಾಂತರ ಪ್ರದೇಶದಲ್ಲಿರುವಂತಹ ಜನರು ನಿರೀಕ್ಷೆ ಮಾಡುತ್ತಿದ್ದಾರೆ ಅದಕ್ಕಾಗಿ ತಾವು ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಬೇಕಾಗಿದೆ ಇವತ್ತು ಅವರು ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆ

ಶ್ರೀ ಕೆ ಜಿ ಬೋಪಯ್ಯ ಇದು ಬಹಳ ಮುಖ್ಯವಾದ ವಿಚಾರವೇನಲ್ಲ Bill ನ್ನು ವಾಪಸ್ಸು ಕಳುಹಿಸುವುದು ಇದು ಏನೂ first time ಅಲ್ಲ ಇದು ಏನು ಮಹತ್ವವನ್ನು ಕಳೆದುಕೊಂಡಿಲ್ಲ ಇದಕ್ಕೆ ಚರ್ಚೆಗೆ ಅವಕಾಶ ಕೊಡಬಾರದು ಅಧ್ಯಕ್ಷರೆ, ರಾಜ್ಯಪಾಲರು ಅವರ ಅಭಿಪ್ರಾಯನ್ನು ಹೇಳುವುದಕ್ಕೆ ಸ್ವತಂತ್ರರಾಗಿದ್ದಾರೆ ಅವರು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಿದ್ದಾರೆ -

ಶ್ರೀ ಎನ್ ಧರ್ಮಸಿಂಗ್ ಮಾನ್ಯ ರಾಜ್ಯಪಾಲರು ಕಳುಹಿಸಿರುವ ಮಾಹಿತಿ ಎಲ್ಲರಿಗೂ circulate ಆಗಬೇಕು ಮತ್ತೆ ಅವರು ಏನು ಪ್ರಸ್ತಾಪ ಮಾಡಿದ್ದಾರೆಯೋ ಆ ವಿಷಯದ ಬಗ್ಗೆ ಸಮಗ್ರವಾದ ಚರ್ಚೆಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಏನು ಮಾನ್ಯ ರಾಜ್ಯಪಾಲರು ಆರ್ಟಿಕಲ್ 200 ರ ಕೆಳಗಡೆ ಬಿಲ್ಲನ್ನು ಹಿಂದಕ್ಕೆ ಕಳುಹಿಸಿರುವುದು ಇದು ಮೊದಲನೆಯ ಸಲವಲ್ಲ ಯಾವುದೇ ಬಿಲ್ಲನ್ನು ಹಿಂದಕ್ಕೆ ಕಳುಹಿಸುವುದಕ್ಕೆ ಅದರ ಮೇಲೆ ಸಮಜಾಯಿಷಿಯನ್ನು ಕೇಳುವುದಕ್ಕೆ, ಅದರ

ಮೇಲೆ amendment ಅನ್ನು suggest ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ ಆದರೆ ರಾಜ್ಯಪಾಲರು Articles 175-176 ಕೆಳಗೆ ನಮಗೇನಾದರೂ message ಅನ್ನು ಕೊಟ್ಟರೆ it becomes obligatory on the part of the House to take it up for debate on priority Article 200 ರ ಕೆಳಗಡೆ ಬೇಕಾದಷ್ಟು ಸಲ ಬಿಲ್ಲುಗಳು ಹೋಗುತ್ತವೆ ಮತ್ತು ವಾಪಸ್ಸು ಬರುತ್ತವೆ ಮತ್ತೆ ಅವರು ಬಿಲ್ಲುಗಳ ಬಗ್ಗೆ ಕಾಮೆಂಟ್ ಮಾಡುತ್ತಾರೆ ಹೀಗೆ ಮಾಡಬೇಕಾಗುತ್ತದೆ ಹೀಗೆ ಮಾಡಬೇಕಾಗಿತ್ತು ಅವರ ವಿವೇಚನೆಗೆ ಬಿಟ್ಟ ಮಾತುಗಳನ್ನು ಅವರು ಬರೆಸುತ್ತಾರೆ ನನ್ನ ದೃಷ್ಟಿಯಲ್ಲಿ ಸಂವಿಧಾನದ provisions ಪ್ರಕಾರ it need not be obligatory on the part of this House to take it up on priority ಸರ್ಕಾರದ ಆ ಬಿಲ್ ಮೇಲೆ ಏನಾದರೂ amendments ನ್ನು propose ಮಾಡಿ ಈಗ ಅದನ್ನು ತಂದಿದ್ದರೆ ಅದನ್ನು ಚರ್ಚೆ ಮಾಡಬಹುದಾಗಿತ್ತು ಅದರ ಮೇಲೆ ಸರ್ಕಾರದ ಅಭಿಪ್ರಾಯ ನಮಗೆ ಬೇಕಾಗಿದೆ ಆ ರಾಜ್ಯಪಾಲರು ಯಾವ amendment ಅನ್ನು ಮಾಡಲಿಲ್ಲ ಸಂವಿಧಾನದ ಈ ಮನೆಗೆ ಅಧಿಕಾರವನ್ನು ಕೊಟ್ಟಿದೆ ಅಕಸ್ಮಾತ್ ರಾಜ್ಯಪಾಲರು ಒಪ್ಪದೇ ಹೋದರೂ ಮತ್ತೆ ಆ ಬಿಲ್ಲನ್ನು ನಾವು ಇಲ್ಲಿ ನಾವು place ಮಾಡಿ ಪಾಸ್ ಮಾಡಿದರೆ ರಾಜ್ಯಪಾಲರ ಶಕ್ತಿ, ರಾಜ್ಯಪಾಲರ ಮಟ್ಟ ಅಲ್ಲಿಗೆ ಅಂತ್ಯವಾಗುತ್ತೆ ಹಾಗಾಗಿ it is a Bill passed in the wisdom of this House ಈ ಮನೆಯ ಸದಸ್ಯರ ತಿಳುವಳಿಕೆಯ ಆಧಾರದ ಮೇಲೆ ಏನು ಬಿಲ್ ಪಾಸಾಗಿದೆ, ಅದು ರಾಜ್ಯಪಾಲರು ಕಾಮೆಂಟ್ ಮಾಡಿರುವುದೊಂದೇ ಕಾರಣಕ್ಕಾಗಿ it cannot be called a black Bill ನಾವು ಎಷ್ಟೋ ಬಿಲ್ಲನ್ನು ವಿರೋಧ ಮಾಡಿರುತ್ತೇವೆ ಮಾನ್ಯ ವಿರೋಧ ಪಕ್ಷದ ನಾಯಕರು ಎಷ್ಟೋ ಬಿಲ್ ಮೇಲೆ ವಿರೋಧ ಮಾಡಿರುತ್ತಾರೆ ಒಂದು ಸಾರಿ ಇಲ್ಲಿ ಪಾಸಾದ ಮೇಲೆ we are all party to that Bill ನಾವು ಇಲ್ಲಿ ಅನೇಕ ಸಲ ಈ ಮಾತನ್ನು ಒತ್ತಿ ಹೇಳಿದ್ದೇವೆ ಕೌನ್ಸಿಲ್‌ನಲ್ಲಿಯೂ ಕೂಡ ಹಾಗೆ ಆಗುತ್ತದೆ ಅಲ್ಲಿ ಬಿಲ್ ಪಾಸಾಗಿಬಿಟ್ಟಿದೆ ಅದು ಪಾಸಾದ ಮೇಲೆ ನಾವು ವಿರೋಧವನ್ನು ಮಾಡಿದೆವು ಎನ್ನುವ ಒಂದೇ ಕಾರಣಕ್ಕೆ ಮಾಡಿದ್ದೇ ತಪ್ಪು ಎಂದು ಹೇಳಿ ಈ ಮನೆಯ ಒಳಗಡೆ ಪ್ರಸ್ತಾಪ ಮಾಡುವುದು ಬಹುಶಃ ನನ್ನ ದೃಷ್ಟಿಯಲ್ಲಿ ಈ ಮನೆಗೆ ಗೌರವ ತರುವಂತಹ ವಿಷಯವಲ್ಲ We are all parties whether we agree or not That is why majority rules minority ಎಂದು ನಾವು ಕರೆಯುವುದೂ ಎಪಿಎಂಸಿ ಬಿಲ್ಲನ್ನು ನಾವು ಬಹಳ ವಿರೋಧ ಮಾಡಿದೆವು ಆ ಬಿಲ್ ಪಾಸಾಯಿತು ಹಾಗಾಂತ I cannot cast opinion again on the Bill in this House ಹಾಗಾಗಿ ಏನು ಸೆಕ್ಷನ್ 200 ಕೆಳಗಡೆ ತಂದಿದ್ದಾರೆ ಅದಕ್ಕೆ ತಾವು ಸರ್ಕಾರಕ್ಕೆ ಸೂಚನೆಯನ್ನು ಕೊಡಬೇಕು ರಾಜ್ಯಪಾಲರ ಮಾತನ್ನು ಒಪ್ಪಿಕೊಂಡು ಆ ಬಿಲ್ಲನ್ನು ಅವರು ಅಲ್ಲಿಗೆ ಕೈಬಿಡುತ್ತಾರೆಯೇ? ಅಥವಾ ಮತ್ತೇನಾದರೂ ಆ ಬಿಲ್ಲನ್ನು re-introduce ಮಾಡಿ ಇಲ್ಲಿ ಚರ್ಚೆ ಮಾಡುವುದಕ್ಕೆ ಬಯಸುತ್ತಾರೆಯೇ, ಇದರ ಬಗ್ಗೆ ತಾವು ಅವರಿಗೆ ಸೂಚನೆಯನ್ನು ಕೊಡಬೇಕು I don't think there

is any privison in the Constitution ಸೆಕ್ಷನ್ 200 ಕೆಳಗಡೆ ಅವರು ಹಿಂದಕ್ಕೆ ಹಾಕಿರುವಂತಹ ಬಿಲ್ ಏನಿದೆ ಅದನ್ನು ಚರ್ಚೆ ಮಾಡಲೇಬೇಕೆಂದು ಏನು ಇಲ್ಲ ಮತ್ತೆ Article 200 ಕೆಳಗಡೆ ಸಂವಿಧಾನ ಬಹಳ clear ಆಗಿ ಹೇಳಿದೆ

> "Assent to Bills When a Bill has been passed by the Legislative Assembly of a State or, in the case of a State having a Legislative Council, has been passed by both Houses of the Legislature of the State, it shall be presented to the Governor and the Governor shall declare either that he assents to the Bill or that the withholds assent therefrom or that he reserves the Bill for the consideration of the President
>
> Provided that the Governor may, as soon as possible after the presentation to him of the Bill for assent, return the Bill if it is not a Money Bill together with a message requesting that the House or Houses will reconsider the Bill or any specified provisions thereof and, in particular, will consider the desirability of introducing any such amendments as he may recommend in his message and, when a Bill is so returned, the House or Houses shall reconsider the Bill accordingly, and if the Bill is passed again by the House or Houses with or without amendment and presented to the Governor for assent, the Governor shall not withhold assent therefrom "

ಅಲ್ಲಿ ಮೇಲೆ ಗೌರ್ನರ್‌ಗೆ ಇಲ್ಲ ಈಗ ಅವರು ಯಾವುದೇ amendment ನ್ನು propose ಮಾಡಿಲ್ಲ ನಾನು ಅವರು ಕಳುಹಿಸಿರುವಂತಹ ರಿಪೋರ್ಟ್ ಕಾಪಿಯನ್ನು ತರಿಸಿ ಓದಿದೆ ನನಗೆ ಗೊತ್ತಿಲ್ಲ ಅದಕ್ಕೆ even to that ನನಗೆ ಮಾಹಿತಿ ಸಿಕ್ಕಿಲ್ಲ ಈ provision ಗೂ ಕೂಡ there are four courses open to Governor to whom a Bill passed by State Legislature assent, the Governor assents or withholds assent or reserves the Bill for consideration of the President or return the Bill if not a Money Bill, for reconsideration with his message This is to be done as soon as possble after the presentation The Constitution is very much clear "as soon as possible after the presentation of the Bill " ಗೌರ್ನರ್ ಬಗ್ಗೆ ನಮಗೆ ಬಹಳ ಗೌರವ ಇದೆ ಸಂವಿಧಾನ ಎಲ್ಲರಿಗೂ ಅವರ ಜವಾಬ್ದಾರಿ, ಅವರ ಲಿಮಿಟ್, ಅವರ ಲಿಬರ್ಟಿಯನ್ನು prescribe ಮಾಡಿರುವಂತಹ ಒಂದು ದಾಖಲೆ ಈ ರಾಷ್ಟ್ರದಲ್ಲಿ ಸೃಷ್ಟಿಯಾಗಿರುವುದರಿಂದ ಗೌರ್ನರ್‌ಗೆ ಯಾವತ್ತೋ ಈ ಬಿಲ್ಲನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದೆವು, ಅವರು ಯಾವತ್ತು ಅದನ್ನು return ಮಾಡಿದರು ಇವೆಲ್ಲವೂ ಕೂಡ ಚರ್ಚೆಯಾಗಬೇಕಾಗುತ್ತದೆ ಇದರ ಜೊತೆಗೆ the Governor's action in this regard has been held to be non-justifiable See the undermentioned cases

Purusthoham vs the State of Kerala OST vs the State of Bihar and Bharat Sevashram vs the State of Gujarat It is reported in AIR Even that action of Governor is questioned and that has been ordered by the Supreme Court of India as non-justifiable ವರದಿಯಾಗಿರುವ ಹಾಗೆ ಎಲ್ಲಾ ವ್ಯಾಪಕವಾದಂತಹ ಚರ್ಚೆಯನ್ನು ಈ ಸಭೆಯಲ್ಲಿ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ ಈ judgement ಬಗ್ಗೆ ಎಲ್ಲಾದರೂ ಟಿಪ್ಪಣಿ ಇದ್ದರೆ ಅದನ್ನು ತರಿಸಿಕೊಡಿ ಎಂದು ಹೇಳಿದ್ದೆ But for my bad luck, ಅದು ನನಗೆ ಸಿಕ್ಕಲ್ಲ ಆದ್ದರಿಂದ ಇದು priority ಮೇಲೆ ತೆಗೆದುಕೊಂಡು ಚರ್ಚೆಯಾಗಲೇಬೇಕೆಂದು ಇಲ್ಲದೇ ಇದ್ದರೂ ಕೂಡ ತಾವು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡಬೇಕು ಈ ಬಗ್ಗೆ ಸರ್ಕಾರದವರ ಅಭಿಪ್ರಾಯವೇನು? If they accept the Governor's view, there ends the matter If they don't accept, they have to bring in a Bill or introduce the same Bill or an amended Bill ಅದನ್ನು ಏನಾದರೂ ಮಾಡಿ ತಾವು ಒಂದು ಸೂಚನೆಯನ್ನು ಕೊಡಬೇಕು ನಮ್ಮ ದೃಷ್ಟಿಯಲ್ಲಿ ಇದು ಮೊದಲೇ ನೀವು ಅದನ್ನು ತೆಗೆದುಕೊಳ್ಳಬೇಕೆಂಬ condition ಆಗಲಿ, ನಿಬಂಧನೆಗಳಾಗಲಿ ಸಂವಿಧಾನದಲ್ಲಿ ಇಲ್ಲ If it is under Articles 175-176 then you are bound by it

ಶ್ರೀ ಕೆ ಆರ್ ರಮೇಶ್‌ಕುಮಾರ್ (ಶ್ರೀನಿವಾಸಪುರ) ಮಾನ್ಯ ಅಧ್ಯಕ್ಷರೆ, Article 175-176 ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಅದು mandatory, Routine Course ನಲ್ಲಿ ಈ ಸದನಕ್ಕೆ ಮೆಸೇಜ್ ಕಳುಹಿಸಬೇಕಾದರೆ he has to take shelter under Article 200 ನಾನು ಇಲ್ಲವೆಂದು ಹೇಳುವುದಿಲ್ಲ This House is basically in existence for the prime object of legislating ಶಾಸನ ರಚನೆ, ಈ ಸದನದ ಮೂಲಭೂತ ಕರ್ತವ್ಯ The State is a part of the Union We are a republic and we have one Constitution The Constituion is binding on all of us and all the States of this Union The observations of the Governor, His Excellency, is that whatever action you have resorted to in the Legislative Assembly and Council by way of passing this particular amendment to the existing Act, you are transgressing the limits of the provisions of the Constitution ಅದು ಕೂಡದು ಎಂದು ಅವರ observation ಆಗಿದೆ I am not endorsing it ನಾನು ಅವರು ಹೇಳಿದಕ್ಕೆಲ್ಲಾ ಪ್ರತಿವಾದವನ್ನು ಮಾಡುವುದಕ್ಕೆ ಹೋಗುವುದಿಲ್ಲ ಈ ಸಭೆಯ ಮೂಲ ಉದ್ದೇಶ ಇದು ಅಸ್ತಿತ್ವದಲ್ಲಿರುವಂತಹದ್ದು, ಶಾಸನ ರಚನೆ ಮತ್ತು ಅದಕ್ಕೆ ಸಂಬಂಧಿಸಿದ ಕಲಾಪವನ್ನು ಮಾಡುವುದಕ್ಕಾಗಿ In the present session, ಈ ಮನೆ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿದೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ ಅದು ಸರಿಯೋ ತಪ್ಪೋ ಅದು ಬೇರೆ ವಿಷಯವಾಗಿದೆ ನಂತರ ನಾವು ನಿಯಮಾನುಸಾರ ಅದನ್ನು ಮೇಲ್ಮನೆಗೆ ಕಳುಹಿಸಿ, ಮೇಲ್ಮನೆಯಿಂದ ಅದು

ರಾಜ್ಯಪಾಲರಿಗೆ ಹೋಗಿದೆ ಅವರು ಸಂವಿಧಾನದ ಚೌಕಟ್ಟಿನಲ್ಲಿ ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡುವುದರ ಬದಲು ತಮ್ಮ observations ನ್ನು ಮಾಡಿ ಅದನ್ನು ವಾಪಸ್ಸು ಕಳುಹಿಸಿದ್ದಾರೆ ಸದನ ಅಧಿವೇಶನದಲ್ಲಿದ್ದಾಗ, ಇದೇ ಅಧಿವೇಶನದಲ್ಲಿ ತಾವು ಚರ್ಚೆಯನ್ನು ಮಾಡಿ ಪಾಸು ಮಾಡಿ ಕಳುಹಿಸಿರುವಂತಹ ಒಂದು ತಿದ್ದುಪಡಿಯನ್ನು ಸಂವಿಧಾನದ ಪರಿಚ್ಛೇಧಗಳ ಅನುಗುಣವಾಗಿಲ್ಲವೆನ್ನುವಂತಹ ಮಾತನ್ನು ಅವರು ವ್ಯಾಖ್ಯಾನಿಸಿ ಪುನಃ ಅದನ್ನು ವಾಪಸ್ಸು ನಮಗೆ ಕಳುಹಿಸಿದಾಗ ಮತ್ತು ನಾವು ಅಧಿವೇಶನದಲ್ಲಿಟ್ಟಂತಹ ಸನ್ನಿವೇಶದಲ್ಲಿ, ಶಾಸನ ರಚನೆಯೇ ಈ ಸದನದ ಮೂಲ ಉದ್ದೇಶವಾಗಿರುವುದರಿಂದ ನನಗೆ ಅನಿಸಿದೆ ನೈತಿಕ ಜವಾಬ್ದಾರಿಯನ್ನು ಹೊತ್ತು, ನಾವು ಬೇರೆ ಎಲ್ಲಾ ಕಲಾಪಗಳನ್ನು ಬದಿಗಿಟ್ಟು we have to take up this issue Once again as my learned friend Mr Madhuswamy says it is up to the wisdom of the House whether to agree with the views of the Governor or to say that he is not and reiterate our earlier opinion and sent it back to him and see what happens later ಅವೆಲ್ಲವು ಅನಂತರದ ಪ್ರಶ್ನೆ ಆದರೆ ತಮ್ಮಲ್ಲಿ ನಾನು ನಿವೇದಿಸಿಕೊಳ್ಳುವುದೇನೆಂದರೆ, ತಾವು ಕಲಾಪವನ್ನು ನಡೆಸುತ್ತಿದ್ದೀರಿ ನಮ್ಮ ಶಾಸನ ಕಲಾಪದ ಸನ್ನಿವೇಶದಲ್ಲಿ ನಾವು ಮಾಡುತ್ತಿರುವಂತಹ ವಿಚಾರದಲ್ಲಿ ಅವರು ತಮ್ಮ ವ್ಯಾಖ್ಯಾನವನ್ನು ಮಾಡಿ ವಾಪಸ್ಸು ಕಳುಹಿಸಿದ್ದಾರೆ ಸದನ ಅಧಿವೇಶನದಲ್ಲಿರುವುದರಿಂದ all other things, question hour ಇನ್ನೊಂದು ಮತ್ತೊಂದು ಎಲ್ಲವೂ ಕೂಡ they are part of the job of the Assembly The main purpose for which this House is in existence is to legislate and this particular message, whether it is Article 200 or 175 or 176, not going into those minute details, it is obligatory on the part of this House to take up this particular issue for immediate discussion, elicit and express our opinion very clearly Therefore, I appeal to the Treasury Bench through you Sir, to realise the magnitude and importance that is involved in the matter, give up all other business and immediately take up this matter for discussion That is my submission

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಸಭಾಧ್ಯಕ್ಷರೆ, ಈಗ ಎರಡು ಪ್ರಶ್ನೆಗಳು ಇವೆ One is mandatory and the other is obligatory This House has to take into consideration whether we should consider obligatory things first mandatory or things first In that course, the Constitution is very clear Since the Governor has sent back this Bill under Article 200, it is not mandatory, ಅದು mandatory ಆಗುವುದಿಲ್ಲ ಹಾಗಾಗಿ ಈ ಬಿಲ್‌ನ bonafides ಬಗ್ಗೆ ಚರ್ಚೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ The Bill is passed That is a different thing This House has passed the Bill Without going to the bona fides of the Bill, since the Governor has sent back that Bill under Article 200, it is not mandatory for this House to take it up for discussion first, keeping

all other business aside ಅದರ ಅವಶ್ಯಕತೆ ಇಲ್ಲ ಈಗ ಇದರ ಬಗ್ಗೆ ನೀವು ತೀರ್ಮಾನ ಮಾಡಬೇಕಾಗಿದೆ ಇದರ ಬಗ್ಗೆ ಸರ್ಕಾರದವರು ಹೇಳಬೇಕಾಗಿದೆ ಅರ್ಟಿಕಲ್ 175-176 ರಲ್ಲಿ ಆಗಿದ್ದರೆ ಅದು mandatory ಅದು first discussion ಆಗಬೇಕು ಆರ್ಟಿಕಲ್ 200 ರಲ್ಲಿ ಬಂದಿರತಕ್ಕಂತಹ ಕಾರಣಕೋಸ್ಕರ ಇದು mandatory ಆಗುವುದಿಲ್ಲ ನಮ್ಮದು ಮೂಲತಃ ಶಾಸನ ರಚನೆ ಮಾಡತಕ್ಕಂತಹ ಸದನ ಎನ್ನುವುದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ That is our prime duty ಆ ಬಿಲ್ ಪಾಸ್ ಆಗಿದೆ ನಾನು ಕೂಡ ಆ ಬಿಲ್ ಅನ್ನು ಒಪ್ಪಿದವನೇನಲ್ಲ ಮೂಲತಃ, in principle, I am not in agreement with that Bill That does not mean that we have to go against the provisions of the Constitution ಹಾಗಾಗಿ, ಇದನ್ನು ತಕ್ಷಣ ತೆಗೆದುಕೊಳ್ಳಬೇಕಾದಂತಹ ಅವಶ್ಯಕತೆಯೇನೂ ಇಲ್ಲ ಸರ್ಕಾರ ಬೇಕಾದರೆ amendment ಅಥವಾ ಅದನ್ನು ಏನು ಮಾಡುತ್ತದೋ, ಅವರ ಇಚ್ಛೆ ಏನಿದೆ ಎಂಬುದನ್ನು let them spell out what is in their mind about the message, Bill, and other things, ಆಗಬೇಕಾದರೆ ನಾವು ಚರ್ಚೆ ಮಾಡಬಹುದೇ ಹೊರತು, ಎಲ್ಲವನ್ನೂ ಬದಿಗಿಟ್ಟು ಇದನ್ನು ಮೊದಲು ತೆಗೆದುಕೊಳ್ಳಬೇಕಾದಂತಹ ಅವಶ್ಯಕತೆ ಈ provision ನಲ್ಲಿ ಇಲ್ಲವೆಂದು ತಮಗೆ ನಾನು ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ

ಶ್ರೀ ಧರ್ಮಸಿಂಗ್ ರಾಜಪಾಲರು ಸಂವಿಧಾನದ ಪರಿಚ್ಛೇದ 200 ರಲ್ಲಿ ಕಳುಹಿಸಿರುವುದರಿಂದ ನಾವು ಅದನ್ನು ಆದ್ಯತೆ ಮೇಲೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂಬ ಮಾತನ್ನು ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದ್ದಾರೆ Article 243 ಇದೆ ರಾಜ್ಯ ಸರ್ಕಾರವು ಯಾವುದಾದರೂ ವಿಧೇಯಕಕ್ಕೆ ತಿದ್ದುಪಡಿ ತರುವಂಥಾದ್ದಕ್ಕೆ Article 40 ಕೂಡ ಅದೇ ರೀತಿ ಹೇಳುತ್ತದೆ Supreme Court ಕೂಡ ಆದೇಶ ಕೊಟ್ಟಿದೆ ತಿದ್ದುಪಡಿಗೆ ಸಂಬಂಧಿಸಿದಂತೆ ಸಂವಿಧಾನದ ಪರಿಚ್ಛೇದ 173 ರಲ್ಲಿ ಯಾವ ಸರ್ಕಾರವೂ ಇದರ ಬಗ್ಗೆ ತಿರುವು ಮಾಡತಕ್ಕಂಥಾದ್ದಲ್ಲ ಎನ್ನುವುದನ್ನು ಹೇಳಲಾಗಿದೆ I was also party to that ನಾವೆಲ್ಲರೂ ವಿರೋಧ ಮಾಡಿದರೂ ಕೊನೆಯದಾಗಿ House ನಲ್ಲಿ ನಿರ್ಣಯ ತೆಗೆದುಕೊಂಡು ನಾವೆಲ್ಲರೂ ಮಾಡಿದ್ದೇವೆ ಇವತ್ತು ಇದರ ಬಗ್ಗೆ ಸಾಕಷ್ಟು ವಿಚಾರ ನಡೆಯುತ್ತಿದೆ ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯದ ಬಗ್ಗೆಯಾಗಲಿ, ಪಂಚಾಯತಿಗೆ ಹೋಗುವುದಾಗಲಿ, ಇವತ್ತು ಯಾವ ವಿಧೇಯಕವನ್ನು ಮಂಡಿಸಲಾಗಿದೆಯೋ ಅದರ ಬಗ್ಗೆ, ಅಂಬೇಡ್ಕರ್ ವಸತಿ ಕಾರ್ಯಕ್ರಮದ ಬಗ್ಗೆಯೂ ವಿಚಾರ ಮಾಡಬೇಕಾಗುತ್ತದೆ ಇವತ್ತು housing programme ಇರುವುದರಿಂದ ತಾವು ಎಷ್ಟು ಮನೆಗಳನ್ನು ಕಟ್ಟಿಸಿಕೊಡುತ್ತೀರಿ? ಎಷ್ಟು sites ಕೊಡುತ್ತಿದ್ದೀರಿ? ಇದರ ಬಗ್ಗೆಯೂ ಸದನದಲ್ಲಿ ಚರ್ಚೆಯಾಗಬೇಕಾಗುತ್ತದೆ ಇವತ್ತು ರಾಜ್ಯಪಾಲರು ಕಳುಹಿಸಿರುವ ಸಂದೇಶವೇನಿದೆ, ಅದನ್ನು ತಾವು ನಿನ್ನೆ

ಓದಿ ಹೇಳಿದ್ದೀರಿ Now, that has become the property of the House ನೀವು ಅದನ್ನು ಓದಿದ ನಂತರ, ಅದನ್ನು ನಾವು ಮನೆಗೆ ಪಾಕೆಟ್‌ನಲ್ಲಿ ಇಟ್ಟುಕೊಂಡು ಹೋಗತಕ್ಕದ್ದಲ್ಲ ನಿನ್ನೆ ರಾಜ್ಯಪಾಲರು ಕಳುಹಿಸಿದಂತಹ ಸಂದೇಶವನ್ನು ತಾವೇನು ಸದಸ್ಯರ ಮಾಹಿತಿಗೆ ಕಳುಹಿಸಿಕೊಟ್ಟಿದ್ದೀರಿ ಅದು ಈ ಸದನದ ಆಸ್ತಿಯಾಗಿದೆ ಅದರ ಮೇಲೆ ಚರ್ಚೆಯಾಗಲೇಬೇಕು ಅದರ ಬಗ್ಗೆ ಚರ್ಚೆಯನ್ನು ಬದಿಗಿಡುವಂಥಾದ್ದಲ್ಲ ಮಾಧುಸ್ವಾಮಿಯವರು ಮತ್ತು ಶ್ರೀರಾಮರೆಡ್ಡಿಯವರು ಹೇಳಿದ್ದಾರೆ They are my good friends ಎಲ್ಲವನ್ನೂ ಬದಿಗಿಡುವುದಲ್ಲ ಈಗ ವಿಧೇಯಕದ ಮೇಲೆ ಚರ್ಚೆ ಮಾಡುವುದಕ್ಕೆ ಹೊರಟಿದ್ದೇವೆ ವಸತಿ ಬಗ್ಗೆ ಚರ್ಚೆ ಮಾಡುತ್ತಾ ಹೋಗುತ್ತಿದ್ದೇವೆ ಗ್ರಾಮ ಪಂಚಾಯಿತಿ ಅಧಿಕಾರಿಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೇವೆ ಜಿಲ್ಲಾ ಪಂಚಾಯತ್ ಯಾವ ರೀತಿ ಕೆಲಸ ಮಾಡುತ್ತಿದೆ? ಕರ್ನಾಟಕ ರಾಜ್ಯದಲ್ಲಿ ಎಂದೆಂದಿಗೂ ಆಗಲಾರದಂತಹ ಪಕ್ಷಾತೀತ ಸ್ಥಿತಿ ಇದೆ ಇವತ್ತು ನಾಗರಾಜಶೆಟ್ಟಿ ಕೇಳಿ ಅಲ್ಲಿ ನಮ್ಮವರೂ ಇದ್ದಾರೆ, ಬಿಜೆಪಿಯವರೂ ಇದ್ದಾರೆ ಎಲ್ಲರೂ ಕೂಡ ಹೋಗಿ ಬೀಗ ಹಾಕಿದ್ದಾರೆ ಮೈಸೂರಿನಲ್ಲಿ ಬೀಗ ಹಾಕಿದ್ದಾರೆ ಗುಲ್ಬರ್ಗದಲ್ಲಿ ಬೀಗ ಹಾಕಿದ್ದಾರೆ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಪಟ್ಟ ಸದಸ್ಯರುಗಳು ಮಾತ್ರ ಹೋಗಿಲ್ಲ ಇವತ್ತು ನಮ್ಮ ಅಧಿಕಾರಗಳನ್ನು ಮೊಟಕುಗೊಳಿಸುತ್ತಿದ್ದಾರೆ ರಾಜೀವ್‌ಗಾಂಧಿಯವರು ಸಂವಿಧಾನವನ್ನು ತಿದ್ದುಪಡಿ ಮಾಡಿ ಈ ದೇಶಕ್ಕೆ ಮತ್ತು ಸಾರ್ವಜನಿಕರಿಗೆ, ಗ್ರಾಮ ಪಂಚಾಯತಿಯಲ್ಲಿರುವ ಬಡ ಜನರಿಗೆ ಏನು ಅಧಿಕಾರ ಕೊಟ್ಟಿದ್ದರು, ಅದನ್ನು ಮೊಟಕುಗೊಳಿಸುವ ರೀತಿಯಲ್ಲಿ ಇವತ್ತು ನಡೆಯುತ್ತಿದೆ ರಾಜ್ಯಪಾಲರು ಕೂಡ ತಮ್ಮ ತಮ್ಮ ಸ್ಥಾನದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ ಅವರಿಗೆ Constitution ಅರಿವು ಇದೆ ಇವತ್ತು ವಿಧಾನ ಪರಿಷತ್ತಿನ ನಮ್ಮ ಸದಸ್ಯರೆಲ್ಲರೂ ಹೋಗಿ ಪ್ರತಿಭಟನೆ ಮಾಡಿದ್ದಾರೆ ಅದಕ್ಕೆ ಇವತ್ತು ಅವರು ವಾಪಸ್ಸು ಕಳುಹಿಸಿಕೊಟ್ಟಿದ್ದಾರೆ ರಾಜ್ಯಪಾಲರು ಕಳುಹಿಸಿಕೊಟ್ಟಿರುವ ಪತ್ರದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಮೊಟ್ಟಮೊದಲ ಪ್ರಾಶಸ್ತ್ಯ ಕೊಡಬೇಕು ಅದರ ಬಗ್ಗೆ ಚರ್ಚೆಯಾಗಲಿ ಚರ್ಚೆಯಾದ ಮೇಲೆ ಮುಂದಿನ ಕಾರ್ಯ ಕಲಾಪ ಆಗಬೇಕೆಂಬುದು ನಮ್ಮ ಇಚ್ಛೆಯಾಗಿದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಈಗ ರಾಜ್ಯಪಾಲರು Bill ಅನ್ನು ಮರುಪರಿಶೀಲನೆಗೆ ಕಳುಹಿಸಿರುವುದು ಹಾಗೆಯೇ, Article 175, 176 ಬಗ್ಗೆಯೂ ಹೇಳಿದರು Article 200 ರ ಅಡಿಯಲ್ಲಿ ಮರುಪರಿಶೀಲನೆಗೆ ವಿಶೇಷವಾದ ಸನ್ನಿವೇಶ ಏಕೆಂದರೆ, ರಾಜ್ಯಪಾಲರಿಂದ ಬಂದ ಕೂಡಲೇ ಅದನ್ನು ಇವತ್ತು ಸದನದಲ್ಲಿ ಓದಿ ಹೇಳಿದ್ದನ್ನು circulate ಮಾಡಿದ್ದಾರೆ ನಮಗೆ ಅದರ copy ಬಂದಿದೆ ಹೆಚ್ಚಾಗಿ ಏನಾಗುತ್ತಿತ್ತು ಎಂದರೆ, ಕೆಲವೊಮ್ಮೆ ಸದನ ಸೇರದಿದ್ದಾಗ ವಾಪಸ್ಸು ಕಳುಹಿಸುತ್ತಿದ್ದರು ಈಗ ` ಸದನ

ನಡೆಯುವಾಗಲೇ ಮರುಪರಿಶೀಲನೆಗೆಂದು ವಾಪಸ್ಸು ಕಳುಹಿಸಿದ್ದಾರೆ ಈಗ ಸದನ ಏನು ಮಾಡಬೇಕು? ಏಕೆಂದರೆ, ಇದಕ್ಕೆ ಸರ್ಕಾರದವರು ತಿದ್ದುಪಡಿ ತರುತ್ತಾರೋ, ಇಲ್ಲವೋ, ನಮಗೆ ಗೊತ್ತಿಲ್ಲ ಅಥವಾ as it is ಮಂಡನೆ ಮಾಡುತ್ತಾರೆಯೇ? ಅದೇ ರೀತಿಯಲ್ಲಿ ಮಂಡನೆ ಮಾಡಿರುವ ಸನ್ನಿವೇಶ ಇದೆ Office of Profit Bill - ಕೇಂದ್ರ ಸರ್ಕಾರದಲ್ಲಿ ರಾಷ್ಟ್ರಪತಿಯವರು ವಾಪಸ್ಸು ಕಳುಹಿಸಿದ್ದನ್ನೇ ಅದೇ ರೀತಿ ಪುನಃ ಪಾಸ್ ಮಾಡಿ ಕಳುಹಿಸಿದ ಸನ್ನಿವೇಶ ಸಹ ಇದೆ ಆದುದರಿಂದ, ಈಗ ಸರ್ಕಾರ ನೇರವಾಗಿ ಹೇಳಬೇಕು ತಾವೇನಾದರೂ ಇದಕ್ಕೆ ತಿದ್ದುಪಡಿ ತರುತ್ತೀರಾ? ಅಥವಾ as it is ಮಂಡನೆ ಮಾಡುತ್ತೀರಾ? ಮಂಡನೆಯಾದರೆ, ಚರ್ಚೆಯಾಗಬೇಕಾಗುತ್ತದೆ ತಿದ್ದುಪಡಿಯನ್ನು as it is ಕಳುಹಿಸಿದರೆ, ಅದನ್ನು ಸದನದ ಮುಂದೆ ಮಂಡಿಸಬೇಕಾಗುತ್ತದೆ ಎರಡಕ್ಕೂ ಇಡಬೇಕಾಗುತ್ತದೆ ಯಾವುದೆಂಬುದನ್ನು ಪುನಃ ಅವರು ಹೇಳುವ ಮೂಲಕ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಅಧ್ಯಕ್ಷರ ಮುಖೇನ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಕೆ ಜಿ ಬೋಪಯ್ಯ (ಮಡಿಕೇರಿ) ಅಧ್ಯಕ್ಷರೆ, ಇವತ್ತು ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆ ರಾಜ್ಯಪಾಲರ ಮುಂದೆ ಏನು ಹೋಗಿತ್ತು ರಾಜ್ಯಪಾಲರಿಗೆ ಸಂವಿಧಾನಬದ್ಧವಾಗಿ ಏನು ಅಧಿಕಾರವಿತ್ತು ಅದಕ್ಕೆ ಅವರು ಒಪ್ಪಿಗೆ ಕೊಡಬಹುದು ಅಥವಾ ಒಪ್ಪಿಗೆ ನೀಡದೇ ವಾಪಸ್ಸು ಕಳುಹಿಸಬಹುದು ವಾಪಸ್ಸು ಕಳುಹಿಸುವಾಗ ಏತಕ್ಕೆ ವಾಪಸ್ಸು ಕಳುಹಿಸುತ್ತಿದ್ದೇನೆ ಮತ್ತು ಇದಕ್ಕೆ ನನಗೆ ಒಪ್ಪಿಗೆ ಇಲ್ಲವೆಂದು ಒಂದಷ್ಟು reasons ಹಾಕಿ ಕಳುಹಿಸಿದ್ದಾರೆ ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಪ್ರಸ್ತಾಪಿಸಿದಂತೆ, ಇದರಲ್ಲಿ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆನ್ನುವ ಶಬ್ದ ಇಲ್ಲಿ ಪ್ರಯೋಗವಾಗಿದೆ ಅದನ್ನು ಕಡತದಿಂದ ತೆಗೆಯಬೇಕು ಇಲ್ಲಿ ಯಾವುದೇ ಛೀಮಾರಿ ಹಾಕಿಲ್ಲ ಇವತ್ತು 73rd amendment ಯಾವ purpose ಗೆ ಮಾಡಿದ್ದಾರೆ ಅದೆಲ್ಲವನ್ನೂ ಮಾಡಿ ಈ ಕಾರಣಕ್ಕಾಗಿ ನಾನು ಇದನ್ನು ವಾಪಸ್ಸು ಕಳುಹಿಸುತ್ತಿದ್ದೇನೆ ಎನ್ನುವಂತಹ ಮಾತನ್ನು ಹೇಳಿದ್ದಾರೆ ಮತ್ತು ಈಗಾಗಲೇ ಮಾಧುಸ್ವಾಮಿಯವರು ಹೇಳಿದಂತಹ ಮಾತುಗಳನ್ನು ನಾನು ಅನುಮೋದಿಸುತ್ತೇನೆ ಇವತ್ತು ಇದೇನೋ ಬಹಳ ತುರ್ತು ಎಂದು ಹೇಳುವಂಥಾದ್ದೇನೂ ಇಲ್ಲ ರಾಜ್ಯಪಾಲರು ಅದನ್ನು ಕಳುಹಿಸಿಕೊಟ್ಟಿದ್ದಾರೆ ಸಂವಿಧಾನದ 175, 176 ಆದರೆ, ಈ ಸದನಕ್ಕೆ ಅದು mandatory Mandatory provision ಅನ್ನು ನಾವು ತಕ್ಷಣ ಚರ್ಚೆಗೆ ತೆಗೆದುಕೊಳ್ಳಬೇಕು ಅದಕ್ಕೆ ನಮ್ಮ ಅಭಿಪ್ರಾಯ ಕೊಡಬೇಕಾಗುತ್ತದೆ ಆದರೆ, ಅವರಿಗೆ ಈ Bill ಏಕೆ ಕಳುಹಿಸಿಲ್ಲ? ಆಮೇಲೆ ಏನು ಮಾಡಬೇಕು? As it is ಕಳುಹಿಸಿಕೊಡಬೇಕೆ ಅಥವಾ ಮತ್ತೆ ಅದನ್ನು ತಿದ್ದುಪಡಿ ಮಾಡಬೇಕೆ ಎಂದು ಹೇಳುವಂಥಾದ್ದು ಸರ್ಕಾರದ ವಿವೇಚನೆಗೆ ಬಿಟ್ಟದ್ದು ಇವತ್ತು ಮಾನ್ಯ ವಿರೋಧ ಪಕ್ಷದವರು ಪ್ರತಿಪಾದಿಸಿದಂತೆ, ಇದರಲ್ಲಿ ಯಾವುದೇ ರೀತಿಯ ತುರ್ತು ಅಥವಾ urgency ಎನ್ನುವಂಥಾದ್ದು

ಇಲ್ಲ ಆದುದರಿಂದ, ಇದರ ಬಗ್ಗೆ ಇತರ ಕಲಾಪಗಳಾದ ನಂತರ ಸರ್ಕಾರ ಅದರ ಬಗ್ಗೆ ತೀರ್ಮಾನ ಮಾಡಿ ನಂತರ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದಯೆಂದು ನಾನು ಒತ್ತಾಯಿಸುತ್ತೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ Interpretation of law is the domain of Court, Pssing of law, legislation is the domain of Parliament ಈಗ ಶಾಬಾನು ಕೇಸ್ Supreme Court struck down ಮಾಡಿತು ಪುನಃ, ವಾಪಸ್ಸು Parliament ಗೆ ಬಂತು Parliament ನಲ್ಲಿ modify ಮಾಡಿ they stuck to their earlier stand ಕೋರ್ಟಿನ ಸರಹದ್ದು ಎಲ್ಲಿಗೆ ನಿಲ್ಲುತ್ತದೆಂದರೆ, ಸಂವಿಧಾನದ ಪರಿಚ್ಛೇದಕ್ಕೆ ಅನುಗುಣವಾಗಿದೆಯೆ? ಇಲ್ಲವೇ? ಅಷ್ಟೇ ಈಗ Indira Nehru Vs Raj Narayan case, Parliament passed the bill But, Supreme Court did not agree with it ಮತ್ತೆ Parliament could not reconsider So ಈ ಎರಡೂ ಪ್ರಸಂಗಗಳಲ್ಲಿ ರಾಜ್ಯಪಾಲರು ಯಾರು? He is the representative of the Constitution in the State ಸಂವಿಧಾನಕ್ಕೆ ಸಂಬಂಧಿಸಿದಂತಹ ವಿಚಾರಗಳಲ್ಲಿ ನಿನ್ನೆ ನಡೆದಿರುವ ಕಲಾಪ ಕುರಿತು ಅವರು specific ಆಗಿ ಇಂತಿಂತಹ ಕಡೆಗಳಲ್ಲಿ ತಾವು ಎಡವಿದ್ದೀರಿ ಎಂಬುದು ನನ್ನ ಅಭಿಪ್ರಾಯವೆಂದು ಅವರು ನಮಗೆ ತಿಳಿಸಿದ್ದಾರೆ ಅದನ್ನು ನಾವು ಒಪ್ಪಬಹುದು, ಬಿಡಬಹುದು ಮಾನ್ಯ ಗೆಳೆಯರಾದ ಜಯಪ್ರಕಾಶ್ ಹೆಗ್ಡೆಯವರು ಹೇಳಿದಂತೆ, ಸದನ ಅಧಿವೇಶನದಲ್ಲಿ ಇಲ್ಲದಿದ್ದರೆ, ಅದು ಬೇರೆಯಾಗುತ್ತಿತ್ತು ಆದರೆ, ಅಧಿವೇಶನದಲ್ಲಿ ಇರುವ ಕಾರಣದಿಂದ ನಾವು ಒತ್ತಾಯ ಮಾಡುತ್ತಿರುವುದು, ಇದೇನೂ prestige issue ಅಲ್ಲ ಈ ಸಭೆಯ ಮೂಲ ಜವಾಬ್ದಾರಿಯಾದ್ದರಿಂದ ನಾವು ಗೌರವಯುತವಾಗಿ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಪುನಃ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ

ಶ್ರೀ ಡಿ ಆರ್ ಪಾಟೀಲ್ (ಗದಗ) ಮಾನ್ಯ ಅಧ್ಯಕ್ಷರೇ, ಹೋದ ವಿಧಾನಸಭೆಯಲ್ಲಿ ಈ ಎಲ್ಲಾ ಅಧಿಕಾರಗಳನ್ನು ಗ್ರಾಮ ಸಭೆಗೆ, ಗ್ರಾಮ ಪಂಚಾಯಿತಿಗೆ ಕೊಡುವಾಗ Joint Select Committee ಆಯಿತು ಅದು ಆಗಿ ಆ house unanimous ಆಗಿ ಈ ಎಲ್ಲಾ ಅಧಿಕಾರಗಳನ್ನು ಗ್ರಾಮಸಭೆಗೆ ಕೊಡಲು ನಿರ್ಣಯ ಮಾಡಿತ್ತು ಆಗ ಈ ಕಡೆಯ ಕೆಲವು ಸದಸ್ಯರು ಇದ್ದೆವು ಆ ಕಡೆಯ ಕೆಲವು ಸದಸ್ಯರು ಸದನದಲ್ಲಿ ಇದ್ದರು ನಾನು ನೋಡುತ್ತಿದ್ದೆ ವಿಶ್ವೇಶ್ವರ ಹೆಗಡೆಯವರು, ಅರಗ ಜ್ಞಾನೇಂದ್ರವರು, ರಾಮಸ್ವಾಮಿಯವರು, ಶಿವಣ್ಣನವರು ಇವರೆಲ್ಲಾ ಆ ಸದನದಲ್ಲಿ ಇದ್ದವರು ಈ ಎಲ್ಲಾ ಬದಲಾವಣೆಗಳಿಗೆ ಮತ ಕೊಟ್ಟವರು ಸಂವಿಧಾನದ ಉದ್ದೇಶವೇನು? De centralization of power ಜನರಿಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಜನರ ಮಧ್ಯದಲ್ಲೇ ಇತ್ಯರ್ಥ ಆಗತಕ್ಕ ಅವಕಾಶವನ್ನು ನಾವು ಕಲ್ಪಿಸಿಕೊಡಬೇಕು ಸಂವಿಧಾನ ರಚನೆ ಮಾಡುವಾಗ Article 40 ರಲ್ಲಿ ನಮಗೆ ಅವರು ಮ್ಯಾಂಡೇಟ್ ಕೊಟ್ಟಿದ್ದರು ಆದರೆ, ಏನೋ

ದುರ್ದೈವದಿಂದ ಪಂಚಾಯತ್‌ರಾಜ್ ವ್ಯವಸ್ಥೆ ಈ ಮಟ್ಟದಲ್ಲಿ ನಮ್ಮ ದೇಶದಲ್ಲಿ ತಳವೂರಲಿಲ್ಲ 73ನೇ ತಿದ್ದುಪಡಿಯಾದ ಮೇಲೆ ಸಾಕಷ್ಟು ಮುಂದುವರೆದಿದ್ದೇವೆ ಏನಿದ್ದರೂ ಇದು ಇನ್ನೂ ಮುಂದುವರೆಯಬೇಕೇ ಹೊರತು ಹಿಂದೆ ಬರಲು ಬಹುತೇಕ ಈ ಸದನ ವಿಚಾರ ಮಾಡುವುದು ಬಹಳ ತಪ್ಪು ಎನ್ನುವುದನ್ನು ನಾವೆಲ್ಲರೂ ಅವಲೋಕನ ಮಾಡಿದಾಗ ಬಹಳ ಜನರಿಗೆ ಅನ್ನಿಸುತ್ತದೆ ನಾವು ಏನೋ ತಪ್ಪು ಮಾಡಿದ್ದೇವೆ ಹಾಗೆಂದು ನಮಗೆ ರಾಜ್ಯಪಾಲರು reconsider ಮಾಡಿ ಎಂದು ಕಳುಹಿಸಿದ್ದಾರೆ ಸರ್ಕಾರ ಈ ವಿಷಯದಲ್ಲಿ ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಬೇಕು ನಾವು ಮತ್ತು ಪ್ರಕಾಶ್ ಸಾಹೇಬರು ಕೂಡಿ ಸರ್ಕಾರ ಮಾಡುವಾಗ ಈ ರೀತಿ ಒತ್ತಡ ಸಾಕಷ್ಟು ಸಲ ಬಂತು ಆದರೆ, amendment ಮಾಡಲು ನಾವು ಹೋಗಲಿಲ್ಲ ಈಗ ನಮ್ಮ ಸಚಿವರಾದ ಉದಾಸಿಯವರು ಆ amendment ನ್ನು ತಂದಿದ್ದಾರೆ ಅವರೂ ಸಹ ಮೊದಲು ರಾಮಕೃಷ್ಣ ಹೆಗಡೆಯವರು, ಅಬ್ದುಲ್ ನಜೀರ್ ಸಾಬ್‌ರವರು ಹೊಸ ಯುಗವನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿದಾಗ ಅದರ ಪರವಾಗಿ ಕೆಲಸ ಮಾಡಿದಂಥವರು ಮೊದಲನೇ ಜಿಲ್ಲಾ ಪರಿಷತ್ತಿನಲ್ಲಿ ಸಾಕಷ್ಟು de-centralization ಬಗ್ಗೆ ಮಾತನಾಡಿದವರು ಆದರೆ ಏಕೋ ಈಗ ಅವರು ತಮ್ಮ ಅಭಿಪ್ರಾಯವನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡಿದ್ದಾರೆ ಕಾರಣ ಗೊತ್ತಿಲ್ಲ ಪಕ್ಷ ಬದಲಾಗಿದೆಯೆಂದು ಕಾರಣ ಇದೆಯೋ ಅಥವಾ ಯಾರ ಒತ್ತಾಯಕ್ಕಾಗಿ ಆ ನಿರ್ಣಯಕ್ಕೆ ತಂದಿದ್ದಾರೋ ಗೊತ್ತಿಲ್ಲ ಆದುದರಿಂದ ಇದನ್ನು ಎಲ್ಲರೂ reconsider ಮಾಡಿ, ರಾಜ್ಯಪಾಲರು ನಮಗೇನು advise ಮಾಡಿದ್ದಾರೆ, ಅದನ್ನು ಸರ್ಕಾರ ಇಷ್ಟಕ್ಕೇ ಬಿಟ್ಟರೆ ಬಹಳ ಒಳ್ಳೆಯದು ಆ ಕೆಲಸವನ್ನು ಮಾಡಿದರೆ ನಾವು ಯಾವುದೇ ಅಧಿಕಾರವನ್ನು ಮೊಟಕುಗೊಳಿಸಿದಂತೆ ಆಗುವುದಿಲ್ಲ ಒಂದು ವೇಳೆ ಸರ್ಕಾರದ ಅಭಿಪ್ರಾಯ ಬೇರೆ ಏನಾದರೂ ಇದ್ದರೆ ಈ ಹಿನ್ನೆಲೆಯಲ್ಲಿ ದಯವಿಟ್ಟು ವಿಚಾರ ಮಾಡಬೇಕು ಅಧಿಕಾರವನ್ನು ಮೊಟಕುಗೊಳಿಸಬಾರದು, ಇನ್ನೂ ಹೆಚ್ಚು ಕೊಡಬೇಕು Power to the people ಎಂಬುದು ನಿಮ್ಮ ಸ್ಲೋಗನ್‌ನೇ, ಜನತಾದಳದ ಸ್ಲೋಗನ್‌ನೇ Power to the people ಈ ಹಿನ್ನೆಲೆಯಲ್ಲಿ ಒಂದು ನಿರ್ಣಯವನ್ನು ತಾವು ಮಾಡಬೇಕು

ಶ್ರೀ ಸಿ ಟಿ ರವಿ ಮಾನ್ಯ ಅಧ್ಯಕ್ಷರೇ, ಪಾಟೀಲ್‌ರವರು ಹೇಳುತ್ತಿರುವುದು ಬಹಳ ಮಜಾ ಇದೆ ಬಹಳ ಜನರು ಏನು ಹೇಳುತ್ತಾರೆಂದರೆ ಗದಗ್‌ನಲ್ಲಿ ಅಧಿಕಾರ ವಿಕೇಂದ್ರೀಕರಣ ಹೇಗೆ ಆಗಿದೆ ಎಂದರೆ ಪತ್ರಕರ್ತರು ಹೋಗಿ ನೋಡಬೇಕು ಗ್ರಾಮ ಸಭೆಯ ತೀರ್ಮಾನಗಳು ಎಲ್ಲಿ ನಡೆಯುತ್ತದೆ ಎಂದು ಜನರು ಹೇಳುತ್ತಾರೆ ನೆಪಕ್ಕೆ ಗ್ರಾಮ ಸಭೆ ತೀರ್ಮಾನವೆಲ್ಲ ನಮ್ಮ ಶಾಸಕರ ಮನೆಯೊಳಗೆ ಈ ರೀತಿಯ ಅಧಿಕಾರ ವಿಕೇಂದ್ರೀಕರಣವನ್ನು ಗದಗ್‌ನಲ್ಲಿ ಅವರು ಮಾಡಿದ್ದಾರೆ ಈ ರೀತಿ ಮಾಡಿದ ಜನರು ಅಧಿಕಾರ ವಿಕೇಂದ್ರಿಕರಣದ

ಬಗ್ಗೆ ಪಾರ ಹೇಳುತ್ತಿದ್ದಾರೆ ಇದರ ಬಗ್ಗೆ ಚರ್ಚೆ ಆಗುವ ಕಾಲದಲ್ಲಿ ಚರ್ಚೆ ಆಗಿದೆ ಮತ್ತೆ ಚರ್ಚೆಯಾಗಬೇಕು ಎಂದರೆ ಅದಕ್ಕೆ ಹಿಂಜರಿಯುವ ಪ್ರಶ್ನೆ ಇಲ್ಲ ಅದನ್ನು ಸ್ವಾಗತಿಸುತ್ತೇವೆ ಆದರೆ ಈಗ ರಾಜ್ಯಪಾಲರು ವಾಪಸ್ ಕಳುಹಿಸಿರುವುದನ್ನು ಏನೋ ಆಕಾಶ ತಲೆಯಮೇಲೆ ಕಳಚಿ ಬಿದ್ದಿದೆ ಎಂಬ ರೀತಿ ಮಾತನಾಡುವವರು ಯೋಚನೆ ಮಾಡಬೇಕಾಗಿರುವುದೇನೆಂದರೆ ಅತ್ಯಂತ ವ್ಯವಸ್ಥಿತವಾಗಿ ಫಲಪೂರ್ಣವಾಗಿ ಅಧಿಕಾರ ವಿಕೇಂದ್ರಿಕರಣ ಆಗಿದ್ದು ಯಾವಾಗ ಎಂದರೆ ಮಂಡಲ್ ಪಂಚಾಯಿತಿ ಜಿಲ್ಲಾ ಪರಿಷತ್ತಿನ ಕಾಲದಲ್ಲಿ ಆ ಮಂಡಲ್ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಯಶಸ್ವಿಯಾಗಿ ಜನರಿಗೆ ಹತ್ತಿರವಾಗಿ ಕಾರ್ಯನಿರ್ವಹಿಸಿದ್ದು ಅದರ ಕತ್ತು ಹಿಸುಕಿ ಕೊಲೆ ಮಾಡಿದಂಥವರಿಗೆ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಮಾತನಾಡತಕ್ಕ ಯಾವುದೇ ರೀತಿಯ ನೈತಿಕ ಹಕ್ಕಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ ಆದ್ದರಿಂದ ಈಗ ಏನು ತಲೆಹೋಗಿರುವಂಥದ್ದು ಇಲ್ಲ ಪ್ರಶ್ನೋತ್ತರವಾಗಿ ಸರ್ಕಾರ ಈ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ಕೇಳಿದ ನಂತರ ಈ subject ನ್ನು ಚರ್ಚೆಗೆ ಇಟ್ಟಾಗ ಸಾಕಷ್ಟು ಚರ್ಚೆ ಮಾಡೋಣ ಅವರು ಅವರ ಅಭಿಪ್ರಾಯವನ್ನು ಮಂಡಿಸಲಿ

ಶ್ರೀ ಗಡ್ಡದೇವರಮಠ್ ಜಿ ಎಸ್ ಮಾನ್ಯ ಅಧ್ಯಕ್ಷರೇ, ಸಿ ಟಿ ರವಿಯವರು ಹೇಳುವಂಥ ವಿಚಾರ ಅದು ಅವರ ವಿಚಾರವಲ್ಲ ಗದಗ್ ಜಿಲ್ಲೆಯಲ್ಲಿ ಹೋದರೆ ಗ್ರಾಮ ಪಂಚಾಯಿತಿ ವ್ಯವಸ್ಥೆ ಹೇಗಿದೆಯೆಂದು ಅವರೇನು ಹೇಳಿದ್ದಾರೆ ಅದು ಎಲ್ಲಿಯೋ ಕುಳಿತು ಕೇಳಿರುವ ಮಾತನ್ನು ಹೇಳಿದ್ದಾರೆ

(ಗೊಂದಲ)

ಅಧ್ಯಕ್ಷರು ಎಲ್ಲರೂ ಕುಳಿತುಕೊಳ್ಳಿ ನಾನು ಕರೆದಿಲ್ಲ

ಶ್ರೀ ಗಡ್ಡದೇವರಮಠ್ ಜಿ ಎಸ್ ಅವರು ಮಾತನಾಡಿರುವ ಶಬ್ದವನ್ನು ವಾಪಸ್ ತೆಗೆದುಕೊಳ್ಳಬೇಕು ಕಡತದಿಂದ ಸಹ ತೆಗೆದು ಹಾಕಬೇಕು ಸಿ ಟಿ ರವಿಯವರು ಹೇಳುತ್ತಿರುವುದು ಶುದ್ಧ ತಪ್ಪು ಗದಗ್ ಜಿಲ್ಲೆ, ತಾಲ್ಲೂಕಿಗೆ ಬಂದರೆ ಅದರ ವ್ಯವಸ್ಥೆ ತಿಳಿಯುತ್ತದೆ ಎಲ್ಲೋ ಕೇಳಿರುವ ಮಾತನ್ನು ಅವರು ಹೌಸ್‌ನಲ್ಲಿ ಹೇಳುವುದು ಸೂಕ್ತವಲ್ಲ ಯಾರೋ ಹೇಳಿರುವ ಮಾತನ್ನು ಕೇಳಿ ಇಲ್ಲಿ ಹೇಳುವುದು ಸೂಕ್ತವಲ್ಲ ಅವರು ಮಾತನಾಡಿದ್ದು ತಪ್ಪು ಅವರು ಆ ಶಬ್ದವನ್ನು ವಾಪಸ್ ತೆಗೆದುಕೊಳ್ಳಬೇಕು

(ಗೊಂದಲ)

ಅಧ್ಯಕ್ಷರು ನಿಮ್ಮ ನಿಮ್ಮ ಅಭಿಪ್ರಾಯವನ್ನು ಹೇಳಿದ್ದು ಆಯಿತಲ್ಲ, ಬಿಡಿ ಇದು ಬಹಳ ಗಂಭೀರವಾದ ವಿಚಾರ ಯಾರಿಗಾದರೂ ಮಾಡನಾಡಲು ಕೊಟ್ಟರೆ ಸುಮ್ಮನೆ ಅಸಂಬದ್ಧವಾಗಿ ಮಾತನಾಡುತ್ತಾರೆ ಅವರಿಗೆ ಇಷ್ಟ ಬಂದಂತೆ ಮಾತನಾಡುತ್ತಾರೆ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಇದು ಬಹಳ ಗಂಭೀರವಾದ ವಿಚಾರ ರಾಜ್ಯಪಾಲರು ಆ ಬಿಲ್ಲನ್ನು reconsider ಮಾಡಿ ಎಂದು ವಾಪಸ್ ಕಳುಹಿಸಿದ್ದಾರೆ ಅದರ ಬಗ್ಗೆ ಏನು ಮಾಡಬೇಕು ಎಂದು ಹೇಳದೆ ಗ್ರಾಮಸಭೆಗೆ ಹೊರಟುಹೋದಿರಲ್ಲ? ಗ್ರಾಮಸಭೆಯ ಬಗ್ಗೆ ಮಾಡನಾಡುವುದು ಅನಂತರ

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ದಯಮಾಡಿ ಕೇಳಿ ಗ್ರಾಮ ಪಂಚಾಯಿತಿಗಳ ವಿಕೇಂದ್ರೀಕರಣ ಎಷ್ಟು ಸಕಾರಾತ್ಮಕವಾಗಿದೆ, ಸರಿಯಾಗಿದಯೋ ಇಲ್ಲವೋ ಎಂಬ ವಿಚಾರದ ಚರ್ಚೆ ಇಲ್ಲಿ ಬಂದಿಲ್ಲ ಇಲ್ಲಿ ಬಂದಿರುವ ಪ್ರಸ್ತುತವಾದ ವಿಷಯ Article 200 ರ ಕೆಳಗೆ ಮಾನ್ಯ ರಾಜ್ಯಪಾಲರು ಕಳುಹಿಸಿಕೊಟ್ಟಿರುವಂಥ ಸಂದೇಶವೇನಿದೆ ಇದರ ಬಗ್ಗೆ ತಕ್ಷಣದಲ್ಲಿ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು, ಕಾಂಗ್ರೆಸ್ ಮುಖಂಡರು ಈ ವಿಷಯವನ್ನು ಪ್ರಸ್ತಾಪ ಮಾಡಿದರು ಆ ವಿಷಯದಲ್ಲಿ ಮಾನ್ಯ ಮಾಧುಸ್ವಾಮಿಯವರು ಮತ್ತು ಇತರ ಶಾಸಕ ಮಿತ್ರರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಮಾಧುಸ್ವಾಮಿಯವರು ಹೇಳಿದ ವಿಚಾರದ ಜೊತೆಗೆ ಕೆಲವು ವಿಚಾರಗಳನ್ನು ಪೂರಕವಾಗಿ ಹೇಳಲು ನಾನು ಇಷ್ಟಪಡುತ್ತೇನೆ ಈ ವಿಚಾರದಲ್ಲಿ ಸಂಪೂರ್ಣವಾಗಿ 3(ಎ) ಗೆ ಸಂಬಂಧಪಟ್ಟಂತೆ ಯಾರು ಅಧಿಕಾರದಲ್ಲಿರಬೇಕು, ಯಾರು ಈ ಮನೆಗಳನ್ನು ವಿತರಣೆ ಮಾಡಿಕೊಡಬೇಕು? ಅಧಿಕಾರ ವಿಕೇಂದ್ರೀಕರಣ ವಿಚಾರದಲ್ಲಿ ನಾವು ಯಾರೂ ತಯಾರಾಗಿಲ್ಲ ಮಾನಸಿಕವಾಗಿ ಅಧಿಕಾರದ ವಿಕೇಂದ್ರೀಕರಣವನ್ನು ಬೇರೆ ಜನರ ಕೈಗೆ ಕೊಡಬೇಕು ಎಂಬ ಬಗ್ಗೆ ತಯಾರಿಲ್ಲದೆ ಸುಮ್ಮನೆ ಕೆಲವೊಂದು ವಿಚಾರಗಳ ಬಗ್ಗೆ ಮಾತನಾಡತಕ್ಕದ್ದು ಸರಿಯಲ್ಲ ಇದೇ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ ಶಾಸಕರಿಗೆ ಏನೂ ಅಧಿಕಾರವಿಲ್ಲ ಒಂದು ಬೋರ್‌ವೆಲ್ ಕೊಡಲು ಅಧಿಕಾರ ಇಲ್ಲ ಮನೆ ಕೊಡಲು ಅಧಿಕಾರ ಇಲ್ಲ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಇಲ್ಲವೆಂದು ಇಲ್ಲೇ ಚರ್ಚೆಯಾಗಿದೆ ಈ ಎಲ್ಲಾ ವಿಚಾರಗಳನ್ನು ಪರಿಗಣಿಸಿ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು 2007ರ ತಿದ್ದುಪಡಿ ಮಸೂದೆಯನ್ನು ಇಲ್ಲಿ ತಂದರು

ಶ್ರೀ ಎನ್ ಧರ್ಮಸಿಂಗ್ ತಾವೂ ಕೂಡ subject matter ಗೆ ಬರುತ್ತಿದ್ದೀರಿ ತಾವು ಬರುವುದಕ್ಕೂ ಮೊದಲು ನಾನು ಒಂದು ವಿಚಾರವನ್ನು ಹೇಳಿದ್ದೆ ನಾನು ಕೇಳತಕ್ಕದ್ದು ಏನೆಂದರೆ, ರಾಜ್ಯಪಾಲರು ಏನು ಪತ್ರ ಬರೆದಿದ್ದಾರೆ ಸದನಕ್ಕೆ ಬಂದಿದೆ ಸದನದ ಎಲ್ಲಾ ಸದಸ್ಯರು ಅದರ ಬಗ್ಗೆ ವಿಚಾರ ಮಾಡತಕ್ಕದ್ದು, that is the property of the house We have to discuss ಅದಕ್ಕೆ ಯಾವಾಗ ಅವಕಾಶ ಮಾಡಿಕೊಡುತ್ತೀರಿ? ಇನ್ನೊಮ್ಮೆ reconsider ಆಗಬೇಕು ಇದರ ಬಗ್ಗೆ ಚರ್ಚೆಯಾಗಬೇಕು ಎನ್ನತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ ಅದರ ಬಗ್ಗೆ ಹೇಳಿ

ಮತ್ತೆ ಗ್ರಾಮ ಪಂಚಾಯಿತಿ ಮತ್ತಿತರ ವಿಷಯಗಳ ಬಗ್ಗೆ ತಾವು ಮಾತನಾಡಿದರೆ, ಅದರ ಬಗ್ಗೆ ನಾವೂ ಮಾತನಾಡಬೇಕಾಗುತ್ತದೆ

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ ನಿಮ್ಮ ಮಾನ್ಯ ಗಡ್ಡದೇವರಮಠ್‌ರವರು ಮತ್ತು ಮಾನ್ಯ ಡಿ ಆರ್ ಪಾಟೀಲರವರು power to the people ಅಧಿಕಾರ ವಿಕೇಂದ್ರೀಕರಣ, ಮತ್ತಿತರ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರಿಂದಲೇ ಪೂರಕವಾಗಿ ನಾಲ್ಕು ಮಾತುಗಳನ್ನು ನಾನು ಹೇಳಿದೆ ಹಿಂದೆ ಇದೇ ವಿಚಾರದಲ್ಲಿ ಏನೇನೆಲ್ಲಾ ಆಯಿತು ಎಂಬುದೂ ಕೂಡ ಗೊತ್ತಿದೆ ಆ ರೀತಿ ನೋಡುವುದಾಗಿದ್ದರೆ, 1996ನೇ ಇಸವಿಯಲ್ಲಿ ತಾವೇನೂ ಪಂಚಾಯತ್ ರಾಜ್ ಕಾನೂನು 1993 ನ್ನು ತಂದಿರಿ, ಅದೇ ಸರಿಯಾದುದಲ್ಲ ಅದಾದ ಮೇಲೆ 65 amendment ಗಳನ್ನು ತರಲಾಗಿದೆ

ಶ್ರೀ ಎನ್ ಧರ್ಮಸಿಂಗ್ Discussion ಗೆ ಅವಕಾಶ ಕೊಟ್ಟಾಗ ಅದನ್ನೆಲ್ಲಾ ಮಾತನಾಡೋಣ

ಶ್ರೀ ಎಂ ಪಿ ಪ್ರಕಾಶ್ ಅಲ್ಲಿಗೆ ನಾನು ಬರುತ್ತೇನೆ ಆ ವಿಚಾರದಲ್ಲಿ ನಿಮ್ಮ ಸದಸ್ಯರು ಪ್ರಸ್ತಾಪ ಮಾಡಿದ ಕಾರಣದಿಂದ ನಾನೂ ಆ ವಿಚಾರವನ್ನು ಪ್ರಸ್ತಾಪಿಸಿದೆ ಈಗ ಆ ವಿಚಾರವನ್ನು ನಾನು ಅಲ್ಲಿಗೇ ಕೈಬಿಡುತ್ತೇನೆ ಇಲ್ಲಿ ಪ್ರಸ್ತುತ ಇರತಕ್ಕಂಥ ವಿಷಯಕ್ಕೆ ನಾವು ಬರುತ್ತೇವೆ ಈ ಸಭೆಯಲ್ಲಿ ಈ ತಿದ್ದುಪಡಿಯನ್ನು ನಾವು ಅಂಗೀಕಾರ ಮಾಡಿದ್ದೇವೆ ಇದು ಅಂಗೀಕಾರವಾದ ಮೇಲೆ ಅದೇ ಸ್ವರೂಪದಲ್ಲಿ ವಿಧಾನ ಪರಿಷತ್ತಿನಲ್ಲಿ ಒಪ್ಪಿಗೆಗೆ ಹೋಯಿತು ವಿಧಾನ ಪರಿಷತ್ತಿನಲ್ಲಿಯೂ ಚರ್ಚೆಯಾಗಿ ಅಲ್ಲಿಯೂ ಅದು ಅಂಗೀಕಾರವಾಯಿತು ಅಲ್ಲಿ ಅದು ಅಂಗೀಕಾರವಾದ ಮೇಲೆ, ಅದನ್ನು submission note ಜೊತೆಗೆ ಸನ್ಮಾನ್ಯ ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಿಕ್ಕಾಗಿ ಕಡತದ ಸಮೇತವಾಗಿ ಅದನ್ನು ಕಳುಹಿಸಿಕೊಟ್ಟಿದ್ದೆವು ಅದಾದ ನಂತರ ವಿಧಾನ ಪರಿಷತ್ತಿನ ಕೆಲವು ಸದಸ್ಯರು ಹೋಗಿ ಮಾನ್ಯ ರಾಜ್ಯಪಾಲರಿಗೆ ಒಂದು ಮನವಿಯನ್ನು ಕೊಟ್ಟರು ಅದು ಎಷ್ಟರಮಟ್ಟಿಗೆ ಸಾಧುವಾದುದು, ಅದು ಎಷ್ಟರಮಟ್ಟಿಗೆ ನಮ್ಮ ಸಂಪ್ರದಾಯ ಮತ್ತು ನಿಯಮಾವಳಿಗಳಿಗೆ ಸರಿಯಾದುದು ಇದರ ಬಗ್ಗೆ ನಾನು ಈಗ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ ಅದು ಚರ್ಚೆಗೆ ಬರತಕ್ಕಂಥ ಸನ್ನಿವೇಶದಲ್ಲಿ ಅದರ ಬಗ್ಗೆಯೂ ಕೂಡ ಮಾತನಾಡುತ್ತೇನೆ ಈಗ ಮಾನ್ಯ ಮಾಧುಸ್ವಾಮಿಯವರು ಮಾತನಾಡಿದರು ಅನೇಕರು ವಿಷಯವನ್ನು ಮಾತನಾಡಿದರು ನಾವು ಈ ಸದನದಲ್ಲಿ ಬಂದಿರತಕ್ಕಂಥ ಮಸೂದೆಯನ್ನು ತೀವ್ರವಾಗಿ ವಿರೋಧಿಸಬಹುದು ಒಮ್ಮೆ ಆ ಮಸೂದೆ ಅಂಗೀಕಾರವಾದ ಮೇಲೆ, ನ್ಯಾಯಾಲಯಗಳು ಅದು ಅಸಿಂಧು ಎಂದು ಹೇಳುವವರೆಗೂ ಕೂಡ, ನಾವೆಲ್ಲರೂ ಕೂಡ ಅದಕ್ಕೆ ಬಾಧ್ಯರೇ, ಇಡೀ ರಾಜ್ಯವೂ ಕೂಡ ಅದಕ್ಕೆ ಬಾಧ್ಯರೇ, ನ್ಯಾಯಾಲಯ ಅದು ಅಸಿಂಧು

ಎಂದು ಹೇಳಿದಾಗ ಮಾತ್ರ ಅದು ನಮ್ಮ ಮೇಲೆ ಬಂಧನಕಾರಿಯಾಗಿರತಕ್ಕಂದದ್ದಲ್ಲ ಈ ಹಿನ್ನೆಲೆಯಲ್ಲಿ ಕೆಲವರು ಹೋಗಿ ಅಲ್ಲಿ ಕೊಟ್ಟರು, ಮಾನ್ಯ ರಾಜ್ಯಪಾಲರು, ಅವರ ಬಗ್ಗೆ ನಮಗೆ ಅಪಾರವಾದಂತಹ ಗೌರವವಿದೆ, ಅವರ ಹಿರಿತನ, ಅವರ ಸೇವೆ, ರಾಜ್ಯಾಂಗದತ್ತವಾಗಿರತಕ್ಕಂಥ ನಿಯಮಾವಳಿಗಳ ಬಗ್ಗೆ ಅವರಿಗಿರತಕ್ಕಂಥ ಬದ್ಧತೆಯ ಬಗ್ಗೆ ನಾವ್ಯಾರೂ ಪ್ರಶ್ನೆಯನ್ನು ಮಾಡುವುದಿಲ್ಲ ಅದನ್ನು ಇಲ್ಲಿ ಚರ್ಚೆ ಮಾಡಬೇಕಾದಂತಹ ಅಗತ್ಯವಿಲ್ಲ ಆ ಹೊಸ ಸಂಪ್ರದಾಯವನ್ನು ನಾವು ಇಡುವುದಿಲ್ಲ ಆದರೆ ಅದಾದ ಮಾರನೆಯ ದಿವಸವೇ, ನಮಗೆ ಕಡತದ ಸಮೇತವಾಗಿ ಅದು ಬರಬೇಕಾಗಿತ್ತು ಆದರೆ ಕಡತ ಈ ದಿವಸ ಬಂದಿಲ್ಲ ಕಡತ ಕಳುಹಿಸಿಕೊಟ್ಟಿರುವುದು ಸರ್ಕಾರ ಆದರೆ ಸರ್ಕಾರಕ್ಕೆ ಈ ವಿಚಾರವನ್ನು ಕಡತದ ಸಮೇತವಾಗಿ ಅವರು ಕಳುಹಿಸಕೊಡಬೇಕಾಗಿತ್ತು ಆದರೆ ಅವರು ಕಲಂ 200ರ ಕೆಳಗೆ ನೇರವಾಗಿ ಒಂದು ಸಂದೇಶವನ್ನು ಇಲ್ಲಿಗೆ ಕಳುಹಿಸಿಕೊಡತಕ್ಕದ್ದನ್ನು ಮಾಡಿದ್ದಾರೆ ಆ ಸಂದೇಶ ಉಭಯ ಸದನಗಳ ಅಧ್ಯಕ್ಷರು ಮತ್ತು ಸಭಾಪತಿಗಳಿಗೆ ಸೇರುವುದಕ್ಕಿಂತ ಮುಂಚಿತವಾಗಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರ ಜೊತೆಗೆ ಈ message ಇರುವ ಪತ್ರ ಇರುತ್ತದೆ ಆ message ಅನ್ನು ಹಿಡಿದುಕೊಂಡು ವಿಧಾನ ಪರಿಷತ್ತಿನಲ್ಲಿ ಈ ಸಮಸ್ಯೆಯನ್ನು ಅವರು ಎತ್ತುತ್ತಾರೆ ಅವರ ಕೈಗೆ ಅದು ಹೇಗೆ ತಲುಪಿತು? ಯಾರು ಅದನ್ನು ಕೊಟ್ಟರು? ಅದು ರಾಜಭವನದ ಮೂಲದಿಂದ ಸಿಕ್ಕತೋ? ಅಥವಾ ನಮ್ಮ ಈ ಕಛೇರಿಗಳ ಮೂಲದಿಂದ ಸಿಕ್ಕಿತೋ? ಯಾವ ರೀತಿಯಾಗಿ ಸಿಕ್ಕಿತು? ಆ ಸಂದೇಶ ಏನು ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗ ಅದೇ ಪ್ರಶ್ನೆಯನ್ನು ಎತ್ತಿದರು ಇದು ಏನು ಸಂದೇಶ ಬಂದಿದೆ ಅನ್ನತಕ್ಕದ್ದನ್ನು ಯಾರಿಗೂ ಕೂಡ ನಾವು ವಿತರಿಸಿಲ್ಲ ಈ ಸನ್ನಿವೇಶದಲ್ಲಿ ಮಾತನಾಡುವುದಕ್ಕಿಂತ ಪೂರ್ವದಲ್ಲಿ ವಿರೋಧ ಪಕ್ಷದ ನಾಯಕರು ಮಾನ್ಯ ರಾಜ್ಯಪಾಲರು ಕಳುಹಿಸಿಕೊಟ್ಟಿರತಕ್ಕಂಥದ್ದನ್ನು ಪ್ರಸ್ತಾಪಿಸಿದರು ಮಾನ್ಯ ಸಭಾಪತಿಗಳೂ ಕೂಡ ಸಂದೇಶವನ್ನು ಸದನಕ್ಕೆ ಓದಿಲ್ಲ ಅದಕ್ಕೆ ಮೊದಲೇ ಅವರೇ ಈ ವಿಚಾರವನ್ನು ಪ್ರಸ್ತಾಪಿಸಿದ್ದರು ಇನ್ನೂ ಹೇಳಬೇಕಾದರೆ, ಅವರ ಹೆಸರು ಹೇಳಬಾರದು ಎಂಬ ಸಂಪ್ರದಾಯಕ್ಕಾಗಿ ಅದನ್ನು ನಾನು ಬಿಟ್ಟಿದ್ದೇನೆ ಮೇಲ್ಮನೆ ಸದಸ್ಯರು ಭಾಗವಹಿಸಿದವರ ಹೆಸರುಗಳನ್ನು ಹೇಳಬಾರದು, ಆ ಕಲಾಪದ ಬಗ್ಗೆ ಚರ್ಚೆಯಾಗಬಾರದು ಎಂಬ ಕಾರಣಕ್ಕಾಗಿ ಅದನ್ನು ಬಿಟ್ಟಿದ್ದೇನೆ ಆದರೆ ಅಲ್ಲಿದ್ದಂತಹ ವಿರೋದ ಪಕ್ಷದ ನಾಯಕರುಗಳು ಮತ್ತು ಕೆಲವು ಸದಸ್ಯರುಗಳು ಆ ಸಂದೇಶದ ಪ್ರತಿಯನ್ನು ಹಿಡಿದುಕೊಂಡು ಸಭಾಪತಿಗಳು ಹೇಳುವ ಪೂರ್ವದಲ್ಲೇ ಆ ಒಂದು ಸಂದೇಶವನ್ನು ಓದುತ್ತಾರೆ ಇದು ಎಷ್ಟರಮಟ್ಟಿಗೆ ಸಾಧುವಾದುದು? ಇದು ಎಷ್ಟರಮಟ್ಟಿಗೆ ನಿಯಮಕ್ಕೆ ಹೊಂದಿಕೊಂಡಿರುವಂತಾದ್ದು? ಹಾಗೆಯೇ ಸನ್ಮಾನ್ಯ ಮಾಧುಸ್ವಾಮಿಗಳು ಪ್ರಸ್ತಾಪಿಸಿದಂತಹ ಸಮಸ್ಯೆಗೆ ಇಲ್ಲಿಯೂ ಕೂಡ ರಾಜ್ಯಾಂಗದ 175ರ ಅನುಚ್ಛೇದದ ಕೆಳಗೆ ಅವರೇನಾದರೂ ಸಂದೇಶ

ಕಳುಹಿಸಿಕೊಟ್ಟಿದ್ದರೆ, ಅದು ನಮಗೆ ಬಂಧನಕಾರಿ ಅದರ ಬಗ್ಗೆ ನಾವು ಚರ್ಚೆ ಮಾಡಲೇಬೇಕಾಗುತ್ತದೆ ಅದನ್ನು ನಾವು ಒಪ್ಪತಕ್ಕದ್ದು ಅಥವಾ ಬಿಡತಕ್ಕದ್ದು ಬೇರೆ ವಿಷಯ Office of Profit Bill ಬಗ್ಗೆ ತಾವು ಪ್ರಸ್ತಾಪ ಮಾಡಿದಿರಿ ಯಾವುದು ಲಾಭದಾಯಕ ಹುದ್ದೆ ಎನ್ನುವುದರ ಬಗ್ಗೆ, ಅಲ್ಲಿಯವರೆಗೂ ಕೂಡ ಯಾವುದೇ ವಿಶ್ಲೇಷನಾತ್ಮಕವಾಗಿರತಕ್ಕಂಥದ್ದು ಇರಲಿಲ್ಲ ಅಲ್ಲಿಯೂ ಕೂಡ ರಾಷ್ಟ್ರಪತಿಗಳು ಅದನ್ನು ವಾಪಸ್ ಕಳುಹಿಸಿಕೊಟ್ಟರು ವಾಪಸ್ ಕಳುಹಿಸಿದಂತೆ ಯಥಾ ರೀತಿಯಾಗಿರತಕ್ಕದ್ದನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ವಾಪಸ್ ಕಳುಹಿದರು ರಾಷ್ಟ್ರಪತಿಗಳ ಅಂಕಿತವಾದ ಮೇಲೆ ರಾಷ್ಟ್ರಪತಿಗಳು ಹೇಳಿದಂತಹ ವಿಚಾರವನ್ನು ಮಾನ್ಯ ಸರಡಗಿಯವರ ಅದ್ಯಕ್ಷತೆಯಲ್ಲಿ Joint Select Committee ಯನ್ನು ಮಾಡಿ, ಯಾವುದು ಲಾಭದಾಯಕವಾದ ಹುದ್ದೆ ಎನ್ನುವುದರ ಬಗ್ಗೆ, ಎಲ್ಲಾ ರಾಜ್ಯಗಳಲ್ಲಿ ಸಂಚರಿಸಿ, ಜನ ಪ್ರತಿನಿಧಿಗಳ ಅಭಿಪ್ರಾಯವನ್ನೂ ತೆಗೆದುಕೊಂಡು, ಅದರ ಮೂಲಕವಾಗಿ ಸೂಕ್ತವಾಗಿರತಕ್ಕಂಥ ವರದಿಯನ್ನು ನೀವು ಕೊಡಬೇಕು ಎನ್ನತಕ್ಕಂಥದ್ದನ್ನು ಕಳುಹಿಸಿಕೊಟ್ಟರು ಆದರೆ ಲೋಕಸಭೆ ಮತ್ತು ರಾಜ್ಯಸಭೆ ಅದೇ ನಿರ್ಣಯವನ್ನು ವಾಪಸ್ ಕಳುಹಿಸಿಕೊಟ್ಟರು ಅದಕ್ಕೆ ರಾಷ್ಟ್ರಪತಿಗಳು ಅಂಕಿತ ಹಾಕಿ ವಾಪಸ್ ಕಳುಹಿಸಿಕೊಟ್ಟಿದ್ದಾರೆ ಅದೇ ಪದ್ಧತಿಯನ್ನು ನಾವು ಇಲ್ಲಿ ಅನುಸರಿಸಿದೆವು ಲಾಭದಾಯಕ ಹುದ್ದೆ ಎನ್ನತಕ್ಕಂಥ ವಿಚಾರದಲ್ಲಿ ನಮ್ಮ ಘನತೆವೆತ್ತ ರಾಜ್ಯಪಾಲರು ನಮಗೆ ಸಂದೇಶವನ್ನು ಕಳುಹಿಸಿಕೊಟ್ಟರು ಆ ಸಂದೇಶವನ್ನು ಯಥಾವತ್ತಾಗಿ ಓದಿದ ನಂತರ, ನಾವು ಚರ್ಚೆ

ಶ್ರೀ ಎನ್ ಧರ್ಮಸಿಂಗ್ ನಾನು ಹೆಚ್ಚಿಗೆ ಮಾತನಾಡುವುದಿಲ್ಲ ತಾವು ಸಂಸದೀಯ ಪಟುಗಳು ನೀವು round about ಹೋಗುತ್ತಿದ್ದೀರಿ ನಾವು ನೇರವಾಗಿ ಪ್ರಶ್ನೆ ಕೇಳಿದ್ದೇವೆ ಮಾನ್ಯ ರಾಜ್ಯಪಾಲರ ಸಂದೇಶ ನಿನ್ನೆ ಮಾನ್ಯ ಉಪಾಧ್ಯಕ್ಷರು ಓದಿ ಸದನಕ್ಕೆ ಹೇಳಿದರು ರಾಜ್ಯಪಾಲರು ಈಗ ಅಧಿಕಾರ ವಿಕೇಂದ್ರೀಕರಣ, ಸಂವಿಧಾನಕ್ಕೆ ಸಂಬಂಧಪಟ್ಟದ್ದು, ಸುಪ್ರೀಂ ಕೋರ್ಟಿನ ಆದೇಶವಿದೆ 173 amendment ಆದ ಮೇಲೆ ಮತ್ತೊಂದಿಲ್ಲ, 'ಇವೆಲ್ಲಾ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿ ದೀರ್ಘವಾದ ಪತ್ರವನ್ನು ಬರೆದಿದ್ದಾರೆ ಅದು ಸದನದ ಮುಂದೆ ಇದೆ ಅದಕ್ಕೆ ಅದರ ಬಗ್ಗೆ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡಬೇಕು ತಾವು ಬಹಳ ಹಿರಿಯರಿದ್ದೀರಿ ಸಾಕಷ್ಟು ಅನುಭವವಿದೆ, ತಾವು ಇನ್ನು ಮುಂದೆ ಎಲ್ಲಿಗೆ ಹೋಗುತ್ತೀರಿ ಎಂಬುದು ಗೊತ್ತಿದೆ ಅದೆಲ್ಲಾ ಏಕೆ ಹೇಳುತ್ತೀರಿ? ನಿಮ್ಮ ಅಪಾರವಾದ ಅನುಭವ, parliamentary skill ಬಗ್ಗೆ ನಮ್ಮದೇನೂ ತಕರಾರು ಇಲ್ಲ You are the expert But, conventionally ಇಲ್ಲಿ ಬರತಕ್ಕಂಥದ್ದು ಇಷ್ಟೇ ಮಾನ್ಯ ರಾಜ್ಯಪಾಲರು ಬರೆದಂತಹ ಪತ್ರ ಸದನದ ಸದಸ್ಯರಿಗೆ ಏನು ಓದಿ ಹೇಳಿದ್ದಾರೆ ಅದರ ಆಗುಹೋಗುಗಳ ಬಗ್ಗೆ ಚರ್ಚೆ ನಡೆಯುತ್ತದೆಯೇ? ಇಲ್ಲವೇ? ಯಾವಾಗ ಅದಕ್ಕೆ ಸಮಯ fix ಮಾಡುತ್ತೀರಿ?

ನಾವೇನು ಕೇಳಿದ್ದು ಎಂದರೆ, ಪ್ರಶ್ನೋತ್ತರ ಬದಿಗಿಟ್ಟು, ರಾಜ್ಯಪಾಲರ ಪತ್ರಕ್ಕೆ ಹೆಚ್ಚಿನ ಮಹತ್ವ ಕೊಡಬೇಕು, ಅದರ ಬಗ್ಗೆ ಚರ್ಚೆಯಾಗಬೇಕು ಈ ರಾಜ್ಯದ ಜನತೆಗೆ ಸಂಬಂಧಪಟ್ಟಂತಹ ಸಮಸ್ಯೆಗಳ ಬಗ್ಗೆ ವಿಚಾರ ಮಾಡತಕ್ಕಂಥ ರೀತಿಯಲ್ಲಿ ರಾಜ್ಯಪಾಲರು ಕಳುಹಿಸಿದ್ದಾರೆ, ಅಷ್ಟೇ ನಾವು ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಏನೇನು ಬರುತ್ತದೋ, ಅದರ ಬಗ್ಗೆ ಬೇರೆ ಮಾತನಾಡೋಣ ಅಷ್ಟರ ಬಗ್ಗೆ ತಾವು ಹೇಳಿ ದೊಡ್ಡ ಮನಸ್ಸು ಮಾಡಿ, ಏನು ಮಾಡಬೇಕಾಗಿದೆ ಎಂಬ ಬಗ್ಗೆ you advise the Government and also the Speaker ಆ ಬಗ್ಗೆ ನೀವು ಸಲಹೆ ಕೊಟ್ಟರೆ ಸಾಕು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯರಾದಂತಹ ಪ್ರತಿಪಕ್ಷದ ನಾಯಕರು ಹೇಳುವ ವಿಚಾರಕ್ಕೇ ನಾನು ಸೀಮಿತವಾಗಿ, ಅಷ್ಟನ್ನೇ ನಾನು ಮಾತನಾಡುತ್ತೇನೆ ಪೂರಕವಾಗಿ ಕೆಲವು ವಿಷಯಗಳನ್ನು ನಾನು ಹೇಳಿದ್ದೇನೆ ಅವರು ಸಂವಿಧಾನದ ಅನುಚ್ಛೇದ 175ರ ಕೆಳಗೆ ಸಂದೇಶ ಕಳುಹಿಸಿದ್ದರೆ, ಅದು ಬಂಧನಕಾರಿ ಆಗಬಹುದಾಗಿತ್ತು ಆದರೆ ಇಲ್ಲಿ 200ರ ಕೆಳಗೆ ಕಳುಹಿಸಿರತಕ್ಕಂಥದ್ದರ ಬಗ್ಗೆ ಶಕ್ದರ್ ಅಂಡ್ ಕೌಲ್‌ನಲ್ಲಿ ಹೇಳಿದ್ದಾರೆ 200ರ ಬಗ್ಗೆ ಓದಬೇಕಾದಂತಹ ಅಗತ್ಯ ಇಲ್ಲದಿದ್ದರೂ ಕೂಡ ಅದರ ಬಗ್ಗೆ ನಾನು ಮತ್ತೊಂದು ಸಲ ಹೇಳುತ್ತೇನೆ

> "When a Bill has been passed by the Legislative Assembly of a State or, in the case of a State having a Legislative Council, has been passed by both Houses of the Legislature of the State, it shall be presented to the Governor and the Governor shall declare either that he assents to the Bill or that he withholds assent therefrom or that he reserves the Bill for consideration of the President
>
> Provided that the Governor may, as soon as possible after the presentation to him of the Bill for assent, return the Bill if it is not a Money Bill together with a message requesting that the House or Houses will reconsider the Bill or any specified provisions thereof and, in particular, will consider the desirability of introducing any such amendments as he may recommend in his message and, when a Bill is so returned, the House or Houses shall reconsider the Bill accordingly, and if the Bill is passed again by the House or Houses with or without amendment and presented to the Governor for assent, the Governor shall not withhold assent therefrom
>
> Provided further that the Governor shall not assent to, but shall reserve for the consideration of the President, any Bill

which in the opinion of the Governor would, if it became law, so derogate from the powers of the High Court as to endanger the position which that Court is by this Constitution designed to fill ”

So, ಈ ಶಬ್ದದ ಹಿನ್ನೆಲೆಯಲ್ಲಿ ಕೆಲವೊಂದನ್ನು ಶಕ್ದರ್ ಅಂಡ್ ಕೌಲ್‌ನಲ್ಲಿ ಹೇಳುತ್ತಾರೆ

“If the Bill is returned by the President without specifying definite amdnements thereto, the procedure applicable to the Bill after introduction applies *mutatis mutandis* in the case of such a Bill Where amendments have been recommended by the President, any Minister in the case of a Government Bill or any member in the case of a private member’s Bill may give notice of his intention to move that the amendments be taken into consideration and the procedure that would follow thereafter is similar to that in the case of any ordinary Bill ”

ಶಕ್ದರ್ ಅಂಡ್ ಕೌಲ್‌ರವರು ಈ ವಿಚಾರದಲ್ಲಿ ವಿವರವಾಗಿ ಅಧ್ಯಾಸಿರತಕ್ಕಂಥ ಭಾಗ ಕೂಡ ಇದೆ ಇಲ್ಲಿ ಸನ್ಮಾನ್ಯ ಅಧ್ಯಕ್ಷರೆ, ಅವರು ಕಳುಹಿಸಿರತಕ್ಕಂಥದ್ದರ ಕೆಳಗೆ 73 ನೇ ಸಂವಿಧಾನದ ತಿದ್ದುಪಡಿಗೆ ಅನುಗುಣವಾದಂತಹ ರೀತಿಯ ಆಶಯಗಳನ್ನು ಅಭಿವ್ಯಕ್ತಗೊಳಿಸುವುದಿಲ್ಲ ಇದರ ವಿಚಾರಗಳಲ್ಲಿ ಪೂರ್ಣವಾಗಿ ನೀವು 3(A) ಗೆ ಕಳುಹಿಸಿಕೊಟ್ಟಿರತಕ್ಕಂಥಾದ್ದು ಅದರಲ್ಲಿ ವಿಷಯಗಳನ್ನು ಪ್ರಸ್ತಾಪಿಸಿ, ಈ ಕಾನೂನು 73ನೇ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿಲ್ಲ ಆ ಕಾರಣಕ್ಕಾಗಿ ನೀವು ಇದನ್ನು ಮತ್ತೆ ಪರಾಂಬರಿಸಬೇಕು ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ Specific ಅಮೆಂಡ್‌ಮೆಂಟ್ ಏನೆಂದು ಇದರಲ್ಲಿ ಹೇಳುವುದಿಲ್ಲ ಆದರೆ ಅದರ ಆಶಯ ಗೊತ್ತಾಗುತ್ತದೆ ಅದರ ಅಗತ್ಯತೆ ಇಲ್ಲ ಎನ್ನುವ ರೀತಿಯಲ್ಲಿ ಏಕೆಂದರೆ ಅವರು ಇಲ್ಲಿ ಹೇಳುತ್ತಾರೆ

“It may be pertinent to quote to this context only a brief extract from the in passioned speech of the then Prime Minister Rajiv Gandhi in Parliament in 1989 while introducing the 73rd Amendment While referring to his tour to hundreds of villages and discussions with countless people in the country, he said

“We learnt that a grass root administration without political authority was like a meal without salt We learnt that however well-intentioned our district bureaucracy might be, without effective elected authority the gap between the people and the bureaucracy could not be closed We learnt that the

vacuum created by the absence of local level political authority had spawned the power brokers who occupy the gap between the people and their representatives in distant Vidhan Sabhas and the ever more remote Parliament We learnt that corruption could only be ended by giving power to the panchayats and making panchayats responsible to the people We learnt that inefficiency could only be ended by entrusting the people at the grass root level with the responsibility for their own development We learnt that callousness could only be ended by empowering the people to send their own representatives to institutions of local self-government "

"The Karnataka Panchayat Raj (Amendment) Bill, 2007, Hon'ble Members, is not obviously consistent with this forward looking democratic approach

While expressing and affirming highest regards for the Hon'ble Members of the State Legislature, I, T N Chaturvedi, Governor of Karnataka, in exercise of the power conferred under Article 200 of the Constitution of India, hereby return The Karnataka Panchayat Raj (Amendment) Bill, 2007, with the request to Hon'ble Legislators for reconsideration in their wisdom about its need, propriety, timeliness and relevance, keeping in view the aforesaid explanatory observations, serious wideranging implications, the constitutional mandate and the likely long-term impact the amendments may have on the future of Panchayat Raj in our State of Karnataka "

ಇಲ್ಲಿ specific ಆಗಿ ಇಂಥದೇ ತಿದ್ದುಪಡಿಯನ್ನು ತರಬೇಕೆನ್ನುವ ವಿಷಯವನ್ನು ಅವರು ಹೇಳಲಿಲ್ಲ ಇದಕ್ಕೆ ಕೌಲ್ ಅಂಡ್ ಶಕ್ದರ್ ರವರು ಹೇಳತಕ್ಕಂಥಾದ್ದು ಸಂಬಂಧಪಟ್ಟಿರತಕ್ಕಂತಹ ಮಂತ್ರಿಗಳು ಅದು ನಮ್ಮ ರಾಜ್ಯ ಸರ್ಕಾರದ ಒಂದು ಮಸೂದೆ ಆದಾಗ, ಅದು ಯಾವುದಾದರೂ ಖಾಸಗಿ ವಲಯದ ಮಸೂದೆ ಆಗಿದ್ದರೆ, ಖಾಸಗಿ ವಲಯದಲ್ಲಿ ಯಾರು ಅದನ್ನು ಇಲ್ಲಿ ಮಂಡಿಸಿರುತ್ತಾರೆ ಅವರು ಅಧಿಕೃತವಾದ ತಿದ್ದುಪಡಿಯನ್ನು ತರಬೇಕಾಗುತ್ತದೆ ಅಥವಾ ಇಲ್ಲಿ ಈ ಸಂದರ್ಭದಲ್ಲಿ ಸರ್ಕಾರ ತಿದ್ದುಪಡಿ ತರಬೇಕಾಗುತ್ತದೆ ಈ ಹಿನ್ನೆಲೆಯಲ್ಲಿದ್ದಾಗ ನಾವು ಎಲ್ಲಾ ಸರ್ಕಾರೀ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವಂಥಾದ್ದು ಎಷ್ಟು ಸಮಂಜಸವಾದುದು? ಈಗ ಅವರು ನಮ್ಮಿಂದ ಬಯಸತಕ್ಕಂಥಾದ್ದು ಏನು? ಇಲ್ಲಿ ಉಭಯ ಸದನಗಳಲ್ಲಿ ಈಗಾಗಲೇ ಪಾಸಾಗಿರುವಂತಹ ಮಸೂದೆ ಅವರ ಒಪ್ಪಿಗೆಗೆ ಕಳುಹಿಸಿಕೊಟ್ಟಿರತಕ್ಕಂಥದ್ದರ ಹಿನ್ನೆಲೆಯಲ್ಲಿ ಅದನ್ನು ಬದಲಿಸಬೇಕಾದರೆ ಇಲ್ಲಿ ತಿದ್ದುಪಡಿ ತರಬೇಕಾಗುತ್ತದೆ ಇಲ್ಲಿ ತಿದ್ದುಪಡಿ ತರಬೇಕಾಗಿರತಕ್ಕಂಥಾದ್ದು

ಪಂಚಾಯತ್ ರಾಜ್ ಕಾನೂನಿನ ಸಂಬಂಧಪಟ್ಟ ಸಚಿವರು ಅದನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕೆಂದೇನೂ ಇಲ್ಲ ಈಗಾಗಲೇ ಮಾನ್ಯ ಮಾದುಸ್ವಾಮಿಯವರು ಉದ್ಧೃತ ಮಾಡಿರುವಂತೆ ಈ ಬಗ್ಗೆ ಆರು ತಿಂಗಳವರೆಗೆ ಸಮಯ ಇದೆ ಇದೇ ಸದನದ ಅವಧಿಯಲ್ಲಿ ತೆಗೆದುಕೊಳ್ಳಬೇಕೆಂದೇನೂ ಇಲ್ಲ ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದಂತೆ ಇದರ ಬಗ್ಗೆ ಚರ್ಚೆಯಾಗಲಿಕ್ಕೆ ನಾನು ಒಪ್ಪಿಕೊಳ್ಳುತ್ತೇನೆ ಚರ್ಚೆಯಾಗಬೇಕು ನಾವು ಮಾನಸಿಕವಾಗಿ ತಯಾರಾಗಬೇಕು ಮಾನಸಿಕವಾಗಿ ನಾವು ಅಧಿಕಾರ ವಿಕೇಂದ್ರೀಕರಣಕ್ಕೆ ತಯಾರಿಲ್ಲ ಇಲ್ಲಿ ಎಲ್ಲರೂ ಮೊಸಳೆ ಕಣ್ಣೀರು ಹಾಕತಕ್ಕಂತಹವರೇ ಇರುವುದು ನಮ್ಮ ಅಧಿಕಾರವನ್ನು ಮೊಟಕುಗೊಳಿಸಿಕೊಳ್ಳುವುದಕ್ಕೆ ನಾವು ಯಾರೂ ತಯಾರಿಲ್ಲ ಇಂತಹ ಅನೇಕ ಉದಾಹರಣೆಗಳಿವೆ ಬಹಳ ದೂರ ಬಂದಿದ್ದೇವೆ ಆದರೆ ಇದಕ್ಕೆ ತಿದ್ದುಪಡಿ ತರಬೇಕಾಗಿರುವಂಥಾದ್ದು ಸರ್ಕಾರಕ್ಕೆ ಸಮಯಾವಕಾಶ ಬೇಕಾಗುತ್ತದೆ ಏನನ್ನು ತಿದ್ದುಪಡಿ ತರಬೇಕು, ಯಾವುದರ ಬಗ್ಗೆ ಚರ್ಚೆ ಮಾಡಬೇಕು, ಇದು ಮತ್ತೆ ಸಚಿವ ಸಂಪುಟದ ಸಭೆ ಮುಂದೆ ಬರಬೇಕಾಗುತ್ತದೆ ಈ ತಿದ್ದುಪಡಿ ತರುವಂಥಾದ್ದು ಸಚಿವ ಸಂಪುಟದಲ್ಲಿ ಚರ್ಚೆಯಾದ ಮೇಲೆ ಮಸೂದೆ ರೂಪದಲ್ಲಿ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಅದನ್ನು ತಂದಿದ್ದಾರೆ, ಉಭಯ ಸದನ ಅದನ್ನು ಪಾಸ್ ಮಾಡಿದೆ, ಈಗ ಕಳುಹಿಸಿಕೊಟ್ಟಿರತಕ್ಕಂತಹ ಸಂದೇಶದ ಹಿನ್ನೆಲೆಯಲ್ಲಿ ಆ ತಿದ್ದುಪಡಿಯನ್ನು ತರಬೇಕಾದರೆ, ಕಾಲಾವಕಾಶ ಬೇಕಾಗುತ್ತದೆ ಆರು ತಿಂಗಳ ಕಾಲಾವಕಾಶವನ್ನು ಇದೇ ಅನುಕೂಲವಾಗಿ ಕೊಟ್ಟಿರತಕ್ಕಂಥಾದ್ದು ಇದೆ ಸನ್ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಇಷ್ಟನ್ನು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇದನ್ನು ತೆಗೆದುಕೊಳ್ಳಬೇಕಾದ ಜರೂರತ್ತು ಇಲ್ಲ ಸಂದೇಶ ಬಂದಿದೆ, ಆ ಸಂದೇಶವನ್ನು ಈಗ ಓದಿದ್ದೀರಿ ಸರ್ಕಾರವೂ ಕೂಡ ಇದರ ಬಗ್ಗೆ ಯೋಚನೆಯನ್ನು ಮಾಡುತ್ತದೆ ಘನತೆವೆತ್ತ ರಾಜ್ಯಪಾಲರು ಕಳುಹಿಸಿರತಕ್ಕಂತಹ ಸಂದೇಶದ ಮಹತ್ವಕ್ಕೆ ಅನುಗುಣವಾದ ರೀತಿಯಲ್ಲಿ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ ಇಲ್ಲಿ ಇನ್ನು ಒಂದು ಮುಖ್ಯವಾಗಿರತಕ್ಕಂಥಾದ್ದು, ಆ ಬಿಲ್ಲನ್ನು ಸನ್ಮಾನ್ಯ ರಾಜ್ಯಪಾಲರು ನಮಗೆ ವಾಪಸ್ ಕಳುಹಿಸಿಲ್ಲ ನಾವು ಬಿಲ್ ಸಮೇತವಾಗಿ ಅವರಿಗೆ submission note ಕಳುಹಿಸಿದ್ದೇವೆ ಆದರೆ ಆ ಬಿಲ್ಲನ್ನೇ ವಾಪಸ್ ಕಳುಹಿಸಿಲ್ಲ ಬರೀ ಈ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿದ್ದಾರೆ ಈ ಸಂದೇಶ ಬಂದಾಗ ಅದಕ್ಕೆ ಬೇಕಾದಂತಹ ತಿದ್ದುಪಡಿಯೋ, ತಿದ್ದುಪಡಿ ತರಲಾರದೆ ಇರತಕ್ಕಂಥಾದ್ದಕ್ಕೆ, ಆ ಬಿಲ್ ವಾಪಸ್ ಬಂದಾಗ ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ ನಾನು ಕೇಳಿಕೊಳ್ಳತಕ್ಕಂಥಾದ್ದು ಇಷ್ಟೆ ಈಗ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕಾದಂತಹ ಅಗತ್ಯವಿಲ್ಲ ಸನ್ಮಾನ್ಯ ರಾಜ್ಯಪಾಲರು ಕೊಟ್ಟಿರತಕ್ಕಂತಹ ಸಂದೇಶದ ಮಹತ್ವಕ್ಕೆ ಅನುಗುಣವಾದ

ರೀತಿಯಲ್ಲಿ ಅದಕ್ಕೆ ಕೊಡಬೇಕಾದ ಗೌರವದ ಬಗ್ಗೆ ಕೂಡ ನಾವು ಈ ವಿಚಾರವನ್ನು ಚರ್ಚೆ ಮಾಡುತ್ತೇವೆ ಸಚಿವ ಸಂಪುಟದ ಮುಂದೆ ಬರಬೇಕಾಗುತ್ತದೆ ಸಂಬಂಧಪಟ್ಟ ಇಲಾಖೆಯವರು ಇದರ ಬಗ್ಗೆ ಚರ್ಚೆ ಮಾಡಿಬೇಕಾದಂತಹ ತಿದ್ದುಪಡಿ ತರಬೇಕಾಗುತ್ತದೆ ಆದ್ದರಿಂದ ತಾವು ಏನು ಈಗ ರಾಜ್ಯಪಾಲರು ಈ ಸದನಗಳಿಂದ ಬಯಸಿದ್ದಾರೆ ಆ ಒಂದು ಸಂದೇಶವನ್ನು ಓದಿದ್ದೀರಿ ಈ ವಿಚಾರವನ್ನು ಸರ್ಕಾರ ಕೂಲಂಕಷವಾಗಿ ಯೋಚನೆ ಮಾಡಿ ಅದಕ್ಕೆ ಬೇಕಾಗಿರತಕ್ಕಂತಹ ತಿದ್ದುಪಡಿ ತರುವಂಥಾದ್ದು, ತಿದ್ದುಪಡಿ ಇಲ್ಲದಿದ್ದರೆ ಯಥಾವತ್ತಾಗಿ ಪಾಸಾಗಬೇಕೆಂದು ಕೇಳಿಕೊಳ್ಳುವಂಥಾದ್ದು, ಆ ನಿರ್ಣಯವನ್ನು ಸಚಿವ ಸಂಪುಟ ಸಭೆಯಲ್ಲಿ ಮಾಡುತ್ತೇವೆ ಈಗ ಅದನ್ನು ತಳ್ಳಿ ಹಾಕಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು, ಅವೆಲ್ಲಾ ಹೇಳಿ ಬಿಡುತ್ತಾರ ಅದರಲ್ಲಿ ಎರಡು ಮಾತಿಲ್ಲ ನಾವು ಬಜೆಟ್‌ನಲ್ಲಿ ಪಾಸ್ ಮಾಡಿದ ಮಸೂದೆಗೆ ರಾಜ್ಯಪಾಲರು ಎಲ್ಲಿಯೂ ಸಹಿ ಹಾಕಲಿಲ್ಲ ಸಹಿ ಹಾಕತಕ್ಕಂತಹ ಕಾಲದಲ್ಲಿ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರ ನಿನ್ನೆ ಉಪಾಧ್ಯಕ್ಷರು ಓದಿ ಹೇಳಿದ್ದಾರೆ ಇವತ್ತು ಏನು ಹೇಳಿದ್ದಾರೆ, ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ಕೊಡಬಾರದು, ಏನು ಇದರ ಬಗ್ಗೆ ಸದನ ಸಮಿತಿ ನೇಮಕ ಮಾಡಿದ್ದೀರಾ? ಏನಾದರೂ ವಿಚಾರ ಬಂದಿದೆಯಾ? Experts Committee Constitute ಮಾಡಿದ್ದೀರಾ? ಇವೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಪ್ರಸ್ತಾಪ ಮಾಡಿ, ಇವತ್ತು ಮನೆಗಳನ್ನು ಹಂಚತಕ್ಕಂತಹ ಕಾಲದಲ್ಲಿ ಅಂಬೇಡ್ಕರ್ ಆಗಲಿ, ವಾಲ್ಮೀಕಿ ಆಗಲಿ, ಎಲ್ಲಾ ಕಡೆಗೆ ಬಡತನ ರೇಖೆಯಿಂದ ಕೆಳಗಿರತಕ್ಕಂತಹವರಿಗೆ, What are the norms they are adopting? ಮೊನ್ನೆ ನಾನು ಶೂನ್ಯವೇಳೆಯಲ್ಲಿ ಹೇಳುವಾಗ ತಾವು ಇರಲಿಲ್ಲ ಪಕ್ಷ ಭೇದವನ್ನು ಮರೆತು ಎಲ್ಲಾ ಕಡೆಗೆ ಜಿಲ್ಲಾ ಪಂಚಾಯತ್ ಸದಸ್ಯರು, ಜಿಲ್ಲಾ ಪಂಚಾಯಿತಿ ಕಛೇರಿಗೆ ಬೀಗ ಹಾಕಿದ್ದಾರೆ ನಮ್ಮ ಅಧಿಕಾರ ಮೊಟಕುಗೊಳಿಸುತ್ತಿದ್ದಾರೆಂದು ಜನ ಪ್ರತಿನಿಧಿಗಳು ಅವರ ಆಕ್ರೋಶ ಮತ್ತು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ ಇದರಲ್ಲಿ ಇವತ್ತು ನಾವು ಪಾಸು ಮಾಡಿದಂತಹ ಮಸೂದೆಗೆ ರಾಜ್ಯಪಾಲರು ಕಳುಹಿಸಿರುವಂತಹ ಪತ್ರವನ್ನು ತಾವು ಓದಿದ್ದೀರಿ ಇವತ್ತು ಸದನದಲ್ಲಿ ಚರ್ಚೆ ಮಾಡತಕ್ಕಂತಹ ಹಕ್ಕು ನಮಗೆಲ್ಲರಿಗೂ ಇದ ಬಜೆಟ್‌ನಲ್ಲಿ ಮಾಡಿದಂತಹ certain observations ಇನ್ನು ಕೂಡ ಇವೆ His Excellency, he has sent a letter to the both Houses ಸರ್ಕಾರಕ್ಕೆ ಬಂದಿದೆಯೋ ಇಲ್ಲ ಗೊತ್ತಿಲ್ಲ ಅದರ ಬಗ್ಗೆ ಬಹಳ ತೀವ್ರವಾಗಿ ಚರ್ಚೆಯಾಗಬೇಕಾಗಿದೆ ಚರ್ಚೆಯಾಗದೆ ಹೋದರೆ, ಯಾವ ರೀತಿಯಾಗಿ ಕಾರ್ಯಗತ ಮಾಡುತ್ತೀರಿ? ಇದು ಸರಿಯಾದುದು ಅಲ್ಲ ಇವತ್ತಿನ ದಿವಸ ಇದರ ಬಗ್ಗೆ ಚರ್ಚೆಯಾಗಬೇಕು ಅದಕ್ಕೋಸ್ಕರ ಎಲ್ಲಾ ಕಲಾಪಗಳನ್ನು ಬದಿಗಿಟ್ಟು ಚರ್ಚೆ

ಮಾಡಬೇಕಾಗಿದೆ ಇಲ್ಲದಿದ್ದರೆ ನೀವು ಹೇಳಿ, ನೀವು ಸುಮ್ಮನೆ ಓದಿದ್ದೀರಿ we have just ignored ಎಂದು ಹೇಳಿ ರಾಜ್ಯಪಾಲರು ಇವತ್ತು ಸಂವಿಧಾನದ ಹೆಡ್ ಆಗಿದ್ದಾರೆ ಇವತ್ತು ರಾಜ್ಯ ಸರ್ಕಾರ ಪಾಸು ಮಾಡಿ ಕಳುಹಿಸಿರತಕ್ಕಂತಹ ಬಿಲ್ಲಿನ ಬಗ್ಗೆ ಆತಂಕ ವ್ಯಕ್ತ ಮಾಡಿದ್ದಾರೆ, ಇದರ ಬಗ್ಗೆ ನಾವು ಚರ್ಚೆ ಮಾಡಲೇಬೇಕು ಸರಿಯೋ ತಪ್ಪು ಎನ್ನುವುದು ಮತ್ತೊಮ್ಮೆ ಚರ್ಚೆ ಮಾಡೋಣ ನಾನು ಸರ್ಕಾರಕ್ಕೆ ಕೇಳುವುದು ಯಾವಾಗ ಇದರ ಬಗ್ಗೆ ಚರ್ಚೆ ನಿಗದಿಪಡಿಸುತ್ತೀರಿ? ಇದಕ್ಕೆ ಅಮೆಂಡ್‌ಮೆಂಟ್ ಮಾಡತಕ್ಕಂತಹ ರೀತಿಯಲ್ಲಿ ಮಾಡುತ್ತೀರೋ? ಅವರು ಪತ್ರದಲ್ಲಿ ಏನೇನು ಹೇಳಿದ್ದಾರೆ ಅದರ ಬಗ್ಗೆ ಚರ್ಚೆ ಮಾಡಬೇಕು ಸರ್ಕಾರ ಅದರ ಬಗ್ಗೆ ಬಹಳ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಇದು ಕರ್ನಾಟಕದ ಜನತೆಗೆ ಸಂಬಂಧಪಟ್ಟಂತಹ ಸಭೆ ಅದರಲ್ಲಿಯೂ ಮುಖ್ಯವಾಗಿ ನಿಮ್ಮ ಮಾನ್ಯ ಮುಖ್ಯ ಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡುತ್ತಾರೆ ಎಲ್ಲ ವಿಷಯಗಳನ್ನು ಮಾಡುತ್ತೇನೆಂದು ಹೇಳುತ್ತಾರೆ ಎಲ್ಲಿ ಆಗುತ್ತದೆ? ಗ್ರಾಮಗಳಿಗೆ ಅಧಿಕಾರಗಳನ್ನು ಮೊಟಕುಗೊಳಿಸತಕ್ಕಂತಹ ರೀತಿಯಲ್ಲಿ ಸರ್ಕಾರದ ವರ್ತನೆ ಇದೆ ಸಂವಿಧಾನದ ತಿದ್ದುಪಡಿ 243, ಆರ್ಟಿಕಲ್ 40 Supreme Court has already given a judgment ಪಾರ್ಲಿಮೆಂಟಿನಲ್ಲಿ ಏನು 173 ಅಮೆಂಡ್‌ಮೆಂಟ್ ಆಗಿದೆ, ಅದಕ್ಕೆ ಮತ್ತೆ ಬದಲಾವಣೆ ಮಾಡತಕ್ಕಂತಹ ಅವಶ್ಯಕತ ಇಲ್ಲ ಕಾನೂನು ಪ್ರಕಾರವಾಗಿ ಇವೆಲ್ಲಾ ವಿವರವಾಗಿ ಚರ್ಚೆ ಮಾಡಬೇಕಾಗುತ್ತದೆ ತಾವು ದಯಮಾಡಿ ಅವಕಾಶ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಸಭಾಧ್ಯಕ್ಷರೆ, ಒಂದೇ ಒಂದು ಮಾತು ಈ ವಿಚಾರ ಹಿರಿಯರಾದ ಮಾನ್ಯ ಪ್ರತಿಪಕ್ಷದ ನಾಯಕರಿಗೆ ಗೊತ್ತಿದೆ 1994ನೇ ಸಾಲಿನಲ್ಲಿ 68 ಜನ ಸದಸ್ಯರು ಆವತ್ತಿನ ನಮ್ಮ ಆಡಳಿತ ಪಕ್ಷದಲ್ಲಿ ಇದ್ದರು ಇದ್ದಂತಹ 68 ಜನ ಸದಸ್ಯರು ಈ ವಸತಿ ಯೋಜನೆಯಲ್ಲಿ ಶಾಸಕರಿಗೆ ಅಧಿಕಾರ ಕೊಡಬೇಕು ಎಂದು ಪತ್ರ ಕೊಟ್ಟರು ಆಗ ನಾನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ದ ಮಂತ್ರಿಯಾಗಿದ್ದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು ತಾವೆಲ್ಲಾ ಪ್ರತಿಪಕ್ಷದಲ್ಲಿದ್ದಿರಿ ಆ ಸಂದರ್ಭದಲ್ಲಿ ನಾವು ಒಪ್ಪಿಕೊಳ್ಳಲಿಲ್ಲ ಬೇಕಾದಷ್ಟು ಚರ್ಚೆಯಾಯಿತು ಕೊನೆಗೆ ಇದೇ ಸದನದಲ್ಲಿ ಒಂದು ತರಹದ ರಾಜಿಯಾಯಿತು ಅದೇನೆಂದರೆ, ಹಾವೇರಿ ಪಂಚಾಯಿತಿ ಎಂದು ನಮ್ಮ ಕಡೆ ಕರೆಯುತ್ತಾರೆ, ಅದು ಮಾನ್ಯ ಡಿ ಆರ್ ಪಾಟೀಲ್ ಅವರಿಗೆ ಗೊತ್ತಿದೆ Indira Avas ಅನ್ನು ಬಿಟ್ಟು ಕೊಡುವುದಿಲ್ಲ ಅದು ಕೇಂದ್ರ ಸರ್ಕಾರದ ಯೋಜನೆ ಆಶ್ರಯ ಯೋಜನೆ ಅನ್ನುವುದು ರಾಜ್ಯ ಸರ್ಕಾರದ ಯೋಜನೆ ಆದ್ದರಿಂದ, ರಾಜ್ಯ ಸರ್ಕಾರದ ಯೋಜನೆಗೆ ಶಾಸಕರು ಅಧ್ಯಕ್ಷರಾಗಿರುತ್ತಾರೆ ಗ್ರಾಮ ಸಭೆಗಳು ನಡೆದು, ಗ್ರಾಮ ಸಭೆಯಿಂದ ಶಿಫಾರಸ್ಸು ಆಗಿರತಕ್ಕದ್ದು ಅದರ

ಮುಂದುಗಡೆ ಬರಬೇಕು ಅರ್ಹ ಮತ್ತು ಅನರ್ಹ ಫಲಾನುಭವಿಗಳನ್ನು ಅವರು ಗುರುತಿಸಬೇಕು ಅದರ ಮೇಲೆ ಅದನ್ನು ಕೊಡಬೇಕು ಎನ್ನುವಂತಹ ಒಂದು ರೀತಿಯ ವ್ಯವಸ್ಥೆ ಆಯಿತು ಇಂದಿರಾ ಆವಾಸ್ ಯೋಜನೆಗೆ ಆ ವ್ಯವಸ್ಥೆಯನ್ನು ನಾವು ತರಲಿಲ್ಲ ಯಾಕೆ ಅದು ಆಗಲಿಲ್ಲ ಅಂದರೆ, ಅದನ್ನು ನಾವು ಗಟ್ಟಿಯಾಗಿ ಹಿಡಿದೆವು ಆದರೂ ಕೂಡ ಸದನದಲ್ಲಿ ಈ ತರಹ ಇಡೀ ಜನ ಒಪ್ಪಿಕೊಂಡಿದ್ದರು ಇದಕ್ಕೆಲ್ಲಾ ಆಗಿರತಕ್ಕಂತಹದ್ದು ಏಕೆಂದರೆ ನಮಗೆ ಅಧಿಕಾರದ ವಿಕೇಂದ್ರೀಕರಣದಲ್ಲಿ ಬದ್ಧತೆ ಎನ್ನತಕ್ಕಂತಹದ್ದು ಸಂಪೂರ್ಣವಾಗಿಲ್ಲ ನಮ್ಮಲ್ಲಿ ಇರತಕ್ಕಂತಹ ಅನೇಕ ಸದಸ್ಯರಿಗೆ ಇಲ್ಲ ಬಹಳ ಜನ

ಡಾ॥ ಶರಣ ಪ್ರಕಾಶ್ ಪಾಟೀಲ್ ನಿಮ್ಮಲ್ಲಿ ಇಲ್ಲ ಎಂದು ಹೇಳಿ, ನಮ್ಮಲ್ಲಿಲ್ಲ ಎಂದು ಹೇಳಬೇಡಿ ಸರ್ಕಾರದಲ್ಲಿ ಇಲ್ಲ ಎಂದು ಹೇಳಲಿ

(ಗೊಂದಲ)

ಡಾ॥ ಶರಣ ಪ್ರಕಾಶ್ ಪಾಟೀಲ್ ಎಲ್ಲರಿಗೂ ಇಲ್ಲ ಎಂದು ಹೇಳುವುದು ಬೇಡ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಡಾ॥ ಪ್ರಕಾಶ್ ಅವರಿಗೆ ಬದ್ಧತೆಯಿದೆ, ಆದರೆ ಸೆಡಂನಲ್ಲಿ ಏನು ಮಾತನಾಡುತ್ತಾರೋ ಗೊತ್ತಿಲ್ಲ ಅದೇನೇ ಇರಲಿ, ಆದರೆ ನಾನು ಇಷ್ಟು ಮಾತ್ರ ಹೇಳಬಲ್ಲೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಭಾರತ ಸರ್ಕಾರದ ಪರವಾಗಿ ಪಾಕಿಸ್ತಾನಕ್ಕೆ ಹೋಗಿ, ಭಾರತ ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆ ಎಂದು ನೋಡಿ ಬಂದಿದ್ದಾರೆ ನೀವು ಸೇಡಂ ಹಾಗೂ ನಿಮ್ಮ ಪ್ರದೇಶವನ್ನು ಸೀಮಿತವಾಗಿ ಇಟ್ಟುಕೊಳ್ಳಬೇಡಿ

ಶ್ರೀ ಎಂ ಪಿ ಪ್ರಕಾಶ್ ಅವರಂತೆ ನಾವೆಲ್ಲ ಇಲ್ಲವಲ್ಲಾ ಎಂದು ನಾನು ಹೇಳುತ್ತಿದ್ದೇನೆ

ಶ್ರೀ ಬಿ ಸಿ ಪಾಟೀಲ್ ಆಶ್ರಯ ಸಮಿತಿಯನ್ನು ಹೇಗಾದರೂ ಪ್ರಾರಂಭ ಮಾಡಿ ಎಂದು ಕಾಂಗ್ರೆಸ್ ಸದಸ್ಯರು ಕೇಳುತ್ತಾರೆ ಅಲ್ಲಿ ಕುಳಿತುಕೊಂಡು ಅಪೋಸ್ ಮಾಡುತ್ತಾರೆ ವಿರೋಧ ಮಾಡಬೇಕೆಂದು ವಿರೋಧ ಮಾಡುತ್ತಾರೆ

ಶ್ರೀ ಎಂ ಪಿ ಪ್ರಕಾಶ್ ಬಹಳ ಕಡೆ ತೊಂದರೆ ಆಗುತ್ತಿದೆ ಎಲ್ಲಾ ಕಡೆ ಒಂದೇ ರೀತಿ ಇಲ್ಲದಿರುವುದರಿಂದ ಕಾಲ ಕಾಲಕ್ಕೆ ಈ ವಿಚಾರಗಳು ಬರುತ್ತಿವೆ ನಾನೀಗಾಗಲೇ ಹೇಳಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಇದು ಈಗ ಚರ್ಚೆ ಮಾಡಬೇಕೇ ಆಮೇಲೆ ಮಾಡಬೇಕೇ ಎಂದು ಎರಡೇ ಪ್ರಶ್ನೆ ಇರುವುದು ಅದಕ್ಕೆ ಸರ್ಕಾರದ ನಿಲುವು ಏನು ಎಂದು ಅಷ್ಟು ಹೇಳಿ ಈಗ ಮಾನ್ಯ ವಿರೋಧ ಪಕ್ಷದ ನಾಯಕರು

ಎಲ್ಲವನ್ನು ಬದಿಗೊತ್ತಿ, ಇದು ಬಹಳ ಪ್ರಾಮುಖ್ಯ ಚರ್ಚೆಯಾಗಬೇಕು ಎನ್ನತಕ್ಕದ್ದು ಅವರ ವಾದ ಚರ್ಚೆ ಆಗಲೇಬೇಕಾಗಿಲ್ಲ ಎನ್ನತಕ್ಕಂತಹದ್ದು, ತಕ್ಷಣವೇ ಆಗಬೇಕು ಎಂದು ನನ್ನ ವಾದವಲ್ಲ ಚರ್ಚೆ ಮಾಡಲಿ ಆಕಾಶ ಏನು ಬಿದ್ದು ಹೋಗುವುದಿಲ್ಲ ಇದೆಲ್ಲಾ ನಡೆದು ಆಮೇಲೆ ಚರ್ಚೆ ಮಾಡಿದರೆ ಆಕಾಶವೇನು ಬಿದ್ದು ಹೋಗುವುದಿಲ್ಲ ಆಮೇಲೆ ರಾಜ್ಯಪಾಲರು ಏನು ಬರೆದಿದ್ದಾರೆ? ಇದೆಲ್ಲದರ ಬಗ್ಗೆ ಚರ್ಚೆ ಆಗಬೇಕು ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ ಇದನ್ನು ಸುಲಭವಾಗಿ ಬಿಡತಕ್ಕಂತಹ ಪತ್ರವಲ್ಲ ಇಲ್ಲಿ ಅನೇಕ ವಿಚಾರಗಳು ಚರ್ಚೆಯ ವಸ್ತು ಆಗಿದೆ ಅದರ ಬಗ್ಗೆ ಸ್ಪಷ್ಟವಾಗಿದೆ ಆದರೆ, ವಿಕೇಂದ್ರೀಕರಣದ ಬಗ್ಗೆ ಈಗ ಸಮಗ್ರವಾಗಿ ಚರ್ಚೆಯಾಗುವುದು ಏನು ಬೇಕಾಗಿಲ್ಲ ನಾವು ವಿಕೇಂದ್ರೀಕರಣ ಬೇಕೆ, ಬೇಡವೇ ಎಂಬ ವಿಚಾರಕ್ಕೆ ಹೋದರೆ ಅದು ಬೇರೆ ರೂಪ ತಾಳುತ್ತದೆ ಅದಕ್ಕಾಗಿ ನೀವು ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇದ್ದೀರೋ, ಆಗ ಚರ್ಚೆಗೆ ತೆಗೆದುಕೊಂಡು ಬನ್ನಿ ಎರಡನೆಯದು, ನೀವೇ ಹೇಳಿದ ರೀತಿ ನಿಮ್ಮ ಅಧ್ಯಕ್ಷರಿಗೆ ಬರದೇ ಯಾರದೋ ಕೈಯಿಂದ ಬಂತು ಅನ್ನುವ ಬಗ್ಗೆ ತಾವು ಬಹಳ ಬೆಳಕನ್ನು ಚೆಲ್ಲಿದ್ದೀರಿ ಇದರ ಜೊತೆಗೆ ಮಾನ್ಯ ರಾಜ್ಯಪಾಲರು ಬರೆದಿದ್ದಾರಲ್ಲ, ಅವರ ಬಗ್ಗೆ ನಮಗೆ ಬಹಳ ಗೌರವ ವಿಶ್ವಾಸ ಇದೆ ಆದರೂ ಅವರು ಪತ್ರ ಬರೆದಿರತಕ್ಕಂತಹ ಬೆಳವಣಿಗೆ ಇದೆಯಲ್ಲ ಅದರ ಬಗ್ಗೇನೂ ಚರ್ಚೆ ಮಾಡಲೇಬೇಕಾಗುತ್ತದೆ ಅವರು ಏನು ಆಕಾಶದಿಂದ ಇಳಿದಿಲ್ಲ ಚರ್ಚೆ ಮಾಡಬೇಕಾಗುತ್ತದೆ ಚರ್ಚೆ ಮಾಡಬೇಕಾದಂತಹ ವಿಚಾರಗಳು ಇಲ್ಲಿ ಅಮೂಲ್ಯವಾಗಿ ಅಡಕವಾಗಿವೆ ಎಲ್ಲಕ್ಕಿಂತ ಹೆಚ್ಚಾಗಿ ಈ ಸಭೆ ಸಾರ್ವಭೌಮತ್ವ ಇರತಕ್ಕಂತಹ ಸಭೆ ಅದರ ಬಗ್ಗೆ ಬೇರೆ ಮಾತಿಲ್ಲ ಆದುದರಿಂದ, ಸರ್ಕಾರ ಯಾವಾಗ ಚರ್ಚೆ ಮಾಡುತ್ತದೆ ಎಂದು ಹೇಳಲಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದರು ಇದು ಚರ್ಚೆ ಮಾಡದೇ ಹೋದರೆ ಆಕಾಶವೇನು ಬಿದ್ದು ಹೋಗುವುದಿಲ್ಲ ಎಂದು ಹೇಳಿದರು ಅದೇನು ಮಾತನಾಡಿದರೆ, ಆಕಾಶ ಬೀಳುತ್ತದೆ ಅದನ್ನು ಹೇಳಿದರೆ ಅದನ್ನು ಮಾತನಾಡೋಣ

ಶ್ರೀ ವಾಟಾಳ್ ನಾಗರಾಜ್ ನಾನು ಆ ಮಾತು ಹೇಳಿದರೆ ಆಕಾಶ ಬಿದ್ದು ಹೋಯಿತು ಎಂದು ಇಟ್ಟುಕೊಳ್ಳಿ ನಮ್ಮ ಗತಿಯೇನು? ಅದಕ್ಕೋಸ್ಕರ ನೀವು ನಾವೆಲ್ಲಾ ಇರಬೇಕಲ್ಲ ಅದಕ್ಕೋಸ್ಕರ ಆ ಮಾತು ಹೇಳುವುದಕ್ಕೆ ಹೋಗುವುದಿಲ್ಲ ಆ ಮಾತು ಹೇಳಿದರೆ ಆಕಾಶ ಬಿದ್ದು ಹೋಗುತ್ತದೆ ಅದಕ್ಕೋಸ್ಕರ ಮಾನ್ಯ ಧರ್ಮಸಿಂಗ್ ಅವರು ಮಾನ್ಯ ಖರ್ಗೆಯವರು, ಆ ಕಡೆ ಮಾನ್ಯ ಯಡಿಯೂರಪ್ಪನವರು ಹಾಗೂ ನಾವೆಲ್ಲ ಸದಸ್ಯರು ಬಹಳ ಸಂತೋಷವಾಗಿರುವುದರಿಂದ, ನಾನು ಆಕಾಶ ಬೀಳಬೇಡ ಎಂದು ಆ ಪದ ಹೇಳುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ . ನಾವೆಲ್ಲ ಇಲ್ಲೇ ಇರಬೇಕು ಎಂದು ಅಪೇಕ್ಷೆಪಟ್ಟಿದ್ದೇವೆ, ಅದರ ಪ್ರಕಾರ ನಾವು ಕೆಲಸ ಮಾಡಿಕೊಂಡು ಹೋಗುತ್ತೇವೆ ಆದರೆ, ನಿನ್ನೆ ತಾವೇ Evidence ಇದ್ದೀರಿ ನಿಮ್ಮ ಅಧ್ಯಕ್ಷತೆಯಲ್ಲಿ ಅವರು ಹಾಗೂ ಮಾನ್ಯ ರಮೇಶ್ ಕುಮಾರ್ ಅವರಿಬ್ಬರು ಘೋಷಣೆ ಮಾಡಿದ್ದೇನೆಂದರೆ, ಜೆ ಹೆಚ್ ಪಟೇಲ್ ಅವರು ಎಲ್ಲಿದ್ದಾರೆ, ನಾವು ಅಲ್ಲಿಗೆ ಹೋಗುತ್ತೇವೆ ಎಂದು ಹೇಳಿದ್ದಾರೆ ನಾವು ಹೇಳಿಲ್ಲ

ಶ್ರೀ ವಾಟಾಳ್ ನಾಗರಾಜ್ ನಾವು ಹೋಗುತ್ತೇವೆ ಎಂದಲ್ಲ, ನಿಮ್ಮನ್ನೆಲ್ಲಾ ಒಟ್ಟಿಗೆ ಕರೆದುಕೊಂಡು ಹೋದರೆ ಹೋಗೋಣ ಎಂದು

ಶ್ರೀ ಮಲ್ಲಿಕಾರ್ಜುನ ಖರ್ಗೆ ಪ್ರಾಮಾಣಿಕವಾಗಿ ಹೇಳಲಿ ಅವರಿಬ್ಬರೂ ಮೇಲೆ ಹೋಗಲಿಕ್ಕೆ ರೆಡಿ ಇದ್ದಾರೆ ನಮಗೆ ಯಾಕೆ ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅಂದರೆ ಖರ್ಗೆಯವರಿಗೆ, ವಾಟಾಳ್ ಹಾಗೂ ರಮೇಶ್ ಕುಮಾರ್ ಅವರ ಬಗ್ಗೆ ಎಷ್ಟು ಪ್ರೀತಿ ಇದೆ ಎಂದರೆ, ಆದಷ್ಟು ಬೇಗ ಅವರುಗಳನ್ನು ಜೆ ಹೆಚ್ ಪಟೇಲ್ ಹತ್ತಿರ ಕಳುಹಿಸಬೇಕೆಂದು ಇದೆ

ಶ್ರೀ ವಾಟಾಳ್ ನಾಗರಾಜ್ · ಮಾನ್ಯ ಪ್ರಕಾಶ್ ಅವರೇ ಮಾನ್ಯ ಖರ್ಗೆಯವರು ನನ್ನ ಬಗ್ಗೆ ಬಹಳ ವಿಶ್ವಾಸ, ಪ್ರೀತಿ, ಅಭಿಮಾನ ಇಟ್ಟುಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದೆ

ಶ್ರೀ ಜೆ ಸಿ ಮಾಧುಸ್ವಾಮಿ ಅದಕ್ಕೆ ಒಳ್ಳೆಯದನ್ನು ಬಯಸುತ್ತಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಇವರು ಮಾತು ಒಂದೇ ಅಲ್ಲ ನಮ್ಮನ್ನು ಕಳುಹಿಸುವುದಕ್ಕೆ ತಯಾರಾಗಿದ್ದಾರಲ್ಲ ? ಇದೇನಿದು ಈತರಹ ನಿಮ್ಮದು 65, 66ನೇ ಹುಟ್ಟುಹಬ್ಬ ನಿಮಗೆ ಶುಭವಾಗಲಿ, ನಾಳೆ ನಾಡಿದ್ದು ಬರುತ್ತಿದೆ ನೀವು 100 ವರ್ಷ ಬದುಕಿ, ಬಹಳ ಸಂತೋಷ, ಅದಕ್ಕೆ ನಾವೆಲ್ಲ ಇರಬೇಕಲ್ಲ ನಮ್ಮನ್ನು ಬದುಕುವುದಕ್ಕೆ ಬಿಡಿ ನೀವೇನು ಈ ತರಹ ಶುರು ಮಾಡಿದರೆ ನಮ್ಮ ಪರಿಸ್ಥಿತಿ ಏನು? ಆ ರೀತಿ ನಾವು ಹೋಗಲೇಬೇಕೆಂದು ತೀರ್ಮಾನ ಮಾಡಿಬಿಟ್ಟರೆ ನಮ್ಮ ಪರವಾಗಿ ಇಲ್ಲಿ ಸಂತಾಪ ನಡೆದೇ ಬಿಡಲಿ ನಾವು ಮಾತನಾಡಿಬಿಡ್ತೀವಿ ಒಟ್ಟಿಗೆ ನಡೆದು ಹೋಗಲಿ ಸುಮ್ಮನೆ ಆಮೇಲೆ ಏಕೆ ?

ಶ್ರೀ ಜೆ ಸಿ ಮಾಧುಸ್ವಾಮಿ ಆಮೇಲೆ ಏನೇನು ಮಾತನಾಡುತ್ತಾರೋ ?

ಶ್ರೀ ವಾಟಾಳ್ ನಾಗರಾಜ್ ಆಮೇಲೆ ಏನೇನು ಮಾತನಾಡುತ್ತಾರೋ ಗೊತ್ತಾಗೋದಿಲ್ಲ, ನಾವು ಇರುವಾಗಲೇ ಹೇಳಿಬಿಡಿ, ಹೇಳಿಬಿಟ್ರೆ ಆವಾಗ ತೀರ್ಮಾನ ಆಗಿಬಿಡಲಿ

ಅಧ್ಯಕ್ಷರು ಅದಕ್ಕೆ ಸಂತಾಪ ಹೇಗೆ ಆಗುತ್ತದೆ ? ನಿಮ್ಮ ಎದುರಿಗೆ ಹೇಳಿದರೆ ಸಂತಾಪ ಹೇಗೆ ಆಗುತ್ತದೆ ?

ಶ್ರೀ ವಾಟಾಳ್ ನಾಗರಾಜ್ ಒಂದೇ ಲೈನಿನಲ್ಲಿ ಹೇಳಿಬಿಡುತ್ತೀರಿ ನಾನು ಹೋದ ಮೇಲೆ ಏನೇನು ಹೇಳಬೇಕು ಅಂತ ಇದ್ದೀರಿ ಅದನ್ನು ಹೇಳಿಬಿಡಿ ಅದರಿಂದ ನಾನು ತೀರ್ಮಾನ ಮಾಡಿಬಿಡುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ Mr Prakash, there is a saying, if I am to get fame after my death I would rather wait for it ಅದಕ್ಕೆ ಅವರು ಕಾಯುತ್ತಿದ್ದಾರೆ

ಶ್ರೀ ಬಿ ಸಿ ಪಾಟೀಲ್ ಸಂತಾಪ ವಿಚಾರವನ್ನು ಈಗಲೇ ಮಾತನಾಡಿ ಎಂದು ಹೇಳುತ್ತಿದ್ದಾರೆ ಏಕೆಂದರೆ, ತೀರಿ ಹೋದವರ ಬಗ್ಗೆ ಮಾತನಾಡಿದಾಗ ಅವರ ಬಗ್ಗೆ ಏನು ಮಾತನಾಡಿದರು ಎಂದು ಗೊತ್ತಾಗುವುದಿಲ್ಲ ಅವರಿಗೆ ಏನೆಂದರೆ, ನಿಜವಾಗಲೂ ಏನೇನು ಮಾತನಾಡುತ್ತಾರೆ ಅದನ್ನು ಈಗಲೇ ಮಾತನಾಡಲಿ ಎಂದು ಅವರಿಗೆ ಆಸೆ

ಶ್ರೀ ವಾಟಾಳ್ ನಾಗರಾಜ್ ಅದಕ್ಕೋಸ್ಕರವೇ ತಾವು ಅವಕಾಶ ದಯಪಾಲಿಸುವುದಾದರೆ ನನ್ನದೇ ಸಂತಾಪ ಸೂಚಿಸುವುದು ಈಗಲೇ ಆಗಿಬಿಡಲಿ ನಾವು ನೋಡಿಬಿಡುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅಧ್ಯಕ್ಷರೆ ಇವರ ಮಾತು ಕೇಳಿ ನಾವು ಏನಾದರೂ ಸಂತಾಪ ಸೂಚನೆಯ ಬಗ್ಗೆ ಮಾತನಾಡಿದರೆ ಇವರ ಮನೆಯವರೆಲ್ಲ ಕೇಸ್ ಹಾಕಿ ನಮ್ಮನ್ನೆಲ್ಲ ಜೈಲಿಗೆ ಕಳುಹಿಸುತ್ತಾರೆ

ಶ್ರೀ ಎಂ ಪಿ ಪ್ರಕಾಶ್ ಅಧ್ಯಕ್ಷರೆ ಆ ಪಣಿಯರಲ್ಲಿ ಒಂದು ಕತೆ ಇದೆ ಭೂಮಿ ಮತ್ತು ಆಕಾಶ ಅಪ್ಪಚ್ಚಿಯಾದಾಗ ಒಬ್ಬ ಅಡುಗೋಲಜ್ಜಿ ಅದಕ್ಕೆ ಕೋಲು ಹಿಡಿದು ನಿಲ್ಲಿಸಿದ್ದಳಂತೆ ಆದ್ದರಿಂದ ನಿಮ್ಮ ಬಗ್ಗೆ ಸಂತಾಪ ಸೂಚನೆಯನ್ನು ತರುವುದಿಲ್ಲ ನಾವು ಕೋಲು ಹಿಡಿದು ನಿಲ್ಲಿಸಿ, ನೀವು ಇಲ್ಲೇ ಬದುಕಿ ಉಳಿಯುವಂತಹ ರೀತಿಯಲ್ಲಿ ಮಾಡುತ್ತೇವೆ

ಶ್ರೀ ವಾಟಾಳ್ ನಾಗರಾಜ್ ನಾನು 150 ವರ್ಷ ಬದುಕಬೇಕೆಂದು ಆಸೆಯಿದೆ ಇರುತ್ತೇನೆ ಬಿಡಿ

ಶ್ರೀ ಎಂ ಪಿ ಪ್ರಕಾಶ್ ಅಧ್ಯಕ್ಷರೆ, ಈಗಾಗಲೇ ಅವರು ಹೇಳಿದಂತೆ ಈ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದೇನೆ ಒಂದು ಸಂದೇಶ ಬಂದಿದೆ ಅವರು ಬಿಲ್ ಸಮೇತ ಅದನ್ನು ಕಳುಹಿಸಿ ಕೊಡಬೇಕಾಗಿತ್ತು ಬಿಲ್ ಅವರ ಹತ್ತಿರವೇ ಇದೆ ಬಿಲ್ಲನ್ನು ವಾಪಸ್ಸು ಕಳುಹಿಸಿಲ್ಲ ಸಂದೇಶವನ್ನು ಮಾತ್ರ ಕಳುಹಿಸಿಕೊಟ್ಟಿದ್ದಾರೆ ಇಂತಹ ಅನೇಕ ಸಂದರ್ಭಗಳಲ್ಲಿ ಅವರು ವಾಪಸ್ ಕಳುಹಿಸಿದ್ದಾರೆ ಉದಾಹರಣೆ ಅಂದರೆ, Regularisation of un-authorized constructions related bill ಏನು ಇದೆ

ಅದನ್ನು 2 ವರ್ಷಗಳ ನಂತರ ನಾವು ಕನ್ಸಿಡರೇಷನ್‌ಗೆ ತೆಗೆದುಕೊಂಡು ಬಂದಿದ್ದೇವೆ Governor ಅವರು Message ಅನ್ನು ಕಳುಹಿಸಿಕೊಟ್ಟಿದ್ದರು ಆದರೂ ಕೂಡ ನಾವು 2 ವರ್ಷಗಳ ನಂತರ ಅದನ್ನು ತೆಗೆದುಕೊಂಡು ಬಂದೆವು ಅದೇ ರೀತಿಯಾಗಿ Office of Profit Bill ವಿಚಾರವನ್ನು ಕೂಡ ಅವರಿಗೆ ಕಳುಹಿಸಿ ಎಷ್ಟೋ ವರ್ಷ ಆದ ಮೇಲೆ, ಅವರು ಅಲ್ಲಿಂದ ವಾಪಸ್ಸು ಕಳುಹಿಸಿದ ಮೇಲೆ ಎಷ್ಟೋ ದಿವಸಗಳಾದ ಮೇಲೆ ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದೇವೆ ಆದ್ದರಿಂದ ಇವತ್ತು ಅಂತಹ ತೀವ್ರತರವಾದಂತಹ ವಿಚಾರ ಇಲ್ಲ ನಿಯಮಾವಳಿ 60 ಇದಕ್ಕೆ ಅನ್ವಯವಾಗುವುದಿಲ್ಲ ಈಗ ಈ ವಿಚಾರದಲ್ಲಿ ಯಾವುದೇ ಸರ್ಕಾರಿ ನಿರ್ಧರಿತವಾದಂತಹ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾದ್ದಿಲ್ಲ ಸರ್ಕಾರ ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರು ಕಳುಹಿಸಿಕೊಟ್ಟಿರತಕ್ಕಂತಹ ಸಂದೇಶಕ್ಕೆ ಒಹಳ ಗೌರವವನ್ನು ನಾವು ಕೊಟ್ಟು, ಅದರ ಘನತೆಗೆ ಅನುಗುಣವಾದಂತಹ ರೀತಿಯಲ್ಲಿ ಅದರ ಬಗ್ಗೆ ಗಂಬೀರವಾದಂತಹ ಪರಿಗಣನೆಯನ್ನು ಮಾಡಿ, ಅದನ್ನು ಸಚಿವ ಸಂಪುಟ ಸಭೆಯಲ್ಲೂ ಕೂಡ ಚರ್ಚೆ ಮಾಡಿ, ಸೂಕ್ತ ಕಾಲಕ್ಕೆ ಅದಕ್ಕೆ ಸಂಬಂಧಪಟ್ಟ ರೀತಿಯ ಪ್ರತಿಕ್ರಿಯೆ ಮಾಡುತ್ತೇವೆ, ತಿದ್ದುಪಡಿಯನ್ನಾದರೂ ತರುತ್ತೇವೆ ಅಥವಾ ತಿದ್ದುಪಡಿಯನ್ನು ತರಲಾರದೇ ಇರುವ ರೂಪದಲ್ಲಿ ಆಗಬೇಕೆಂದಾದರೂ ಕೂಡ ಮಾನ್ಯ ರಾಜ್ಯಪಾಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ ಆ ಕಾರಣಕ್ಕಾಗಿ ಇವತ್ತು ಅದನ್ನು ಚರ್ಚೆಗೆ ತೆಗೆದುಕೊಳ್ಳತಕ್ಕ ಅಗತ್ಯ ಇಲ್ಲ ಈ ಸಂದರ್ಭದಲ್ಲಿ ಅದನ್ನು ತಾವು ತಳ್ಳಿ ಹಾಕಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು ಮಾನ್ಯ ವಿರೋಧ ಪಕ್ಷ ನಾಯಕರು ಮತ್ತು ಇತರ ಹಿರಿಯ ಸದಸ್ಯರುಗಳು ಇಲ್ಲಿ ವಾದ ಮಾಡಿದ್ದಾರೆ ಸರ್ಕಾರದ ಪರವಾಗಿ, ಕಾನೂನು ಸಚಿವರು ಹೇಳಿದ್ದಾರೆ ಎಲ್ಲವನ್ನು ಸಹ ನಾನು ಆಲಿಸಿದ್ದೇನೆ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕಾ ಏನು ಎನ್ನುವುದರ ನಾನು ನನ್ನ ರೂಲಿಂಗ್ ಅನ್ನು ಕಾದಿರಿಸಿದ್ದೇನೆ

ವಿಷಯ ಮೇಲ್ಮನೆಯ ಕೆಲವು ಸದಸ್ಯರು ಮಾನ್ಯ ರಾಜ್ಯಪಾಲರನ್ನು ಭೇಟಿ ಮಾಡಿ ಪಂಚಾಯತ್ ರಾಜ್ ಕಾಯಿದೆಯನ್ನು ತಡೆಹಿಡಿಯಲು ಕೋರುವ ಮೂಲಕ ವಿಧಾನ ಸಭೆಯ ಸಾರ್ವಭೌಮತ್ವವನ್ನು ಪ್ರಶ್ನಿಸಿರುವ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅದ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದೇನೆ ದಯವಿಟ್ಟು ಪ್ರಿಲಿಮಿನರಿ ಸಬ್‌ಮಿಷನ್‌ಗೆ ನನಗೆ ಅವಕಾಶ ಮಾಡಿಕೊಡಬೇಕು ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಾವು ಇಲ್ಲಿ ಸದನದ ಒಂದು ಪಂಚಾಯಿತ್ ರಾಜ್ ಆಕ್ಟ್ ಬಿಲ್ ಅನ್ನು ಪಾಸ್ ಮಾಡಿದೆ ಆ ಬಿಲ್‌ನ ಬೋನಫೈಡ್ಸ್ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ ಈ ಸದನದ ಅನುಮೋದಿಸಿ ಅದಕ್ಕೆ ಮೇಲ್ಮನೆಯಲ್ಲಿಯೂ ಒಪ್ಪಿಗೆಯಾಗಿ ತದನಂತರ ರಾಜ್ಯಪಾಲರ ಒಪ್ಪಿಗೆಗಾಗಿ

ಕಳುಹಿಸಿದಂತಹ ಬಿಲ್ ಅನ್ನು ತಡೆಹಿಡಿಯಬೇಕು, ನೀವು ಅದಕ್ಕೆ ಒಪ್ಪಿಗೆ ಕೊಡಬಾರದೆಂದು ಮೇಲ್ಮನೆಯ ಕೆಲವು ಸದಸ್ಯರು ರಾಜ್ಯಪಾಲರ ಬಳಿಗೆ ಹೋಗಿ ರಾಜ್ಯಪಾಲರಿಗೆ ಮನವಿಯನ್ನು ಕೊಟ್ಟಿದ್ದಾರೆ ಈ ಮನವಿ ಕೊಟ್ಟಿರತಕ್ಕಂಥದ್ದು ಈ ಮನೆಯ, ಅಂದರೆ ವಿಧಾನ ಸಭೆಯ ಹಕ್ಕೇನಿದೆ ಆ ಹಕ್ಕನ್ನು ಪ್ರಶ್ನೆ ಮಾಡಿದಂತೆ ಆಗಿದೆ ಮತ್ತು ಈ ಸದನದ ಅಧಿಕಾರವನ್ನು ಮೊಟಕು ಮಾಡತಕ್ಕಂತ ಪ್ರಯತ್ನ ಮತ್ತು ಈ ಸದನದ ಸಾರ್ವಭೌಮತ್ವವನ್ನು ಪ್ರಶ್ನೆ ಮಾಡತಕ್ಕಂತ ಪ್ರಯತ್ನ, ಈ ಸದನದ ಘನತೆ ಗೌರವವನ್ನು ತಡೆಯತಕ್ಕಂತ ಪ್ರಯತ್ನವನ್ನು ವಿಧಾನ ಪರಿಷತ್ತಿನ ಕೆಲವು ಸದಸ್ಯರು ಮಾಡಿದ್ದಾರೆ ಇನ್ನೊಂದು ಇಲ್ಲಿ ಗಮನಿಸಬೇಕಿರುವ ವಿಷಯವೆಂದರೆ ಆ ದಿವಸ ಆ ಸದನದಲ್ಲಿಯೂ ಕೂಡ ಈ ಬಿಲ್ ಪಾಸಾಗಿದೆ ಎರಡೂ ಸದನದಲ್ಲಿ ಪಾಸಾಗಿರತಕ್ಕಂಥ ಬಿಲ್ ಅನ್ನು ತಡೆಹಿಡಿಯಬೇಕೆಂದು ಹೇಳಿ ಒಂದು ಸದನದ ಕೆಲವು ಸದಸ್ಯರು ರಾಜ್ಯಪಾಲರ ಬಳಿ ಹೋಗಿ ಅವರಿಗೆ ಏನು ಮನವಿಯನ್ನು ಕೊಟ್ಟಿದ್ದಾರೆ ಅದು ನಮ್ಮ ಸದನದ ಸಾರ್ವಭೌಮತ್ವವನ್ನು ಪ್ರಶ್ನೆ ಮಾಡಿರುವಂತೆ ಕಾರಣಕ್ಕೋಸ್ಕರ ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು ಈ ವಿಷಯದ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಇವೊತ್ತು ಆ ಸದನಕ್ಕೆ ಇರತಕ್ಕಂಥ ಅಧಿಕಾರ ವ್ಯಾಪ್ತಿಯನ್ನು ಮೀರಿ ಕೆಲವು ಸದಸ್ಯರು ಹೋಗಿದ್ದಾರೆ ಹೀಗಾಗಿ ಇದು ಬಹಳ ಗಂಭೀರವಾದಂಥ ವಿಷಯವಾಗಿದೆ ಈ ವಿಧಾನಸಭೆಯ ಸಾರ್ವಭೌಮತ್ವವನ್ನು ಪ್ರಶ್ನೆ ಮಾಡತಕ್ಕಂಥ ಮತ್ತು ಸಾರ್ವಭೌಮತ್ವಕ್ಕೆ ಕಳಂಕ ತರತಕ್ಕಂಥ ಪ್ರಶ್ನೆ ಇಲ್ಲಿ ಉದ್ಭವವಾಗಿದೆ ಇದು ಬಹಳ ಗಂಭೀರವಾದಂತಹ ಪ್ರಶ್ನೆ ಕೂಡ ಆಗಿದೆ ಸಂವಿಧಾನಾತ್ಮಕವಾಗಿ ಕೂಡ ಹಲವಾರು ಸಮಸ್ಯೆಗಳು ಇನ್ನು ಮುಂದೆ ಬರತಕ್ಕಂಥ ದಿವಸಗಳಲ್ಲಿ ಬರುತ್ತದೆ ಆ ಬಿಲ್ ಸರಿ ಇದೆಯೋ ಅಥವಾ ತಪ್ಪಾಗಿದೆಯೋ ಎನ್ನತಕ್ಕಂಥ ಚರ್ಚೆಯನ್ನು ನಾನು ಮಾಡುವುದಕ್ಕೆ ಈಗ ಹೋಗುತ್ತಿಲ್ಲ, ಆ ಬಿಲ್ ಪಾಸ್ ಆಗುವಾಗ ನನ್ನದೇ ಆದಂಥ ಕೆಲವು ಅಭಿಪ್ರಾಯಗಳಿತ್ತು ಮತ್ತು ನನ್ನ ವಿರೋಧವೂ ಕೂಡ ಅಂದು ಇತ್ತು ಆ ಬಿಲ್ ಪಾಸ್ ಆಗಬಾರದು ಎಂದು ನನ್ನ ಅಭಿಪ್ರಾಯವೂ ಕೂಡ ಆಗಿತ್ತು ಆದರೆ ಒಂದು ಸಲ ಈ ಸದನದ ಬಿಲ್ ಪಾಸ್ ಮಾಡಿದ ಮೇಲೆ ಅದು ಈ ಸದನಕ್ಕೆ ಸಂಬಂಧಪಟ್ಟದ್ದಾಗುತ್ತದೆ ಮತ್ತು ಈ ಸದನದ ಆ ಬಿಲ್‌ಗೆ ತನ್ನ ಒಪ್ಪಿಗೆಯನ್ನು ಕೊಟ್ಟಂತಾಗುತ್ತದೆ ಅದು ಇಡೀ ಸದನಕ್ಕೆ ಸಂಬಂಧಪಟ್ಟಂತ ಬಿಲ್ ಸದನ ಒಪ್ಪಿದಂತ ಬಿಲ್ ಇದನ್ನು ತಡೆಹಿಡಿಯಬೇಕೆಂದು ವಿಧಾನ ಪರಿಷತ್ತಿನ ಕೆಲವು ಸದಸ್ಯರು ರಾಜ್ಯಪಾಲರ ಬಳಿಗೆ ಹೋಗಿ ಹೇಳಿರತಕ್ಕಂಥದ್ದೇನಿದೆ ಅದು ಈ ಸದನದ ಅಸ್ತಿತ್ವವನ್ನು ಅಲ್ಲಗೆಳೆದಿರತಕ್ಕಂಥ ವಿಧಾನವಾಗಿದೆ ಆದುದರಿಂದ ಇದನ್ನು ಗಂಭೀರವಾಗಿ ಪರಿಗಣನೆ ಮಾಡಬೇಕು ಈ ಸಭೆಯಲ್ಲಿ ವ್ಯಾಪಕವಾಗಿ ಚರ್ಚೆಯಾಗಬೇಕಾಗುತ್ತದೆ ಚರ್ಚೆಯಾಗಿ ಆ ಕ್ರಮವನ್ನು ಕಾನೂನುಬದ್ಧವಾಗಿ ಯಾವ ರೀತಿಯಲ್ಲಿ ಸರಿಪಡಿಸಬೇಕಾಗುತ್ತದೆಯೋ ಅದನ್ನು

ಮಾಡಬೇಕೆಂದು ಹೇಳುವುದಕ್ಕಾಗಿಯೇ ನಾನು ಈ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಏನು ನಿಲುವಳಿ ಸೂಚನೆಯನ್ನು ತಂದಿದ್ದಾರೆ ಅದಕ್ಕೆ ನಮ್ಮೆಲ್ಲರ ಸಹಮತವಿದೆ ಇವೊತ್ತು ಬಹಳ ವಿಶೇಷವಾದಂಥ ಪರಿಸ್ಥಿತಿ ಉದ್ಭವವಾಗಿದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸನ ಸಭೆ ಆರಂಭವಾಗಿನಿಂದ ನಾವು ನೋಡಿದಾಗ ಇಂಥ ಪರಿಸ್ಥಿತಿ ಯಾವತ್ತೂ ಉದ್ಭವವಾಗಿರಲಿಲ್ಲ ವಿಧಾನ ಪರಿಷತ್ತಿನ ಕೆಲವು ಸದಸ್ಯರು ನೇರವಾಗಿ ರಾಜ್ಯಪಾಲರ ಬಳಿಗೆ ಹೋಗಿ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿಯೂ ಪಾಸ್ ಆಗಿರುವಂತೆ ಬಿಲ್ ಅನ್ನು ತಡೆಹಿಡಿಯಬೇಕೆನ್ನುವ ನಿಟ್ಟಿನಲ್ಲಿ ಮಾತನಾಡಿರತಕ್ಕಂಥದ್ದು ಒಂದು ವಿಶೇಷವಾದಂಥ ಪರಿಸ್ಥಿತಿಯಾಗಿದೆ ಆದುದರಿಂದ ಈ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ, ನಾವೇನು ಆ ಮಸೂದೆ ಯಾವ ರೀತಿ ಇರಬೇಕು, ಇರಬಾರದು ಎಂದು ಈಗ ಹೇಳತಕ್ಕಂಥದ್ದಕ್ಕೆ ಹೋಗುತ್ತಿಲ್ಲ ವಿಕೇಂದ್ರಿಕರಣಕ್ಕೆ ನಾವು ಯಾವಾಗಲೂ ವಿರೋಧ ಮಾಡಿದವರೇ ಅಲ್ಲ ಆದರೆ ವಿಕೇಂದ್ರೀಕರಣದ ಬಹಳ ಅತ್ಯಂತ ಪರಮ ಪವಿತ್ರರು ಎನ್ನುವ ರೀತಿಯಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ ಈ ಸದನಕ್ಕೆ ಏನು ಹಕ್ಕಿದೆ ಅದರ ಚ್ಯುತಿಯನ್ನು ಅವರು ಮಾಡಿರುವುದು ಬಹಳ ನೋವಿನ ಪ್ರಸಂಗವಾಗಿದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನಕ್ಕೆ ಇರತಕ್ಕಂಥ ಶಕ್ತಿ, ಗಾಂಭೀರ್ಯ, ಸಾರ್ವಭೌಮತ್ವವುಳ್ಳದ್ದು ಮತ್ತೊಂದು ಇರುವುದಕ್ಕೆ ಸಾಧ್ಯವಿಲ್ಲ ಆದುದರಿಂದ ಈ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ತಾವು ಯಾವ ರೂಪದಲ್ಲಿ ತೆಗೆದುಕೊಳ್ಳುತ್ತೀರೋ ದಯವಿಟ್ಟು ಸದನಕ್ಕೆ ತಿಳಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ

ಶ್ರೀ ಬಿ ಆರ್ ಪಾಟೀಲ್ ಸಾರ್, ನಾನು ಈ ತರಹ ಒಂದಕ್ಕೊಂದು ಸಂಘರ್ಷದ ಮಾತುಗಳು ಈ ಸದನದಲ್ಲಿ ಬರುತ್ತಿರುವುದನ್ನು ಬೆಳಗಿನಿಂದ ನೋಡುತ್ತಿದ್ದೇನೆ ಇವೊತ್ತು ಕೌನ್ಸಿಲ್‌ನವರು ಮಾಡಿದ್ದು ಸರಿಯಿಲ್ಲ, ನಾವು ಮಾಡಿದ್ದು ಅವರಿಗೆ ಸರಿಯಿಲ್ಲ ಪಂಚಾಯತ್ ರಾಜ್ ಬಗ್ಗೆ ಅವರು ಮಾಡುವುದು ಇವರಿಗೆ ಸರಿಯಿಲ್ಲ, ಹೀಗೆ ಈ ಚರ್ಚೆ ಎಲ್ಲಿಗೆ ಹೋಗುತ್ತಿದೆ, ಯಾವ ದಿಕ್ಕಿಗೆ ಹೋಗುತ್ತಿದೆಯೆಂದರೆ ಇವೊತ್ತು ಇವೆಲ್ಲವೂ ಕೂಡ ಗೌರವಯುತವಾದಂಥ ಸಂಸ್ಥೆಗಳೇ ಆಗಿವೆ ಹೀಗಿರುವಾಗ ಒಬ್ಬರು ರಾಜ್ಯಪಾಲರಿಗೆ ಕಳುಹಿಸಿದ್ದು ಸರಿಯಿಲ್ಲ ಅಥವಾ ಸರಿ ಇದೆ ಎಂಬ ಬಗ್ಗೆ ತಾವು ಚರ್ಚೆಗೆ ಅವಕಾಶ ಕೊಡದೇ ಒಂದು ಪಾಸಿಟಿವ್ ಆಗಿ ಇದನ್ನು ತೆಗೆದುಕೊಳ್ಳಬೇಕು ಈ ತರಹ ಕೌನ್ಸಿಲ್‌ನವರು ಮಾಡಿದ್ದು ಸರಿಯಿಲ್ಲ ಎಂದು ನಾವು ಹೇಳಿದರೆ, ನಾಳೆ ಅವರು ನಾವು ಮಾಡಿದ್ದು ಸರಿ ಇಲ್ಲವೆಂದು ಅವರು ಹೇಳಿಕೊಳ್ಳುತ್ತಾ ಹೋದರೆ ಅದು ಸರಿ ಇರುವುದಿಲ್ಲವಾದ ಕಾರಣ ಮಾನ್ಯ ಅಧ್ಯಕ್ಷರೆ ದಯಮಾಡಿ ಇಂಥ ವಿಷಯಗಳ ಮೇಲೆ ಚರ್ಚೆಗೆ ಅವಕಾಶ ಕೊಡಬಾರದು

ಅಧ್ಯಕ್ಷರು ಬಿ ಆರ್ ಪಾಟೀಲರೆ, ಅದು ಕೌನ್ಸಿಲ್ ಮಾಡಿದ್ದಲ್ಲ, ಕೌನ್ಸಿಲ್‌ನ ಕೆಲವು ಮೆಂಬರ್ಸ್‌ಗಳು ರಾಜ್ಯಪಾಲರ ಬಳಿಗೆ ಹೋಗಿ ಮನವಿ ಮಾಡಿರುವುದು

ಶ್ರೀ ಬಿ ಆರ್ ಪಾಟೀಲ್ ಪ್ರಜಾಪ್ರಭುತ್ವದಲ್ಲಿ ಅವರಿಗೆ ಹಕ್ಕಿದೆ ಅನೇಕ ಸಂದರ್ಭದಲ್ಲಿ ರಾಜಭವನಕ್ಕೆ ಹೋಗಿ ಸಂಬಂಧಪಟ್ಟಂಥವರು ಹೋಗಿ ಮನವಿ ಮಾಡಿಕೊಂಡಿರುವುದು ನಡೆದಿದೆ ಅವರು ಸಂವಿಧಾನದ ಮುಖ್ಯಸ್ಥರು ರಾಜ್ಯಪಾಲರು ತಮ್ಮ ವಿವೇಚನೆಯನ್ನು ಬಳಸಿ ತಮ್ಮ ಅಭಿಪ್ರಾಯವನ್ನು ಅವರು ತಿಳಿಸುತ್ತಾರೆ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಕೂಡ ಅಧಿಕಾರವಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅಧಿಕಾರವಿದೆ ಆದರೆ ಯಾರು ಯಾರಿಗೆ ಎಷ್ಟೆಷ್ಟು ಅಧಿಕಾರವಿದೆ ಎಂಬುದನ್ನೂ ಕೂಡ ಸಂವಿಧಾನದಲ್ಲಿ ಹೇಳಲಾಗಿದೆ ಈಗ ನಿಲುವಳಿ ಸೂಚನೆ ಕೊಟ್ಟು ಚರ್ಚೆಗೆ ಅನುಮತಿಯನ್ನು ಕೇಳುತ್ತಿದ್ದೇವೆ

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಇದು ಆರೋಗ್ಯಕರವಾದ ಲಕ್ಷಣವಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ನಿಲುವಳಿ ಸೂಚನೆ ಕಳುಹಿಸಿರುವುದಕ್ಕೆ ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ, ಬಿ ಆರ್ ಪಾಟೀಲರೆ ನೀವೂ ಕೂಡ ಮಾತನಾಡಬಹುದು

ಶ್ರೀ ಬಿ ಆರ್ ಪಾಟೀಲ್ ನೀವು ಮೂರು ಜನ ಮುಂದುಗಡೆ ಇದ್ದವರು ಏನು ಬೇಕಾದರೂ ಮಾತನಾಡಬಹುದು

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ತಂದಿರತಕ್ಕಂಥ ನಿಲುವಳಿ ಸೂಚನೆ

ಶ್ರೀ ಜೆ ಸಿ ಮಾಧುಸ್ವಾಮಿ ಪ್ರಕಾಶ್‌ರವರೆ, ಒಂದ್ನಿಮಿಷ ಮಾನ್ಯ ಬಿ ಆರ್ ಪಾಟೀಲ್‌ರವರೆ, ನಾನು ನಿಮ್ಮಿಂದ ಇಂಥ ಮಾತನ್ನು ನಿರೀಕ್ಷಣೆ ಮಾಡಿರಲಿಲ್ಲ ನೀವು ಮೂರು ಜನ ಏನು ಬೇಕಾದರೂ ಮಾತನಾಡಬಹುದೇ ಎಂದು ಹೇಳಿದ್ದೀರಿ ನಾನು ನಿಮ್ಮಂಥವರ ಬಾಯಿಂದ ಇಂಥ ಮಾತು ನಿರೀಕ್ಷೆ ಮಾಡಿರಲಿಲ್ಲ

ಶ್ರೀ ಬಿ ಆರ್ ಪಾಟೀಲ್ ಏನು ಈ ಸದನ ನಿಮ್ಮ ನಾಲ್ಕು ಜನರ ಆಸ್ತಿಯೇ? ನಮ್ಮನ್ನಾರನ್ನೂ ಜನರು ಆರಿಸಿ ಕಳುಹಿಸಿಲ್ಲವೆ ಮಾನ್ಯ ಅಧ್ಯಕ್ಷರೆ, ಯಾವಾಗಲೂ ಬರೀ ನೀವು ನಾಲ್ಕು ಜನ ಮುಂದೆ ಇರುವವರನ್ನು ನೋಡುತ್ತೀರೇ ಹೊರತು ಈ ಕಡೆ ಇರುವವರನ್ನು ನೋಡುವುದೇ ಇಲ್ಲ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಶ್ರೀರಾಮರೆಡ್ಡಿಯವರು ನೋಟಿಸ್ ಕೊಟ್ಟಿದ್ದಾರೆ ಮಾನ್ಯ ಅಧ್ಯಕ್ಷರೆ ಅನುಮತಿ ಪಡೆದು ಮಾತನಾಡುತ್ತಿದ್ದೇನೆ ನೀವೂ ನೋಡಿಸ್ ಕೊಡಿ ಶ್ರೀರಾಮರೆಡ್ಡಿಯವರು ನಿಲುವಳಿ ಸೂಚನೆ ನೋಟಿಸ್ ಕೊಡುವುದೇ ತಪ್ಪೆ ?

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ · ನಾನು ಮಾನ್ಯ ಅಧ್ಯಕ್ಷರಿಗೆ ನಿಲುವಳಿ ಸೂಚನೆ ನೋಟಿಸ್ ಕೊಟ್ಟಿದ್ದು ಅವರ ಅನುಮತಿ ಪಡೆದು ಮಾತನಾಡುತ್ತಿದ್ದೇನೆ ನೀವೂ ಕೂಡ ಅಡ್ಜರ್ನ್‌ಮೆಂಟ್ ನೋಟೀಸ್ ಕೊಡಿ

ಶ್ರೀ ಬಿ ಆರ್ ಪಾಟೀಲ್ · ನಿಮಗೆ ಯಾವ ಸಂದರ್ಭ ಏನೂ ಎಂಬುದೇ ಇಲ್ಲ ಯಾವ ಸಂದರ್ಭದಲ್ಲಾದರೂ ಎದ್ದು ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಅವಕಾಶ ತೆಗೆದುಕೊಳ್ಳುತ್ತೀರಿ

(ಗೊಂದಲ)

ಅಧ್ಯಕ್ಷರು ಆಯಿತು ಈಗ ಎಲ್ಲರೂ ಕುಳಿತುಕೊಳ್ಳಿ ಪರಸ್ಪರ ನೀವುಗಳೇ ಏಕೆ ಕೆಸರೆರಚಿಕೊಳ್ಳುವ ರೀತಿ ಮಾಡಿಕೊಳ್ಳುತ್ತೀರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಪ್ರತಿಯೊಬ್ಬ ಸದಸ್ಯರಿಗೂ ಸದನದಲ್ಲಿ ಮಾತನಾಡುವುದಕ್ಕೆ ಹಕ್ಕಿದೆ ಅವರೂ ಕೂಡ ನೋಟಿಸ್ ಕೊಟ್ಟು ಮಾತನಾಡಲಿ ನಾವೇನೂ ಬೇಡವೆಂದು ಹೇಳುವುದಿಲ್ಲ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ ಅಧ್ಯಕ್ಷರು ಅದನ್ನು ಒಪ್ಪಿದರೆ ಒಪ್ಪಬಹುದು ಬಿಟ್ಟರೆ ಬಿಡಬಹುದು

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಶ್ರೀರಾಮರೆಡ್ಡಿಯವರೆ, ಬಿ ಆರ್ ಪಾಟೀಲರು ಕೂಡ ಸೀನಿಯರ್ ಲೆಜಿಸ್ಲೇಟರ್ ಆಗಿದ್ದಾರೆ ಅವರೇನು ಹೇಳಿದ್ದಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸೀನಿಯರ್ ಲೆಜಿಸ್ಲೇಟರ್ ಆದ ತಕ್ಷಣ ಆ ರೀತಿ ಮಾತನಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಅಧ್ಯಕ್ಷರು ಇಲ್ಲಿ ನೋಡಿ ಧರ್ಮಸಿಂಗ್‌ರವರೆ, ಈ ರೀತಿ ಎಲ್ಲರೂ ಎದ್ದುನಿಂತುಕೊಂಡು ನನ್ನ ಪರ್ಮಿಶನ್ ಕೇಳದೆ ಮಾತನಾಡುವುದರಿಂದಲೇ ಇದು ಉದ್ಭವವಾಗಿರುವುದು ನೀವೂ ಅಷ್ಟೇ ವಿರೋಧ ಪಕ್ಷದ ನಾಯಕರಾಗಿ ನನಗೆ ಹೇಳಲಿಲ್ಲ, ಯಾವ ನೋಟಿಸ್‌ನ್ನೂ ಕೊಡದೇ ಈ ರೀತಿ ಎದ್ದು ನಿಂತು ಮಾತನಾಡುವುದು ಸರಿಯಲ್ಲ ನಾನು ಇನ್ನು ಮುಂದೆ ಈ ರೀತಿಯದ್ದನ್ನು ಸಹಿಸಿಕೊಳ್ಳುವುದಿಲ್ಲ

ಶ್ರೀ ಎನ್ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) ಯಾವ ನೋಟಿಸ್?

ಅಧ್ಯಕ್ಷರು ನೀವೇನು ನೋಟಿಸ್ ಕೊಟ್ಟಿದ್ದೀರ ? ಯಾವುದೇ ನಿಯಮದಡಿ ಮಾತನಾಡುತ್ತೇನೆಂದು ಹೇಳಿದ್ದೀರ ?

ಶ್ರೀ ಎನ್ ಧರ್ಮಸಿಂಗ್ I have every right as a Leader of Opposition ವಿರೋಧ ಪಕ್ಷದ ನಾಯಕನಾಗಿ ಮಾತನಾಡುವುದಕ್ಕೆ

ಅಧ್ಯಕ್ಷರು ವಿರೋಧ ಪಕ್ಷದ ನಾಯಕರಾದರೆ ಹೇಗೆ ಬೇಕಾದರೂ ನಿಯಮವಿಲ್ಲದೇ ಮಾತನಾಡಬಹುದೆ ? ಯಾವಾಗ ಬೇಕಾದರೂ ಎದ್ದುನಿಂತು ಮಾತನಾಡಬಹುದೆ ? ನೋಡಿ ಎಲ್ಲರಿಗೂ ಹೇಳುತ್ತಿದ್ದೇನೆ, ನನಗೆ ನೋಟಿಸ್ ಕೊಟ್ಟು ನನ್ನ ಪರ್ಮಿಶನ್ ತೆಗೆದು ಕೊಂಡು ಮಾತನಾಡಬೇಕು ಅದನ್ನು ಬಿಟ್ಟು ಈ ರೀತಿ ನೀವುಗಳೇ ಪರಸ್ಪರ ಕೆಸರೆರಚಿಕೊಳ್ಳುವ ರೀತಿ ಮಾತನಾಡಿದರೆ ನಾನು ಹೇಗೆ ಸದನವನ್ನು ನಿಯಂತ್ರಣಕ್ಕೆ ತರುವುದಕ್ಕಾಗುತ್ತದೆ

ಶ್ರೀ ಎನ್ ಧರ್ಮಸಿಂಗ್ ನಾನು ನಿಮ್ಮ ಸಹಕಾರಕ್ಕೆ ಬರುತ್ತಿದ್ದೇನೆ ನಿಮ್ಮ ಬೆಂಬಲಕ್ಕಾಗಿ ಬರುತ್ತಿದ್ದೇನೆ

ಅಧ್ಯಕ್ಷರು . ಇಲ್ಲೇನಾಗಿದೆ ಯಾರೂ ನೋಟಿಸ್ ಕೊಡದೇ ಎಲ್ಲರೂ ತಮಗೆ ಇಷ್ಟ ಬಂದ ಹಾಗೆ ಮಾತನಾಡುತ್ತಾರೆ ಏನು ಮಾಡುವುದು ? ಹೇಗೆ ರೆಗ್ಯುಲೇಟ್ ಮಾಡುವುದು ? ನಾನು ಈ ಹಿಂದೆಯೇ ಹೇಳಿದ್ದೇನೆ ಯಾರೇ ಮಾತನಾಡಬೇಕಾದರೂ ನನ್ನ ಪರ್ಮಿಶನ್ ತೆಗೆದುಕೊಂಡು ಮಾತನಾಡಿ ಎಂದಿದ್ದೇನೆ ಆದರೆ ಆ ರೀತಿ ಮಾಡುವುದೇ ಇಲ್ಲ ಪಟಪಟನೆ ಎದ್ದು ನಿಂತುಕೊಂಡು ತಮಗೆ ಇಷ್ಟ ಬಂದ ಹಾಗೆ ಮಾತನಾಡುತ್ತಿರುತ್ತೀರಿ ಗೊಂದಲವಾಗುತ್ತದೆ ಅದಕ್ಕೆ ಯಾರು ಜವಾಬ್ದಾರರು ?

ಶ್ರೀ ಎನ್ ಧರ್ಮಸಿಂಗ್ ಪಾರ್ಲಿಮೆಂಟಿನಲ್ಲಿ ಯಾವ ರೀತಿ ಕಾರ್ಯಕಲಾಪ ನಡೆಯುತ್ತದೆ ಗೊತ್ತೆ ?

ಅಧ್ಯಕ್ಷರು ನಾನೂ ಕೂಡ ಒಂದೂವರೆ ವರ್ಷಗಳ ಕಾಲ ಪಾರ್ಲಿಮೆಂಟ್ ಸದಸ್ಯನಾಗಿ ಬಂದಿದ್ದೇನೆ ಅಲ್ಲಿ ನಡೆಯುವ ರೀತಿಗೂ ಇಲ್ಲಿ ನಡೆಯುವ ರೀತಿಗೂ ಬಹಳ ವ್ಯತ್ಯಾಸಗಳಿವೆ ದಯಮಾಡಿ ತಾವು ಕುಳಿತುಕೊಳ್ಳಿ

ಶ್ರೀ ಎನ್ ಧರ್ಮಸಿಂಗ್ ನಾವೇ ನಿಮಗೆ ರಕ್ಷಣೆಯನ್ನು ಕೊಡುತ್ತಿದ್ದೇವೆ ನೀವೇ ನಮ್ಮ ರಕ್ಷಣೆಗೆ ಬರುತ್ತಿಲ್ಲ

ಅಧ್ಯಕ್ಷರು ರಕ್ಷಣೆ ಅಲ್ಲ, ನೀವು ಏನು ಬೇಕಾದರೂ ಮಾತನಾಡಬಹುದೆ ?

ಶ್ರೀ ಎನ್ ಧರ್ಮಸಿಂಗ್ ಯಾರು ಮಾತನಾಡಿದ್ದಾರೆ ? ಯಾರೂ ಮಾತನಾಡಿಲ್ಲ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ತಾವು ಹೇಳಿದಂತೆ ಇದನ್ನು ಇಲ್ಲಿಗೆ ಬಿಡುವುದು ಸೂಕ್ತವೆಂದು ನಾನು ಭಾವಿಸಿಕೊಂಡು, ಇಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ನಿಲುವಳಿ ಸೂಚನೆಯನ್ನು ನಿಯಮ 60ರ ಕೆಳಗೆ ಕಳುಹಿಸಿಕೊಟ್ಟಿದ್ದಾರೆ ಅದರಲ್ಲಿ ಅವರು ಎತ್ತಿರತಕ್ಕಂಥ ಅಂಶ ಈ ಮನವಿಯನ್ನು

ಕೊಟ್ಟು ಮಸೂದೆಗೆ ಒಪ್ಪಿಗೆಯನ್ನು ಕೊಡಬಾರದೆಂದು ಹೇಳಿರುವುದು ವಿಧಾನಸಭೆಯ ಹಕ್ಕುಚ್ಯುತಿಯಾಗುವುದರ ಜೊತೆಗೆ ಅದರ ಅಧಿಕಾರ ವ್ಯಾಪ್ತಿಯನ್ನೇ ಪ್ರಶ್ನಿಸಿದಂತಾಗಿದೆ ಇವು ಬಹಳ ಗಂಭೀರವಾದ ಸಂವಿಧಾತ್ಮಕವಾದ ವಿಷಯವಾಗಿರುವುದರಿಂದ ಇದನ್ನು ತುರ್ತಾಗಿ ಚರ್ಚಿಸಬೇಕೆಂದು ಹೇಳಿ ಅವರು ತಮ್ಮ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಆದರೆ, It has to be dismissed in limine It has to be rejected ಏಕೆಂದರೆ ನಿಯಮ 62 (iv) ರ ಕೆಳಗೆ ಸಾರ್ವಜನಿಕ ಮಹತ್ವವುಳ್ಳ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ನಿಲುವಳಿ ಸೂಚನೆಯನ್ನು ತರುವ ಹಕ್ಕು ಈ ಕೆಳಕಂಡ ನಿರ್ಬಂಧಗಳಿಗೆ ಒಳಪಟ್ಟಿರತಕ್ಕದ್ದು ಎಂದು ಹೇಳುತ್ತಾ ಒಂದು, ಎರಡು, ಮೂರು ಆಗಿ ನಾಲ್ಕರಲ್ಲಿ ಹೇಳುತ್ತಾರೆ "ನಿಲುವಳಿ ಸೂಚನೆಯು ಹಕ್ಕುಬಾಧ್ಯತೆಯನ್ನು ಪ್ರಶ್ನಿಸುವಂತಿರಕೂಡದು" ಇಲ್ಲಿ ಇವರು ಹಕ್ಕುಬಾಧ್ಯತೆಯನ್ನು ಪ್ರಶ್ನಿಸುವಂತಹ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ತಂದಿದ್ದಾರೆ ಅಂದರೆ ಇಲ್ಲಿ ನಮ್ಮ 62ರ ನಿಯಮಾವಳಿಯ 4ನೆಯ ಉಪಬಂಧದ ಪ್ರಕಾರ ನಿಲುವಳಿ ಸೂಚನೆಯ ಹಕ್ಕುಬಾಧ್ಯತೆಯನ್ನು ಪ್ರಶ್ನಿಸುವಂತಿರಕೂಡದು ಎಂದು ಇರುವುದರಿಂದ ತಾವು ದಯವಿಟ್ಟು ಈ ವಿಚಾರದಲ್ಲಿ ತಾವು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ ಅದು ತಮ್ಮ ವಿವೇಚನೆಗೆ ಬಿಟ್ಟಿರುವುದು ಆದುದರಿಂದ ಈ ನಿಲುವಳಿ ಸೂಚನೆಯನ್ನು ತಾವು ತಿರಸ್ಕರಿಸಬೇಕು ಎಂದು ಹೇಳಿ ವಿನಯಪೂರ್ವಕವಾಗಿ ನಾನು ಕೇಳಿಕೊಳ್ಳುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಇದನ್ನು 69ರ ಕೆಳಗೆ ತೆಗೆದುಕೊಳ್ಳಿ ನಾನು ತಮ್ಮನ್ನು ಕೇಳಿ ಮಾತನಾಡುತ್ತಿದ್ದೇನೆ

ಅಧ್ಯಕ್ಷರು ಇದು ಚರ್ಚೆ ಅಗತ್ಯ ಇದೆಯೇ ಇಲ್ಲವೇ ? ಇದಕ್ಕೆ ಅವಕಾಶ ಕೊಡಬೇಕೆ ಇಲ್ಲವೇ ಎಂದು ನಾನು ಕೂಲಂಕಷವಾಗಿ ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ ಈಗ ಪ್ರಶ್ನೋತ್ತರ

3 ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು ಈಗ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾರವರ ಪ್ರಶ್ನೆ ಕೇಳಿ ಇಲ್ಲವಾ ? ಮಾನ್ಯ ಗೋಪಾಲಕೃಷ್ಣ, ಬೇಲೂರು ಅವರ ಪ್ರಶ್ನೆಗೆ ಉತ್ತರ ಬಂದಿಲ್ಲ ಅದು ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ

ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ರಕ್ಷಣಾ ಅಧಿಕಾರಿ ನೇಮಕ

138 (289) **ಶ್ರೀ ರಾಮಲಿಂಗಾರೆಡ್ಡಿ (ಜಯನಗರ)** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಮಹಿಳಾ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ರಕ್ಷಣಾ ಅಧಿಕಾರಿಯನ್ನು ನೇಮಿಸಲಾಗಿದೆಯೇ ?

(ಆ) ಹಾಗಿದ್ದಲ್ಲಿ, ಮಹಿಳೆಯರ ಮೇಲೆ ಪ್ರತಿ ವರ್ಷ ದಾಖಲಾಗುತ್ತಿರುವ ದೌರ್ಜನ್ಯಗಳ ಸಂಖ್ಯೆ ಎಷ್ಟು ?

(ಇ) ಮಹಿಳೆಯರ ಮೇಲಿನ ದೌರ್ಜನ್ಯ ಕಾಯ್ದೆ ಜಾರಿಗೆ ತರಲು ಅಗತ್ಯವಾದ ಹಣಕಾಸಿನ ನೆರವನ್ನು ಸರ್ಕಾರ ಒದಗಿಸಿದೆಯೇ (ವಿವರ ನೀಡುವುದು) ?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) –

(ಅ) ಹೌದು, ಜಿಲ್ಲಾ ಮಟ್ಟದಲ್ಲಿ ಇಲಾಖಾ ಉಪ–ನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸರ್ಕಾರಿ ಆದೇಶ ಸಂಖ್ಯೆ ಮಮಇ 175 ಮಮಅ 2007 (1) ದಿನಾಂಕ 30–5–2007ರ ಅಧಿಸೂಚನೆಯ ಪ್ರಕಾರ ನೇಮಿಸಲಾಗಿದೆ

(ಆ) ರಾಜ್ಯ ಪೊಲೀಸ್ ಇಲಾಖೆಯಿಂದ ಪಡೆದ ಮಾಹಿತಿ ಪ್ರಕಾರ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳು ಈ ಕೆಳಕಂಡಂತೆ ಐ ಪಿ ಸಿ ಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾಗಿರುತ್ತವೆ

2004–6232, 2005–6591, 2006–6615, 2007ರ ಏಪ್ರಿಲ್‌ವರೆಗೆ 620

(ಇ) ಮಹಿಳೆಯರ ಮೇಲೆ ದೌರ್ಜನ್ಯ ತಡೆ ಕಾಯ್ದೆ ಜಾರಿಗ ತರಲು ಅಗತ್ಯವಾದ ಹಣಕಾಸಿನ ನೆರವನ್ನು ಸರ್ಕಾರ ಒದಗಿಸಿದೆ 2007–08ನೇ ಸಾಲಿನಲ್ಲಿ ಒಟ್ಟು ರೂ 265 00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ

ಶ್ರೀ ರಾಮಲಿಂಗಾರೆಡ್ಡಿ ಮಾನ್ಯ ಅಧ್ಯಕ್ಷರೆ, ಮಹಿಳಾ ದೌರ್ಜನ್ಯಗಳ ಬಗ್ಗೆ ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಕೂಡ ಪ್ರತಿ ದಿನ ನಾವು ಪತ್ರಿಕೆಗಳಲ್ಲಿ ನೋಡುತ್ತಿದ್ದರೆ ಅದರಲ್ಲಿ ಮಹಿಳಯರ ಮೇಲೆ ಆಗುತ್ತಿರುವ ದೌರ್ಜನ್ಯದ ಸುದ್ದಿಗಳೇ ಇರುತ್ತವೆ ಕಾನೂನಿನಲ್ಲಿ ಇರುವಂತಹ ಅಡಚಣೆಗಳಿಂದ ಈ ರೀತಿ ದೌರ್ಜನ್ಯಗಳು ಜಾಸ್ತಿ ಆಗುತ್ತಿದೆಯೋ ಅಥವಾ ದೌರ್ಜನ್ಯಕ್ಕೆ ಒಳಗಾದಂತವರು ದುರ್ಬಲ ವರ್ಗಕ್ಕೆ ಸೇರಿದವರಾಗಿರುತ್ತಾರೆ ಅಥವಾ ಬಹುತೇಕ ಬಡವರಾಗಿರುತ್ತಾರೆ ಆದುದರಿಂದ ಹೆಚ್ಚು ದೌರ್ಜನ್ಯಗಳು ದುರ್ಬಲ ವರ್ಗದ ಮಹಿಳೆಯರ ಮೇಲೆ ಆಗುತ್ತಿದೆ ಇದನ್ನು prevent ಮಾಡುವುದಕ್ಕೆ ಕಾನೂನಿನಲ್ಲಿ ಇನ್ನು ಏನಾದರೂ ಬಿಗಿ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತಾ, ದೌರ್ಜನ್ಯಕ್ಕೆ ಒಳಗಾದಂತಹ ಮಹಿಳೆಯರು ಬಹುತೇಕ ಬಡ ಕುಟುಂಬದವರು, ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರು ಇವರಿಗೆ ಸರ್ಕಾರವೇ ಆ ವೆಚ್ಚವನ್ನು ಭರಿಸುವಂತಹ ಕೆಲಸವನ್ನು ಮಾಡುತ್ತದೆಯೇ ಎಂದು ಪ್ರಶ್ನೆಯನ್ನು ಕೇಳುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಒಂದು ಸಾಮಾಜಿಕವಾದಂತಹ ವಿಷಯವನ್ನು ಎತ್ತಿದ್ದಾರೆ ಮಹಿಳೆಯರ ಮೇಲೆ ನಡೆಯುವಂತಹ ದೌರ್ಜನ್ಯದ ವಿಚಾರದಲ್ಲಿ ಹೇಳುವುದಾದರೆ, ಅದು ಕುಟುಂಬದೊಳಗೆ ಅವರವರ ಮನೆಯಲ್ಲಿ ನಡೆಯುವಂತಹ ದೌರ್ಜನ್ಯ ಇರಬಹುದು ಅಥವಾ ಹೊರಗಿನ ಸಮಾಜದಲ್ಲಿ ಮಹಿಳೆಯ ಮೇಲೆ ನಡೆಯುವಂತಹ ದೌರ್ಜನ್ಯವಿರಬಹುದು ಇದು ಪರಿಶಿಷ್ಟ ಜಾತಿ ಮತ್ತು ವರ್ಗದವರು ಎನ್ನುವುದಕ್ಕಿಂತ ಹೆಚ್ಚಾಗಿ ಮಹಿಳೆ ಮೇಲೆ ಎಲ್ಲಾ ರೀತಿಯಲ್ಲಿ ಎಲ್ಲಾ ವರ್ಗದವರು ಎಲ್ಲರೂ ಸೇರಿ ಅದರಲ್ಲೂ ದುರ್ಬಲ ವರ್ಗದವರ ಮೇಲೆ ಮಾಡುವಂತಹ ದೌರ್ಜನ್ಯ ಏನಿದೆ, ಅದರಲ್ಲಿ ಅವರೂ ಸೇರುವುದರಿಂದ ಆ ಮಾತನ್ನು ಹೇಳಿದೆ ಅದಕ್ಕಾಗಿ ಇವತ್ತು ನಮ್ಮಲ್ಲಿ ಅನೇಕ ಕಾನೂನುಗಳಿವೆ ಸಾಮಾನ್ಯ ಕಾನೂನು IPC ನಲ್ಲಿ ಇವೆ, CRPC ನಲ್ಲಿ ಇವೆ, ಇದರ ಅಡಿಯಲ್ಲಿ ವಿಫಲವಾಗಿದೆ, ಸರಿಯಾಗಿ ಮಾಡುತ್ತಿಲ್ಲವೆಂದು ಹೇಳಿ ವಿಶೇಷವಾದಂತಹ ಕಾನೂನುಗಳನ್ನು ನಾವು ತರುತ್ತಿದ್ದೇವೆ ಮೊನ್ನೆ ತಾನೆ ಕೇಂದ್ರ ಸರ್ಕಾರ ತಂದಂತಹ ಕಾನೂನಿನ ಅಡಿಯಲ್ಲಿ ಕೌಟುಂಬಿಕ ದೌರ್ಜನ್ಯ ನಿಷೇಧ ಕಾಯಿದೆ ಅಕ್ಟೋಬರ್ 26 ರಂದು ಕಳೆದ ವರ್ಷ ಜಾರಿಗೆ ಬಂದಿದೆ ಅವರ ನಿರ್ದೇಶನದ ಮೇರೆಗೆ ಪ್ರತಿ ರಾಜ್ಯದಲ್ಲಿ ಸಂರಕ್ಷಣಾಧಿಕಾರಿಗಳನ್ನು ನೇಮಿಸಬೇಕು ಆ ಅಧಿಕಾರಿಗಳ ಮೂಲಕ ಮಹಿಳೆಯರ ಮೇಲೆ ಆಗುವಂತಹ ದೌರ್ಜನ್ಯಗಳನ್ನು ತಡೆಗಟ್ಟುವುದಕ್ಕೆ ಸರ್ಕಾರಗಳು ಮುಂದಾಗಬೇಕೆಂದು ನಿರ್ದೇಶನ ಇದೆ ಅದರ ಪ್ರಕಾರ ನಮ್ಮ ರಾಜ್ಯ ಸರ್ಕಾರ ಹಾಲಿ ಇರುವಂತಹ ಎಲ್ಲಾ ಬಾಲ ವಿಕಾಸ ಯೋಜನಾಧಿಕಾರಿಗಳನ್ನು ಪದನಿಮಿತ್ತ ಸಂರಕ್ಷಣಾಧಿಕಾರಿಗಳನ್ನಾಗಿ ನೇಮಿಸಿದ್ದೇವೆ ಉಸ್ತುವಾರಿಯನ್ನು ಪ್ರತಿಜಿಲ್ಲೆಯಲ್ಲಿ ಇರುವಂತಹ ಉಪನಿರ್ದೇಶಕರು ನೋಡಿಕೊಳ್ಳುತ್ತಿದ್ದಾರೆ ಅದರ ಜೊತೆಗೆ ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ನಮ್ಮ ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ಈ ಒಂದು ಕಾಯಿದೆಯನ್ನು ಜಾರಿಗೆ ತರುವುದಕ್ಕಾಗಿ 2 ಕೋಟಿ 65 ಲಕ್ಷ ರೂಪಾಯಿಗಳನ್ನು ಮೀಸಲಿರಿಸಿದೆ ವಿಶೇಷಾಧಿಕಾರಿಗಳನ್ನು ನೇರವಾಗಿ ನೇಮಕ ಮಾಡುವುದಕ್ಕಾಗಿಯೇ ಎಲ್ಲಾ ಉಪ ವಿಭಾಗದ ಮಟ್ಟದಲ್ಲಿ ಅಧಿಕಾರಿಗಳನ್ನು ನೇಮಿಸುವುದಕ್ಕೆ ಸರ್ಕಾರ ಈಗಾಗಲೇ ಕ್ರಮವನ್ನು ಕೈಗೊಂಡಿದೆ ಈ ರೀತಿ ದೌರ್ಜನ್ಯಗಳು ನೇರವಾಗಿ ಪೊಲೀಸರಿಗೆ ಹೋಗುವುದು ಹಾಗೂ ಮಹಿಳಾ ಆಯೋಗಕ್ಕೆ ಬರತಕ್ಕಂಥ ರೀತಿಯಲ್ಲಿ ಇದ್ದು, ದೌರ್ಜನ್ಯ ವಿವಿಧ ರೀತಿಯಲ್ಲಿ ವಿವಿಧ ಸ್ಥರದಲ್ಲಿ ನಡೆಯುತ್ತಿವೆ ಇದನ್ನು ನಿರ್ಮೂಲನೆ ಮಾಡುವುದಕ್ಕೆ ನಮ್ಮ ಸರ್ಕಾರದ ಜೊತೆ ಸಂಘ ಸಂಸ್ಥೆಗಳ ಸಹಕಾರವನ್ನು ಕೂಡ ಕೇಳಿಕೊಂಡು ಅದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತೇವೆ

ಶ್ರೀ ರಾಮಲಿಂಗಾರೆಡ್ಡಿ ದೌಜ್ಯನ್ಯಕ್ಕೆ ಒಳಗಾದಂತಹ ಮಹಿಳೆಯರಿಗೆ ಉಚಿತ ಕಾನೂನು ನೆರವು ಕೊಡಬೇಕೆಂದು ಕೇಳುತ್ತೇನೆ

ಅಧ್ಯಕ್ಷರು ನೀವು ಕೇಳುತ್ತಿರುವಂತಹ ಪ್ರಶ್ನೆಗೆ ಅವರು ಸರಿಯಾಗಿ ಉತ್ತರ ಹೇಳದಿದ್ದರೆ ಅರ್ಧ ಗಂಟೆಯಾಗುತ್ತದೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಈ ಕಾಯಿದೆ ಅಡಿ ಸಂರಕ್ಷಣಾಧಿಕಾರಿಗಳು ಅವರಿಂದ ಅರ್ಜಿಯನ್ನು ಪಡೆದುಕೊಂಡು ನೇರವಾಗಿ ರಾಣೆಗಳಿಗೆ ಹೋಗಿ ದೂರುಗಳನ್ನು ಕೊಡುವುದು ಜೊತೆಗೆ ನ್ಯಾಯಾಧೀಶರನ್ನು ಕೂಡ ಭೇಟಿ ಮಾಡಿ ಅವರ ಜೊತೆ ಮಾತುಕತೆ ಮಾಡತಕ್ಕಂಥ ಅಧಿಕಾರವನ್ನು ಕೊಟ್ಟಿದ್ದೇವೆ ಅದರ ಜೊತೆಗೆ ಅಲ್ಲಿಯೇ ನಮ್ಮ ಕಾನೂನು ಕಾರ್ಯದರ್ಶಿಗಳು ಏನಿದ್ದಾರೆ ಅವರ ಜೊತೆಯಲ್ಲಿ ಮಾತನಾಡಿ ಕಾನೂನು ನೆರವನ್ನು ಕೂಡ ಪಡೆದು ಮಾಡತಕ್ಕಂಥ ಅವಕಾಶ ಕೂಡ ಈ ಕಾನೂನಿನಲ್ಲಿದೆ ಅದನ್ನು ಜಾರಿಗೆ ತರುತ್ತೇವೆ

ಪಡಿತರ ಚೀಟಿ ಗ್ರಾಹಕರಿಗೆ ಸೀಮೆಎಣ್ಣೆ ವಿತರಣೆ

(825) ಶ್ರೀ ಖಾದರ್ ಯು ಟಿ (ಉಳ್ಳಾಲ) – ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ರಾಜ್ಯದಲ್ಲಿ ಪಡಿತರ ಚೀಟಿ ಹೊಂದಿದ್ದು ಅವರಲ್ಲಿ ಗ್ಯಾಸ್ ಸಂಪರ್ಕವಿರುವವರಿಗೆ ವಿದ್ಯುತ್ ಕಡಿತ ಉಂಟಾದ ಸಂದರ್ಭದಲ್ಲಿ ಅವರ ಉಪಯೋಗಕ್ಕಾಗಿ ಕನಿಷ್ಠ ಪಕ್ಷ 4 ಲೀಟರ್ ಸೀಮೆಎಣ್ಣೆ ವಿತರಿಸಲು ಸರ್ಕಾರ ಯೋಚಿಸಿದೆಯೇ ,

ಆ) ಹಾಗಿದ್ದಲ್ಲಿ, ಯಾವಾಗಿನಿಂದ ವಿತರಿಸಲಾಗುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) –

ಉತ್ತರ ಅ) ಇಲ್ಲ, ಪ್ರಸ್ತುತ ಭಾರತ ಸರ್ಕಾರವು ರಾಜ್ಯಕ್ಕೆ ನೀಡುತ್ತಿರುವ ಸೀಮೆಎಣ್ಣೆ ಹಂಚಿಕೆಯು ಕಡಿಮೆಯಾಗಿರುವುದರಿಂದ ಗ್ಯಾಸ್ ಸಂಪರ್ಕ ಹೊಂದಿರುವ ಕುಟುಂಬಗಳಿಗೆ ಸೀಮೆಎಣ್ಣೆ ಹಂಚಿಕೆ ಮಾಡಲಾಗುತ್ತಿಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಯು ಟಿ ಖಾದರ್ ಮಾನ್ಯ ಅಧ್ಯಕ್ಷರೆ, ಇಂದಿನ ಸಮಾಜದಲ್ಲಿ Gas cylinder ಇದ್ದಲ್ಲಿ ಅದು ಐಷಾರಾಮಿ ಜೀವನ ಅಲ್ಲ ಅದು ಸಮಾಜಕ್ಕೆ ಅತೀ ಅಗತ್ಯದ ವಸ್ತುವಾಗಿದೆ ಇವತ್ತಿನ ಸಮಾಜದಲ್ಲಿ ಮಧ್ಯಮ ವರ್ಗದವರು, ಬಡವರು ಕೂಡ gas ಅನ್ನು ಮನೆಯಲ್ಲಿ ಇಟ್ಟುಕೊಂಡಿದ್ದಾರೆ, ಏಕೆಂದರೆ ಇವತ್ತು ಬೇಕಾದಷ್ಟು ಕಟ್ಟಿಗೆ ಸಿಗುವುದಿಲ್ಲ ಇವತ್ತು ಬೇರೆ ಬೇರೆ ಕಾರಣವಿದ್ದರೂ ಕೂಡ ಇವತ್ತು ವಿಶೇಷ ಕಾನೂನು ಬಂದಿದೆ ಅದೇನೆಂದರೆ ಯಾರಿಗೆ gas ಸಂಪರ್ಕವಿದೆ ಅವರಿಗೆ ಸೀಮೆ ಎಣ್ಣೆಯನ್ನು ಕೊಡಬಾರದು ಎನ್ನುವಂತಹ ವ್ಯವಸ್ಥೆ ಇದೆ ಈ ಒಂದು ವ್ಯವಸ್ಥೆಯಿಂದ

ಮಧ್ಯಮ ಮತ್ತು ಬಡ ಜನರಿಗೆ ಏನು ಸಮಸ್ಯೆಯಾಗಿದೆ ಎಂದರೆ ಮನೆಯಲ್ಲಿ ಸಂಜೆ ಕರೆಂಟ್ ಹೋದರೆ ಚಿಮಣಿ ಹೊತ್ತಿಸುವುದಕ್ಕೆ kerosene ಸಿಗದಿರುವಂತಹ ಪರಿಸ್ಥಿತಿ ಉಂಟಾಗಿದ್ದು ಬೀಡಿ ಕಟ್ಟುವವರಿಗೆ ಬೀಡಿ ಕಟ್ಟುವಂತಹ ಸಂದರ್ಭದಲ್ಲಿ ಕೂಡ ಇದರಿಂದ ತೊಂದರೆಯಾಗುತ್ತದೆ ಸಂಜೆ ಹೊತ್ತಿನಲ್ಲಿ ಕರೆಂಟ್ ಹೋದರೆ ಮಕ್ಕಳು ಓದುವುದಕ್ಕೆ ತೊಂದರೆಯಾಗುತ್ತದೆ ಆದ ಕಾರಣ ನಾನು ಇವತ್ತು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಹಿಂದೆ 20 ಲೀಟರ್ ಸೀಮೆ ಎಣ್ಣೆಯನ್ನು ಕೊಡುತ್ತಿದ್ದೀರಿ ಈಗ ಅಷ್ಟು ಕೊಡುವುದು ಬೇಡ, ಕನಿಷ್ಠ ಪಕ್ಷ ಗ್ಯಾಸ್ ಇದ್ದವರಿಗೆ ಎರಡು ಅಥವಾ ನಾಲ್ಕು ಲೀಟರ್ ಸೀಮೆಎಣ್ಣೆಯನ್ನು ಒಂದು ತಿಂಗಳಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದವರು ಯಾರಿಗೆ gas cylinder ಇದೆ, ಅಂತಹವರಿಗೆ kerosene ಕೊಡಬಾರದು ಎಂದು ನಿರ್ಬಂಧ ಹಾಕಿದ್ದರಿಂದ ಸೀಮೆ ಎಣ್ಣೆಯನ್ನು ಇವತ್ತು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಅಲ್ಲದೆ ನಮಗೆ ಇವತ್ತು ಹೆಚ್ಚಿನ ಪ್ರಮಾಣದಲ್ಲಿ ಸೀಮೆಎಣ್ಣೆ allocation ಇಲ್ಲ, ಕಡಿಮೆಯಾಗಿದೆ 49,416 KL ಮಾತ್ರ ನಮಗೆ ಪ್ರತಿ ತಿಂಗಳು ಬರುತ್ತದೆ ನಾವು ಈಗ 1,05,00,000 cards ಗೆ ಮಾತ್ರ kerosene ಕೊಡುತ್ತಿದ್ದೇವೆ ಆದುದರಿಂದ ಸೀಮೆ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದು ಸಾಧ್ಯವಾಗುವುದಿಲ್ಲ

ಶ್ರೀ ಯು ಟಿ ಖಾದರ್ ಜನರ ಸಮಸ್ಯೆಗಳನ್ನು ಸಚಿವರ ಮುಂದಿಟ್ಟಿದ್ದೇನೆ ತಾವು ಹೇಳಿದ ಸಮಸ್ಯೆಗಳು ಇದೆ ತಾವು ಜನರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಏನಾದರೂ ವ್ಯವಸ್ಥೆಯನ್ನು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ

ಶ್ರೀಮತಿ ಶಕುಂತಲಾ ಟಿ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಕಟ್ಟಿಗೆ ಉಪಯೋಗದ ಬದಲು gas ಉಪಯೋಗವಾಗುತ್ತಿದೆ ಆದರೆ ಕರೆಂಟ್ ಇಲ್ಲದ ಮನೆಗಳು ಬಹಳಷ್ಟು ಇದೆ ಕರೆಂಟ್ ಇಲ್ಲದ ಸಂದರ್ಭದಲ್ಲಿ ಗ್ಯಾಸ್ ಇದ್ದರೂ ಕೂಡ ಮಾನ್ಯ ಖಾದರ್‌ರವರು ಹೇಳಿದ ಹಾಗೆ ದೀಪವನ್ನು ಉರಿಸುವುದಕ್ಕೆ ಸೀಮೆ ಎಣ್ಣೆ ನಮಗೆ ಅತೀ ಅಗತ್ಯವಾಗಿದೆ ನಾನು ಒಂದು ಕ್ಷೇತ್ರದ ಶಾಸಕಿಯಾದರೂ ಕೂಡ ನಮ್ಮ ಮನೆಗೆ ಕರೆಂಟ್ ಬಂದು ನಾಲ್ಕೈದು ವರ್ಷಗಳಾಯಿತು ಅಷ್ಟೇ ಸಾಮಾನ್ಯ ಜನರು ಬಹಳಷ್ಟು ಕರೆಂಟ್ ಮಂದಿ ಇಲ್ಲದೆ ಇದ್ದು, ಅವರಿಗೆ ಸೀಮೆ ಎಣ್ಣೆ ಅಗತ್ಯವಿರುವುದರಿಂದ ಕೇಂದ್ರಕ್ಕೆ ಒತ್ತಡ ಹಾಕಿಯಾದರೂ ಸಾಮಾನ್ಯ ಜನರ ಮನೆಗೆ ಒಂದು ಕಾರ್ಡಿಗೆ ನಾಲ್ಕು ಲೀಟರ್ ಆದರೂ ಸೀಮೆ ಎಣ್ಣೆ ಒದಗಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಸಚಿವರ ಹತ್ತಿರ ನಾನು ಮಾತನಾಡಿದ್ದೇನೆ

ಅಧ್ಯಕ್ಷರು ನೀವು ಮಂತ್ರಿಗಳಿಗೆ ಹೇಳಿದಿರಿ, ಅವರು ಕುಳಿತುಕೊಂಡುಬಿಟ್ಟರು ನೀವು ಕೇಳುತ್ತಿದ್ದೀರಿ ನಾನು ಅವಕಾಶ ಕೊಟ್ಟರೆ ಕೇಳಿ ಈಗ ಐದು ನಿಮಿಷದ ಮೊದಲು ನನ್ನ permission ತೆಗೆದುಕೊಂಡು ಮಾತನಾಡಬೇಕು ಎಂದು ಹೇಳಿದೆನಲ್ಲ ಈ ತರಹದ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದ್ದೀರಲ್ಲ, ಅದಕ್ಕೆ ಅವಕಾಶವನ್ನು ನಾನು ಇನ್ನು ಮೇಲೆ ಕೊಡುವುದಿಲ್ಲ

ಶ್ರೀ ಅರಗ ಜ್ಞಾನೇಂದ್ರ ಇಲ್ಲಿ ಉಪ ಪ್ರಶ್ನೆಗಳನ್ನು ಎಲ್ಲರೂ ಕೇಳುವುದಕ್ಕೆ ಅವಕಾಶಗಳನ್ನು ಕೊಡದಿದ್ದರೆ

ಅಧ್ಯಕ್ಷರು ಅದು ನನಗೆ ಬಿಟ್ಟಿದ್ದು ನೀವು ನನ್ನದು ಒಂದು ಪ್ರಶ್ನೆ ಎಂದು ಬಿಡುತ್ತೀರಿ ಮಂತ್ರಿಗಳು ಕುಳಿತುಕೊಂಡು ಬಿಡುತ್ತಾರೆ, ನೀವು ಕೇಳುತ್ತಿರುತ್ತೀರಿ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೇ, ತಾವು ಬಲಭಾಗದಲ್ಲಿರುವ ನಮ್ಮನ್ನು ತಿರುಗಿ ನೋಡುವುದಿಲ್ಲ

ಅಧ್ಯಕ್ಷರು ಏಕೆ, ಬಲಗಡೆ ತಿರುಗಿ ನೋಡುವುದಿಲ್ಲ ? ಹೆಚ್ಚು ಮಾತನಾಡುವುದಕ್ಕೆ ಹೆಚ್ಚು ಅವಕಾಶವನ್ನು ಎಡ ಭಾಗದಲ್ಲಿರುವವರಿಗೆ ಕೊಡಬೇಕಾಗಿರುವಂಥಾದ್ದು House belongs to the opposition ಆದುದರಿಂದ ನಾವು ಅವಕಾಶವನ್ನು ಕೊಡುತ್ತೇವೆ ನಿಮಗೂ ಅವಕಾಶವನ್ನು ಕೊಡುತ್ತೇವೆ ಆದರೆ ನೀವು ನನ್ನ permission ತೆಗೆದುಕೊಂಡು ಮಾತನಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ತಾವು ಇವತ್ತು ಏಕೋ ಸಿಟ್ಟಿನಲ್ಲಿ ಇದ್ದೀರಾ, ಸ್ವಲ್ಪ ಸಮಾಧಾನವಾಗಿ ಇರಿ, ನಾವು ಎಲ್ಲರೂ ತಮಗೆ ಸಹಕಾರವನ್ನು ಕೊಡುತ್ತೇವೆ ಇವತ್ತು ಏಕೋ ತಾವು ಬಹಳ ಸಿಟ್ಟಿನಲ್ಲಿ, ಬೇಸರದಲ್ಲಿ ಇದ್ದೀರಿ ನಾವು ನಿಮಗೆ ಯಾವ ರೀತಿಯ ಸಹಕಾರ ಬೇಕೊ ಕೊಡುವುದಕ್ಕೆ ಸಿದ್ಧವಿದ್ದೇವೆ

ಅಧ್ಯಕ್ಷರು ನಾನು ಸಿಟ್ಟಿನಲ್ಲಿ ಇಲ್ಲ, ಸಿಟ್ಟನ್ನು ಬರಿಸಿದ್ದೀರಿ, ಮಾನ್ಯ ಅರಗ ಜ್ಞಾನೇಂದ್ರರವರೆ, ಕೇಳಿ

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರ ಹತ್ತಿರವು ಅನೇಕ ಸಾರಿ ಹೇಳಿದ್ದೇನೆ ಇದರ ಬಗ್ಗೆ ಯಾರಾದರೂ ಅಧಿಕಾರಿಗಳು ಕುಳಿತುಕೊಂಡು ಸಿಸ್ಟಮ್ಯಾಟಿಕ್ ಆಗಿ ಮಾಡದೇ ಹೋದರೆ ನಮ್ಮ ಪರಿಸ್ಥಿತಿಗಳು ಬಹಳ ಕಷ್ಟವಾಗುತ್ತದೆ ಮಲೆನಾಡಿನಲ್ಲಿ ನಮ್ಮ ಹಳ್ಳಿಗಳಲ್ಲಿ ಸೀಮೆಎಣ್ಣೆಯನ್ನು ನಾವು ಅನ್ನ ಬೇಯಿಸುವುದಕ್ಕೆ ಉಪಯೋಗಿಸುವುದಿಲ್ಲ, ಒಲೆಗಳಿಗೆ ಉಪಯೋಗಿಸುವುದಿಲ್ಲ ಇದನ್ನು ಚಿಮಣಿಬುಡ್ಡಿಗೆ

ಬೆಳಕಿಗೋಸ್ಕರ ಉಪಯೋಗಿಸುತ್ತೇವೆ ಇದನ್ನು ನಾವು ಹಲವಾರು ಬಾರಿ ಹೇಳಿ ಸಾಕಾಗಿ ಹೋಯಿತು ನಮ್ಮ ಅಧಿಕಾರಿಗಳಿಗೆ ಇದು ಅರ್ಥವಾಗದೇ ಹೋದರಿ ಏನು ಮಾಡುವುದು ? ನಮ್ಮ ಹಳ್ಳಿಗಳಲ್ಲಿ 15 ರಿಂದ 20 ದಿವಸಗಳು ಕರೆಂಟ್ ಇರುವುದಿಲ್ಲ ನಾವು ಚಿಮಣಿ ಬುಟ್ಟಿಯನ್ನು ಇಟ್ಟುಕೊಳ್ಳದೇ ಹೋದರೆ ನಮಗೆ ಸೀಮೆಎಣ್ಣೆ open market ನಲ್ಲಿ ಸಿಗುವುದಿಲ್ಲ, 30 ರೂಪಾಯಿಗಳಿಗೆ white kerosene ಸಿಗುತ್ತದೆ ಇದಕ್ಕೆ ಏನಾದರೂ alternative ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಅಲ್ಲಿನ ಹಳ್ಳಿಗಾಡಿನ ಜನರಿಗೆ ನಾವು ಏನು ಹೇಳುವುದು ?

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಅಧ್ಯಕ್ಷರೆ, ಮಲೆನಾಡು ಪ್ರದೇಶಗಳಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ ಅಂಥಾ ಕಡೆಗಳಿಂದ ಯಾರಾದರೂ ಮುಂದೆ ಬಂದರೆ, ಅವರಿಗೆ dealership ಕೊಡುತ್ತೇವೆ ಅವರಿಗೆ white kerosene ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ ಅವರು ಚಿಮಣಿ ಬುಡ್ಡಿಗೆ ಉಪಯೋಗ ಮಾಡಬಹುದು

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಅದು 30 ರೂಪಾಯಿಗಳು ಇದೆ ಅದನ್ನು ಯಾರು ತೆಗೆದುಕೊಳ್ಳುತ್ತಾರೆ ? ಬಡವರು, ಕೂಲಿಕಾರರು 30 ರೂಪಾಯಿಗಳನ್ನು ಕೊಟ್ಟು ಒಂದು ಲೀಟರ್ ಸೀಮೆಎಣ್ಣೆಯನ್ನು ತೆಗೆದುಕೊಳ್ಳವುದಕ್ಕೆ ಆಗುತ್ತದಾ ?

ಅಧ್ಯಕ್ಷರು ಮಾನ್ಯ ಮಂತ್ರಿಗಳು, ಇದಕ್ಕೆ ವಿಶೇಷವಾಗಿ ಒಂದು ಸುತ್ತೋಲೆಯನ್ನು ಹೊರಡಿಸಿ, ಒಂದು ತೀರ್ಮಾನವನ್ನು ತೆಗೆದುಕೊಂಡು, ಈ ಗುಡ್ಡಗಾಡಿನ ಜನರಿಗೆ, ಮಲೆನಾಡಿನ ಪ್ರದೇಶದ ಜನರಿಗೆ, ಸ್ವಲ್ಪ ಹೆಚ್ಚಿಗೆ ಸೀಮೆಎಣ್ಣೆಯನ್ನು ಕೊಡುವ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಅಧ್ಯಕ್ಷರೆ, ಮಲೆನಾಡಿಗೆ ಸ್ವಲ್ಪ relaxation ಮಾಡಿ

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಅಧ್ಯಕ್ಷರೆ, ಇವತ್ತು ಸೀಮೆಎಣ್ಣೆಯನ್ನು ಮಾರ್ಕೆಟ್‌ಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ ಕೇಂದ್ರ ಸರ್ಕಾರದಿಂದ ಅಲಾಟ್‌ಮೆಂಟ್ ಆಗುವಂಥಾದ್ದು ಕೇಂದ್ರ ಸರ್ಕಾರದಿಂದ ಅಲಾಟ್‌ಮೆಂಟ್ ಆಗುವಂಥಾದ್ದು ಎಷ್ಟೆಂದರೆ, 49,416 KL ಅದರಲ್ಲಿ ಈಗಾಗಲೇ ನಾವು ರಾಜ್ಯದಲ್ಲಿ ಒಂದು ಕೋಟಿ ಐದು ಲಕ್ಷ ರೇಷನ್ ಕಾರ್ಡ್‌ಗಳಿಗೆ ಸೀಮೆಎಣ್ಣೆಯನ್ನು ಕೊಡುತ್ತಿದ್ದೇವೆ

ಅಧ್ಯಕ್ಷರು ಮಾನ್ಯ ಸದಸ್ಯರು ಕೇಳುವಂಥಾದ್ದು ಮಲೆನಾಡು ಪ್ರದೇಶಕ್ಕೆ ಒಂದು ವಿಶೇಷವಾದ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಯವರು ಹೇಳಿದ ಹಾಗೆ, ಒಂದು ಕೋಟಿ ಐದು ಲಕ್ಷ ರೇಷನ್‌ಕಾರ್ಡ್‌ಗಳು ಇವೆ ಕರ್ನಾಟಕ ರಾಜ್ಯದ ಜನಸಂಖ್ಯೆ ಇರುವುದು 5 ಕೋಟಿ ಅರವತ್ತು ಲಕ್ಷ ಇರುವಂಥಾದ್ದು

ಅಧ್ಯಕ್ಷರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಒಂದು ಕುಟುಂಬದಲ್ಲಿ 4 ಮಕ್ಕಳು ಇದ್ದರೆ, ಆ ನಾಲ್ಕು ಮಕ್ಕಳು ಬೇರೆಯಾಗಿದ್ದೇವೆಂದು ಕಾರ್ಡ್‌ಗಳನ್ನು ತೆಗೆದುಕೊಂಡಿದ್ದಾರೆ ಇಲ್ಲಿ ತಾಯಿ ಬೇರೆಯಾಗಿದ್ದೇನೆಂದು ಆಕೆ ಒಂದು ಬೇರೆ ಕಾರ್ಡ್ ಅನ್ನು ತೆಗೆದುಕೊಂಡಿದ್ದಾರೆ, ತಂದೆ ಬೇರೆ ಎಂದು ಕಾರ್ಡ್ ತೆಗೆದುಕೊಂಡಿದ್ದಾರೆ ಆದುದರಿಂದ ಒಂದು ಕೋಟಿ ಎಂದರೆ, ಇನ್ನು ನಾಲ್ಕು ಕೋಟಿ ಕಾರ್ಡ್ ಅನ್ನು ಕೊಡಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಅದರಲ್ಲಿ ಹೆಚ್ಚು ಕಡಿಮೆ ಏನು ಮಾಡಿದ್ದಾರೆಂದರೆ, ನಮ್ಮ ಆಹಾರ ಸಚಿವರು ಹೊಳೆನರಸೀಪುರದಲ್ಲಿ, ಬೇರೆ ಕಡೆಗಳಲ್ಲಿ ಕೊಟ್ಟಿದ್ದಾರೆ ಅದನ್ನು ಇಲ್ಲವೆಂದು ಹೇಳುವುದಿಲ್ಲ

ಅಧ್ಯಕ್ಷರು ನೂರಕ್ಕೆ ನೂರು

ಶ್ರೀ ಮಲ್ಲಿಕಾರ್ಜುನ ಖರ್ಗೆ ಜನಸಂಖ್ಯೆಗಿಂತಲೂ ಕಾರ್ಡ್ ಜಾಸ್ತಿ ಇದೆ

ಶ್ರೀ ಗೋವಿಂದ ಎಂ ಕಾರಜೋಳ ಇಲ್ಲ, ಸಾರ್,

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಇಲ್ಲವೆಂದು ಹೇಳಿ ಬೇಕಾದರೆ

ಶ್ರೀ ಗೋವಿಂದ ಎಂ ಕಾರಜೋಳ ಹೊಳೆ ನರಸೀಪುರಕ್ಕೆ ಅಷ್ಟೇ ಅಲ್ಲ, ಇಡೀ ರಾಜ್ಯಕ್ಕೆ ಕೊಟ್ಟಿದ್ದೇವೆ

ಅಧ್ಯಕ್ಷರು ಹಾಗಾದರೆ, ಹೊಳೆನರಸೀಪುರಕ್ಕೆ ಕೊಟ್ಟಿದ್ದರೆ ಅದನ್ನು follow ಮಾಡಲೇ ಬೇಕು ಇನ್ನು ನಾಲ್ಕು ಕೋಟಿ ಕಾರ್ಡ್‌ಗಳನ್ನು ಇನ್ನು ಹಂಚಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ, ಅದು ನಿಜ, ಏಕೆಂದರೆ ಅನೇಕ ಹಳ್ಳಿಗಳಲ್ಲಿ ವಿದ್ಯುತ್ ಇರುವುದಿಲ್ಲ ತಮಗೂ ಗೊತ್ತಿದೆ, ಶೇ 25 ರಷ್ಟು ಕಡಿತ, ಶೇ 20, ಶೇ 30, ಶೇ 50 ರಷ್ಟು ಎಂದು ಕೊಂಡು, ಹೆಚ್ಚಿನ ಭಾರ ಹಳ್ಳಿಗಳ ಮೇಲೆ ಬೀಳುತ್ತದೆ ಅಲ್ಲಿ ಮೂರು ದಿವಸಗಳು ಆದರೂ ವಿದ್ಯುತ್ ಇರುವುದಿಲ್ಲ ಮಾನ್ಯ ಸದಸ್ಯರಾದ ಯು ಟಿ ಖಾದರ್ ಹೇಳಿದ ಹಾಗೆ ಮಾನ್ಯ ಅರಗ ಜ್ಞಾನೇಂದ್ರರವರು ಹೇಳಿದ ಹಾಗೆ ಎಲ್ಲಿ ಮುಖ್ಯವಾಗಿ ಮಲೆನಾಡು ಭಾಗಗಳಲ್ಲಿ interior village ಎಲ್ಲಿ electricity ಸರಿಯಾಗಿ supply ಆಗುವುದಿಲ್ಲ ಅಂಥಾ ಕಡೆಗಳಲ್ಲಿ ತಹಶೀಲ್ದಾರರಿಗೆ ವಿಶೇಷವಾದಂಥ ಅಲಾಟ್‌ಮೆಂಟ್ ಅನ್ನು ಕೊಟ್ಟು ಸಹಾಯವನ್ನು ಕೊಡುವಂಥಾದ್ದನ್ನು ಮಾಡಬೇಕು ಇನ್ನು ಕೇಂದ್ರ ಸರ್ಕಾರದಿಂದ ಕೋಟಾ ಕೊಡುತ್ತಾರೆ ನಮಗೆ ಇಷ್ಟೆ ಕೋಟಾ ಇರುವುದು ಎಂದರೆ ಇದು ಇನ್ನು ಹೆಚ್ಚಿನ ಕೋಟಾ ಪಡೆಯುವುದಕ್ಕೆ ಪ್ರಯತ್ನ ಮಾಡಿ, ಏಕೆಂದರೆ ಇದು essential commodity ಇವತ್ತು ಏನು ಮಾಡುತ್ತಾರೆಂದರೆ ಡೀಲರ್ಸ್ ಕೊಡ, ಅವರನ್ನು ನಾವು ರೆಕಮೆಂಡ್ ಮಾಡಿದ್ದೇ ಇರಲಿ, ಅವರೇ ರೆಕಮೆಂಡ್ ಮಾಡಿದವರೆ ಇರಲಿ

ಸಕ್ಕರೆ ಬೆಲೆ ಹೆಚ್ಚಿಗೆ ಆಯಿತೆಂದರೆ, ಸಕ್ಕರೆಯನ್ನು black market ನಲ್ಲಿ ಮಾರುತ್ತಾರೆ ಸೀಮೆಎಣ್ಣೆಗೆ ಹೆಚ್ಚಿನ ಬೆಲೆಯಾಯಿತೆಂದರೆ, ಅದನ್ನು ಸಿಟಿಯಲ್ಲಿ ಮಾರಿಕೊಂಡು ಖಾಲಿ ಮಾಡಿಕೊಂಡು ಹೋಗುತ್ತಾನೆ ಈ ರೀತಿ ಬಹಳ ನಡೆಯುತ್ತದೆ ಅದಕ್ಕೆ ವಿಜಿಲೆನ್ಸ್ ಅನ್ನು ಟೈಟ್ ಮಾಡಿ, ಹೆಚ್ಚಿನ ಕೋಟಾಕ್ಕೆ ತಾವು ಕೇಂದ್ರ ಸರ್ಕಾರಕ್ಕೆ ಹೋಗಿ ಕೇಳಿ ನಾವೆಲ್ಲರೂ ಸಹ ಅದಕ್ಕೆ ಸಪೋರ್ಟ್ ಮಾಡುತ್ತೇವೆ

ಶ್ರೀ ಗೋವಿಂದ ಎಂ ಕಾರಜೋಳ ಮಾನ್ಯ ಅಧ್ಯಕ್ಷರೆ, ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ ಅದು ಬಂದ ನಂತರ ಮರು ಹಂಚಿಕೆ ಮಾಡುವುದಕ್ಕೆ ಪರಿಶೀಲನೆಯನ್ನು ಮಾಡುತ್ತೇವೆ

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ (A P M C) ಖಾಲಿ ಹುದ್ದೆಗಳ ನೇಮಕಾತಿ

140 (1213) **ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು)** –ಕೃಷಿ ಮಾರುಕಟ್ಟೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

1) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆಗೆ ಮಂಜೂರಾದ ಹುದ್ದೆ ಎಷ್ಟು ?

2) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ಖಾಲಿ ಇರುವ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ , ಇಲ್ಲದಿದ್ದಲ್ಲಿ ಕಾರಣವೇನು (ವಿವರ ಕೊಡುವುದು)

3) ಕೃಷಿ ಉತ್ಪನ್ನ ಮಾರುಕಟ್ಟೆಯ ಹಳೆಯ ಕಟ್ಟಡಗಳಿಗೆ ಬಾಡಿಗೆ ನಿಗದಿಪಡಿಸುವ ಅಧಿಕಾರ ಸಮಿತಿಗಳಿಗೆ ಇದೆಯೇ , ಇಲ್ಲದಿದ್ದಲ್ಲಿ, ಕಾರಣಗಳೇನು ವಿವರ ನೀಡುವುದು

4) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹಳೆಯ ಕಟ್ಟಡಗಳು ದುರಸ್ತಿಯಾಗದೇ ಪೂರ್ತಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

5) ಬಂದಿದ್ದಲ್ಲಿ, ಈ ಬಗ್ಗೆ ಸಮಿತಿಯವರ ನಿರ್ಣಯಗಳಿಗೆ ಅನುಮತಿ ನೀಡಲಾಗುವುದೇ ,

6) ಇಲ್ಲದಿದ್ದಲ್ಲಿ, ಕಾರಣಗಳೇನು (ವಿವರ ನೀಡುವುದು)

ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) –

1) 15 ಹುದ್ದೆಗಳು

2) 7 ಹುದ್ದೆಗಳು, ಕೃಷಿ ಮಾರಾಟ ಇಲಾಖೆಯಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಮಂಜೂರಾತಿ ನೀಡಿದೆ

ಪ್ರಥಮ ದರ್ಜೆ ಸಹಾಯಕರು	117 ಹುದ್ದೆಗಳು
ದ್ವಿತೀಯ ದರ್ಜೆ ಸಹಾಯಕರು	35 ಹುದ್ದೆಗಳು
ಮಾರುಕಟ್ಟೆ ಮೇಲ್ವಿಚಾರಕರು	63 ಹುದ್ದೆಗಳು
ಮಾರುಕಟ್ಟೆ ಸಹಾಯಕ	60 ಹುದ್ದೆಗಳು

ಮುಂಬಡ್ತಿ ಖೋಟಾದಲ್ಲಿ ಲಭ್ಯವಿರುವ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಿದ ತರುವಾಯ ನಿಯಮಾನುಸಾರ ತುಂಬಲು ಕ್ರಮ ಕೈಗೊಳ್ಳಲಾಗುವುದು

3) ಆಸ್ತಿ ಹಂಚಿಕೆ ನಿಯಮಾವಳಿ–2004ರನ್ವಯ ಸಮಿತಿ ಪ್ರಾಂಗಣದಲ್ಲಿನ ಕಟ್ಟಡಗಳ ಲೀಸ್ ಅಂಡ್ ಲೈಸನ್ಸ್ ಶುಲ್ಕ ನಿಗಧಿಪಡಿಸಿಕೊಳ್ಳಲು ಅವಕಾಶ ಹೊಂದಿದ್ದು ಈ ರೀತಿ ನಿಗಧಿಪಡಿಸಿಕೊಂಡು ಇಲಾಖೆಯ ನಿರ್ದೇಶಕರಿಂದ ಮಂಜೂರಾತಿ ಪಡೆಯಬಹುದಾಗಿದೆ

4) ಹೌದು

5) ರೂ 14 00 ಲಕ್ಷಗಳಲ್ಲಿ ಸದರಿ ಕಟ್ಟಡಗಳ ದುರಸ್ತಿ ಕಾಮಗಾರಿ ತೆಗೆದುಕೊಳ್ಳಲು ಸಮಿತಿಯ ನಿರ್ಣಯಗಳಿಗೆ ಮಂಜೂರಾತಿ ನೀಡಲಾಗಿದೆ

6) – ಉದ್ಭವಿಸುವುದಿಲ್ಲ –

ಶ್ರೀಮತಿ ಶಕುಂತಲಾ ಟಿ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ ನಮ್ಮ ಪುತ್ತೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆಗೆ 16 ಹುದ್ದೆಗಳು ಮಂಜೂರಾಗಿದೆಯೆಂದು ಹೇಳಿದ್ದಾರೆ ಆದರೆ ಅಲ್ಲಿ 7 ಜನ ಮಾತ್ರ ಇದ್ದಾರೆ ಇಲ್ಲಿ ಸುಮಾರು ಶೇ 45 ರಷ್ಟು ಹುದ್ದೆ ಖಾಲಿ ಇದೆ ಇಡೀ ರಾಜ್ಯದಲ್ಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ ನನ್ನ ಕ್ಷೇತ್ರಕ್ಕೆ ಹುದ್ದೆಗಳನ್ನು ಭರ್ತಿ ಮಾಡುತ್ತಾರೋ ಇಲ್ಲವೋ ಎಂಬುದು ಗೊತ್ತಾಗಲಿಲ್ಲ ಈಗ ನಮ್ಮ ತಾಲ್ಲೂಕಿನಲ್ಲಿ ಹುದ್ದೆಗಳು ಭರ್ತಿಯಾಗಬೇಕಾಗಿದೆ ಇನ್ನು APMC ಯಲ್ಲಿ "ರೈತ ಸಂಜೀವಿನಿ" ಕಾರ್ಯಕ್ರಮ ಬಹಳ ತಡವಾಗಿ ಬರುತ್ತಾ ಇದೆ ಜನರು ಸತ್ತಾಗ, ಬಹಳ ನೋವಿನಲ್ಲಿದ್ದಾಗ ಅವರಿಗೆ ಸಿಗುವ ಪರಿಹಾರ ಬೇಗ ಸಿಕ್ಕರೆ ಪ್ರಯೋಜನವಾಗುತ್ತದೆ ಇದು ಬರುವುದಕ್ಕೆ ಒಂದು ವರ್ಷ, ಎರಡು ವರ್ಷಗಳು ಕಳೆದರ ಬಹಳ ಕಷ್ಟವಾಗುತ್ತದೆ ಇನ್ನೊಂದು ವಿಷಯವೇನೆಂದರೆ 20,000 ರೂಪಾಯಿಗಳಿಗಿಂತ ಹೆಚ್ಚಿಗೆ ದುರಸ್ತಿ ಕಾರ್ಯಗಳು ಆಗಬೇಕೆಂದರೆ ಅದಕ್ಕೆ ಕೇಂದ್ರಕ್ಕೆ ಬರೆದು APMC Director ನಿಂದ permission ಪಡೆದು ಮಾಡಬೇಕಾಗಿದೆ ಈಗ ನಮ್ಮ ಗ್ರಾಮ ಪಂಚಾಯತ್‌ಗಳಲ್ಲಿ, ಜಿಲ್ಲಾ ಪಂಚಾಯತ್‌ಗಳಲ್ಲಿ, ಎರಡು ಲಕ್ಷ ರೂಪಾಯಿಗಳವರೆಗೆ ಟೆಂಡರ್ ಕರೆಯುತ್ತಾ ಇಲ್ಲ ಅಂಥ ಒಂದು ಸೌಲಭ್ಯವನ್ನು ಇಲ್ಲಿಗೆ ಒದಗಿಸಿಕೊಡಬೇಕು, ಇಲ್ಲದಿದ್ದರೆ ನೀವು ದುರಸ್ತಿಗಾಗಿ 20,000 ರೂಪಾಯಿಗಳ ಒಳಗೆ ಯಾವುದೇ ಒಂದು

ಅನುಕೂಲಗಳಿಗೆ ಮಾತ್ರ ಅವಕಾಶವಿದ್ದಲ್ಲಿ, ನಮ್ಮ ಕಡೆಯಲ್ಲಿ ಭಾರೀ ಮಳೆ ಬಂದಾಗ 20,000 ರೂಪಾಯಿಗಳಿಗೆ ಬರದಿದ್ದರೆ ನಿಮ್ಮಿಂದ ಹಣ ಮಂಜೂರಾಗಿ 6 ತಿಂಗಳಿಗೆ ಬಂದರೆ ಅದು ಒಂದು ಲಕ್ಷ ರೂಪಾಯಿಗಳು ವೆಚ್ಚಗಳಷ್ಟು ದುರಸ್ತಿಗೆ ಖರ್ಚು ಮಾಡಬೇಕಾಗುತ್ತದೆ ಆ ಸ್ಥಿತಿ ಬಂದಿರುತ್ತದೆ, ಆದ ಕಾರಣ ಆದಷ್ಟು ಬೇಗ ಇಲಾಖೆಯಲ್ಲಿ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಬಂಡೆಪ್ಪ ಕಾಶಂಪುರ್ ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಈ ಹುದ್ದೆಗಳು 1,359 ಖಾಲಿ ಇವೆ ಅದರಲ್ಲಿ ಈಗ ತಾನೇ 275 ಹುದ್ದೆಗಳಿಗೆ ಫೈನಾನ್ಸ್ ಅಪ್ರೂವಲ್ ಸಿಕ್ಕಿ ಇದರ ಎಲ್ಲಾ ಪ್ರೋಸಿಜರ್ ಕಂಪ್ಲೀಟ್ ಆಗಿ KPSCಯಲ್ಲಿ ಈ ಹುದ್ದೆಗಳಿಗೆ ತಕ್ಷಣವೇ ಕರೆಯುತ್ತಿದ್ದಾರೆ ಇನ್ನು ರೈತ ಸಂಜೀವಿನಿ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ ಹಣ ಶೀಘ್ರವಾಗಿ ಬಿಡುಗಡೆಯಾಗುವಂತೆ ಮಾಡುತ್ತೇವೆ ಇನ್ನು Financial approval ಬಗ್ಗೆ ಹೇಳಿದ್ದಾರೆ ಅದರಲ್ಲಿ ಕೆಲವು ಸಮಿತಿಗಳ ರೆಕಮೆಂಡೇಷನ್ ಮೇಲೆ ಬರುತ್ತದೆ, ಹಾಗಾಗಿ ಇದರ ಬಗ್ಗೆ ಮುಂದಿನ ದಿವಸಗಳಲ್ಲಿ ವಿಚಾರಣೆ ಮಾಡಿ, ಪರಿಶೀಲನೆ ಮಾಡಿ ಅಗತ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ

ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳಿಗೆ ನೇರವಾಗಿ ಹಣ ಬಿಡುಗಡೆ

141 (463) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರ) –ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

ಅ) ಸ್ತ್ರೀಶಕ್ತಿ ತಾಲ್ಲೂಕು ಒಕ್ಕೂಟದ ಕಾರ್ಯಚಟುವಟಿಕೆಗಳಾದ ತರಬೇತಿ ಸುತ್ತುನಿಧಿ, ಕರಕುಶಲ ವಸ್ತುಗಳ ತಯಾರಿಕೆ, ಇನ್ನಿತರ ಕಾರ್ಯ ಚಟುವಟಿಕೆಗಳಿಗೆ ಶಾಸಕರ ಅನುದಾನ, ರಾಜ್ಯ ಸರ್ಕಾರದ ಅನುದಾನ ನೇರವಾಗಿ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳಿಗೆ ನೀಡುವುದಕ್ಕೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು ?

ಆ) ಎಸ್ ಜೆ ವೈ ಅನುದಾನವನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆ ಮುಖಾಂತರ ನೇರವಾಗಿ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳಿಗೆ ನೀಡುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಇ) ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟದಿಂದ ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ಸಾಮಗ್ರಿಗಳ ಹಾಗೂ ಕರಕುಶಲ ವಸ್ತುಗಳನ್ನು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಮಾರಾಟ ಮಾಡುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಹೆಚ್ ಕೆ ಕುಮಾರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) –

ಅ) ಅಭಿವೃದ್ಧಿ ಯೋಜನಾಧಿಕಾರಿಗಳು ಒಕ್ಕೂಟದ ಕಾರ್ಯಕಾರಿ ಸದಸ್ಯರೂ ಆಗಿರುವುದರಿಂದ ಸ್ತ್ರೀಶಕ್ತಿ ತಾಲ್ಲೂಕು ಒಕ್ಕೂಟದ ಕಾರ್ಯಚಟುವಟಿಕೆಗಳಿಗೆ ಬಿಡುಗಡೆ

ಮಾಡುತ್ತಿರುವ ಸರ್ಕಾರದ ಅನುದಾನವನ್ನು ನೇರವಾಗಿ ಉಪ-ನಿರ್ದೇಶಕರ ಮುಖಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ನೀಡಲಾಗುತ್ತಿದೆ

ಆ) ಎಸ್ ಜೆ ಎಸ್ ವೈ ಅನುದಾನವನ್ನು ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳಿಗೆ ಇದುವರೆಗೂ ನೀಡಿರುವುದಿಲ್ಲ

ಇ) ಸ್ತ್ರೀಶಕ್ತಿ ಒಕ್ಕೂಟದಿಂದ ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ

1) ಸ್ತ್ರೀಶಕ್ತಿ ಗುಂಪುಗಳ ಸದಸ್ಯರು ಉತ್ಪಾದಿಸುವ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಲು ಸದಸ್ಯರಿಗೆ 5 ದಿನಗಳ ವಸತಿಯುತ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ವಿವಿಧ ನುರಿತ ಸ್ವಯಂಸೇವಾ ಸಂಸ್ಥೆಗಳಿಂದ ನೀಡಲಾಗುತ್ತಿದೆ ಇದುವರೆಗೆ 28835 ಸದಸ್ಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗಿದೆ ಇದರಿಂದಾಗಿ 75092 ಗುಂಪುಗಳು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಂಡಿರುತ್ತದೆ

2) ಸ್ತ್ರೀಶಕ್ತಿ ಸದಸ್ಯರು ಉತ್ಪಾದಿಸುತ್ತಿರುವ 8 ವಸ್ತುಗಳನ್ನು ಸ್ತ್ರೀಶಕ್ತಿ ಬ್ರಾಂಡ್‌ನಡಿ ಬಿಡುಗಡೆಗೊಳಿಸಲಾಗಿದೆ

3) ಸ್ತ್ರೀಶಕ್ತಿ ಸದಸ್ಯರು, ತಾವು ಉತ್ಪಾದಿಸುವ ವಸ್ತುಗಳನ್ನು ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದಾರೆ ಇದಲ್ಲದೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಗಿಂದಾಗ್ಗೆ ವಸ್ತುಪ್ರದರ್ಶನ ಹಾಗೂ ಮಾರಾಟ ಮೇಳಗಳನ್ನು ಏರ್ಪಡಿಸಲಾಗುತ್ತಿದೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ರಾಜ್ಯಮಟ್ಟದ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳಗಳನ್ನು ಏರ್ಪಡಿಸಲಾಗುತ್ತಿದೆ

4) ಸ್ತ್ರೀಶಕ್ತಿ ಗುಂಪುಗಳ ಸದಸ್ಯರಿಗೆ ಸಭೆಗಳನ್ನು ನಡೆಸಲು ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಸೂಕ್ತ ಕಟ್ಟಡ ವ್ಯವಸ್ಥೆ ಇರುವುದಿಲ್ಲವಾದ್ದರಿಂದ 2006-07ನೇ ಸಾಲಿನಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಮಾರುಕಟ್ಟೆ ಸಂಕೀರ್ಣ ಭವನಗಳನ್ನು ನಿರ್ಮಿಸಲು ತಲಾ ರೂ 2 03 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ

2007-08ನೇ ಸಾಲಿನಲ್ಲಿ ಸುಮಾರು 50 ತಾಲ್ಲೂಕುಗಳಲ್ಲಿ ಮಾರುಕಟ್ಟೆ ಸಂಕೀರ್ಣ/ಭವನಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಶ್ರೀ ಬಾದರ್ಲಿ ಹಂಪನಗೌಡ ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಕೊಟ್ಟಿದೆ ಆದರೆ ಇದರಲ್ಲಿ ತಪ್ಪು ಉತ್ತರವನ್ನು ಕೊಟ್ಟಿದ್ದಾರೆ ನಾನು ಕೇಳಿರುವಂಥಾ ಪ್ರಶ್ನೆಯೇ ಬೇರೆ, ಇವರು ಕೊಟ್ಟಿರುವಂಥಾ ಉತ್ತರವೇ ಬೇರೆಯಾಗಿದೆ ನಾನು ಕೇಳಿರುವಂಥಾ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿರುವಂಥಾ ಎಲ್ಲಾ ತಾಲ್ಲೂಕುಗಳ ಸ್ತ್ರೀಶಕ್ತಿ ತಾಲ್ಲೂಕು ಒಕ್ಕೂಟದ ಕಾರ್ಯ ಚಟುವಟಿಕೆಗಳಾದ ತರಬೇತಿ, ಸುತ್ತ ನಿಧಿ, ಕರಕುಶಲ ವಸ್ತುಗಳ ತಯಾರಿಕೆ, ಇನ್ನಿತರ ಕಾರ್ಯ ಚಟುವಟಿಕೆಗಳಿಗೆ ಶಾಸಕರ ಅನುದಾನ,

ರಾಜ್ಯ ಸರ್ಕಾರದ ಅನುದಾನ ನೇರವಾಗಿ ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟಗಳಿಗೆ ನೀಡುವುದಕ್ಕೆ ಸರ್ಕಾರ ತಗೆದುಕೊಂಡಿರುವ ಕ್ರಮಗಳೇನು ಎಂದು ಕೇಳಿದ್ದೇನೆ ಅದಕ್ಕೆ ಸರ್ಕಾರದಿಂದ ಉತ್ತರ ಏನು ಕೊಟ್ಟಿದ್ದಾರೆಂದರೆ ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಅದಕ್ಕೆ ಸದಸ್ಯರು ಇರುತ್ತಾರೆ ಅ ಸದಸ್ಯರ ಮೂಲಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತೇವೆಂದು ಕೊಟ್ಟಿದ್ದಾರೆ ಇಡೀ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ ಸ್ತ್ರೀ ಶಕ್ತಿ ತಾಲ್ಲೂಕು ಒಕ್ಕೂಟಗಳನ್ನು ರಚನೆ ಮಾಡಿದ ಮೇಲೆ ಅದನ್ನು ಬಲವರ್ಧನೆ ಮಾಡದೇ ಹೋದರೆ ಮತ್ತು ಆ ಕಾರ್ಯ ಚಟುವಟಿಕೆಗಳಿಗೆ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡದಿರುವಂಥಾ ಪರಿಸ್ಥಿತಿಯಲ್ಲಿ ಆ ಒಕ್ಕೂಟಗಳನ್ನು ರಚನೆ ಮಾಡಿದ ಉದ್ದೇಶವೇ ಸಫಲವಾಗುವುದಿಲ್ಲ ದಯಮಾಡಿ ಮಾನ್ಯ ಸಚಿವರು ಇವತ್ತು ಗ್ರಾಮ ಪಂಚಾಯತ್‌ಗಳ ಮೂಲಕ SJSY ಅನುದಾನವನ್ನು ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳ ಮುಖಾಂತರ ನೇರವಾಗಿ ತಾಲ್ಲೂಕು ಒಕ್ಕೂಟಗಳಿಗೆ ಬಿಡುಗಡೆ ಮಾಡಿ ಅವು ಕಾರ್ಯ ಚಟುವಟಿಕೆಗಳನ್ನು ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಲಿಚ್ಛಿಸುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿರುವಂಥಾ ವಿಷಯಕ್ಕೆ ಸಂಬಂಧಪಟ್ಟಂತೆ ಶಾಸಕರ ಅನುದಾನವನ್ನು ನೀಡುವ ಪ್ರಶ್ನೆ ಶಾಸಕರುಗಳಿಗೆ ಬಿಟ್ಟಿದ್ದು ಅವರು ಅನುದಾನವನ್ನು ಕೊಡಬೇಕು

ಶ್ರೀ ಬಾದರ್ಲಿ ಹಂಪನಗೌಡ ಮಾನ್ಯ ಅಧ್ಯಕ್ಷರೆ, ಅದನ್ನು ನಿಯಮಗಳಲ್ಲಿ ಸೇರಿಸಬೇಕಾಗುತ್ತದ

ಶ್ರೀ ಹೆಚ್ ಕೆ ಕುಮಾರಸ್ವಾಮಿ ನಾವು ಅದನ್ನು ನಿಯಮಗಳಿಗೆ ಸೇರಿಸುವಾಗ, ಮಾನ್ಯ ಆರ್ಥಿಕ ಸಚಿವರೊಂದಿಗೆ ಸಮಾಲೋಚನೆ ಮಾಡಿ ಇದನ್ನು ಶಾಸಕರಿಗೆ ಕೊಡಬಹುದೇ ಬೇಡವೆ ಎಂಬುದು ಒಂದು ಪ್ರಶ್ನೆ ಎರಡನೆಯದಾಗಿ ಅವರು ಏನು ಹೇಳುತ್ತಿದ್ದಾರೆಂದರೆ, ಸರ್ಕಾರ ಅನುದಾನವನ್ನು ನೇರವಾಗಿ ಒಕ್ಕೂಟಗಳಿಗೆ ಕೊಡಬೇಕು ಅಧಿಕಾರಿಗಳ ಮೂಲಕ ಕೊಡಬಾರದೆಂದು ಮಾನ್ಯ ಶಾಸಕರುಗಳ ಬೇಡಿಕೆ ಇದೆ

ಸಹಜವಾಗಿ ಯಾವುದೇ ಕಾರ್ಯಕ್ರಮಗಳನ್ನು ಸರ್ಕಾರ ನೇರವಾಗಿ ಹೇಳಬಹುದು ಆದರೆ ಅನುದಾನವನ್ನು ಬಿಡುಗಡೆ ಮಾಡುವಾಗ ಅದನ್ನು ಅಧಿಕಾರಿಗಳ ಮೂಲಕವೇ ಮಾಡಬೇಕೇ ಹೊರತು ಯಾವುದೇ ಸಂಘಟನೆಗಳಿಗೆ ನೇರವಾಗಿ ಹಣವನ್ನು ಕೊಡತಕ್ಕಂತ ಪದ್ಧತಿ ಇಲ್ಲ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿದ ರೀತಿಯಲ್ಲಿ ಇವುಗಳಿಗೆ ಹಣವನ್ನು ನೇರವಾಗಿ ಕೊಡಿ ಎನ್ನುವುದು ಅವರ ಬೇಡಿಕೆಯಾಗಿದೆ ಇದರ ಬಗ್ಗೆ ಪರಿಶೀಲನೆ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತದೆ

ಶ್ರೀ ಬಾದರ್ಲಿ ಹಂಪನಗೌಡ 175 ತಾಲ್ಲೂಕುಗಳಲ್ಲಿ ಒಕ್ಕೂಟಗಳನ್ನು ರಚನೆ ಮಾಡಿ, ಬೈಲಾಗಳನ್ನು ಸಹಕಾರ ಇಲಾಖೆಯ ಮುಖಾಂತರ ಮಾಡಿದ್ದೀರಿ ಆ ಒಕ್ಕೂಟಗಳಿಗೆ ನೇರವಾಗಿ ಹಣವನ್ನು ಬಿಡುಗಡೆ ಮಾಡದಿದ್ದರೆ, ಸರ್ಕಾರ ಒಕ್ಕೂಟಗಳನ್ನು ರಚನೆ ಮಾಡಿಯೂ ಏನು ಸಾರ್ಥಕವಾಗುತ್ತದೆ ? ಜಿಲ್ಲಾ ಪಂಚಾಯಿತಗಳ ಬೇರೆ ಬೇರೆ ಇಲಾಖೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತೀರಿ ಅದೇ ರೀತಿ, ಜಿಲ್ಲಾ ಪಂಚಾಯಿತಿಯ ಮುಖಾಂತರ ನೇರವಾಗಿ ಒಕ್ಕೂಟಕ್ಕೆ ಹಣವನ್ನು ಬಿಡುಗಡೆ ಮಾಡಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಿರಿ, ಅದನ್ನು ಏಕೆ ಮಾಡಬಾರದು? ಅದನ್ನು ಮಾಡಲು ನಿಮಗೆ ತೊಂದರೆಯೇನು ?

ಶ್ರೀ ಹೆಚ್ ಕೆ ಕುಮಾರಸ್ವಾಮಿ ಜಿಲ್ಲಾ ಪಂಚಾಯಿತಿಗಳು ಹಣವನ್ನು ಬಿಡುಗಡೆ ಮಾಡಿದರೂ ಅದು ಅಧಿಕಾರಿಗಳ ಮೂಲಕವೇ ಹೋಗತಕ್ಕಂಥಾದ್ದು ಎನ್ನುವುದು ತಮಗೆ ಗೊತ್ತಿದೆ ವಸ್ತುಸ್ಥಿತಿ ಏನು ಎನ್ನುವುದು ತಮಗೆ ಗೊತ್ತಿದೆ ಆದರೂ, ಕೂಡ ಹಣವನ್ನು ನೇರವಾಗಿ ಒಕ್ಕೂಡಗಳಿಗೆ ಬಿಡುಗಡೆ ಮಾಡಿ ಎಂದು ಹೇಳಿದ್ದಾರೆ ಅದನ್ನು ನಾನು ಸಮಾಲೋಚನೆ ಮಾಡುತ್ತೇನೆ ಅದು ಯುಕ್ತವಾಗಿ ಕಂಡುಬಂದರೆ ಮಾಡೋಣ

ಹೊಸದಾಗಿ ಮಂಜೂರಾದ ಅಂಗನವಾಡಿ ಕೇಂದ್ರಗಳು

149 (1026) **ಶ್ರೀ ವೆಂಕಟಮುನಿಯಪ್ಪ, ಬಿ ಪಿ (ಬೇತಮಂಗಲ)** –ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

1) 2006–07ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿಗೆ ಹೊಸದಾಗಿ ಮಂಜೂರಾದ ಅಂಗನವಾಡಿ ಕೇಂದ್ರಗಳೆಷ್ಟು ?

2) ಹೊಸ ಕೇಂದ್ರಗಳು ಮಂಜೂರಾಗಿದ್ದರೂ, ಈವರೆಗೂ ಈ ಕೇಂದ್ರಗಳನ್ನು ಪ್ರಾರಂಭಿಸದಿರಲು ಕಾರಣಗಳೇನು ?

3) ಅಂಗನವಾಡಿ ಸಹಾಯಕಿಯರ ನೇಮಕಾತಿಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಅವ್ಯವಹಾರದಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬಂದಿದ್ದಲ್ಲಿ, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡು ಕ್ರಮಗಳೇನು ?

5) ಈ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸದಿರಲು ಕಾರಣಗಳೇನು ?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) –

1) 15 (ಹದಿನೈದು)

2) ಈ ಹೊಸ ಕೇಂದ್ರಗಳನ್ನು ಪ್ರಾರಂಭಿಸಲು ದಿ 26–6–2007 ರಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ

3) ಇಲ್ಲ

4) ಅನ್ವಯಿಸುವುದಿಲ್ಲ

5) ಅನ್ವಯಿಸುವುದಿಲ್ಲ

ಶ್ರೀ ಬಿ ಪಿ ವೆಂಕಟಮುನಿಯಪ್ಪ - ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ 2005-06ನೇ ಸಾಲಿನಲ್ಲಿ 37 ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಸುತ್ತೋಲೆ ಹೊರಡಿಸಿದೆ ಇದಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆಯಿತ್ತು ತಡೆಯಾಜ್ಞೆ ತೆರವಾಗಿ 4-5 ತಿಂಗಳಾದರೂ ಕೂಡ ಇದುವರೆಗೂ ಅಲ್ಲಿರತಕ್ಕಂಥ ಸಿಡಿಪಿಓ ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲ 37 ಅಂಗನವಾಡಿ ಕೇಂದ್ರಗಳೆಂದು ಆಗಿದ್ದರೂ, 15 ಅಂಗನವಾಡಿ ಕೇಂದ್ರಗಳು ಮಾತ್ರ ಮಂಜೂರಾಗಿವೆ ಎಂದು ಮಾಹಿತಿಯನ್ನು ಕೊಟ್ಟಿದ್ದಾರೆ ಅಧಿಕಾರಿಗಳು ಸರ್ಕಾರಕ್ಕೆ ಕೊಟ್ಟಿರುವ ಈ ಮಾಹಿತಿ ತಪ್ಪಾಗಿದೆ 4-5 ತಿಂಗಳಾದರೂ ಅಲ್ಲಿರತಕ್ಕಂಥ ಅಧಿಕಾರಿ, ನೇಮಕಾತಿಗಾಗಿ ನಮ್ಮ ಜೊತೆ ಸಮಾಲೋಚನೆಯನ್ನೂ ಮಾಡಿಲ್ಲ ನೇಮಕಾತಿಯನ್ನೂ ಮಾಡಿಲ್ಲ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ತಕ್ಷಣ ಆ 37 ಕೇಂದ್ರಗಳಿಗೆ ಅನುಮತಿಯನ್ನು ಕೊಟ್ಟು ಅವುಗಳು ಪ್ರಾರಂಭ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕು ಮತ್ತು ಅಲ್ಲಿರತಕ್ಕಂಥ ಅಧಿಕಾರಿಯ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎನ್ನುತಕ್ಕಂಥಾದ್ದನ್ನು ತಮ್ಮ ಮೂಲಕ ಸಚಿವರನ್ನು ಕೇಳಲು ಇಷ್ಟಪಡುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ ನೇಮಕಾತಿಯ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಇವರ ತಾಲ್ಲೂಕಿನಲ್ಲಿ ಈಗಾಗಲೇ 375 ಅಂಗನವಾಡಿ ಕೇಂದ್ರಗಳಿವೆ ನಾವು ಅಂಗನವಾಡಿ ಕೇಂದ್ರಗಳನ್ನು ಕೊಡುವಾಗ ಕ್ಷೇತ್ರವಾರು ಕೊಡುವುದಿಲ್ಲ ತಾಲ್ಲೂಕುವಾರು, ಘಟಕವಾರು ಕೊಡುತ್ತಿದ್ದೇವೆ ಇವರ ಕ್ಷೇತ್ರಕ್ಕೆ 2005-06ನೇ ಸಾಲಿನಲ್ಲಿ 61 ಅಂಗನವಾಡಿ ಕೇಂದ್ರಗಳು ಮಂಜೂರಾಗಿವೆ ಇದರಲ್ಲಿ 14 ಅಂಗನವಾಡಿಗಳಿಗೆ ಈಗಾಗಲೇ ನೇಮಕಾತಿ ನಡೆದಿದೆ 47 ರಲ್ಲಿ ಖಾಲಿ ಇದೆ 2006-07ನೇ ಸಾಲಿನಲ್ಲಿ 15 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಿದ್ದೇವೆ ಈ 15 ಇನ್ನೂ ಆಯ್ಕೆಯಾಗಿಲ್ಲ ಮೊದಲು ಮಂಜೂರಾದಂಥ ಕೇಂದ್ರಗಳಿಗೆ ಇನ್ನೂ ಆಯ್ಕೆ ಪ್ರಕ್ರಿಯೆ ಪೂರ್ಣವಾಗಿಲ್ಲ ಕಾರಣವೆಂದರೆ, ಒಂದೊಂದು ಕ್ಷೇತ್ರಕ್ಕೆ ಒಬ್ಬೊಬ್ಬರು ಸಿಡಿಪಿಓಗಳು ಬರುತ್ತಾರೆ ಅಲ್ಲಿರುವ ಅಧಿಕಾರಿ ಸರಿಯಾಗಿ ಸ್ಪಂದಿಸಿಲ್ಲ ಎಂದು ಹೇಳಿದ್ದಾರೆ ಒಂದು ಬೇಸರದ ಸಂಗತಿಯೆಂದರೆ, ನಾವು ಆಯ್ಕೆ ಸಮಿತಿಯನ್ನು ಮಾಡಿ ಒಂದು ವರ್ಷವಾಯಿತು ಆಯ್ಕೆ ಸಮಿತಿಯನ್ನು ಮಾಡಿದ ನಂತರ ಸುಮಾರು ಮೂರು ತಿಂಗಳಲ್ಲಿ ಎಲ್ಲ ಪ್ರಕ್ರಿಯೆ ಮುಗಿಯಬೇಕು ಎಂದು ಹೇಳಿದ್ದೆವು ಈ ಬಗ್ಗೆ ಕೇಂದ್ರ ಸರ್ಕಾರ ಕೂಡ ಆಗಾಗ್ಗೆ ಆದೇಶ ಕೊಟ್ಟಿದೆ ಸುಪ್ರೀಂ ಕೋರ್ಟ್ ಸಹಾ, ಅಂಗನವಾಡಿ ಕೇಂದ್ರಗಳನ್ನು ಸ್ಥಾಪನೆ ಮಾಡುವಾಗ ಯಾವುದೇ ರೀತಿಯ ವಿಳಂಬ ಮಾಡಬಾರದು, ಬೇಗ ಮಾಡಬೇಕು ಎಂದು ಹೇಳಿದೆ 2006-07ರಲ್ಲಿ ಮಂಜೂರಾಗಿರತಕ್ಕಂಥ ಕೇಂದ್ರಗಳಿಗೆ ಸೆಪ್ಟೆಂಬರ್ 30ರೊಳಗೆ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಬೇಕು ಎಂದು ಹೇಳಿದೆ ನಮ್ಮ ರಾಜ್ಯದ್ದು ಇನ್ನೂ ಕೂಡ 2005-06ನೇ ಸಾಲಿನದ್ದೇ ಬಾಕಿ ಇದೆ 11,313 ಕೇಂದ್ರಗಳಲ್ಲಿ ನಾವು ನೇಮಕ

ಮಾಡಬೇಕಾಗಿದ್ದರೆ, ಇನ್ನೂ 3,632 ಕೇಂದ್ರಗಳ ನೇಮಕಾತಿ ಪ್ರಕ್ರಿಯೆ ಬಾಕಿ ಇದೆ ಶಾಸಕ ಮಿತ್ರರಲ್ಲಿ ನನ್ನ ಮನವಿ ಇಷ್ಟೇ, ನೇಮಕಾತಿಗೆ ಸಂಬಂಧಿಸಿದಂತೆ ತಮಗೆ ನಾಯಕತ್ವವನ್ನು ಕೊಟ್ಟಿರುವುದರಿಂದ, ಆದಷ್ಟು ಬೇಗ ಈ ಪ್ರಕ್ರಿಯೆಯನ್ನು ಈ ತಿಂಗಳಲ್ಲಿಯೇ ಮುಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ ಅದೇ ರೀತಿಯಲ್ಲಿ, ಮಾನ್ಯ ಸದಸ್ಯರು ಹೇಳಿರುವುದಕ್ಕೆ ಸಂಬಂಧಿಸಿದಂತೆ, ಆ ಅಧಿಕಾರಿಯನ್ನು ನಾನು ಕರೆಸುತ್ತೇನೆ ಕರೆಸಿ ತಕ್ಷಣದಲ್ಲೇ ನೇಮಕಾತಿಯನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿಸುತ್ತೇನೆ

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡರವರು ಮಾತನಾಡಲು ಅವಕಾಶವನ್ನು ಕೋರಿದರು)

ಅಧ್ಯಕ್ಷರು ಆಗುವುದಿಲ್ಲ, ಕುಳಿತುಕೊಳ್ಳಿ ಅದು ನಿಮ್ಮ ಪ್ರಶ್ನೆಯಲ್ಲ ನೀವು ಏಕೆ ನಿಂತಿದ್ದೀರಿ, ಕುಳಿತುಕೊಳ್ಳಿ

ಶ್ರೀ ಕೆ ವಿಶ್ವೇಶ್ವರ ಹೆಗಡೆ – ಅಧ್ಯಕ್ಷರೇ, ಅವರಿಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು ಗೌಡರೇ, ನೀವು ಕುಳಿತುಕೊಳ್ಳಿ, ನಾನು ಹೇಳುವುದನ್ನು ಕೇಳಿ ಅವರು ಎಷ್ಟು ಹೊತ್ತು ಪ್ರಶ್ನೆ ಕೇಳಿದರು ? ಇವರು ಎಷ್ಟು ಹೊತ್ತು ಉತ್ತರ ಹೇಳಿದರು ? ಆದರೆ ಕೆಲವೊಮ್ಮೆ ಏನಾಗುತ್ತದೆಂದರೆ, ಕೆಲವು ಮಂತ್ರಿಗಳು ವಿವರವಾಗಿ ಉತ್ತರ ಹೇಳುತ್ತಾರೆ, ಕೆಲವು ಸದಸ್ಯರು ವಿವರವಾಗಿ ಪ್ರಶ್ನೆಗಳನ್ನು ಕೇಳುತ್ತಾರೆ ಅಲ್ಲಿಗೇ ಪ್ರಶ್ನೋತ್ತರ ಕಾಲ ಮುಗಿದು ಹೋಗುತ್ತದೆ ಹೀಗಾದರೆ, ನಾವು ಮುಗಿಸುವುದು ಹೇಗೆ ?

ಶ್ರೀ ಕೆ ವಿಶ್ವೇಶ್ವರ ಹೆಗಡೆ – ಅವರು ಸಣ್ಣದಾಗಿ ಕೇಳುತ್ತಾರೆ

ಅಧ್ಯಕ್ಷರು ನಿಮ್ಮ ಪಕ್ಷದ ಸದಸ್ಯರ ಪರವಾಗಿ ನೀವೇನೋ ವಕೀಲಿ ಮಾಡುತ್ತೀರಿ, ಒಪ್ಪಿಕೊಳ್ಳುತ್ತೇನೆ ಆದರೆ, ನಾವು ಸದನವನ್ನು ನಡೆಸುವುದು ಹೇಗೆ ? ಆಯಿತು ಅದೇನು ಕೇಳುತ್ತೀರೋ ಕೇಳಿ

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ – ಈಗಾಗಲೇ ಮಾನ್ಯ ಮುನಿಯಪ್ಪನವರು ಹೇಳಿದ ಪ್ರಕಾರ ನಮ್ಮ ಧಾರವಾಡ ಜಿಲ್ಲೆಯಲ್ಲಿಯೂ ಆಗಿದೆ ಶಾಸಕರಿಗೆ ಆಯ್ಕೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ ಆದರೆ ಧಾರವಾಡ ಜಿಲ್ಲಾ ಪಂಚಾಯಿತಿಯ ಸದಸ್ಯರು, ನಾವು ಜಿಲ್ಲಾ ಪಂಚಾಯಿತಿಯ ವತಿಯಿಂದ ಕೋರ್ಟಿಗೆ ಹೋಗುತ್ತೇವೆಂದು ಹೇಳಿ ಕೋರ್ಟಿಗೆ ಹೋಗಿದ್ದಾರೆ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕು, ನವಲಗುಂದ ತಾಲ್ಲೂಕು, ಧಾರವಾಡ (ಗ್ರಾಮೀಣ)ಗಳಲ್ಲಿ ಈಗಾಗಲೇ ಆಯ್ಕೆ ಮಾಡಿ ಆದೇಶವನ್ನೂ ಕೊಟ್ಟಿದ್ದಾರೆ ನಾನು ಕಲಘಟಗಿ ಶಾಸಕನಾಗಿದ್ದು, ಕಲಘಟಗಿ ತಾಲ್ಲೂಕು, ಹುಬ್ಬಳ್ಳಿ ತಾಲ್ಲೂಕು ಎರಡು ನನ್ನ ಕ್ಷೇತ್ರಕ್ಕೇ ಬರುತ್ತವೆ ಕಲಘಟಗಿ ತಾಲ್ಲೂಕಿನದು ಇನ್ನೂ approval ಮಾಡಿಲ್ಲ ತಹಶೀಲ್ದಾರ್‌ರವರು ಅದಕ್ಕೆ permission ಕೊಟ್ಟಿದ್ದು, ಎಲ್ಲ 53

ಅಭ್ಯರ್ಥಿಗಳಿಗೂ ಆದೇಶ ಕೊಡಲಾಗಿದೆ ಹುಬ್ಬಳ್ಳಿ ತಾಲ್ಲೂಕಿನದು ನಾಲ್ಕು ದಿನ ಲೇಟ್ ಆಗಿದೆ ಅದು approval ಆಗಿ ಬಂದಿದೆ Approval ಆಗಿ ಬರುವ ಮೊದಲು ಸಿಡಿಪಿಓರವರು ಆದೇಶ ಕೊಡುವಾಗ ನಾಲ್ಕು ದಿನ ಲೇಟ್ ಮಾಡಿದರು ನಾಲ್ಕು ದಿನ ಲೇಟ್ ಮಾಡಿದ್ದಕ್ಕೆ ಕೋರ್ಟ್‌ನಿಂದ ಅದನ್ನು ತಡೆಹಿಡಿದಿದ್ದಾರೆ ಕೋರ್ಟ್‌ನಲ್ಲಿ ವಕೀಲರ ಮುಖಾಂತರ ಈಗಾಗಲೇ ಅದು ವೆಕೇಟ್ ಆಗಿದೆ ದಯಮಾಡಿ ಸಿಡಿಪಿಓ ಮುಖಾಂತರ ಆದೇಶವನ್ನು ಕೊಡಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ – ನೇಮಕಾತಿ ಪ್ರಕ್ರಿಯೆಗೆ ತಡೆಯಿದ್ದುದು ತೆರವುಗೊಂಡಿದೆ ಧಾರವಾಡ ಜಿಲ್ಲೆ ಪೂರ್ತಿ, ಶ್ರೀನಿವಾಸಪುರ ತಾಲ್ಲೂಕು, ಅರಸೀಕೆರೆ ತಾಲ್ಲೂಕುಗಳಲ್ಲಿ ಇನ್ನೂ ಕೂಡ ತೆರವಾಗಿಲ್ಲ ವೈಯಕ್ತಿಕವಾಗಿ ಕೆಲವು ಕಾರಣಗಳಿಗಾಗಿ ಕೋರ್ಟಿಗೆ ಹೋಗಿದ್ದರು ಮಾನ್ಯ ಸದಸ್ಯರು ಕೇಳುತ್ತಿರತಕ್ಕಂಥ ಜಿಲ್ಲೆಯಲ್ಲಿ ಇನ್ನೂ ಕೂಡ ತಡೆಯಾಜ್ಞೆಯನ್ನು ತೆರವುಗೊಳಿಸದೆ ಇರುವುದರಿಂದ ತಡವಾಗಿದೆ ನಾನು ಅಧಿಕಾರಿಗಳನ್ನು ಕರೆಸಿ ಈ ಬಗ್ಗೆ ಮಾತನಾಡುತ್ತೇನೆ

ಭೂಸಾರ ರಕ್ಷಣೆ ಹಾಗೂ ಜಲಸಂವರ್ಧನೆ

143 (650) **ಶ್ರೀ ಪಾಟೀಲ್ ಡಿ ಆರ್** (ಗದಗ) – ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಇರುವ ಒಟ್ಟು ಬರ ಸಂಭವನೀಯ ಪ್ರದೇಶ ಎಷ್ಟು?

(ಆ) ಇದು ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರದ ಎಷ್ಟರಷ್ಟಿದೆ ?

(ಇ) ಮಳೆ ಆಶ್ರಿತ ಕೃಷಿ ಪ್ರದೇಶದಲ್ಲಿ ಭೂಸಾರ ಸಂರಕ್ಷಣೆ ಹಾಗೂ ಜಲಸಂವರ್ಧನೆಗೆ ಎಷ್ಟು ಹಣ ನಿಗಧಿಯಾಗಿದೆ ?

(ಈ) ಇದು ರಾಜ್ಯದ ನೀರಾವರಿ ಯೋಜನೆಗಳ ಒಟ್ಟು ವೆಚ್ಚಕ್ಕೆ ಹೋಲಿಸಿದರೆ ಎಷ್ಟಾಗುವುದು ?

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು) –

(ಅ) 129 70 ಲಕ್ಷ ಹೆಕ್ಟೇರ್‌ಗಳು

(ಆ) ಶೇಕಡ 68 08

(ಇ) ಭೂಸಾರ ಮತ್ತು ಜಲ ಸಂರಕ್ಷಣೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2007–08ನೇ ಸಾಲಿಗಾಗಿ 4848115 ಲಕ್ಷ ರೂ ಗಳನ್ನು ಮೀಸಲಿಡಲಾಗಿದೆ

(ಈ) ಶೇಕಡ 11 32

ಶ್ರೀ ಡಿ ಆರ್ ಪಾಟೀಲ್ – Water and soil conservation activity ಯನ್ನು ನಮ್ಮ ರಾಜ್ಯದಲ್ಲಿ ಇನ್ನೂ ಎಷ್ಟು ಕ್ಷೇತ್ರಗಳಲ್ಲಿ ಅಳವಡಿಸಬೇಕಾಗಿದೆ

ಆ ಎಲ್ಲಾ ಕ್ಷೇತ್ರಗಳಲ್ಲಿ ಅಳವಡಿಸಬೇಕು ಎಂದು ಕಾರ್ಯಕ್ರಮವನ್ನು ತೆಗೆದುಕೊಂಡರೆ ಎಷ್ಟು ಹಣ ಬೇಕಾಗುತ್ತದೆ ? ಮುಂದಿನ ಮೂರು ವರ್ಷಗಳಲ್ಲಿ ಆ ಹಣಕಾಸನ್ನು ಒದಗಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡುವುದೇ ?

ಶ್ರೀ ಬಂಡೆಪ್ಪ ಕಾಶೆಂಪೂರ್ – ನಮ್ಮ ಕರ್ನಾಟಕ ರಾಜ್ಯದ ಭೌಗೋಳಿಕ ವಿಸ್ತರಣೆಯನ್ನು ತೆಗೆದುಕೊಂಡರೆ ಅದು 190 50 ಲಕ್ಷ ಹೆಕ್ಟೇರ್ ಇದೆ ಅದರಲ್ಲಿ ಜಲಾನಯನ ಅಭಿವೃದ್ಧಿ ಲಭ್ಯವಾಗಿರುವ ವಿಸ್ತರಣೆ ಸುಮಾರು 129 70 ಲಕ್ಷ ಹೆಕ್ಟೇರ್‌ಗಳು ಮಾರ್ಚ್ 2007ರ ಅಂತ್ಯದವರೆಗೆ ಅಭಿವೃದ್ಧಿ ಪಡಿಸಿದ ವಿಸ್ತರಣೆ 42 66 ಲಕ್ಷ ಹೆಕ್ಟೇರ್‌ಗಳು ಪ್ರತಿ ವರ್ಷ ನಾವು ವಾಟರ್ ಶೆಡ್‌ನಿಂದ ಸುಮಾರು 6 ಲಕ್ಷ ಹೆಕ್ಟೇರ್ ತೆಗೆದುಕೊಳ್ಳುತ್ತಿದ್ದೇವೆ ಮುಂದಿವ ದಿನಗಳಲ್ಲಿ ಎಷ್ಟು ಆಗಬೇಕಾಗಿದೆ ಎಂದು ತಾವು ಪ್ರಶ್ನೆ ಕೇಳಿದ್ದೀರಿ ವಾಟರ್ ಶೆಡ್ ಡಿಪಾರ್ಟ್‌ಮೆಂಟಿನಲ್ಲಿ 71 91 ಲಕ್ಷ ಹೆಕ್ಟೇರ್ ಇನ್ನೂ ಟ್ರೀಟ್‌ಮೆಂಟ್ ಆಗಬೇಕಾಗಿದೆ ವರ್ಷಕ್ಕೆ ನಾವು 6 ಲಕ್ಷ ಹೆಕ್ಟೇರ್‌ನಂತೆ ತೆಗೆದುಕೊಳ್ಳುತ್ತಿದ್ದರೆ, ನನಗೆ ಅನ್ನಿಸಿದ ಮಟ್ಟಿಗೆ, ಇದು ಮುಗಿಯಲು ಇನ್ನೂ ಸುಮಾರು 20 ವರ್ಷ ಬೇಕಾಗುತ್ತದೆ ವಾಟರ್ ಶೆಡ್ ಮುಖಾಂತರ ಬಹಳಷ್ಟು ಒಳ್ಳೆಯ ರಿಸಲ್ಟ್ ಬರುತ್ತಿದೆ ಅದರಲ್ಲಿ ವಿಶೇಷವಾಗಿ ಸುಜಲ ಯೋಜನೆಯ ಚಿತ್ರದುರ್ಗ, ಧಾರವಾಡ, ಹಾವೇರಿ, ಕೋಲಾರ ಮತ್ತು ತುಮಕೂರು ಈ ಐದು ಜಿಲ್ಲೆಗಳಲ್ಲಿ ನಡೆಯುತ್ತಿದ್ದು, ಅಲ್ಲಿ ಬಹಳ ಒಳ್ಳೆಯ progress report ಬರುತ್ತಿದೆ ಹಾಗಾಗಿ, ಮುಂದಿನ ದಿನಗಳಲ್ಲಿ ಇದೇ ಸುಜಲ pattern ನಲ್ಲಿ ಇನ್ನೂ ಐದು ಜಿಲ್ಲೆಗಳನ್ನು ತೆಗೆದುಕೊಳ್ಳಬೇಕೆಂದು ನಾವು ಈಗಾಗಲೇ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ ಮತ್ತು world Bank ನವರ ಜೊತೆಯಲ್ಲಿ preliminary discussion ಅನ್ನೂ ಮಾಡಿದ್ದೇವೆ 557 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಹಳೇ 5 ಜಿಲ್ಲೆಗಳನ್ನು ತೆಗೆದುಕೊಂಡಿರುವಂತೆಯೇ ಮುಂದಿನ ದಿನಗಳಲ್ಲಿ ಇದೇ ಮಾದರಿಯಲ್ಲಿ ಬೀದರ್, ಗುಲ್ಬರ್ಗಾ, ಕೊಪ್ಪಳ, ಗದಗ್ ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಸುಜಲ ಪ್ಯಾಟ್ರನ್‌ನಲ್ಲಿಯೇ ತೆಗೆದುಕೊಳ್ಳಬೇಕೆಂದು ಈಗಾಗಲೇ ಇದರ ಬಗ್ಗೆ ಬಹಳಷ್ಟು ಕೆಲಸವನ್ನು ಮಾಡುತ್ತಿದ್ದೇವೆ ಹಣ ಎಷ್ಟಾಗಬಹುದೆಂದು ತಾವು ಕೇಳಿದ್ದೀರಿ ಸುಜಲ ಪ್ಯಾಟ್ರನ್‌ನಲ್ಲಿ ಪರ್ ಹೆಕ್ಟೇರ್‌ಗೆ 11000 ರೂ ನಷ್ಟು ಖರ್ಚು ಮಾಡುತ್ತಿದ್ದೇವೆ ವಾಟರ್ ಶೆಡ್‌ನಲ್ಲಿ ಪರ್ ಹೆಕ್ಟೇರ್‌ಗೆ 6000 ರೂಪಾಯಿ ಖರ್ಚು ಮಾಡುತ್ತಿದ್ದೇವೆ 6000 ರೂಪಾಯಿ ಲೆಕ್ಕ ಹಾಕಿ 71 ಲಕ್ಷ ರೂಪಾಯಿಗಳಲ್ಲಿ ಇಡೀ ರಾಜ್ಯವನ್ನು ಕವರೇಜ್ ಮಾಡಿದ್ದರೆ

ಅಧ್ಯಕ್ಷರು –ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರೆ, ತಾವೇನು ಲೆಕ್ಚರ್ ಮಾಡುತ್ತಿದ್ದೀರಾ ಅಥವಾ ಪ್ರಶ್ನೆಗೆ ಉತ್ತರ ಹೇಳುತ್ತಿದ್ದೀರಾ ?

ಶ್ರೀ ಬಂಡೆಪ್ಪ ಕಾಶೆಂಪೂರ್ – ಮಾನ್ಯ ಸದಸ್ಯರು ಬಹಳ ಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ

ಅಧ್ಯಕ್ಷರು – ಈ ರೀತಿಯಾದರೆ ಆಗುವುದಿಲ್ಲ

ಶ್ರೀ ಬಂಡೆಪ್ಪ ಕಾಶೆಂಪೂರ್ – ಮಾನ್ಯ ಅಧ್ಯಕ್ಷರೆ, ಬೇಗ ಮುಗಿಸುತ್ತೇನೆ ಸುಮಾರು 4320 ಕೋಟಿ ರೂಪಾಯಿ ಬೇಕಾಗುತ್ತದೆ ಸುಜಲ ಪ್ಯಾಟ್ರನ್‌ನಲ್ಲಿ 10 ರಿಂದ 11 ಸಾವಿರ ರೂಪಾಯಿಗಳಿದ್ದರೆ 7200 ಕೋಟಿ ರೂಪಾಯಿ ಬೇಕಾಗುತ್ತದೆ

ಶ್ರೀ ಡಿ ಆರ್ ಪಾಟೀಲ್ – ನೀರಾವರಿ ಕ್ಷೇತ್ರಕ್ಕೆ ಸರ್ಕಾರ ಈವರೆಗೆ ಸಾಕಷ್ಟು ಆದ್ಯತೆಯನ್ನು ಕೊಡುತ್ತಾ ಬಂದಿದೆ ಒಂದು ಹೆಕ್ಟೇರ್ ನೀರಾವರಿ ಕ್ಷೇತ್ರವನ್ನು ನಾವು ತಯಾರು ಮಾಡಬೇಕಾದರೆ ಸುಮಾರು 1 ರಿಂದ 15 ಲಕ್ಷ ರೂಪಾಯಿ ಬೇಕಾಗುತ್ತದೆ ಆದರೆ, ಇಲ್ಲಿ ಒಂದು ಹೆಕ್ಟೇರ್‌ಗೆ ತಾವು 11 ಸಾವಿರ ರೂಪಾಯಿಗಳೆಂದು ಹೇಳಿದ್ದೀರಿ ಈ ಸರ್ಕಾರ ನೀರಾವರಿಗೆ ಏನು ಆದ್ಯತೆ ಕೊಡುತ್ತಿದೆಯೋ, ಅಷ್ಟೆ ಆದ್ಯತೆಯನ್ನು ಬರ ಪೀಡಿತ ಪ್ರದೇಶಗಳಲ್ಲಿ ನೀರು, ಮಣ್ಣು ಸಂರಕ್ಷಣೆಯ ಸಲುವಾಗಿ ಕೊಡುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆಯೇ ಅಥವಾ ಇಲ್ಲವೇ ? ಒಂದು ವೇಳೆ ನೀವು ಹಾಗೇನಾದರೂ ಮನಸ್ಸು ಮಾಡಿದರೆ ಮುಂದಿನ ಮೂರು ವರ್ಷಗಳಲ್ಲಿ 72 ಲಕ್ಷ ಹೆಕ್ಟೇರ್ ಪ್ರದೇಶ ಟ್ರೀಟ್‌ಮೆಂಟ್ ಆಗುತ್ತದೆ ಇದರಿಂದ ಬಹಳಷ್ಟು ಕೃಷಿಕರು ಬದುಕುತ್ತಾರೆ ಮತ್ತೆ ನಮ್ಮ ರಾಜ್ಯದ ಉತ್ಪಾದನೆ ಕೂಡ ಹೆಚ್ಚಾಗುತ್ತದೆ ಆದ್ದರಿಂದ, ನೀರಾವರಿಗೆ ಕೊಟ್ಟಷ್ಟೇ ಆದ್ಯತೆಯನ್ನು ಅದಕ್ಕೂ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ

ಶ್ರೀ ಬಸವರಾಜ್ ಎಸ್ ರಾಯರೆಡ್ಡಿ – ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನನಗೆ ಅವಕಾಶ ಕೊಡಿ

ಅಧ್ಯಕ್ಷರು – ನಾನು ನಿಮಗೆ ಅವಕಾಶ ಕೊಟ್ಟಿಲ್ಲ ದಯಮಾಡಿ ಕುಳಿತುಕೊಳ್ಳಿ ಈಗಾಗಲೇ ಇದರ ಬಗ್ಗೆ ಅವರು ಲಕ್ಚರ್ ಮಾಡಿದ್ದಾರೆ

ಶ್ರೀ ಬಸವರಾಜ್ ಎಸ್ ರಾಯರೆಡ್ಡಿ – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇದರ ಬಗ್ಗೆ ಉತ್ತರದಲ್ಲಿ ಹೇಳಿದ್ದಾರೆ ಇವತ್ತಿನ ದಿವಸ ಕರ್ನಾಟಕದಲ್ಲಿ 68% of the land ಬರ ಸಂಭವನೀಯ ಪ್ರದೇಶದಿಂದ ಕೂಡಿದೆ ಎಂದು ಹೇಳಿರತಕ್ಕಂಥದು ಸರಿಯಾಗಿದೆ ನಮ್ಮ ರಾಷ್ಟ್ರದಲ್ಲಿ ರಾಜಸ್ಥಾನ ಬಿಟ್ಟರೆ ನಂತರ ನಾವೇ ಇದ್ದೇವೆ

ಅಧ್ಯಕ್ಷರು – ಈಗ ರಾಜಸ್ಥಾನ ಇಲ್ಲವೆಂದು ಮತ್ತು ನಮ್ಮದೇ ಮೊದಲು ಎಂದು ಮಾತನಾಡುವಂಥ ಸಂದರ್ಭದಲ್ಲಿ ಹೇಳಿದರು

ಶ್ರೀ ಬಸವರಾಜ್ ಎಸ್ ರಾಯರೆಡ್ಡಿ – ಮಾನ್ಯ ಅಧ್ಯಕ್ಷರೆ, ರಾಜಸ್ಥಾನ ಬಿಟ್ಟರೆ ನಂತರ ನಾವೇ ಇದ್ದೇವೆ ಈಗ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ ಅದೇನೆಂದರೆ, Desert Development Programme ನಲ್ಲಿ ನಮ್ಮ ರಾಜ್ಯದ ಕೆಲವೇ ಕೆಲವು ತಾಲ್ಲೂಕುಗಳಿಗೆ ಸ್ವಲ್ಪ ಹಣ ಬರುತ್ತಿದೆ ಆದರೆ, ಇದರ

ಬಗ್ಗೆ ತಾವು ಇದರಲ್ಲಿ ಏನು ಹೇಳಿಲ್ಲ ಏಕೆಂದರೆ, Government of India is giving some money under Desert Development Programme ಆದ್ದರಿಂದ, ಅಧ್ಯಕ್ಷರ ಮುಖಾಂತರ ಹೇಳುವುದೇನೆಂದರೆ, ತಾವು ಕೇಂದ್ರ ಸರ್ಕಾರವನ್ನು ಅಪ್ರೋಚ್ ಮಾಡಿ ಅಂದರೆ, ರಾಜಸ್ಥಾನದ ತರುವಾಯ ಅತ್ಯಂತ ಹೆಚ್ಚಿನ ಬರ ಪೀಡಿತ ಪ್ರದೇಶ ಕರ್ನಾಟಕ ರಾಜ್ಯದಲ್ಲಿದೆ ಎಂದು ತಾವು ಮನವರಿಕೆ ಮಾಡಿಕೊಟ್ಟು, Desert Development Programme ನಲ್ಲಿ ಹೆಚ್ಚು ಹಣವನ್ನು ಕೊಡಬೇಕೆಂದು ಕೇಳಬೇಕು ಮತ್ತೆ ತಾವು ಇದಕ್ಕೆ ಮ್ಯಾಚಿಂಗ್ ಗ್ರಾಂಟ್‌ನ್ನು ಕೊಡಬೇಕಾಗುತ್ತದೆ ಈ ರೀತಿಯಾಗಿ ತಾವು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಬಂಡೆಪ್ಪ ಕಾಶೆಂಪೂರ್ – ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ ಆರ್ ಪಾಟೀಲ್‌ರವರು ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇನ್ನೂ 5 ಜಿಲ್ಲೆಗಳನ್ನು ಈ ಒಂದು ಸುಜಲ ಪ್ಯಾಟ್ರನ್‌ನಲ್ಲಿ ತೆಗೆದುಕೊಳ್ಳುತ್ತೇವೆಂದು ಮೊಟ್ಟ ಮೊದಲ ಬಾರಿಗೆ ಇವತ್ತು ಹೇಳುತ್ತಿದ್ದೇನೆ ಮುಂದಿನ ದಿನಗಳಲ್ಲಿ ವಾಟರ್‌ಶೆಡ್ ಆಕ್ಟಿವಿಟೀಸ್‌ಗೆ ಹೆಚ್ಚಿನ ಆದ್ಯತೆಯನ್ನು ನಮ್ಮ ಸರ್ಕಾರ ಕೊಡುತ್ತದೆಂದು ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕೆ ಬಯಸುತ್ತೇನೆ ಮತ್ತೆ ಹಿರಿಯ ಸದಸ್ಯರಾದ ಶ್ರೀ ರಾಯರೆಡ್ಡಿಯವರು ಹೇಳಿದ ಹಾಗೆ ಸಮಗ್ರ ಬಂಜರು ಭೂಮಿಯ ಅಭಿವೃದ್ಧಿಗೆ ಈ ವರ್ಷ ಕೇಂದ್ರ ಸರ್ಕಾರ 58 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಇದಕ್ಕೆ ನಮ್ಮ ಕಡೆಯಿಂದ ಮ್ಯಾಚಿಂಗ್ ಗ್ರಾಂಟ್ 4 ಕೋಟಿ ರೂಪಾಯಿ ನೀಡಲಾಗಿದೆ ಇದರಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡು ಬರುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ

ಅಂಗನವಾಡಿ ಕಟ್ಟಡಗಳಿಗೆ ಅನುದಾನ

145 (649) **ಶ್ರೀ ಸಿದ್ದು ಸಾವದಿ** (ಜಮಖಂಡಿ) –ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(1) ಜಮಖಂಡಿ ತಾಲ್ಲೂಕಿನಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು? ಮತ್ತು ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇವೆ?

(2) ಉಳಿದ ಕೇಂದ್ರಗಳು ಯಾವಯಾವ ಸ್ಥಳಗಳಲ್ಲಿ ನಡೆಸಲಾಗುತ್ತಿದೆ? ಆ ಕಟ್ಟಡಗಳ ಸ್ಥಿತಿಗತಿಗಳೇನು? ಹಳೆಯ ಕಟ್ಟಡವಾಗಿದ್ದು, ಮಳೆಯಿಂದ ಅನಾಹುತವಾದರೆ ತೊಂದರೆಯಾಗುವುದಿಲ್ಲವೆ?

(3) ಈ ಕಟ್ಟಡಗಳಿಲ್ಲದ ಕೇಂದ್ರಗಳಿಗೆ ಯಾವಾಗ ಕಟ್ಟಡಗಳನ್ನು ಮಂಜೂರಾತಿ ನೀಡಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) –

(1) ಜಮಖಂಡಿ ತಾಲ್ಲೂಕಿನಲ್ಲಿ 437 ಅಂಗವವಾಡಿ ಕೇಂದ್ರಗಳಿದ್ದು 175 ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ

(2) ಉಳಿದ ಕೇಂದ್ರಗಳು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ

ಪಂಚಾಯತ್ ಕಟ್ಟಡ	27
ಸಮುದಾಯ ಭವನ	41
ದೇವಸ್ಥಾನ	92
ಶಾಲಾ ಕಟ್ಟಡ	16
ತಾತ್ಕಾಲಿಕ ವ್ಯವಸ್ಥೆ	39
ಬಾಡಿಗೆ ಕಟ್ಟಡ	47

ದೇವಸ್ಥಾನ ಹಾಗೂ ತಾತ್ಕಾಲಿಕ ವ್ಯವಸ್ಥೆ ಮಾಡಿರುವ ಕಟ್ಟಡಗಳ ಸ್ಥಿತಿ ಸಾಧಾರಣವಾಗಿದೆ 25 ಹಳೆಯ ಕಟ್ಟಡಗಳ ದುರಸ್ತಿ ಆಗಬೇಕಿದೆ ಹೆಚ್ಚಿನ ಮಳೆಯಾದರೆ ಅನಾಹುತವಾಗುವ ಸಂಭವವಿರುವುದನ್ನು ಗಮನಿಸಿ, 13 ಕಟ್ಟಡಗಳ ನಿರ್ಮಾಣ ವಿವಿಧ ಯೋಜನೆಗಳಡಿ ಪ್ರಗತಿಯಲ್ಲಿದೆ 2007–08ನೇ ಸಾಲಿನ ಇಲಾಖಾ ಅನುದಾನದಿಂದ 9 ಕಟ್ಟಡಗಳನ್ನು ನಿರ್ಮಿಸುವ ಗುರಿ ಹೊಂದಿದೆ ನಬಾರ್ಡ್‌ವತಿಯಿಂದ 02 ಕಟ್ಟಡ ನಿರ್ಮಿಸಲಾಗುವುದು

(3) ಅನುದಾನ ಮತ್ತು ನಿವೇಶನ ಲಭ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗುವುದು

ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ನಮ್ಮ ತಾಲ್ಲೂಕಿನಲ್ಲಿ 437 ಅಂಗನವಾಡಿ ಕೇಂದ್ರಗಳಿವೆ ಇವುಗಳಲ್ಲಿ ಕೇವಲ 175 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ ಹಸುಗೂಸಿನ ಮತ್ತು ಏನು ಅರಿಯದಂಥ ಅನೇಕ ಮಕ್ಕಳಿಗೆ ಇವತ್ತಿನ ದಿವಸ ಅನಾಹುತಕ್ಕೆ ಒಳಗಾಗುವ ಮಂದಿರಗಳಲ್ಲಿ ಮತ್ತು ಬೇರೆ ಬೇರೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸುತ್ತಿದ್ದು, ಈ ಕಟ್ಟಡಗಳು ಯಾವಾಗ ಅನಾಹುತವಾಗುತ್ತದೆಂಬ ಭಯದ ಸ್ಥಿತಿ ಇದೆ ಆದ್ದರಿಂದ, ಎಲ್ಲಾ ಕಟ್ಟಡಗಳನ್ನು ಆದಷ್ಟು ಬೇಗನೆ ಕಟ್ಟಿಸಿ ಕೊಡುವುದಕ್ಕೆ ಮೊದಲನೇ ಆದ್ಯತೆ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ ಈಗಿನ ಮಂದಗತಿಯ ಪ್ರಗತಿಯನ್ನು ನೋಡಿದಾಗ ಈ ವರ್ಷ 9 ಕಟ್ಟಡಗಳನ್ನು ತೆಗೆದುಕೊಳ್ಳಬಹುದೆಂದು ಉತ್ತರವನ್ನು ಕೊಟ್ಟಿದ್ದೀರಿ ಒಂದು ವರ್ಷಕ್ಕೆ ಕೇವಲ 9 ಕಟ್ಟಡಗಳನ್ನು ಕಟ್ಟುತ್ತಾ ಹೋದರೆ ನಮಗೆ ಬೇಕಾಗಿರತಕ್ಕಂಥ ಎಲ್ಲ ಕಟ್ಟಡಗಳು ಪೂರ್ಣವಾಗುವುದಕ್ಕೆ

ಸುಮಾರು 25 ರಿಂದ 30 ವರ್ಷಗಳಾಗುತ್ತವೆ ಪ್ರಾಥಮಿಕ ಶಾಲೆಗಳಲ್ಲಿ ಸರ್ವಶಿಕ್ಷಣ ಅಭಿಯಾನ ಯೋಜನೆ ತಂದ ಹಾಗೆ ಇಲ್ಲಿಗೂ ಒಂದು ಯೋಜನೆ ತಂದು ಆದಷ್ಟು ಬೇಗನೆ ಅಂಗನವಾಡಿಗೂ ಆದ್ಯತೆ ಕೊಟ್ಟು ಎಲ್ಲಾ ಕಡೆ ಸುಭದ್ರವಾದ ಕಟ್ಟಗಳನ್ನು ನಿರ್ಮಾಣ ಮಾಡಿಸಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ – ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ಅವರ ತಾಲ್ಲೂಕಿನಲ್ಲಿ 437 ಅಂಗನವಾಡಿ ಕೇಂದ್ರಗಳಿವೆ ಇದರಲ್ಲಿ 175 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ ಅವರು ಹೇಳಿದ ಹಾಗೆ ರಾಜ್ಯದಲ್ಲಿ ಈ ಯೋಜನೆ ಪ್ರಾರಂಭವಾಗಿ 32 ವರ್ಷಗಳಾಗಿವೆ ಇಲ್ಲಿಯ ತನಕ 51,313 ಅಂಗನವಾಡಿ ಕೇಂದ್ರಗಳಿದ್ದು, ಇದರಲ್ಲಿ 29,000 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ ತಮಗೆ ಗೊತ್ತಿರುವ ಹಾಗೆ ಇದರಲ್ಲಿಯೂ ಕೂಡ ಅರ್ಧದಷ್ಟು ಹಳೆಯ ಕಟ್ಟಡಗಳಿದ್ದು, ಇವುಗಳು ಯಾವಾಗ ಬೇಕಾದರೂ ಬೀಳಬಹುದು ಅಥವಾ ದುರಸ್ತಿಗೆ ಬರಬಹುದಾದಂಥ ಸ್ಥಿತಿಯಲ್ಲಿವೆ ಈ ಒಂದು ನಿಟ್ಟಿನಲ್ಲಿ ಈ ವರ್ಷ ಸರ್ಕಾರಿ ಅನುದಾನದಲ್ಲಿ ಸುಮಾರು 5 72 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 1,149 ಕಟ್ಟಡಗಳನ್ನು ಕಟ್ಟಬೇಕೆಂದು ನಾವು ಉದ್ದೇಶ ಹೊಂದಿದ್ದೇವೆ ಇದರಲ್ಲಿ ಮಾನ್ಯ ಸದಸ್ಯರ ಕ್ಷೇತ್ರಕ್ಕೆ 9 ಕೊಟ್ಟಿದ್ದೇವೆ ಒಂದು ಕಟ್ಟಡದ ಯೂನಿಟ್ ಕಾಸ್ಟ್ 50 ಸಾವಿರ ರೂಪಾಯಿ ಮಾತ್ರ, ಉಳಿದ ಹಣವನ್ನು ಮಾನ್ಯ ಶಾಸಕರ ಅಥವಾ ಮಾನ್ಯ ಸಂಸತ್ ಸದಸ್ಯರ ಫಂಡ್‌ನಿಂದ ಮತ್ತು ಅಲ್ಲಿನ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅನುದಾನದಲ್ಲಿ ತೆಗೆದುಕೊಳ್ಳಬೇಕೆಂಬ ಉದ್ದೇಶ ಇದೆ ಇದು ಅಲ್ಲದೆ 2006–07ನೇ ಸಾಲಿನಲ್ಲಿ ನಬಾರ್ಡ್‌ನ ಧನ ಸಹಾಯದಿಂದ ಸುಮಾರು 692 ಕಟ್ಟಡಗಳನ್ನು ಮಂಜೂರು ಮಾಡಲಾಗಿದೆ ಇದರ ವೆಚ್ಚ 9 80 ಕೋಟಿ ರೂಪಾಯಿಗಳಾಗಿವೆ ಈ ವರ್ಷ 8 ಕೋಟಿ ರೂಪಾಯಿಗಳ ಅಂದಾಜಿನಲ್ಲಿ 609 ಕಟ್ಟಡಗಳನ್ನು ಕಟ್ಟಬೇಕೆಂದು ಆಲೋಚನೆ ಇದೆ ಪ್ರತಿಯೊಂದು ಕಟ್ಟಡದ ಯೂನಿಟ್ ಕಾಸ್ಟ್ 2 5 ಕೋಟಿ ರೂಪಾಯಿಗಳಾಗುತ್ತದೆ ಈಗ ವಿವಿಧ ಹಂತದಲ್ಲಿರತಕ್ಕಂಥ ಕೆಲಸಗಳನ್ನು ಒಂದು ಪ್ಯಾಕೇಜ್ ರೂಪದಲ್ಲಿ ಮಾಡುವ ಬಗ್ಗೆ ನಬಾರ್ಡ್ ಸಂಸ್ಥೆಯ ಜೊತೆಗೆ ಮಾತನಾಡಿ, ನಮಗೆ ಇನ್ನೂ ಬೇಕಾಗಿರತಕ್ಕಂಥ ಸುಮಾರು 15,000 ಕ್ಕಿಂಥ ಹೆಚ್ಚು ಕಟ್ಟಡಗಳನ್ನು ಒಂದೇ ಸಾರಿ ಕಟ್ಟುವುದರ ಬಗ್ಗೆ ಅವರ ಜೊತೆ ಮಾತನಾಡಿ ಅನುದಾನ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಅವರ ಕ್ಷೇತ್ರಕ್ಕೂ ಕೂಡ ಹೆಚ್ಚಿನ ಗಮನ ಹರಿಸಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಸಿದ್ದು ಸಾವದಿ (ಜಮಖಂಡಿ) – ಹಣಕಾಸಿನ ವ್ಯವಸ್ಥೆಗೆ ತಾವು ಕೇಂದ್ರ ಅಥವಾ ರಾಜ್ಯ ಸರ್ಕಾರದ ಮೇಲೆ ಒತ್ತಡ ಮಾಡಿ ಚಿಕ್ಕ ಮಕ್ಕಳು ಕಲಿಯುವಂಥ

ಕಟ್ಟಡಗಳ ನಿರ್ಮಾಣಕ್ಕೆ ಮೊದಲನೇ ಆದ್ಯತೆಯನ್ನು ಕೊಟ್ಟು ಅವುಗಳ ದುರಸ್ತಿ ಅಥವಾ ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಯಾವುದಾದರೊಂದು ಯೋಜನೆಯ ರೀತಿಯಲ್ಲಿ ಪ್ಯಾಕೇಜ್ ತರಬೇಕೆಂದು ಮತ್ತೊಮ್ಮೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಕೆ ಕುಮಾರಸ್ವಾಮಿ – ಈ ಯೋಜನೆ ಪ್ರಾರಂಭವಾದಾಗಿನಿಂದ ಪ್ರತಿ ವರ್ಷ ಸ್ವಲ್ಪ ಕಟ್ಟಡಗಳನ್ನು ಕಟ್ಟಿಕೊಂಡು ಬಂದಿದ್ದರೆ ಈ ಸಮಸ್ಯೆ ಮುಗಿದು ಹೋಗುತ್ತಿತ್ತು ಮಧ್ಯದಲ್ಲಿ ಈ ಕೆಲಸಗಳನ್ನು ಮಾಡದೇ ಇರುವುದರಿಂದ ಇದರ ಹೊರೆ ನಮ್ಮ ಮೇಲೆ ಹೆಚ್ಚು ಬಿದ್ದಿದೆ ಈಗ ನಮ್ಮ ಮೇಲಿರತಕ್ಕಂಥ ಹೊರೆಗೆ ತಕ್ಕಂತೆ ಅನುದಾನವನ್ನು ಒದಗಿಸಿಕೊಂಡು ಆ ಕೆಲಸವನ್ನು ಮಾಡುತ್ತೇವೆ

ಪಂಚಾಯಿತಿವಾರು ಪಡಿತರ ರದ್ದುಗೊಳಿಸುವುದು

146 (643) **ಶ್ರೀ ಗೋಪಾಲ ಪೂಜಾರಿ ಕೆ** (ಬೈಂದೂರು) –ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಉಡುಪಿ ಜಿಲ್ಲೆ ಬೈಂದೂರು ಕ್ಷೇತ್ರದಲ್ಲಿ ಪಂಚಾಯಿತಿವಾರು ಪಡಿತರ ಚೀಟಿ ಯಾವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ , (ವಿವರಗಳನ್ನು ನೀಡುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) –

(ಅ) ಉಡುಪಿ ಜಿಲ್ಲೆ ಬೈಂದೂರು ಕ್ಷೇತ್ರ ವ್ಯಾಪ್ತಿಯ 30 ಗ್ರಾಮ ಪಂಚಾಯತ್‌ಗಳ ಒಟ್ಟು 1826 ಬಿಪಿಎಲ್ ಪಡಿತರ ಕೂಪನ್‌ಗಳನ್ನು ರದ್ದುಪಡಿಸಲಾಗಿದೆ

ಸರಕಾರ ನಿಗದಿಪಡಿಸಿದ ಮಾನದಂಡಗಳನ್ವಯ ಪರಿಶೀಲನೆ ನಡೆಸಿ ಸರಕಾರ ನಿಗದಿಪಡಿಸಿದ ಆದಾಯಕ್ಕಿಂತ ಜಾಸ್ತಿ ಆದಾಯ ಇರುವ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ

ಶ್ರೀ ಗೋಪಾಲ ಪೂಜಾರಿ ಕೆ – ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ನನ್ನ ಕ್ಷೇತ್ರದಲ್ಲಿ 1826 ಪಡಿತರ ಕೂಪನ್‌ಗಳನ್ನು ರದ್ದು ಮಾಡಿದ್ದಾರೆ ಈ ಸದನದಲ್ಲಿ ಪಡಿತರ ಚೀಟಿಯು ವ್ಯವಹಾರದ ಬಗ್ಗೆ ಹಿಂದೆ ಬಹಳಷ್ಟು ಚರ್ಚೆಯಾಗಿತ್ತು ಆ ಸಂದರ್ಭದಲ್ಲೆ ಪುನರ್ ಸಮೀಕ್ಷೆಗೆ ಆದೇಶವಾಗಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಮತ್ತು ವಿಲೇಜ್ ಅಕೌಂಟೆಂಟ್ ಹಾಗೂ ಗ್ರಾಮ ಸದಸ್ಯರುಗಳು ಒಟ್ಟಿಗೆ ಹೋಗಿ ಸಮೀಕ್ಷೆ ಮಾಡಿದ್ದರು ಸಮಿಕ್ಷೆ ಮಾಡಿ ಬಿಪಿಎಲ್ ಲಿಸ್ಟ್ ಆದಮೇಲೆ ಪಡಿತರ ಕೂಪನ್ ಅನ್ನು ವಿತರಣೆ ಮಾಡುವಂಥ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ್

ಕಟ್ಟಡದ ಒಳಗೆ ಕುಳಿತು ರದ್ದು ಮಾಡತಕ್ಕಂಥ ವ್ಯವಸ್ಥೆಯಾಗಿದೆ ನನ್ನ ಕ್ಷೇತ್ರದಲ್ಲಿ ಸುಮಾರು 2000 ಕಾರ್ಡ್‌ಗಳನ್ನು ರದ್ದು ಮಾಡಿದ್ದಾರೆ ಅತೀ ಕಡುಬಡವರು ಮತ್ತು ಮೀನುಗಾರರು ಇವತ್ತಿನ ದಿವಸ ಪಡಿತರ ಚೀಟಿಯನ್ನು ನಂಬಿಕೊಂಡು ಜೀವನ ಸಾಗಿಸುವಂಥ ಸ್ಥಿತಿ ಇದೆ ಗ್ರಾಮ ಪಂಚಾಯತಿಯ ಗಮನಕ್ಕೆ ತರದೆ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಾಲ್ಲೂಕು ಪಂಚಾಯತ್ ಕಟ್ಟಡದಲ್ಲಿ ಕುಳಿತು ರದ್ದು ಮಾಡತಕ್ಕಂಥ ಪರಿಸ್ಥಿತಿ ನನ್ನ ತಾಲ್ಲೂಕಿನಲ್ಲಿ ಉದ್ಭವವಾಗಿದೆ ಇದನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ? ಈ ರೀತಿ ಮಾಡಿರತಕ್ಕಂಥದು ತಪ್ಪು, ಕಾನೂನಿನ ಅಡಿಯಲ್ಲಿ ಇದನ್ನು ಮಾಡಲಾಗಿದೆಯೇ ?

ಶ್ರೀ ಗೋವಿಂದ ಎಂ ಕಾರಜೋಳ – ಸನ್ಮಾನ್ಯ ಸಭಾಧ್ಯಕ್ಷರೆ, ತಾಲ್ಲೂಕು ಪಂಚಾಯತ್ ಕಟ್ಟಡಗಳಲ್ಲಿ ಕುಳಿತು ರದ್ದು ಮಾಡಿದ್ದರೆ ಅದು ತಪ್ಪಾಗುತ್ತದೆ ಮನೆ ಮನೆಗೆ ಹೋಗಿ ಸಮೀಕ್ಷೆ ಮಾಡಿ ಮಾಡಬೇಕೆಂದು ಸರ್ಕಾರದ ಆದೇಶ ಇದೆ ಈಗಾಗಲೇ ಯಾರ ಆದಾಯ ಹೆಚ್ಚಿದೆ, ಅಂತಹವರ ಪಡಿತರ ಚೀಟಿಯನ್ನು ಮಾತ್ರ ರದ್ದು ಮಾಡಿದ್ದಾರೆ ಯಾರಿಗಾದರೂ ಅನ್ಯಾಯವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರೆ, ವಿಶೇಷವಾಗಿ ಮತ್ತೊಂದು ಸಲ ಸರ್ವೆ ಮಾಡಿಸಿ ಕೊಡುವಂಥ ವ್ಯವಸ್ಥೆ ಮಾಡುತ್ತೇನೆ

ಶ್ರೀ ಕೆ ಗೋಪಾಲ ಪೂಜಾರಿ – 75% coupon ಕೊಡತಕ್ಕಂಥ ವ್ಯವಸ್ಥೆ ಮಾಡಲಾಗುವುದೆಂದು ಮಾನ್ಯ ಸಚಿವರು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ ನಮ್ಮ ಕ್ಷೇತ್ರ ಅತಿ ಕಡುಬಡವರು ಇರುವಂಥ ಪ್ರದೇಶದಲ್ಲಿ ಇದ್ದು, ಯಾರ ಗಮನಕ್ಕೂ ಬಾರದೆ ಸಾರಾಸಗಟಾಗಿ 2000 ಕಾರ್ಡ್‌ಗಳನ್ನು ತೆಗೆದುಹಾಕಿದ್ದಾರೆ ಆ ಜನರಿಗೆ ಉತ್ತರ ಯಾರು ಕೊಡಬೇಕು

ಅಧ್ಯಕ್ಷರು – ಪೂಜಾರಿಯವರೆ, ನಿಮ್ಮ ಕ್ಷೇತ್ರದಲ್ಲಿ ಮಾತ್ರವಲ್ಲ ಎಲ್ಲಾ ಕ್ಷೇತ್ರದಲ್ಲೂ ಅದೇ ರೀತಿ ಆಗಿದೆ ಸರಿಯಾದ ರೀತಿಯಲ್ಲಿ ವಿತರಣೆ ಆಗಿಲ್ಲ

ಶ್ರೀ ಗೋವಿಂದ ಎಂ ಕಾರಜೋಳ – ಮಾನ್ಯ ಸದಸ್ಯರು ದಯವಿಟ್ಟು ಗಮನಿಸಬೇಕು 75% ಕಾರ್ಡ್ ಕೊಡುತ್ತೇವೆಂದು ನಾವು ಎಲ್ಲಿಯೂ ಹೇಳಲಿಲ್ಲ ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು 75% ಈ ರಾಜ್ಯದಲ್ಲಿ BPL ಗೆ ಸದಸ್ಯರಿದ್ದಾರೆಯೇ, families ಇದ್ದಾರೆಯೇ ? ಅದು ಸಾಧ್ಯವಿಲ್ಲ BPL card ಪಡೆಯಲಿಕ್ಕೆ ನಿಜವಾಗಿಯೂ ಯಾರು ಅರ್ಹರಿದ್ದಾರೆ, ಅವರಿಗೆ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ

ಶ್ರೀ ಕೆ ಗೋಪಾಲ ಪೂಜಾರಿ – ಹಿಂದೆ BPL card ಕೊಟ್ಟಿದ್ದರು ಹಿಂದೆ BPL ಸಮೀಕ್ಷೆಯಲ್ಲಿ, BPL list ನಲ್ಲಿ ಸೇರಿದೆ ಸಾರಾ ಸಗಟಾಗಿ ಯಾವುದೇ ಸಮೀಕ್ಷೆಗೆ ಹೋಗದೆ, ಅದು ಗ್ರಾಮ ಪಂಚಾಯತ್ ಗಮನಕ್ಕೆ ಹೋಗದೇ ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿ ಅದನ್ನು ತೆಗೆದುಹಾಕಿದ್ದರಿಂದ ಪುನರ್ ಸಮೀಕ್ಷೆ ಮಾಡಬೇಕು

ಅಧ್ಯಕ್ಷರು – ಹಿಂದೆ ಎಲ್ಲರೂ ಇದರ ಬಗ್ಗೆ ಪ್ರಶ್ನೆಗಳನ್ನು ಹಾಕಿ ಸಾಕಷ್ಟು ಚರ್ಚೆಯಾಗಿದೆ ಮತ್ತೆ ಮತ್ತೆ ಅದೇ ಏಕೆ ಹೇಳುತ್ತೀರಿ ?

ಶ್ರೀ ಕೆ ಗೋಪಾಲ ಪೂಜಾರಿ – ಕಾರ್ಡ್ ಕೊಡಬೇಕು ಇಲ್ಲದಿದ್ದರೆ ನಾವು ಜನರಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನ ಸೆಳೆದರೂ ಸಹ ಅದಕ್ಕೆ ಅವರು ಉತ್ತರ ಕೊಡುವುದಿಲ್ಲ

(ಗೊಂದಲ)

ಅಧ್ಯಕ್ಷರು – ಬೇರೆ ಬೇರೆ ಸದಸ್ಯರ ಸಮಸ್ಯೆ ಕೂಡ ಇದೇ ಆಗಿದೆ ಅದಕ್ಕೋಸ್ಕರ, ಮಾನ್ಯ ಮಂತ್ರಿಗಳು ಜಿಲ್ಲಾವಾರು ಶಾಸಕರ ಸಭೆಯನ್ನು ಕರೆದು ಆ ಜಿಲ್ಲೆಯಲ್ಲಿ ಏನೇನು ಪರಿಸ್ಥಿತಿ ಇದೆ ಎನ್ನುವುದನ್ನು ಅರ್ಥ ಮಾಡಿಕೊಂಡು ಬಡವರಿಗೆ ಏನು ಕೈತಪ್ಪಿಹೋಗಿದೆ ಅದನ್ನು ಒಂದು ನಿಗದಿತ ಸಮಯದಲ್ಲಿ ಅಂದರೆ 2 ತಿಂಗಳೋ, 3 ತಿಂಗಳೊ ತೆಗೆದುಕೊಂಡು ತ್ವರಿತವಾಗಿ ಸರಿಪಡಿಸಿ

ಶ್ರೀ ಗೋವಿಂದ ಎಂ ಕಾರಜೋಳ – ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮೀಕ್ಷೆ ಮಾಡಿಸಿ 12 71 ಲಕ್ಷ ಕಾರ್ಡ್‌ಗಳನ್ನು ಕೊಡಲಿಕ್ಕೆ ಸೂಚನೆಯನ್ನು ಕೊಟ್ಟಿದೆ ಈ ಆದೇಶ ಹೋಗಿ 3 ದಿವಸವಾಯಿತು

ಶ್ರೀ ಕೆ ಗೋಪಾಲ ಪೂಜಾರಿ – ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು ಆಯಿತು ಮಾಡುತ್ತೇನೆಂದು ಹೇಳಿದ್ದಾರಲ್ಲಾ ?

ಶ್ರೀ ಕೆ ಗೋಪಾಲ ಪೂಜಾರಿ – ಇಲ್ಲ ನಾವು ಅವರ ಕಛೇರಿಗೆ ಹೋಗಿದ್ದೆವು cancel ಮಾಡಿರುವುದನ್ನು ಸಮೀಕ್ಷೆ ಮಾಡುವುದಕ್ಕೆ ಹೇಳಿ

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) – ನಾನು ಕೇಳಿರುವ ಪ್ರಶ್ನೆ ಇದ್ದು ಅದರಲ್ಲಿ ಕೂಡ ಇದೇ ವಿಷಯವಿದೆ

ಶ್ರೀ ಕೆ ಗೋಪಾಲ ಪೂಜಾರಿ – ಮಾನ್ಯ ಅಧ್ಯಕ್ಷರೆ, ಪ್ರತಿಭಟನೆಯಾಗಿದೆ (ಗೊಂದಲ) ಜನರಿಗೆ ಉತ್ತರ ಕೊಡಲಿಕ್ಕಾಗುವುದಿಲ್ಲ cancel ಮಾಡಿರುವ ಕಾರ್ಡಿನ ಬಗ್ಗೆ ಪುನಃ ಸಮೀಕ್ಷೆ ಮಾಡುತ್ತೇನೆಂದು ಹೇಳಲಿ

ಶ್ರೀ ಗೋವಿಂದ ಎಂ ಕಾರಜೋಳ – ಮತ್ತೊಮ್ಮೆ ಸಮೀಕ್ಷೆ ಮಾಡುವುದಕ್ಕಾಗುವುದಿಲ್ಲ ಯಾರಿಗಾದರೂ ಅನ್ಯಾಯವಾಗಿ cancel ಮಾಡಿದ್ದರೆ, ಅವರಿಗೆ BPL card ಅನ್ನು ತರುವುದಕ್ಕೆ ಅರ್ಹತೆ ಇದ್ದರೆ, ನಿಜವಾಗಿ ಬಡವರಿದ್ದರೆ ಕೊಡಿಸತಕ್ಕಂಥ ಕೆಲಸ ಮಾಡುತ್ತೇವೆ

ಮಕ್ಕಳ ಕಲ್ಯಾಣ ಯೋಜನೆಗಳ ಅಭಿವೃದ್ಧಿ

147 (466) **ಶ್ರೀ ನೆ ಲ ನರೇಂದ್ರ ಬಾಬು (ರಾಜಾಜಿನಗರ)** –ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿರುವ 18 ವರ್ಷದೊಳಗಿನ ಮಕ್ಕಳ ಸಂಖ್ಯೆ ಎಷ್ಟು, ಅದರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಅನುಪಾತ ಎಷ್ಟು?

(ಆ) ಮಕ್ಕಳ ಶಿಕ್ಷಣ ಯೋಜನೆ ಹೊರತುಪಡಿಸಿ, ಮಕ್ಕಳ ಅಭಿವೃದ್ಧಿಗಾಗಿ ಕಾನೂನು ಚೌಕಟ್ಟಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು?

(ಇ) ಮಕ್ಕಳು ಸರ್ಕಾರಿ ಸಂಸ್ಥೆಗಳಿಂದ ಆಯೋಜಿಸಿಕೊಂಡಿರುವ ಯೋಜನೆಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಹಾಗಿದ್ದಲ್ಲಿ, ಅವುಗಳನ್ನು ಪ್ರಚಾರಪಡಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) –

(ಅ) ಜನಗಣತಿ 2001ರ ಪ್ರಕಾರ ಕರ್ನಾಟಕದಲ್ಲಿ 18 ವರ್ಷಕ್ಕೆ ಒಳಪಡುವ ಮಕ್ಕಳ ಸಂಖ್ಯೆ ಲಭ್ಯವಿರುವುದಿಲ್ಲ ಆದರೆ 19 ವರ್ಷದೊಳಗಿನ ಮಕ್ಕಳ ಸಂಖ್ಯೆ ಈ ಕೆಳಕಂಡಂತಿರುತ್ತದೆ

ಗಂಡು	11460516
ಹೆಣ್ಣು	10766757
ಒಟ್ಟು	22227273
ಅನುಪಾತ	1000 939

(ಆ) 1 ಬಾಲನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯಿದೆ 2000 ಮತ್ತು ತಿದ್ದುಪಡಿ 2006

ಅ) ದತ್ತು ಕಾರ್ಯಕ್ರಮ

ಆ) ಪ್ರಾಯೋಜಿತ ಕಾರ್ಯಕ್ರಮ

ಇ) ಬಾಲ ಮಂದಿರಗಳು ಮತ್ತು ವೀಕ್ಷಣಾಲಯಗಳು

ಈ) ಮಕ್ಕಳ ಸಹಾಯವಾಣಿ (Child line)

ಇ) ಅರ್ಹವ್ಯಕ್ತಿ ಸಂಸ್ಥೆಗಳು

1 ಬಾಲ್ಯವಿವಾಹ ನಿಷೇಧ ಕಾಯಿದ 2006 ಜಾಗೃತಿ ಶಿಬಿರ ನಡೆಸುವುದು

2 ಮಕ್ಕಳ ಹಕ್ಕುಗಳ ರಕ್ಷಣೆ ಆಯೋಗ ಕಾಯಿದೆ 2005

(ಇ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗ ತನಿಖೆ ನಡೆಸಿ, ಸೂಕ್ತ ಪರಿಹಾರ ನೀಡಲಾಗುತ್ತಿದೆ

(ಈ) NGOಗಳ ಮೂಲಕ ಪ್ರತಿ ಜಿಲ್ಲೆಯಲ್ಲಿ ಜಾಗೃತಿ ಶಿಬಿರಗಳನ್ನು ನಡೆಸಲಾಗುತ್ತದೆ

ಶ್ರೀ ನೆ ಲ ನರೇಂದ್ರ ಬಾಬು ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಯಾವುದೇ ಸರ್ಕಾರಕ್ಕೆ ಈ ರಾಜ್ಯದ ಅಥವಾ ಈ ವ್ಯವಸ್ಥೆಯಲ್ಲಿರುವ ಮಕ್ಕಳ ಸಂಖ್ಯೆಯನ್ನು ಗಣತಿ ಮಾಡುವ ನೈತಿಕ ಜವಾಬ್ದಾರಿ ಇದೆಯೇ ? ಅಥವಾ ಇಲ್ಲವೇ ಎನ್ನುವ ಬಗ್ಗೆ ಉತ್ತರ ಕೊಡಬೇಕು ಎರಡನೆಯದಾಗಿ, ಗಂಡು ಮತ್ತು ಹೆಣ್ಣು ಮಕ್ಕಳ ಅನುಪಾತವನ್ನು ಕೊಟ್ಟಿದ್ದಾರೆ ಬಹುಶಃ ಇದುವರೆವಿಗೂ ನಮ್ಮ ದೇಶದ ಜನಸಂಖ್ಯೆ ಪ್ರಕಾರವಾಗಿ 2001ರ census ಪ್ರಕಾರ 42% ಮಕ್ಕಳು ಇದ್ದಾರೆಂದು ಹೇಳುತ್ತಾರೆ ಆದರೆ, 2007ಕ್ಕೆ ಸುಮಾರು 50% ಮಕ್ಕಳ population ಇರುತ್ತದೆ ಮಕ್ಕಳಿಗೆ ಮತದಾನದ ಹಕ್ಕಿಲ್ಲ ಮಕ್ಕಳು ತಮ್ಮ ಧ್ವನಿಯನ್ನು ಒಗ್ಗೂಡಿಸಲಿಕ್ಕೆ ವಿಧಾನಸಭೆಯಲ್ಲಿ ಅಥವಾ ಪಾರ್ಲಿಮೆಂಟ್‌ನಲ್ಲಿ ಹಕ್ಕಿಲ್ಲ ಇವತ್ತಿನ ದಿವಸ ಸಮೀಕ್ಷೆ ವರದಿ ಪ್ರಕಾರವಾಗಿ ಬೆಂಗಳೂರು ನಗರದಲ್ಲಿ 413 ಮಕ್ಕಳು ಇದ್ದಾರೆ ಇದನ್ನು ನಾನು ಹಿಂದಿನ ಪ್ರಶ್ನೆಯಲ್ಲೂ ಕೇಳಿದ್ದೇನೆ ಆ 413 ಮಕ್ಕಳಲ್ಲಿ ಅವರ habits ಗಳಲ್ಲಿ smoking ಗೆ 250 ಮಕ್ಕಳು addict ಆಗಿದ್ದಾರೆಂದು ವರದಿ ಬಂದಿದೆ Inhalation of pollution 40 ಮಕ್ಕಳು ಎಂದು ಬಂದಿದೆ ಗುಟ್ಕಾ 229 ಮಕ್ಕಳು ಎಂದು ಬಂದಿದೆ, alcoholism addiction 39 ಮಕ್ಕಳು ಇದ್ದು, ಇದೊಂದು ಬೆಂಗಳೂರಿನ ಪ್ರಮುಖ ಬಡಾವಣೆಯಿಂದ ಬಂದಿರುವ ಮಾಹಿತಿ ಈ ಬಗ್ಗೆ ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಎಂದು ಸನ್ಮಾನ್ಯ ಸಚಿವರಲ್ಲಿ ನಾನು ಅದೇ ಪ್ರಶ್ನೆಯನ್ನು ಕೇಳಿದ್ದೇನೆ

ಅಧ್ಯಕ್ಷರು – ನರೇಂದ್ರಬಾಬುರವರೆ, ಇಷ್ಟು, ಕೇಳಿದರೆ ಹೇಗೆ ? No No ನೀವು ಯಾವಾಗಲೂ ಇದೇ ತರಹ ಮಾಡುತ್ತೀರಿ

ಶ್ರೀ ನೆ ಲ ನರೇಂದ್ರ ಬಾಬು – ಅವರು ಉತ್ತರ ಕೊಟ್ಟಿಲ್ಲ, ಅದಕ್ಕೇ ನಾನು ಕೇಳುತ್ತಿದ್ದೇನೆ ಇಂಥ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರೆ ನಾನು ಇದರ ಫೋಟೋ ಕಳುಹಿಸಿಕೊಡುತ್ತೇನೆ ಬೆಂಗಳೂರಿನ ಸುತ್ತಮುತ್ತ ಮಕ್ಕಳು inhalation ಮಾಡುತ್ತಿರುವುದು, smoke ಮಾಡುತ್ತಿರುವುದು ಇದರ ಬಗ್ಗೆ ಸರ್ಕಾರದ ಜವಾಬ್ದಾರಿ ಇಲ್ಲವೇ ?

ಅಧ್ಯಕ್ಷರು – ಪ್ರಶ್ನೋತ್ತರ ಕಾಲದಲ್ಲಿ detail ಆಗಿ ಭಾಷಣ ಮಾಡುವುದಕ್ಕಾಗುವುದಿಲ್ಲ

ಶ್ರೀ ನೆ ಲ ನರೇಂದ್ರ ಬಾಬು – ಇದು ಬಹಳ ಪ್ರಮುಖವಾದುದು ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ ಎಂದು ನಾಣ್ಣುಡಿ ಹೇಳುತ್ತದೆ ಸರ್ಕಾರದ ಜವಾಬ್ದಾರಿಯಿಲ್ಲವೇ ? ಈ 50% ಮಕ್ಕಳು, ಭವಿಷ್ಯದ ಪ್ರಜೆಗಳ ಬಗ್ಗೆ ಚಿಂತನೆ ಮಾಡಿ, ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕು

ಶ್ರೀ ಹೆಚ್ ಕೆ ಕುಮಾರಸ್ವಾಮಿ – ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಅದರಲ್ಲಿ Juvenile Justice Board ಎಂದು ರಾಜ್ಯದಲ್ಲಿ ಸುಮಾರು 8 ಕಡೆ ಇವೆ ಯಾವ 18 ವರ್ಷಗಳೊಳಗಿನ ಮಕ್ಕಳು ಅಪರಾಧವನ್ನೆಸಗುತ್ತಾರೆ, ಅಂಥ ಮಕ್ಕಳನ್ನು ವಿಚಾರಣೆ ಮಾಡುವುದು ಮತ್ತು ಅವರಿಗೆ ಪರಿಹಾರ ಕೊಡುವ ಕೆಲಸವನ್ನು ನಾವು 8 ಕಡೆ ನ್ಯಾಯಾಲಯಗಳನ್ನು ಸ್ಥಾಪಿಸಿ ಮಾಡುತ್ತಿದ್ದೇವೆ ಮತ್ತು ಉಳಿದ ಜಿಲ್ಲೆಗಳನ್ನೂ ಅದಕ್ಕೆ ಜೋಡಣೆ ಮಾಡಿದ್ದೇವೆ ಇನ್ನು, ಎಲ್ಲದಕ್ಕಿಂತ ಹೆಚ್ಚಾಗಿ, ಬಾಲ್ಯ ವಿವಾಹ ನಿಷೇಧ ಇರಬಹುದು, ಬಾಲ ಕಾರ್ಮಿಕರ ನಿಷೇಧ ಕಾಯಿದೆ ಇರಬಹುದು ಮತ್ತು ಮಕ್ಕಳ ಹಕ್ಕು, ರಕ್ಷಣೆಗಾಗಿ ಈಗಾಗಲೇ ಆಯೋಗವನ್ನು ರಚಿಸುವುದಕ್ಕೆ ಸರ್ಕಾರ ಮುಂದಾಗಿದೆ ನಮ್ಮ ಆರ್ಥಿಕ ಇಲಾಖೆಯಲ್ಲಿ ಈ ಕುರಿತ ಕಡತವಿದ್ದು, ಅದು ಬಂದ ತಕ್ಷಣ ಆಯೋಗವನ್ನು ರಚಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ ಹಾಗೆಯೇ, ಬಾಲ ಮಂದಿರಗಳು, ವೀಕ್ಷಣಾಲಯಗಳ ಮೂಲಕ ಮಕ್ಕಳನ್ನು ಅಲ್ಲಿಟ್ಟು ಅವರನ್ನು ಪೋಷಣೆ ಮಾಡುವುದು, ನಿರ್ಗತಿಕ ಮಕ್ಕಳಿಗೆ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ ಇದರಲ್ಲಿ ನಮ್ಮ ಸಮಾಜದಲ್ಲಿರುವ ಅನೇಕ ಸಂಘ ಸಂಸ್ಥೆಗಳು, ಇತರೆ ಸಂಘ ಸಂಸ್ಥೆಗಳು, ಸ್ತ್ರೀಶಕ್ತಿ ಸಂಘಗಳಿರಬಹುದು, ಯಾವುದೇ ಸಮಾಜದ ಸಂಘ ಸಂಸ್ಥೆಗಳ ಸಹಕಾರ ಕೂಡ ಅಗತ್ಯವಿರುತ್ತದೆ ಈ ಎಲ್ಲ ಮಕ್ಕಳ ಪೋಷಣೆಯಲ್ಲಿ ಕೇವಲ ಸರ್ಕಾರದಿಂದಾಗುತ್ತದೆ ಎನ್ನತಕ್ಕಂಥದ್ದು ಸುಳ್ಳು ಎಂದು ನರೇಂದ್ರಬಾಬುರವರಿಗೂ ಚೆನ್ನಾಗಿ ಗೊತ್ತಿದೆ ಏಕೆಂದರೆ, ಅವರು ಇಂಥ ಚಟುವಟಿಕೆ, ಹೋರಾಟಗಳಲ್ಲಿ ತುಂಬಾ ಮುಂಚೂಣಿಯಲ್ಲಿದ್ದಾರೆ ಆದ್ದರಿಂದ ಅವರ ಸಹಕಾರ ಮತ್ತು ಸಲಹೆ ಮೇರೆಗೆ ಸರ್ಕಾರ ಇನ್ನೂ ಹೆಚ್ಚು ಅವಕಾಶಗಳನ್ನು ಮಾಡಿಕೊಂಡು ಆ ಕೆಲಸ ಮಾಡುತ್ತದೆ

ಶ್ರೀ ನೆ ಲ ನರೇಂದ್ರಬಾಬು .– CRP ಪ್ರಕಾರವಾಗಿ 1992 ರಲ್ಲಿ 54 ಆಟಿಕೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಒಡಂಬಡಿಕೆ ಮಾಡಿಕೊಂಡಿವೆ 2008ರಲ್ಲಿ ಅದು ವರದಿ ಕೊಡಬೇಕಾಗಿದೆ ಬಹಳ ಪ್ರಮುಖವಾಗಿ ಮಕ್ಕಳಿಗೆ ಬದುಕುವ ಹಕ್ಕು, ಶಿಕ್ಷಣದ ಹಕ್ಕು, ರಕ್ಷಣೆಯ ಹಕ್ಕು, ಭಾಗವಹಿಸುವ ಹಕ್ಕು ಎಂಬುದನ್ನು ಕೊಟ್ಟಿದೆ ಇದೇ ಸದನದ ಸಭೆಯಲ್ಲಿ ಅರ್ಥ ಸಚಿವರು, ಭಾಗ್ಯಲಕ್ಷ್ಮಿ ಯೋಜನೆಯನ್ನು ಘೋಷಣೆ ಮಾಡಿದ್ದರು 2006ರಿಂದ ಇಲ್ಲಿಯವರೆಗೂ ಹಣ ಇಟ್ಟರಿ, ಹೆಣ್ಣು ಶಿಶುವಿನ ಭ್ರೂಣ ಹತ್ಯೆಯಾಗುತ್ತಿದೆ ಇದುವರೆಗೂ ಯಾವುದಾದರೊಂದು ಸಂಸ್ಥೆಯ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಆ ಭಾಗ್ಯಲಕ್ಷ್ಮಿ ಯೋಜನೆಯನ್ನು ಏಕೆ ಅನುಷ್ಠಾನ ಮಾಡಲಿಲ್ಲ ? ಈ ಬಗ್ಗೆ ಇಲ್ಲಿ ತಿಳಿಸಿಲ್ಲ ಹೆಣ್ಣು ಮಕ್ಕಳ ಹೆಸರಿನಲ್ಲಿ 10 ಸಾವಿರ ರೂ ಠೇವಣಿ ಇಡುತ್ತೇವೆಂದು ಹೇಳಿದ್ದರು ಜನರು ಕಾಯುತ್ತಿದ್ದಾರೆ ಕೇವಲ ಸಮೀಕ್ಷಾ ವರದಿ ಇದೆ ಇದರ ಬಗ್ಗೆ ಏನಾಗಿದೆ ಎಂದು ಸನ್ಮಾನ್ಯ ಸಚಿವರು ತಿಳಿಸಬೇಕು ಭಾಗ್ಯಲಕ್ಷ್ಮಿ ಯೋಜನೆ

ಇನ್ನೂ ಕನಸಾಗಿಯೇ ಉಳಿದಿದೆಯೇ ? ಏತಕ್ಕೋಸ್ಕರ ಇದನ್ನು ಅನುಷ್ಠಾನ ಮಾಡುತ್ತಿಲ್ಲ ?

ಶ್ರೀ ಹೆಚ್ ಕೆ ಕುಮಾರಸ್ವಾಮಿ – ಮಕ್ಕಳು ಹಕ್ಕು ಮತ್ತು ರಕ್ಷಣೆ ಬಗ್ಗೆ ನಾವೆಲ್ಲ ಕೆಳಗಿನಿಂದ ಮೇಲ್ಗಡೆ ಇರುವವರೆಲ್ಲರೂ ಕೇವಲ ಭಾಷಣ ಮಾಡುತ್ತೇವೆ ಆದರೆ, ಈ ಕೆಲಸ ಮಾಡುವುದಕ್ಕೆ ಕೇಂದ್ರ ಸರ್ಕಾರ, UNICEF, ವಿಶ್ವಸಂಸ್ಥೆ ಇರಬಹುದು, ನಾವೂ ಸೇರಿದಂತೆ, ಎಷ್ಟರ ಮಟ್ಟಿಗೆ ಅರಿವು ಮೂಡಿಸುವುದರತ್ತ ಗಮನಿಸಿದ್ದೇವೆ ? ಆ ಮಕ್ಕಳು ಚಿಕ್ಕವರು ಎಷ್ಟು ಹಣಕಾಸು ನೆರವು ನೀಡಿದೆ ಎನ್ನುವ ಬಗ್ಗೆ ಮಾನ್ಯ ಅಧ್ಯಕ್ಷರು ನೀಡಿದ 2 ನಿಮಿಷ ಸಮಯದಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ ಆದರೂ ಕೂಡ ನಮ್ಮ ರಾಜ್ಯ ಸರ್ಕಾರ ಇವತ್ತು ಏನು ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ಹೇಳಿದಿರಿ, ಆ ಯೋಜನೆಯನ್ನು ಜಾರಿಗೆ ಮಾಡುವುದರಲ್ಲಿದ್ದರ ಅನೇಕ ಕ್ಲಿಷ್ಟ ಸಮಸ್ಯೆಗಳು ಬಗೆಹರಿದಿವೆ ಆ ಬಗ್ಗೆ LIC ಜೊತೆ MoU ಆಗಿದೆ ಈ ತಿಂಗಳ ಕೊನೆಯಲ್ಲಿ ನಾವು ಅಧಿಕೃತವಾಗಿ ಈ ಯೋಜನೆಯನ್ನು ವಿಧಾನ ಸೌಧದ ಮುಂಭಾಗದಲ್ಲಿ ಜಾರಿ ಮಾಡುತ್ತಿದ್ದೇವೆ ನಂತರ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಶಾಸಕರು ಜಿಲ್ಲಾ ಮಂತ್ರಿಗಳ ನೇತೃತ್ವದಲ್ಲಿ ಅದನ್ನು ಜಾರಿ ಮಾಡಿಸುತ್ತಿದ್ದೇನೆ ಈ ಕೆಲಸವನ್ನು ಸರ್ಕಾರ ಮಾಡುತ್ತದೆ

ಬಿ ಪಿ ಎಲ್ ಕಾರ್ಡುಗಳ ವಿತರಣೆ

148 (1216) **ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)** –ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬಿಜಾಪುರ ಜಿಲ್ಲೆಯಲ್ಲಿ ಗುರುತಿಸಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು ವಿವರ ನೀಡುವುದು) ,

(ಆ) ಬಿಜಾಪುರ ಜಿಲ್ಲೆಯಲ್ಲಿ ಬಿಪಿಎಲ್ ಕಾರ್ಡುಗಳನ್ನು ಅರ್ಹ ಫಲಾನುಭವಿಗಳಿಗೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

(ಇ) ಬಂದಿದ್ದಲ್ಲಿ, ಈ ಬಗ್ಗ ಸರ್ಕಾರದ ಕೈಗೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) –

(ಅ) ಬಿಜಾಪುರ ಜಿಲ್ಲೆಯಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ವಿತರಿಸಲಾಗಿರುವ ತಾತ್ಕಾಲಿಕ ಪಡಿತರ ಕೂಪನ್ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ

ಕ್ರ ಸಂ	ತಾಲ್ಲೂಕಿನ ಹೆಸರು	ವಿತರಿಸಿರುವ ಬಿಪಿಎಲ್ ಕೂಪನ್‌ಗಳ ವಿವರ			
		ಅನ್ನಪೂರ್ಣ	ಅಂತ್ಯೋದಯ	ಅಕ್ಷಯ	ಒಟ್ಟು
1	ಬಿಜಾಪುರ	205	16080	55775	72060
2	ಬಿ ಬಾಗೇವಾಡಿ	0	10127	29371	39498
3	ಮುದ್ದೇಬಿಹಾಳ	0	7907	23164	31071
4	ಇಂಡಿ	70	10955	33802	44827
5	ಹಿಂಧಗಿ	0	10291	29482	39773
	ಒಟ್ಟು	275	55360	171594	227229

(ಆ) ಕೆಲವೊಂದು ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡು ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ

(ಇ) ತಾತ್ಕಾಲಿಕ ಪಡಿತರ ಕೂಪನ್ ವಿತರಣೆ ನಂತರ ಬಿಪಿಎಲ್ ಪಡಿತರ ಕೂಪನ್ ದೊರೆಯದೇ ಎಪಿಎಲ್ ಪಡಿತರ ಕೂಪನ್ ಪಡೆದಿದ್ದು ವರ್ಗ ಬದಲಾವಣೆ ಕೋರಿ ಫಲಾನುಭವಿಗಳಿಂದ ಅಹವಾಲುಗಳು ಸಲ್ಲಿಸಲ್ಪಟ್ಟಿದ್ದು, ಅವುಗಳ ಪರಿಶೀಲನೆ ನಡೆಸಿ ಅರ್ಹರಿದ್ದ 9438 ಕುಟುಂಬಗಳಿಗೆ ಬಿಪಿಎಲ್ ಫಲಾನುಭವಿಗಳಿಗೆ ಅರ್ಹತೆಗನುಣವಾಗಿ ಪಡಿತರ ಕೂಪನ್‌ಗಳನ್ನು ನೀಡಲಾಗಿದೆ ಹಾಗೂ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ

ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ – ಅವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ ನಾನು ಮುಂಚೆಯೇ ಈ ಪ್ರಶ್ನೆಯನ್ನು ಕ್ಲಬ್ ಮಾಡಿಬಿಡಿ ಎಂದು ಕೇಳಿದ್ದೆ ಅವರು ಆಗಲೇ ಉತ್ತರ ಕೊಟ್ಟಿದ್ದಾರೆ, ಅದರ ಬಗ್ಗೆ ಮುಂದೆ ಒಂದು clarification ಕೇಳುವುದಕ್ಕೆ ಬಯಸುತ್ತೇನೆ ತಮ್ಮ ಉತ್ತರದಲ್ಲಿ ತಾವೇವು ಕೊಟ್ಟಿದ್ದೀರಿ, ಅದೇ ನಿಮಗೆ reflect ಮಾಡುತ್ತದೆ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು ಬೇರೆ ತಾಲ್ಲೂಕುಗಳಿಗಿಂತ ಕನಿಷ್ಠ ಪಕ್ಷ ನಾಲ್ಕು ಸಾವಿರ ಕಾರ್ಡ್ ವಿತರಣೆ ಕಡಿಮೆಯಾಗಿದೆ ಕಡಿಮೆ ಏಕೆ ಆಯಿತು ?

ಎರಡನೆಯದಾಗಿ, ತಾವು ಇದನ್ನು ಕಳೆದ ಡಿಸೆಂಬರ್ ತಿಂಗಳಲ್ಲಿ ಸರಿಪಡಿಸುತ್ತೇನೆಂದು ಹೇಳಿದ್ದೀರಿ ಆದರೆ, ಆ ಕೆಲಸ ಡಿಸೆಂಬರ್‌ನಲ್ಲಾಗಲಿಲ್ಲ ಗಡುವನ್ನು ಜನವರಿ ತಿಂಗಳೆಂದು ಹೇಳಿದಿರಿ ಜನವರಿಯಲ್ಲೂ ಆಗಲಿಲ್ಲ ಇದುವರೆಗೂ ಕೂಡ ಆಗಲಿಲ್ಲ ನಾವು ಇವತ್ತು ಜುಲೈ ತಿಂಗಳ ಕೊನೆಯಲ್ಲಿದ್ದೇವೆ ತಾವು, ಪುನಃ ಸಮೀಕ್ಷೆ ಮಾಡುವುದಕ್ಕಾಗುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ ಪುನಃ ಎಲ್ಲವನ್ನೂ ಸಮೀಕ್ಷೆ ಮಾಡುವ ಅವಶ್ಯಕತೆ ಇಲ್ಲ ಯಾರು ತೊಂದರೆಗೊಳಗಾಗಿದ್ದಾರೆ, ಯಾರು aggrieved ಇದ್ದಾರೆ, ಅವರು ಅರ್ಜಿ ಸಲ್ಲಿಸಿದ್ದಲ್ಲಿ, ಪಂಚನಾಮೆ ಮಾಡಿ ಪುನಃ ಅಂಥವರಿಗೆ ಕಾರ್ಡ್ ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕು ಅದಕ್ಕಾದರೂ ಸರ್ಕಾರ ಬದ್ಧತೆಯನ್ನು ವ್ಯಕ್ತಪಡಿಸಬೇಕು ಅಧ್ಯಕ್ಷರೆ ತಾವೂ ಕೂಡ ಈ ಸಮಸ್ಯೆ ರಾಜ್ಯಾದ್ಯಂತ ಇದೆ ಎಂದು ಹೇಳಿದಿರಿ ಇದು ಒಪ್ಪುವ ಮಾತು ಇದು ಕೇವಲ ಒಂದು ಮತ ಕ್ಷೇತ್ರಕ್ಕೆ ಅಥವಾ ಹಳ್ಳಿಗೆ ಸೀಮಿತವಾದುದಲ್ಲ ಇದು ರಾಜ್ಯಾದ್ಯಂತ ವ್ಯಾಪಕವಾಗಿರುವ ಸಮಸ್ಯೆ ಅದಕ್ಕೆ ತಾವು ಎಲ್ಲೆಲ್ಲಿ ಅರ್ಜಿಗಳು ಬರುತ್ತವೆ, ಆ ಅರ್ಜಿಗಳ ಮೇಲೆ ಅವರಿಗೆ interim ಆಗಿ ಕೊಡುವ ವ್ಯವಸ್ಥೆ ಮಾಡಿ ನಂತರ ಪುನಃ ಅವರಿಗೆ permanent ಆಗಿ card issue ಮಾಡಬೇಕು

ಶ್ರೀ ಗೋವಿಂದ ಎಂ ಕಾರಜೋಳ – ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ 48 ಸಾವಿರ ಕುಟುಂಬಗಳಲ್ಲಿ ಯಾರ್‍ಯಾರಿಗೆ cards ಸಿಕ್ಕಿಲ್ಲವೆಂದು ಅರ್ಜಿ ಕೊಟ್ಟಿದ್ದರೋ ಅವರಿಗೆ card ಕೊಡಲಿಕ್ಕೆ ಈಗಾಗಲೇ 3 ದಿವಸಗಳ ಹಿಂದೆ ಆದೇಶ ಕೊಟ್ಟಿದ್ದೇನೆ

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) – Last time ತಾವು ಹೇಳಿದಿರಿ ಅವರು ಹೇಳಿದ್ದು ನಿಜ ಪಂಚಾಯತಿಯಲ್ಲಿ ಯಾರೋ influential persons ಕುಳಿತುಕೊಂಡು, ಮನೆ ಮನೆಗೆ ಹೋಗದಿರುವುದು, 3–4 ಮಹಡಿ ಇರುವವರಿಗೆ ಕೂಡ BPL card ಇದೆ ಇದು ಪತ್ರಿಕೆಯಲ್ಲಿ ಕೂಡ ಬಂದಿದೆ IAS, KAS officers ಮನೆಯಲ್ಲಿ ಹಸಿರು ಕಾರ್ಡ್ ಇದೆ ಆಗ ನೀವು ಎಂದು computer mistake ಹೇಳಿದಿರಿ ಅದು ಕೇವಲ computer mistake ಅಲ್ಲ Survey ಮಾಡುವಲ್ಲಿ ಕೂಡ entries ಮಾಡಿಕೊಳ್ಳುವಾಗ ಸರಿಯಾಗಿ entries ಮಾಡಿಲ್ಲ

ಶ್ರೀ ಗೋವಿಂದ ಎಂ ಕಾರಜೋಳ – 2005ರಲ್ಲಿ Survey ಮಾಡುವ ಕಾಲದಲ್ಲಿ, ಕೆಲವು ಹಳ್ಳಿಗಳಲ್ಲಿ ಪ್ರಭಾವಿ ವ್ಯಕ್ತಿಗಳು Survey ಮಾಡಲಿಕ್ಕೇ ಬಿಟ್ಟಿಲ್ಲ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಪಂಚಾಯಿತಿಯಲ್ಲಿ ಹಾಗೂ ಮತ್ತೊಂದು ಕಡೆಯಲ್ಲಿ ಕುಳಿತುಕೊಂಡು ಪಟ್ಟಿ ಮಾಡಿದಂಥ ಬಗ್ಗೆ ಆಕ್ಷೇಪಣೆಗಳು ಬಂದ ನಂತರ ಪುನರ್ ಪರಿಶೀಲನೆ ಮಾಡಿ ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ 9,438 ಕುಟುಂಬಗಳಿಗೆ card ಕೊಟ್ಟಿದ್ದೇವೆ ಇನ್ನೂ 48,036 ಕುಟುಂಬಗಳಿಗೆ cards ಕೊಡಲಿಕ್ಕೆ ನಿನ್ನೆ ಆದೇಶ ಮಾಡಿದ್ದೇವೆ ಹಿಂದೆ ತಪ್ಪಾದದ್ದನ್ನು ಸರಿಪಡಿಸುವ ಕೆಲಸ ಈಗ ನಡೆದಿದೆಯೇ ಹೊರತು ಮತ್ತೆ ಹೊಸ ಸಮೀಕ್ಷೆ ಮಾಡುವುದಿಲ್ಲ ಸದಸ್ಯರ

ಕಳಕಳಿಯನ್ನು ಅರ್ಥ ಮಾಡಿಕೊಂಡು ತಾಲ್ಲೂಕಿನಲ್ಲಿ 4,000 ಕಡಿಮೆ ಇದೆಯೆಂದು ಏನು ಹೇಳುತ್ತಾರೆ ಮತ್ತು ಜಿಲ್ಲೆಯಲ್ಲಿ 48,000 ಕಡಿಮೆ ಇದೆ ಎಂದು ಏನು ಹೇಳುತ್ತಾರೆ, ಅದೆಲ್ಲವನ್ನೂ ಕೊಡಿಸುವ ಕೆಲಸ ಮಾಡುತ್ತೇನೆ

ಶ್ರೀ ಹೆಚ್ ನಿಂಗಪ್ಪ – ಪುನರ್ ಪರಿಶೀಲನೆ ಮಾಡಿದ ನಂತರ ಕೆಲವರಿಗೆ card ಕೊಟ್ಟಿದ್ದಾರೆ, ಇನ್ನು ಕೆಲವರಿಗೆ ಕೊಟ್ಟಿಲ್ಲ G-9 ಪಟ್ಟಿ ಆದೇಶಕ್ಕೋಸ್ಕರ ಸರ್ಕಾರದ ಮುಂದಿದ್ದು ಅದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು

ಶ್ರೀ ಗೋವಿಂದ ಎಂ ಕಾರಜೋಳ – G-9 ನಲ್ಲಿ ಇಡೀ ರಾಜ್ಯದಲ್ಲಿ 12 ಲಕ್ಷದ 71 ಸಾವಿರ ಕುಟುಂಬಗಳಿಗೆ ಕೊಡಬೇಕೆಂದು 3 ದಿನಗಳ ಹಿಂದೆಯೇ ಆದೇಶ ಮಾಡಿದ್ದೇನೆ ಅದು ಮಾನ್ಯ ಸದಸ್ಯರ ತಾಲ್ಲೂಕಿಗೂ ಬರುತ್ತದೆ

ಶ್ರೀ ಎಂ ಕೆ ಸೋಮಶೇಖರ್ – ಈಗೇನು ಜನ cards ಬಂದಿಲ್ಲವೆಂದು 1 ರೂ ಕೊಟ್ಟು complaints ಕೊಟ್ಟಿದ್ದರು, ಏನು ಕೇಂದ್ರಗಳಲ್ಲಿ ನೋಂದಾಯಿಸಿ ಬಂದಿದ್ದರು, ಕೆಲವರಿಗೆ BPL ಕೊಡುವ ಕಡೆ APL ಕೊಟ್ಟಿದ್ದಾರೆಂದು ಕೆಲವರು, ಮತ್ತೆ ಕೆಲವರು card ಬಂದಿಲ್ಲವೆಂದು 1 ರೂ ಕೊಟ್ಟು complaint ಕೊಟ್ಟಿದ್ದಂಥ ಎಲ್ಲರ ಮನೆಗಳಿಗೂ ಇವರು survey ಮಾಡಲೇ ಇಲ್ಲ ಕೆಲವು ಸಿಕ್ಕದ್ದನ್ನು ಮಾಡಿದ್ದಾರೆ, ಕೆಲವನ್ನು ಮಾಡಲೇ ಇಲ್ಲ ಆ ರೀತಿಯಾಗಿ ಸಾಕಷ್ಟು ಜನರಿಗೆ G-9 ಏನು ಕೊಡುತ್ತದ್ದಾರೆ ಅದೂ ಕೂಡ ಸಿಕ್ಕಿಲ್ಲ ಕೇವಲ G-9 ಎಂದರೆ ನೀಲಿ cards ಅನ್ನು, APLcard ಅನ್ನು ಕೊಡುವ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ ಅದರಲ್ಲಿ BPL cards ಕೊಡುವ ಕೆಲಸವೂ ಆಗಬೇಕಾಗಿದೆ Survey ಕೆಲಸವನ್ನು ಸರಿಯಾಗಿ ಮಾಡಿಸಬೇಕಾಗಿದೆ ಮತ್ತು ಮೊದಲು ಸೀಮೆ ಎಣ್ಣೆಯನ್ನು ಯಾರ್ಯಾರಿಗೆ ಕೊಡುತ್ತಿದ್ದಾರೋ ಅದನ್ನು ಈಗ ನಿಲ್ಲಿಸಿದ್ದಾರೆ ಮೊದಲು ಯಾರ ಹತ್ತಿರ ಹಳದಿ ಕಾರ್ಡ್ ಇತ್ತು ಅವರಿಗೆ ಮತ್ತೆ ಹಳದಿ ಕಾರ್ಡ್ ಸಿಕ್ಕಿಲ್ಲ ಅಂಥವರಿಗೆ ಸೀಮೆ ಎಣ್ಣೆ ಕೊಡಬೇಕು ಮೊದಲು ಸೀಮೆ ಎಣ್ಣೆ ಕೊಡುತ್ತಿದ್ದರು, ಈಗ APL card ಬಂದು ಸೀಮೆ ಎಣ್ಣೆಯನ್ನು ಕೊಡುವುದು ನಿಲ್ಲಿಸಿರುವುದು, survey ಮಾಡದಿರುವಂಥವರಿಗೆ ಕೂಡ ಸೀಮೆ ಎಣ್ಣೆ ಕೊಡುವ ಕೆಲಸ ಆಗಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ

ಶ್ರೀ ಗೋವಿಂದ ಎಂ ಕಾರಜೋಳ – ಮಾನ್ಯ ಸದಸ್ಯರದ್ದು ತಪ್ಪು ಕಲ್ಪನೆ ಇದೆ ಎಂದರೆ, ಹಿಂದೆಯೂ card ಇರಲಿಲ್ಲ, ಇವತ್ತೂ card ಇರಲಾರದ ಕುಟುಂಬಗಳು ಅರ್ಜಿ ಕೊಡುವ ಒಂದು form ಆಗಿರುತ್ತದೆ G-9 ಬರತಕ್ಕಂಥ ಎಲ್ಲರಿಗೂ APL card ಕೊಡುವುದಿಲ್ಲ BPL card ಕೊಡಲಿಕ್ಕೆ ಯಾರಿಗೆ ಅರ್ಹತೆ ಇದೆ ಅವರಿಗೆ BPL card ಕೊಡಲಾಗುತ್ತದೆ, ಯಾರಿಗೆ ಅರ್ಹತೆ ಇಲ್ಲ ಅವರಿಗೆ BPL card ಕೊಡುತ್ತಾರೆ ಅದನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ

ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರ

150 (931) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) – ಮಾನ್ಯ ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಗದಗ ಜಿಲ್ಲೆಯ ರೈತರಿಗೆ ಅವಶ್ಯ ಇರುವಷ್ಟು ಪ್ರಮಾಣದಲ್ಲಿ ರಸಗೊಬ್ಬರ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ಗದಗ ಜಿಲ್ಲೆಗೆ 2006 ರಲ್ಲಿ ಎಷ್ಟು ಪ್ರಮಾಣದಲ್ಲಿ ರಸಗೊಬ್ಬರ ಪೂರೈಸಲಾಗಿದೆ ಹಾಗೂ 2007 ರಲ್ಲಿ ಎಷ್ಟು ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆ ಮಾಡಲಾಗಿದೆ (ವಿವರ ನೀಡುವುದು),

(ಇ) ಈ ವರ್ಷ ಮುಂಗಾರು ಮಳೆ ಉತ್ತಮವಾಗಿದ್ದು, ರೈತರಿಗೆ ಅಗತ್ಯಕ್ಕೆ ತಕ್ಕಂತೆ ರಸಗೊಬ್ಬರ ಪೂರೈಕೆ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ ?

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು) –

(ಅ) ಹೌದು

(ಆ) ಮುಂಗಾರು / 2006 – 33809 ಟನ್ಸ್ ಮುಂಗಾರು / 2007 – 8812 ಟನ್ಸ್ (Up to the end of June 2007)

(ಇ) ಹೌದು, ರಸಗೊಬ್ಬರ ತಯಾರಕರುಗಳಿಗೆ ಜಿಲ್ಲ ಸರಬರಾಜು ಯೋಜನೆಯ ಪ್ರಕಾರ ಸರಬರಾಜು ಮಾಡುವಂತೆ ಈಗಾಗಲೇ ಕೋರಲಾಗಿದೆ

ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ – ಮಾನ್ಯ ಸಚಿವರು ಉತ್ತರ ನೀಡಿದ್ದಾರೆ ಆದರೆ, ಇಲ್ಲಿ ಕೊಟ್ಟಿರುವ ಉತ್ತರಕ್ಕೂ ಮತ್ತು ವಾಸ್ತವಿಕತೆಗೂ ಬಹಳ ಅಂತರವಿದೆ ಸನ್ಮಾನ್ಯ ಮಂತ್ರಿಗಳು ಇದನ್ನು ಒಪ್ಪುತ್ತಾರೆಂದು ಭಾವಿಸುತ್ತೇನೆ ಅನೇಕ ಸಾರಿ ತಾವು ಹೇಳಿಕೆ ಕೊಡುವ ಸಂದರ್ಭದಲ್ಲಿ, ಒಂದು ತಿಂಗಳ ಹಿಂದಿನ ಘಟನೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಧಾರವಾಡ, ಗದಗ, ಈ ಎಲ್ಲಾ ಜಿಲ್ಲೆಗಳಿಗೆ ಗೊಬ್ಬರದ ಪೂರೈಕೆ ಈ ಸಲ ಬೇಡಿಕೆಗಿಂತ ಬಹಳ ಕಡಿಮೆ ಇದೆ ಮತ್ತು ಗೊಬ್ಬರದ ತೊಂದರೆ ಬಹಳಷ್ಟು ಇದೆ ಎಂಬ ಬಗ್ಗೆ ಈಗಾಗಲೇ ತಮ್ಮ ಗಮನಕ್ಕೆ ಸಾಕಷ್ಟು ಸಲ ತಂದಿದ್ದೇವೆ ಧಾರವಾಡ ಜಿಲ್ಲೆಗೆ ಗೊಬ್ಬರ ಬಂದಿದೆ ಆ ಗೊಬ್ಬರದ wagon ಅಣ್ಣಿಗೇರಿ station ನಲ್ಲಿ ಹಾಗೆಯೇ ನಿಂತಿದೆ ಆ Railway ಅಧಿಕಾರಿಗಳ ಸಹಕಾರವಿಲ್ಲದೇ ಅದು store point ಮುಟ್ಟುತ್ತಿಲ್ಲವೆಂಬ ಹೇಳಿಕೆ ತಮ್ಮಿಂದ ಬಂದಿತ್ತು ನಂತರ ಸ್ವಲ್ಪ ದಿವಸಗಳಲ್ಲಿ ರೈಲ್ವೆ ಅಧಿಕಾರಿಗಳು ವಿಶೇಷವಾದ ತನಿಖೆಗೆ ಒಳಪಟ್ಟಂಥ ಸಂದರ್ಭದಲ್ಲಿ, "ಇಲ್ಲ, ಅದು ತಪ್ಪು ಮಾಹಿತಿಯಿಂದ ಹಾಗೆ ನಾನು ಹೇಳಿದ್ದೆ" ಎಂಬ ವಿಚಾರವನ್ನು ತಾವೇ

ಹೇಳಿದ್ದೀರಿ ಈಗ ನೀವು ಇಲ್ಲಿ ಕೊಟ್ಟಂತ ಎಲ್ಲಾ ವಿಷಯಗಳು, ಉತ್ತರಗಳು ಬಹಳ ತಪ್ಪು ಅಥವಾ ವಾಸ್ತವಿಕತೆಗೆ ಬಹಳ ದೂರವಿದೆಯೆಂದು ಹೇಳಬಯಸುತ್ತೇನೆ ನಾನು ಕೇಳಿದ (ಆ) ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ ನಮ್ಮ ಜಿಲ್ಲೆಯಲ್ಲಿ ವಿಶೇಷ ಪರಿಸ್ಥಿತಿ ಏನಿದೆಯೆಂದರೆ, ಸುಮಾರು 1 ತಿಂಗಳ ಹಿಂದೆ ಅಲ್ಲಿ ಅವ್ಯಾಹತವಾಗಿ ಮಳೆಯಾಗಿದೆ ಅಲ್ಲಿ ಇದ್ದಂಥ ಹೆಸರು ಪೀಕು ಅಥವಾ ಬೇರೆ ಬೇರೆ ಮುಂಗಾರು ಬೆಳೆಗಳು ಪೂರ್ತಿಯಾಗಿ ಬಣ್ಣ ಕಳೆದುಕೊಂಡು ಅದು ಹಸಿರು ಎನ್ನುವ ವಾತಾವರಣವಲ್ಲ, ಪೂರ್ತಿ ಹಳದಿಯಾಗಿದೆ ಕಾರಣವೇನೆಂದರೆ, ಅಲ್ಲಿ ಬಿಸಿಲು ಇಲ್ಲ ವಿಶೇಷವಾದ ತಂಪಿನಿಂದ ಹಾಗೆ ಆಗಿದೆ ರೈತರೆಲ್ಲರೂ ಏನು ಯೂರಿಯಾ ಗೊಬ್ಬರವನ್ನು ಹಾಕಿದ್ದರು ಆ ಪೀಕು ಮತ್ತೆ ಚೈತನ್ಯ ಆಗುತ್ತದೆ ಎನ್ನುವ ದೃಷ್ಟಿಯಿಂದ ರೈತರು ಯೂರಿಯಾಕ್ಕಾಗಿ ಅಲೆದಾಡುವ ಪ್ರಸಂಗವಿದೆ ನಾನು ಇಲ್ಲವೆಂದು ಹೇಳುವುದಿಲ್ಲ ಕೆಲವೊಂದಿಷ್ಟು ಯೂರಿಯಾ ರಸಗೊಬ್ಬರವನ್ನು ಪಂಜಾಬ್‌ನಿಂದಲೋ, ರಾಜಸ್ಥಾನದಿಂದಲೋ ಪಡೆದುಕೊಂಡು ಇವರು supply ಮಾಡುತ್ತಿದ್ದಾರೆ ಆ granules ಬಹಳ ದಪ್ಪ ಇವೆ ಈಗ ನಾವೇನು IFFCO ದಿಂದ ತೆಗೆದುಕೊಂಡಿದ್ದೇವೆ ಆ granules ನ 3 ಕಾಳು ಸೇರಿದರೆ ಇವರು ಕೊಡುವ ಗೊಬ್ಬರದ ಒಂದು ಕಾಳು ಆಗುತ್ತದೆ ಅಲ್ಲಿ ಏನಾಗಿದೆ ಎಂದರೆ ಅಲ್ಲಿ ಒಂದು confusion start ಆಗಿದೆ ಆ ರೈತರ ಕಲ್ಪನೆ ಏನಿತ್ತು ಎಂದರೆ ದಪ್ಪ granules ಹಾಕಿದರೆ ಮಳೆಯಲ್ಲಿ ಕರಗುವುದಿಲ್ಲ ಎಂಬ ಭಾವನೆ ಅಲ್ಲಿಯ ರೈತರಲ್ಲಿತ್ತು ಆ ಬಗ್ಗೆ ಆ ಯೂರಿಯಾ ಕೊಳ್ಳುವುದಕ್ಕೆ ರೈತರಿಗೆ ಮನಸಿಲ್ಲ ವಿಶೇಷವಾಗಿ DAP and Urea ಗೊಬ್ಬರದ ಬೇಡಿಕೆ ಅಲ್ಲಿ ಬಹಳಷ್ಟು ಇದೆ ಈಗ ಬೇಡಿಕೆ ಇದ್ದಷ್ಟು ನಿಮ್ಮ ಪೂರೈಕೆ ಇಲ್ಲದಿರುವುದರಿಂದ ಮಾರ್ಕೆಟ್‌ನಲ್ಲಿ ಸುಮಾರು 250 ರೂ ಗೆ ಸಿಗಬೇಕಾದ ಯೂರಿಯಾ ಗೊಬ್ಬರವನ್ನು 350 ರೂ ತೆಗೆದುಕೊಳ್ಳಬೇಕಾದ ಪ್ರಸಂಗ ಅಲ್ಲಿ ನಿರ್ಮಾಣವಾಗಿದೆ 485 – 490 ರೂ ಗೆ ಸಿಗಬೇಕಾದ DAP ಗೊಬ್ಬರವನ್ನು 550 – 600 ರೂ ಗೆ ತೆಗೆದುಕೊಳ್ಳುವ ಸಂದರ್ಭ ಅಲ್ಲಿ create ಆಗಿದೆ ಇದರಿಂದ ರೈತರಿಗೆ ಸಾಕಷ್ಟು ತೊಂದರೆಯಾಗಿದೆ ಅದಕ್ಕೆ ನಿಮ್ಮ ECA ಪ್ರಮಾಣವನ್ನು ಹೆಚ್ಚು ಮಾಡಿ ಪೂರೈಕೆಯನ್ನು ಹೆಚ್ಚಿಗೆ ಮಾಡಲಿಕ್ಕೆ ನಿಮಗೆ ಸಾಧ್ಯವಿದೆಯೇ ಎನ್ನುವ ಬಗ್ಗೆ ಸದನದಲ್ಲಿ ಮಾನ್ಯ ಸಚಿವರು ಹೇಳಬೇಕು

ಶ್ರೀ ಎನ್ ಎಸ್ ಬೋಸರಾಜು – ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಗದಗ ಜಿಲ್ಲೆಗೆ ಸಂಬಂಧಪಟ್ಟಂತೆ ಇದೆ ಇವತ್ತು ರಾಜ್ಯದಲ್ಲಿ ತಾವು ಅವಲೋಕನ ಮಾಡಿದ್ದೀರೋ, review ಮಾಡಿದ್ದೀರೋ ಇಲ್ಲವೋ ಗೊತ್ತಿಲ್ಲ ಈಗಾಗಲೇ ಎಲ್ಲೆಲ್ಲಿ ನೀರಾವರಿ ಪ್ರದೇಶಗಳಿವೆ, ಅಲ್ಲೆಲ್ಲ ಕಾಲುವೆಗಳ ಮುಖಾಂತರ ಎಲ್ಲಿ ನೀರು ಬಿಟ್ಟಿದ್ದಾರೆ ಅಲ್ಲಿ ಗೊಬ್ಬರ shortage ಆಗುತ್ತಿದೆ ಅದರಲ್ಲಿಯೂ ಮುಖ್ಯವಾಗಿ compost fertilizer s shortage ಆಗುತ್ತಿದೆ ಎಷ್ಟು ನೀವು plan ಪ್ರಕಾರ ಎಷ್ಟು district-wise allocation ಕೊಟ್ಟಿದ್ದೀರಿ, ಆ ಪ್ರಕಾರ ಆ fertilizer ಅನ್ನು

company ಗಳು ಅಲ್ಲಿ ಕೊಡುತ್ತಿಲ್ಲ ಏಕೆಂದರೆ, ಇದು seller market Shortage ಇರುವುದರಿಂದ ಕಂಪನಿಯವರು ಹೇಳುವುದೇನೆಂದರೆ factory ಗೆ ಬಂದು ಅಲ್ಲಿ ex-market ನಲ್ಲಿ ತೆಗೆದುಕೊಂಡು ಹೋಗಿ ಎಂದು dealers ಗೆ ಹೇಳುತ್ತಿದ್ದಾರೆ Dealers rate ಹೆಚ್ಚು ಮಾಡಿ ರೈತರಿಗೆ ಕೊಡುವ ಪರಿಸ್ಥಿತಿಯಲ್ಲಿಲ್ಲ ಅದನ್ನು ನೀವು ತಮ್ಮ ಇಲಾಖಾ ವತಿಯಿಂದ control ಮಾಡದಿದ್ದರೆ, ರಾಜ್ಯಾದ್ಯಂತ ಎಲ್ಲಾ ಪ್ರದೇಶಗಳಲ್ಲಿ ರೈತರಿಗೆ season ನಲ್ಲಿ ಸಾಕಷ್ಟು ತೊಂದರೆಯಾಗುವ ಪರಿಸ್ಥಿತಿ ಇದೆ ತುಂಗಭದ್ರಾ ಮತ್ತು ಕೃಷ್ಣಾ ನದಿಗಳಿಂದ ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ನೀರು ಬಿಟ್ಟಿದ್ದಾರೆ ಸಾಕಷ್ಟು ಗೊಬ್ಬರ ರೈತರಿಗೆ ಮಾರ್ಕೆಟ್‌ನಲ್ಲಿ ಸಿಗುತ್ತಿಲ್ಲ ಆ ಕಂಪನಿಯವರು ತಮ್ಮ ತಮ್ಮ ಕಂಪನಿಯಿಂದ ex-market rate ನಲ್ಲಿ ಗೊಬ್ಬರ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ ತಮ್ಮ ಅಧಿಕಾರಿಗಳು ಇಲ್ಲಿಯವರೆಗೆ ಆ ಕಾರ್ಯಚಟುವಟಿಕೆ ಏನು ನಡೆಯುತ್ತಿದೆ, allocation ಪ್ರಕಾರ ಎಷ್ಟು ಗೊಬ್ಬರ ಬರಬೇಕಾಗಿತ್ತು, ಜೂನ್, ಜುಲೈನಲ್ಲಿ ಎಷ್ಟು ಬರಬೇಕಾಗಿತ್ತು, ಪ್ರತಿ ತಿಂಗಳು ಇಷ್ಟು ಗೊಬ್ಬರ ಬರಬೇಕೆಂದು ತಾವು ಬೇಡಿಕೆ ಕೊಟ್ಟಿರುತ್ತೀರಿ ಅದರ ಪ್ರಕಾರ ಅದು market ಗೆ ಬರುತ್ತಿಲ್ಲ, ಅದನ್ನು ನಿಮ್ಮ ಅಧಿಕಾರಿಗಳು ನೋಡುತ್ತಿಲ್ಲ ಗೊಬ್ಬರ ಬರದಿದ್ದರೆ ರೈತರಿಗೆ ಮಾಡುವ ಸರಬರಾಜಿನಲ್ಲಿ shortage ಆಗುತ್ತದೆ ಅಲ್ಲಿ black market ಪ್ರಾರಂಭವಾಗುತ್ತದೆ ತಕ್ಷಣ ತಮ್ಮ ಅದಿಕಾರಿಗಳು ರೈತರಿಗೆ ಸಕಾಲದಲ್ಲಿ ಗೊಬ್ಬರ ಕೊಡಲಿಕ್ಕೆ ಆಗುವುದಿಲ್ಲ ತಕ್ಷಣ ತಾವು ಯಾವ ಪ್ರದೇಶಗಳಲ್ಲಿ ಎಷ್ಟು Quota ಕೊಡಬೇಕು ಅದನ್ನು ಕೊಡಿಸುವ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತೇನೆ

ಶ್ರೀ ಸಿ ಸಿ ಪಾಟೀಲ್ – ಮಾನ್ಯ ಬೋಸರಾಜುರವರು ಹೇಳಿರುವ ವಿಷಯ ನಿಜವಾಗಿಯೂ ಸತ್ಯವಿದೆ ಗೊಬ್ಬರದ ಕಂಪನಿಯವರು ನಮ್ಮ ನರಗುಂದ ತಾಲ್ಲೂಕಿಗೆ ಬರಬೇಕಾದರೆ ಹುಬ್ಬಳ್ಳಿಯಿಂದಲೇ ಗೊಬ್ಬರ ತೆಗೆದುಕೊಂಡು ಹೋಗಬೇಕೆಂದು ಹೇಳುತ್ತಾರೆ ನರಗುಂದದಲ್ಲಿರುವ ವ್ಯಾಪಾರಸ್ಥರೂ ಕೂಡ ಹೆಚ್ಚಿಗೆ freight ಕೊಟ್ಟು ತಂದು ಅಲ್ಲಿ block ಮಾಡಿದರೆ ಅಲ್ಲಿಯ ರೈತರಿಂದ ತೊಂದರೆ ಎದುರಿಸಬೇಕಾಗುತ್ತದೆಂದು ಹುಬ್ಬಳ್ಳಿಯಲ್ಲಿಯೇ ಮಾರಿಹೋಗುತ್ತಿದ್ದಾರೆ ಹೀಗಾಗಿ artificially ಗೊಬ್ಬರದ ಕೊರತೆಯನ್ನು ನಾವಿಂದು ಕಾಣುತ್ತಿದ್ದೇವೆ ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಬೇಡಿಕೊಳ್ಳುವುದೇನೆಂದರೆ, ಆಯಾಯ ತಾಲ್ಲೂಕು Head quarters ಗಳಿಗೆ ಎಲ್ಲೆಲ್ಲಿ distributors ಇದ್ದಾರೆ ಅಲ್ಲಿಯವರೆಗೆ ಮುಟ್ಟಿಸುವಂಥ ವ್ಯವಸ್ಥೆ ಮಾಡಲಿಕ್ಕೆ ಮಾನ್ಯ ಮಂತ್ರಿಗಳು ಕ್ರಮ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ

ಶ್ರೀ ಬಂಡೆಪ್ಪ ಕಾಶೆಂಪೂರ್ – ಎಲ್ಲಾ ಸದಸ್ಯರು ಹೇಳಿದ ಹಾಗೆ, ಈ ವರ್ಷದ ಪ್ರಾರಂಭದಿಂದಲೇ ನಾವು ಕ್ರೆಡಿಟ್ ಮಾಡಿಕೊಂಡು ಬಂದಿದ್ದೇವೆ ಫೆಬ್ರವರಿಯಲ್ಲಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಮೊದಲನೆ ಮೀಟಿಂಗ್

ಮಾಡಿದಾಗ ನಮ್ಮ ರಾಜ್ಯಕ್ಕೆ ಎಷ್ಟು ಬೇಡಿಕೆ ಬೇಕಾಗುತ್ತದೆಂದು ನಾವು ಮೊದಲೇ ಇಟ್ಟಿದ್ದೇವೆ ಇದೇನು ನಾವು ತಕ್ಷಣವೇ ಮಾಡುವಂಥ ಪ್ರಕ್ರಿಯೆ ಅಲ್ಲ ಸುಮಾರು ಆರು ತಿಂಗಳಿನಿಂದ ನಮ್ಮ ರಾಜ್ಯಕ್ಕೆ ಪ್ರತಿ ಜಿಲ್ಲೆಗೆ ಏನೇನು ರಸಗೊಬ್ಬರ ಪೂರೈಕೆ ಮಾಡಬೇಕೆನ್ನುವ ಒಂದು ಯೋಜನೆ ತಯಾರಿಸಿಕೊಂಡು, ಅದನ್ನು ಕೇಂದ್ರ ಸರ್ಕಾರಕ್ಕೂ ಕೊಡುತ್ತೇವೆ ಮತ್ತು ಕೇಂದ್ರ ಸರ್ಕಾರದಿಂದ ಅಲೋಕೇಷನ್ ಮಾಡಿ ಆ ಕಂಪನಿಗಳಿಗೆ ಕೊಡುತ್ತಾರೆ ಆದರೆ ನಾವು ಪದೇ ಪದೇ ಕೇಂದ್ರ ಸರ್ಕಾರದ ಗಮನಕ್ಕೂ ಕೂಡ ತರುತ್ತಿದ್ದೇವೆ ಮುಖ್ಯಮಂತ್ರಿಗಳು ಖುದ್ದಾಗಿ ಅವರಿಗೆ ಪತ್ರ ಬರೆದಿದ್ದಾರೆ ನಂತರ ನಾನು ಹೋಗಿ ಸನ್ಮಾನ್ಯ ಪಾಸ್ವಾನ್ ಜಿಯವರನ್ನು ಭೇಟಿ ಮಾಡಿ ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಕಾಂಪ್ಲೆಕ್ಸ್, ಅದರಲ್ಲಿ ಡಿ ಎ ಪಿ ನಮಗೂ ಬಹಳಷ್ಟು ಕೊರತೆ ಬರುತ್ತಿದೆ ಎಂದು ನಾವು ಕೇಳಿಕೊಂಡಾಗ ಸುಮಾರು ರ್‍ಯಾಕ್ಸ್ ಅವರು ಕಳುಹಿಸಿದರು, ಇನ್ನೂ ಕೊರತೆಯಿದೆ ಹೀಗಾಗಿ ಏನಾಗಿದೆ ಎಂದರೆ, ಇಡೀ ನಮ್ಮ ರಾಜ್ಯಗಳಲ್ಲಿ Phosphoric Acid ಹೊರಗಡೆಯಿಂದ ರಾಷ್ಟ್ರ ಲೆವಲ್ ನಲ್ಲಿ import ಮಾಡಬೇಕಾಗುತ್ತದೆ, ಅದು ಬಹಳ ತೊಂದರೆಯಾಗಿತ್ತು, ರೇಟ್ ಫಿಕ್ಸೇಷನ್ ಆಗಿಲ್ಲವೆಂದು ಹಲವಾರು ಕಂಪನಿಗಳು ಮ್ಯಾನುಫ್ಯಾಕ್ಚರ್ ಮಾಡುವುದನ್ನೇ ಕಡಿಮೆ ಮಾಡಿದ್ದವು, ನಂತರ ಅವರೇನೋ ಒಂದು ಹೊಂದಾಣಿಕೆ ಮಾಡಿಕೊಂಡು ನಂತರ ಹಿಂದಿನಸಾರಿ ಶುರು ಮಾಡಿದರು ನಮಗೆ ಎಲ್ಲೆಲ್ಲಿ ಬೇಕೆಂದು ನಾವು ಈಗಾಗಲೇ ಕೊಟ್ಟಿದ್ದೇವೆ ಸರಾಸರಿ ಲೆಕ್ಕ ಹಾಕಿದರೆ, ಈ ವರ್ಷದ್ದು ನಮ್ಮ ಬೇಡಿಕೆ ಏಳು ಲಕ್ಷದ ಎಂಭತ್ತು ಸಾವಿರ ಟನ್ ಬೇಕಾಗುತ್ತದೆ ಆದರೆ ನಮಗೆ ಸೇಲ್ ಆಗಿರುವುದು ಒಂದು ಲಕ್ಷ ಎಂಭತ್ತ ನಾಲ್ಕು ಸಾವಿರ ಟನ್ ಆದರೆ ಹೋದ ವರ್ಷ ಇದೇ ಟೈಂನಲ್ಲಿ ಸೇಲ್ ಆಗಿರುವುದು ಎರಡು ಲಕ್ಷ ಮೂವತ್ತೆರಡು ಸಾವಿರ ಟನ್ ಆಗಿತ್ತು ಅಂದರೆ, ಯೂರಿಯಾ ಇವತ್ತು ಇದೆ, ಇದಕ್ಕೇನು ತೊಂದರೆಯಿಲ್ಲ

ಶ್ರೀ ಜಿ ಎಸ್ ಗಡ್ಡದೇವರ ಮಠ್ ಗಡ್ಡಯ್ಯ ಶಿವಮೂರ್ತಯ್ಯ – ರೈತರಿಗೆ ವಿಶ್ವಾಸವಿರುವ ಯೂರಿಯಾವನ್ನು ನೀವು ಸಪ್ಲೈ ಮಾಡಬೇಕು ಬೇರೆ ಯಾವುದಾದರೂ ಮಾಡಿದರೆ ಉಪಯೋಗವಾಗುವುದಿಲ್ಲ

ಶ್ರೀ ಬಂಡೆಪ್ಪ ಕಾಶಂಪೂರ – ಕಂಪನಿ ನಮ್ಮದಲ್ಲ ನಾವು ರಿಕ್ವೈರ್‌ಮೆಂಟ್ ಕಳುಹಿಸುತ್ತೇವೆ ಕೇಂದ್ರ ಸರ್ಕಾರದಿಂದ, ಟ್ರಾನ್ಸ್‌ಪೋರ್ಟ್ plan ಕೂಡ ಅವರೇ ಹಾಕಿ ಕಳುಹಿಸಿ ಕೊಡುತ್ತಿದ್ದಾರೆ ಆಮೇಲೆ ಪ್ರತಿ ತಿಂಗಳು ಡಿವಿಜನ್‌ವೈಸ್ ಮೀಟಿಂಗ್ ಮಾಡುತ್ತಿದ್ದಾರೆ ಅವರು ಸೆಕ್ರೆಟರಿ ಲೆವಲ್‌ನಲ್ಲಿ ಹೈದ್ರಾಬಾದ್‌ನಲ್ಲಿ ಬಂದು ಮೀಟಿಂಗ್ ಮಾಡುತ್ತಿದ್ದಾರೆ, ಅವರು ಕೂಡ ಬಹಳಷ್ಟು ಸುಧಾರಣೆ ಮಾಡುತ್ತಿದ್ದಾರೆ ಆದರೂ ಹಲವಾರು ಸಮಸ್ಯೆಗಳಿರುವುದರಿಂದ ಇದು ಒಂದಕ್ಕೊಂದು ಹತ್ತುತ್ತಿಲ್ಲ ಹಾಗಾಗಿ ಯೂರಿಯಾ ಇದೆ ತಮ್ಮ ಗದಗ್ ಜಿಲ್ಲೆಯದು ಹೇಳುವುದಾದರೆ, ಹೋದ ವರ್ಷ ತಮಗೆ ಮಾಹಿತಿ ಕೊಟ್ಟ ಪ್ರಕಾರ

ಇಡೀ ವರ್ಷದಲ್ಲಿ ಎಲ್ಲಾ ಸೇರಿ 33,809 ಟನ್ ಖರ್ಚಾಗಿತ್ತು ಆದರೆ, ಇವತ್ತು ಜೂನ್ ಎಂಡ್ ವರೆಗೆ 8,812 ಟನ್ ಕೊಟ್ಟಿದ್ದೇವೆ ಆದರೆ, ಹೋದ ವರ್ಷದ್ದು ನಾವು ಲೆಕ್ಕ ಹಾಕಿದರೆ 9,952 ಟನ್ ಇತ್ತು ಇದಕ್ಕೆ ಅದಕ್ಕೆ ಒಂದು ಸಾವಿರ ಟನ್ ವ್ಯತ್ಯಾಸ ಇದೆ ಹೀಗಾಗಿ ತಾವೇನು ರೈಲ್ವೆ ಅಧಿಕಾರಿಗಳಿಗೆ ಹೇಳಿದಿರಿ, ನಾನು ಯಾರಿಗೂ ಸ್ಪಷ್ಟೀಕರಣ ಕೊಟ್ಟಿಲ್ಲ, ಅವರು ಸುಳ್ಳು ಹೇಳಿದ್ದಾರೆಂದು ನಾನು ಹೇಳಿಲ್ಲ ನನಗೆ ಬಂದ ಮಾಹಿತಿ, ಕಂಪನಿಯವರು ಖುದ್ದಾಗಿ ತಮ್ಮ ಲೆಟರ್‌ಹೆಡ್‌ನಲ್ಲಿ ಬರೆದುಕೊಟ್ಟಿದ್ದಾರೆ, ಒಂದನೇ ತಾರೀಖಿನಂದು ಬಿಟ್ಟಿರುವ ವ್ಯಾಗನ್ 14 ನೇ ತಾರೀಖಿಗೆ ಗುಲ್ಬರ್ಗಾಕ್ಕೆ ಹೋಗಿ ಮುಟ್ಟಿದೆ ಇದು ಡಿಲೇ ಏಕೆ ಆಯಿತು ಎನ್ನುವ ನಿಟ್ಟಿನಲ್ಲಿ ನಾವು ಕೇಳಿದ್ದೇವೆ ಹಾಗಾಗಿ, ಅವರು ಸುಳ್ಳು ಹೇಳಿದ್ದಾರೆಂದು ನಾನು ಯಾರಿಗೂ ಸ್ಪಷ್ಟೀಕರಣ ಕೊಟ್ಟಿಲ್ಲ ಈ ರೀತಿ ಡಿಲೇ ಮಾಡಬಾರದು, ಬಹಳ ತೀವ್ರಗತಿ ಯಲ್ಲಿ ರೈತರ ಪರವಾಗಿ ಕೆಲಸ ಮಾಡಬೇಕೆಂದು ಕೇಳಿಕೊಂಡಿದ್ದೇನೆ ಮತ್ತು ಸನ್ಮಾನ್ಯ ಕೇಂದ್ರ ಕೃಷಿ ಸಚಿವರ ಗಮನಕ್ಕೂ ನಾನು ತಂದಿದ್ದೇನೆ ಹಾಗಾಗಿ, ಈ ವರ್ಷದ್ದು ಏನು ಡಿಎಪಿ ಬದಲಿ ಕಾಂಪ್ಲೆಕ್ಸ್ 20 20 0, 18 46 0, ಇವೆಲ್ಲಾ ಮಾರುಕಟ್ಟೆಯಲ್ಲಿ ಇದೆ ನಾವು ಬಹಳಷ್ಟು ರೈತರಿಗೂ ಹೇಳುತ್ತಿದ್ದೇವೆ ಸ್ವಲ್ಪ ಚೇಂಜಸ್ ಮೇಲೆ ಇದನ್ನು ಯೂಸ್ ಮಾಡಬಹುದು ಎಂದು ಹೇಳಿದ್ದೇವೆ ಎಲ್ಲಾ ರೀತಿಯಿಂದಲೂ ಸಪ್ಲೈ ಮಾಡುವಂಥ ಕೆಲಸವನ್ನು ಇಲಾಖಾವತಿಯಿಂದ ತೆಗೆದುಕೊಳ್ಳುತ್ತಿದ್ದೇವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ

ಶ್ರೀ ಜಿ ಎಸ್ ಗಡ್ಡದೇವರ್ ಮಠ್ ಗಡ್ಡಯ್ಯ ಶಿವಮೂರ್ತಯ್ಯ – ಈ ಸಾರಿಯೇ ನೀವು ಅಲೋಕೇಷನ್ ಎಷ್ಟು ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು

ಅಧ್ಯಕ್ಷರು - ಅವರು ಉತ್ತರವನ್ನು ವಿವರವಾಗಿ ಹೇಳಿದ್ದಾರೆ ಇನ್ನೇನು ಅವರು ಹೇಳುತ್ತಾರೆ?

ಶ್ರೀ ಬಂಡೆಪ್ಪಕಾಶಂಪೂರ – ಗದಗ್ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅಲೋಕೇಷನ್ ಎಷ್ಟು ಎಂಬ ಮಾಹಿತಿಯನ್ನು ಸಂಪೂರ್ಣವಾಗಿ ತಮಗೆ ಕಳುಹಿಸಿಕೊಡುತ್ತೇನೆ

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) – ಮಾನ್ಯ ಅಧ್ಯಕ್ಷರೆ, ದಿನಾಂಕ 20–7–2007 ರಂದು 10 ನೇ ಪಟ್ಟಿಯ ಮೂಲಕ ಉತ್ತರಿಸುವ 77 ಪ್ರಶ್ನೆಗಳ ಪೈಕಿ 66 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು -- ಮಂಡಿಸಲಾಯಿತು

(ಇ) ಅನುಬಂಧ – I

(4) **ವರದಿಯನ್ನೊಪ್ಪಿಸುವುದು**

ಶ್ರೀ ಎನ್ ವೈ ಗೋಪಾಲಕೃಷ್ಣ (ಉಪಾಧ್ಯಕ್ಷರು) – ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ ಅಧ್ಯಕ್ಷನಾದ ನಾನು 2006 – 07 ನೇ ಸಾಲಿನ ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಮಂಡಿಸುತ್ತಿದ್ದೇನೆ

ಅಧ್ಯಕ್ಷರು – ಮಂಡಿಸಲಾಯಿತು

(5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(1) **ವಿಷಯ** – ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಕೆಲಸ ಮಾಡುತ್ತಿರುವವರ ಮುಷ್ಕರದ ಕುರಿತು

ಶ್ರೀ ಎನ್ ಎಸ್ ಬೋಸರಾಜು (ಮಾನ್ವಿ) ಮಾನ್ಯ ಅಧ್ಯಕ್ಷರೆ, ರಾಜ್ಯದ ಗ್ರಾಮೀಣ ಭಾಗದಲ್ಲಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಸುಮಾರು 5,600 ಜನ ಕೆಲಸ ಮಾಡುತ್ತಿದ್ದಾರೆ ಇದರಲ್ಲಿ 10 ರಿಂದ 19 ವರ್ಷದಿಂದ ಕೆಲಸ ಮಾಡುತ್ತಿರುವವರು ಇದ್ದಾರೆ ಅವರಿಗೆ ಇತ್ತೀಚಿನ ದಿನಗಳಲ್ಲಿ ಸರಿಯಾದ ರೀತಿಯಲ್ಲಿ ವೇತನ ಸಿಗುತ್ತಿಲ್ಲ 1600 ಜನರಿಗೆ ಸುಮಾರು 19 ವರ್ಷಗಳ ದೀರ್ಘ ಅನುಭವವಾಗಿದ್ದರೂ ಸಹ ಅವರಿಗೆ ಪರ್ಮನೆಂಟ್ ಮಾಡಿಲ್ಲ ಅವರು ಅನೇಕ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬೆಂಗಳೂರಿನಲ್ಲಿ ಬನ್ನಪ್ಪ ಪಾರ್ಕ್‌ನಲ್ಲಿ ಮುಷ್ಕರ ಮಾಡುತ್ತಿದ್ದಾರೆ ಈಗಾಗಲೇ ಐದನೇ ದಿವಸಕ್ಕೆ ಮುಷ್ಕರ ಕಾಲಿಟ್ಟಿದೆ ಇಷ್ಟಾದರೂ ಸರ್ಕಾರದ ವತಿಯಿಂದ ಜವಾಬ್ದಾರಿಯುತವಾದ ಮಂತ್ರಿಯಾಗಲಿ, ಅಧಿಕಾರಿಯಾಗಲಿ, ಹೋಗಿ ಅವರ ಜೊತೆಯಲ್ಲಿ ಮಾತನಾಡಿಲ್ಲ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವಂಥದ್ದು ಮೊದಲು ಅವರಿಗೆ 300 ರಿಂದ 400 ರೂಪಾಯಿಗಳು ಕೊಡಲಾಗುತ್ತಿತ್ತು ಈಗ ಅವರಿಗೆ 750 ರೂಪಾಯಿಯಿಂದ 1,000 ರೂಪಾಯಿ ಮಾತ್ರ ಅವರಿಗೆ ವೇತನ ಸಿಗುತ್ತಿದೆ ಈ ಕಾಲದಲ್ಲಿ ಆ ವೇತನದಲ್ಲಿ ಬದುಕುವುದಕ್ಕೆ ಅವರಿಗೆ ಎಷ್ಟು ಕಷ್ಟವಾಗುತ್ತದೆ, ಜೊತೆಗೆ ಅವರಿಗೆ ವಯಸ್ಸು ಕೂಡ ಆಗಿದೆ ಈ ಸಂದರ್ಭದಲ್ಲಿ ಅವರಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಕೆಲವು ಪತ್ರಿಕೆಗಳಲ್ಲಿ ಕೂಡ ಬಂದಿದೆ ಅವರಿಗೆ ಈಗಾಗಲೇ ಸಾಕಷ್ಟು ಅನುಭವವಿದೆ ಮತ್ತು ವಯಸ್ಸು ಕೂಡ ಮೀರಿದೆ 1,600 ಜನ ಸುಮಾರು 10 ರಿಂದ 19 ವರ್ಷದವರೆಗೆ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಖಾಯಂಗೊಳಿಸಬೇಕು ಮತ್ತೆ ಅವರಿಗೆ ಯಾವ ಕಾರಣಕ್ಕಾಗಿ ಸಂಬಳವಾಗಿಲ್ಲ? ಅನೇಕ ತಿಂಗಳುಗಳಿಂದ ಸಂಬಳ ಸಿಕ್ಕುತ್ತಿಲ್ಲ ಎನ್ನುವ ಮನವಿಯನ್ನು ಎಲ್ಲಾ ಶಾಸಕರಿಗೆ ಕೊಟ್ಟಿದ್ದಾರೆ ಆದ್ದರಿಂದ, ಅದನ್ನು ತಕ್ಷಣ ಪರಿಶೀಲಿಸಿ, ಇವತ್ತೇನು ಅಲ್ಲಿ ಮುಷ್ಕರದಲ್ಲಿರುವಂಥವರಿಗೆ ಯಾರಾದರೊಬ್ಬರು ಜವಾಬ್ದಾರಿ ಸ್ಥಾನದಲ್ಲಿರುವ ಮಂತ್ರಿಗಳು ಹೋಗಿ ಅವರ ಜೊತೆಯಲ್ಲಿ ಮಾತನಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ಒತ್ತಾಯಪಡಿಸುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಬೋಸರಾಜುರವರೇನು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಮತ್ತು ಅವರು

ಬಹಳ ದಿವಸಗಳಿಂದ ತಮ್ಮ ಬೇಡಿಕೆಯನ್ನಿಟ್ಟು ಸತ್ಯಾಗ್ರಹ ಮಾಡುತ್ತಿದ್ದಾರೆ, ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ ಆದಷ್ಟು ಬೇಗ ಅವರ ಪ್ರಮುಖರನ್ನು ಕರೆಸಿ ಅವರ ಬೇಡಿಕೆಗಳಿಗೆ ಸ್ಪಂದನ ಮಾಡುವ ರೀತಿಯಲ್ಲಿ ಮಾತುಕತೆ ಮಾಡಿ ಅವರ ಸಮಸ್ಯೆಗೆ ಸ್ಪಂದಿಸುತ್ತೇವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತೇನೆ

(2) ವಿಷಯ ಹಳೆಯ ಮದ್ರಾಸ್ ರೋಡ್‌ನಲ್ಲಿ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ

†ಶ್ರೀ ಐವಾನ್ ನಿಗ್ಲಿ (ನಾಮ ನಿರ್ದೇಶಿತರು) ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ Old Madras Road ನಲ್ಲಿ ಪ್ರಯಾಣಿಕರಿಗೆ ಆಗುವ ತೊಂದರೆಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ Old Madras Road ನಲ್ಲಿ ಒಂದು bottleneck ಇದೆ ಬಿನ್ನಮಂಗಲ ರೈಲ್ವೆ ಅಂಡರ್‌ಪಾಸ್‌ನಲ್ಲಿ ಒಂದು bottleneck ಇರುವುದರಿಂದ, ಅಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರಿಗೆ ತುಂಬಾ ಇಕ್ಕಟ್ಟಾಗಿದೆ Old Madras Road ನಿಂದ ಇಂದಿರಾ ನಗರ ಬಂದು ಸೇರುವುದಕ್ಕೆ ಸುಮಾರು ಎರಡು ತಾಸು ಬೇಕಾಗಿದೆ ಇದರಿಂದ, petrol, diesel, national waste ಆಗುತ್ತಿದೆ People who are travelling through Old Madras Road are having lot of problems ಹೋದ ವರ್ಷ ಕೂಡ ನಾನು ಇದೇ ಜಾಗದಲ್ಲಿ ಕುಳಿತುಕೊಂಡು ಮಾತನಾಡಿದೆ ಅದಕ್ಕೆ ಸರ್ಕಾರ ಹೋದ ವರ್ಷ ಉತ್ತರ ಕೊಟ್ಟಿದೆ ಏನೆಂದರೆ, Central Government ಗೆ ನಾವು ಪತ್ರ ಬರೆದಿದ್ದೇವೆ, ಅದಕ್ಕೆ ನಮಗೆ ಇನ್ನೂ ಉತ್ತರ ಸಿಕ್ಕಿಲ್ಲವೆಂದು ಹೇಳಿದರು ರೈಲ್ವೆ ಅಂಡರ್ ಬ್ರಿಡ್ಜ್ ವೈಡನಿಂಗ್ ಮಾಡುವುದಕ್ಕೆ ಒಂದು ವರ್ಷ ಬೇಕೇ ?

ಅಧ್ಯಕ್ಷರು – **ಆಯಿತು ಬಿಡಿ ಸರ್ಕಾರದ ಪರವಾಗಿ ಯಾರು ಉತ್ತರ ಹೇಳುತ್ತೀರಿ ?**

ಶ್ರೀ ಐವಾನ್ ನಿಗ್ಲಿ – ಮಾನ್ಯ ಅಧ್ಯಕ್ಷರೆ, ಇನ್ನೂ ನನ್ನ ಮಾತನ್ನು ಮುಗಿಸಿಲ್ಲ DRDO ಯಿಂದ Old Madras Road ನಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದೆ ಮತ್ತೆ ಅಲ್ಲಿಂದ ಸ್ವಲ್ಪ ಮುಂದೆ ಬಂದಾಗ NGEF ಹತ್ತಿರ ಟ್ರಾಫಿಕ್ ಜಾಮ್ ಆಗುತ್ತಿದೆ ಮತ್ತೆ ಅಲ್ಲಿಂದ ಮುಂದೆ ಬಂದಾಗ Old Madras Roadಗೆ ಕನೆಕ್ಟ್ ಆಗುವ ಚಿರಂಜನ್‌ದಾಸ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದೆ ಈ ಟ್ರಾಫಿಕ್ ಜಾಮ್ ಕಡಿಮೆ ಮಾಡುವುದಕ್ಕೋಸ್ಕರ ಏನು ಮಾಡಬೇಕೆಂಬುದರ ಬಗ್ಗೆ ನಾನು ಕೆಲವು ಸಲಹೆಗಳನ್ನು ಬರೆದುಕೊಂಡು ಬಂದಿದ್ದೇನೆ

ಅಧ್ಯಕ್ಷರು – ಅವರ ಪ್ರಶ್ನೆಗೆ ಯಾರಾದರೂ ಸಚಿವರು ಉತ್ತರ ಕೊಡಬೇಕು

ಶ್ರೀ ಐವಾನ್ ನಿಗ್ಲಿ – ಮೊಟ್ಟಮೊದಲಿಗೆ old madras Road ನಲ್ಲಿ ಬಿನ್ನಮಂಗಲ ಹತ್ತಿರ ಇರುವ ರೈಲ್ವೆ ಬ್ರಿಡ್ಜ್‌ನ್ನು ವೈಡನಿಂಗ್ ಮಾಡಬೇಕು ಎರಡನೆಯದಾಗಿ ಹೊಸಕೋಟೆಯಿಂದ ಇಂದಿರಾನಗರಕ್ಕೆ

ಅಧ್ಯಕ್ಷರು – ಯಾವ ವಿಷಯದ ಬಗ್ಗೆ ಮಾತನಾಡಬೇಕೆಂದು ತಾವು ಮೊದಲು ಬರೆದು ಕಳುಹಿಸಿಕೊಟ್ಟಿದ್ದೀರಾ? ಸುಮ್ಮನೆ ಬಂದು ಏನೋ ಕತೆ ಹೇಳುವ ಹಾಗೆ ಹೇಳುತ್ತಾ ಹೋದರೆ ಹೇಗೆ?

ಶ್ರೀ ಐವಾನ್ ನಿಗ್ಲಿ – ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಬರೆದುಕೊಟ್ಟಿದ್ದೇನೆ Airport Road ನಿಂದ ಹೊಸಕೋಟೆ ಕಡೆಗೆ ಹೋಗುವ ಚಿರಂಜನ್ ದಾಸ್ ರಸ್ತೆಗೆ NGEF ಹತ್ತಿರ ಒಂದು ಅಂಡರ್‌ಪಾಸ್ ವ್ಯವಸ್ಥೆ ಮಾಡಬೇಕು ಮತ್ತೆ DRDO ನಿಂದ Old Madras road ಗೆ one way traffic ಮಾಡಬೇಕು ಮತ್ತೆ ಇಂದಿರಾನಗರದಿಂದ Old Madras road ಗೆ ಬರುವ ದಾರಿಗೆ ಒಂದು ಅಂಡರ್‌ಪಾಸ್ ಮಾಡಬೇಕೆಂದು ಕೇಳುತ್ತಿದ್ದೇನೆ ಮತ್ತೆ ಆ ರಸ್ತೆಯನ್ನು ವೈಡನಿಂಗ್ ಮಾಡಿ ಅಂಡರ್ ಪಾಸ್ ಗೆ ಬ್ರಿಡ್ಜ್ ಮಾಡಬೇಕಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಾರಿಗೆ ಸಚಿವರು ತಮ್ಮ ಅಪ್ಪಣೆಯನ್ನು ಪಡೆದು ಕೆಆರ್‌ಎಸ್ ನಲ್ಲಿ ಭಾಗೀನ ಕೊಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಆದ್ದರಿಂದ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರಿಂದ ನಾಳೆ ದಿವಸ ಉತ್ತರವನ್ನು ಕೊಡಿಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಅಧ್ಯಕ್ಷರೆ ಐವಾನ್ ನಿಗ್ಲಿಯವರು ಪ್ರಸ್ತಾಪ ಮಾಡಿರುವ ವಿಷಯ ಏನೆಂದರೆ, Old Madras Road ತುಂಬಾ ಇಕ್ಕಟ್ಟಾಗಿರುವುದರಿಂದ ಟ್ರಾಫಿಕ್ ಜಾಮ್ ಜಾಸ್ತಿಯಾಗುತ್ತಿದೆ ಸದರಿ ರಸ್ತೆಯನ್ನು ವೈಡನಿಂಗ್ ಮಾಡಬೇಕೆಂಬುದು ಅವರ ಪ್ರಶ್ನೆಯಾಗಿದೆ

ಅಧ್ಯಕ್ಷರು – ಮಾನ್ಯ ವೈಜನಾಥ್ ಪಾಟೀಲ್ ರವರೆ ತಾವು ಮಾತನಾಡಿ

(3) ವಿಷಯ – "ಅನುದೇವ ಹೊರಗಣವನು" ಪುಸ್ತಕವನ್ನು ಮುಟ್ಟುಗೋಲು ಹಾಕುವ ಬಗ್ಗೆ

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) – ಮಾನ್ಯ ಅಧ್ಯಕ್ಷರೆ, ಬಸವಣ್ಣನವರ ಬಗ್ಗೆ ಪ್ರಕಟವಾಗಿರುವ ವಿವಾದಾತ್ಮಕ ಪುಸ್ತಕವನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಬಹಳಷ್ಟು ಮಂದಿಯಿಂದ ಬೇಡಿಕೆ ಬಂದಿದೆ ಇದರ ಬಗ್ಗೆ ಎರಡು ದಿವಸಗಳಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು ಆದರೆ, ಇದುವರೆವಿಗೂ ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ ಇವತ್ತಿನ ದಿವಸ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಗುಲ್ಬರ್ಗದಲ್ಲಿ ಆಚರಣೆ ಮಾಡುತ್ತಿದ್ದಾರೆ ಆದ್ದರಿಂದ ಸರ್ಕಾರ ಇದರ ಬಗ್ಗೆ ತೀವ್ರವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ

ಶ್ರೀ ಬಿ ಆರ್ ಪಾಟೀಲ್ (ಆಳಂದ) – ಮಾನ್ಯ ಅಧ್ಯಕ್ಷರೆ, ಇವತ್ತು ಗುಲ್ಬರ್ಗ ಬಂದ್‌ಗೆ ಕರೆ ಕೊಟ್ಟಿದ್ದಾರೆ ಇದರಿಂದ ಅಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ ಇದರ ಬಗ್ಗೆ ಸರ್ಕಾರ ದಯಮಾಡಿ ಏನಾದರೊಂದು ನಿರ್ಣಯವನ್ನು ತೆಗೆದುಕೊಳ್ಳಬೇಕು ಏಕೆಂದರೆ, ಇವತ್ತು ಗುಲ್ಬರ್ಗದಲ್ಲಿ ಆಗಿರುವಂತೆ ನಾಳೆ ದಿವಸ ಬೀದರ್, ರಾಯಚೂರು ಹಾಗೂ ಇಡೀ ರಾಜ್ಯದಲ್ಲಿ ಈ ರೀತಿಯಾದ ಅಶಾಂತಿ ವಾತಾವರಣ ನಿರ್ಮಾಣವಾಗಬಾರದು ಮತ್ತು ಇದರಿಂದ ಜನರಿಗೆ ತೊಂದರೆಯಾಗಬಾರದು, ಆ ದೃಷ್ಟಿಯಿಂದ ಇದಕ್ಕೆ ಸರ್ಕಾರ ಇತಿಶ್ರೀ ಹಾಡಬೇಕು ಇದರ ಬಗ್ಗೆ ಇನ್ನು ಎರಡು ದಿವಸಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು ಆದರೆ, ಎರಡು ದಿವಸ ಮುಗಿದು ಇವತ್ತಿಗೆ ನಾಲ್ಕು ದಿವಸ ಆಗಿದೆ ಆದ್ದರಿಂದ, ಸರ್ಕಾರಕ್ಕೆ ನಾನು ಹೇಳುವುದೇನೆಂದರೆ, ಈ ರೀತಿಯಾದ ಬಂದ್ ಕರೆಗಳು ನಾಳೆ ದಿವಸ ಮುಂದುವರಿಯುತ್ತಾ ಹೋದರೆ ರಾಜ್ಯದಲ್ಲಿ ಅಶಾಂತಿ ವಾತಾವರಣ ನಿರ್ಮಾಣಗೊಂಡು ಬೇರೆ ದಿಕ್ಕು ಹಿಡಿಯಬಾರದು ಆದ್ದರಿಂದ, ಇದರ ಬಗ್ಗೆ ಸರ್ಕಾರ ಆದಷ್ಟು ಬೇಗ ಒಂದು ನಿರ್ಣಯ ಕೈಗೊಳ್ಳಬೇಕು ಮತ್ತೆ ಇವತ್ತು ಗುಲ್ಬರ್ಗ ಬಂದ್‌ಗೆ ಕರೆ ಕೊಟ್ಟಿದ್ದಾರೆ ಇದರ ಬಗ್ಗೆ ತಕ್ಷಣ ಸ್ಪಂದಿಸಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ – (ತೋಟಗಾರಿಕೆ ಸಚಿವರು) ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಹುಕ್ಕೇರಿಯಲ್ಲಿಯೂ ಕೂಡ ಬಂದ್‌ಗೆ ಕರೆ ಕೊಟ್ಟಿದ್ದಾರೆ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ

ಶ್ರೀ ರಾಜೇಂದ್ರವರ್ಮ (ಹುಲಸೂರು) – ಮಾನ್ಯ ಅಧ್ಯಕ್ಷರೆ, ಈ ಪುಸ್ತಕದ ಸಂಬಂಧವಾಗಿ ಇಡೀ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳು ಬಂದ್ ಆಗುತ್ತಿವೆ ಆ ಒಂದು ಪುಸ್ತಕದಿಂದ ಇಡೀ ಸಮಾಜಕ್ಕೆ ಬಹಳ ಕೆಟ್ಟ ಪರಿಣಾಮ ಬೀರತಕ್ಕಂಥದಾಗಿದೆ ಆದ್ದರಿಂದ, ಆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುವಂಥ ಕೆಲಸವನ್ನು ಸರ್ಕಾರ ತಕ್ಷಣ ಮಾಡಬೇಕು ಕೇವಲ ಬಸವಣ್ಣನವರಲ್ಲದೆ ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಮತ್ತು ಕುವೆಂಪುರವರ ಬಗ್ಗೆ ಕೂಡ ಆ ಪುಸ್ತಕದಲ್ಲಿ ಹೇಳಲಾಗಿದೆ ಆದ್ದರಿಂದ, ಸರ್ಕಾರ ತಕ್ಷಣ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಇಲ್ಲದಿದ್ದರೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತದೆ ಆದ್ದರಿಂದ, ತಕ್ಷಣ ಆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನನ್ನ ಕಳಕಳಿಯಾಗಿದೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೇ ಈಗಾಗಲೇ ಎಲ್ಲಾ ಮಾನ್ಯ ಶಾಸಕರು ಹೇಳಿದಂತೆ

ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ರಚನೆ ಮಾಡಿದ್ದರು ಸಮಿತಿಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಸೀಲ್ಡ್ ಕವರ್ ನಲ್ಲಿಟ್ಟು ಮಾನ್ಯ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ ಸರ್ಕಾರ ಇದನ್ನು ಗಂಭೀರವಾಗಿ ಅವಲೋಕಿಸುತ್ತಿದೆ ಪ್ರಾಯಶಃ ಸೋಮವಾರ ಅಥವಾ ಮಂಗಳವಾರದೊಳಗೆ ಈ ಬಗ್ಗೆ ಸರ್ಕಾರ ನಿರ್ಣಯ ಕೈಗೊಳ್ಳುತ್ತದೆ

(4) ವಿಷಯ – ನಕ್ಸಲ್ ಕಾರ್ಯಾಚರಣೆಯಲ್ಲಿ ಮೃತಪಟ್ಟ ವೆಂಕಟೇಶ್ ರವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) – ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಕ್ಷೇತ್ರದಲ್ಲಿ ನಕ್ಸಲೀಯರ ಉಪಟಳ ವಿಚಿತ್ರವಾದಂಥ ರೀತಿಯಲ್ಲಿ ಆಗುತ್ತಿದೆ ಎರಡು–ಮೂರು ಸಾರಿ ಈ ವಿಷಯವನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ 17 ನೇ ತಾರೀಖಿನ ದಿವಸ ಆಗುಂಬೆ ಹತ್ತಿರ ನಡೆದಿರತಕ್ಕಂಥ ಒಂದು ಚಕಮಕಿಯಲ್ಲಿ ನನ್ನ ಕ್ಷೇತ್ರದ ಪೊಲೀಸ್ ಅಧಿಕಾರಿಯಾರಿರುವಂಥ ASI ವೆಂಕಟೇಶ್‌ರವರು ಆಹುತಿಯಾಗಿದ್ದಾರೆ ಅವರು ಸ್ಥಳೀಯರಾಗಿದ್ದರು ಮತ್ತು ಪೊಲೀಸ್‌ನವರಿಗೆ ಸಹಾಯ ಮಾಡತಕ್ಕಂಥ ವ್ಯಕ್ತಿಯಾಗಿದ್ದರು ಏಕೆಂದರೆ, ಆ ಗುಡ್ಡಗಾಡಿನಲ್ಲಿ ಎಲ್ಲಾ ರಸ್ತೆಗಳು ಗೊತ್ತಿರುವಂಥ ವ್ಯಕ್ತಿಯಾಗಿದ್ದರು ಅವರು ಮಾಲೂರಿನಲ್ಲಿ ಕೆಲಸ ಮಾಡುತ್ತಿದ್ದರೂ ಸಹ, ನಕ್ಸಲೈಟ್‌ಗೋಸ್ಕರ ಆಗುಂಬೆಯಲ್ಲಿ ಅವರ ಕೆಲಸವನ್ನು ಬಳಸಿಕೊಳ್ಳಲಾಗುತ್ತಿತ್ತು ಇಂಥ ಸಂದರ್ಭದಲ್ಲಿ ಅವರು ಮೃತಪಟ್ಟಿದ್ದಾರೆ ಇಂಥ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅಲ್ಲಿಗೆ ಅಧಿಕಾರಿಗಳನ್ನು ಹಾಕಿದರೂ ಕೂಡ ಅಲ್ಲಿಗೆ ಹೋಗಲಾರದಂಥ ಸ್ಥಿತಿಯಲ್ಲಿ, ತಮ್ಮ ಎದೆಕೊಟ್ಟು ಹೋಗುವಂಥ ಪೊಲೀಸ್ ಅಧಿಕಾರಿಗಳಿಗೆ ಮತ್ತೆ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಧೈರ್ಯ ತುಂಬತಕ್ಕಂಥ ಕೆಲಸ ಸರ್ಕಾರದ ಕಡೆಯಿಂದ ಆಗಬೇಕಾಗಿದೆ ಮೃತಪಟ್ಟಿರುವ ವೆಂಕಟೇಶ್ ಕುಟುಂಬ ವರ್ಗದವರಿಗೆ ಆರ್ಥಿಕವಾಗಿ ಬಹಳ ದೊಡ್ಡ ಸಹಾಯವನ್ನು ಸರ್ಕಾರ ಮಾಡಬೇಕು ಮತ್ತು ಅವರ ಮಗನಿಗೆ ಇಲಾಖೆಯಲ್ಲಿ ಒಂದು ನೌಕರಿಯನ್ನು ಕೊಡಬೇಕು ಪೊಲೀಸ್ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳು ಆತನ ಮನೆಗೆ ಭೇಟಿ ಮಾಡಿದ್ದರು ಮತ್ತೆ ನಾನೂ ಕೂಡ ಹೋಗಿದ್ದೆ 18 ನೇ ತಾರೀಖಿನ ದಿವಸ ಅವರ ಶವಸಂಸ್ಕಾರದ ದಿವಸ ಇಡೀ ತಾಲ್ಲೂಕು ಬಂದ್ ಆಚರಿಸಿ, ಅವರಿಗೆ ಸಹಮತಿಯನ್ನು ವ್ಯಕ್ತಪಡಿಸಿತು ಮತ್ತೆ ನಕ್ಸಲರ ವಿರುದ್ಧ ನಾವೆಲ್ಲರೂ ಇದ್ದೇವೆಂಬ ಸಂದೇಶವನ್ನು ನನ್ನ ತಾಲ್ಲೂಕಿನಲ್ಲಿ ಕಳುಹಿಸಿಕೊಡಲಾಗಿದೆ ಆ ಒಂದು ಹೋರಾಟದಲ್ಲಿ ಮಡಿದಂಥ ಪೊಲೀಸ್ ಅಧಿಕಾರಿಯ ಕುಟುಂಬಕ್ಕೆ ಯೋಗ್ಯವಾಗಿರತಕ್ಕದಕಂಥ ಪರಿಹಾರವನ್ನು ಸರ್ಕಾರ ಕೊಡಿಸಿಕೊಡಬೇಕೆಂದು ನಾನು ಸರ್ಕಾರವನ್ನು ವಿನಂತಿಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಡಿ ಜಿ ರವರು ಹಾಗೂ ಉನ್ನತಮಟ್ಟದ ಅಧಿಕಾರಿಗಳು ಮತ್ತು ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟಂಥ ಎಡಿಜಿಪಿ ಶಂಕರ್‌ಬಿದರಿಯವರೆಲ್ಲರೂ ಕೂಡ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ ಮತ್ತೆ ಅಲ್ಲಿ ವೆಂಕಟೇಶ್ ರವರು ಗುಂಡೇಟಿನಿಂದ ಮರಣ ಹೊಂದಿರುವ ಹಿನ್ನಲೆಯಲ್ಲಿ Forensic Laboratory ಗೆ ಈ ವಿಚಾರವನ್ನು ಕಳುಹಿಸಿಕೊಟ್ಟಿದ್ದಾರೆ ಇಡೀ ದಿವಸ ಕೂಡ ತಮ್ಮ ಜೊತೆಗೆ ಸಂಪರ್ಕ ಮಾಡಿದ್ದಾರೆ ತಾವೂ ಕೂಡ ಅವರ ಜೊತೆಗೆ ಸಂಪರ್ಕ ಮಾಡಿದ್ದೀರಿ ಮೃತರ ಮನೆಗೆ ಹೋಗಿ ಸಾಂತ್ವನ ಹೇಳುವುದರ ಜೊತೆಗೆ ಅವರ ಕುಟುಂಬ ವರ್ಗದವರಿಗೆ ಉದ್ಯೋಗವನ್ನು ಕೊಡಬೇಕೆಂದು ಹಾಗೂ ಒಳ್ಳೆಯ ಪರಿಹಾರವನ್ನು ಕೊಡಬೇಕೆಂಬುದರ ಬಗ್ಗೆ ಕೂಡ ನಿರ್ಧಾರ ಮಾಡಿದ್ದೇವೆ ಇದರ ಬಗ್ಗೆ ಖಚಿತವಾದಂಥ ಲಿಖಿತ ಹೇಳಿಕೆಯ ಉತ್ತರವನ್ನು ಸೋಮವಾರ ನಾನು ಕೊಡುತ್ತೇನೆ ಏಕೆಂದರೆ, ಇದು ಬಹಳ ಸೂಕ್ಷ್ಮವಾದಂಥ ವಿಚಾರವಾಗಿದೆ

(5) ವಿಷಯ – 1 ನೇ ತರಗತಿಯಿಂದ 10 ನೇ ತರಗತಿ ಯವರೆಗಿನ ಕನ್ನಡ ಪಠ್ಯ ಪುಸ್ತಕದಲ್ಲಿ ರಾಷ್ಟ್ರಗೀತೆಯನ್ನು ಮುದ್ರಿಸದೇ ಇರುವ ಬಗ್ಗೆ

† **ಶ್ರೀ ವಿ ಸುನೀಲ್ ಕುಮಾರ್ (ಕಾರ್ಕಳ)** – ಮಾನ್ಯ ಅಧ್ಯಕ್ಷರೆ, 2007 ನೇ ಸಾಲಿನ 1 ನೇ ತರಗತಿಯಿಂದ 10 ನೇ ತರಗತಿವರೆಗಿನ ಕನ್ನಡ ಪಠ್ಯಪುಸ್ತಕಗಳಲ್ಲಿ ರಾಷ್ಟ್ರಗೀತೆಯನ್ನು ಮತ್ತು ನಾಡಗೀತೆಯನ್ನು ಈ ವರ್ಷ ಮುದ್ರಣ ಮಾಡದೇ ಕೈಬಿಡಲಾಗಿದೆ ಸುವರ್ಣ ಕರ್ನಾಟಕದ ವರ್ಷವನ್ನು ಆಚರಿಸುತ್ತಿರುವಂಥ ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಯ, ಮಕ್ಕಳಿಗೆ ಈ ನಾಡಿನ ಮತ್ತು ದೇಶದ ಬಗ್ಗೆ ಹಾಗೂ ಈ ದೇಶದ ಎಲ್ಲಾ ಹೋರಾಟಗಾರರ ಬಗ್ಗೆ ಗೌರವವನ್ನು ಮತ್ತು ಭಕ್ತಿಯನ್ನು ಮೂಡಿಸಬೇಕಾಗಿರತಕ್ಕಂಥ ಗೀತೆಗಳನ್ನು ಸರ್ಕಾರ ಯಾವ ಹಿನ್ನಲೆಯಲ್ಲಿ ಕೈಯಿಟ್ಟಿದೆ ಎನ್ನುವುದು ನಮಗೆ ಅರ್ಥವಾಗಿತ್ತಿಲ್ಲ ಕೆಲವು ವರ್ಷಗಳ ಹಿಂದೆ ನಾಡಗೀತೆಯಲ್ಲಿದ್ದ ಒಂದು ಸಾಲನ್ನು ಬಿಟ್ಟಿದ್ದಕ್ಕೋಸ್ಕರ ನಾಡಿನ ಎಲ್ಲಾ ಜನರೂ ಕೂಡ ಒಂದು ಧ್ವನಿಯಾಗಿ ಹೋರಾಟ ಮಾಡಿದ್ದರ ಪರಿಣಾಮವಾಗಿ ಮತ್ತೆ ಆ ಒಂದು ಸಾಲನ್ನು ಸೇರಿಸಿದಂಥ ಇತಿಹಾಸ ನಮ್ಮ ಕರ್ನಾಟಕದಲ್ಲಿತ್ತು ಆದರೆ, ಈ ವರ್ಷ 1 ನೇ ತರಗತಿಯಿಂದ 10 ನೇ ತರಗತಿವರೆಗಿನ ಕನ್ನಡ ಕಸ್ತೂರಿ ಎನ್ನುವಂಥ ಎಲ್ಲಾ ಪಠ್ಯ ಪುಸ್ತಕಗಳಲ್ಲಿಯೂ ಕೂಡ ರಾಷ್ಟ್ರಗೀತೆಯನ್ನು ಮತ್ತು ನಾಡಗೀತೆಯನ್ನು ಬಿಟ್ಟಿರುವಂಥದ್ದು ಅತ್ಯಂತ ವಿಷಾದನೀಯವಾದಂತಹ ಸಂಗತಿ ಆದರೆ, ಇಂಗ್ಲೀಷ್ ಪಠ್ಯಪುಸ್ತಕಗಳಲ್ಲಿ ಆ ಗೀತೆಗಳನ್ನು ಸೇರಿಸಿದ್ದಾರೆ ಆದರೆ, ಕನ್ನಡ ಪಠ್ಯಪುಸ್ತಕಗಳಲ್ಲಿ ಗೀತೆಗಳನ್ನು ಯಾವ ಹಿನ್ನಲೆಯಲ್ಲಿ ಸರ್ಕಾರ ಕೈಬಿಟ್ಟಿದೆ ಎಂಬುದು ಗೊತ್ತಿಲ್ಲ ತಕ್ಷಣ ಸರ್ಕಾರ ಇದರ ಬಗ್ಗೆ ಅರ್ಥ ಮಾಡಿಕೊಂಡು ಆ ಎಲ್ಲಾ ಗೀತೆಗಳನ್ನು ಮತ್ತೊಮ್ಮೆ ಪಠ್ಯಪುಸ್ತಕದಲ್ಲಿ ಸೇರಿಸುವಂಥ ಕ್ರಮವನ್ನು

† ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ

ಸರ್ಕಾರ ಕೈಗೊಳ್ಳಬೇಕೆಂದು ಆಗ್ರಹವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯವನ್ನು ಅವರ ಗಮನಕ್ಕೆ ತಂದು ಪ್ರಾಯಶಃ ಸೋಮವಾರದ ದಿವಸ ಖಚಿತವಾದ ಉತ್ತರವನ್ನು ನಾನು ಕೊಡಿಸುತ್ತೇನೆ

(6) ವಿಷಯ – ಮೈಸೂರು ನಗರದ ಕೆಲವು ಭಾಗಗಳಿಗೆ ನೀರನ್ನು ಕೊಡಿಸುವಂಥ ವ್ಯವಸ್ಥೆ ಕುರಿತು

ಶ್ರೀ ಎಂ ಆರ್ ಸೋಮಶೇಖರ್ (ಕೃಷ್ಣರಾಜ) – ಮಾನ್ಯ ಅಧ್ಯಕ್ಷರೆ, ಮೇಳಾಪುರ 2 ನೇ ಹಂತದ ಯೋಜನೆ ಮೈಸೂರು ನಗರಕ್ಕೆ ಬಂತು ಅಲ್ಲಿಂದಲೂ ಕೂಡ 11 ಎಂಜಿಡಿ ನೀರು ಬರುವಂಥ ಒಂದು ವ್ಯವಸ್ಥೆಯಾಗಿದೆ ಅದು ಅಲ್ಲದೇ ಈಗ KRS ನಲ್ಲಿ ನೀರು ತುಂಬಿದೆ ಒಟ್ಟು 47 ಎಂಜಿಡಿ ನೀರಿನಲ್ಲಿ 33 ಎಂಜಿಡಿ ನೀರು ಮೈಸೂರು ನಗರಕ್ಕೆ ದೊರೆಯುತ್ತಿದೆ ಇನ್ನು ಮಿಕ್ಕಿದ ನೀರು ಸೋರಿಕೆಯಾಗುತ್ತಿದೆ ಅದು ಅಲ್ಲದೇ ಈಗ 11 ಎಂಜಿಡಿ ನೀರು ಹೊಸದಾಗಿ ಬಂದಿದ್ದರೂ ಕೂಡ ನಗರದಲ್ಲಿ ನೀರಿನ ಸಮಸ್ಯೆ ಅಗಾಧವಾಗಿದೆ 8–8 ದಿವಸವಾದರೂ ಕೆಲವೊಂದು ಏರಿಯಾಗಳಲ್ಲಿ ನೀರನ್ನು ಕೊಟ್ಟಿಲ್ಲ ಕೃಷ್ಣಮೂರ್ತಿಪುರಂ, ವಿದ್ಯಾರಣ್ಯಪುರಂ, ಅಶೋಕಪುರಂ ಇಂತಹ ಕಡೆ ನೀರನ್ನು ಕೊಟ್ಟಿಲ್ಲ ನಗರದ ಮಂಡಿಮೊಹಲ್ಲಾ ಇಂತಹ ಕಡೆ 8 ದಿವಸಕ್ಕೆ ಒಂದು ಸಲ ನೀರು ಕೊಡುವಂಥ ಒಂದು ವ್ಯವಸ್ಥೆ ಅನೇಕ ಕಡೆಗಳಲ್ಲಿ ನೀರಿನ ಸಮಸ್ಯೆ ಅಗಾಧವಾಗಿದೆ ಜನಗಳು ಬಹಳ ಪರಿತಪಿಸುತ್ತಿದ್ದಾರೆ ನೀರು ಇದ್ದರೂ ಕೂಡ ಕೊಡಲಾಗದ ಅಲ್ಲಿಯ ಅಧಿಕಾರಿಗಳು ಸರಿಯಾಗಿ ಆಡಳಿತವನ್ನು ನಡೆಸುವುದಕ್ಕೆ ಆಗದೇ ಜನಗಳಿಗೆ ನೀರನ್ನು ಕೊಡುತ್ತಿಲ್ಲ ದಯಮಾಡಿ ಇದಕ್ಕೆ ಗಮನವನ್ನು ಹರಿಸಿ ಮೈಸೂರು ನಗರಕ್ಕೆ ನೀರನ್ನು ಕೊಡಿಸುವಂಥ ಒಂದು ವ್ಯವಸ್ಥೆಯನ್ನು ಮಾಡಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಮಾನ್ಯ ಅಧ್ಯಕ್ಷರೆ,

ಮೈಸೂರು ನಗರದಲ್ಲಿ ಸದ್ಯದಲ್ಲಿ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗಿತ್ತಿದ್ದು, 8 ದಿನಕ್ಕೊಮ್ಮೆ ಮಾಡಲಾಗುತ್ತಿಲ್ಲ ಮೈಸೂರು ನಗರಕ್ಕೆ 43 ಎಂಜಿಡಿ ನೀರಿನ ಅವಶ್ಯಕತ ಇದ್ದು, 38 ಎಂಜಿಡಿ ನೀರನ್ನು ಪಡೆದುಕೊಳ್ಳಲಾಗುತ್ತಿದೆ ಇದರಲ್ಲಿ ಕೈಗಾರಿಕೆಗಳು, ನಗರ ಪಾಲಿಕೆಯ ವ್ಯಾಪ್ತಿಗೆ ಸೇರದ 6 ಗ್ರಾಮಗಳಿಗೆ ಸೇರಿ ಸುಮಾರು 6 ಎಂಜಿಡಿ ನೀರನ್ನು ಸರಬರಾಜು ಮಾಡುತ್ತಿದ್ದು, ಉಳಿಕೆ 32 ಎಂಜಿಡಿ ನೀರು ಮೈಸೂರಿನ ಜನತೆಗೆ ಕುಡಿಯುವ ನೀರಿಗಾಗಿ ಸರಬರಾಜಾಗುತ್ತಿದೆ ಈ ನೀರನ್ನು ಮೈಸೂರು ನಗರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಡಾವಣೆಗಳಿಗೆ ಸರಬರಾಜು ಮಾಡಲಾಗುತ್ತಿದೆ ಈ ರೀತಿ ದಿನ ಬಿಟ್ಟು ದಿನ ನೀರು ಸರಬರಾಜು ಮಾಡುವಾಗ ವಿದ್ಯುತ್ ವ್ಯತ್ಯಯ ಮತ್ತು ಪಂಪ್‌ಗಳು ದುರಸ್ಥಿಗೆ ಬಂದರೆ ಆ ದಿನ ನೀರು ಸರಬರಾಜು ಮಾಡಲು ತೊಂದರೆಯುಂಟಾಗುತ್ತದೆ

ಮೇಳಾಪುರ 2 ನೇ ಹಂತದಿಂದ ಸುಮಾರು 11 ಎಂಜಿದಿ ನೀರನ್ನು ಪಡೆಯುವ ಯೋಜನೆ ಕಳೆದ ಮೇ ತಿಂಗಳಿನಲ್ಲಿ ಪ್ರಾರಂಭಿಸಿದ್ದು, ಈ ಯೋಜನೆಯಲ್ಲಿ 2 ಸೇಪ್ಟಿವಾಲ್ವ್‌ಗಳನ್ನು ಅಳವಡಿಸುವ ಕಾರ್ಯ ಬಾಕಿ ಇದ್ದು, ಈ ಕಾರ್ಯವನ್ನು ಹತ್ತು ದಿನಗಳಲ್ಲಿ ಮುಗಿಸಲಾಗುವುದು ಈ ಯೋಜನೆಯಿಂದ ಸಧ್ಯ ಶೇಕಡ 50 ರಷ್ಟು ನೀರು ಮಾತ್ರ ಸರಬರಾಜಾಗುತ್ತಿದೆ ಸೇಫ್ಟಿವಾಲ್ವ್‌ಗಳನ್ನು ಅಳವಡಿಸಿದ ನಂತರ ಪೂರ್ಣ ಪ್ರಮಾಣದ ನೀರು ಸರಬರಾಜು ಆಗುವುದು

ಮೈಸೂರು ನಗರದಲ್ಲಿ 40-50 ವರ್ಷಗಳಷ್ಟು ಹಳೆಯದಾದ ನೀರು ವಿತರಣಾ ಜಾಲಗಳಿದ್ದು, ನೀರು ಸಮ ಪ್ರಮಾಣದಲ್ಲಿ ಹರಿಯುವುದಿಲ್ಲ ಬಹುತೇಕ ಪ್ರದೇಶಗಳಲ್ಲಿ ಏರು ಕೊಳವೆಯಿಂದ ನೇರವಾಗಿ ನೀರು ಸರಬರಾಜು ಮಾಡುತ್ತಿದ್ದು, ವಿದ್ಯುತ್ ವ್ಯತ್ಯಯ ಮತ್ತು ಪಂಪ್‌ಗಳು ಕೆಟ್ಟುಹೋದಾಗ ನೀರುಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿದೆ ನೀರು ವಿತರಣಾ ಸಮಸ್ಯೆಯನ್ನು ಬಗೆಹರಿಸಲು ಮೈಸೂರು ನಗರಕ್ಕೆ ಹೊಸದಾಗಿ ವಿತರಣಾ ಜಾಲವನ್ನು ಹೊಸದಾಗಿ ಪುನರ್ ವಿನ್ಯಾಸಗೊಳಿಸಲು ಜವಾಹರಲಾಲ್ ನೆಹರೂ ರಾಷ್ಟ್ರೀಯ ನಗರ ಪುನರುಜ್ಜೀವನ ಯೋಜನೆಯಡಿಯಲ್ಲಿ ಕ್ರಮ ಕೈಗೊಂಡಿದ್ದು, ಈ ಯೋಜನೆಗಾಗಿ 194 54 ಕೋಟಿ ರೂಪಾಯಿಗಳ ಯೋಜನೆಗೆ ಅನುಮೋದನೆ ದೊರೆತಿದ್ದು, ಇದರಲ್ಲಿ ರೂ 31 6 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ ಈ ಯೋಜನೆಯ ಕಾರ್ಯವನ್ನು 4 ಪ್ಯಾಕೇಜ್‌ಗಳಲ್ಲಿ ಕಾರ್ಯಗತಗೊಳಿಸಲು ಕ್ರಮ ಕೈಗೊಂಡಿದ್ದು, 3 ಪ್ಯಾಕೇಜ್‌ಗಳಿಗೆ ಟೆಂಡರ್ ಕರೆಯಲಾಗಿದೆ ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಈ ಯೋಜನೆ ಅನುಷ್ಠಾನಗೊಂಡ ನಂತರ ಮೈಸೂರು

ಜನತೆಗೆ ದಿನದ 24 ಗಂಟೆಯೂ ನೀರನ್ನು ಒದಗಿಸುವ ಯೋಜನೆಯಿದೆ ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅನುಷ್ಠಾನಗೊಳಿಸುತ್ತಿದೆ

ಶ್ರೀ ಎಂ ಆರ್ ಸೋಮಶೇಖರ್ ಮಾನ್ಯ ಅಧ್ಯಕ್ಷರೆ, ಮೈಸೂರು ಜನರಿಗೆ ಸಾಕಾಗಿದೆ ಆದರೆ ಅಲ್ಲಿ ನೀರನ್ನು ಸರಿಯಾಗಿ ವಿತರಣೆ ಮಾಡದಿರುವ ಅಧಿಕಾರಿಗಳಿಂದ ನಗರದಲ್ಲಿ ನೀರಿನ ಬವಣೆಯನ್ನು ಜನಗಳು ಅನುಭವಿಸುತ್ತಿದ್ದಾರೆ ಕಳೆದ ಒಂದೆರಡು ವರ್ಷದಿಂದ ಜನರು ಇದೇ ಅವಸ್ಥೆಯನ್ನು ಅನುಭವಿಸುತ್ತಿದ್ದಾರೆ ಅಧಿಕಾರಿಗಳು ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿದರೆ ಎಲ್ಲರಿಗೂ ನೀರನ್ನು ಕೊಡಬಹುದು ನೀರನ್ನು ಕೊಡುತ್ತಿದ್ದಾರೆ, ಇಲ್ಲವೆಂದು ಅಲ್ಲ ಅಧಿಕಾರಿಗಳು ಅಲ್ಲಿ ಸರಿಯಾಗಿ ಕೆಲಸವನ್ನು ಮಾಡಬೇಕಾಗಿದೆ ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗುವಂತೆ ಸೂಚನೆ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ .– (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮುಖ್ಯ ಮಂತ್ರಿಗಳ ಪರವಾಗಿ – ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶಾಸಕರ ಅಭಿಪ್ರಾಯದಂತೆ, ಸರ್ಕಾರಿ ಅಧಿಕಾರಿಗಳಿಗೆ ನಿರ್ದೇಶನವನ್ನು ಕಳುಹಿಸಿಕೊಡಲಾಗುವುದು

(7) **ವಿಷಯ** – ತಿರುಪತಿ ಮಾದರಿ ವಿಶ್ರಾಂತಿ ಗೃಹ ಮಹಾರಾಷ್ಟ್ರದ ಪಂಡರಾಪುರದಲ್ಲಿ ನಿರ್ಮಿಸುವ ಬಗ್ಗೆ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗ) – ಮಾನ್ಯ ಅಧ್ಯಕ್ಷರೆ, ಮಾನ್ಯ ಧಾರ್ಮಿಕ ದತ್ತಿ ಸಚಿವರು ಹಾಗೂ ಕಂದಾಯ ಸಚಿವರು ಸದನದಲ್ಲಿ ಇದ್ದಾರೆ ಮಹಾರಾಷ್ಟ್ರದ ಪಂಢರಪುರದ ದೇವಸ್ಥಾನದಲ್ಲಿ ಆಷಾಢ ಏಕಾದಶಿ ಮತ್ತು ಕಾರ್ತಿಕ ಮಾಸದಲ್ಲಿ ಎರಡು ಬೃಹತ್ ಪೂಜೆಗಳು ನಡೆಯುತ್ತವೆ ಸಾಕಷ್ಟು ಜನ ಕರ್ನಾಟಕ ರಾಜ್ಯದಿಂದ, ಅದರಲ್ಲೂ ವಿಶೇಷವಾಗಿ ಬೆಳಗಾಂದಿಂದ ಹಾಗೂ ಗುಲ್ಬರ್ಗಾ ಜಿಲ್ಲೆಯಿಂದ ಪಂಢರಪುರ ಯಾತ್ರೆಗೆ ಪ್ರತಿ ವರ್ಷ ಕಾಲು ನಡಿಗೆಯಿಂದ ಲಕ್ಷಾಂತರ ಜನ ಆ ದೇವಸ್ಥಾನಕ್ಕೆ ಹೋಗುತ್ತಾರೆ ನಮ್ಮ ಕರ್ನಾಟಕ ಸರ್ಕಾರದ ವತಿಯಿಂದ ಅಲ್ಲಿ ಒಂದು ಜಾಗವನ್ನು ಖರೀದಿ ಮಾಡಿ, ಒಂದು ತಂಗುದಾಣವನ್ನು ನಿರ್ಮಾಣ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ ತಂಗುದಾಣವನ್ನು ನಿರ್ಮಿಸಿಕೊಟ್ಟರೆ, ಪಂಡರಪುರಕ್ಕೆ ನಮ್ಮ ಕರ್ನಾಟಕ ರಾಜ್ಯದಿಂದ ಹೋಗುವ ಜನರಿಗೆ ಅಲ್ಲಿ ಉಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಬೇರೆ ಬೇರೆ ಛತ್ರದಲ್ಲಿ ಇರುವಂಥ ಒಂದು ಪರಿಸ್ಥಿತಿ ಬಂದಿರುತ್ತದೆ

ನನಗೆ ತಿಳಿದಿರುವ ಪ್ರಕಾರ ಬೆಳಗಾಂ ಜಿಲ್ಲೆಯಿಂದ 4–5 ಲಕ್ಷ ಜನರು ಪ್ರತಿ ವರ್ಷ ಎರಡು ಸಲ ಆಷಾಢ ಏಕಾದಶಿ ಮತ್ತು ಕಾರ್ತಿಕ ಏಕಾದಶಿಗೆ ಎಂದು ಎರಡು ತಿಂಗಳು ಹೋಗುತ್ತಾರೆ ದಯವಿಟ್ಟು 5 ಕೋಟಿ ರೂ ಗಳನ್ನು ಕೊಟ್ಟು ಪಂಢರಪುರದಲ್ಲಿ ಒಂದು ವಿಶ್ರಾಂತಿ ಗೃಹವನ್ನು ನಿರ್ಮಾಣ ಮಾಡಬೇಕು ಈಗಾಗಲೇ ನೀವು ತಿರುಪತಿಯಲ್ಲಿ ವಿಶ್ರಾಂತಿ ಗೃಹವನ್ನು ನಿರ್ಮಾಣ ಮಾಡಿದ್ದೀರಿ, ಆ ತರಹ ಮಹಾರಾಷ್ಟ್ರದ ಪಂಢರಪುರದಲ್ಲಿ ಬೇಡಿಕೆ ಇರುವುದರಿಂದ, ಇನ್ನು ಎರಡು ದಿವಸಕ್ಕೆ ಕಾಲು ನಡಿಗೆಯಿಂದ ಪಂಢರಪುರಕ್ಕೆ ಜನ ಹೋಗುವುದರಿಂದ, ಒಂದು ಸಮಾಧಾನಕರವಾದ ಉತ್ತರವನ್ನು ನಮ್ಮ ಧಾರ್ಮಿಕ ದತ್ತಿ ಸಚಿವರು ಕೊಡುತ್ತಾರೆಂದು ಇವತ್ತು ನಾನು ಅವರಲ್ಲಿ ಕಳಕಳಿಯಿಂದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ

ಶ್ರೀ ಎ ಬಿ ಪಾಟೀಲ್ – ಮಾನ್ಯ ಅಧ್ಯಕ್ಷರೆ, ನಿಜವಾಗಲೂ ಇವತ್ತು ಇದು ಬಹಳ ಅವಶ್ಯಕವಾಗಿರುತ್ತದೆ ಉತ್ತರ ಕರ್ನಾಟಕದ ಜನ ಪ್ರತಿ ವರ್ಷಕ್ಕೆ ಎರಡು ಸಲ ಪಂಢರಪುರಕ್ಕೆ ಹೋಗುವುದರಿಂದ ಅಲ್ಲಿ ಉಳಿದುಕೊಳ್ಳುವುದಕ್ಕೆ ನಮ್ಮ ಕರ್ನಾಟಕದ ಜನರಿಗೆ ಜಾಗವನ್ನೇ ಕೊಡುವುದಿಲ್ಲ ಇವತ್ತು ಲಕ್ಷಾಂತರ ಜನ ಪಂಢರಪುರಕ್ಕೆ ಹೋಗುವುದರಿಂದ ಮಾನ್ಯ ಧಾರ್ಮಿಕ ದತ್ತಿ ಸಚಿವರು ಮತ್ತು ಕಂದಾಯ ಸಚಿವರು ಇದನ್ನು ಆದಷ್ಟು ಬೇಗನೆ ಒಂದು ಯಾತ್ರಾನಿವಾಸವಾಗಲಿ ಅಥವಾ ಒಂದು ವಿಶ್ರಾಂತಿಗೃಹ ಮಾಡುತ್ತೇವೆಂದು ಇವತ್ತೇ ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಉಪಾಧ್ಯಕ್ಷರೆ, ಮಹಾರಾಷ್ಟ್ರದ ಪಂಢರಪುರ ಹಾಗೂ ಕೊಲ್ಲಾಪುರಕ್ಕೆ ಕರ್ನಾಟಕದಿಂದ ಸಾಕಷ್ಟು ಜನ ಹೋಗುವುದರಿಂದ ಆ ಎರಡು ಜಾಗಕ್ಕೆ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕು

ಶ್ರೀ ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) – ಮಾನ್ಯ ಉಪಾಧ್ಯಕ್ಷರೆ, ಪಂಢರಪುರ ಎಲ್ಲಿದೆ? ಈಗಾಗಲೇ ಮಾನ್ಯ ಹುಕ್ಕೇರಿಯವರು ಹಾಗೂ ಎ ಬಿ ಪಾಟೀಲ್‌ರವರು ಹೇಳಿದ ಹಾಗೆ ಪಂಢರಪುರದ ಉತ್ಸವಕ್ಕೆ ಸುಮಾರು 15 ಲಕ್ಷ ಜನ ಯಾವಾಗಲೂ ಕರ್ನಾಟಕ ರಾಜ್ಯದಿಂದ ಹೋಗುತ್ತಾರೆ ಪ್ರತಿವರ್ಷ ಕೂಡ ಅಲ್ಲಿಯ ಮುಖ್ಯಮಂತ್ರಿಗಳು ಬರುತ್ತಾರೆ ಅದು ಬಡವರು

ಹೋಗತಕ್ಕಂಥ ದೇವಸ್ಥಾನ, ಅಲ್ಲಿಗೆ ಕಾಲುನಡಿಗೆಯಿಂದ ನಡೆದುಕೊಂಡು ಹೋಗುತ್ತಾರೆ ಪಂಢರಪುರದ ಕಾರ್ತಿಕ ಏಕಾದಶಿಗೆ ಹೋಗತಕ್ಕಂಥದ್ದು ತಿರುಪತಿ, ಶಿರಡಿ ಸಾಯಿಬಾಬಾ ದೇವಸ್ಥಾನಗಳು ಅವು ಬೇರೆ ಬಡವರು ಕಾಲು ನಡಿಗೆಯಿಂದ ಹೋಗುವ ದೇವಸ್ಥಾನ ಇದೆ ಪಂಢರಪುರದ ಒಂದು ಪವಿತ್ರವಾದ ದೇವಸ್ಥಾನಕ್ಕೆ ಹೋಗುವುದರಿಂದ ಕರ್ನಾಟಕದ ಪರವಾಗಿ ಅಲ್ಲಿ ಒಂದು ಗೆಸ್ಟ್‌ಹೌಸ್‌ನ್ನು ಮಾಡಬೇಕೆಂದು ಕೇಳುತ್ತಿದ್ದಾರೆ ಅಲ್ಲಿ ಮಾಡುವುದಕ್ಕೆ ಬಜೆಟ್‌ನಿಂದ ದುಡ್ಡನ್ನು ಬಿಡುಗಡೆ ಮಾಡಬೇಕು ಅಲ್ಲಿಗೆ ಹೋಗಿ ಶಂಕುಸ್ಥಾಪನೆ ಕೂಡ ಮಾಡಿ ಬನ್ನಿ

ಶ್ರೀ ಕಾಕಾಸಾಹೇಬ ಪಾಂಡುರಂಗ ಪಾಟೀಲ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಧರ್ಮಸಿಂಗ್ ಸಾಹೇಬರು ಹೇಳಿದ ಪ್ರಕಾರ, ಪಂಢರಪುರ ದೇವಸ್ಥಾನಕ್ಕೆ ಬಹಳ ಬಡ ಜನರು ಹೋಗುತ್ತಾರೆ ಎಲ್ಲಾ ಜಾತಿ ಪಂಥದ ಜನರು ಹೋಗುತ್ತಾರೆ ಅದರಲ್ಲಿ ವಿಶೇಷವಾಗಿ ಬೆಳಗಾಂ, ಬಿಜಾಪುರ, ಗುಲ್ಬರ್ಗಾ ಜಿಲ್ಲೆಯಿಂದ ಸಾಕಷ್ಟು ಜನರು ಹೋಗುತ್ತಾರೆ ಈಗ ಅದಕ್ಕೆ 5 ಕೋಟಿ ರೂ ಗಳನ್ನು ಮೀಸಲಾತಿ ಮಾಡಿ ಒಂದು ಘೋಷಣೆಯನ್ನು ಮಾಡಬೇಕು ಇದೇ 26 ರಿಂದ ಅಲ್ಲಿ ಆಷಾಢ ಏಕಾದಶಿ ನಡೆಯುತ್ತಿದೆ ಅಲ್ಲಿಯ ರಾಜ್ಯ ಸರ್ಕಾರದ ವತಿಯಿಂದ ಪೂಜೆ ನಡೆಯುತ್ತದೆ ಅಲ್ಲಿ ಮಧ್ಯಪ್ರದೇಶದಿಂದ ಹಾಗೂ ಆಂಧ್ರಪ್ರದೇಶದಿಂದ ಯಾತ್ರಿನಿವಾಸ ಇವೆ ಕೆಲವೊಂದು ವರ್ಷ ಮಧ್ಯಪ್ರದೇಶದ ಮುಖ್ಯಮಂತ್ರಿಗಳಿಂದ ಅಲ್ಲಿ ಮಹಾ ಪೂಜೆ ನಡೆಯುತ್ತದೆ ನಮ್ಮ ಸರ್ಕಾರದಿಂದ ಅಲ್ಲಿ ಮಾಡಿದರೆ ನಮ್ಮ ಸರ್ಕಾರದ ಮುಖ್ಯಮಂತ್ರಿಗಳಿಂದ ಮಹಾಪೂಜೆಯನ್ನು ನಡೆಸಿಕೊಡುತ್ತಾರೆನ್ನುವ ಒಂದು ನಿಟ್ಟಿನಲ್ಲಿ ಮಾನ್ಯ ಧರ್ಮಸಿಂಗ್ ಸಾಹೇಬರು, ಎ ಬಿ ಪಾಟೀಲ್ ರು, ಮಾನ್ಯ ಹುಕ್ಕೇರಿಯವರು ಹೇಳಿದ್ದಾರೆ ಆದ್ದರಿಂದ ಇವತ್ತೇ ಅದನ್ನು ಘೋಷಣೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ

ಶ್ರೀ ಸಿದ್ದು ಸವದಿ – ಮಾನ್ಯ ಉಪಾಧ್ಯಕ್ಷರೆ, ಅವರೆಲ್ಲರೂ ಹೇಳುವುದು ಬಹಳ ಸೂಕ್ತವಾಗಿದೆ ನಮ್ಮ ಜಿಲ್ಲೆ ಕೂಡ ಗಡಿ ಜಿಲ್ಲೆಯಾಗಿರುವುದರಿಂದ ಹೆಚ್ಚಿನ ಒಂದು ಭಕ್ತ ಸಮೂಹ ಅಲ್ಲಿಗೆ ಹೋಗುವುದರಿಂದ ಒಂದು ಗೆಸ್ಟ್ ಹೌಸ್‌ನ್ನು ಅಲ್ಲಿ ನಿರ್ಮಾಣ ಮಾಡುವುದು ಬಹಳ ಅವಶ್ಯಕವಾಗಿದೆ ಅದನ್ನು ಈಗಲೇ ಘೋಷಣೆ ಮಾಡಿದರೆ ಬಹಳ ಅನುಕೂಲವಾಗುತ್ತದೆ ನಮ್ಮ ಕರ್ನಾಟಕ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತ ಸಮೂಹ ಎಲ್ಲೆಲ್ಲಿ ಬೇರೆ ಬೇರೆ ಕ್ಷೇತ್ರಗಳಿಗೆ ಹೋಗುತ್ತದೆ, ಆ ಎಲ್ಲಾ ಭಾಗಕ್ಕೂ ಗೆಸ್ಟ್‌ಹೌಸ್‌ನ್ನು ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಬಿ ನಾಗರಾಜ ಶೆಟ್ಟಿ – (ಮಾನ್ಯ ಮುಜರಾಯಿ ಹಾಗೂ ಬಂದರು ಮತ್ತು ಮೀನುಗಾರಿಕಾ ಸಚಿವರು) – ಮಾನ್ಯ ಉಪಾಧ್ಯಕ್ಷರೆ ಶೂನ್ಯವೇಳೆಯಲ್ಲಿ ಮಾನ್ಯ ಹುಕ್ಕೇರಿಯವರು ಮತ್ತು ಇತರ ಹಿರಿಯ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು ಕೂಡ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ನಾನು ತಮ್ಮ ಮೂಲಕ ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ನಾನು ಮುಜರಾಯಿ ಮಂತ್ರಿಯಾದ ಕೂಡಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿರುತ್ತೇನೆ ಪಂಢರಪುರ, ಕೊಲ್ಲಾಪುರ, ಶಿರಡಿ ಸಾಯಿಬಾಬಾ, ಆ ಪವಿತ್ರ ಕ್ಷೇತ್ರಗಳಲ್ಲಿ ನಮಗೆ ಒಂದೊಂದು ಎಕರೆ ಜಾಗವನ್ನು ಕೊಡಿ, ಅಲ್ಲಿಗೆ ದೇವರ ಸೇವೆಗೆ ಹೋಗುವ ನಮ್ಮ ಭಕ್ತಾದಿಗಳು ಉಳಿದುಕೊಳ್ಳವುದಕ್ಕೆ ಛತ್ರವನ್ನು ಕಟ್ಟಲು ಜಾಗ ಬೇಕು ಎಂದು ಕೇಳಿರುತ್ತೇನೆ ಈಗಾಗಲೇ ನಾವು ಅದನ್ನು ಪಡೆಯಲು ಹಿಂದೆ ಬಿದ್ದಿದ್ದೇವೆ ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಸಹಕಾರವನ್ನು ಮಾಡಬೇಕು ಏಕೆಂದರೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಅವರಿಗೆ ಬಹಳ ಆತ್ಮೀಯರು ಆದಷ್ಟು ಬೇಗ ಆ ಜಾಗ ಸಿಕ್ಕರೆ ಬೇಕಾದಂಥ ಕಾರ್ಯಕ್ರಮವನ್ನು ಅಲ್ಲಿ ಮಾಡೋಣ ಅದರ ಶಿಲಾನ್ಯಾಸ ಕಾರ್ಯಕ್ರಮವನ್ನು ಒಟ್ಟಾಗಿ ಮಾಡೋಣವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರೆ, ತಾವು ಪಂಢರಪುರಕ್ಕೆ ಹೋಗಿದ್ದೀರಾ? ನೋಡಿದ್ದೀರಾ ?

ಶ್ರೀ ಬಿ ನಾಗರಾಜ್ ಶೆಟ್ಟಿ – ನೋಡಿರುತ್ತೇನೆ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ – ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಧರ್ಮಸಿಂಗ್ ರವರ ನೇತೃತ್ವದಲ್ಲಿ ಪಂಢರಪುರ ಹತ್ತಿರ ಒಂದು ಎಕರೆ ಜಮೀನನ್ನು ನಾವು ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರು ಹೋಗಿ ಖರೀದಿಯನ್ನು ಮಾಡಿಕೊಡುತ್ತೇವೆ ಇವತ್ತು 5 ಕೋಟಿ ರೂ ಗಳನ್ನು ಕೊಡುತ್ತೇವೆಂದು ಒಂದು ಘೋಷಣೆಯನ್ನು ಮಾಡಬೇಕು ಒಂದು ಎಕರೆ ಜಮೀನನ್ನು ಕೊಡುವ ಜವಾಬ್ದಾರಿ ನಮ್ಮದು ಮಾನ್ಯ ಧರ್ಮಸಿಂಗ್ ಹಾಗೂ ಖರ್ಗೆಯವರ ನೇತೃತ್ವದಲ್ಲಿ ನಾವು ಪಂಢರಪುರಕ್ಕೆ ಹೋಗುವಾಗ ಬೆಳಗಾಂ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದುಕೊಂಡು ಹೋಗುತ್ತೇನೆ ಒಂದು ಎಕರೆ ಜಮೀನು ಖರೀದಿ ಮಾಡುವುದಕ್ಕೆ ಏನು ದುಡ್ಡಿನ ಖರ್ಚು ಬರುತ್ತದೆ, ನಾವೆಲ್ಲರೂ ಕೂಡಿಕೊಡುತ್ತೇವೆ ಇವತ್ತು 5 ಕೋಟಿ ರೂ ಗಳನ್ನು ಕೊಡುತ್ತೇವೆಂದು ಘೋಷಣೆಯನ್ನು ತಾವು ಮಾಡಬೇಕು

ಶ್ರೀ ಎ ಬಿ ಪಾಟೀಲ್ ಅಲ್ಲಿ ಒಂದು ಎಕರೆಯನ್ನು ಕೊಟ್ಟರೆ ಅದು ಸಾಕಾಗುವುದಿಲ್ಲ ಅಲ್ಲಿ ಲಕ್ಷಾಂತರ ಜನರು ಹೋಗುತ್ತಾರೆ ಕನಿಷ್ಠ 5 ಎಕರೆ ಜಮೀನಾದರೂ ಬೇಕಾಗುತ್ತದೆ

ಉಪಾಧ್ಯಕ್ಷರು ಆಯಿತು ಅದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ನೀವು ಒಂದು ಎಕರೆಯನ್ನು ಕೊಡಿಸುತ್ತೇವೆ ಅದಕ್ಕೆ ಅವರು ದುಡ್ಡನ್ನು ಕೊಡಬೇಕು ಅದನ್ನೆ ತಾವು ಕೇಳುತ್ತಿರುವುದು?

ಶ್ರೀ ಬಿ ನಾಗರಾಜಶೆಟ್ಟಿ (ಮುಜರಾಯಿ ಹಾಗೂ ಬಂದರು ಮತ್ತು ಮೀನುಗಾರಿಕಾ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರುಗಳು ಒಂದು ಎಕರೆ ಜಾಗವನ್ನು ಧರ್ಮಾರ್ಥವಾಗಿ ನಮ್ಮ ಸರ್ಕಾರಕ್ಕೆ ಕೊಡುತ್ತೇನೆಂದು ಒಪ್ಪಿಗೆಯನ್ನು ಕೊಟ್ಟಿದ್ದಾರೆ ನಮಗೆ ಸಂತೋಷ ಹಾಗೂ ಅದನ್ನು ನಾವು ಸ್ವಾಗತ ಮಾಡುತ್ತೇವೆ ಈ ನಿಟ್ಟಿನಲ್ಲಿ ಕಟ್ಟಡದ ಬಗ್ಗೆ ಮತ್ತು ಅದರ ಮುಂದಿನ ವಿಚಾರದ ಬಗ್ಗೆ ನಾನು ಸನ್ಮಾನ್ಯ ಮುಖ್ಯಮಂತ್ರಿ ಹಾಗೂ ಸನ್ಮಾನ್ಯ ಉಪಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅದರ ಬಗ್ಗೆ ಬೇಕಾದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇನೆ

ಉಪಾಧ್ಯಕ್ಷರು ಈಗ ಬೇಡಿಕೆಗಳ ಮೇಲೆ ಚರ್ಚೆ, ಮಾನ್ಯ ಎಸ್ ಎಸ್ ಪಾಟೀಲ್‌ರವರೆ ತಾವು ಮಾತನಾಡಿ ನಿನ್ನೆಯ ದಿನ ಬೇಡಿಕೆಗಳ ಮೇಲೆ ಚರ್ಚೆ ಬಿಟ್ಟುಹೋಗಿದೆ ಮಾನ್ಯ ಪಾಟೀಲ್‌ರವರೆ ತಾವು ಮಾತನಾಡಿ ತಾವು ಮುಂದುವರೆಸಿ

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಮಾನ್ಯ ಉಪಾಧ್ಯಕ್ಷರೆ ಎರಡು ನಿಮಿಷ ನಾನು ಮಾತನಾಡುತ್ತೇನೆ

ಉಪಾಧ್ಯಕ್ಷರು ತಾವು ಹೇಳಿದ್ದೀರಲ್ಲಾ, ಆಗಲೇ ಮಾತನಾಡಿದ್ದೀರಲ್ಲಾ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಮಾನ್ಯ ಧಾರ್ಮಿಕ ದತ್ತಿ ಸಚಿವರನ್ನು ನಾನು ಕೇಳುತ್ತಿದ್ದೇನೆ

ಶ್ರೀ ಹೆಚ್ ಸಿ ಬಾಲಕೃಷ್ಣ ಮಾನ್ಯ ಉಪಾಧ್ಯಕ್ಷರೆ, calling attention ಇದೆ

ಉಪಾಧ್ಯಕ್ಷರು ಇದೆ

(ಗೊಂದಲ)

ಉಪಾಧ್ಯಕ್ಷರು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರಲ್ಲಾ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಹಣ ಎಷ್ಟು ಕೊಡುತ್ತಾರೆಂದು ಹೇಳಬೇಕು

ಉಪಾಧ್ಯಕ್ಷರು ಈಗಲೇ ಎಷ್ಟು ಹಣ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಧಾರ್ಮಿಕ ದತ್ತಿ ಸಚಿವರು ಇರುವುದರಿಂದ ಅವರು ಹೇಳುವುದಕ್ಕೆ ಅವಕಾಶವಿದೆ

ಉಪಾಧ್ಯಕ್ಷರು ಈಗ ಆಯಿತು ಮಾನ್ಯ ಎಸ್ ಎಸ್ ಪಾಟೀಲ್‌ರವರೆ ತಾವು ಮಾತನಾಡಿ ಬೇಡಿಕೆಗಳ ಮೇಲೆ ನಿನ್ನೆ ದಿನ ಬಿಟ್ಟು ಹೋಗಿರುವುದನ್ನು ಮುಂದುವರಿಸಿ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು

ಉಪಾಧ್ಯಕ್ಷರು ಮಾನ್ಯ ಎಸ್ ಎಸ್ ಪಾಟೀಲ್‌ರವರದು ಆದ ನಂತರ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ಮಾನ್ಯ ಉಪಾಧ್ಯಕ್ಷರೆ

ಶ್ರೀ ಎನ್ ಧರ್ಮಸಿಂಗ್ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ತಾವು ಕೊಡಬೇಕು

ಉಪಾಧ್ಯಕ್ಷರು ಮಾನ್ಯ ಎಸ್ ಎಸ್ ಪಾಟೀಲ್‌ರದು ಬೇಡಿಕೆಯ ಮೇಲೆ ಚರ್ಚೆ ನಿನ್ನೆ ದಿನ ಅರ್ಧಕ್ಕೆ ಬಿಟ್ಟು ಹೋಗಿದೆ

ಶ್ರೀ ಎನ್ ಧರ್ಮಸಿಂಗ್ ಇವರದು ಆದ ಮೇಲೆ ಮಾನ್ಯ ರಾಯರೆಡ್ಡಿಯವರಿಗೆ ಅವಕಾಶವನ್ನು ತಾವು ಕೊಡಬೇಕು

ಉಪಾಧ್ಯಕ್ಷರು ಮಾನ್ಯ ಪಾಟೀಲರದು ಡಿಮ್ಯಾಂಡ್ ಮೇಲೆ ಅರ್ಧಕ್ಕೆ ಬಿಟ್ಟು ಹೋಗಿದೆ ಈಗ ಅದನ್ನು ಮುಂದುವರಿಸಬೇಕಾಗಿದೆ

ಶ್ರೀ ಬಸವರಾಜ ರಾಯರೆಡ್ಡಿ ಡಿಮ್ಯಾಂಡ್ ಮೇಲೆ ಸೋಮವಾರ ಚರ್ಚೆಗೆ ತೆಗೆದುಕೊಳ್ಳಿ ಈಗ ಅರ್ಧಗಂಟೆ ಕಾಲಾವಧಿ ಚರ್ಚೆಯನ್ನು ಮುಗಿಸಿಬಿಡೋಣ

ಉಪಾಧ್ಯಕ್ಷರು ಮಾನ್ಯ ಪಾಟೀಲ್‌ರವರೆ ಈ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ಅವರು ಸೋಮವಾರ ದಿವಸ ಓದಿಕೊಂಡು ಮಾತನಾಡುತ್ತಾರೆ

ಶ್ರೀ ಎಸ್ ಎಸ್ ಪಾಟೀಲ್ ಅರ್ಧ ಗಂಟೆ ಕಾಲಾವಧಿಯ ಚರ್ಚೆ ಮುಗಿದರೆ ಚೆನ್ನಾಗಿರುತ್ತದೆ ಈಗಾಗಲೇ 1 ಗಂಟೆ ಸಮಯವಾಗಿದೆ ಆಮೇಲೆ ನಮ್ಮ ಅರಣ್ಯ ಸಚಿವರನ್ನು ಕರೆಸಲೇ ಇಲ್ಲ ಮಾನ್ಯ ಪ್ರಕಾಶ್‌ರವರೆ ನನಗೆ ನೋವು ಎನಿಸುತ್ತದೆ

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ಮಾನ್ಯ ಉಪಾಧ್ಯಕ್ಷರೆ, ಒಂದು ಬಹಳ ಗಹನವಾದಂತಹ ವಿಚಾರವಿದೆ

ಉಪಾಧ್ಯಕ್ಷರು ಈಗ ಶೂನ್ಯವೇಳೆ ಮುಗಿದುಹೋಯಿತು

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ಹೋದ ಶುಕ್ರವಾರದಲ್ಲಿ

ಉಪಾಧ್ಯಕ್ಷರು ಅದು ಮುಗಿಯಿತು

ಶ್ರೀ ಎಂ ಪಿ ಪ್ರಕಾಶ್ ಶೂನ್ಯ ವೇಳೆಯಲ್ಲಿ ಹರಳಾಪುರದ ಕೆರೆಯ ಬಗ್ಗೆ ತಾವು ಕೇಳಿದ್ದೀರಿ ಮಾನ್ಯ ಯಡಿಯೂರಪ್ಪನವರಿಗೆ ಉತ್ತರ ರೆಡಿ ಇದೆ ಎಂದು ಹೇಳಿದೆ

ಶ್ರೀ ಎಸ್ ಎಸ್ ಪಾಟೀಲ್ ಈಗ Half an hour discussion ಅನ್ನು ತೆಗೆದುಕೊಳ್ಳಿ ಆಮೇಲೆ ಮಾತನಾಡುವುದಕ್ಕಾಗುತ್ತದೆ

8) ವಿಷಯ ಮಹಿಳಾ ವಿಶ್ವವಿದ್ಯಾನಿಲಯದ ಕುರಿತು

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಅಪ್ಪಣೆಯನ್ನು ತೆಗೆದುಕೊಂಡಿದ್ದೇನೆ ಇದು ನನ್ನ ವರ್ಕ್ ಅಲ್ಲ ಇಡೀ ಬಿಜಾಪುರ ಜಿಲ್ಲೆಯಲ್ಲಾ, ಇದು ಉತ್ತರ ಕರ್ನಾಟಕ ಭವಿಷ್ಯದ ಪ್ರಶ್ನೆಯಾಗಿದೆ ಒಂದು ಯೂನಿವರ್ಸಿಟಿಯಲ್ಲಿ ರಾಜಕಾರಣವನ್ನು ಮಾಡಿ ಅದು ಮುಚ್ಚುವ ಸ್ಥಿತಿಗೆ ಬಂದಿದೆ ಇದರ ಬಗ್ಗೆ ಏನು ನೋವು ಇದೆ ಎಂದು ನಮಗೆ ಅರ್ಥವಾಗುತ್ತದೆ ನಾವು ಇದನ್ನು ಪ್ರಾರಂಭ ಮಾಡಿದ್ದೇವೆ ಈ ಯೂನಿವರ್ಸಿಟಿಯೂ ಮುಚ್ಚುವ ಸ್ಥಿತಿಗೆ ಬರುತ್ತಿದೆ ಈ ಬಗ್ಗೆ ಹೋದ ಸಲ ನಮ್ಮ ಲೀಡರ್‌ಗಳನ್ನು ಕೇಳಿದಾಗ ಸರ್ಕಾರ ಉತ್ತರವನ್ನು ಕೊಡುತ್ತದೆಂದು ಹೇಳಿದರು ಮಹಿಳಾ ಯೂನಿವರ್ಸಿಟಿಯ ಬಗ್ಗೆ ಇವತ್ತಿಗೂ ಕೂಡ ಆ ಬಗ್ಗೆ ಉತ್ತರ ಬರುವುದಿಲ್ಲ ಅದು ಈಗ ಬೀಗ ಹಾಕುವಂತಹ ಮಟ್ಟಕ್ಕೆ ಬಂದಿದೆ ಇದರ ಬಗ್ಗೆ ನೀವು ಇಷ್ಟು ಹಗುರವಾಗಿ ತೆಗೆದುಕೊಂಡು, ಈ ಬಗ್ಗೆ ನಾನು ಮಾತನಾಡುವುದಕ್ಕಾಗುವುದಿಲ್ಲವೆಂದರೆ ಹೇಗೆ ? ಈ ಬಗ್ಗೆ ಇದುವರೆವಿಗೂ ಕೂಡ ಉತ್ತರ ಬರುತ್ತಿಲ್ಲ ಅಲ್ಲಿರುವಂತಹ ವಿದ್ಯಾರ್ಥಿಗಳ ಪರಿಸ್ಥಿತಿ ಏನು ? ಈ ಬಗ್ಗೆ ತಾವು ಹೇಳಿನೋಡಿ ಇದು ರೀತಿನೋ, ವೈಸ್‌ಚಾನ್ಸಿಲರ್‌ಗಳು ಮತ್ತು ವಿಹೆಚ್‌ಪಿಗಳು ಒಬ್ಬರ ಮೇಲೆ ಒಬ್ಬರು statement

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) ಮಾನ್ಯ ಉಪಾಧ್ಯಕರೆ, ಈ ಬಗ್ಗೆ ತಮಗೆ ಗೊತ್ತಿದೆ, ಈ ವಿಚಾರ ಹೋದ ಶುಕ್ರವಾರ ಇಲ್ಲಿ ಪ್ರಸ್ತಾಪವಾಗಿತ್ತು ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಿದ್ಧರಾಮಯ್ಯನವರು ಮತ್ತು ಅನೇಕ ಮಿತ್ರರೂ ಕೂಡ ಇದರ ಮೇಲೆ ಮಾತನಾಡಿದ್ದೇವೆ ಅದಕ್ಕೆ ಉತ್ತರವನ್ನು Higher Education Minister ರವರಿಂದ ಉತ್ತರವನ್ನು ಕೊಡಿಸಿಕೊಡುತ್ತೇವೆಂದು ಹೇಳಿದ್ದರು ಆ ಬಗ್ಗೆ ಉತ್ತರವೂ ಬರಲೇ

ಇಲ್ಲ ಅಲ್ಲಿ ಮೇಲ್ಮನೆಯಲ್ಲಿ ನಾಯಕರಾಗಿ ಅವರು ಅಲ್ಲಿಯೇ ಇರುತ್ತಾರೆ ಅದಕ್ಕಾಗಿ ಅವರನ್ನು ಇಲ್ಲಿಗೆ ಕರೆಸಬೇಕಾಗುತ್ತದೆ ಅವರನ್ನು ಕರೆಸಿ ಉತ್ತರವನ್ನು ಕೊಡಿಸೋಣವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರು ಆಗ ತಾವು ಕೂಡ ಹೇಳಿದ್ದೀರಿ ಇಲ್ಲಿಯವರೆವಿಗೆ ಎಂಟು ದಿವಸಗಳಾಯಿತು ಆ ಬಗ್ಗೆ ಉತ್ತರವೇ ಇಲ್ಲ ಈಗ ಇನ್ನು ಕೂಡ ಅಲ್ಲಿ ಗಲಾಟೆಗಳು ನಡೆಯುತ್ತಿದೆ ದಿನ ಅಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತು, ಅವರು procession ತೆಗೆಯುವುದು, agitation ಮಾಡುವುದು ಒಂದು ಕಡೆ ನಡೆಯುತ್ತದೆ ಒಂದು ಕಡೆ ರಿಜಿಸ್ಟ್ರಾರ್‌ರವರು, ವೈಸ್ ಚಾನ್ಸಲರ್‌ರವರು ಒಂದು ಕಡೆ ಹೀಗಾಗಿ ಗದ್ದಲವೋ ಗದ್ದಲ ನಡೆದು, ಮಾನ್ಯ ನಾಡಗೌಡರು ಹೇಳಿದ ಹಾಗಿ University close ಮಾಡತಕ್ಕಂತಹ ಸ್ಥಿತಿಗೆ ಬಂದಿದೆ ಅದರಿಂದ ಇಡೀ ರಾಜ್ಯದಲ್ಲಿ ಒಂದು ಸುದ್ದಿ ಹರಡುತ್ತಿದೆ ಅಂದರೆ ಅಲ್ಲಿ ಮಹಿಳಾ ವಿಶ್ವವಿದ್ಯಾನಿಲಯಕ್ಕೆ affiliation ಕೊಟ್ಟರೆ ಅಲ್ಲಿ ಯಾವ ನಮ್ಮ ಕಾಲೇಜೂ ಕೂಡ ಸುರಕ್ಷಿತವಲ್ಲವೆನ್ನುವಂತಹ ಭಾವನೆಯನ್ನು ಮೂಡಿಸತಕ್ಕಂತಹ ರೀತಿಯಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ಮಾನ್ಯ ನಂಜುಂಡಪ್ಪನವರ ವರದಿಯ ಪ್ರಕಾರ ಆದಂತಹ ಒಂದು Women University ಇವತ್ತು close ಆಗುವಂತಹ ಸ್ಥಿತಿಯಾಗಿದೆ ದಯವಿಟ್ಟು ಅವರನ್ನು ಕರೆಸಿ ತಾವು ಈ ಬಗ್ಗೆ statement ನ್ನು ಕೊಡಿಸಿದರೆ ಒಳ್ಳೆಯದಾಗುತ್ತದೆ ಇಲ್ಲದೆ ಹೋದರೆ ಇದು ಇದೇ ರೀತಿಯಾಗಿ ನಡೆಯುತ್ತಿರುತ್ತದೆ

ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ಇದರ ಬಗ್ಗೆ ಏನಾಗಿದೆ ಎಂದರೆ, ಸ್ಥಳೀಕವಾದಂತಹ ವಿಷಯವೇನಿದೆ ಎಂದರೆ, ನಾನು ಮಾನ್ಯ ಪ್ರಕಾಶ್‌ರವರ ಬಗ್ಗೆ ದೋಷಾರೋಪಣೆಯನ್ನು ಮಾಡುವುದಿಲ್ಲ ಆದರೆ ಇವರ ಮಿತ್ರ ಪಕ್ಷ ಇದೆಯಲ್ಲಾ ಅದರ ನೇರವಾದ ಕೈವಾಡವಿದೆಯೆಂದು ಪ್ರತಿದಿವಸ ಪ್ರತ್ಯಕ್ಷವಾಗಿ ಕಾಣುವಂತಹ ಘಟನೆಗಳು ನಡೆಯುತ್ತಿವೆ ವಿಹೆಚ್‌ಪಿ ಹುಡುಗರು ಹೋಗುವುದು ಆ ಯೂನಿವರ್ಸಿಟಿಯ ಬಾಗಿಲನ್ನು ಮುರಿಯುವುದು, ಒಳಗೆ ನುಗ್ಗಿ ದಾಂಧಲೆಯನ್ನು ಮಾಡುವುದು ಇದು ಪ್ರತಿನಿತ್ಯವು ನಡೆಯುತ್ತಿದೆ ಏನು ಇದು? ಗೂಂಡಾಗಿರಿಯನ್ನು ನಡೆಸುವುದೇ? ಅಲ್ಲಿ Law and Order ಪ್ರಶ್ನೆ ಇಲ್ಲವೇ ಆ ಯೂನಿವರ್ಸಿಟಿಯಲ್ಲಿ ಓದುತ್ತಿರುವಂತಹ ಹೆಣ್ಣುಮಕ್ಕಳು ಯಾರೂ ಕೂಡ ಇವತ್ತು ಅಲ್ಲಿಗೆ ಹೋಗುತ್ತಿಲ್ಲ ಅಲ್ಲಿ ಯಾರು contract ಮೇಲೆ ತೆಗದುಕೊಂಡಿರುವಂತಹ Professors, Lecturer ಗಳು ಅಲ್ಲಿಗೆ ಯಾರೂ ಹೋಗುತ್ತಿಲ್ಲ ಅವರಿಗೆ ಜೀವದ ಭಯ ಬಂದಿದೆ, ಭೀತಿಯಾಗಿದೆ ಇದರ ಹಿನ್ನೆಲೆ ಏನು ಇದೆ? ತಾವು Home Minister ಇದ್ದೀರಿ ವರದಿಯನ್ನು ತಾವು ತರಿಸಿಕೊಳ್ಳಿ ಯಾವ ಪಕ್ಷ ಇದಕ್ಕೆ ಕಾರಣ? ಏನು ಕಾರಣ? ಈ ಬಗ್ಗೆ ನನಗನಿಸುತ್ತದೆ ಈ ಭಾಗದಲ್ಲಿರುವಂತಹವರಿಗೆ ಇಲ್ಲಿ ಒಂದು ಮಹಿಳಾ ಯೂನಿವರ್ಸಿಟಿಯನ್ನು ಮಾಡಿರುವುದು ಸಹಿಸುವುದಕ್ಕಾಗುತ್ತಿಲ್ಲ ಇದನ್ನು ನಾನು ನೇರವಾಗಿ ಆರೋಪವನ್ನು ಮಾಡಬೇಕಾಗುತ್ತದೆ ಅದಕ್ಕಾಗಿ

ಇದರ ಬಗ್ಗೆ ಸಂಪೂರ್ಣವಾದ ವರದಿಯನ್ನು ತರಿಸಿ, ಯಾರೇ ಆಗಲಿ ಅವರನ್ನು hang them ಯಾರು ತಪ್ಪು ಮಾಡಿದ್ದಾರೋ ಅವರನ್ನು ನೇಣಿಗೆ ಏರಿಸಿ ಅದರ ಬಗ್ಗೆ ನಾವ್ಯಾರು protect ಮಾಡುವುದಿಲ್ಲ ಆದರೆ ಏತಕ್ಕಾಗಿ ವಿಳಂಭ ಮಾಡುತ್ತಿದ್ದೀರಿ? ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಭಾಗೇಪಲ್ಲಿ) ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭವಾದಾಗಿನಿಂದ ಒಂದು ವಿಭಾಗದವರಿಗೆ ಲದನ್ನು ಸಹಿಸುವುದಕ್ಕಾಗುತ್ತಿಲ್ಲ ಅದರಲ್ಲೂ ಪ್ರತ್ಯೇಕವಾಗಿ ಒಂದು ನಿರ್ದಿಷ್ಟವಾದಂತಹ ಉದ್ದೇಶವನ್ನು ಇಟ್ಟುಕೊಂಡು ಈ ಸರ್ಕಾರದಲ್ಲಿ ಭಾಗಿಗಳಾಗಿರುವವರು ಆ ವಿಶ್ವವಿದ್ಯಾಲಯವನ್ನು ಮುಚ್ಚಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತಿರುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ ಅದು ಸ್ಪಷ್ಟವಾಗಿ ಗೊತ್ತಾಗುತ್ತಿದೆ ಅಲ್ಲಿನ ಆಂತರಿಕ ವಿಚಾರಗಳಲ್ಲಿ ಹೊರಗಿನವರು ಯೂನಿವರ್ಸಿಟಿಯಲ್ಲಿ ಕೈಹಾಕುತ್ತಿದ್ದಾರೆ ಯೂನಿವರ್ಸಿಟಿಯು ಕಾನೂನಿನ ಪ್ರಕಾರ ಅದಕ್ಕೆ ಅಟಾನಮಸ್ ಪವರ್ ಇದೆ ಅಲ್ಲಿ ಬೇರೆಯವರು ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶವಿಲ್ಲ ಆದರೆ ನೇರ ಹಸ್ತಕ್ಷೇಪಗಳನ್ನು ಆ ವಿಶ್ವವಿದ್ಯಾನಿಲಯವನ್ನು ಮುಚ್ಚಿಸಲಿಕ್ಕೆ ಪ್ರಯತ್ನ ಮಾಡುವ ಒಂದು ಕುತಂತ್ರ ನಡೆಯುತ್ತಿದೆ ಇರುವ ಒಂದು ಮಹಿಳಾ ವಿಶ್ವವಿದ್ಯಾನಿಲಯವನ್ನು ಎಲ್ಲರೂ ಅದನ್ನು ಬೆಂಬಲಿಸಿ ಅದನ್ನು ಶಕ್ತಿಯುತವಾಗಿ ಮಾಡಿ, ಮಹಿಳಾ ಯೂನಿವರ್ಸಿಟಿಯನ್ನು ಬೆಳೆಸುವುದರ ಬದಲು ಅದನ್ನು ನಾಶ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಆದ್ದರಿಂದ ಸರ್ಕಾರದ ಕಡೆಯಿಂದಲೇ ಪ್ರಚೋದನೆ ನೀಡುತ್ತಿದೆ ಎಂದು ನಮ್ಮ ನೇರ ಆರೋಪ

ಶ್ರೀ ವಾಟಾಳ್ ನಾಗರಾಜ್ ಈ ಮಹಿಳಾ ವಿಶ್ವವಿದ್ಯಾನಿಲಯವನ್ನು ನಡೆಸುವುದಕ್ಕೆ ಒಂದು ದೊಡ್ಡ ಪಿತೂರಿ ನಡೆಯುತ್ತಿದೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ವಾಟಾಳ್ ನಾಗರಾಜ್‌ರವರೆ ತಾವು ಕುಳಿತುಕೊಳ್ಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ವಾಟಾಳ್ ನಾಗರಾಜ್‌ರವರೆ ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ ಇವರು ಕುಳಿತುಕೊಳ್ಳಿ ಎಂದು ಹೇಳುತ್ತಾರೆ ತಾವು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೀರಿ ನಮಗೆ ಬಹಳ ಕಷ್ಟವಾಗಿಬಿಟ್ಟಿದೆ

ಶ್ರೀ ಎನ್ ಧರ್ಮಸಿಂಗ್ ಬಹಳ ನೊಂದ ಮನಸ್ಸಿನಿಂದ ನಮ್ಮ ಮಾನ್ಯ ಹಿರಿಯ ಸದಸ್ಯರು ಎತ್ತಿದ್ದಾರೆ ಮಾನ್ಯ ಅಪ್ಪಾಜಿ ನಾಡಗೌಡರು ಹೇಳುವುದಿಷ್ಟೇ ಮಾನ್ಯ ನಂಜುಂಡಪ್ಪನವರ ವರದಿಯು ಬಂದ ಮೇಲೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭವಾಗಿದೆ ಮಹಿಳಾ ವಿಶ್ವವಿದ್ಯಾನಿಲಯ that is one of the prestigious Universities ಎಂದು ಆ ಭಾಗದಲ್ಲಿ ಅಂದರೆ ಉತ್ತರ

18-69

ಕರ್ನಾಟಕದ ಭಾಗದಲ್ಲಿ ಪ್ರಾರಂಭವಾಗಿದೆ ಅಲ್ಲಿ ಏನಾಗಿದೆ ಎಂದರೆ, ಮಾನ್ಯ ಎಸ್ ಎಂ ಕೃಷ್ಣರವರ ಕಾಲದಲ್ಲಿ ಅಲ್ಪಸಂಖ್ಯಾತ ಮಹಿಳೆಯನ್ನು ಉಪಕುಲಪತಿಯನ್ನಾಗಿ ಮಾಡಿರುವುದು ಇವತ್ತು ಮೈಸೂರು ಯೂನಿವರ್ಸಿಟಿಯಲ್ಲಿ ಏನಾಗಿದೆ? ರಾಜೀವ್‌ಗಾಂಧಿ ಯೂನಿವರ್ಸಿಟಿಯಲ್ಲಿ, ಯಾರು ದಲಿತರು ಇದ್ದಾರೆ ಬೇರೆ ಜನ ಇವತ್ತಿನ ದಿವಸ ಇವರಿಗೆ ಸಹಿಸುತ್ತಿಲ್ಲ ಸರ್ಕಾರ ಯಾರು ನಡೆಸುತ್ತೀರಿ? ಸರ್ಕಾರವನ್ನು ಎಬಿವಿಪಿಯವರು ನಡೆಸುತ್ತಾರೆಯೇ? ತಾವು ನಡೆಸುತ್ತಿದ್ದೀರಿ ದಿನಾಲೂ ಕೂಡ ಎಬಿವಿಪಿ ಕಾರ್ಯಕರ್ತರು ಹೋಗುತ್ತಾರೆ ಹುಬ್ಬಳ್ಳಿಯಲ್ಲಿ ಹೋಗುತ್ತಾರೆ ಅಲ್ಲಿಗೆ ಹೋಗುತ್ತಾರೆ ಆದರೆ I have to appreciate her courage ಇವತ್ತು ಯಾರೂ ಬಂದರೂ ಬರಲಿ ಎನ್ನುವಂತಹ ರೀತಿಯಲ್ಲಿ ಉಪಕುಲಪತಿಗಳು ಹೇಳುತ್ತಿದ್ದಾರೆ ನಮಗೆ ರಕ್ಷಣೆ ಬೇಕು ವಿಶೇಷವಾಗಿ ವಿಶ್ವವಿದ್ಯಾನಿಲಯದ ಪರಿಸರವನ್ನು ಕೆಡಿಸುವಂತಹ ಕೆಲಸಗಳು ಆಗಬಾರದು ಮೊನ್ನೆ ನಾನು ಮತ್ತು ಖರ್ಗೆಯವರು raise ಮಾಡಿದ್ದೆವು ಇಲ್ಲಾ ಅವರನ್ನು ಕರೆಸಿ ಅವರನ್ನು ಕರೆಸಿ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೀರಿ ಈ ಬಗ್ಗೆ ದಿನಾ ಪತ್ರಿಕೆಯಲ್ಲಿ ಬರುತ್ತಿದೆ Times of India ದಲ್ಲೂ ಕೂಡ ಬಂದಿದೆ

ಒಂದು ಕಡೆ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಉಪ ಕುಲಪತಿಗಳ ಬಗ್ಗೆ ಮತ್ತು ಮೈಸೂರಿನಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಕಡೆ ಚರ್ಚೆ ನಡೆಯುತ್ತಿದೆ I am not defending here ವೈಸ್ ಚಾನ್ಸಲರ್ ಮಾಡತಕ್ಕಂಥದ್ದು ಇಲ್ಲ ಬೇರೆಯವರನ್ನು ಮಾಡತಕ್ಕಂಥದ್ದು ಅಲ್ಲ ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳು they are autonomous ಅಲ್ಲಿ ಹೋಗಿ ಅವರು ಮಾಡತಕ್ಕಂಥದ್ದು ಸರಿ, ಉನ್ನತ ಶಿಕ್ಷಣ ಸಚಿವರಾಗಿ ಅವರೇ ಅಲ್ಲಿಗೆ ಹೋಗಲಿ, ತಾವು ರಾಜ್ಯದ ಗೃಹ ಸಚಿವರು ತಾವೇ ಅಲ್ಲಿಗೆ ಹೋಗಿ, ಇದು ದಿನನಿತ್ಯ ಬೆಳೆಯುತ್ತಾ, ಹೋದರೆ, ಯಾರು ಮಹಿಳೆಯರು ಅಲ್ಲಿಗೆ ಹೋಗಬೇಕು? ಹೀಗಾಗಿ ಬಹಳಷ್ಟು ಗಲಾಟೆಯಾಗಿದೆ, ಅವರನ್ನು ಕರೆಸಿ ಉತ್ತರ ಕೊಡಬೇಕು ಇಲ್ಲದಿದ್ದರೆ ತಾವು ಅವರನ್ನು ಕರೆಸಿ ಉತ್ತರ ಕೊಡಿಸಿ, ಸಮಾಧಾನ ಮಾಡಿ ಮುಂದೆ ಇದು ಬೆಳೆಯಲಿಕ್ಕೆ ಅವಕಾಶ ಕೊಡಬಾರದು ಇವತ್ತು ಮಹಿಳಾ ವಿಶ್ವವಿದ್ಯಾನಿಲಯ ಎಲ್ಲಿಯೂ ಆಗಲೇಬಾರದು ಎಂದು ಹೇಳಿ ವಿಚಾರವಿತ್ತು ತಮಗೆ ಗೊತ್ತಿರಬಹುದು ನಾನು ಖರ್ಗೆಯವರು ಸಚಿವ ಸಂಪುಟದಲ್ಲಿದ್ದಾಗ ನಮ್ಮಲ್ಲೇ ಸಂಪುಟದ ಸದಸ್ಯರು ಬಿಜಾಪುರಕ್ಕೆ ಮಹಿಳಾ ವಿಶ್ವವಿದ್ಯಾನಿಲಯ ಬೇಡವೇ ಬೇಡ ಎಂದು ಶ್ರೀ ಎಸ್ ಎಂ ಕೃಷ್ಣರವರ ಕಾಲದಲ್ಲಿ ಚರ್ಚೆ ಬಂತು ನಾವು ಹೇಳಿದೆವು ಉತ್ತರ ಕರ್ನಾಟಕದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಬೇಕೆ ಬೇಕು ನಂಜುಂಡಪ್ಪ ವರದಿಯ ಶಿಫಾರಸ್ಸಿದೆ, ಅಲ್ಲಿರುವ ಹೆಣ್ಣು ಮಕ್ಕಳು ಇಲ್ಲಿಗೆ ಹೇಗೆ ಬರಬೇಕು? ಅದಕ್ಕೆ ಆ ಉತ್ತರ ಕರ್ನಾಟಕ ಭಾಗದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಆಗಲೇಬೇಕೆಂಬ ನಮ್ಮ ವಾದವಿತ್ತು ಇವತ್ತು ಅಲ್ಲಿ ವಿಶ್ವವಿದ್ಯಾನಿಲಯ ಆಗಿದೆ

ತಾವು ಅದಕ್ಕೆ ಸರಿಯಾದಂಥ ರೀತಿಯಲ್ಲಿ ಸಹಾಯ ಮಾಡಬೇಕು ಇದ್ದಂಥ ಸಮಸ್ಯೆಗಳನ್ನು ಬಗೆಹರಿಸಬೇಕು ಉನ್ನತ ಶಿಕ್ಷಣ ಸಚಿವರು ಒಂದೇ ಕಡೆಗೆ ತಮ್ಮದೇ ದಿಕ್ಕಿನಲ್ಲಿ, ಆ ಒಂದು ಅಜೆಂಡಾದಲ್ಲಿ ಹೋದರೆ ಹೇಗಾಗುತ್ತದೆ? ಈ ರಾಜ್ಯದಲ್ಲಿರತಕ್ಕಂಥ ಇಲ್ಲಾ ಜನರಿಗೂ ಕೂಡ ರಕ್ಷಣೆ ಕೊಡಬೇಕು ದಲಿತರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ರಕ್ಷಣೆ ಕೊಡಬೇಕು ಅಲ್ಲದೆ ರಾಜ್ಯದಲ್ಲಿರುವ ಹೆಣ್ಣು ಮಕ್ಕಳಿಗೆ ವಿಶೇಷವಾಗಿ ರಕ್ಷಣೆಯನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ

ಶ್ರೀ ಎಸ್ ಸಿದ್ಧರಾಮಯ್ಯ (ಚಾಮುಂಡೇಶ್ವರಿ) ಉಪಾಧ್ಯಕರೆ, ಇದು ಬಹಳ ಗಂಬೀರವಾದಂಥ ವಿಚಾರ ಈಗ ಕಳೆದ ಒಂದು ವಾರದಿಂದ ದಾಂಧಲೆ ನಡೆಯುತ್ತದೆ ನೀವು ಕೂಡ ಇದನ್ನು ಕಳೆದ ಶುಕ್ರವಾರ ರೈಸ್ ಮಾಡಿದ ಸಂದರ್ಭದಲ್ಲಿ, ಉನ್ನತ ಶಿಕ್ಷಣ ಸಚಿವರನ್ನು ಕರೆಸಿ ಉತ್ತರ ಕೊಡಿಸಿ ಎಂದಾಗ, ಮುಂದಿನ ಸೋಮವಾರ ಉತ್ತರ ಕೊಡಿಸುತ್ತೇವೆಂದು ಹೇಳಿದಿರಿ ಉತ್ತರವಂತೂ ಬರಲಿಲ್ಲ ಆ ಶಂಕರಮೂರ್ತಿಯವರಂತೂ ಈ ಕಡೆ ಬರುವುದೇ ಇಲ್ಲ ಬಹುಶಃ ಇದಕ್ಕೆ ಉತ್ತರ ಕೊಡಬೇಕಾಗುತ್ತದಂದೇ ಈ ಕಡೆ ಬರುತ್ತಿಲ್ಲವೋ ಏನೋ ಗೊತ್ತಿಲ್ಲ ಅವರೇನು ಬರೇ ಮೇಲ್ಮನೆ ಸದಸ್ಯರಾಗಿ, ಉನ್ನತ ಶಿಕ್ಷಣ ಸಚಿವರಾಗಿ ಕೇವಲ ಮೇಲ್ಮನೆಯಲ್ಲಿದ್ದರೆ ಸಾಕು ಎಂದು ತಿಳಿದುಕೊಂಡಿದ್ದಾರೆಯೇ ಹೇಗೆ? ಅವರು ಅಲ್ಲಿ ನಾಯಕರಾಗಿರಬಹುದು ಆದರೆ ಇಲ್ಲಿ ಉತ್ತರವನ್ನು ಅವರು ಬಂದು ಕೊಡಬೇಕಲ್ಲವೇ? ಈ ಮನೆ ನಾಯಕರು ಇಲ್ಲಿಗೆ ಬರುವುದಿಲ್ಲ ಬಿಡಿ ಅವರೇನು exemption ತೆಗೆದುಕೊಂಡ ಹಾಗೆ ಕಾಣುತ್ತದೆ ಅವರು ಎಲ್ಲಿ exemption ತೆಗೆದುಕೊಂಡಿದ್ದಾರೋ ಗೊತ್ತಿಲ್ಲ ನನಗೆ VRS ಅಥವಾ exemption ತೆಗೆದುಕೊಂಡು ಬಿಟ್ಟಿದ್ದಾರೆ ಅವರಂತೂ ಬರುವುದಿಲ್ಲ ಆ ಶಂಕರಮೂರ್ತಿಯವರಾದರೂ ಇಲ್ಲಿಗೆ ಬರಬೇಕಲ್ಲವೇ? ಏನು ನಾಗರಾಜಶೆಟ್ಟರೇ, ದಯಮಾಡಿ ಅವರಿಗೆ ಹೇಳಿ ಕಳುಹಿಸಿ ಕರೆಸಿ, ಅಷ್ಟೊಂದು ಮಾನಸಿಕ ಕಿರುಕುಳ ಕೊಡುತ್ತಿದ್ದಾರೆ ನಿಮ್ಮ ಎ ಬಿ ವಿ ಪಿ ಯವರು ಮಾನಸಿಕವಾಗಿ ಕಿರುಕುಳ ಕೊಡುತ್ತಿದ್ದಾರೆ ಯಾವ ಹೆಣ್ಣು ಮಗಳೂ ಕೂಡ ಆ ರೀತಿ ಕಿರುಕುಳವನ್ನು ಸಹಿಸಲಿಕ್ಕೆ ಸಾಧ್ಯವಿಲ್ಲ ಆಕೆ ಗೋಳೋ ಎಂದು ಅಳುತ್ತಿದ್ದಾಳೆ ಈ ಸರ್ಕಾರ ಅವರಿಗೆ ರಕ್ಷಣೆ ಕೊಡಲಿಲ್ಲವೆಂದರೆ, ಹಾಗಾದರೆ ನೀವು ಇನ್ನಾರಿಗೆ ರಕ್ಷಣೆ ಕೊಡುತ್ತೀರಿ? ಮಹಿಳೆಯರಿಗೆ protection ಕೊಡಲಿಕ್ಕಾಗುವುದಿಲ್ಲ, ಮೈಸೂರಿನಲ್ಲಿ ಗಲಾಟೆಯಾಯಿತು ಹಿಂದೆ ನೇಮಕಾತಿ ನಡೆದಿತ್ತಲ್ಲ ಇಲ್ಲಿ ನೇಮಕಾತಿಯಲ್ಲಿ ಬಹಳ ಅನ್ಯಾಯವಾಗಿಬಿಟ್ಟಿದೆ ಕಾನೂನುಬಾಹಿರವಾಗಿ ಆಗಿದೆಯೆಂದು ಇಲ್ಲಿ ಹೇಳುತ್ತೀರಿ ಮೈಸೂರು ವಿಶ್ವವಿದ್ಯಾನಿಲಯದ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಇದ್ದಂಥ ವೈಸ್ ಚಾನ್ಸಲರ್ ಏನು ಮಾಡಿದ್ದಾರೆ? ಅಲ್ಲೇನಾದರೂ ಕೂಡ ರಿಸರ್ವೇಷನ್ ಮಾಡಿದ್ದಾರೆಯೇ? ಅದನ್ನು observe ಮಾಡಿದ್ದಾರೆಯೇ? SC/ST ಗಳಿಗೆ

ಕೊಟ್ಟಿದ್ದಾರೆಯೇ? ಎಲ್ಲಾ illegal ಆಗಿ ಮಾಡಿದ್ದಾರೆ ಆಮೇಲೆ ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನು ನಡೆಯುತ್ತಿದೆ? ಅದರ ಬಗ್ಗೆ ಏಕೆ ಮಾತನಾಡುವುದಿಲ್ಲ ಪಾಪ ಈ ಹೆಣ್ಣು ಮಗಳು ಅಮಾಯಕಳು, ಅಲ್ಪಸಂಖ್ಯಾತ ಜಾತಿಗೆ ಸೇರಿದವರು ಎಂದು ಎಲ್ಲಾ ಬಂದು ಇವರ ಮೇಲೆ ಬೀಳುವುದೇ? ಅದೇ ರೀತಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏಕೆ ಮಾಡಲಿಕ್ಕಾಗುವುದಿಲ್ಲ? ಅಲ್ಲಿ ಇದೇರೀತಿ ಗಲಾಟ ಮಾಡುತ್ತಾರೆಯೇ? ಅಲ್ಲಿ ಎ ಬಿ ವಿ ಪಿ ಇಲ್ಲವೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅಲ್ಪಸಂಖ್ಯಾತ ಮಹಿಳೆಯಾಗಿರುವುದೇ ಅಪರಾಧವಾಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ ಮಂತ್ರಿಗಳಿಂದ ಹಿಡಿದು ಅಧಿಕಾರಿಗಳವರೆಗೆ ಎಲ್ಲರಿಗೂ ರೆಕ್ರೂಟ್‌ಮೆಂಟ್ ಮಾಡುವ ಚಟ ಬಂದಿದೆ

ಶ್ರೀ ಎಸ್ ಸಿದ್ಧರಾಮಯ್ಯ ಮಂತ್ರಿಗಳೂ ಕೂಡ, ಯಾವ ಕಾನೂನು ಇಲ್ಲ, ಯಾವುದೂ ಇಲ್ಲ ಮನಸ್ಸಿಗೆ ಬಂದ ಹಾಗೆ ಮಾಡುತ್ತಾರೆ ಅವರ ಮೇಲೆ ಯಾರೂ ಕ್ರಮ ತೆಗೆದುಕೊಳ್ಳುವುದಿಲ್ಲ ಈ ಹೆಣ್ಣುಮಗಳು ಪುಕ್ಕಟೆಯಾಗಿ ಸಿಕ್ಕಿದ್ದಾಳೆ, ಅಲ್ಪಸಂಖ್ಯಾತ ಜಾತಿಗೆ ಸೇರಿದ ಹೆಣ್ಣುಮಗಳು, ಆಕೆ ವೈಸ್ ಚಾನ್ಸಲರ್ ಆದಾಗಲಿನಿಂದ ಒಂದು ದಿನವಾದರೂ ಅವರನ್ನು ನೆಮ್ಮದಿಯಾಗಿರಲಿಕ್ಕೆ ಬಿಟ್ಟಿದ್ದಾರೆಯೇ? ಆ ರಿಜಿಸ್ಟ್ರಾರ್ ಇದ್ದಾಗ ಅವರಿಂದ ಹಿಂಸೆ, ಬೇರೆಯವರಿಂದ, ಸಿಂಡಿಕೇಟ್ ಮೆಂಬರ್ಸ್‌ರವರಿಂದ ಹಿಂಸೆ ಅದೇನು ಆ ಮಹಿಳಾ ವಿಶ್ವವಿದ್ಯಾನಿಲಯವನ್ನು ಮುಚ್ಚಿಸಬೇಕೆಂಬುದೇ ಇವರ ಉದ್ದೇಶ? ಪ್ರತಿ ದಿನ ಪತ್ರಿಕೆಯಲ್ಲಿ ಈ ವಿಷಯ ಬರುತ್ತಿದೆ ಈ ಸರ್ಕಾರ ಹೇಗೆ ನೋಡಿಕೊಂಡು ನಿದ್ದೆ ಮಾಡುತ್ತಿದೆ? Why this Government is sleeping over the matter? ನನಗೆ ಅನ್ನಿಸುತ್ತದೆ ಈ ಸರ್ಕಾರಕ್ಕೆ ಯಾವುದೇ ರೀತಿಯ sensitiveness ಇಲ್ಲವೇ? ಪ್ರತಿ ದಿನ ಪತ್ರಿಕೆಯಲ್ಲಿ ಬರುತ್ತದೆ ಅದನ್ನು ನೋಡಿಕೊಂಡು ಹೇಗಿರುತ್ತೀರಿ? ಆ ಉನ್ನತ ಶಿಕ್ಷಣ ಸಚಿವರು ಪತ್ರಿಕೆಯಲ್ಲಿ ಓದಿ ಸಹ ಹೇಗೆ ಸುಮ್ಮನಿರುತ್ತಾರೆ? ಏನಾದರೂ react ಮಾಡಬೇಕಲ್ಲವೇ? ಅವರಿಗೆ ರಕ್ಷಣೆ ಕೊಡುವುದನ್ನಾದರೂ ಮಾಡಬೇಕಲ್ಲವೇ? ಇಷ್ಟೊಂದು ಬೇಜವಾಬ್ದಾರಿ ಸರ್ಕಾರವನ್ನು ನಾವು ಯಾವಾಗಲೂ ನೋಡಿರಲಿಲ್ಲ ಯಾವುದೋ ಒಂದು ವರ್ಗದ ಜನರಿಗೆ ಕಿರುಕುಳ ಆಗಲಿ ಎಂತಲೇ ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆಂಬ ಭಾವನೆ ಜನರಿಗೆ ಬರುತ್ತಿದೆ ಈ ಭಾವನೆ ತೆಗೆದು ಹಾಕಬೇಕೆನ್ನುವುದಾದರೆ ಕೂಡಲೇ ನೀವು ಉನ್ನತ ಶಿಕ್ಷಣ ಸಚಿವರನವನು ಕರೆಸಿ, ಇದಕ್ಕೆ ಉತ್ತರ ಕೊಡಿಸಬೇಕು ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಆ ಮಹಿಳೆಗೆ ಎಲ್ಲಾ ರೀತಿಯ ರಕ್ಷಣೆ ಕೊಡುವುದನ್ನು ಮಾಡಬೇಕು ಗೃಹ ಸಚಿವರು ತಾವು ಇಲ್ಲೇ ಇದ್ದೀರಿ ನಿಮ್ಮ ಗಮನಕ್ಕೆ ಬಂದಿರಬೇಕು, ಎಲ್ಲಾ ರೀತಿಯ ರಕ್ಷಣೆ ಕೊಡುವಂಥ ಕೆಲಸ ಮಾಡಬೇಕು ಎ ಬಿ ವಿ ಪಿ ಯವರು ವಿಶ್ವವಿದ್ಯಾನಿಲಯದೊಳಗೆ ಬರದ ಹಾಗೆ

ವ್ಯವಸ್ಥೆ ಮಾಡಬೇಕು ಪ್ರತಿದಿನವೂ ಬೀದಿಯಲ್ಲಿ ಬೈದುಕೊಂಡು ತಿರುಗಾಡಿದರೆ, ಮನುಷ್ಯತ್ವ ಇರುವವರು ಯಾರಾದರೂ ಬದುಕಲಿಕ್ಕೆ ಸಾಧ್ಯವಿದೆಯೇ? ದಯವಿಟ್ಟು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು

ಶ್ರೀ ಹೆಚ್ ಸಿ ಮಹದೇವಪ್ಪ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಗಲಾಟೆ, ದಾಂಧಲೆ ಆಗುತ್ತಿರುವುದು ಶೆಟ್ಟರೇ ಒಂದು ನಿಮಿಷ

ಶ್ರೀ ಜಗದೀಶ್ ಶೆಟ್ಟರ್ ಉನ್ನತ ಶಿಕ್ಷಣ ಸಚಿವರು ಸದನಕ್ಕೆ ಬರಲಿ, ಆಮೇಲೆ ಚರ್ಚೆ ಮಾಡಬಹುದು ಎಲ್ಲರೂ ಸೇರಿ ಸರ್ಕಾರದಲ್ಲಿದ್ದವರೇ ಅದರಲ್ಲಿ ಭಾಗಿಯಾಗಿದ್ದಾರೆಂದು ಹೇಳುವುದು ಸರಿಯಲ್ಲ ಆಪಾದನೆ ಮಾಡುವುದು ಸರಿಯಲ್ಲ ಇದು ಬೇಜವಬ್ದಾರಿ ಮಾತು ಸರ್ಕಾರದಲ್ಲಿದ್ದವರೇ ಆ ವಿಶ್ವವಿದ್ಯಾನಿಲಯವನ್ನು ಮುಚ್ಚಲಿಕ್ಕೆ ಹೊರಟಿದ್ದಾರೆ ಎಂದು ಇವತ್ತು ಸದಸ್ಯರು ಮಾತನಾಡುತ್ತಿದ್ದಾರೆ ಇದು ಸರಿಯಲ್ಲ ಅವರೇನು ಅವ್ಯವಹಾರ ಮಾಡಿದ್ದಾರೆ ಅದರ ಬಗ್ಗೆ ನ್ಯಾಯಮೂರ್ತಿ ವೆಂಕಟೇಶ್‌ರವರು ತನಿಖೆ ಮಾಡುತ್ತಿದ್ದಾರೆ ಅವರಿಂದ ವರದಿ ಬಂದ ಮೇಲೆ ಇದರ ಬಗ್ಗೆ ತೀರ್ಮಾನಿಸುತ್ತೇವೆ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ದಾಂಧಲೆ ಮಾಡಲಿಕ್ಕೆ ಅವರಿಗೇನು ಅಧಿಕಾರ ಇದೆ? ಅವ್ಯವಹಾರ ಮಾಡಿದ್ದರೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳಲಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ದಾಂಧಲೆ ಮಾಡಲಿಕ್ಕೆ ಅವರಿಗೆ ಅಧಿಕಾರ ಇಲ್ಲ ಅವ್ಯವಹಾರ ಆದರೆ ಕಾನೂನು ಇದೆ ಅದನ್ನೆಲ್ಲಾ ಬಿಟ್ಟು ಎ ಬಿ ವಿ ಪಿ ಯವರು ನೇರವಾಗಿ ವಿಶ್ವವಿದ್ಯಾನಿಲಯದೊಳಗೆ ಪ್ರವೇಶಿಸಿ ಗಲಾಟೆ ಮಾಡುವುದೆಂದರೆ ಏನು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ ನೇರವಾಗಿ ಸರ್ಕಾರದ ಮಿತ್ರಪಕ್ಷ ಇದರಲ್ಲಿ ಭಾಗಿಯಾಗಿದೆಯೆಂದು ಹೇಳುವುದು ಸರಿಯಲ್ಲ ಮಾನ್ಯ ಉಪಾಧ್ಯಕ್ಷರೇ,

ಶ್ರೀ ಜಿ ವಿ ಶ್ರೀರಾಮರೆಡ್ಡಿ ಹೌದು, ನೇರವಾಗಿ ಹೇಳುತ್ತಿದ್ದೇವೆ ಸರ್ಕಾರದಲ್ಲಿದ್ದವರೇ ಇದರಲ್ಲಿ ಭಾಗಿಯಾಗಿದ್ದಾರೆ ನಿಜ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ ಇವರೇನು ಹೇಳುತ್ತಿದ್ದಾರೆಂದರೆ ಸರ್ಕಾರದಲ್ಲಿದ್ದವರೇ ಇದನ್ನೆಲ್ಲಾ ನಡೆಸಿದ್ದಾರೆಂದು ಹೇಳುತ್ತಾರೆ ಇದು ಸರಿಯಲ್ಲ ಸರ್ಕಾರದ ಮಿತ್ರಪಕ್ಷ ಇದರಲ್ಲಿ ಭಾಗಿಯಾಗಿದೆ ಎಂದು ಹೇಳಿಕೆ ಕೊಡುವುದು ಸರಿಯಲ್ಲ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುವುದು ಸರಿಯಲ್ಲ

(ಗೊಂದಲ)

ಉಪಾಧ್ಯಕ್ಷರು ಆಯಿತು, ಈಗ ತಾವು ಹೇಳಿದ್ದಾಯಿತಲ್ಲ, ಒಂದು ನಿಮಿಷ

ಶ್ರೀ ಜಗದೀಶ್ ಶೆಟ್ಟರ್ ನ್ಯಾಯಮೂರ್ತಿಯಾದ ವೆಂಕಟೇಶ್‌ಮೂರ್ತಿಯವರು ಇದರ ಬಗ್ಗೆ ತನಿಖೆ ಮಾಡುತ್ತಿದ್ದಾರೆ ಆ ವರದಿ ಬರಲಿ, ಬಂದ ಮೇಲೆ ಏನಾಗಿದೆಯೆಂದು ಗೊತ್ತಾಗುತ್ತದೆ

ಶ್ರೀ ಸಿದ್ದು ಸವದಿ ಈ ರೀತಿ ಮಾತನಾಡುವುದು ಸರಿಯಲ್ಲ ಕಾಂಗ್ರೆಸಿನವರೇ ಚಿತಾವಣೆ ಮಾಡಲಿಕ್ಕೆ ಅವಕಾಶ ಕೊಡುತ್ತಿದ್ದಾರೆ

(ಗೊಂದಲ)

ಶ್ರೀ ಆರ್ ವಿ ದೇಶಪಾಂಡೆ ನೀವು ಈ ರೀತಿ defend ಮಾಡಬೇಡಿ ಅಸಂಬ್ಲಿಯಲ್ಲಿ ಹೀಗಾದರೆ ಏನು ಗೌರವ ಬರುತ್ತದೆ Autonomous institutions ಎಂದು ಹೇಳುತ್ತೀರಿ ಎಲ್ಲಾ ಕಡೆ ಕೈ ಹಾಕುತ್ತೀರಿ

ಉಪಾಧ್ಯಕ್ಷರು ಒಂದು ನಿಮಿಷ, ಮಹದೇವಪ್ಪನವರೇ, ಕುಳಿತುಕೊಳ್ಳಿ, ನೀವು ಹೇಳುವುದು ಅದೇ ವಿಚಾರವನ್ನೇ, ದಯವಿಟ್ಟು ಹೇಳಿ ಸಾರ್ ನೀವು ಜಗದೀಶ್ ಶೆಟ್ಟರ್ ಏನು ಹೇಳಬೇಕು ಅಂತ ಅಂದುಕೊಂಡಿರಿ, ನೀವು?

ಶ್ರೀ ಹೆಚ್ ಸಿ ಮಹದೇವಪ್ಪ ಉಪಾಧ್ಯಕ್ಷರೇ, ಈಗ ವಿಶ್ವವಿದ್ಯಾನಿಲಯಗಳು ಈ ರಾಜ್ಯದಲ್ಲಿ ಮುಂದಿನ ಪೀಳಿಗೆ ಯಾವ ರೀತಿ ಒಂದು ಸಾಮಾಜಿಕ ಭದ್ರತೆಯ ಮೇಲೆ ದೇಶವನ್ನು ಕಟ್ಟಬೇಕೆಂದು ತೀರ್ಮಾನ ಮಾಡುವ ಕ್ಷೇತ್ರಗಳವು ಅಲ್ಲಿ ನೇಮಕವಾಗಿರುವಂಥ ಉಪಕುಲಪತಿಗಳು ಸ್ವಜನಪಕ್ಷಪಾತ, ಭ್ರಷ್ಟಾಚಾರ, ಕಾನೂನು, ಸಂವಿಧಾನ ಇವೆಲ್ಲವನ್ನು ಉಲ್ಲಂಘನೆ ಮಾಡಿ ಅವರಿಗೆ ಇಷ್ಟ ಬಂದ ಹಾಗೆ, ಅವರ ಜಾತಿಯವರ ಪರವಾಗಿ, ಹಣ ಕೊಟ್ಟವರಿಗೆ ನೇಮಕಾತಿ ಮಾಡಿದರೆ, ಈ ರೀತಿ ದಾಂಧಲೆ ಆಗುವುದನ್ನು ನೋಡಿಕೊಂಡು ಕುಳಿತಿದ್ದರೆ ಈ ಸರ್ಕಾರಕ್ಕೆ sensitiveness ಇದೆಯೇ? This is a thick-skinned Government ಎಲ್ಲೆಲ್ಲಿ minorities, backward classes, scheduled castes ಜನರು ಇರುತ್ತಾರೆ ಅಂಥ ಕಡೆ ಗಲಾಟೆ ಮಾಡುವುದು ನಮಗೆ ನಮ್ಮ ಸರ್ಕಾರ ಇದೆ, ನಮ್ಮವರು ಇದ್ದಾರೆಂದು ನಾವು ಕೇಳುವುದು

(ಗೊಂದಲ)

ಶ್ರೀ ಹೆಚ್ ಸಿ ಬಾಲಕೃಷ್ಣ ಎಲ್ಲರಿಗೂ ಒಂದೇ ಮಾತು ಆಡುವುದಾದರೆ ಇದು ಸರಿಯಲ್ಲ ಎಲ್ಲರಿಗೂ ಆ ವಿಚಾರದಲ್ಲಿ ಬದ್ಧತೆ ಇದೆ ಎಲ್ಲರೂ ರಕ್ಷಣೆ ಮಾಡುತ್ತಾರೆ ದಯಮಾಡಿ ಈ ಮಾತು ವಾಪಸ್ಸು ತೆಗೆದುಕೊಳ್ಳಬೇಕು

ಶ್ರೀ ಹೆಚ್ ಸಿ ಮಹದೇವಪ್ಪ ಈ ಸರ್ಕಾರಕ್ಕೆ ನೈತಿಕ ಹಕ್ಕಿಲ್ಲ

ಸಂವಿಧಾನವನ್ನು ಉಲ್ಲಂಘನೆ ಮಾಡುತ್ತಾರೆ ಕಾನೂನಿಗೆ ಗೌರವವಿಲ್ಲ ನೇಮಕಾತಿಯಲ್ಲಿ ನಮ್ಮ ಜಾತಿಯವರನ್ನೇ ಮಾಡಿಬಿಡಿ, ಪ್ರಮೋಷನ್ಸ್ ಇವರಿಗೆ ಕೊಟ್ಟುಬಿಡಿ ಎಂದರೆ ಹೇಗೆ? ಕಾನೂನು ಇಲ್ಲವೇ, ಸಂವಿಧಾನ ಇಲ್ಲವೇ?

(ಗೊಂದಲ)

ಉಪಾಧ್ಯಕ್ಷರು ಮಹದೇವಪ್ಪನವರೇ

ಶ್ರೀ ಹೆಚ್ ಸಿ ಬಾಲಕೃಷ್ಣ ಇವರೊಬ್ಬರೇ ಅಲ್ಲ, ದಲಿತರನ್ನು ರಕ್ಷಣೆ ಮಾಡುವವರು

ಶ್ರೀ ಹೆಚ್ ಸಿ ಮಹದೇವಪ್ಪ ವಿಶ್ವವಿದ್ಯಾನಿಲಯಗಳಲ್ಲಿ ಈ ರೀತಿ ನಡವಳಿಕೆ ಆದರೆ ಯಾವ ರೀತಿ ಮಾಡಬೇಕು?

ಶ್ರೀ ಎಂ ಟಿ ಕೃಷ್ಣಪ್ಪ ಉಪಾಧ್ಯಕ್ಷರೇ,

ಉಪಾದ್ಯಕ್ಷರು ಕೃಷ್ಣಪ್ಪನವರು ದಯವಿಟ್ಟು ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೆ ಕೇಳೋಣ

ಶ್ರೀ ಸಿದ್ದು ಕೆ ಸವದಿ ಯಾರಿಗೋ ಬೆಂಬಲ ಮಾಡಿ ಇವರೇ ತಪ್ಪಿತಸ್ಥರೆಂದು ಹೇಗೆ ನಿರ್ಣಯವನ್ನು ನೀವು ಕೊಡುತ್ತೀರಿ?

ಉಪಾಧ್ಯಕ್ಷರು ನೀವು ಮಾತನಾಡಿದ್ದು ಎಲ್ಲಾ record ಆಗಿದೆ ಯಾರೂ ಏನೂ ನೋವು ಪಡಬೇಕಾಗಿಲ್ಲ ಎಲ್ಲಾ record ಗೆ ಹೋಗಿದೆ

ಶ್ರೀ ಎಂ ಟಿ ಕೃಷ್ಣಪ್ಪ ನಮಗೂ ಮಾತನಾಡಲು ಅವಕಾಶ ಕೊಡಿ ಬರೇ ಅವರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದೀರಲ್ಲ ದಯಮಾಡಿ ನಮಗೂ ಅವಕಾಶ ಕೊಡಬೇಕು Open University ಬಗ್ಗೆ ಈಗ ಏನು refer ಮಾಡಿದ್ದಾರೆ ಯಾರ ಕಾಲದಲ್ಲಿ ಆಗಿದ್ದು? ಏನು ನಮ್ಮ ಸರ್ಕಾರ ಇದ್ದಾಗ ಆಗಿತ್ತಾ? ಕಾಂಗ್ರೆಸ್ ಸರ್ಕಾರದಲ್ಲಿ ಆಗಿರುವ ಬಗ್ಗೆ ದಯಮಾಡಿ enquiry ಮಾಡಿ ಯಾರ್‍ಯಾರು ಚೀಟಿ ಮೇಲೆ appoint ಆಗಿದ್ದಾರೆ ಅದನ್ನು ತೆಗೆದುಕೊಳ್ಳಿ ನಮ್ಮ ಮಹದೇವಪ್ಪನವರಾಗಲೀ ನಮ್ಮ ಸಿದ್ದರಾಮಣ್ಣನವರಾಗಲೀ, ನೀವು enquiry ಮಾಡಿ ಯಾರ್‍ಯಾರ ಕಾಲದಲ್ಲಿ ಎಷ್ಟು ಸಾವಿರ ಜನ ಇದ್ದಾರೆ ಎಂದು enquiry ಮಾಡಿ ಅದಕ್ಕೆ ನಾವು ಒಪ್ಪುತ್ತೇವೆ ನಮ್ಮ ಸರ್ಕಾರದಲ್ಲಿ ಆಗಿಲ್ಲ

(ಗೊಂದಲ)

ಡಾ|| ಹೆಚ್ ಸಿ ಮಹದೇವಪ್ಪ ಉಪ ಕುಲಪತಿಗಳಾಗಿದ್ದವರು ಏನು ಹೇಳಿದ್ದಾರೆ? ನಾನು ಇರುವುದೇ ನನ್ನ ಜಾತಿಯವರನ್ನು ರಕ್ಷಣೆ ಮಾಡುವುದಕ್ಕೆ ಎಂದು ಬಹಿರಂಗವಾಗಿ statement ಕೊಟ್ಟಿದ್ದಾರೆ

ಉಪಾಧ್ಯಕ್ಷರು ಮಾನ್ಯ ಕೃಷ್ಣಪ್ಪನವರೇ, ದಯಮಾಡಿ ಕುಳಿತುಕೊಳ್ಳಿ

ಶ್ರೀ ಎಂ ಟಿ ಕೃಷ್ಣಪ್ಪ ನಮ್ಮ ಸರ್ಕಾರದಲ್ಲಿ appoint ಮಾಡಿಕೊಂಡಿಲ್ಲ ದಯಮಾಡಿ ಅರ್ಥ ಮಾಡಿಕೊಳ್ಳಬೇಕು ನಮ್ಮ ಸರ್ಕಾರದಲ್ಲಿ ಆಗಿಲ್ಲ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಬಹಳ ಗುರುತರವಾದ ವಿಷಯಗಳ ಬಗ್ಗೆ ಮಾನ್ಯ ಅಪ್ಪಾಜಿ ಗೌಡರು ಪ್ರಸ್ತಾಪ ಮಾಡಿದ್ದಾರೆ ಈ ಬಗ್ಗೆ ಸರ್ಕಾರ ತೀವ್ರವಾದಂತಹ ಗಮನವನ್ನು ಹರಿಸಿದೆ ಈಗ ಮಾನ್ಯ ಶಂಕರಮೂರ್ತಿಯವರನ್ನು ತಕ್ಷಣವೇ ಕರೆಸಿ ಉತ್ತರ ಕೊಡಬಹುದಾಗಿತ್ತು ಮೂಡಿಗೆರೆಯಲ್ಲಿ ತೊಂದರೆ ಆಗಿದೆ ಅವರು ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಮಂತ್ರಿ ಆಗಿರುವುದರಿಂದ ಮೂಡಿಗೆರೆಯಲ್ಲಿ ವಿಪರೀತ ಮಳೆ ಬಂದು, ಪ್ರವಾಹದ ಸ್ಥಿತಿ ಉಂಟಾಗಿರುವುದರಿಂದ, ಅವರು ಒಪ್ಪಿಗೆಯನ್ನು ಪಡೆದುಕೊಂಡು ಅಲ್ಲಿಗೆ ಹೊರಟು ಹೋಗಿದ್ದಾರೆ ಸೋಮವಾರದ ದಿವಸ ಖಂಡಿತವಾಗಿಯೂ ನಾವು ಉತ್ತರವನ್ನು ಕೊಡುತ್ತೇವೆ ಎರಡನೆಯದು ತಾವೇನು ಪ್ರಸ್ತಾಪ ಮಾಡಿದ್ದೀರಿ, ಅಲ್ಲಿ ಈ ವಿಚಾರದ ಅನುಮಾನಗಳಿದ್ದು ಉತ್ತರ ಕರ್ನಾಟಕ ಭಾಗದಲ್ಲಿ ನಂಜುಂಡಪ್ಪ ಸಮಿತಿಯ ವರದಿಯ ಆಧಾರದ ಮೇಲೆ ಮಹಿಳಾ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದಂಥ ಸಂದರ್ಭ ಬಂದಾಗ ಕೂಡ ಪಕ್ಷಪಾತವಾಯಿತು ನಾವು ಆಗ ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೆವು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ಇಡೀ ರಾಜ್ಯದ ವ್ಯಾಪ್ತಿಗೆ ಬರುತ್ತದೆ ರಾಜೀವ್‌ಗಾಂಧಿ ಮೆಡಿಕಲ್ university ಇಡೀ ರಾಜ್ಯದ ವ್ಯಾಪ್ತಿಗೆ ಬರುತ್ತದೆ ಕನ್ನಡ ವಿಶ್ವವಿದ್ಯಾನಿಲಯ ಇಡೀ ರಾಜ್ಯದ ವ್ಯಾಪ್ತಿಗೆ ಬರುತ್ತದೆ ಆದರೆ ಮಹಿಳಾ ವಿಶ್ವವಿದ್ಯಾನಿಲಯ, ಬಿಜಾಪುರದ್ದು ಮಾತ್ರ 12 ಜಿಲ್ಲೆಗೆ ಸೀಮಿತ ಈ ವಿಚಾರದಲ್ಲಿ ನಾವು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದವರಿದ್ದಾಗ ಇದು ತಾರತಮ್ಯ, ಈ ಭಾಗದಲ್ಲಿರತಕ್ಕವರು ಪೂರ್ಣ ಅಲ್ಲಿಗೆ ಬರಲು ಆಗುವುದಿಲ್ಲವೆಂಬ ಕಾರಣಕ್ಕಾಗಿಯೇ, ಆವತ್ತಿನ ನಮ್ಮ ಶಿಕ್ಷಣ ಸಚಿವರಿಗೆ ಈ ತಾರತಮ್ಯವನ್ನು ಏಕೆ ಮಾಡಿದಿರಿ ಎಂದು ಹೇಳಿದ್ದೆವು ಆ ತಾರತಮ್ಯ ಆಗಿಹೋಗಿತು ಅದು ಹಿಂದಿನ ಸರ್ಕಾರ ಕೈಗೊಂಡಿರತಕ್ಕದ್ದು ಈಗ ನಾನು ಒತ್ತಾಯ ಮಾಡತಕ್ಕಕದ್ದು, ಇಡೀ ರಾಜ್ಯದ ವ್ಯಾಪ್ತಿಗೆ ಅದನ್ನು ಸೇರಿಸಿಕೊಳ್ಳಬೇಕು ಎಲ್ಲಾ ವಿಶ್ವವಿದ್ಯಾನಿಲಯ ಆದಂತೆ ಇದೂ ಕೂಡ ಇಡೀ ರಾಜ್ಯ ವ್ಯಾಪ್ತಿಗೆ ಸೇರತಕ್ಕದ್ದು ಆಗಬೇಕು ಈ ವಿಚಾರದಲ್ಲಿ ಅಲ್ಲಿ ಏನು ಗಲಭೆ ನಡೆದಿರತಕ್ಕದ್ದು, ಎಂಥ ದುಸ್ಥಿತಿ ಇದೆ ಎಂದರೆ ಅಲ್ಲಿ special officer ಆಗಿ ಜಾಮ್‌ದಾರ್‌ರವರನ್ನು ನೇಮಕಾತಿ ಮಾಡಿದಾಗ ಅಲ್ಲಿ ಕೆಲವರನ್ನು ಬೇರೆ ಬೇರೆ ಕಾಲೇಜಿನಲ್ಲಿ ಇದ್ದ ಪ್ರಾಧ್ಯಾಪಕರನ್ನು ನಿಯೋಜನೆಯ ಮೇರೆಗೆ ಅಲ್ಲಿ ತೆಗೆದುಕೊಂಡರು ಆ ರೀತಿ ತೆಗದುಕೊಂಡಂಥವರನ್ನು ಮೊನ್ನೆ ಆಗಿರತಕ್ಕ ನೇಮಕಾತಿಯಲ್ಲಿ ಖಾಯಂಗೊಳಿಸಿದ್ದಾರೆ ಅದರ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿದ್ದಾಗ ಅವರು ಈಗ ಯಾರೂ ಕೂಡ ಆ ಕಡೆ ನಿಯೋಜನೆಯಾಗಿಯೂ

ಉಳಿಯಲಿಲ್ಲ ಈ ಕಡೆ ಅವರು ಮಾತ್ರ ಇಲಾಖೆಗೂ ಹೋಗಲಿಲ್ಲ ಈಗ ಅಲ್ಲಿರತಕ್ಕ ಪ್ರಾಧ್ಯಾಪಕರುಗಳಿಗೆಲ್ಲಾ ತ್ರಿಶಂಕು ಸ್ಥಿತಿ ಬಂದಿದೆ ಈಗ ಆ ವಿಶ್ವವಿದ್ಯಾನಿಲಯವನ್ನು ಮುಚ್ಚುವಂಥ ಸ್ಥಿತಿ ಕೂಡ ಆಗಿದೆ ಈ ಕಾರಣಕ್ಕಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ರಾಜ್ಯಪಾಲರನ್ನು ಎರಡು ಬಾರಿ ಕಂಡು ಈ ವಿಚಾರದಲ್ಲಿ ಮಾತನಾಡಿದಾಗ ಪ್ರಾಧ್ಯಾಪಕರಿಗಾದರೂ ನೀವು ಒಪ್ಪಿಗೆಯನ್ನು ಕೊಡಬೇಕು ಎಂಬ ವಿಚಾರವನ್ನು ಹೇಳಿದ್ದಾರೆ ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತೆ ಅಲ್ಲಿರತಕ್ಕಂಥ Registrar ಗೂ Vice Chancellor ಗೂ ಭಿನ್ನಾಭಿಪ್ರಾಯಗಳಿವೆ ಈ ಕಾರಣಕ್ಕಾಗಿ ಅದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ ನೀವೇನು ಈ ವಿಚಾರವನ್ನು ಎತ್ತಿದ್ದೀರಿ, ಇದರ ಬಗ್ಗೆ ಸರ್ಕಾರ ಖಂಡಿತವಾಗಿ ಉತ್ತರವನ್ನು ಕೊಡುತ್ತದೆ ಅಲ್ಲಿ ನಡೆಯತಕ್ಕ ಗಲಭೆ ಮೊದಲಾಗಿದ್ದಕ್ಕೆ ಈಗಾಗಲೇ ವೈಸ್‌ಚಾನ್ಸಿಲರ್ ಎಲ್ಲರನ್ನೂ ಕಂಡು ಹೋಗಿದ್ದಾರೆ ನಾನು Superintendent of Police ರವರಿಗೆ ವಿಷಯವನ್ನು ತಿಳಿಸಿದ್ದೇನೆ ಸಂಪೂರ್ಣವಾದ ರಕ್ಷಣೆಯನ್ನು ನಾವು ಅಲ್ಲಿ ಕೊಟ್ಟಿದ್ದೇವೆ ಯಾವುದೇ ದಾಂಧಲೆ ಆಗದಂತೆ ನೋಡಿಕೊಳ್ಳಬೇಕೆಂದು ಅವರಿಗೆ ರಕ್ಷಣೆ ಕೊಡಬೇಕು ಎಂಬ ಸೂಚನೆಯನ್ನು ಅವರಿಗೆ ಕಳುಹಿಸಿಕೊಟ್ಟಿದ್ದೇವೆ ಸೋಮವಾರ ಖಂಡಿತವಾಗಿ ಇದಕ್ಕೆ ಉತ್ತರವನ್ನು ಕೊಡುತ್ತೇವೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ತಾವು ಇದರ ಬಗ್ಗೆ ಕ್ರಮ ತೆಗದುಕೊಂಡಿದ್ದೀರಿ ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ ಆದರೆ ಒಂದು ಏನೆಂದರೆ ಕಾನೂನುಬಾಹಿರವಾಗಿ recruitment ಆದರೆ, ನೀವು ಏನು ರೂಲ್ಸ್ ಪ್ರಕಾರ ಕ್ರಮ ತೆಗದುಕೊಳ್ಳಬೇಕೋ ತೆಗದುಕೊಳ್ಳಿ ನಿಮ್ಮ Code of Conduct ಅಥವಾ ನಿಮ್ಮ ರೂಲ್ಸ್ ಪ್ರಕಾರ ಮಾಡಿರದ್ದರೆ ನಿಮ್ಮ ನಿಯಮದ ಪ್ರಕಾರ action ತೆಗೆದುಕೊಳ್ಳಿ ಆದರೆ corruption ಆಗಿದ್ದರೆ ನೀವು ಕ್ರಮ ತೆಗದುಕೊಳ್ಳಿ ಅದನ್ನು ನಾವು ಯಾರೂ ಡಿಫೆಂಡ್ ಮಾಡಲು ಬರುವುದಿಲ್ಲ ನಮ್ಮ ವಾದ ಏನು ಎಂದರೆ ಯಾರಿಗೆ ಅಧಿಕಾರ ಇಲ್ಲ ಅಂಥ ವಿದ್ಯಾರ್ಥಿ ಪರಿಷತ್ತುಗಳು ತಾನಾಗಿಯೇ ಒಳಗಡೆ ಹೋಗಿ ಹೆದರಿಸತಕ್ಕದ್ದು ಮಾಡಿದ್ದರೆ, ಇದನ್ನು ಯಾರು control ಮಾಡಬೇಕು? ಎರಡನೆಯದು, ಮಂತ್ರಿಗಳೇ ಟೀ, ಕಾಫಿಗೆ ಕರೆದು ಆ ವಿದ್ಯಾರ್ಥಿ ಪರಿಷತ್ತು, officer bearer ನ್ನು ಜೊತೆಯಲ್ಲಿ ಕರೆದುಕೊಂಡು ಹೋಗತಕ್ಕದ್ದು ಯಾವ ನ್ಯಾಯ? ಇದರ ಬಗ್ಗೆ ನಮ್ಮ ಆಕ್ಷೇಪ ಇದೆ ಬಾಕಿಯಿದ್ದು ನೀವು ಅವರು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಿ ಶೂಲಕ್ಕೆ ಏರಿಸಿ Dismiss ಮಾಡಿ We don't come in your way But, who are these people to take law into their hands? ಇವರು ಯಾರು?

ಶ್ರೀ ಅರಗ ಜ್ಞಾನೇಂದ್ರ Strike ಮಾಡಿದವರನ್ನು ಕರೆದು ಮಾತನಾಡಿಸುವುದು ಹೊಸದೇ? ತಾವೂ ಸರ್ಕಾರದಲ್ಲಿದ್ದವರು, ಮಂತ್ರಿಗಳಾಗಿದ್ದವರು ಕರೆದು ಕೂರಿಸಿ ಮಾತನಾಡಿ ಅವರ ಅಹವಾಲು ಏನು ಎಂದು ಕೇಳುತ್ತೇವೆ ಅಲ್ಲಿ ಗಲಭೆ ಏನಾಗಿದೆ, ನಡೆಯಬಾರದ್ದು ಏನಾಗಿದೆ ಎಂಬುದನ್ನು ಒಂದು ವಿಶ್ವವಿದ್ಯಾನಿಲಯಕ್ಕೆ ಇರತಕ್ಕ ವರ್ತನೆ ಅಲ್ಲಿ ಇಲ್ಲ ಆದ್ದರಿಂದ ಅವರು strike ಮಾಡಿದ್ದಾರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ strike ಮಾಡಲು ಅವಕಾಶ ಇಲ್ಲವೇ? ವಿದ್ಯಾರ್ಥಿ ಪರಿಷತ್ತಿನವರು ಮಾಡಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ ಇಲ್ಲಿ ಬಂದು ಬೊಬ್ಬೆ ಹೊಡೆದುಬಿಟ್ಟರೆ ಹೇಗೆ?

(ಗೊಂದಲ)

strike ಮಾಡಿದವರನ್ನು ತಮ್ಮ ಕಾಲದಲ್ಲೂ ಕರೆದಿದ್ದೀರಿ, ಮಾತನಾಡಿದ್ದೀರಿ

ಶ್ರೀ ಶರಣಪ್ರಕಾಶ ರುದ್ರಪ್ಪ ಪಾಟೀಲ್ ನೀವು ಇನ್ನೂ ಮಂತ್ರಿಯಾಗಿಲ್ಲ ಮಂತ್ರಿಯೂ ಆಗುವುದಿಲ್ಲ ಸುಮ್ಮನೆ ಇರಿ, ನೀವು

ಶ್ರೀ ಅರಗ ಜ್ಞಾನೇಂದ್ರ ಅಲ್ಲಿ ವಾಸ್ತವವಾಗಿ ಏನಾಗಿದೆ ಎಂಬುದನ್ನು ಕೇಳಲಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾವು ಯಾರ ಪರವಾಗಿಯೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ ಆದರೆ ತಾವು ಮಾಡತಕ್ಕ ಬಗ್ಗೆ, ಅಲ್ಲಿನ ನಡವಳಿಕೆಯ ಬಗ್ಗೆ ನಾವು ಹೇಳುತ್ತಿದ್ದೇವೆ ನೀವು ಪ್ರಜಾತಂತ್ರ ವ್ಯವಸ್ಥೆಯಲ್ಲಿ protest ಮಾಡಲು ಅಧಿಕಾರ ಇದೆ ಅದನ್ನು ಹೊರಗಡೆ ಮಾಡಿ, ಸತ್ಯಾಗ್ರಹ ಮಾಡಿ ಆದರೆ chamber ನೊಳಗೆ ಹೋಗಿ ದಾಂಧಲೆ ಮಾಡಿ ಫೈಲ್‌ಗಳನ್ನು ಹರಿಯತಕ್ಕದ್ದು, ಗುದ್ದತಕ್ಕದ್ದು, ಬಾಗಿಲು ಮುರಿಯತಕ್ಕದ್ದು ಮಾಡಿದರೆ ಇದು protest ಆಗುತ್ತದೆಯೇ? ಇದು strike ಆಗುತ್ತದೆಯೇ? ಇದು ಪ್ರಜಾಪ್ರಭುತ್ವದ ಪದ್ಧತಿಯೇ?

ಶ್ರೀ ಸಿದ್ದು ಕಲ್ಲಪ್ಪ ಸಾವದಿ ಮಾನ್ಯ ಅಧ್ಯಕ್ಷರೆ, ಮಲ್ಲಿಕಾರ್ಜುನ ಖರ್ಗೆಯವರು ವಿದ್ಯಾರ್ಥಿ ಪರಿಷತ್ತಿನ ಬಗ್ಗೆ ಆಪಾದನೆ ಮಾಡುತ್ತಿದ್ದಾರೆ ತಾವು ಸುಮ್ಮನಿರಿ ನಮಗೂ ಅದು ಗೊತ್ತಿಲ್ಲವೇ? ವಿರೋಧ ಪಕ್ಷದ ನಾಯಕರಾಗಿ ತಾವು ರಾಜ್ಯಪಾಲರ ಬಗ್ಗೆ ಯಾವ ರೀತಿಯಾಗಿ ವರ್ತನೆ ಮಾಡಿದಿರಿ, ಗೌರವಾನ್ವಿತ ಸಭಾಧ್ಯಕ್ಷರ ಬಗ್ಗೆ ಯಾವ ರೀತಿಯಾಗಿ ವರ್ತನೆ ಮಾಡಿದ್ದೀರಿ ಎಂಬ ಬಗ್ಗೆ ತಾವು ಮೊದಲು ಆತ್ಮ ವಿಮರ್ಶೆ ಮಾಡಿಕೊಳ್ಳಿ ಅದನ್ನು ಬಿಟ್ಟು ವಿದ್ಯಾರ್ಥಿ ಪರಿಷತ್ತಿನ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವುದಲ್ಲ ಐದಾರು ಬಾರಿ ತಾವು ಆಯ್ಕೆಯಾಗಿದ್ದೀರಿ ಹಿರಿಯ ನಾಯಕರು ತಾವು

ಶ್ರೀ ಮಲ್ಲಿಕಾರ್ಜುನ ಖರ್ಗೆ ಒಂದು ಕಡೆ ರಕ್ಷಣೆ ಕೊಡತಕ್ಕದ್ದು ಒಂದು ಕಡೆ ಕಾನೂನನ್ನು ಕೈಗೆ ತೆಗದುಕೊಂಡಂಥ ವಿದ್ಯಾರ್ಥಿ ಪರಿಷತ್ತಿನ ಬಗ್ಗೆ ಕೂಡ

ತಾವು ಕ್ರಮ ತೆಗೆದುಕೊಳ್ಳಬೇಕು ದಯವಿಟ್ಟು ತಮ್ಮ ಮಿತ್ರ ಪಕ್ಷದವರು ಎಂಬುದನ್ನು ನೋಡಬೇಡಿ ಇಲ್ಲದಿದ್ದರೆ ಇದು habit ಆಗಿಬಿಡುತ್ತದೆ ಇವತ್ತು ಇವರು ಮಾಡಿದ್ದಾರೆ, ನಾಳೆ ನಾವು ಮಾಡಬಹುದು, ಇನ್ನೊಬ್ಬರು ಮಾಡಬಹುದು ಇಂಥದ್ದು ಆಗಬಾರದು ವಿಶ್ವವಿದ್ಯಾನಿಲಯಗಳಲ್ಲಿ ತಿಳಿ ವಾತಾವರಣ ಇರಬೇಕಾದರೆ ಒಂದು discipline ಬರಬೇಕು ವಿದ್ಯಾರ್ಥಿಗಳಿಗೂ ಕೂಡ ಗೊತ್ತಾಗಬೇಕು ಅದನ್ನು ತಾವು ಮಾಡಿದರೆ ಇದು control ಗೆ ಬರುತ್ತದೆ ತಪ್ಪು ಮಾಡಿದವರಿಗೆ ನಾವು free ಬಿಟ್ಟರೆ ಅಲ್ಲಿ ಅಶಿಸ್ತಿನ ವಾತಾವರಣ ಸೃಷ್ಟಿಯಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಅಲ್ಲಿ ಗಲಾಟೆ ನಡೆದಾಗ ಗೃಹ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿರಿ? ಅದು ನಿಮ್ಮ ಜವಬ್ದಾರಿ ಏಕೆಂದರೆ ಉನ್ನತ ಶಿಕ್ಷಣ ಶಿಕ್ಷಣ ಸಚಿವರು ಹೇಳತಕ್ಕ ವಿಚಾರ ಬೇರೆ ಆವತ್ತು ಆದ ಗಲಾಟೆಯ ಬಗ್ಗೆ, ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿರಿ? ಬಹಳ ಮುಖ್ಯವಾಗಿ ಅದು ನಮಗೇ ನೇರವಾಗಿ ಬರುತ್ತದೆ ಆ ವೈಸ್ ಚಾನ್ಸಲರ್ ಮಹಿಳೆ ಕಣ್ಣೀರಿಡುತ್ತಿರುವುದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ ಇದು ನಮಗೆ ಶೋಭೆ ತರತಕ್ಕದ್ದಲ್ಲ ನಮ್ಮ ರಾಜ್ಯಕ್ಕೆ ನಾಚಿಕೆಗೇಡು

ಶ್ರೀ ಸಿದ್ದು ಕಲ್ಲಪ್ಪ ಸಾವದಿ ತಮ್ಮ ವರ್ತನೆ ನಾಚಿಕೆಗೇಡು

ಶ್ರೀ ವಾಟಾಳ್ ನಾಗರಾಜ್ ತಮ್ಮ ಬಗ್ಗೆ ಅನಂತರ ಮಾತನಾಡೋಣ ಅಲ್ಲಿ ಉಪಕುಲಪತಿಯಾಗಿರುವ ಆ ಮಹಿಳೆ ಕಣ್ಣೀರಿಡುವ ಪರಿಸ್ಥಿತಿ ನಿರ್ಮಾಣವಾಯಿತು ತಾವು ಗೃಹ ಸಚಿವರಾಗಿ ಏನು ಕ್ರಮ ತೆಗೆದುಕೊಂಡಿರಿ?

ಶ್ರೀ ಅರಗ ಜ್ಞಾನೇಂದ್ರ ಅಲ್ಲಿ strike ಆಗಿದೆ ಸಿಂಡಿಕೇಟ್ ಸಭೆ ಏನಾಗಿದೆ ಅದು ಕಾನೂನುಬಾಹಿರ ಎಂದು ವಿದ್ಯಾರ್ಥಿಗಳು ಮೊದಲು ಹೇಳಿದ್ದಾರೆ ಆದರೂ ಕೂಡ ಆಗ ಸಭೆ ನಡೆಯುತ್ತಿದ್ದಾಗ, protest ಮಾಡಿದ್ದಾರೆ ಅವರು ಅದನ್ನು ಕೇಳದಿದ್ದಾಗ ಒಳಗೆ ಹೋಗಿ ಘೆರಾವೋ ಮಾಡಿದ್ದಾರೆ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಸಚಿವರು ಮಾತನಾಡಲಿ ನೀವು ಏಕೆ ಮಾತನಾಡುತ್ತೀರ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ ಪ್ರಜಾತಂತ್ರ ವ್ಯವಸ್ಥೆಯ ಹೋರಾಟಕ್ಕೆ ಬಾರಿ ದೊಡ್ಡ ಬೊಬ್ಬೆ ಹಾಕುವುದರಲ್ಲಿ ಅರ್ಥವಿಲ್ಲ

ಶ್ರೀ ಆರ್ ವಿ ದೇಶಪಾಂಡೆ ನೀವು ಉತ್ತರ ಕೊಡುವ ಅವಶ್ಯಕತೆ ಏನು? ತಾವು ದಯಮಾಡಿ ಕುಳಿತುಕೊಳ್ಳಿ ಸಚಿವರು ಸೋಮವಾರ ಉತ್ತರ ಕೊಡುತ್ತಾರೆ ನೀವು ಉತ್ತರ ಕೊಡುವ ಅವಶ್ಯಕತೆ ಇಲ್ಲ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಪ್ರತಿಭಟನೆ ಮಾಡತಕ್ಕಂಥ ಹಕ್ಕು ಎಲ್ಲರಿಗೂ ಇದೆ ಮಾಡಲಿ ಆದರೆ, ಗೇಟನ್ನು ಮುರಿದು ಒಳಗೆ ಹೋಗಿ ಸಿಂಡಿಕೇಟ್ ಸಭೆ ನಡೆಯುತ್ತಿದ್ದಾಗ

ಶ್ರೀ ವಾಟಾಳ್ ನಾಗರಾಜ್ ಗೃಹ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟನೆ ನೀಡಬೇಕು ಇದು ನಿಮ್ಮದೇ ಜವಾಬ್ದಾರಿಯಾಗಿದೆ

(ಗೊಂದಲ)

ಉಪಾಧ್ಯಕ್ಷರು ಆಯಿತು, ಈಗ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಅರಗ ಜ್ಞಾನೇಂದ್ರ ಮಾನ್ಯ ಗೃಹ ಸಚಿವರು enquiry ಮಾಡಲಿ, ಏನೂ ತೊಂದರೆಯಿಲ್ಲ

ಶ್ರೀ ಎಂ ಪಿ ಪ್ರಕಾಶ್ ಈಗ ಇದಕ್ಕೆ ಉತ್ತರ ಕೊಡುವುದು ಒಂದು ಭಾಗ ದಾಂಧಲೆ ಮಾಡಿರುವ ವಿಚಾರದಲ್ಲಿ ನೀವು ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದ್ದಾರೆ ನಾನು ಆವತ್ತೇ SP ಅವರಿಗೆ ವಿಚಾರ ತಿಳಿಸಿದ್ದೇನೆ Vice Chancellor ಅವರೊಂದಿಗೂ ಮಾತನಾಡಿದ್ದೇನೆ ಅವರು ಕೂಡ ನನ್ನನ್ನು ಭೇಟಿಯಾಗಿ ವಿಷಯಗಳೆಲ್ಲವನ್ನೂ ತಿಳಿಸಿದ್ದಾರೆ ಆದರೆ, ಆವತ್ತಿನ ದಿವಸ ಫಿರ್ಯಾದು ದಾಖಲಾಗಿಲ್ಲ ಆದರೂ ಪೊಲೀಸರು ಅಲ್ಲಿಗೆ ಹೋಗಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿದ್ದಾರೆ ಯಾವುದೇ ರೀತಿಯಲ್ಲೂ ಅಹಿತಕರ ಘಟನೆಗಳಾಗದಂತೆ ಕ್ರಮ ಕೈಗೊಂಡಿದ್ದಾರೆ ಆದರೆ ಇವತ್ತಿನ ಪತ್ರಿಕೆಗಳಲ್ಲಿ ವರದಿಯಾಗಿದೆ ಆ ಕಾರಣಕ್ಕಾಗಿಯೇ ಇದಾದ ತಕ್ಷಣವೇ ನಾನು ಮತ್ತೆ Superintendent of Police ಅವರೊಂದಿಗೆ ಮಾತನಾಡಿ ಅಲ್ಲಿನ ವಸ್ತುಸ್ಥಿತಿ ಏನೆಂಬುದನ್ನು ತಿಳಿದುಕೊಳ್ಳುತ್ತೇನೆ ಯಾರೇ ಆಗಿರಲಿ, ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಮಾಡತಕ್ಕ ಪ್ರತಿಭಟನಾಕಾರರಾಗಿರಬಹುದು, ಮತ್ತೊಬ್ಬರಾಗಿರಬಹುದು, ಅವರ ಮೇಲೆ ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ ಇದುವರೆಗೂ ಯಾರನ್ನಾದರೂ ಬಂದಿಸಿದ್ದೀರಾ? ಇದು ಒಂದು ಮಹಿಳೆಯ ಮೇಲೆ ನಡೆದಿರುವ ಗಲಾಟೆ ಎರಡನೆಯದು, ವಿಶ್ವವಿದ್ಯಾನಿಲಯಕ್ಕೆ ನುಗ್ಗಿರತಕ್ಕಂಥಾದ್ದು ಇವೆರಡೂ ಇರುವಾಗ ಇದರ ಬಗ್ಗೆ ಗಂಭೀರವಾಗಿ ನೀವು ತೀರ್ಮಾನ ತೆಗದುಕೊಳ್ಳುವುದಿಲ್ಲವೆಂದರೆ ಹೇಗೆ?

ಶ್ರೀ ಎಂ ಪಿ ಪ್ರಕಾಶ್ ಕ್ರಮ ತೆಗೆದುಕೊಂಡಿದ್ದೇವೆ ಉಪ ಕುಲಪತಿಗಳೊಂದಿಗೂ ಮಾತನಾಡಿದ್ದೇವೆ ಆದರೆ, ಪರಿಸ್ಥಿತಿ ಉಲ್ಬಣಗೊಳ್ಳಬಾರದೆಂದು ಆ ಸಂದರ್ಭದಲ್ಲಿ ಫಿರ್ಯಾದು ಕೊಡಲಿಲ್ಲ ಆದರೂ ಕೂಡ ನಮ್ಮ ಪೊಲೀಸರು ಹೋಗಿ ರಕ್ಷಣೆ ಕೊಟ್ಟಿದ್ದಾರೆ ಫಿರ್ಯಾದು ಇಲ್ಲವೆಂದ ತಕ್ಷಣ ಅದನ್ನು

ಕೈಬಿಡಬೇಕೆಂದೇನೂ ಇಲ್ಲ ಏನೆಲ್ಲಾ protection ಒದಗಿಸಿಕೊಡಬೇಕೋ, ಎಲ್ಲವನ್ನೂ ಮಾಡಿದ್ದೇವೆ ಇಲ್ಲಿ ನಿಖರವಾಗಿ ಹೇಳಬೇಕಾದರೆ, ಅಧೀಕ್ಷಕರಿಂದ ಮಾಹಿತಿ ತರಿಸಿಕೊಂಡು ಖಂಡಿತವಾಗಿಯೂ ನಾನು ಹೇಳುತ್ತೇನೆ

(ಗೊಂದಲ)

ಒಬ್ಬ ಮಾನ್ಯ ಸದಸ್ಯರು ಅಧ್ಯಕ್ಷರೆ, ಇನ್ನೂ ಮಾಹಿತಿ ಬಂದಿಲ್ಲ ಎಷ್ಟು ಉದಾಸೀನ ನೋಡಿ ಇಷ್ಟೊಂದು ಗಲಭೆಯಾಗಿದೆ, ಅನಾಹುತವಾಗಿದೆ, ಪ್ರತಿಭಟನೆಯಾಗಿದೆ ಇನ್ನೂ ಕೂಡ ಮಾಹಿತಿ ಇಲ್ಲ

ಶ್ರೀ ಸಿ ಟಿ ರವಿ ಅದಕ್ಕೋಸ್ಕರವೇ ನಕ್ಸಲರು ಇಷ್ಟೊಂದು ಬೆಳೆಯುತ್ತಿರುವುದು ಅವರು ಇನ್ನಾವುದಕ್ಕೆ ಬೆಳೆಯುತ್ತಾರೆ? ಎಲ್ಲವನ್ನೂ ನೀವೇ ಮಾಡುವುದು

ಉಪಾಧ್ಯಕ್ಷರು ಈಗ ಅವರ ಬಳಿ ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ ಸೋಮವಾರ ದಿವಸ ಮಂತ್ರಿಗಳನ್ನು ಕರೆಸಿ ಮಾಹಿತಿ ಸಮೇತ ಉತ್ತರ ಕೊಡುವುದಾಗಿ ಹೇಳಿದ್ದಾರೆ ಮತ್ತೆ ಪದೇ ಪದೇ ಅದನ್ನೇ ಮಾತನಾಡುತ್ತೀರಲ್ಲ? ಕುಳಿತುಕೊಳ್ಳಿ

9) ವಿಷಯ ಜಾಸ್ತಿಯಾಗುತ್ತಿರುವ ಸಿಮೆಂಟಿನ ಬೆಲೆ ಕುರಿತು

ಶ್ರೀ ಪಿ ಜಿ ಆರ್ ಸಿಂಧ್ಯಾ (ಕನಕಪುರ) ಮಾನ್ಯ ಉಪಾಧ್ಯಕ್ಷರೆ, ಸರ್ಕಾರಕ್ಕೆ ಒಂದು ವಿಚಾರ ತರಬೇಕು ಕರ್ನಾಟಕದಲ್ಲಿ ಸಿಮೆಂಟಿನ ಬೆಲೆ ಬಹಳ ಜಾಸ್ತಿಯಾಗುತ್ತಿದೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು ಸದನದಲ್ಲಿರುವುದರಿಂದ ಈ ವಿಷಯವನ್ನು ನಾನು ಪ್ರಸ್ತಾಪಿಸಬೇಕೆಂದು ಹೇಳಿ ತಮಗೆ ಪತ್ರ ಬರೆದಿದ್ದೇನೆ ನನ್ನ ಪತ್ರ ತಮಗೆ ತಲುಪಿದೆಯೋ ಇಲ್ಲವೋ ನನಗೆ ಅನುಮಾನವಿದೆ ನಾನು ನನ್ನ ಮಾತುಗಳನ್ನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ ವಿಶೇಷವಾಗಿ, ಬೆಂಗಳೂರು ನಗರದಲ್ಲಿ construction activities ಎಲ್ಲವೂ ಸ್ಥಗಿತಕ್ಕೆ ಬರುತ್ತಿದೆ Contractors ಸಹ ಸರ್ಕಾರದ ಎಲ್ಲಾ ಕೆಲಸಗಳನ್ನು ನಿಲ್ಲಿಸತಕ್ಕಂದ ಪರಿಸ್ಥಿತಿಗೆ ಹೋಗುತ್ತಿದ್ದಾರೆ ಏಕೆಂದರೆ tender value ಏನಿದೆ, ಆಗ 150, 200 ರೂಪಾಯಿಗಳಿದ್ದುದು, ಈಗ 300, 320 ರೂಪಾಯಿಗಳಾಗಿದೆ ಕೇಂದ್ರ ಸರ್ಕಾರ ಏನು ಮಾಡುತ್ತಿದೆ ಎಂಬುದು ನಮಗಂತೂ ಅರ್ಥವಾಗುತ್ತಿಲ್ಲ ಕರ್ನಾಟಕದಲ್ಲಿ 10–15 ಸಿಮೆಂಟ್ ಫ್ಯಾಕ್ಟರಿಗಳಿವೆ ಸರ್ಕಾರಕ್ಕೆ ನಿಯಂತ್ರಣವಿದೆ ಇದುವರೆಗೂ ನಮ್ಮ ಸಚಿವರಾದವರು ಇದರ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ? ನನಗೆ ಏನು ಅನಿಸುತ್ತದೆಂದರೆ, If this is beyond the purview of the State Government, ಅಸೆಂಬ್ಲಿಯಲ್ಲಿ ಒಂದು resolution ಮಾಡಿ ನೀವು ಕಳುಹಿಸಬೇಕಾಗುತ್ತದೆ ಇಲ್ಲದಿದ್ದರೆ, entire contruction activities ಮತ್ತು ಸರ್ಕಾರದ ಕೆಲಸಗಳು, ನಿಂತು ಹೋಗುತ್ತವೆ ಕೆಲಸ ಮಾಡುತ್ತಿದ್ದ ಎಲ್ಲಾ

contractors ಸಹ ಈ ರೇಟಿನಲ್ಲಿ ನಮ್ಮಿಂದ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದೂ ವಾಪಸ್ಸು ಹೋಗುತ್ತಿದ್ದಾರೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? Actural ಆಗಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕು ತಾವು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಸಿಮೆಂಟ್ produce ಮಾಡುವವರೇನಿದ್ದಾರೆ, ಅವರನ್ನೂ ಸಹ ಒಂದು ಸಭೆಗೆ ಕರೆಸಿ ಮಾತನಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಅವರು ತಿಂಗಳಿಗೆ ಒಂದೊಂದು ಬೆಲೆ ಮಾಡಿಕೊಂಡು ಹೋಗುತ್ತಿದ್ದಾರೆ ಅವರನ್ನು ಹೇಳುವವರು, ಕೇಳುವವರು ಯಾರೂ ಇಲ್ಲವೇ ಎನ್ನುವುದು ಸಹ ಅರ್ಥವಾಗುತ್ತಿಲ್ಲ ಇದರ ಬಗ್ಗೆ ನಾನು ಸರ್ಕಾರದಿಂದ ಒಂದು ಹೇಳಿಕೆಯನ್ನು ಬಯಸುತ್ತಿದ್ದೇನೆ ಸರ್ಕಾರದಿಂದ ನಾನು ತತ್‌ಕ್ಷಣ ಉತ್ತರ ಬಯಸುವುದಿಲ್ಲ ಆದರೆ, ಸೋಮವಾರವೋ, ಮಂಗಳವಾರವೋ ಈ ವಿಚಾರದಲ್ಲಿ ಒಂದು ದೀರ್ಘವಾದ ಹೇಳಿಕೆ ಕೊಡಬೇಕು ರಾಜ್ಯ ಸರ್ಕಾರವೇ ನಿಸ್ಸಹಾಯಕವಾದರೆ, ಈ ಸಭೆಯಲ್ಲಿ ಒಂದು ನಿರ್ಣಯ ಮಾಡಿ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಅದನ್ನು ತಾವು ಕಳುಹಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಈ ಹಿಂದೆ ಸಿಮೆಂಟ್ Essential Commodities Act ನಲ್ಲಿ ಸೇರಿದ್ದರಿಂದ ನಿಯಂತ್ರಣ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವಿತ್ತು ಇವತ್ತು ಬೆಲೆಯನ್ನು ನಿಯಂತ್ರಿಸುವುದಕ್ಕೆ ಅಥವಾ illegal ಆಗಿ stock ಮಾಡಿಕೊಂಡಿದ್ದರೆ, ಅದನ್ನು ತಡೆಗಟ್ಟುವುದಕ್ಕೆ ಅಧಿಕಾರವಿತ್ತು ಇವತ್ತು Essential Commodities Act ನಿಂದ ಸಿಮೆಂಟ್ ಅನ್ನು ತೆಗೆದು ಹಾಕಿದ ಮೇಲೆ ಅವರ ಮೇಲೆ ರಾಜ್ಯ ಸರ್ಕಾರದ ನಿಯಂತ್ರಣ ಇಲ್ಲ ಅದಕ್ಕೋಸ್ಕರ, ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಪತ್ರ ಬರೆದಿದ್ದಾರೆ ಮತ್ತು ಇವತ್ತು ನಮಗೆ ಅಧಿಕಾರವಿಲ್ಲವೆಂದು ಕೈ ಕಟ್ಟಿ ಕುಳಿತುಕೊಳ್ಳುವ ಪ್ರಶ್ನೆಯೇ ಇಲ್ಲ ಅವರಿಗೆ ರಾಜ್ಯ ಸರ್ಕಾರ ರಸ್ತೆ ಮಾಡಿಕೊಟ್ಟಿದೆ ನೀರು ಕೊಟ್ಟಿದೆ, ಭೂಮಿ ಕೊಟ್ಟಿದೆ, ಮತ್ತು raw material ಒದಗಿಸಿಕೊಟ್ಟಿದೆ ಈ ಎಲ್ಲಾ ವ್ಯವಸ್ಥೆಗಳನ್ನು ರಾಜ್ಯ ಸರ್ಕಾರ ಮಾಡಿಕೊಟ್ಟಿರುವುದರಿಂದ ಶೀಘ್ರವೇ ಕಾರ್ಖಾನೆಗಳ ಮಾಲೀಕರುಗಳ ಒಂದು ಸಭೆ ಕರೆದು ಅವರಿಗೆ ತಿಳಿವಳಿಕೆ ಹೇಳಿ artificial shortage ಏನು create ಮಾಡುತ್ತಿದ್ದಾರೆ, ಅದನ್ನು ನಿಲ್ಲಿಸಬೇಕು ಮತ್ತು ಕೃತಕವಾಗಿ shortage ನಿರ್ಮಿಸಿ ಬೆಲೆ ಹೆಚ್ಚು ಮಾಡುವ ಪ್ರವೃತ್ತಿ ಸಿಮೆಂಟ್ ಕಾರ್ಖಾನೆ ಮಾಲೀಕರುಗಳಿಗೆ ಇದ್ರೆ ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ Artificial ಇಲ್ಲ There is a demand ಆ ಪ್ರಕಾರ ತಾವು ಅವರೆಲ್ಲರನ್ನೂ ಕರೆಸಿ ಹೇಳಬೇಕಾಗುತ್ತದೆ ನಿಮ್ಮ cost production

ಇಷ್ಟಿದ್ದರೂ, ಈ ರೇಟ್ ಏಕೆ ಜಾಸ್ತಿ ಮಾಡುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆಯೇ ವಿನಾ demand is there

ಶ್ರೀ ಎಸ್ ಸಿದ್ಧರಾಮಯ್ಯ ನೀವು ಒಂದು ಮೀಟಿಂಗ್ ಮಾಡಿ

ಶ್ರೀ ಆರ್ ವಿ ದೇಶಪಾಂಡೆ ಮೀಟಿಂಗ್ ಮಾಡಿ ಎಂದು ಅವರು ಹೇಳಿರುವುದು ಒಳ್ಳೆಯ ಸಲಹೆಯಾಗಿದೆ

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಪ್ಪಾಜಿ ಎಸ್ ನಾಡಗೌಡರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು ನಾಡಗೌಡರೆ, ಮಾನ್ಯ ಸದಸ್ಯರಾದ ಸಿಂಧ್ಯಾರವರು ಏನು ಕೇಳಿದ್ದಾರೆ, ಅದಕ್ಕೆ ಮೊದಲು ಉತ್ತರ ಕೊಡಲಿ ನೀವು ಕುಳಿತುಕೊಳ್ಳಿ ಅವರು ಎಲ್ಲರಿಗೂ uniform ಆಗಿ ಹೇಳುತ್ತಾರೆ ನಿಮಗೆ ಅದರಲ್ಲಿ separate ಆಗಿ ಇದೆಯೇ? ಎಲ್ಲರಿಗೂ ಒಂದೇ ತರಹ apply ಆಗುವಂತೆ ಹೇಳುತ್ತಿದ್ದಾರಲ್ಲ ಸಿಮೆಂಟ್‌ಗೆ ಒಂದೊಂದು ಊರಿನಲ್ಲಿ ಒಂದೊಂದು ರೇಟ್ ಇದೆಯೇ?

ಶ್ರೀ ಅಪ್ಪಾಜಿ ಎಸ್ ನಾಡಗೌಡ ಕಳಪೆ ಸಿಮೆಂಟ್ ಬರುತ್ತಿದೆ, ಬ್ಯಾಗ್ ತೆಗೆದು ಪುನಃ ಅದರೊಳಗೆ ಬೂದಿಯನ್ನು ಬೆರೆಸಿ ಪುನಃ pack ಮಾಡಿ ವಿತರಿಸುತ್ತಿದ್ದಾರೆ

ಶ್ರೀ ಹೆಚ್ ಡಿ ಬಸವರಾಜು ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಡಬೇಕೆಂದು ನಾನು ಬಹಳ ಸಮಯದಿಂದ ಕೇಳುತ್ತಿದ್ದೇನೆ 4-5 ದಿವಸಗಳಾಗಿದೆ

ಉಪಾಧ್ಯಕ್ಷರು ಬಸವರಾಜುರವರೆ, ನಿಮ್ಮ ಪ್ರಶ್ನೆ ಯಾವುದೆಂದು ನನಗೆ ಅರ್ಥವಾಗಲಿಲ್ಲ ಒಂದು ನಿಮಿಷ

ಶ್ರೀ ಗೋವಿಂದ ಎಂ ಕಾರಜೋಳ ಎಲ್ಲಾ ಕಾರ್ಖಾನೆಗಳ ಮಾಲೀಕರ ಸಭೆ ಕರೆದು ಚರ್ಚಿಸುತ್ತೇವೆ

10) ವಿಷಯ ಡಂಬಳದಲ್ಲಿ ಪೋಲೀಸ್ ಠಾಣೆ ಹರಳಾಪುರ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಿಸುವ ಬಗ್ಗೆ –

ಶ್ರೀ ಎಸ್ ಎಸ್ ಪಾಟೀಲ್ (ಮುಂಡರಗಿ) ಡಂಬಳದಲ್ಲಿ ಪೊಲೀಸ್ ಠಾಣೆ ಸ್ಥಾಪಿಸುವುದರ ಬಗ್ಗೆ ಶೂನ್ಯ ವೇಳೆಯಲ್ಲಿ ಕೇಳಿದ್ದೆ ತಾವು ಈಗ ಸದನದಲ್ಲಿ ಇರುವುದರಿಂದ ಎರಡಕ್ಕೂ ಉತ್ತರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಮುಂಡರಗಿ ಮತಕ್ಷೇತ್ರಕ್ಕೆ ಸೇರಿದ ಗದಗ ತಾಲ್ಲೂಕು ಹರಳಾಪುರ ಗ್ರಾಮದ ಹತ್ತಿರ ಹೊಸಕೆರೆಯನ್ನು ನಿರ್ಮಿಸುವ

ಸಲುವಾಗಿ ಈ ಹಿಂದೆ ಪ್ರಸ್ತಾವನೆ ನಬಾರ್ಡ್‌ಗೆ ಹೋಗಿದ್ದು, ಸದರೆ ಕೆರೆಯ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿರುವುದಿಲ್ಲ ಅದರಿಂದಾಗಿ, ಈ ಕೆರೆಯ ನಿರ್ಮಾಣ ಕಾಮಗಾರಿಯನ್ನು ಯಾವುದಾದರೂ ಯೋಜನೆಯಲ್ಲಿ ಕೈಗೆತ್ತಿಕೊಳ್ಳಬೇಕೆಂದು ಕೇಳಿದ್ದೀರಿ ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಹರಳಾಪುರ ಗ್ರಾಮದ ಹತ್ತಿರ ಹೊಸ ಇಂಗು ಕೆರೆ ನಿರ್ಮಾಣ ಕಾಮಗಾರಿಯ ರೂ 80 ಲಕ್ಷ ಮೊತ್ತದ ವಿವರವಾದ ಅಂದಾಜು ಪತ್ರಿಕೆಯನ್ನು ನಬಾರ್ಡ್ ಸಹಾಯಧನ RIDF-11 ರಡಿ ಕೈಗೊಳ್ಳಲು ಮಂಜೂರಾತಿಗಾಗಿ ನಬಾರ್ಡ್‌ಗೆ ಸಲ್ಲಿಸಲಾಗಿತ್ತು ನಬಾರ್ಡ್ ಸಹಾಯಧನ ನಿರೀಕ್ಷಿಸಿ ಈ ಕಾಮಗಾರಿಯನ್ನು 2006–07ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿತ್ತು ಆದರೆ, ನಬಾರ್ಡ್ ಸಹಾಯಧನ ದೊರಕದ ಕಾರಣ ಕಾಮಗಾರಿಯನ್ನು ಕೈಬಿಡಲಾಗಿತ್ತು ಪ್ರಸ್ತುತ ಸಾಲಿನ ಪೂರಕ ಅನುದಾನದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸುತ್ತಿದ್ದೇವೆ ಹಾಗೆಯೇ, ಡಂಬಳದಲ್ಲಿ ಪೊಲೀಸ್ ಠಾಣೆ ಸ್ಥಾಪಿಸುವ ವಿಚಾರದಲ್ಲಿ ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪಿಸಿದ್ದಾರೆ ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸಿ ಕ್ರಮ ಕೈಗೊಳ್ಳುತ್ತೇವೆಂಬ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ

ಶ್ರೀ ಎಸ್ ಎಸ್ ಪಾಟೀಲ್ ಕೆರೆ ವಿಚಾರಕ್ಕೆ ಸಂಬಂಧಿಸಿದಂತೆ ಪರಿಶೀಲಿಸುತ್ತಿದ್ದೇವೆಂದು ಹೇಳಿದ್ದೀರಿ ಬರೀ ಪರಿಶೀಲಿಸುವುದಲ್ಲ, ಅದನ್ನು ಪ್ರಾರಂಭ ಮಾಡುತ್ತೇವೆಂಬುದನ್ನು ದಯವಿಟ್ಟು ಹೇಳಬೇಕು

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಉಪ ಮುಖ್ಯಮಂತ್ರಿಗಳು ಅದರ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದಾರೆ ಪರಿಶೀಲಿಸುತ್ತೇವೆಂದರೆ, ಖಂಡಿತವಾಗಿಯೂ ಮಾಡುತ್ತೇವೆ ಎನ್ನುವ ರೀತಿಯಲ್ಲೇ ಅವರಿಗೆ ಹೇಳಿದ್ದಾರೆ ಅವರು ಬಂದ ಮೇಲೆ ಬೇಕಾದರೆ ತಮಗೆ ಹೇಳುತ್ತಾರೆ ಜೆ ಹೆಚ್ ಪಟೇಲರು ಹೇಳಿದರಲ್ಲ, it is under consideration ಎಂದರೆ, file is available ಎಂದು It is under active consideration ಎಂದರೆ, file is not available ಎಂದು

11) ವಿಷಯ ಪೌರ ಸೇವಾ ಮುಷ್ಕರದ ಬಗ್ಗೆ

ಶ್ರೀ ಆರ್ ಶ್ರೀನಿವಾಸ್ (ಮಾನ್ಯ ಪೌರಾಡಳಿತ ಸಚಿವರು) ಸನ್ಮಾನ್ಯ ಉಪಾಧ್ಯಕ್ಷರೇ, ಈ ಸದನದ ಮುಖಾಂತರ ನನ್ನ ಹೇಳಿಕೆ ಕೊಡಬಯಸುತ್ತೇನೆ

ರಾಜ್ಯಾದ್ಯಾಂತ ಕರ್ನಾಟಕ ಪೌರ ಸೇವಾ ನೌಕರರು ಮುಷ್ಕರ ನಿರತರಾಗಿರುವುದು ತಮಗೆ ತಿಳಿದಿದೆ ಈ ಬಗ್ಗೆ ದಿನಾಂಕ 06–07–2007 ಮತ್ತು 18–07–2007 ರಂದು ಕರ್ನಾಟಕ ಪೌರ ಸೇವಾ ನೌಕರರ ಸಂಘದ ಪದಾಧಿಕಾರಿಗಳ ಜೊತೆಯಲ್ಲಿ ಎರಡು ಸುತ್ತಿನ ಔಪಚಾರಿಕ ಸಭೆಯನ್ನು ನನ್ನ ಅಧ್ಯಕ್ಷತೆಯಲ್ಲಿ ಕರೆದು ಇಲಾಖೆಯ ಅಧಿಕಾರಿಗಳೊಂದಿಗೂ ಸಹ ಸಮಾಲೋಚಿಸಿ

ಅವರ ಬಹುತೇಕ ಬೇಡಿಕೆಗಳನ್ನು ಈಡೇರಿಸಲಾಗಿದೆ 5ನೇ ವೇತನ ಆಯೋಗದ ಶಿಫಾರಸ್ಸನ್ನು ಎಲ್ಲಾ ಪೌರ ನೌಕರರಿಗೂ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ ಪೌರ ಸೇವಾ ನೌಕರರ ಮುಂಬಡ್ತಿ ಬಗ್ಗೆ ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಚುರಪಡಿಸಲಾಗಿದೆ ಇದುವರೆಗೆ 1089 ಗ್ರೂಪ್ 'ಸಿ' ಮತ್ತು 'ಡಿ' ಪೌರ ನೌಕರರನ್ನು ಖಾಯಂಗೊಳಿಸಲಾಗಿದೆ ನೌಕರರಿಗೆ ಸಮವಸ್ತ್ರ ಭತ್ಯೆ ನೀಡಲಾಗಿದೆ ನೌಕರರ ಕ್ಷೇಮಾಭಿವೃದ್ಧಿಗೋಸ್ಕರ ಅಗತ್ಯ ಪರಿಕರಗಳನ್ನು ಒದಗಿಸುವ ಬಗ್ಗೆ ಆದೇಶ ಹೊರಡಿಸಲಾಗಿದೆ ಜ್ಯೇಷ್ಠತೆಯ ಬಗ್ಗೆ ಉಂಟಾಗಿರುವ ಲೋಪಗಳ ಬಗ್ಗೆ ಸರಿಪಡಿಸಲು ನಿವೃತ್ತ ಜಂಟಿ ಕಾರ್ಯದರ್ಶಿಯನ್ನು ನೇಮಕ ಮಾಡಿ ಇದನ್ನು ಒಂದು ತಿಂಗಳ ಒಳಗಾಗಿ ಸರಿಪಡಿಸಲು ಸೂಚಿಸಲಾಗಿದೆ ಹೀಗೆ ನೌಕರರ ಸಂಘದ ಪದಾಧಿಕಾರಿಗಳು ಮುಂದಿಟ್ಟ ಹಲವಾರು ಬೇಡಿಕೆಗಳನ್ನು ನ್ಯಾಯಯುತವಾಗಿ ಈಡೇರಿಸಲಾಗಿದೆ ಸರ್ಕಾರ ಅವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ

ಪ್ರಜಾತಂತ್ರಾತ್ಮಕವಾಗಿ ಅವರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸಬಹುದಾದ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ನೀಡಲಾಗಿದೆ ಆದಾಗ್ಯೂ ಸಹ ಕೂಡಲೇ ಕಾನೂನು ರೀತಿಯಲ್ಲಿ ಪರಿಹರಿಸಲು ಸಾಧ್ಯವಿಲ್ಲದ ಬೇಡಿಕೆಯಾದ ಎಲ್ಲಾ ದಿನಗೂಲಿ ನೌಕರರನ್ನು ಖಾಯಂಗೊಳಿಸಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟು ಹಠದಿಂದ ಮಾತುಕತೆಯನ್ನು ಮುರಿದು ಮುಷ್ಕರವನ್ನು ಮುಂದುವರೆಸಿರುವುದು ಸಕಾರಾತ್ಮಕ ವಿಷಯವಾಗಿರುವುದಿಲ್ಲ

ದಿನಗೂಲಿ ನೌಕರರ ಸಮಸ್ಯೆ ಪೌರ ಕಾರ್ಮಿಕರು ಮಾತ್ರವಲ್ಲ, ಸರ್ಕಾರದ ಇತರ ಇಲಾಖೆಯಲ್ಲೂ ಇರುತ್ತಾರೆ ಈ ಸಮಸ್ಯೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮುಕ್ತ ಮನಸ್ಸು ಹೊಂದಿದ್ದಾರೆ ದಿನಗೂಲಿ ನೌಕರರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಂಪುಟ ಉಪ ಸಮಿತಿ ರಚನೆಯಾಗಿದೆ ಅದರ ವರದಿ ಕಾಯಲಾಗುತ್ತಿದೆ ಅಲ್ಲದೆ ಮಾನ್ಯ ಸುಪ್ರೀಂ ಕೋರ್ಟ್ ನೀಡಿದ ಮಾರ್ಗದರ್ಶನ ಹಾಗೂ ಕಾನೂನು ತೊಡಕುಗಳು, ಇತರೆ ಸಾಧಕ-ಬಾಧಕಗಳು ಎಲ್ಲವನ್ನು ಪರಿಶೀಲಿಸಿ ಒಟ್ಟಾರೆಯಾದ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಈ ವಿಷಯವನ್ನು ಪದಾಧಿಕಾರಿಗಳ ಗಮನಕ್ಕೆ ತರಲಾಯಿತು ಹಾಗೂ ಇದನ್ನು ಪರಿಹರಿಸಲು ಕಾಲಾವಕಾಶ ಕೋರಲಾಯಿತು ಆದರೆ, ಈ ನಿಲುವನ್ನು ಒಪ್ಪದೆ ದಿನಗೂಲಿ ನೌಕರರ ಖಾಯಂ ಹೊರತು ಮುಷ್ಕರ ಕೈಬಿಡುವುದಿಲ್ಲ ಎಂಬ ಮಾತಿನೊಂದಿಗೆ ಪದಾಧಿಕಾರಿಗಳು ಸಭೆಯಿಂದ ಹೊರಹೋಗಿ ಪ್ರಜಾತಂತ್ರಾತ್ಮಕವಾದ ಯಾವುದೇ ಚರ್ಚೆಗಳಿಗೆ ಅವಕಾಶ ನೀಡದೆ ಮಾತುಕತೆ ಮುರಿದು ಮುಷ್ಕರ ನಿರತರಾಗಿರುವುದು ನಿಜಕ್ಕೂ ಸಾರ್ವಜನಿಕ ಹಿತದೃಷ್ಟಿಯಿಂದ ಶೋಚನೀಯ ವಿಷಯವಾಗಿದೆ

ಈ ಹಿನ್ನಲೆಯಲ್ಲಿ ಪೌರ ನೌಕರರ ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸರ್ಕಾರ ಎಲ್ಲಾ ಕ್ರಮಗಳನ್ನು ತೆಗದುಕೊಳ್ಳುತ್ತದೆ ಈ ಬಗ್ಗೆ ಜಿಲ್ಲಾಡಳಿತಕ್ಕೆ ಪರ್ಯಾಯವಾಗಿ ಪೌರ ಸೇವೆಗಳನ್ನು ನಾಗರಿಕರಿಗೆ ತೊಂದರೆಯಾಗದಂತೆ ಒದಗಿಸಲು ಸೂಕ್ತ ಮಾರ್ಗದರ್ಶನ ಇಲಾಖೆಯ ಅಧಿಕಾರಿಗಳ ಮುಖಾಂತರ ನೀಡಲಾಗಿದೆ

ತಾವು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಈ ವಿಷಯವನ್ನು ಮುಷ್ಕರ ನಿರತ ಪೌರ ನೌಕರರಿಗೆ ಮನನಮಾಡಿ, ಮನವೊಲಿಸಿ ಈಗಾಗಲೇ ಅವರ ಬಹಳಷ್ಟು ಬೇಡಿಕೆಗಳನ್ನು ಈಡೇರಿಸಿರುವುದರಿಂದ ಹಾಗೂ ಈಡೇರಿಸಲು ಸರ್ಕಾರ ಮುಕ್ತ ಮನಸ್ಸು ಹೊಂದಿರುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಮುಷ್ಕರ ಕೈಬಿಡುವಂತೆ ಮನವೊಲಿಸಲು ಈ ಮೂಲಕ ಮನವಿ ಮಾಡುತ್ತೇನೆ ಒಂದು ವೇಳೆ ಪೌರ ನೌಕರರು ಮುಷ್ಕರವನ್ನು ಮುಂದುವರೆಸಿದರೆ ಮುಗ್ಧ ನಾಗರಿಕರಿಗೆ ತೊಂದರಯಾಗದಂತೆ ಜಿಲ್ಲಾಡಳಿತ ಮಾಡುವ ಪರ್ಯಾಯ ವ್ಯವಸ್ಥೆಗೆ ತಮ್ಮ ಸಂಪೂರ್ಣ ಸಹಕಾರ ನೀಡಲು ಹಾಗೂ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನವನ್ನು ಜಿಲ್ಲಾಡಳಿತಕ್ಕೆ ನೀಡಲು ಕೋರುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) ಮಾನ್ಯ ಸಚಿವರು, ಒಂದು statement ಕೊಟ್ಟಿದ್ದಾರೆ ಆದರೆ, ಇದರಲ್ಲಿ ಪೌರಕಾರ್ಮಿಕರಿಗೆ ಅಥವಾ local body ಯಲ್ಲಿ ಕೆಲಸ ಮಾಡತಕ್ಕ ನೌಕರರಿಗೂ, ಸರ್ಕಾರಿ ನೌಕರರಿಗೂ ಹೋಲಿಸತಕ್ಕದ್ದನ್ನು ಮಾಡಿದ್ದಾರೆ ಏಕೆಂದರೆ ಸುಪ್ರೀಂ ಕೋರ್ಟ್‌ನಲ್ಲಿ ದಿನಗೂಲಿ ನೌಕರರ ಕೇಸು ಇದೆ ಇದನ್ನು ನಾವು ಇಲ್ಲಿ ಖಾಯಂಗೊಳಿಸಿದರೆ, ಅದನ್ನೂ ಅದೇ ರೀತಿ ಮಾಡಬೇಕಾಗುತ್ತದೆ ಎಂಬ ವಾದವನ್ನು ಇಟ್ಟು ಇಲ್ಲಿನ ನೌಕರರನ್ನು ಖಾಯಂಗೊಳಿಸುವುದನ್ನು ತಳ್ಳಿಹಾಕುತ್ತಿದ್ದಾರೆ ಅದು ಸರಿಯಲ್ಲ ಏಕೆಂದರೆ local authority, muncipality ಯಲ್ಲಿ, Corporation ನಲ್ಲಿ ಪಟ್ಟಣ ಪಂಚಾಯಿತಿಗಳಲ್ಲಿ ಕೆಲಸ ಮಾಡತಕ್ಕದ್ದು, ಅಲ್ಲಿ vacancy ಇದ್ದರೆ ಮಾತ್ರ ತೆಗೆದುಕೊಳ್ಳುತ್ತಾರೆ Vacancy ಇಲ್ಲದಿದ್ದರೆ ಅವರು ತೆಗೆದುಕೊಳ್ಳುವುದೇ ಇಲ್ಲ ಆದರೆ ಸರ್ಕಾರಿ ನೌಕರಿಯಲ್ಲಿ ಏನಾಗಿದೆಯೆಂದರೆ Horticulture Minister ಬಂದರು ತಮಗೆ ಬೇಕಾದವರಿಗೆ appointment ಮಾಡಿದರು, ಹೋದರು Irrigation ನವರು ಬಂದರು ಅವರಿಗೆ ಬೇಕಾದಂತೆ appointment ಮಾಡಿದರು, ಹೋದರು ಪಿ ಡಬ್ಲ್ಯು ಡಿ ಯವರು ಬಂದರು ತಮಗೆ ಬೇಕಾದವರನ್ನು ಮಾಡಿದರು, ಹೋದರು ಆದ್ದರಿಂದ ಇಲ್ಲಿ ಅವಶ್ಯಕತೆಗಿಂತಲೂ ಜಾಸ್ತಿ ಇದ್ದಾರೆ ರೋಸ್ಟರ್ ಫಾಲೋ ಆಗಿಲ್ಲ ಎಂದು ಸಾಕಷ್ಟು ವಾದ ವಿವಾದದಿಂದ ಅದು ನೆನೆಗುದಿಗೆ ಬಿದ್ದಿದೆ ಅನೇಕ ಸಲ ಸುಪ್ರೀಂ ಕೋರ್ಟ್‌ಗೆ ಹೋಗಿ ವಾಪಸ್ ಬಂದಿದೆ ಕ್ಯಾಬಿನೆಟ್‌ನಲ್ಲೂ ಚರ್ಚೆಯಾಗಿ ಒಂದು ಸಲ ತಳ್ಳಿ ಹಾಕಿದ್ದಾರೆ, ಮುಂದಕ್ಕೆ ಹಾಕಿದ್ದಾರೆ ಆ ವಿಚಾರ ಬೇರೆ, ಆದರೆ ಈ local authority ಏನಿದೆ

ಮಾನವೀಯತೆಯ ದೃಷ್ಟಿಯಿಂದ vacancy ಇದ್ದಲ್ಲಿ confirm ಮಾಡತಕ್ಕದ್ದು ತಮ್ಮ ಮೊದಲನೆಯ ಕರ್ತವ್ಯ ತಾವು 1089 ಜನರಿಗೆ ಮಾತ್ರ ನಾವು ಮಾಡಿದ್ದೇವೆಂದು ಹೇಳಿದಿರಿ ಉಳಿದ 'ಸಿ' ಮತ್ತು 'ಡಿ' ಗ್ರೂಪ್‌ನವರಿಗೆ ಮಾಡಿಲ್ಲವೆಂದು ಇದೆ ಆದರೆ ಇಲ್ಲಿ ಸಾವಿರಾರು ನೌಕರರು ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡತಕ್ಕವರೇನಿದ್ದಾರೆ, ಅವರನ್ನು ತಕ್ಷಣ ಖಾಯಂಗೊಳಿಸಿ, ಏಕೆಂದರೆ ಆ ಕೆಲಸಕ್ಕೆ ಬೇರೆ ಯಾರೂ ಕೂಡ ಬರುವುದಿಲ್ಲ ಅತ್ಯಂತ ಕಡುಬಡವರು ಮತ್ತು ಯಾರಿಗೆ ಹೊಟ್ಟೆಗೆ ಅನ್ನ ಇಲ್ಲ, ಮೈಮೇಲೆ ಬಟ್ಟೆ ಇಲ ಅಂಥ ಜನರು ಮಾತ್ರ ಈ ಕೆಲಸ ಮಾಡುವುದು ಬೇರೆಯವರು ಮಾಡುವುದಿಲ್ಲ ಅಂಥವರನ್ನೂ ಖಾಯಂ ಮಾಡಲು ನಾವು ಹಿಂದೆ ಮುಂದೆ ನೋಡಿದರೆ, ಮತ್ತೆ ಇನ್ನು ಯಾರ ಬಗ್ಗೆ ನಾವು ಅನುಕಂಪ ತೋರಿಸುತ್ತೇವೆ? ಗುಲ್ಬರ್ಗಾದಲ್ಲಿ ಕೂಡ 5–6 ದಿವಸಗಳಿಂದ ಸತತವಾಗಿ strike ಮಾಡುತ್ತಿದ್ದಾರೆ ಎಸ್ ಕೆ ಕಾಂತಾರವರು ಸಾಕಷ್ಟು ಸಲ ಆ office close ಮಾಡಿದರು, ಬೀಗ ಹಾಕಿದರು ಎಂಟು ದಿವಸ ನಿಲ್ಲಿಸಿದರು ನಾವೂ ಅನೇಕ ಸಲ ಅವರ ಮನವೊಲಿಸಿ ಅಲ್ಲಿ ಸ್ವಚ್ಛತೆಗಾಗಿ ನಾಗರೀಕರಿಗೂ ಅನಾನುಕುಲವಾಗಬಾರದು ಎಂದು ಸಾಕಷ್ಟು ಪ್ರಯತ್ನ ಮಾಡಿದೆವು ಆದರೆ ಅವರದ್ದೂ ಕೆಲವು ಜೆನ್ಯೂನ್ ಸಮಸ್ಯೆಗಳಿವೆ ಅದಕ್ಕೆ ನಾವು ಸ್ಪಂದಿಸದಿದ್ದರೆ ಅದು ಸಮವಸ್ತ್ರ ಕೊಡುವುದು ಇರಬಹುದು, ಖಾಯಂಗೊಳಿಸದಿರುವುದು ಇರಬಹುದು ಬಟ್ಟೆಕೊಡತಕ್ಕದ್ದು ಇರಬಹುದು, ಅವರಿಗೆ ತೊಂದರೆಯಾಗುತ್ತದೆ ಅನೇಕ ಸಲ ಕಸವನ್ನು ಕೈಯಲ್ಲಿ ತೆಗೆಯುತ್ತಾರೆ, ಗ್ಲೌಸ್ ಇರುವುದಿಲ್ಲ, ಕಾಲಿಗೆ ಬೂಟ್ಸ್ ಇರುವುದಿಲ್ಲ, ಸರಿಯಾದ ಪೊರಕೆ ಇರುವುದಿಲ್ಲ ಇವೆಲ್ಲ ತಮಗೆ ಗೊತ್ತಿದೆ ಇದರ ಬಗ್ಗೆ ಆಸಕ್ತಿವಹಿಸಿ ಅವರ ಬೇಡಿಕೆ ಏನಿದೆ ಅದನ್ನು ಪೂರೈಸತಕ್ಕದ್ದು, ಅವರನ್ನು ಕರೆದು table ಮೇಲೆ one to one ಮಾತನಾಡಿ ಬಗೆಹರಿಸತಕ್ಕದ್ದು ಮಾಡಬೇಕು ಏಕೆಂದರೆ organized sector ನಲ್ಲಿ ಸರ್ಕಾರಿ ನೌಕರರು ಧಮಕಿ ಕೊಟ್ಟ ತಕ್ಷಣವೇ ಕರೆದು ಮಾತನಾಡುತ್ತೀರಿ ಬೇರೆ factory ಗಳಲ್ಲಿ ಧಮಕಿ ಕೊಟ್ಟರೆ ತಕ್ಷಣವೇ ಕರೆದು ಮಾತನಾಡುತ್ತೀರಿ ಅನೇಕ ಜನ professors, teachers ಧಮಕಿ ಹಾಕಿದ ಮೇಲೆ ಅವರನ್ನು ತಕ್ಷಣ ಮೂರನೇ ಮಹಡಿಗೆ ಕರೆಸಿ ಮಾತನಾಡುತ್ತೀರಿ ಆದರೆ ಇಲ್ಲಿ ಪೌರಕಾರ್ಮಿಕರ ಪ್ರತಿನಿಧಿಗಳಿಗೆ ಕರೆಸಿ ಮಾತನಾಡುವ ಕೆಲಸವನ್ನು ಏಕೆ ಮಾಡಬಾರದು? ಅವರನ್ನು ಕರೆಸಿ, ಅವರ ಯಾವ ಜೆನ್ಯುಯಿನ್ demand ಇದೆ ಅದನ್ನು ತೆಗದುಕೊಂಡು ಅವರ dress, ಬಟ್ಟೆ, ಪ್ರಮೋಷನ್, ಖಾಯಂಗೊಳಿಸತಕ್ಕದ್ದು, equipment ಕೊಡುವುದು ಇರಬಹುದು ಇದರ ಬಗ್ಗೆ ತಾವು ಲಕ್ಷ್ಯ ಕೊಡಿ ಏಕೆಂದರೆ ಇವರು ಆರೋಗ್ಯ ರಕ್ಷಣೆ ಮಾಡತಕ್ಕವರು, ಸ್ವಚ್ಛತೆಯನ್ನು ಕಾಪಾಡತಕ್ಕ ಜನರು ಇವರ ಬಗ್ಗೆ ತಾವು ಆಸಕ್ತಿ ವಹಿಸಬೇಕು ಇದಕ್ಕೆ ಸರ್ಕಾರಿ ನೌಕರರಿಗೂ ದಿನಗೂಲಿ ನೌಕರರಿಗೂ ಹೋಲಿಸತಕ್ಕದ್ದು ಬೇಡ ಇದನ್ನು separate issue ಆಗಿ ತೆಗೆದುಕೊಂಡು ಪರಿಹರಿಸಬೇಕು ಅದೇ ರೀತಿಯಾಗಿ ಗುಲ್ಬರ್ಗದಲ್ಲಿ ನಾನು Commissioner ಗೆ

phone ಮಾಡಿದ್ದೆ, ಏನಿದು ಗಲಾಟೆ ಎಂದು "ಏನು ಮಾಡೋದು ಸಾರ್? ನಾವು ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸಿದ್ದೇವೆ, ಎಷ್ಟು vacancy ಇದೆ ಅಷ್ಟನ್ನು ಖಾಯಂ ಮಾಡಿಕೊಳ್ಳುತ್ತೇವೆ ಸಿಟಿ extend ಆಗಿದೆ ಆ extend ಆದಂಥ ಸಿಟಿಗೂ ಜನರು ಬೇಕು ಆದ್ದರಿಂದ ಅವರನ್ನು ಖಾಯಂ ಮಾಡುತ್ತೇವೆಂದರೆ department ನವರೇ ಮನ್ನಣೆ ಕೊಡುತ್ತಿಲ್ಲ" ಎಂದು ಹೇಳುತ್ತಾರೆ ಆದರೆ ತಾವು ಇಲ್ಲಿ ಅವರೊಬ್ಬರಿಗೆ ಖಾಯಂ ಮಾಡಿದರೆ ಇನ್ನೊಬ್ಬರಿಗೂ ಮಾಡಬೇಕಾಗುತ್ತದೆ ಎಂದು ಹೇಳುತ್ತೀರಿ Vacnany ಇದ್ದಾಗ ಖಾಯಂ ಮಾಡಲು ಯಾರೂ ಅಡ್ಡಿ ಬರುವುದಿಲ್ಲ Vacnany ಇಲ್ಲದಿದ್ದರೂ ರೆಗ್ಯುಲರೈಸ್ ಮಾಡಿ ಎಂದಾಗ ತೊಂದರೆ ಬರುತ್ತದೆ ಎಲ್ಲೋ 10 additional ಇದ್ದರೂ ಅಂಥ post ಗಳನ್ನು create ಮಾಡಿಕೊಂಡು ಖಾಯಂಗೊಳಿಸುತ್ತೇವೆಂದು ಅವರೇ ಹೇಳುತ್ತಾರೆ ಆದ್ದರಿಂದ ಅವರನ್ನು ದಯವಿಟ್ಟು ಕರಸಿ ಮಾತನಾಡಿ ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ (ಹಳಿಯಾಳ) ಮಾನ್ಯ ಅಧ್ಯಕ್ಷರೇ, ಶಿರ್ಸಿಯಿಂದ ನನಗೆ ಈಗ ಫೋನ್ ಬಂತು ಅವರು ನಿಮ್ಮ ಮುಂದೆ 5 ವಿಭಿನ್ನ ಬೇಡಿಕೆಗಳನ್ನು ಇಟ್ಟಿದ್ದಾರೆ ಅದರಲ್ಲಿ ಮುಖ್ಯವಾಗಿ ಮಾನ್ಯ ಗೌರವಾನ್ವಿತ ಖರ್ಗೆಯವರು ಹೇಳಿದಂತೆ ಸರ್ಕಾರಿ ನೌಕರರೇನು ಇವತ್ತು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದಾರೆ ಅವರನ್ನೂ ಇವರನ್ನು ಹೋಲಿಸಲು ಹೋಗಬಾರದು ಏಕೆಂದರೆ ನಗರಸಭೆಗೆ, ಪಂಚಾಯಿತಿಗೆ ಅಥವಾ ಸಿ ಎಂ ಸಿ ಗಳಿಗೆ ಯಾವಾಗ ಈ ರೀತಿ ದಿನಗೂಲಿ ನೌಕರರನ್ನು ತೆಗೆದುಕೊಂಡರೋ ಆಗ vacancy ಇತ್ತು ಈಗ ಮುನಿಸಿಪಾಲಿಟಿಯಲ್ಲಿ ಎಷ್ಟೋ vacancy ಇದೆ ನೀವು ಅದನ್ನು ತುಂಬುತ್ತಿಲ್ಲ ಈಗ ಪಟ್ಟಣ ಪ್ರದೇಶದಲ್ಲಿ ಸ್ವಚ್ಛತೆ ಇರಬಹುದು, ಕುಡಿಯುವ ನೀರು ಇರಬಹುದು, ಹಲವಾರು ಮೂಲಭೂತ ಸೌಕರ್ಯವನ್ನು ಸಾಮಾನ್ಯ ಜನರಿಗೆ ಕೊಡಲು ಇವತ್ತು ನೌಕರರೇನಿದ್ದಾರೆ ಅದರಲ್ಲಿ ಕೊರತೆ ಇದೆ ಪಟ್ಟಣ ಪ್ರದೇಶಗಳಲ್ಲಿ ಜನಸಂಖ್ಯೆ ಬೆಳೆಯುತ್ತಿದೆ ಅದಕ್ಕೆ ತಕ್ಕ ಹಾಗೆ ನೀವು recruitment ಮಾಡಿಲ್ಲ ಅಂತಹ ಪರಿಸ್ಥಿತಿಯಲ್ಲಿ ಎಲ್ಲಿ ಅವಶ್ಯಕತೆ ಇದೆ ಎಂದು Municipality ಮನವರಿಕೆ ಆಯಿತೋ ಅಂತಹ ಕಡೆ ದಿನಗೂಲಿಗಳನ್ನು ತೆಗೆದುಕೊಂಡಿದ್ದಾರೆ ಅವಗಳು ಯಾರನ್ನು recruit ಮಾಡಿದ್ದಾರೋ, ಯಾರು ಖಾಲಿ vacancies ನಲ್ಲಿ ಕೆಲಸ ಮಾಡುತ್ತಿದ್ದಾರೋ, ಅಲ್ಲಿ ಇವರನ್ನು regularize ಮಾಡಿದರೆ ಏನಾಗುತ್ತದೆ? ಇಲ್ಲಿ humanitarian consideration ಇರಬೇಕು ಆ ಭಾಗದ ಮೂಲಭೂತ ಸೌಕರ್ಯಗಳನ್ನು ಆ ಬಾಗಕ್ಕೆ ಕೊಡಲಿಕ್ಕೆ ಆ ಭಾಗ ಸ್ವಚ್ಛ ಇರಬೇಕು Hygeinic conditions are very important ಆ ಜನರು ಯಾರು? ಮಾನ್ಯ ಖರ್ಗೆಯವರು ಹೇಳಿದಂತೆ, ಪರಿಶಿಷ್ಟ ಜನಾಂಗ, ಹಿಂದುಳಿದ ಜನಾಂಗ, ಬಡವರು ಮತ್ತು ಕಡು ಬಡವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ ಇಂತಹ ಜನಗಳ ಬಗ್ಗೆ ನೀವು ಸಹಾನುಭೂತಿಯಿಂದ ನೋಡಲಿಲ್ಲವೆಂದರೆ ಹೇಗೆ? ನಾನು ಇವತ್ತು ಕಮೀಷನರ್

ಜೊತೆಗೆ ಮಾತನಾಡಿದೆ ಅವರು ನಾವೆಲ್ಲಾ recommendation ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದೇವೆ, ಸರ್ಕಾರ ಈ ಬಗ್ಗೆ ಮುಂದಿನ ಕ್ರಮ ಜರುಗಿಸಬೇಕು ಎಂದು ಹೇಳುತ್ತಾರೆ ಹಾಗಾಗಿ ತಾವು ದಯಮಾಡಿ ಸ್ವತಃ, don't depend totally on bureaucracy ಅವರನ್ನು ಕರೆಸಿ discuss ಮಾಡಿ, ಅವರ ಕಷ್ಟ ಸುಖ ಏನೆಂಬುದನ್ನು ತಿಳಿದುಕೊಂಡು ನ್ಯಾಯಬದ್ಧವಾಗಿ ಅವರಿಗೆ ಏನು ಕೊಡಬೇಕಾಗಿದೆಯೋ, ಅದನ್ನು ಕೊಡಿ ಎಲ್ಲೆಲ್ಲಿ vacancies ಇದೆಯೋ, ಅಲ್ಲೆಲ್ಲಾ ತಕ್ಷಣವೇ ಅವರನ್ನು ಖಾಯಂ ಮಾಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು ಏಕೆಂದರೆ, ಇದರಿಂದ ನೀವು ಅವರಿಗೆ ಸಹಾಯ ಮಾಡುವುದಲ್ಲದೆ, ಊರಿನ ಸ್ವಚ್ಛತೆಗೆ ಸಹಕರಿಸಿದಂತಾಗುತ್ತದೆ ಈ strike ನಿಂದ ಹಲವಾರು ಸಮಸ್ಯೆಗಳು ಉದ್ಭವವಾಗಿದೆ ಊರಿನಲ್ಲಿ ಸ್ವಚ್ಛತೆ ಇಲ್ಲ, ಕಸ ತೆಗೆದುಕೊಂಡು ಹೋಗುತ್ತಿಲ್ಲ ಮಳೆ ಬೀಳುತ್ತಿದೆ ಇದರಿಂದ ಏನಾಗಬಹುದು ಎಂಬ ಬಗ್ಗೆ ತಾವೇ ವಿಚಾರ ಮಾಡಿ Diseases ಇದರಿಂದ spread ಆಗುತ್ತಿದ ಹಾಗಾಗಿ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ನೀವು alternative arrangement ಅನ್ನು ಮಾಡುತ್ತೇವೆಂದು ಹೇಳಿದ್ದೀರಿ ಏನು alternative arrangement ಅನ್ನು ತಾವು ಮಾಡಲಿಕ್ಕಾಗುತ್ತದೆ? ಜಿಲ್ಲಾಧಿಕಾರಿಗಳು ಏನು alternative arrangement ಮಾಡಬಹುದು? ಇಂತಹ ಕೆಲಸ ಮಾಡಲಿಕ್ಕೆ ನೀವು ಎಲ್ಲಿಂದ ಜನರನ್ನು ತರುತ್ತೀರಿ? ಇದೇನು ಆಫೀಸ್‌ನಲ್ಲಿ ಟೈಪಿಂಗ್ ಮಾಡುವ ಕೆಲಸವೇ? ಇದು ಊರು ಸ್ವಚ್ಛತೆ ಮಾಡುವ ಕೆಲಸವಾಗಿದೆ, ಗಟಾರ ಸ್ವಚ್ಛತೆ ಮಾಡುವ ಕೆಲಸವಾಗಿದೆ ಇದನ್ನು ಮಾಡಲು ಯಾರು ಬರುತ್ತಾರೆ ಹೇಳಿ? ಹಾಗಾಗಿ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಇದನ್ನು ಗಂಭೀರವಾಗಿ ಪರಿಗಣಿಸಿ ಅವರಿಗೆ ನ್ಯಾಯ ಒದಗಿಸಿಕೊಡಬೇಕಾಗಿ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ

†**ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್** ಮಾನ್ಯ ಉಪಾಧ್ಯಕ್ಷರೆ

ಶ್ರೀ ಆಂಜನಮೂರ್ತಿ ಮಾನ್ಯ ಉಪಾಧ್ಯಕ್ಷರೆ

ಉಪಾಧ್ಯಕ್ಷರು ನಿಮಗೆ ಏನು ಹೇಳಬೇಕೆಂದೇ ನಿಜವಾಗಿಯೂ ನನಗೆ ಅರ್ಥವಾಗುತ್ತಿಲ್ಲ

ಶ್ರೀ ಪಿ ಜಿ ಆರ್ ಸಿಂಧ್ಯಾ ಕುಳಿತುಕೊಳ್ಳಿ ಎಂದಾದರೂ ಹೇಳಿ ಅಥವಾ ನಿಂತುಕೊಳ್ಳಿ ಎಂದಾದರೂ ಹೇಳಿ

ಉಪಾಧ್ಯಕ್ಷರು ಒಟ್ಟಿಗೆ 5–6 ಜನ ಮಾತನಾಡಲು ಎದ್ದು ನಿಂತರೆ ನಾನೇನು ಉತ್ತರ ಕೊಡಲಿ

ಶ್ರೀ ಆಂಜನಮೂರ್ತಿ ಮಾನ್ಯ ಉಪಾಧ್ಯಕ್ಷರೆ, ನಮ್ಮ ನೆಲಮಂಗಲ ರಾಷ್ಟ್ರೀಯ ಹೆದ್ದಾರಿ 49ರಲ್ಲಿ

---

† ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ

ಶ್ರೀ ಎಂ ಟಿ ಕೃಷ್ಣಪ್ಪ ಮಾನ್ಯ ಉಪಾಧ್ಯಕ್ಷರೆ, ಇದು ಬಹಳ important ಆಗಿರುವ ವಿಷಯವಾಗಿದೆ ಇದರ ಬಗ್ಗೆ ದಯಮಾಡಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ

ಉಪಾಧ್ಯಕ್ಷರು This is not correct ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಿರಬೇಕಾದರೆ, ನೀವ್ಯಾಕೆ ಮಧ್ಯದಲ್ಲಿ ಮಾತನಾಡುತ್ತೀರಿ?

ಶ್ರೀ ಅಂಜನಮೂರ್ತಿ (ನೆಲಮಂಗಲ) ಮಾನ್ಯ ಉಪಾಧ್ಯಕ್ಷರೆ, ಒಂದು ವಾರದಿಂದ ನಗರ ಪ್ರದೇಶಗಳಲ್ಲಿ ಗಲೀಜು ಕ್ಲಿಯರ್ ಆಗುತ್ತಿಲ್ಲ ಆದ್ದರಿಂದ ಹೆಚ್ಚಿನ ದುರ್ನಾತದ ವಾಸನೆ ಬರುತ್ತಿದೆ ಸಾಂಕ್ರಾಮಿಕ ರೋಗಗಳು ಹರಡುತ್ತಿವೆ ದಯಮಾಡಿ ನಾನು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ ಇದು ಧ್ವನಿ ಇಲ್ಲದ ಸಮುದಾಯವಾಗಿದೆ ನಿಮ್ಮ ಹಠಮಾರಿತನ ಬಿಡಿ ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ನೀವೇ ಕಾರಣೀಭೂತರಾಗುತ್ತಿದ್ದೀರಿ ನಿಮ್ಮ ಹಠಮಾರಿತನ ಬಿಟ್ಟು ಸಮಸ್ಯೆ ಬಗೆಹರಿಸಿ ಈಗ ನೀವು ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಹೇಳುತ್ತೀರಿ ಮಾನ್ಯ ದೇಶಪಾಂಡೆಯವರು ಹೇಳಿದ ಪ್ರಕಾರ ಟೈಪಿಸ್ಟ್ ಅಥವಾ ಇತರೆ ಹುದ್ದೆಗಳಿಗಾದರೆ ಪರ್ಯಾಯ ವ್ಯವಸ್ಥೆ ಮಾಡಬಹುದು ಆದರೆ ಕಸ ಗುಡಿಸುವುದಕ್ಕೆ ಯಾರೂ ಬರುವುದಿಲ್ಲ ಹೊಟ್ಟೆ ಬಟ್ಟೆ ಮತ್ತು ಅನ್ನ ಇಲ್ಲದೆ ಇರತಕ್ಕವರೇ ಆ ಕೆಲಸಗಳನ್ನು ಮಾಡುತ್ತಿದ್ದಾರೆ ನಿಮ್ಮ ಹಠಮಾರಿತನವನ್ನು ಬಿಡದೇ ಹೋದರೆ, ಸ್ವಚ್ಛತೆ ಇಲ್ಲದೆ ಸಾಂಕ್ರಾಮಿಕ ರೋಗಗಳು ಹರಡುತ್ತವೆ ಇದರಿಂದ ನೀವಾಗಿ ನೀವು ದಾರಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದುಕೊಂಡು ಬಂದಂತಾಗುತ್ತದೆ ಅದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಹೋಗಬೇಡಿ ಆ ದಿನಗೂಲಿ ನೌಕರರನ್ನು ಕೂಡಲೇ ಖಾಯಂ ಮಾಡಿ, ಅವರ ರಕ್ಷಣೆಗೆ ನೀವು ಬರಬೇಕು ಈ ಸರ್ಕಾರ ಆ ತರಹ ಮಾಡದೆ ಹೋದರೆ ದೊಡ್ಡ ನಷ್ಟ ಅಥವಾ ಖಾಯಿಲೆ ಹರಡುವಿಕೆಗೆ ನೀವೇ ಕಾರಣೀಭೂತರಾಗುತ್ತೀರಿ ಎಂಬ ಮಾತುಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಕನಕಪುರ) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪೌರಾಡಳಿತ ಸಚಿವರು ಈ ಒಂದು ಹೇಳಿಕೆಯನ್ನು ಸದನಕ್ಕೆ ಕೊಟ್ಟು, ನಮ್ಮ ಸಹಕಾರವನ್ನೂ ಸಹಿತ ಕೇಳಿದ್ದಾರೆ ಖಂಡಿತವಾಗಿಯೂ ನಮ್ಮ ಸಹಕಾರವನ್ನು ಕೊಡೋಣ ಆದರೆ ಪ್ರಶ್ನೆ ಏನಿದೆ ಎಂದರೆ, ನಮ್ಮ ಸರ್ಕಾರದಲ್ಲಿ ಕೆಲಸ ಮಾಡತಕ್ಕಂಥ ಈ ದಿನಗೂಲಿ ನೌಕರರಲ್ಲಿ ಅತ್ಯಂತ ಕನಿಷ್ಟ ದರ್ಜೆಯ ಕೆಲಸ ಮಾಡುತ್ತಿರುವವರೆಂದರೆ ಈ ಪೌರ ಕಾರ್ಮಿಕರು ಅವರ ಬಗ್ಗೆ ನಮಗೆಲ್ಲರಿಗೂ ಕೂಡ ಅನುಕಂಪ ಇರಬೇಕು ಮಾನ್ಯ ಜೆ ಹೆಚ್ ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಗಳಾಗಿದ್ದರು ಇವರ ಸಂಬಳಗಳನ್ನೆಲ್ಲಾ ನೇರವಾಗಿ ಟ್ರಜರಿ

ಮೂಲಕ ಹೋಗುವ ಹಾಗೆ ಮಾಡತಕ್ಕಂಥ ಅವಕಾಶವನ್ನು ಮಾನ್ಯ ಸಿದ್ದರಾಮಯ್ಯನವರು ಮತ್ತು ನಾವು ಮಾಡಿಕೊಟ್ಟಿದ್ದೆವು ಆಗ ನಾನು Home Minister ಆಗಿದ್ದೆ ಅವರು strike ಮಾಡಿದಾಗ ಅವರನ್ನು ಕರೆದು ಮಾತನಾಡಿದ್ದೆವು ಆಗನಿಂದಲೂ ಸಹಿತ ಈ problem continue ಆಗಿದೆ ಈ problem ನಿಮಗೆ ಗೊತ್ತಿರತಕ್ಕದ್ದೇ ಆಗಿದೆ ಮಾನ್ಯ ಖರ್ಗೆಯವರು ಹೇಳಿದಂತೆ ಈ ಕೆಲಸಕ್ಕೆ ಬೇರೆ ಕಡೆಯಿಂದ ಯಾರೂ ಬರುವುದಿಲ್ಲ ಅವರಿಗೆ ನಾವು ಎಷ್ಟೇ ಓದಿಸುತ್ತೇವೆ, ಶಿಕ್ಷಣ ಕೊಡುತ್ತೇವೆ, ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದರೂ ಸಹ ಅವರ ಮಕ್ಕಳೇ ಈ ಕೆಲಸಕ್ಕೆ ಬರುತ್ತಿದ್ದಾರೆಯೇ ವಿನಃ ಬೇರೆಯವರ ಮಕ್ಕಳು ಯಾರೂ ಬರುತ್ತಿಲ್ಲ ದಿವಂಗತ ಬಸವಲಿಂಗಪ್ಪನವರನ್ನು ನಾವು ಈ ಸಭೆಯಲ್ಲಿ ಯಾವತ್ತೂ ಸಹಿತ ನೆನಪಿಸಿಕೊಳ್ಳಬೇಕು ಇಡೀ ದೇಶದಲ್ಲಿ ತಲೆ ಮೇಲೆ ಮಲ ಹೊರುತ್ತಿದ್ದಂತಹ ಕೀಳು ಪದ್ಧತಿಯನ್ನು ಕರ್ನಾಟಕದಲ್ಲಿ ಮೊದಲನೇ ಬಾರಿಗೆ ನಿಲ್ಲಿಸಿದಂತಹ ಕೀರ್ತಿ ಬಸವಲಿಂಗಪ್ಪನವರಿಗೇ ಹೋಗಬೇಕಾಗುತ್ತದೆ ಈ ವರ್ಗದ ಜನಗಳಿಗೆ ನಾವು ಏನು ಮಾಡಿದರೂ ಕೂಡ ತಪ್ಪಾಗುವುದಿಲ್ಲ ನಿಜ ನಾನು ಒಪ್ಪಿಕೊಳ್ಳುತ್ತೇನೆ, ಈಗ ಸುಮಾರು 25-30 ಸಾವಿರದಷ್ಟು ದಿನಗೂಲಿ ನೌಕರರು ಎಲ್ಲಾ ಕಡೆಗಳಲ್ಲಿಯೂ ಸಹಿತ ಇದ್ದಾರೆ ಅವರನ್ನೆಲ್ಲಾ ಖಾಯಂ ಮಾಡಬೇಕೆಂಬ ಬಗ್ಗೆ ಹುಬ್ಬಳ್ಳಿಯ ಮಾನ್ಯ ಶರ್ಮರವರ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದೆ ಸುಪ್ರೀಂ ಕೋರ್ಟ್ ಸಹಿತ ಇದರ ಬಗ್ಗೆ ಒಂದು ಅಂತಿಮ ತೀರ್ಪು ಕೊಟ್ಟಿಲ್ಲ ಎನ್ನತಕ್ಕಂಥ ವಿಚಾರ ಕೂಡ ನಮಗೆ ಗೊತ್ತಿದೆ ಆದರೆ ಮಾನ್ಯ ಶ್ರೀನಿವಾಸ್‌ರವರೆ, ನಾವೇ ಪ್ರಮಾಣಿಕವಾಗಿ ಯೋಚನೆ ಮಾಡಿದಾಗ ಈ ಸದನದಲ್ಲಿ, ನಾವು ಇವರಿಗೆ ಕೊಡುತ್ತಿರುವ ಸಂಬಳ ಎಷ್ಟು? ಅವರೆಲ್ಲಾ ಸಾರಾಯಿ ಕುಡಿಯದೇ ಹೋದರೆ, ಈಗ ಸಾರಾಯಿ ಬೆಲೆಯೂ ಜಾಸ್ತಿಯಾಗಿದೆ ಈಗ ಸಾರಾಯಿ ಬಾಟಲ್‌ನಲ್ಲಿ ಹಾಕಿ ಕೊಡುತ್ತಿದ್ದಾರಲ್ಲಾ, ಆದ್ದರಿಂದ ಅದರ ಬೆಲೆಯೂ ಸಹಿತ ಒಂದಕ್ಕೆ ಎರಡರಷ್ಟಾಗಿದೆ ಹೀಗಾಗಿ ಅವರಿಗೆ ಜೀವನ ಮಾಡುವುದು ಬಹಳ ದುಸ್ತರವಾಗಿರುವಂತಹ ಕೆಲಸವಾಗಿದೆ ಇದನ್ನು ನಾವು ಅನೇಕ ಕಡೆಗಳಲ್ಲಿ ನೋಡುತ್ತೇವೆ ಅಲ್ಲದೆ ನಮ್ಮ ಹತ್ತಿರ automatic ಆಗಿ clean ಮಾಡತಕ್ಕಂಥ system ಕೂಡ ಇಲ್ಲ ಅವರು ಕೈಯಿಂದಲೇ ಎತ್ತಿ ಹಾಕಬೇಕು, ಬ್ಯಾಗ್‌ಗಳಲ್ಲೇ ಎತ್ತಿ ಹಾಕಬೇಕು ಅದರ ಜೊತೆಯಲ್ಲೇ ಅವರು ಇರಬೇಕು, ಅಂತಹ ಸ್ಥಿತಿ ಈಗಿದೆ ತಮಗೆ ಒಂದು ಒಳ್ಳೆಯ ಹೆಸರು ಬರುತ್ತದೆ There are legal problems, I understand ಆದರೆ ನಾನು ಏನು ಹೇಳುತ್ತೇನೆ ಎಂದರೆ, as a special case ಅವರನ್ನು ಖಾಯಂ ಮಾಡಿ ಈಗ ನಮ್ಮ ಸದನದ ಸದಸ್ಯರುಗಳಿಗೆ ಕೆಲವರಿಗೆ ನಾನು ರಾಜಕೀಯ ಬೆರೆಸುತ್ತೇನೆ ಎಂದು ಅನಿಸಬಹುದು ನಮ್ಮ ಮೈಸೂರು Open University ಯಲ್ಲಿ ಇರತಕ್ಕಂಥ ನೌಕರರನ್ನು ಯಾವ basis ಮೇಲೆ ತೆಗೆದುಕೊಂಡಿದ್ದಾರೆ? ಅವರಿಗೆ ಖಾಯಂ ಮಾಡಬೇಕೆಂದು ಯಾರು ಹೇಳಿದ್ದಾರೆ? ಇದರ ವಿವರಗಳಿಗೆಲ್ಲಾ ನಾನು ಹೋಗುವುದಿಲ್ಲ ಏಕೆಂದರೆ, ಅದು

ರಾಜಕೀಯ ಬೆರೆಸಿದಂತಾಗುತ್ತದೆ ಅದನ್ನು ಅಷ್ಟಕ್ಕೇ ನಾನು ನಿಲ್ಲಿಸುತ್ತೇನೆ ನೀವು ದಯವಿಟ್ಟು ದೊಡ್ಡ ಮನಸ್ಸು ಮಾಡಿ ಮಾನ್ಯ ಬಸವಲಿಂಗಪ್ಪನವರ ಸಾಲಿಗೆ ನೀವೂ ಸೇರಿಕೊಳ್ಳಿ ಇವರನ್ನು ಖಾಯಂ ಮಾಡುವುದಕ್ಕೆ ಒಂದು special law ಮಾಡಿಸಿ ಅದನ್ನು Assembly ಯಲ್ಲಿ pass ಮಾಡೋಣ ನೀವು ಅದನ್ನು ಇಡಿ ಈ ಒಂದು category ಜನರೇನಿದ್ದಾರೆ, ಇವರಿಗೆ ನ್ಯಾಯ ಒದಗಿಸಲೇಬೇಕು ನಾನು ಬಾಕಿ ಯಾವುದೇ ಒಂದು class of people ಬಗ್ಗೆ ಮಾತನಾಡಿದರೆ ಅದು ತಪ್ಪಾಗುತ್ತದೆ ಅವರ ಸಂಬಳಗಳನ್ನು ಜಾಸ್ತಿ ಮಾಡತಕ್ಕಂಥ ಸಂದರ್ಭದಲ್ಲಿ ಯಾರಿಗಾದರೂ consult ಮಾಡುತ್ತಾರಾ? ಯಾರಿಗೂ consult ಮಾಡುವುದಿಲ್ಲ ಯಾರಿಗಾದರೂ ಖಾಯಂ ಮಾಡಬೇಕಾದರೆ consult ಮಾಡುತ್ತಾರಾ? consult ಮಾಡುವುದಿಲ್ಲ ಅವರು ಮಾಡಿದ್ದೇ ಕಾನೂನು ನಾವೆಲ್ಲಾ ಸಹಿ ಹಾಕಿಬಿಟ್ಟು, ನಡೆಯಪ್ಪ, ನಡಯಪ್ಪ ಎಂದು ಅವರನ್ನೇ ಹೊಗಳಿಕೊಂಡು ತಿರುಗಾಡುತ್ತೇವೆ But, ಈ ವರ್ಗದ ಜನರ ಬಗ್ಗೆ ಯಾರೂ ಚಿಂತಿಸುವುದಿಲ್ಲ ಹಿಂದೆ ಐ ಪಿ ಡಿ ಸಾಲಪ್ಪ ಎಂಬುವವರು ಈ Assembly ಯಲ್ಲಿ ಇದ್ದರು ಅವರು ಬಿನ್ನಿಪೇಟೆ ಕ್ಷೇತ್ರ ಗೆಲ್ಲುತ್ತಿದ್ದರು ಈ ಕ್ಷೇತ್ರ reserved constituency ಆಗಿರಲಿಲ್ಲ ಅದು general constituency ಆಗಿತ್ತು ಪೌರ ಕಾರ್ಮಿಕರ ಬಗ್ಗೆ ಇಡೀ ರಾಜ್ಯದಲ್ಲಿ ಅವರು ಹೋರಾಟ ಮಾಡಿದಂತವರಾಗಿದ್ದರು ನಮ್ಮ ಮಾನ್ಯ ಸಿದ್ದರಾಮಯ್ಯನವರು ಮೈಸೂರಿನ District Minister ಆಗಿದ್ದರು ನಾರಾಯಣ ಎಂಬ ಪೌರ ಕಾರ್ಮಿಕನೊಬ್ಬನ ಮಗನನ್ನು ಮೇಯರ್ ಮಾಡತಕ್ಕಂಥ ದೊಡ್ಡ ಕೆಲಸವನ್ನು ಅವರು ಮಾಡಿದ್ದರು I apreciate that ಆ ಕೀರ್ತಿ ಮಾನ್ಯ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಹಾಗೆಯೇ ನಿಮಗೂ ಕೀರ್ತಿ ಬರುತ್ತದೆ ನೀವು ರಾಜಕೀಯ ದೃಷ್ಟಿಯಿಂದ ಇದನ್ನು ನೋಡಲಿಕ್ಕೆ ಹೋಗಬೇಡಿ ಏಕೆಂದರೆ ನಮೆಲ್ಲರಿಗೂ ಗೊತ್ತಿದೆ ಅವರನ್ನು ಕರೆಸಿ ಮಾತನಾಡಿಸಿದಾಗ ಕೆಲವು ಸಲ ಬೇಸರ ಆಗುತ್ತದೆ ಆದರೂ ತಾವು ಅದನ್ನೆಲ್ಲಾ ಹೊಟ್ಟೆಯೊಳಗೆ ಹಾಕಿಕೊಂಡು, ಅವರನ್ನು ಖಾಯಂ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲೇಬೇಕೆಂದು ಒತ್ತಾಯ ಮಾಡುತ್ತೇನೆ

ಶ್ರೀ ಎಸ್ ಸಿದ್ಧರಾಮಯ್ಯ (ಚಾಮುಂಡೇಶ್ವರಿ) ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ಸ್ಪಷ್ಟವಾಗಿ ನೋಡಬೇಕು ನೀವು ಸರ್ಕಾರಿ ನೌಕರರು ಯಾರು ದಿನಗೂಲಿ ಮೇಲೆ ಕೆಲಸ ಮಾಡುತ್ತಿದ್ದಾರೋ, ಅವರಿಗೂ ಈ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೂ ಕೂಡ ಹೋಲಿಕೆ ಮಾಡುವುದಕ್ಕೆ ಹೋಗಬೇಡಿ ಇದೊಂದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು ಎರಡನೆಯದಾಗಿ, ಯಾವ ವರ್ಗದ ಜನ ಇವರು? ಬೇರೆ ಬೇರೆ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡತಕ್ಕವರೇ ಬೇರೆ ಅವರ ಕೆಲಸದ ರೀತಿಯೇ ಬೇರೆ ಇವರು ಕಸ ಹೊಡೆಯತಕ್ಕಂಥ ಕೆಲಸ ಮಾಡುವವರಾಗಿದ್ದಾರೆ ಇವರು ಚೊಕ್ಕಟ ಮಾಡುವವರಾಗಿದ್ದಾರೆ ಈ ವರ್ಗದ ಜನರಿಗೆ ನ್ಯಾಯ ಒದಗಿಸಲೇಬೇಕು ಹುದ್ದೆ ಖಾಲಿ ಇಲ್ಲದ ಯಾರೂ ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ ಹುದ್ದೆಗಳು

ಈಗ ಖಾಲಿ ಇವೆ ಅವರ ಬಗ್ಗೆ ನಾವು ಕರೆದು ಮಾತನಾಡಿದೆವು ಸುಪ್ರೀಂ ಕೋರ್ಟ್ direction ಇದೆ, ಬೇರೆ ಕಡೆ 18–19 ಸಾವಿರ ಜನ ದಿನಗೂಲಿ ಕೆಲಸ ಮಾಡಿಕೊಂಡಿದ್ದಾರೆ, ಇವರನ್ನು ಮಾಡಿದರೆ ಅವರಿಗೂ ಮಾಡಬೇಕಾಗುತ್ತದೆ ಎನ್ನತಕ್ಕಂಥ ಧೋರಣೆ ಇದೆಯಲ್ಲಾ ಇದು ಸರಿಯಲ್ಲ ಹಿಂದೆ ಒಂದು ಸಾರಿ ಚಳವಳಿ ನಡೆದಿತ್ತು ಆ ಬಗ್ಗೆ ಮಾನ್ಯ ಸಿಂಧ್ಯಾರವರು ಹೇಳಿದರು ಈ ಪೌರ ಕಾರ್ಮಿಕರಿಗೆ ಟ್ರಜರಿಯಿಂದ ಸಂಬಳ ಕೊಡುತ್ತಿರಲಿಲ್ಲ ಆಗ ಮಾನ್ಯ ಜೆ ಹೆಚ್ ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದರು ಮಾನ್ಯ ಮೆರಾಜುದ್ದೀನ್ ಪಟೇಲ್‌ರವರು ಪೌರಾಡಳಿತ ಸಚಿವರಾಗಿದ್ದರು ಅವರು ಮತ್ತು ನಾವು ಕುಳಿತುಕೊಂಡು, ಅವರಿಗೂ ಕೂಡ ಟ್ರೆಜರಿಯಿಂದ ಏಕೆ ಕೊಡಬಾರದು? ಬೇರೆಯವರಿಗೆಲ್ಲಾ ಕೊಡುತ್ತೇವೆ? ಅವರಿಗೇಕೆ ಕೊಡಬಾರದು ಎಂದು ತೀರ್ಮಾನ ಮಾಡಿ, ಅದನ್ನು ಜಾರಿಗೆ ತಂದೆವು ಅದಕ್ಕೆ bureaucrats ಅವತ್ತೂ ವಿರೋಧ ಮಾಡಿದ್ದರು ಆ ರೀತಿ ಕೊಡುವುದಕ್ಕೆ ಆಗುವುದಿಲ್ಲವೆಂದು ಅವತ್ತೂ ಕೂಡ ವಿರೋಧ ಮಾಡಿದ್ದರು ಇಲ್ಲ ಸಾರ್, ಆ ರೀತಿ ಮಾಡಲಿಕ್ಕಾಗುವುದಿಲ್ಲವೆಂದು ಅವರು ಹೇಳುತ್ತಿದ್ದರು

ನೀವು ಬ್ಯುರೋಕ್ರಾಟ್ಸ್ ಅಡ್ವೈಸ್ ತೆಗೆದುಕೊಂಡರೆ, ಅವರು ಮಾನವೀಯತೆಯಿಂದ ನೋಡುವವರಲ್ಲ, ಆಮೇಲೆ ಪಾಪ ಅವರನ್ನು ಸಾಯಿಸಿಬಿಡುತ್ತಾರೆ ಅಷ್ಟೆ ಇವರಿಗೇನು ಬಡ್ತಿ ಕೊಡುತ್ತೀರಾ? ದೊಡ್ಡ ದೊಡ್ಡ ಹುದ್ದೆಗಳಿಗೆ ಹೋಗುತ್ತಾರೆಯೆ? ಪಾಪ ಅಲ್ಲಿ ವಿದ್ಯಾವಂತರೆಲ್ಲಾ ಕೆಲಸ ಮಾಡಿಕೊಂಡಿದ್ದಾರೆ ಈ ಸ್ವಚ್ಛ ಮಾಡತಕ್ಕಂಥವರ ಬಗ್ಗೆ ಸರ್ಕಾರದವರು ಮೀನುಮೇಷ ಏತಕ್ಕೆ ಎಣಿಸುತ್ತಿದ್ದೀರಿ? ನಿಮಗೆ ಒಂದು ವೇಳೆ ಕಾನೂನು ಅಡ್ಡ ಬಂದರೆ ಕಾನೂನನ್ನು ತಿದ್ದುಪಡಿ ಮಾಡಿ ಇಲ್ಲಿ ನಾವೆಲ್ಲಾ ಬೆಂಬಲ ಕೊಡುತ್ತೇವೆ ಅವರು ಅತ್ಯಂತ ಕೆಳವರ್ಗದ ಜನ ಯಾರಾದರೂ ಮೇಲ್ವವರ್ಗದ ಜನ ಈ ಕೆಲಸ ಮಾಡಿ ಎಂದರೆ ಬರುತ್ತಾರೆಯೆ? ಅವರು ಧ್ವನಿ ಇಲ್ಲದವರು, ಇವರ ಬಗ್ಗೆ ಇಲ್ಲಿ, ನಾವು ಚರ್ಚೆ ಮಾಡುತ್ತೇವೆ ಇದೊಂದನ್ನು ಮಾತ್ರ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಬೇರೆ ಎಲ್ಲವನ್ನು ಒಪ್ಪಿಕೊಳ್ಳುತ್ತೇವೆಂದರೆ, ಇದೇನೇ ಬಹಳ ಮುಖ್ಯವಲ್ಲ ಅವರಿಗೆ ಎಷ್ಟು ಸಂಬಳ ಕೊಡುತ್ತಿದ್ದೀರಿ? ಏಕೆ ಪರ್ಮನೆಂಟ್ ಮಾಡಬಾರದು? 5ನೇ ವೇತನ ಆಯೋಗದ್ದು ಇವರಿಗೆಲ್ಲಾ ಸಹಾಯವಾಗುವುದು ಬೇಡವೆ? ಅವರು ಪರ್ಮನೆಂಟ್ ಆದರೆ ತಾನೆ ಸಹಾಯವಾಗುವುದು? ಪರ್ಮನೆಂಟ್ ಆಗಿರುವವರಿಗೂ ದಿನಗೂಲಿ ನೌಕರರಿಗೂ ಒಂದೆ ಮಾಡುವುದಕ್ಕಾಗುತ್ತದೆಯೆ? ಇಲ್ಲಿಗೆ ಬರುವ ಜನರ್ಯಾರು? ನಿರ್ದಿಷ್ಟವಾಗಿ ಆ ವರ್ಗದ ಜನ ಮಾತ್ರ ಆ ಕೆಲಸವನ್ನು ಮಾಡುವುದು ಆದುದರಿಂದ ಸರ್ಕಾರ ದಯಮಾಡಿ ಮೀನುಮೇಷ ಎಣಿಸಬಾರದು ಇದರಲ್ಲಿ ಬೇರೆ ಸರ್ಕಾರಿ ನೌಕರರನ್ನು ದಿನಗೂಲಿ ನೌಕರರನ್ನು ತಾಳೆ ಹಾಕಿ ನೋಡಬಾರದು ಇವರದೆ ಬೇರೆ, ಅವರದೆ ಬೇರೆ, The nature of work they are doing ಇದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಇವರ ಬಗ್ಗೆ

ಸರ್ಕಾರ ಬಹಳ ಸಹಾನುಭೂತಿಯಿಂದ ನೋಡಬೇಕು You must give a positive reply You must make a positive statement ನಾವೆಲ್ಲಾ ನಿಮಗೆ ಸಪೋರ್ಟ್ ಮಾಡುತ್ತೇವೆ ಯಾರನ್ನೊ ಕೇಳಬೇಕು, ಇವರನ್ನು ಕೇಳಬೇಕು, ಇದೇನೊ ಅಲ್ಲೋಲ ಕಲ್ಲೋಲ ಆಗಿ ಬಿಡುತ್ತದೆಂದು ಯೋಚನೆ ಮಾಡುವುದಕ್ಕೆ ಹೋಗಬೇಡಿ ಮಾನ್ಯ ಆಲಂಗೂರು ಶ್ರೀನಿವಾಸ್, ಅವರು ಮುನಿಸಿಪಾಲಿಟಿಯಲ್ಲೆಲ್ಲಾ ಕೆಲಸ ಮಾಡುವುದಿಲ್ಲವೆ, ಮತ್ತೆ ಏಕೆ? ಇದೊಂದು ಬೇಡಿಕೆ ಆಗುವುದಿಲ್ಲವೆಂದೆಲ್ಲಾ ಹೇಳುವುದಕ್ಕೆ ಹೋಗಬೇಡಿ, ಅವರು ಅಲ್ಲಿ ಚಳುವಳಿ ಮಾಡುತ್ತಾ ಕುಳಿತಿದ್ದಾರೆ, ಅವರಿಗೆ ಹೇಳುವವರಿಲ್ಲ, ಕೇಳುವವರಿಲ್ಲ, ಅವರ ಪರವಾಗಿ ಯಾರು ಮಾತನಾಡುವುದಿಲ್ಲವೆಂದು ಈ ರೀತಿ ಹೇಳಿದರೆ, ಅದೇ ಸರ್ಕಾರಿ ನೌಕರರಾಗಿದ್ದರೆ ಬಿಟ್ಟುಬಿಡುತ್ತಿದ್ದೀರಾ? ಹೇಳಿ ನೋಡೋಣ ಅವರ ಬೇಡಿಕೆಗಳನ್ನು ಬಿಟ್ಟುಬಿಡುತ್ತೀರಾ? ಸರ್ಕಾರಗಳು ಹೆದರುಬಿಡುತ್ತಾವೆ, ಪಾಪ, ಇವರನ್ನು ಕಂಡರೆ ಯಾರು ಹೆದರಿಕೊಳ್ಳುವವರೇ ಇಲ್ಲ, ಯಾರಿಗೂ ಭಯನೂ ಇಲ್ಲ ದಯಮಾಡಿ you must come out with a positive statement ಅವರನ್ನೆಲ್ಲಾ ಖಾಯಂ ಮಾಡುತ್ತೇವೆನ್ನುವ positive statement ಕೊಡಿ ಬಹುಶಃ ಕಾರ್ಜೋಳ್ ಅವರು ಇದಕ್ಕೆ ಬೆಂಬಲ ಕೊಡುತ್ತಾರೆ, ಕಾನೂನು ಮಂತ್ರಿಗಳಾದ ಪ್ರಕಾಶ್ ಅವರು ಬೆಂಬಲ ಕೊಡುತ್ತಾರೆ, ಎಲ್ಲರೂ ಬೆಂಬಲ ಕೊಡುತ್ತಾರೆ, ನೀವು ಧೈರ್ಯವಾಗಿ ಒಂದು ಹೇಳಿಕೆಯನ್ನು ಕೊಡಿ

ಶ್ರೀ ಎಂ ಪಿ ಪ್ರಕಾಶ್ ಒಂದು ಕಾಲದಲ್ಲಿ ಗ್ರಾಮ ಸಹಾಯಕರು 100ಕ್ಕೆ 80 ರಷ್ಟು SC/ST ನೇಮಕ ಮಾಡಲು, ನಾವು ಸೇರಿದಂತೆ, ಸಿಂಧ್ಯಾರವರು ಆ ಒಂದು ಸಮಿತಿಯಲ್ಲಿದ್ದರು ಹಾಗಾಗಿ ಸರ್ಕಾರದ ಉದ್ದೇಶ ಅವರ ಬೇಡಿಕೆಗೆ ವಿರೋಧವಾಗಿರಬೇಕೆಂಬುದಲ್ಲ, ಪರಿಶೀಲಿಸಿ ಪರಿಗಣಿಸಬೇಕಾಗುತ್ತದೆ ನೀವು ಅದರ ಅಧ್ಯಕ್ಷರಾಗಿದ್ದೀರಿ, ನಾವೆಲ್ಲಾ ಅದರ ಸದಸ್ಯರಾಗಿದ್ದೆವು ಆಗ ಆಲ್‌ಮೋಸ್ಟ್ ಆಗುತ್ತಿತ್ತು ಮತ್ತೆ ಸರ್ಕಾರದ ಬದಲಾಣೆಗಳ ಕಾರಣಕ್ಕಾಗಿ ಆಗಲಿಲ್ಲ, ಅದನ್ನು ಕೂಡ ನಾವು ಪರಿಗಣಿಸಬೇಕಾಗುತ್ತದ

ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು, ತಾವು 5ನೇ ವೇತನ ಆಯೋಗದ ಪ್ರಕಾರ ಸರ್ಕಾರಿ ನೌಕರರ, ಅಧಿಕಾರಿಗಳ ವೇತನವನ್ನು ಹೆಚ್ಚಿಗೆ ಮಾಡಿದಿರಿ, ಅವರೇನು ಕೇಳುತ್ತಿದ್ದಾರೆಂದರೆ, ನಮಗೆ ನೇಮಕಾತಿ ಮಾಡಬೇಕೆಂದು ಕೇಳುತ್ತಿದ್ದಾರೆ, ಎಲ್ಲರೂ ಭಾಷಣ ಮಾಡುವಾಗ ಬಸವಲಿಂಗಪ್ಪನವರನ್ನು ನೆನಪಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ ತಮ್ಮ ಹೆಸರನ್ನು ನೆನಪಿಸಿಕೊಳ್ಳಬೇಕೆಂಬುದು ಜ್ಞಾಪಕವಿರುತ್ತದೆಯೇ ಎಂಬುದನ್ನು ಮಂತ್ರಿಗಳು ಹೇಳಬೇಕು ನಿಮ್ಮ ಹೆಸರನ್ನು ಆಲಂಗೂರು ಶ್ರೀನಿವಾಸ್ ಅವರ ಹೆಸರನ್ನು ಇನ್ನೊಬ್ಬರು ಮಾತನಾಡುವ ಸಮಯದಲ್ಲಿ ನೆನಪಿಸಿಕೊಳ್ಳಬೇಕೆಂಬ

ಭಾವನೆ ನಿಮ್ಮಲ್ಲಿ ಬರಬೇಕು 4000 ಜನರನ್ನು ನೇಮಕಾತಿ ಮಾಡುತ್ತೇವೆಂದು ತಕ್ಷಣ ಹೇಳಿ, 10,000 ಆಗಲಿ, 40,000 ಆಗಲಿ ಕೊಡಿ, ಧೈರ್ಯವಾಗಿ ಹೇಳಿ ಸರ್ ನಿಮ್ಮ ಹೆಸರು ಇಲ್ಲಿ ಇರಬೇಕೆಂದರೆ, ಆಲಂಗೂರು ಶ್ರೀನಿವಾಸ್‌ರವರ ಕಾಲದಲ್ಲಿ ಇಷ್ಟು ಜನ ನಾವೆಲ್ಲಾ ನೇಮಕಾತಿಯಾದೆವು, ಧೈರ್ಯವಾಗಿ ಅವರು ನಮಗೆ ನೇಮಕಾತಿ ಆದೇಶ ಕೊಟ್ಟಿರೆಂದು ಅವರು ನೆನಪಿಸಿಕೊಳ್ಳುತ್ತಾರೆ, ತಾವು ಧೈರ್ಯವಾಗಿ ಹೇಳಿ ಸರ್, ಬೇರೆಯದಕ್ಕೆಲ್ಲಾ ನಮ್ಮ ಜಿಲ್ಲೆಯಲ್ಲಿ ನಮ್ಮ ತಲೆಯ ಮೇಲೆಲ್ಲಾ ಹೊಡೆಯುತ್ತೀರಿ ನಮಗೆಲ್ಲಾ ಅನ್ಯಾಯವಾಗಿದೆ 'ಒಳ್ಳೆಯದನ್ನು ಮಾಡಬೇಕೆಂದು ಹೇಳುತ್ತೀರಿ, ಈ ಜನಕ್ಕೆ ಮಾಡಿ ನಿಮಗೆ ಹೆಸರು ಇರುತ್ತದೆ, ನಾವು ನಿಮ್ಮ ಜೊತೆಯಲ್ಲಿರುತ್ತೇವೆ ಸರ್ ಆ ಕೀಳು ಮಟ್ಟದ ಎಸ್ ಸಿ /ಎಸ್ ಟಿ ಜನರ ಕೆಲಸ ಮಾಡಲು ತಾವು ಯಾರನ್ನು ಕೇಳಬೇಕು? ನೀವು ಯೋಚನೆ ಮಾಡಿ ಎನ್‌ಜಿಒಸ್ ಸ್ಟ್ರೈಕ್ ಅಂದರೆ ಕೈಕಟ್ಟಿಕೊಂಡು ಓ ಎನ್‌ಜಿಒಸ್ ಸ್ಟ್ರೈಕ್ ಮಾಡುತ್ತಿದ್ದಾರೆಂದು ಎಲ್ಲರೂ ಹೋಗುತ್ತೀರಿ ಹಾಗಾದರೆ ಕಸಗುಡಿಸುವವನು ಮನುಷ್ಯನಲ್ಲವೆ? ಯೋಚನೆ ಮಾಡಿ, ಧೈರ್ಯವಾಗಿ ನಾವು ಇಷ್ಟು ಜನರನ್ನು ನೇಮಕಾತಿ ಮಾಡುತ್ತೇವೆಂದು ಸ್ಟೇಟ್‌ಮೆಂಟ್ ಕೊಡಿ, ಆಗ ಆ ಮನುಷ್ಯ ನಮಗೆ ನೇಮಕಾತಿಯನ್ನು ಮಾಡಿದ್ದು, ಆ ಮನುಷ್ಯ ನಮಗೆ ಕೆಲಸ ಕೊಟ್ಟಿದ್ದೆಂದು ಅವರು ನಿಮ್ಮ ಫೋಟೋವನ್ನು ಇಟ್ಟುಕೊಳ್ಳುತ್ತಾರೆ, ಅವರ ಮನೆಯಲ್ಲೆಲ್ಲಾ ಫೋಟೋ ಇಟ್ಟುಕೊಳ್ಳುತ್ತಾರೆ ಧೈರ್ಯವಾಗಿ ನೀವು ಇದನ್ನು ಮಾಡಲೇಬೇಕು ನೀವು ಯಾರನ್ನೂ ಕೇಳುವ ಅವಶ್ಯಕತೆ ಇಲ್ಲ ನಮ್ಮ ಸರ್ಕಾರದಲ್ಲಿ ದುಡ್ಡಿದೆ ಯಾವಾಗ ನೋಡಿದರು ನಾಲ್ಕು ಸಾವಿರ, ನಾನೂರು ಸಾವಿರ, ಇಡೀ ಟ್ರಜರಿಯೇ ಇಲ್ಲಿದೆ ಎಂದು ಮಾಡನಾಡುತ್ತೀರಲ್ಲ? ಕೋಟಿಗಟ್ಟಲೆ ಇದೆ ಎಂದು ಮಾತನಾಡುತ್ತೀರಲ್ಲ? ಕೊಡಿ ಒಂದು ದಿವಸಕ್ಕೆ ಒಂದು ನೂರು ರೂಪಾಯಿ ಸಂಬಳ ಕೊಡಿ, ನೀವು ರೂ 75–80 ಅಷ್ಟೆ ತಾನೆ ಸಂಬಳ ಕೊಡುವುದು? ನೀವು ಯಾವಾಗಲಾದರೂ ನಮ್ಮ ಒಪ್ಪಿಗೆ ತೆಗೆದುಕೊಂಡಿದ್ದೀರಾ? ಬಿಲ್ ಬಂದರೆ ಏನು ಮಾಡುತ್ತೀರಿ? ಇಲ್ಲ, ಇಲ್ಲವೆಂದು ನಾವೆಲ್ಲಾ ಭಾಷಣ ಮಾಡುತ್ತೇವೆ ನೀವು ಅಲ್ಲಿ ಕುಳಿತುಕೊಂಡು ಹೌದು, ಹೌದು ಎಂದು ಹೇಳುತ್ತೀರಿ, ಹೌದಾಗುತ್ತದೆ, ಹಾಗೆ ಈಗ ಇದಕ್ಕೆ ಹೌದೆಂದು ಹೇಳಿ, ಕೇಳುವ ಅವಶ್ಯಕತೆಯೆ ಇಲ್ಲ Therefore, I demand that you must consider the case of the poorest among the poor in the society ಇದರ ಮೇಲೆ ಸರ್ಕಾರವೇನು ಹೇಳುತ್ತದೆ? ದಯವಿಟ್ಟು ಮಾಡಬೇಕು ತಕ್ಷಣ ಇವತ್ತು ಸಂಜೆಯೊಳಗಡೆ ಅವರು ಮುಷ್ಕರವನ್ನು ವಾಪಸ್ ತೆಗೆದುಕೊಂಡು ಹೂವಿನ ಹಾರಗಳನ್ನು ತೆಗೆದುಕೊಂಡು ನಿಮ್ ಕಛೇರಿಗೆ ಬರಬೇಕು ಬಂದ ತಕ್ಷಣ ನೋಡಿ, ಇಡೀ ಕರ್ನಾಟಕ ಸರ್ಕಾರದ ಬಗ್ಗೆ ಪಕ್ಕದಲ್ಲಿರುವ ಆಂಧ್ರ ಪ್ರದೇಶ, ತಮಿಳುನಾಡು ಎಲ್ಲರಿಗೂ ಇಂಥ ಮನುಷ್ಯ ಇಷ್ಟು ಜನರನ್ನು ನೇಮಕಾತಿ ಮಾಡಿದರೆಂದು ಗೊತ್ತಾಗುತ್ತದೆ ಒಳ್ಳೆಯ ಹೆಸರು

ಬರುತ್ತದೆ, ಅವಕಾಶ ಸಿಕ್ಕರೆ ನೀವು ಮುಖ್ಯಮಂತ್ರಿಯೂ ಕೂಡ ಆಗಬಹುದು, ಹೌದು, ನಿಮಗೆ ಆ ಅವಕಾಶ ಸಿಗುತ್ತದೆ

ಉಪಾಧ್ಯಕ್ಷರು – ಎಲ್ಲರೂ ಕೂಡ ಒಂದೇ ಸಮಸ್ಯೆ ಬಗ್ಗೆ ಹೇಳುವುದು, ಸಮಯವಾಯಿತು ಉತ್ತರ ಹೇಳಿಬಿಡಿ, ರಾಜೇಂದ್ರನ್ ಅವರು ಎಲ್ಲರ ಪರವಾಗಿ ಸ್ಪಷ್ಟವಾಗಿ ಹೇಳಿದ್ದಾರೆ, ಮಂತ್ರಿಗಳು ಉತ್ತರವನ್ನು ಕೊಡುವುದು

ಶ್ರೀ ಎಂ ಟಿ ಕೃಷ್ಣಪ್ಪ – ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಮೇಲೆ ನಮ್ಮ ಸರ್ಕಾರವೆ ವೈದ್ಯರನ್ನು ರೆಗ್ಯುಲರೈಸ್ ಮಾಡಿದೆ

ಶ್ರೀ ಎನ್ ಯೋಗೀಶ್ ಭಟ್ ಮಾನ್ಯ ಸಚಿವರು commit ಮಾಡಬೇಕು ತಾವು ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಪೌರ ಕಾರ್ಮಿಕರ ಪರವಾಗಿ ಕೊಡಬೇಕೆಂದು ವಿನಂತಿ ಮಾಡುತ್ತೇನೆ

ಶ್ರೀ ವೈಜನಾಥ ಪಾಟೀಲ್ – ನಾನು HUD ಮಂತ್ರಿಯಾಗಿದ್ದಾಗ, ಕರ್ನಾಟಕ ಪೌರಾಡಳಿತ ಸಂಸ್ಥೆಗಳ 10,000 ನೌಕರರನ್ನು ರೆಗ್ಯುಲರೈಸ್ ಮಾಡಿದ್ದು, ಜೆ ಹೆಚ್ ಪಟೇಲರಿದ್ದಾಗ ಆಗಿಲ್ಲ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದರು ಆಗ ನಾನು HUD ಮಂತ್ರಿಯಾಗಿದ್ದೆ ಗುಲ್ಬರ್ಗಾಕ್ಕೆ ಹೋದಾಗ ಒಂದು ಕಡೆ ವಾಟರ್ ಸಪ್ಲೈ ಬೋರ್ಡ್‌ನ ಒಬ್ಬ ನೌಕರ 15 ವರ್ಷ ಕೆಲಸ ಮಾಡಿ ಸತ್ತಿದ್ದ ಅವನಿಗೆ ಯಾವುದೇ ಸೌಲಭ್ಯ ಸಿಕ್ಕಿರಲಿಲ್ಲ ಇದನ್ನೆಲ್ಲಾ ನೋಡಿ ಅವರನ್ನು ರೆಗ್ಯುಲರೈಸ್ ಮಾಡುವ ನಿರ್ಣಯವನ್ನು ತೆಗೆದುಕೊಂಡು ಅಂದಿನ ಮುಖ್ಯಮಂತ್ರಿಯಾಗಿದ್ದ ದೇವೇಗೌಡರನ್ನು ಕೇಳಿದಾಗ, ಇಲ್ಲ, ನೀವು ಒಬ್ಬರಿಗೆ ಮಾಡಿದರೆ ನೀರಾವರಿ ಇಲಾಖೆ ಸೇರಿದಂತೆ ಎಲ್ಲಾ ಕಡೆ ಕೇಳುತ್ತಾರೆ, ಬೇಡವೆಂದು ಹೇಳಿದರು ಆದರೂ ಕೂಡ ನಾನು ಆ ನಿರ್ಣಯವನ್ನು ತೆಗೆದುಕೊಂಡು 10 ಸಾವಿರ ನೌಕರರನ್ನು ರೆಗ್ಯುಲರೈಸ್ ಮಾಡಿದೆ ಜೆ ಹೆಚ್ ಪಟೇಲರ ಕಾಲಕ್ಕೆ ಕಳೆದುಕೊಳ್ಳುವುದಕ್ಕೆ ಅದೊಂದು ಕಾರಣವಿತ್ತು ಆ ಮಂತ್ರಿಮಂಡಲ ದೇವೇಗೌಡರಿಗೆ Oblige ಮಾಡಲಿಲ್ಲ ಈಗ ಮಾನ್ಯ ಸಿಂಧ್ಯಾ, ಸಿದ್ಧರಾಮಯ್ಯ ಇವರೆಲ್ಲಾ ಜೆ ಹೆಚ್ ಪಟೇಲರಿದ್ದರೆಂದು ಹೇಳಿದರು, ಅದು ಹಾಗಲ್ಲ, ನಾನು HUD ಮಂತ್ರಿಯಾಗಿದ್ದಾಗ ಹತ್ತು ಸಾವಿರ ನೌಕರರನ್ನು ರೆಗ್ಯುಲರೈಸ್ ಮಾಡಿದ್ದೇನೆ, ತಾವು ಅಂಥ ಒಂದು ನಿರ್ಣಯವನ್ನು ತೆಗೆದುಕೊಂಡು ಬಿಡಿರಿ

ಉಪಾಧ್ಯಕ್ಷರು – ಈಗ ರಾಜೇಂದ್ರನ್ ಅವರು ಮಾತನಾಡಿದ್ದಾರೆ, ಸಮಸ್ಯೆ ಇದೆ ಎಂದು ರಾತ್ರಿಯೆಲ್ಲಾ ಮಾತನಾಡುವುದಕ್ಕಾಗುತ್ತದೆಯೆ ?

ಶ್ರೀ ಅಂಜನಮೂರ್ತಿ – ಉಪಾಧ್ಯಕ್ಷರೆ, ಅವರು ಅಲ್ಲಿ ಮುಷ್ಕರ ಮಾಡುತ್ತಿದ್ದಾರೆ, ಕೆಲಸಕ್ಕೆ ಪೊರಕೆಯನ್ನು ತರುವ ತರಹ ಅವಕಾಶವನ್ನು ನಾವು ಇಲ್ಲಿ ಕಲ್ಪಿಸಬಾರದು

ಉಪಾಧ್ಯಕ್ಷರು ನೀವು ಆ ಮಂತ್ರಿಗಳಿಗೆ ಜವಾಬ್ದಾರಿಯನ್ನು ಕೊಡುತ್ತೀರೊ ಇಲ್ಲವೊ ?

ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ) .– ಮಾನ್ಯ ಉಪಾಧ್ಯಕ್ಷರೆ, Supreme Court ನಲ್ಲಿ ಯಾರೂ ನಮಗೆ regularize ಮಾಡಬೇಡಿ ಎಂದು ಹೇಳಲಿಲ್ಲ ಇದು discretion of the Government Supereme Court judgement ಆದ ಮೇಲೆ Health Department ನಲ್ಲಿ 400 ಜನ Doctor ಗಳನ್ನು regularize ಮಾಡಿದ್ದಾರೆ Para-Medical staff regularize ಆಗಿದೆ ಆಯುರ್ವೇದಿಕ್ doctors regularize ಆಗಿದ್ದಾರೆ, ಇದು ಅತ್ಯಂತ ಕನಿಷ್ಠ ವರ್ಗದ ಜನ ಕೆಲಸ ಮಾಡತಕ್ಕಂತಹವರು ಜೊತೆಗೆ ಬೆಂಗಳೂರಿನಲ್ಲಿ ಬಸ್ ಸ್ಟ್ಯಾಂಡ್‌ನಲ್ಲಿ ಭಿಕ್ಷೆ ಬೇಡುವವರಿಗೆ ಕರೆದುಕೊಂಡು ಹೋದರೂ ಆ ಕೆಲಸ ಮಾಡುವುದಿಲ್ಲ ಅತ್ಯಂತ ಕನಿಷ್ಠವಾದ ಕೆಲಸ ಇದನ್ನು ಬಜೆಟ್ ಹೆಡ್‌ನಲ್ಲಿ ಕೊಡಬೇಕು ಲಕ್ಷಾಂತರ ಸರ್ಕಾರಿ ಹುದ್ದೆಗಳು ಖಾಲಿ ಇವೆ ಹಣಕ್ಕೆ ಏನೂ ಕೊರತೆ ಇಲ್ಲ ಇವರಿಗೆ ಸಂಬಳ ಕೊಡತಕ್ಕಂಥಾದ್ದು ಮುನಿಸಿಪಾಲಿಟಿ ವ್ಯಾಪ್ತಿಗೆ ಬರುತ್ತದೆ ನಮ್ಮ ಮೇಲೆ ಏನೂ ಬರ್ಡನ್ ಆಗುವುದಿಲ್ಲ 20 ರಿಂದ 25 ವರ್ಷ ಕೆಲಸ ಮಾಡಿದಂತಹ ಬಹಳ ಕಡು ಬಡವರಿದ್ದಾರೆ ಯಾರೂ ಆ ಕೆಲಸ ಮಾಡುವುದಿಲ್ಲ ಬಹಳ ಕನಿಷ್ಠ ವರ್ಗ ನಾಳೆ ನಾವು ಫಂಕ್ಷನ್‌ಗೆ ಹೋಗುತ್ತಿದ್ದೇವೆ ದೊಡ್ಡ ದೊಡ್ಡ ಸನ್ಮಾನಗಳನ್ನು ನಮಗೂ ಮಾಡುತ್ತಾರೆ ನಾನೂ ಮಾಜಿ ಅಧ್ಯಕ್ಷನಾಗಿದ್ದೆ ನಾವು ಸರ್ಕಾರೀ ನೌಕರರಿಗೆ 71% ಒಳ್ಳೆಯ ಸ್ಕೇಲ್ ಕೊಟ್ಟಿದ್ದೇವೆ ಅವರಿಗೆ ಪೆನ್‌ಶನ್ ಎಲ್ಲಾ ಕೊಡುತ್ತಿದ್ದೇವೆ ಈ ವರ್ಗಕ್ಕೆ ಪೆನ್‌ಶನ್ ಇಲ್ಲ ಊಟ ಮಾಡುವುದಕ್ಕೆ ಸಂಬಳ ಕೂಡ ಇಲ್ಲ ಈ ಸಂದರ್ಭದಲ್ಲಿ ನಾನು ನಮ್ಮ ಮಾನ್ಯ ಶ್ರೀನಿವಾಸ್‌ರವರಿಗೆ ಕೇಳುವುದು ಇಷ್ಟೆ ನಾನು ಆಡಳಿತ ಪಕ್ಷದ ಸದಸ್ಯನಾಗಿದ್ದರೂ, ನಾನೂ ಕೂಡ ನೌಕರರ ಸಂಘದ ಅಧ್ಯಕ್ಷನಾಗಿ 8–9 ವರ್ಷಗಳ ಕಾಲ ಕೆಲಸ ಮಾಡಿರುವುದರಿಂದ ನಾನು intervene ಆಗಬೇಕಾಗಿದೆ ಅಷ್ಟೆ Not otherwise Supreme Court ನ್ನು ಮುಂದಿಟ್ಟುಕೊಂಡು ಈ ವರ್ಗಕ್ಕೆ ಹೇಳುವ ಅಗತ್ಯವಿಲ್ಲ ಇವರನ್ನು ರೆಗ್ಯಲರೈಸ್ ಮಾಡಿರುವುದರಿಂದ ಬಡವರಿಗೆ ಜೀವನ ಕೊಟ್ಟ ಹಾಗಾಗುತ್ತದೆ ಈ ಸಂದರ್ಭದಲ್ಲಿ ನಾನೂ ಸಹ ಮಾನ್ಯ ಶ್ರೀನಿವಾಸ್‌ರವರನ್ನು ಒತ್ತಾಯ ಮಾಡುತ್ತೇನೆ

ಡಾ|| ಹೆಚ್ ಸಿ ಮಹಾದೇವಪ್ಪ (ಟಿ ನರಸೀಪುರ) – ಮಾನ್ಯ ಉಪಾಧ್ಯಕ್ಷರೆ, ಪೌರ ಕಾರ್ಮಿಕರ ವಿಷಯದಲ್ಲಿ, ನಾನು ಒಂದೇ ಒಂದು ನಿಮಿಷ ಮಾತನಾಡುವುದಕ್ಕೆ ಬಯಸುತ್ತೇನೆ ನಮ್ಮ ದೇಶದ ಸಂವಿಧಾನದಲ್ಲಿ ಮೊದಲನೇ sentence ನೇ justice ನ್ಯಾಯ ಕೊಡಬೇಕೆಂದು ಹೇಳುವಂಥಾದ್ದು ಮೊದಲನೇ sentence ಗಾಂಧೀಜಿಯವರ ಹೇಳಿಕೆಯನ್ನು ಎಲ್ಲಾ budgetಗಳಲ್ಲಿ ಮತ್ತು ಭಾಷಣಗಳಲ್ಲಿ ಮಾತನಾಡುವುದು ಏನು ? "ಕಟ್ಟಕಡೆಯ ಮನುಷ್ಯನಿಗೆ ಮೊಟ್ಟ

(ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ)

ಮೊದಲನೇ ಆದ್ಯತೆ", ಎಂದು ಎಲ್ಲರೂ ಮಾತನಾಡುತ್ತಾರೆ ಪೌರ ಕಾರ್ಮಿಕರು ಪೌರರಿಗೆ ಇವರು ಕಾರ್ಮಿಕರಾಗಿ, ಕೂಲಿಯವರಾಗಿ, ಅವರ ಸೇವೆ ಮಾಡುವುದಕ್ಕಾಗಿ ನೇಮಕವಾಗಿರತಕ್ಕಂತಹ ಜನ ಇವರು ಇವರು ಕಟ್ಟ ಕಡೆಯವರು ಕಟ್ಟಕಡೆಯವರನ್ನು ಕಟ್ಟಕಡೆಯಾಗಿ ಬಿಟ್ಟು ಬಿಡಬೇಕೇ, ಮೊಟ್ಟ ಮೊದಲನೇ ಆದ್ಯತೆ ಕೊಡುವ ರೀತಿಯಲ್ಲಿ ಘೋಷಣೆ ಮಾಡಿ, ಆದ್ಯತೆ ಕೊಟ್ಟು ತೀರ್ಮಾನ ಮಾಡುವಂಥಾದ್ದು, ಇವತ್ತು ಇರತಕ್ಕಂಥಾದ್ದು ಬಹುತೇಕ ನಗರಸಭೆ ಹಾಗೂ ಪುರಸಭೆಗಳಲ್ಲಿ ನಮ್ಮ ಗೆಳೆಯರಾದ ಪೌರಾಡಳಿತ ಸಚಿವರಾದ ಮಾನ್ಯ ಶ್ರೀನಿವಾಸ್‌ರವರು ಎಲ್ಲ ನಗರಸಭೆ ಹಾಗೂ ಪುರಸಭೆಗಳು ಅಭಿವೃದ್ಧಿಯಾಗಬೇಕೆಂದು ಸಾವಿರಾರು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ ಬಹುತೇಕ ನಗರಸಭೆ, ಪುರಸಭೆಗಳಲ್ಲಿ underground drainage ಇಲ್ಲ manual works ಮುಖಾಂತರ ಸ್ವಚ್ಛತೆಯನ್ನು, ಪರಿಸರವನ್ನು ಮತ್ತು ಆರೋಗ್ಯವನ್ನು ಕಾಪಾಡಬೇಕು ಈ ಕೆಲಸಕ್ಕೆ ಈ ಜನ ಬಿಟ್ಟರೆ ಯಾರೂ ಬರುವುದಿಲ್ಲ strike ಮಾಡಿ ಅವರು ನಮ್ಮ ಮಾತಿಗೆ ಬರದೇ ಹೋದರೆ, ಜಿಲ್ಲಾಡಳಿತದ ಮೂಲಕ ಬೇರೆ ಕಾರ್ಮಿಕರನ್ನು ನೇಮಕ ಮಾಡುತ್ತೇವೆಂದು ಹೇಳಿ, ಆ ಕಾರ್ಮಿಕರ ಮೇಲೆ ಇನ್ನೊಬ್ಬ ಕಾರ್ಮಿಕರನ್ನು ನಾವು ಎತ್ತಿ ಕಟ್ಟತಕ್ಕಂತಹ ಕೆಲಸಕ್ಕೆ ಕೈ ಹಾಕಬಾರದು ಮಾನ್ಯ ಶ್ರೀನಿವಾಸ್‌ರವರು, ಪೌರಾಡಳಿತ ಸಚಿವರಿಗೆ ಸಾಮಾಜಿಕವಾಗಿ ಒಂದು ಕಳಕಳಿ ಮತ್ತು ಬದ್ಧತೆ ಇದೆ ಅವರು ನಮಗೆ ಒಳ್ಳೆಯ ಸ್ನೇಹಿತರು ಹಿರಿಯರಾದ ಸನ್ಮಾನ್ಯ ಎಂ ಪಿ ಪ್ರಕಾಶ್‌ರವರು ಹಿಂದೆ ಸಚಿವ ಸಂಪುಟ ಉಪ ಸಮಿತಿಯ ಸದಸ್ಯರಾಗಿದ್ದರು ನಾನೂ ಆ ಸಚಿವ ಸಂಪುಟದ ಸದಸ್ಯನಾಗಿದ್ದೆ ಇನ್ನೇನು ಅದನ್ನು ತೀರ್ಮಾನ ಮಾಡಬೇಕೆನ್ನುವಷ್ಟರಲ್ಲಿ ಸರ್ಕಾರ ಬದಲಾವಣೆ ಆಯಿತು ಹಿರಿಯರಾದ ಮಾನ್ಯ ಪ್ರಕಾಶ್‌ರವರು ಅದೇ ಸಚಿವ ಸಂಪುಟದಲ್ಲಿ ಸದಸ್ಯರಾಗಿರುವುದರಿಂದ ನಾವೇನು ತೀರ್ಮಾನ ಮಾಡಿ ಪೌರ ಕಾರ್ಮಿಕರನ್ನು ಖಾಯಂಗೊಳಿಸುವಂತಹ ನಿಲುವಿಗೆ ಬಂದಿದ್ದೆವು ಈ ಕೂಡಲೇ ಅವರನ್ನು ಖಾಯಂ ಮಾಡತಕ್ಕಂತಹ ಕೆಲಸಕ್ಕೆ ಸರ್ಕಾರ ಮುಂದಾಗಬೇಕು Supreme Court ತೀರ್ಪುಗಳನ್ನು, ಸಂವಿಧಾನವನ್ನು ಗೌರವಿಸಿ ನಡೆದರೆ ಜನತೆಗೆ ಶ್ರೇಯಸ್ಸು ಆದರೆ ಇಡೀ ಸಂವಿಧಾನ ಸಾಮಾಜಿಕ ನ್ಯಾಯದ ಪರವಾಗಿರುವುದರಿಂದ, ಇಲ್ಲಿ ಕಟ್ಟ ಕಡೆಯ ಮನುಷ್ಯನಿಗೆ ಅನ್ಯಾಯವಾಗಿರುವುದರಿಂದ ಅದಕ್ಕೆ ಆದ್ಯತೆ ಕೊಟ್ಟು, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ತೀರ್ಮಾನವಾಗಬೇಕಾಗಿರುವುದರಿಂದ ನೀವು ಇವತ್ತು ಯಾವುದೇ ನಿಯಮಾವಳಿಗಳಿಗೆ ಕಾಯದೇ ಸಂವಿಧಾನದ ಆಶಯ ಮತ್ತು ನ್ಯಾಯ, ಆ ನ್ಯಾಯವನ್ನು ಕಟ್ಟಕಡೆಯ ಮನುಷ್ಯನಿಗೆ ಒದಗಿಸಲಿಕ್ಕೆ ಸನ್ಮಾನ್ಯ ಪೌರಾಡಳಿತ ಸಚಿವರು ಹಾಗೂ ಸರ್ಕಾರ ಅವರ ಕೆಲಸಗಳನ್ನು ಖಾಯಂಗೊಳಿಸತಕ್ಕಂತಹ ಘೋಷಣೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಪೌರಾಡಳಿತ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಎಸ್ ಗಡ್ಡದೇವರಮಠ್ (ಶಿರಹಟ್ಟಿ) – ಮಾನ್ಯ ಉಪಾಧ್ಯಕ್ಷರೆ, ನಾವು ಯಾರೂ ನಿರೀಕ್ಷೆ ಮಾಡದಷ್ಟು ಹೆಚ್ಚಿನ ಪ್ರಮಾಣದ ದುಡ್ಡನ್ನು SFC ಗ್ರ್ಯಾಂಟ್‌ನಿಂದ ಕೊಡುವುದರ ಮೂಲಕ ಪೌರಾಡಳಿತ ವ್ಯವಸ್ಥೆಯಲ್ಲಾಗಲಿ, ಪಟ್ಟಣ ಪ್ರದೇಶಗಳಲ್ಲಾಗಲಿ, ವಿಶೇಷವಾದ ಸುಧಾರಣೆ ಮಾಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ ಎರಡನೆಯದಾಗಿ, ನಮ್ಮ ಕಡೆ ಒಂದು ಮಾತು ಹೇಳುತ್ತಾರೆ ಮನುಷ್ಯ ಯಾವಾಗಲೂ ಕೊಡುವವರನ್ನೇ ಕೇಳುವುದು ಎಂದು ಹೇಳುತ್ತಾರೆ ನೀವು ಇಷ್ಟೆಲ್ಲಾ ಕೊಟ್ಟು ಅಲ್ಲಿಯ ಅಭಿವೃದ್ಧಿ ಬಗ್ಗೆ ಚಿಂತನಾಶೀಲರು, ನಾವು ಬೇಡಿದಂತಹ ಬೇಡಿಕೆಗಳಿಗೆ ಸ್ಪಂದನ ಮಾಡುತ್ತಾರೆ ಎನ್ನತಕ್ಕಂತಹ ವಿಚಾರ ಅವರ ಗಮನಕ್ಕೂ ಬಂದಿದೆ ಅವರ ಸುಮಾರು ದಿವಸಗಳ ಬೇಡಿಕೆಗಳು ಬೇಡಿಕೆಗಳಾಗಿಯೇ ಉಳಿದಿವೆ ಇವರು ಸಹೃದಯಿಗಳಿದ್ದಾರೆ, ಏನೋ ಮಾಡುತ್ತಾರೆಂದು ಅವರ ಬೇಡಿಕೆಯನ್ನು ತಮ್ಮ ಮುಂದಿಟ್ಟಿದ್ದಾರೆ, ನಾನೂ ಒಬ್ಬ ಪುರಸಭಾ ಅಧ್ಯಕ್ಷನಾಗಿದ್ದ ಅನುಭವವನ್ನು ಹೇಳುತ್ತೇನೆ ಯಾವಾಗಲೂ ಕೂಡ ಪುರಸಭೆಯ ವ್ಯಾಪ್ತಿಯಲ್ಲಿರತಕ್ಕಂತಹ ಜನ ಮುನಿಸಿಪಾಲಿಟಿಯನ್ನು ನೋಡುವುದು ಒಂದು ಬೆಳಕಿಗಾಗಿ, ನೀರಿಗಾಗಿ ಮತ್ತು ಸ್ವಚ್ಛತೆಗಾಗಿ ನಾವೆಲ್ಲರೂ ಮಾಡುವಂತಹ ಹೊಲಸು ತೊಳೆಯುವಂತಹ ವಿಶೇಷವಾದ ಕೆಲಸದಲ್ಲಿ ಪೌರ ಕಾರ್ಮಿಕರು ನಿರತರಾಗಿದ್ದಾರೆ ಇಲ್ಲಿರುವಂತಹ ನಮ್ಮೆಲ್ಲರ ಕರ್ತವ್ಯವೆಂದು ಭಾವಿಸುತ್ತೇನೆ, ತಾವೂ ಕೂಡ ಇದಕ್ಕೆ ಸ್ಪಂದಿಸುತ್ತೀರಿ ಎಂದು ಭಾವಿಸುತ್ತೇನೆ ಪೌರ ಕಾರ್ಮಿಕರು ಏನು ಈ ಒಂದು ಬೇಡಿಕೆಯನ್ನು ಇಟ್ಟಿದ್ದಾರೆ, ಅದಕ್ಕೆ ಮನ್ನಣೆ ಮಾಡಿ ಅವರನ್ನು ಖಾಯಂಗೊಳಿಸತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು) – ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ಎಲ್ಲ ಸದಸ್ಯರುಗಳು ಕೂಡ ಬಹಳ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ ಬಹುಶಃ ಕಟ್ಟಕಡೆಯವನು ಅವನು ಒಬ್ಬನೇ ಇವತ್ತು ಏನಾದರೂ ಪಟ್ಟಣಗಳನ್ನು ಸ್ವಚ್ಛತೆ ಮಾಡಬೇಕಾದರೆ ಅವರ ಜವಾಬ್ದಾರಿ ಬಹಳವಾಗಿದೆ ಇದನ್ನು ನಾನು ಗಮನದಲ್ಲಿಟ್ಟುಕೊಂಡು ರಾಜ್ಯದ ಎಲ್ಲಾ ಜಿಲ್ಲೆಗಳ ಪದಾಧಿಕಾರಿಗಳನ್ನು ಮತ್ತು ಅಧ್ಯಕ್ಷರುಗಳನ್ನು ಕರೆಸಿ, ನಾನು ಆರನೇ ತಾರೀಕು ಪೂರ್ವಭಾವಿಯಾಗಿ ಲವರ ಬೇಡಿಕೆಗಳು ಏನಿವೆ, ಯಾವ ರೀತಿ ಬಗೆಹರಿಸಬೇಕು, ಏನೇನು ಮಾಡಬೇಕೆಂದು ನನ್ನ ಛೇಂಬರ್‌ನಲ್ಲಿಯೇ ಸುಮಾರು ನಾಲ್ಕೈದು ತಾಸುಗಳ ಕಾಲ ಇದನ್ನೆಲ್ಲಾ ಚರ್ಚೆ ಮಾಡಿ, ಇದನ್ನೆಲ್ಲಾ ಪಟ್ಟಿ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಿ, ಇದನ್ನು ಪೂರ್ತಿಗೊಳಿಸಿ ಕೊಡುತ್ತೇನೆ ಎಂದು ಹೇಳಿದ್ದೇನೆ ತದ ನಂತರ 18ನೇ ತಾರೀಖು ಕೂಡ ಎಲ್ಲರನ್ನೂ ಕರೆಸಿ, ಅನೇಕ ಬೇಡಿಕೆಗಳನ್ನು ಈಡೇರಿಸಿದ್ದೇವೆ ನನಗೆ ಸುಮಾರು ಒಂದು ತಿಂಗಳ ಕಾಲಾವಕಾಶ ಕೊಡಿ, ಇದಕ್ಕೆ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ, ಕಾನೂನು ಸಲಹೆಗಳನ್ನು ಕೂಡ ಪಡೆದುಕೊಳ್ಳಬೇಕಾಗಿದೆ ಇದಕ್ಕೆ Supreme Court ಅಡ್ಡಿ

ಬರುವುದಿಲ್ಲ Supreme Court ನವರು ಏನು ಆದೇಶ ಹೊರಡಿಸಿದ್ದಾರೆ ಯಾರು ಸತತವಾಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ ಅವರನ್ನು ಖಾಯಂಗೊಳಿಸಿ ಎಂದು ಹೇಳಿದ್ದಾರೆ ಬೇರೆಯವರನ್ನು ಖಾಯಂಗೊಳಿಸಬೇಡಿ ಎಂದು ಏನೂ ಅದರಲ್ಲಿ ಹೇಳಲಿಲ್ಲ ಆದ್ದರಿಂದ ನಾನು ಜಿಲ್ಲಾಧಿಕಾರಿಗಳ ಮುಖೇನ ಅವರ ಸರ್ವೀಸ್ ರಿಜಿಸ್ಟರ್ ಮಾಡಿಸಿ, ಅಂತಹವರನ್ನು ಖಾಯಂಗೊಳಿಸುವುದಕ್ಕೆ ಈಗಾಗಲೇ ಆದೇಶವನ್ನು ಹೊರಡಿಸಲಾಗಿದೆ ಉಳಿದಂತಹ ಸುಮಾರು 4,000 ದಿಂದ 5,000 ನೌಕರರು ಏನಿದ್ದಾರೆ, ಇದು ವೇಕೆನ್ಸಿ ಇದೆ, ಇದಕ್ಕೆ ಒಂದೆರಡು ತಿಂಗಳುಗಳ ಕಾಲಾವಕಾಶ ಕೊಡಿ ಎಂದು ಕೇಳಿಕೊಂಡಿದ್ದೇನೆ ತಾವುಗಳೆಲ್ಲ ಹಣಕಾಸು ಸಚಿವರಾಗಿ ಮತ್ತು ಮಂತ್ರಿಗಳಾಗಿ ಸೇವೆ ಸಲ್ಲಿಸಿದವರು ಒಂದು ಉಪ ಸಮಿತಿ ಇದೆ

ಶ್ರೀ ಎಸ್ ಸಿದ್ಧರಾಮಯ್ಯ –ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರಿಗೆ ಮಾನ್ಯ ಲೋಕೋಪಯೋಗಿ ಸಚಿವರ ಅಧ್ಯಕ್ಷತೆಯಲ್ಲಿ ಸಬ್ ಕಮಿಟಿ ಇದೆ, ಅದು ಬೇರೆ ಇದನ್ನು ಅದರ ಜೊತೆಗೆ ತಾಳೆ ಮಾಡುವುದಕ್ಕೆ ಹೋಗಬೇಡಿ You bring a separate Cabinet note from your department ನಿಮ್ಮ ಇಲಾಖೆಯ ಕಾರ್ಯದರ್ಶಿಯವರಿಗೆ ಹೇಳಿ, ಒಂದು ನೋಟ್ ತೆಗೆದುಕೊಂಡು ಬಂದು ಅರ್ಥ ಸಚಿವರಿಗೆ ಹೇಳಿ ಒಂದಷ್ಟು ಹಣ ಖರ್ಚಾಗುತ್ತದೆ ಅಷ್ಟೆ ಅದು ಮಾಡಿ ಬಿಟ್ಟರೆ ಕಾನೂನಿನ ಏನೂ ತೊಡಕು ಬರುವುದಿಲ್ಲ ಅವರೆಲ್ಲರೂ 4,000 ದಿಂದ 5,000 ಜನ ಇದ್ದಾರೆ, that is a separate issue ಬೇರೆ ಬೇರೆ ಇಲಾಖೆಗಳಲ್ಲಿರತಕ್ಕಂತಹ ದಿನಗೂಲಿ ನೌಕರರ ಬಗ್ಗೆ ಸರ್ಕಾರ ತೀರ್ಮಾನ ಮಾಡುತ್ತದೆ ಇವರು ಮಾಡುವ ಕೆಲಸವನ್ನು ನೀವು ನೋಡಬೇಕು ಕಸ ಹೊಡೆಯುವುದು, ಕಟ್ಟಿಕೊಂಡಿರತಕ್ಕಂತಹ ಮೋರಿ ಒಳಗೆ ವಾಸನೆ ಇರುತ್ತದೆ, ಅದರೊಳಗಡೆ ಎಲ್ಲ ನುಗ್ಗಬೇಕು ಮನೆಗಳಿಂದ ಕಸ ತಂದು ಹಾಕುತ್ತಾರೆ, ಎಂಜಲು ಎಲೆಗಳನ್ನು ತಂದು ಹಾಕುತ್ತಾರೆ ಎಲೆಗಳೆಲ್ಲಾ ವಾಸನೆ ಹೊಡೆಯುತ್ತಿರುತ್ತದೆ ಆ ಕೆಲಸವನ್ನು ಬೇರೆಯವರು ಮಾಡುತ್ತಾರಾ ? ಅವರಿಗೆ ಬೇರೆಯವರ ಜೊತೆ ಕಂಪೇರ್ ಮಾಡುವುದಕ್ಕಾಗುತ್ತಾ ? ಅಲ್ಲಿ ಯಾರೂ ಬರುವುದಿಲ್ಲ ಒರುವ ಹಾಗಿದ್ದರೆ ಅಲ್ಲಿಯೂ ರಿಸರ್ವೇಷನ್ ಕೇಳುವರು ಇದಕ್ಕೆ ಕಾನೂನು ಸಚಿವರು ಒಪ್ಪಿಕೊಳ್ಳುತ್ತಾರೆ ಇದರ ಬಗ್ಗೆ ಎಲ್ಲರಿಗೂ ಕೂಡ ಸಹಾನುಭೂತಿ ಇದೆ ಯಾರು ಬೇಡವೆಂದು ಹೇಳುತ್ತಾರೆ ಆದುದರಿಂದ ರಾಜೇಂದ್ರನ್ ಹೇಳಿದಂತೆ ನೀವು ಧೈರ್ಯ ಮಾಡಿ, ಏಕೆ ನೀವು ಈ ರೀತಿ ಮಾಡುತ್ತೀರಿ ? ನಮ್ಮ ಜೊತೆ ಇದ್ದವರು ಈ ರೀತಿಯಾದರೆ ಹೇಗೆ ?

ಶ್ರೀ ಅಲಂಗೂರು ಶ್ರೀನಿವಾಸ್ – ಸಿದ್ದರಾಮಯ್ಯನವರೆ, ತಾವು ಹಣಕಾಸಿನ ಸಚಿವರಾಗಿದ್ದಾಗ ನೇರವಾಗಿ ಮಂತ್ರಿಯೇ ತಮ್ಮ ಅನುಮತಿ ಇಲ್ಲದೇ ಹೆಚ್ಚಾಗಿ ಘೋಷಣೆ ಮಾಡುವುದಕ್ಕೆ ಆಗುತ್ತಿತ್ತೆ ?

ಶ್ರೀ ಸಿದ್ದರಾಮಯ್ಯ:- ಹಣಕಾಸು ಸಚಿವರೇನು, ಈಗ ಇಡೀ ಸದನವೇ ನಿಮ್ಮ ಪರ ಇದೆಯಲ್ಲ ? ನೀವು ರೇವಣ್ಣನವರಿಗೆ ಹೇಳಿಬಿಟ್ಟರೆ ಸಾಕು, ಅವರು ನಿಮಗೆ ಅನುಮತಿ ಕೊಡುತ್ತಾರೆ ಇಲ್ಲಿ ಮಾನವೀಯತೆಯಿಂದ ನೋಡಬೇಕಾಗುತ್ತದೆ

ಶ್ರೀ ಹೆಚ್ ಡಿ ರೇವಣ್ಣ - ತಾವು ಹಿರಿಯ ಸದಸ್ಯರಾಗಿದ್ದೀರಿ ನನ್ನ ಖಾತೆಗೆ ಸಂಬಂಧಪಟ್ಟಂತೆ ಬಂದಿದ್ದರೆ ನಾನು ಹೇಳುತ್ತಿದ್ದೆ ಅಲಂಗೂರು ಶ್ರೀನಿವಾಸರವರ ಖಾತೆಗೆ ಸಂಬಂಧಪಟ್ಟಂತೆ ನಾನು ಹೇಗೆ ಹೇಳುವುದಕ್ಕಾಗುತ್ತದೆ ?

ಶ್ರೀ ಸಿದ್ದರಾಮಯ್ಯ -ಇದು ತಪ್ಪಿಸಿಕೊಳ್ಳುವುದಕ್ಕೆ ರೇವಣ್ಣನವರು ಹೇಳತಕ್ಕಂಥ ಉತ್ತರವಾಗಿದೆ ರೇವಣ್ಣನವರೆ ಹೇಳಿ ಬೇರೆ ವಿಷಯ ಬಂದಾಗ ನೀವು ಹೇಳುವುದಿಲ್ಲವೆ ?

(ಗೊಂದಲ)

ಶ್ರೀ ಎಂ ಪಿ ಪ್ರಕಾಶ್ - ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸಚಿವರು ಸಂಪೂರ್ಣವಾಗಿ ತಮ್ಮ ಮನಸ್ಸಿನಲ್ಲಿ ಇರುವುದನ್ನು ಹೇಳಿದ್ದಾರೆ

ಉಪಾಧ್ಯಕ್ಷರು -ನೀವು ಅಲ್ಲಿಂದ ಇಲ್ಲಿಗೆ ಸ್ವಲ್ಪ ಬೇಗ ಬಂದಾಗಲೇ ನೀವು ಒಪ್ಪಿಕೊಂಡು ಬಿಡುತ್ತೀರೇನೋ ಎಂದು ನಾನು ಅಂದುಕೊಂಡೆ

ಶ್ರೀ ಎಂ ಪಿ ಪ್ರಕಾಶ್ .- ಪಾಸಿಟಿವ್ ಆಗಿಯೇ ಇರತಕ್ಕಂಥದ್ದು ತಾವು ಹೇಳಿದಿರಿ ಆದರೆ ಆ ಪ್ರೊಸೀಜರ್ ಏನು ಮಾಡಬೇಕು ಎಂದು ಇದೆಯೋ ಅದನ್ನು ಮಾಡಬೇಕಾಗುತ್ತದೆ ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಫೈನಾನ್ಷಿಯಲ್ ಇಂಪ್ಲಿಕೇಶನ್ಸ್, ಮತ್ತೊಂದು, ಇವುಗಳನ್ನೆಲ್ಲಾ ನಾವು ನೋಡಬೇಕಾಗಿದೆ ಅದನ್ನು ಮಾಡಿಕೊಂಡು ಸಚಿವ ಸಂಪುಟ ಸಭೆಯ ಮುಂದೆ ತಂದು ಅದರ ಬಗ್ಗೆ ಇಡೀ ಸದನದ ಲಭಿಪ್ರಾಯವನ್ನು ಜಾರಿಗೊಳಿಸುವುದಕ್ಕೆ ಅವರು ಏನೆಲ್ಲಾ ಪ್ರಯತ್ನಗಳನ್ನು ಮಾಡಬೇಕೋ ಅದನ್ನು ಮಾಡುತ್ತಾರೆ

ಶ್ರೀ ಸಿದ್ದರಾಮಯ್ಯ - ಯಾವುದಾದರೂ ಇಲಾಖೆಯದ್ದನ್ನು ಡೀವಿಯೇಟ್ ಮಾಡಬೇಕಾಗಿದೆಯೆಂದರೆ ನಾವು ಒಪ್ಪಿಕೊಳ್ಳತ್ತೇವೆ ಮುನಿಸಿಪಾಲಿಟಿಯಲ್ಲಿ, ಬೇರೆ ಕಡೆ ಬೇಕಾದರೆ ಕಾರ್ಯಕ್ರಮ ಕಡಿಮೆ ಮಾಡಿ ಎಂದರೆ ಮಾಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ - ಮಾನ್ಯ ಉಪಾಧ್ಯಕ್ಷರೆ, ಈಗ ಅವರಿಗೆ ಎಕ್ಸ್‌ಟ್ರಾ ಬರ್ಡನ್ ಬರತಕ್ಕಂಥದ್ದು ಏನಿಲ್ಲ ಮುನಿಸಿಪಾಲಿಟಿಯವರು, ಕಾರ್ಪೋರೇಶನ್‌ದವರು, ಇವರುಗಳ ಹತ್ತಿರ ಡೆಫಿನೈಟ್ ವೇಕೆನ್ಸಿ ಇದೆ ಆ ವೇಕೆನ್ಸಿ ಎಗೆನೆಸ್ಟ್ ಅಪಾಯಿಂಟ್ ಮಾಡಿಕೊಂಡಿದ್ದರು ಆದುದರಿಂದ ಎಕ್ಸಿಸ್ಟಿಂಗ್ ವೇಕೆನ್ಸಿ ಎಗೆನೆಸ್ಟ್ ಅಪಾಯಿಂಟ್ ಮಾಡಿಕೊಂಡಿದ್ದೀರಿ ಅದಕ್ಕಾಗಿ ಅಂತಹ ಭಾರ ನಿಮಗೆ ಬೀಳುವುದಿಲ್ಲ ತಾವು ಹೊಸ ಪೋಸ್ಟ್ ಕ್ರಿಯೇಟ್ ಮಾಡುವುದರ ಬಗ್ಗೆ ಯೋಚನೆ ಮಾಡಬೇಕು ಏಕೆಂದರೆ ಕೆಲವು ಕಡೆ ಏರಿಯಾ ಎಕ್ಸ್‌ಟೆಂಡ್ ಆಗಿದೆ

ಪಾಪ್ಯುಲೇಶನ್ ಜಾಸ್ತಿ ಆಗಿದೆ, ಅದನ್ನು ಬೇಕಾದರೆ ತಾವು ಪ್ರಾವಿಶನ್ ಮಾಡಿಕೊಂಡು ಮಾಡಬಹುದು ಅದಕ್ಕಾಗಿ ಅಂಥ ತೊಂದರೆ ಏನೂ ಇಲ್ಲ ಶ್ರೀನಿವಾಸ್‌ರವರೆ, ನಿಮ್ಮ ಬೆಂಬಲಕ್ಕೆ ಪ್ರಕಾಶ್‌ರವರು ಇದ್ದಾರೆ ರೇವಣ್ಣನವರು ಇದ್ದಾರೆ ಏಕೆಂದರ ಎಲ್ಲಾ ಫೈಲ್ ಅವರ ಮೂಲಕವೇ ಹೋಗಬೇಕು ಆದುದರಿಂದ ಡೆಫಿನೈಟ್ ಆಗಿ' ಅವರು ನಿಮ್ಮ ಜೊತೆಯಲ್ಲಿ ಇದ್ದಾರೆ ಆದುದರಿಂದ ಫೈಲ್ ತರಿಸಿ ಮಾಡಿಬಿಡಿ ನಾವೆಲ್ಲರೂ ಎಂದೂ ಕೇಳುವುದೇ ಇಲ್ಲ

ಶ್ರೀ ಅಂಜನಮೂರ್ತಿ – ಮಾನ್ಯ ಉಪಾಧ್ಯಕ್ಷರೆ, ಸರ್ಕಾರಕ್ಕೆ ಏನಾದರೂ ಹಣದ ತೊಂದರೆ ಇದ್ದರೆ ಸುಲಭವಾದ ಮಾರ್ಗವಿದೆ

ಉಪಾಧ್ಯಕ್ಷರು – ಶ್ರೀನಿವಾಸ್‌ರವರೆ, ನಿಮಗೇನಾದರೂ ದುಡ್ಡಿನ ತೊಂದರೆ ಇದ್ದರೆ ಅವರು ಕೊಡುತ್ತಾರಂತೆ

ಶ್ರೀ ಅಲಂಗೂರು ಶ್ರೀನಿವಾಸ್ – ಅವರನ್ನು ಖಾಯಂಗೊಳಿಸುವ ಬಗ್ಗೆ ಎರಡನೆಯ ಮಾತೇ ಇಲ್ಲ ಆದರೆ ನನಗೆ ಸ್ವಲ್ಪ ಕಾಲಾವಕಾಶ ಮಾಡಿಕೊಡಿ ನಿನ್ನೆನೂ ನಾನು ಅವರಿಗೆ ಪ್ರಾಮಿಸ್ ಮಾಡಿ ಹೇಳಿದ್ದೇನೆ ಅವರು ಒಂದು ತಿಂಗಳ ಕಾಲ ಮುಷ್ಕರವನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಲಿ ಈಗ 5ನೇ ವೇತನ ಆಯೋಗದ್ದು ಇತ್ತು ಅದರ ಬಗ್ಗೆ ಕುಳಿತು ಮಾಡಿಸತಕ್ಕಂಥ

ಶ್ರೀ ಸಿದ್ದರಾಮಯ್ಯ – ನೋಡಿ ನೀವು ಈ ತರಹ ಹೇಳಬೇಡಿ ನಾವು ಅವರನ್ನು ಖಾಯಂ ಮಾಡುತ್ತೇವೆ ಎಂದು ಹೇಳಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಸಚಿವರೆ, ನೀವು ಸುತ್ತಿ ಬಳಸಿ ಮಾತನಾಡುವುದು ಬೇಡ ನೇರವಾಗಿ ಮಾತನಾಡಿ ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿ

(ಅ) ಕೇಂದ್ರ ಸರ್ಕಾರದ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ 1992 ರ ಪ್ರಕಾರ ಪ್ರತಿ ದಿನ 10000 ಲೀಟರ್‌ಗಳಿಗಿಂತಲೂ ಹೆಚ್ಚು ಹಾಲನ್ನು ಸಂಗ್ರಹಿಸುವ ಪರಿಷ್ಕರಿಸುವ ಡೈರಿ ಘಟಕಗಳಿಗೆ ಪರವಾನಗಿಯನ್ನು ನಿಯಮದಡಿ ನೀಡಲಾಗುತ್ತಿದೆ ಆದರೆ ಈ ಖಾಸಗಿ ಡೈರಿ ಘಟಕಗಳನ್ನು ಸ್ಥಾಪಿಸಲು ಅವುಗಳಿಗೆ ಸರ್ಕಾರ/ಕೆ ಎಂ ಎಫ್ ಯಾವುದೇ ರೀತಿಯ ಪ್ರೋತ್ಸಾಹ ಧನ ಸೌಲಭ್ಯಗಳನ್ನು ಒದಗಿಸುತ್ತಿಲ್ಲ

(ಆ) ಯಾವುದೇ ಪ್ರೋತ್ಸಾಹ ಧನ ಸೌಲಭ್ಯಗಳನ್ನು ನೀಡುತ್ತಿಲ್ಲವಾದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ ಆದರೆ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶ 1992ರ ಪ್ರಕಾರ ನಿಯಮದಡಿ ಪರವಾನಗಿ ಪಡೆದ ಡೈರಿ ಘಟಕಗಳು ಗುಣಮಟ್ಟದ ಹಾಲನ್ನು ಸಂಗ್ರಹಿಸಿ ಸಂಸ್ಕರಿಸಿ ಮಾರಾಟ ಮಾಡಲು ಅವಕಾಶವಿದ್ದು ಕಳಪೆ ಗುಣಮಟ್ಟದ ಅಥವಾ ಕಲಬೆರಕೆ ಹಾಲನ್ನು ಸರಬರಾಜು/ ಮಾರಾಟ ಮಾಡಿದ್ದಲ್ಲಿ ಆಹಾರ ಕಲಬೆರಕೆ ನಿಯಂತ್ರಣ ಕಾಯ್ದೆ 1954ರಡಿ ಮೊಕದ್ದಮೆ ಹೂಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡಲು ಅವಕಾಶವಿರುತ್ತದೆ

748 (822) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) –

ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಹನಿ ನೀರಾವರಿ ಪದ್ದತಿಯನ್ನು ಅಳವಡಿಸಲು ಸರ್ಕಾರದಿಂದ ನೀಡಿದ ಸಹಾಯಧನ ಎಷ್ಟು, ಎಷ್ಟು ಪ್ರಮಾಣದಲ್ಲಿ ಸಹಾಯಧನವನ್ನು ನೀಡಲು ನೀತಿ ರೂಪಿಸಲಾಗಿದೆ

(ಆ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಹನಿ ನೀರಾವರಿ ಪದ್ದತಿಯನ್ನು ಅಳವಡಿಸಿಕೊಂಡು ಸಹಾಯ ಧನವನ್ನು ಕೋರಿರುವ ರೈತರ ಸಂಖ್ಯೆ ಎಷ್ಟು ಹಾಗೂ ಒಟ್ಟು ಮೊತ್ತ ಎಷ್ಟು?

(ಇ) ಈ ಪೈಕಿ ಇಲ್ಲಿಯವರೆವಿಗೂ ಬಿಡುಗಡೆಯಾದ ಹಣ ಎಷ್ಟು, ಬಾಕಿ ಇರುವ ಸಹಾಯಧನ ಎಷ್ಟು?

ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕೆ ಸಚಿವರು) –

(ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಎಂದರೆ 2004–05 ರಿಂದ 2006–07 ರವರೆಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಲು ಸರ್ಕಾರದಿಂದ ನೀಡಿದ ಒಟ್ಟು ಸಹಾಯಧನ ರೂ 91 ಕೋಟಿಗಳು, ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಶೇ 100 ರಷ್ಟು ಹಾಗೂ ಇತರೆ ಜಿಲ್ಲೆಗಳಿಗೆ ಶೇ 75ರಷ್ಟು ಸಹಾಯಧನವನ್ನು ನೀಡಲು ನೀತಿ ರೂಪಿಸಲಾಗಿದೆ

(ಆ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಸಹಾಯಧನ ಕೋರಿರುವ ಒಟ್ಟು ರೈತರ ಸಂಖ್ಯೆ 319 ಹಾಗೂ ಮೊತ್ತ ರೂ 114 80 ಲಕ್ಷಗಳು

(ಇ) ಇಲ್ಲಿಯವರೆಗೂ ರೂ 47 28 ಲಕ್ಷಗಳನ್ನು ಬಿಡುಗಡೆ ಮಾಡಿ ವಿನಿಯೋಗಿಸಲಾಗಿದೆ ಬಾಕಿ ಇರುವ ಸಹಾಯಧನ ರೂ 67 52 ಲಕ್ಷ

749 (1214) **ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) –** ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು, ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು (ವಿವರ ನೀಡುವುದು)

(ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ,

(ಇ) ಇಲ್ಲದಿದ್ದಲ್ಲಿ ಕಾರಣಗಳೇನು ,

(ಈ) ಖಾಲಿ ಇರುವ ಹುದ್ದೆಗಳ ನೇಮಕಾತಿಯ ವಿಳಂಬದಿಂದ ಸಾರ್ವಜನಿಕರಿಗೆ ಹಾಗೂ ರೈತರಿಗೆ ತೊಂದರೆಯಾಗುತ್ತಿರುವುದು ನಿಜವೇ ,

(ಉ) ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು?

ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕೆ ಸಚಿವರು) –

(ಅ) ತೋಟಗಾರಿಕೆ ಇಲಾಖೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಖಾಲಿ ಇರುವ ಹುದ್ದೆ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರ ಸಂಖ್ಯೆ	ಮಂಜೂರಾದ ಹುದ್ದೆಗಳ ಸಂಖ್ಯೆ ಹಾಗೂ ಪದನಾಮ	ಖಾಲಿ ಇಡುವ ಹುದ್ದೆಗಳ ಸಂಖ್ಯೆ	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ
1	ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು –01 ಹುದ್ದೆ	–	01
2	ಸಹಾಯಕ ತೋಟಗಾರಿಕೆ – ನಿರ್ದೇಶಕರು –01 ಹುದ್ದೆ	–	01
3	ಸಹಾಯಕ ತೋಟಗಾರಿಕೆ ಅಧಿಕಾರಿ –04 ಹುದ್ದೆಗಳು	03	01
4	ತೋಟಗಾರಿಕೆ ಸಹಾಯಕ –04 ಹುದ್ದೆಗಳು	01	03
5	ತೋಟಗಾರರು –04 ಹುದ್ದೆಗಳು	01	03
6	ದ್ವಿತೀಯ ದರ್ಜೆ ಸಹಾಯಕ –01 ಹುದ್ದೆ	–	01
	ಒಟ್ಟು –15 ಹುದ್ದೆಗಳು	05	10

(ಆ) ಸರ್ಕಾರಿ ಆದೇಶ ಸಂಖ್ಯೆ/ಕೃತೋಇ 139/ತೋಸೇಪ 2006 ದಿನಾಂಕ 24–01–07 ರನ್ವಯ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕರು ಮತ್ತು ತೋಟಗಾರರ ಹುದ್ದೆಗಳನ್ನು (ಪುತ್ತೂರು ತಾಲ್ಲೂಕಿನ ಸಹಾಯಕ ತೋಟಗಾರಿಕೆ ಅಧಿಕಾರಿ, ತೋಟಗಾರಿಕೆ ಸಹಾಯಕ ಮತ್ತು ತೋಟಗಾರರ ಹುದ್ದೆಗಳು ಸೇರಿದಂತೆ) 6 (ಆರು) ತಿಂಗಳ ಅವಧಿಗೆ ಅಥವಾ ಈ ಹುದ್ದೆಗಳಿಗೆ ನೇರ ನೇಮಕಾತಿ ಆಗುವ ತನಕ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತು ತೋಟಗಾರಿಕೆ ಉಪ ನಿರ್ದೇಶಕರು ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ ಸದ್ಯದಲ್ಲಿಯೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ

ಮುಂದುವರೆದು, ಇಲಾಖೆಯಲ್ಲಿ ಖಾಲಿ ಇರುವ 53 ಸತೋನಿ ಮತ್ತು 589 ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವು

ಅಧಿಸೂಚನೆ ಹೊರಡಿಸಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಂದರ್ಶನಗಳನ್ನು ನಡೆಸಲಾಗುತ್ತಿದೆ

(ಇ) ಮೇಲೆ ತಿಳಿಸಿದಂತೆ ಈಗಾಗಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ

(ಈ) ಖಾಲಿ ಹುದ್ದೆಗಳ ಭರ್ತಿಗೆ ಈಗಾಗಲೇ ಕ್ರಮಕೈಗೊಳ್ಳಲಾಗಿದೆ ಮುಂದುವರೆದು ಹಾಲಿ ಲಭ್ಯವಿರುವ ಅಧಿಕಾರಿ/ಸಿಬ್ಬಂದಿ ಸೇವೆ ಉಪಯೋಗಿಸಿಕೊಂಡು ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಇಲಾಖಾ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ

(ಉ) ಉದ್ಭವಿಸುವುದಿಲ್ಲ

750 (1215) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) – ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಕೃಷಿ ಇಲಾಖೆಯಿಂದ ರೈತರಿಗೆ ವಿತರಿಸುವ ಡೀಸಲ್ ಪಂಪ್‌ಗಳು, ಪ್ರಯೋಜನವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ಬಂದಿದ್ದಲ್ಲಿ, ಇದಕ್ಕೆ ಬದಲಿ ವ್ಯವಸ್ಥೆ ಮಾಡಲಾಗುವುದೇ, ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು),

(ಇ) ರೈತರ ಕೆರೆಗಳಲ್ಲಿ ನೀರು ಇಲ್ಲದೆ ಡೀಸೆಲ್ ಪಂಪು ಪ್ರಯೋಜನಕ್ಕೆ ಬರದಿರುವುದು ನಿಜವಲ್ಲವೇ,

(ಈ) 2006–07ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಕೃಷಿ ಇಲಾಖೆಯಿಂದ ವಿತರಿಸಲಾದ ಡೀಸೆಲ್ ಪಂಪು ಸೆಟ್‌ಗಳೆಷ್ಟು, ಇದರ ಪ್ರಯೋಜನ ಪಡೆದ ರೈತರ ಸಂಖ್ಯೆ ಎಷ್ಟು (ವಿವರ ಒದಗಿಸುವುದು),

(ಉ) 2007–08ನೇ ಸಾಲಿನಲ್ಲಿ ಡೀಸೆಲ್ ಪಂಪು ಬದಲು ವಿದ್ಯುತ್ ಪಂಪು ನೀಡಲು ವ್ಯವಸ್ಥೆ ಮಾಡಲಾಗುವುದೇ, ಹಾಗಿದ್ದಲ್ಲಿ, ಇದಕ್ಕೆ ನೀಡುವ ಸಹಾಯಧನ ಎಷ್ಟು?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಇಲ್ಲಾ

(ಆ) ಉದ್ಭವಿಸುವುದಿಲ್ಲ

(ಇ) ಇಂತಹ ಯಾವುದೇ ಪ್ರಕರಣಗಳು ಕೃಷಿ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ

(ಈ) ಪುತ್ತೂರು ತಾಲ್ಲೂಕಿನ ನಾಲ್ಕು ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದು ಅದರ ವಿವರಗಳನ್ನು ಕೆಳಗೆ ನೀಡಲಾಗಿದೆ

1 ಶ್ರೀ ಕೃಷ್ಣ ಪ್ರಸಾದ್ ಬಿನ್ ಈಶ್ವರ್ ಭಟ್ ಪುಳಿಕುಕ್ಕು, ಕೋಡಿಂಬಾಳ ಗ್ರಾಮ

2 ಶ್ರೀ ಹಂಝು ಬಿನ್ ಇಬ್ರಾಹಿಂ ಕುದ್ಕುಳಿ ಮನೆ ಕೊಳ್ತಿಗೆ ಗ್ರಾಮ

3 ಶ್ರೀ ಕೂಸಪ್ಪಗೌಡ ಬಿನ್ ದುಗ್ಗಪ್ಪಗೌಡ, ಕೊಳ್ತಿಗೆ ಗ್ರಾಮ

4 ಶ್ರೀಮತಿ ಶೀಲಾವತಿ ಕೋಂ ನಾರಾಯಣ ಮೇರ್ಲ ಬೈಲಾಡಿಮನೆ ಇರ್ದೇ ಗ್ರಾಮ

(ಉ) ಇಲ್ಲ

751 (1205) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಯಶಸ್ವಿನಿ ಯೋಜನೆ ಯಾವಾಗ ಪ್ರಾರಂಭಿಸಲಾಗಿದೆ

(ಆ) ಹಾಲಿ ಈ ಯೋಜನೆಯ ಫಲಾನುಭವಿಗಳೆಷ್ಟು?

(ಇ) ಈ ಯೋಜನೆಯಡಿ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಅವಕಾಶ ನೀಡಲಾಗಿದೆ ಈ ಯೋಜನೆಯ ಲಾಭ ಪಡೆದವರ ಸಂಖ್ಯೆ ಎಷ್ಟು?

(ಈ) ಈ ಯೋಜನೆಯ ಫಲಾನುಭವಿಗಳನ್ನು ಹೆಚ್ಚಿಸಿ, ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಅವಕಾಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು 2003–04ನೇ ಸಾಲಿನಿಂದ ಪ್ರಾರಂಭಿಸಲಾಗಿದೆ

(ಆ) ಹಾಲಿ ಯೋಜನೆಯಲ್ಲಿ ನೋಂದಾಯಿಸಿದ ವರ್ಷಾವಾರು ಫಲಾನುಭವಿಗಳ ಸಂಖ್ಯೆ ಈ ಕೆಳಗೆ ನಮೂದಿಸಿದಂತೆ ಇರುತ್ತದೆ

ವರ್ಷ	ನೋಂದಾಯಿಸಿದ ಫಲಾನುಭವಿಗಳ ಸಂಖ್ಯೆ (ಲಕ್ಷಗಳಲ್ಲಿ)
2003-04	16 01

2004-05	20 01
2005-06	14 73
2006-07	18 54
2005-06	22 11

(ಇ) ಯೋಜನೆಯಡಿ ಮೂಳೆ, ನೇತ್ರ, ಉದರ, ಕಿವಿ, ಮೂಗು, ಗಂಟಲು, ನರ, ಮೂತ್ರಪಿಂಡ ಮತ್ತು ಹೃದಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಗುರುತಿಸಿದ 1600 ಶಸ್ತ್ರಚಿಕಿತ್ಸೆಗಳು ಸಾಮಾನ್ಯ ಹೆರಿಗೆ, ಆ್ಯಂಜಿಯೋಪ್ಲಾಸ್ಟಿ ಪ್ರೊಸೀಜರ್ ಮತ್ತು ತುರ್ತು ವೈದ್ಯಕೀಯ ಚಿಕಿತ್ಸೆಗಳನ್ನು ಪಡೆಯಲು ಅವಕಾಶ ನೀಡಲಾಗಿದೆ

ಈ ಯೋಜನೆಯಲ್ಲಿ 2003-04 ನೇ ಸಾಲಿನಿಂದ 2007-08ನೇ ಸಾಲಿನವರೆಗೆ ದಿನಾಂಕ 30-06-2007ಕ್ಕೆ ಇರುವಂತೆ 4,34,790 ಫಲಾನುಭವಿಗಳು ಯೋಜನೆಯ ಲಾಭ ಪಡೆದಿದ್ದು ಅವರ ಪೈಕಿ 84,740 ಫಲಾನುಭವಿಗಳು ನಗದು ರಹಿತ ಶಸ್ತ್ರಚಿಕಿತ್ಸಾ ಸೌಲಭ್ಯಗಳನ್ನು ಪಡೆದಿದ್ದು, 3,50,050 ಫಲಾನುಭವಿಗಳು ಉಚಿತ ಹೊರರೋಗ ಚಿಕಿತ್ಸಾ ಸೌಲಭ್ಯಗಳನ್ನು ಪಡೆದಿರುತ್ತಾರೆ

(ಈ) ಈ ಯೋಜನೆಯ ಫಲಾನುಭವಿಗಳನ್ನು ಹೆಚ್ಚಿಸಿ, ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಅವಕಾಶ ನೀಡಲು ಸರ್ಕಾರ

(1) ಫಲಾನುಭವಿಗಳಲ್ಲಿ ಯೋಜನೆಯ ಬಗ್ಗೆ ಅರಿವು ಮೂಡಿಸಲು ಅನೇಕ ಪ್ರಚಾರ ಕಾರ್ಯಗಳನ್ನು ತೆಗೆದುಕೊಂಡಿದೆ

(2) ಹೆಚ್ಚಿನ ಪ್ರಮಾಣದಲ್ಲಿ ಫಲಾನುಭವಿಗಳನ್ನು ನೋಂದಾಯಿಸಿದಲ್ಲಿ ಸಂದಾಯ ಮಾಡಬೇಕಾದ ವಂತಿಗೆಯಲ್ಲಿ ರಿಯಾಯಿತಿ ನೀಡಲಾಗಿದೆ

(3) ಹೆಚ್ಚಿನ ಪ್ರಮಾಣದಲ್ಲಿ ಫಲಾನುಭವಿಗಳನ್ನು ನೋಂದಾಯಿಸಲು ಸಹಕಾರ ಸಂಘಗಳಿಗೆ ಪ್ರೋತ್ಸಾಹ ಧನ ನೀಡಲು ಅವಕಾಶ ಕಲ್ಪಿಸಿದೆ

(4) 300 ಕ್ಕೂ ಹೆಚ್ಚು ಆಸ್ಪತ್ರೆಗಳನ್ನು ಯೋಜನೆಯಡಿ ಗುರುತಿಸಲಾಗಿದೆ ಅವುಗಳ ಪೈಕಿ 87 ಆಸ್ಪತ್ರೆಗಳು ಗ್ರಾಮೀಣ ಪ್ರದೇಶದಲ್ಲಿವೆ

(5) ಕುಟುಂಬದ ವ್ಯಾಖ್ಯೆಯನ್ನು ಬದಲಾಯಿಸಿ ಹಿಂದೂ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರಿಗೆ ಯೋಜನೆಯ ಸೌಲಭ್ಯ ಒದಗಿಸಲು ಅವಕಾಶ ಕಲ್ಪಿಸಲಾಗಿದೆ

(6)ಸಹಕಾರ ಸಂಘ/ಸಹಕಾರ ಬ್ಯಾಂಕಿನೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಪ್ರದೇಶದ ಸ್ತ್ರೀ ಶಕ್ತಿ ಗುಂಪು/ಸ್ವಸಹಾಯ ಗುಂಪಿನ ಸದಸ್ಯರಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ

ಇನ್ನು ಮುಂದೆ ಕೂಡ ಈ ಯೋಜನೆಯ ಫಲಾನುಭವಿಗಳನ್ನು ಹೆಚ್ಚಿಸಿ ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಅವಕಾಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದು

754 (1208) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಾದ್ಯಂತ ಇರುವ ಹಾಪ್‌ಕಾಮ್ಸ್ ಮಳಿಗೆಗಳೆಷ್ಟು, (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಮಳಿಗೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು, ಸದರಿ ನೌಕರರಲ್ಲಿ ಖಾಯಂ ಹಾಗೂ ಹಂಗಾಮಿಯಾಗಿ ಇರುವ ನೌಕರರೆಷ್ಟು, (ವಿವರ ನೀಡುವುದು)

(ಇ) ಹಂಗಾಮಿ ನೌಕರರುಗಳ ಪೈಕಿ ಯಾವ ಯಾವ ದರ್ಜೆಯ ನೌಕರರು ಎಷ್ಟೆಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ, (ವಿವರ ನೀಡುವುದು)

(ಈ) ಹಂಗಾಮಿ ನೌಕರರುಗಳನ್ನು ಖಾಯಂಗೊಳಿಸಲಾಗುವುದೇ ?

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) ರಾಜ್ಯದಲ್ಲಿ ಒಟ್ಟು 502 ಹಾಪ್‌ಕಾಮ್ಸ್ ಮಳಿಗೆಗಳಿವೆ ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ

(ಆ) ಒಟ್ಟು 739 ನೌಕರರು ಇದ್ದು, ಖಾಯಂ ನೌಕರರು 566, ಹಂಗಾಮಿ ನೌಕರರು 173 ಇರುತ್ತಾರೆ, ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ

(ಇ) ವಿವರವಾದ ಮಾಹಿತಿಯನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ

(ಈ) ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು, 1960 ರ ನಿಯಮ 17 (1) ರನ್ವಯ ಆಯಾ ಸಹಕಾರಿ ಸಂಘಗಳು ಕ್ರಮ ಕೈಗೊಳ್ಳಲಾಗುತ್ತವೆ

755 (1209) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಾದ್ಯಂತ "ರಾಷ್ಟ್ರೀಯ ತೋಟಗಾರಿಕೆ ಮಿಷನ್" ಎಲ್ಲೆಲ್ಲಿ

ಅನುಬಂಧ-1

ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಳಿಗೆಗಳು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಜಿಲ್ಲಾವಾರು ವಿವರಗಳು

ಕ್ರ ಸಂ	ಜಿಲ್ಲಾ ಹಾಪ್‌ಕಾಮ್ಸ್	ಮಳಿಗೆಗಳ ಸಂಖ್ಯೆ	ನೌಕರರ ಸಂಖ್ಯೆ		
			ಖಾಯಂ	ಹಂಗಾಮಿ	ಒಟ್ಟು
1	ಬೆಂಗಳೂರು ಹಾಪ್‌ಕಾಮ್ಸ್	272	419	2	421
2	ಬೆಂಗಳೂರು (ಗ್ರಾ)	13	–	–	–
3	ಮಡಿಕೇರಿ	1	0	2	2
4	ಮಂಡ್ಯ	25	10	57	57
5	ದಕ್ಷಿಣ ಕನ್ನಡ	17	19	5	24
6	ಹಾಸನ	6	9	9	18
7	ಮೈಸೂರು	41	89	60	149
8	ಬೀದರ್	1	0	1	1
9	ರಾಯಚೂರು	1	0	3	3
10	ಬೆಳಗಾಂ	15	2	1	3
11	ಗುಲ್ಬರ್ಗಾ	11	0	7	7
12	ಹುಬ್ಬಳ್ಳಿ	4	2	1	3
13	ತುಮಕೂರು	4	3	5	8
14	ಚಿತ್ರದುರ್ಗ	4	1	0	1
15	ಬಿಜಾಪುರ	6	0	2	2
16	ಬಳ್ಳಾರಿ	2	0	2	2
17	ಉತ್ತರ ಕನ್ನಡ	14	7	13	20
18	ಶಿವಮೊಗ್ಗ*	11	5	1	6
19	ಧಾರವಾಡ	6	0	2	2
20	ಚಿಕ್ಕಮಗಳೂರು	8	–	–	–
21	ಕೋಲಾರ	40	–	–	–
	ಒಟ್ಟು	**502**	**566**	**173**	**739**

ಅನುಬಂಧ-2

ವಿವಿಧ ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಹಂಗಾಮಿ ನೌಕರರ ದರ್ಜೆ ಮತ್ತು ಕೆಲಸ ನಿರ್ವಹಿಸುತ್ತಿರುವ ಅವಧಿ

ಕ್ರ ಸಂ	ಜಿಲ್ಲಾ	ಹಂಗಾಮಿ ನೌಕರರ	ಹಂಗಾಮಿ ನೌಕರರ	ಕೆಲಸ ನಿರ್ವಹಿಸುತ್ತಿರುವ ಅವಧಿ
1	ಮಡಿಕೇರಿ	2	ಸಿ ದರ್ಜೆಯ ದಿನಗೂಲಿ ನೌಕರರು	10 ವರ್ಷಗಳಿಂದ
2	ಮಂಡ್ಯ	57	ಡಿ ದರ್ಜೆಯ ದಿನಗೂಲಿ ನೌಕರರು	10–15 ವರ್ಷಗಳಿಂದ
3	ದಕ್ಷಿಣ ಕನ್ನಡ	5	ದಿನಗೂಲಿ ನೌಕರರು	9 ವರ್ಷಗಳಿಂದ
4	ಹಾಸನ	9	ದಿನಗೂಲಿ ನೌಕರರು	16 ವರ್ಷಗಳಿಂದ
5	ಮೈಸೂರು	60	ಡಿ ದರ್ಜೆಯ ದಿನಗೂಲಿ ನೌಕರರು	16 ವರ್ಷಗಳಿಂದ
6	ಬೀದರ್	1	ಗುತ್ತಿಗೆ ಆಧಾರದ ಮೇಲೆ	5–6 ವರ್ಷಗಳಿಂದ
7	ರಾಯಚೂರು	3	ಡಿ ದರ್ಜೆಯ ದಿನಗೂಲಿ ನೌಕರರು	14 ವರ್ಷಗಳಿಂದ
8	ಬೆಳಗಾಂ	1	ಡಿ ದರ್ಜೆಯ ದಿನಗೂಲಿ ನೌಕರರು	4 ವರ್ಷಗಳಿಂದ
9	ಗುಲ್ಬರ್ಗಾ	7	ಸಿ ದರ್ಜೆಯ ದಿನಗೂಲಿ ನೌಕರರು ಡಿ ದರ್ಜೆಯ ದಿನಗೂಲಿ ನೌಕರರು	10 ವರ್ಷಗಳಿಂದ
10	ಹುಬ್ಬಳ್ಳಿ	1	ಡಿ ದರ್ಜೆಯ ದಿನಗೂಲಿ ನೌಕರರು	1 ವರ್ಷದಿಂದ
11	ತುಮಕೂರು	5	ಡಿ ದರ್ಜೆಯ ದಿನಗೂಲಿ ನೌಕರರು	12 ವರ್ಷಗಳಿಂದ
12	ಚಿತ್ರದುರ್ಗ	0	–	–
13	ಬಿಜಾಪುರ	2	ಸಿ ದರ್ಜೆಯ ದಿನಗೂಲಿ ನೌಕರರು–1 ಡಿ ದರ್ಜೆಯ ದಿನಗೂಲಿ ನೌಕರರು–1	1–5 ವರ್ಷಗಳಿಂದ 2–3 ವರ್ಷಗಳಿಂದ
14	ಬಳ್ಳಾರಿ	2	ಸಿ ದರ್ಜೆಯ ದಿನಗೂಲಿ ನೌಕರರು–1 ಡಿ ದರ್ಜೆಯ ದಿನಗೂಲಿ ನೌಕರರು–1	3 ವರ್ಷಗಳಿಂದ 2 ವರ್ಷಗಳಿಂದ
15	ಉತ್ತರ ಕನ್ನಡ	13	ಸಿ ದರ್ಜೆಯ ದಿನಗೂಲಿ ನೌಕರರು ಡಿ ದರ್ಜೆಯ ದಿನಗೂಲಿ ನೌಕರರು	6 ವರ್ಷಗಳಿಂದ 4 ವರ್ಷಗಳಿಂದ
16	ಶಿವಮೊಗ್ಗ*	1	ಡಿ ದರ್ಜೆಯ ದಿನಗೂಲಿ ನೌಕರರು	2–3 ವರ್ಷಗಳಿಂದ
17	ಧಾರವಾಡ	2	ಸಿ ದರ್ಜೆಯ ದಿನಗೂಲಿ ನೌಕರರು–1 ಡಿ ದರ್ಜೆಯ ದಿನಗೂಲಿ ನೌಕರರು–1	1 ವರ್ಷದಿಂದ 16 ವರ್ಷಗಳಿಂದ
18	ಬೆಂಗಳೂರು ಹಾಪ್‌ಕಾಮ್	2	ದಿನಗೂಲಿ ನೌಕರರು–2	8 ವರ್ಷಗಳಿಂದ
	ಒಟ್ಟು	173		

ಜಾರಿಗೊಳಿಸಲಾಗುತ್ತಿದೆ, ಎಂದಿನಿಂದ ಈ ಯೋಜನೆಯನ್ನು ಜಾರಿ ಗೊಳಿಸಲಾಗುವುದು ,

(ಆ) "ರಾಷ್ಟ್ರೀಯ ತೋಟಗಾರಿಕೆ ಮಿಷನ್" ಬಗ್ಗೆ ಸಂಕ್ಷಿಪ್ತ ವಿವರ ನೀಡುವುದು ?

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು ರಾಜ್ಯದ 17 ಜಿಲ್ಲೆಗಳಲ್ಲಿ ಎಂದರೆ, ಬೆಂಗಳೂರು (ಗ್ರಾಮಾಂತರ), ತುಮಕೂರು, ಮೈಸೂರು, ಕೋಲಾರ, ಚಿತ್ರದುರ್ಗ, ಬೆಳಗಾಂ, ಬಾಗಲುಕೋಟೆ, ಬಿಜಾಪುರ, ಕೊಡಗು, ಕೊಪ್ಪಳ, ಹಾಸನ, ಗುಲ್ಬರ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಗುತ್ತಿದೆ ಈ ಯೋಜನೆಯನ್ನು 2005–06 ರಿಂದ ಜಾರಿಗೊಳಿಸಲಾಗಿದೆ

(ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಅನುಬಂಧ

"ರಾಷ್ಟ್ರೀಯ ತೋಟಗಾರಿಕೆ ಮಿಷನ್" ಬಗ್ಗೆ ಸಂಕ್ಷಿಪ್ತ ವಿವರ

ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಹೊಸದಾಗಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯನ್ನು ಪ್ರಾರಂಭಿಸಿರುತ್ತದೆ ಈ ಯೋಜನೆಯು 7 ವರ್ಷಗಳ ಕಾಲ ಅನುಷ್ಠಾನದಲ್ಲಿರುತ್ತದೆ ಕೇಂದ್ರ ಸರ್ಕಾರದಿಂದ 2005–06 ಮತ್ತು 2006–07ನೇ ಸಾಲಿನಲ್ಲಿ 10ನೇ ಪಂಚವಾರ್ಷಿಕ ಯೋಜನೆಯಡಿ ಶೇ 100ರಷ್ಟು ಅನುದಾನವು ದೊರೆಯುತ್ತದೆ ಹಾಗೂ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರದ ಪಾಲು ಶೇ 85ಕ್ಕೆ ನಿಗದಿಯಾಗಿದ್ದು, ಉಳಿದ ಶೇ 15ರ ಭಾಗವನ್ನು ರಾಜ್ಯದಿಂದ ಒದಗಿಸಬೇಕಾಗಿರುತ್ತದೆ ಮಿಷನ್ ಕಾರ್ಯಕ್ರಮಗಳನ್ನು ಆಯಾ ಪ್ರದೇಶದ ವೈವಿಧ್ಯಮಯ ಭೂಹವಾಗುಣಗಳಿಗೆ ಅನುಗುಣವಾಗಿ ಪ್ರದೇಶ ಆಧಾರಿತ ಕಾರ್ಯತಂತ್ರಗಳ ಮೂಲಕ ತೋಟಗಾರಿಕೆಯನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವುದು ಮತ್ತು ತೋಟಗಾರಿಕೆ ಉತ್ಪಾದನೆಯ ಹೆಚ್ಚಳ, ಪೌಷ್ಠಿಕತೆ ಸಂರಕ್ಷಣೆ ಹಾಗೂ ರೈತ ಸಮುದಾಯದ ಆದಾಯ ಹೆಚ್ಚಿಸುವ ಉದ್ದೇಶ ಹೊಂದಿರುತ್ತದೆ ಕಾಂಪೋನೆಂಟ್‌ಗಳು ಇಂತಿವೆ

- ☐ ಈ ಯೋಜನೆಯಡಿ ಆಯ್ದ ಹಣ್ಣು, ಹೂವು, ತೋಟದ ಬೆಳೆ, ಸಾಂಬಾರು ಹಾಗೂ ಇನ್ನಿತರ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ
- ☐ ಮಳೆನೀರು ಕೊಯ್ಲು ಹಾಗೂ ಸಂಗ್ರಹಣೆ ಮತ್ತು ಜಲಾಭಿವೃದ್ಧಿಗೋಸ್ಕರ ಕೃಷಿಹೊಂಡಗಳು, ಸಮುದಾಯ ಕೆರೆಗಳ ನಿರ್ಮಾಣಕ್ಕೆ ಸಹಾಯಧನ
- ☐ ಪ್ರದೇಶ ವಿಸ್ತರಣೆಗೆ ಬೇಕಾಗುವ ಕಸಿ/ಸಸಿ/ಬೀಜ ಉತ್ಪಾದನೆಗೆ ನರ್ಸರಿಗಳ ಸ್ಥಾಪನೆ ಮತ್ತು ಅಭಿವೃದ್ಧಿ
- ☐ ವಾಣಿಜ್ಯ ಹೂ ಬೆಳೆಗಳ ರಕ್ಷಿತ ಬೇಸಾಯಕ್ಕೆ ಹಸಿರುಮನೆ ಹಾಗೂ

ಶೇಡ್‌ನೆಟ್‌ಗಳಿಗೆ ಪ್ರೋತ್ಸಾಹ

- ☐ ಬೆಳೆದ ಬೆಳೆಯು ಮಾರುಕಟ್ಟೆಗೆ ಸಾಗಿಸುವ ಮುಂಚಿತವಾಗಿ ಹಾಳಾಗದಂತೆ ನೋಡಿಕೊಳ್ಳುವುದಕ್ಕಾಗಿ ಕೊಯ್ಲು ಕೇಂದ್ರಗಳ ಸ್ಥಾಪನೆ ಹಾಗೂ ಒಣಗಿಸುವ ಮತ್ತು ಸಂರಕ್ಷಣಾ ಘಟಕಗಳ ನಿರ್ಮಾಣ
- ☐ ಸಗಟು ಮತ್ತು ಗ್ರಾಮಾಂತರ ಮಾರುಕಟ್ಟೆಗಳ ನಿರ್ಮಾಣ, ಅಭಿವೃದ್ಧಿ ಮತ್ತು ಪುನಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನ
- ☐ ಸುರಕ್ಷಿತ ಸಾಗಾಣಿಕೆಗೆ Refrigerated Van ಖರೀದಿ, ಶೈತ್ಯಾಗಾರ ಘಟಕ, ಶೀಥಲ ಗೃಹಗಳ ಸ್ಥಾಪನೆಗೆ ಸಹಾಯಧನ
- ☐ ಸಣ್ಣ ಮತ್ತು ದೊಡ್ಡ ಪ್ರಮಾಣದ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ
- ☐ ಸಾವಯುವ ತೋಟಗಾರಿಕೆ, ಎರೆಹುಳು ಗೊಬ್ಬರ, ಜೈವಿಕಗೊಬ್ಬರ ಮತ್ತು ಜೈವಿಕ ನಿಯಂತ್ರಕಗಳ ಉತ್ಪಾದನಾ ಘಟಕಗಳ ಅಭಿವೃದ್ಧಿ, ಸಮಗ್ರ ಕೀಟ ಹಾಗೂ ಪೋಷಕಾಂಶ ನಿರ್ವಹಣೆ ಇತ್ಯಾದಿ

ಈ ಯೋಜನೆಗೆ 2005-06 ನೇ ಸಾಲಿನ ಕಾರ್ಯಕ್ರಮಗಳಿಗೆ ಒಟ್ಟು 44 55 ಕೋಟಿ ರೂಗಳು ಬಿಡುಗಡೆಯಾಗಿದ್ದು, ಮೇ 2007ರ ಅಂತ್ಯಕ್ಕೆ ರೂ 41 97 ಕೋಟಿ ರೂಗಳ ಖರ್ಚು ಭರಿಸಲಾಗಿದೆ

ಈ ಯೋಜನೆಗೆ 2006-07 ನೇ ಸಾಲಿನ ಕಾರ್ಯಕ್ರಮಗಳಿಗೆ ಒಟ್ಟು 89 40 ಕೋಟಿ ರೂಗಳು ಬಿಡುಗಡೆಯಾಗಿದ್ದು, ಮೇ 2007ರ ಅಂತ್ಯಕ್ಕೆ ರೂ 29 54 ಕೋಟಿ ರೂಗಳ ಖರ್ಚು ಭರಿಸಲಾಗಿದೆ

756 (1221) ಶ್ರೀ ಶಿವರಾಮು ಬಿ (ಗಂಡಸಿ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯಕ್ಕೆ ವಿದರ್ಭ ಯೋಜನೆ (ಪ್ರಧಾನಿ ಪ್ಯಾಕೇಜ್) ಯಾವಾಗ ಮಂಜೂರಾತಿ ಮಾಡಲಾಯಿತು, ಇದಕ್ಕಾಗಿ ಮಂಜೂರಾದ ಒಟ್ಟು ಮೊತ್ತವೆಷ್ಟು (ಇಲಾಖಾವಾರು ಬಿಡುಗಡೆಯಾದ ಹಣದ ಮಾಹಿತಿ ನೀಡುವುದು),

(ಆ) ಯೋಜನೆಯ ಪೂರ್ಣ ಕ್ರಿಯಾ ಯೋಜನೆ ಮಂಜೂರಾತಿ ಪಡೆದಿದೆಯೇ (ಯೋಜನೆಗಳ ಇಲಾಖಾವಾರು ಹಂತದ ಮಾಹಿತಿ ನೀಡುವುದು),

(ಇ) ರೈತರ ಆತ್ಮಹತ್ಯೆಯನ್ನು ತಡೆಗಟ್ಟಲು ಮಂಜೂರಾಗಿರುವ ಯೋಜನೆಗಳಾವುವು,

(ಈ) ಯೋಜನೆ ಮಂಜೂರಾದ 6 ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಅಕ್ಟೋಬರ್ 2006ರಲ್ಲಿ ಮಂಜೂರಾಗಿದೆ ಇದಕ್ಕಾಗಿ ಇಲಾಖಾವಾರು ಮಂಜೂರಾದ ಹಾಗೂ ಈವರೆಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು

ಅನುಬಂಧ–1ರಲ್ಲಿ ನೀಡಲಾಗಿದೆ

(ಆ) ವಿವರಗಳನ್ನು ಅನುಬಂಧ–1 ರ ಷರಾ ಕಾಲಂನಲ್ಲಿ ನೀಡಲಾಗಿದೆ

(ಇ) ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳು ಇಂತಿವೆ

(ಅ) ಶೇ 4ರ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಸಾಲ ನೀಡುವುದು

(ಆ) ಶೇ 75ರ ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ವಿತರಿಸುವುದು

(ಇ) ಬೆಂಬಲ ಬೆಲೆಗಿಂತ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ದರವು ಕುಸಿದಲ್ಲಿ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ರೈತರ ಕೃಷಿ ಉತ್ಪನ್ನಗಳ ಖರೀದಿ

(ಈ) ಟ್ರಾಕ್ಟರ್, ಪವರ್ ಟಿಲ್ಲರ್‌ಗಳಿಗೆ ಶೇ 50ರ ರಿಯಾಯಿತಿ ದರದಲ್ಲಿ ವಿತರಣೆ

(ಉ) ಎತ್ತು ಮತ್ತು ಬಂಡಿಯನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ 50ರ ರಿಯಾಯಿತಿಯಲ್ಲಿ ವಿತರಣೆ

(ಊ) ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ

(ಎ) ರಿಯಾಯಿತಿಯಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳ ವಿತರಣೆ

(ಏ) ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯುವ ಕೃಷಿ ಮತ್ತು ಜೀವಾಣು ಗೊಬ್ಬರ ಪ್ರೋತ್ಸಾಹ

(ಐ) ಮಣ್ಣು ಪರೀಕ್ಷೆಯ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ

ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿರುವಂತಹ 6 ಜಿಲ್ಲೆಗಳಾದ ಶಿವಮೊಗ್ಗ, ಚಿತ್ರದುರ್ಗ, ಬೆಳಗಾಂ, ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಭಾರತ ಸರ್ಕಾರದ ವಿಶೇಷ ಪ್ಯಾಕೇಜ್

(ಈ) ಬಂದಿದೆ

ರೈತರ ಆತ್ಮಹತ್ಯೆ ತಡೆಯಲು ಕೈಗೊಂಡ ಕ್ರಮಗಳನ್ನು ಪ್ರಶ್ನೆಯ (ಇ) ಭಾಗದಲ್ಲಿ ವಿವರಿಸಿದೆ

[illegible] ಪ್ರಶ್ನೆ ಸಂ 1221

ANNEXURE-1

719

PROGRESS REPORT OF IMPLEMENTATION OF REHABILITATION PACKAGE FOR SUICIDE PRONE DISTRICTS

Financial in crores — Upto June 30th

Sl No	Item of Assistance	Financial Target for 3 years			Amount released so far	Achivement		Remarks on sanction of Action Plan
		Subsidy Grant	Loan	Total		Physical	Fin.	
	PART-A - NON CREDIT MEASURES							
1	**Ex-gratia assistance from PM's package**	**3.000**	**0.000**	**3.000**	**3.000**	**3195**	**1 161**	
2	**Irrigation assured**							
a)	Major / medium irrigation	725 240	483 470	1208 710	0 000	0	0 000	Proposals are sent to Central Water Commission for sanction
b)	Minor irrigation	0 000	458 100	458 100	0 000	0	0 000	Proposals are sent to NABARD for sanction
	Total	**725.240**	**941.570**	**1666.810**	**0.000**	**0 000**	**0.000**	
3	**Water shed Development**							
	Participatory watershed project	162 000	0 000	162 000	0 000	0	0 000	NABARD will execute
	Check dams	0 000	180 000	180 000	0 000	0	0 000	Proposals are sent to NABARD for sanction
	Rain water harvesting	18 000	0 000	18 000	0 000	0	0 000	NABARD will execute
	Total	**180.000**	**180.000**	**360.000**	**0.000**		**0.000**	
4	Seed replacement (Qtls)	178 000	0 000	178 000	0 869	54356 Q	5 720	Action Plan is sanctioned
5	Micro irrigation (Ha)	64 000	0 000	64 000	8 280	7292 Ha.	3 790	
6	Exten services	3 000	0 000	3 000	0 680		0 296	
	Total	**245.000**	**0.000**	**245.000**	**9.829**		**9.806**	

7	Horticulture Development	106 150	0 000	106 150	35 710	11019	10 010	Action Plan is sanctioned
8	**Subsidiary income Activities**							
a)	Animal husbandry	92 630	0 000	92 630	16 000	432	0 750	Action Plan is sanctioned
b)	Fisheries	6 240	0 000	6 240	1 650	0	0 000	Action Plan is sanctioned
	Total	**98.870**	**0.000**	**98.870**	**17.650**		**0.750**	
	GRAND TOTAL	**1358.260**	**1121.570**	**2479.830**	**66 189**		**21 727**	
	PART - B - CREDIT MEASURES							
9	Restructuring / Rescheduling loan	0 000	1194 520	1194 520	0 000	335262	1479 770	
10	Credit flow	0 000	3076 200	3076 200	0 000	309678	1779 370	
	Interest waiver	209 810	0 000	209 810	0 000	-325782	539 170	Sanction waived off
	TOTAL	**209.810**	**4270.720**	**4480.530**	**0.000**	**970722**	**3798.310**	

757 (1116) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಶಿಗ್ಗಾಂವ-ಸವಣೂರ ತಾಲ್ಲೂಕುಗಳಲ್ಲಿ ಈವರೆಗೆ ವಿತರಣೆ ಮಾಡಿರುವ ಬಿಪಿಎಲ್ ಪಡಿತರ ಚೀಟಿಗಳೆಷ್ಟು, ಹಂಚಿಕೆ ಮಾಡಬೇಕಾಗಿರುವ ಪಡಿತರ ಚೀಟಿಗಳೆಷ್ಟು (ಹೋಬಳಿವಾರು ವಿವರ ಒದಗಿಸುವುದು),

(ಆ) ಈ ತಾಲ್ಲೂಕುಗಳಲ್ಲಿ ಈವರೆಗೂ ಬಿಪಿಎಲ್ ಪಡಿತರ ಚೀಟಿ ಅರ್ಹ ಫಲಾನುಭವಿಗಳಿಗೆ ಸರಿಯಾಗಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ,

(ಇ) ಹಾಗಿದ್ದಲ್ಲಿ, ಈ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ವಿತರಿಸಲು ಸರ್ಕಾರ ಜರೂರಾಗಿ ಕ್ರಮ ಕೈಗೊಳ್ಳುವುದು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) –

(ಅ) ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿ ಈವರೆಗೆ ವಿತರಣೆ ಮಾಡಿರುವ ಬಿಪಿಎಲ್ ಪಡಿತರ ಚೀಟಿಗಳ ವಿವರ ಈ ಕೆಳಕಂಡತಿರುತ್ತದೆ

ಶಿಗ್ಗಾಂವ-ಸವಣೂರು

	ವಿತರಣೆ ಮಾಡಿದ್ದು	ಹಂಚಿಕೆ ಮಾಡಬೇಕಾದ್ದು
ಶಿಗ್ಗಾಂವ ಹೋಬಳಿ	8913	–
ಬಂಕಾಪುರ ಹೋಬಳಿ	6795	–
ದಾಂಡಸಿ ಹೋಬಳಿ	6042	–
ಒಟ್ಟು	21750	–

ಸವಣೂರು ತಾಲ್ಲೂಕು

	ವಿತರಣೆ ಮಾಡಿದ್ದು	ಹಂಚಿಕೆ ಮಾಡಬೇಕಾದ್ದು
ಶಿಗ್ಗಾಂವ ಹೋಬಳಿ	6957	–
ಬಂಕಾಪುರ ಹೋಬಳಿ	11141	–
ಒಟ್ಟು	18108	–

(ಆ) ಬಂದಿದೆ

(ಇ) ಈಗಾಗಲೇ ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕಿನಲ್ಲಿ ತಾತ್ಕಾಲಿಕ ಪಡಿತರ ಕೂಪನ್ ವಿತರಣೆಯಲ್ಲಿ ಎಪಿಎಲ್ ಪಡಿತರ ಕೂಪನ್‌ಗಳನ್ನು ಪಡೆದಿದ್ದು ಬಿಪಿಎಲ್ ಪಡಿತರ ಕೂಪನ್ ಕೋರಿ ಸಲ್ಲಿಸಿರುವ ಅಹವಾಲುಗಳನ್ನು ಪರಿಶೀಲಿಸಿದ್ದು ಅರ್ಹತೆಗನುಗುಣವಾಗಿ 6731 ಬಿಪಿಎಲ್ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ ಹಾಗೂ ಜಿಲ್ಲಾಧಿಕಾರಿಗಳಿಗೆ ಎಲ್ಲಾ ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ

759 (1118) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಶಿಗ್ಗಾಂವ-ಸವಣೂರ ತಾಲ್ಲೂಕುಗಳಲ್ಲಿ ಹೆಚ್ಚಿನ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳು ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯೇ ?

(ಆ) ಹಾಗಿದ್ದಲ್ಲಿ, ಶಿಗ್ಗಾಂವ ತಾಲ್ಲೂಕು ಹೊಸೂರ, ಗಂಜೀಗಟ್ಟಿ ವನಹಳ್ಳಿ, ಚಿಕ್ಕಮಲ್ಲೂರ, ಬಾಡ ಗ್ರಾಮಗಳಿಗೆ ಹಾಗೂ ಸವಣೂರ ತಾಲ್ಲೂಕು ಮಂಟಗಣಿ, ಡಂಬರಮತ್ತೂರ, ಮನ್ನಂಗಿ, ಚಳ್ಳಾಳ, ಕುರಬರ ಮಲ್ಲೂರ ಗ್ರಾಮಗಳಲ್ಲಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳನ್ನು ಪ್ರಾರಂಭಿಸಿ ರೈತರಿಗೆ ಅನುಕೂಲ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ ?

(ಇ) ಧಾರವಾಡ ಕೆ ಸಿ ಸಿ ಬ್ಯಾಂಕ್ ಪುನಶ್ಚೇತನಗೊಳಿಸಲು ಸರ್ಕಾರದ ಕ್ರಮವೇನು ?

(ಈ) ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳಿಂದ ರೈತರಿಗೆ ಸಾಲ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಪ್ರಸ್ತುತ ಶಿಗ್ಗಾಂವ ತಾಲ್ಲೂಕಿನಲ್ಲಿ 28 ಹಾಗೂ ಸವಣೂರು ತಾಲ್ಲೂಕಿನಲ್ಲಿ 21 ಪಿಕೆಪಿಎಸ್/ವಿಎಸ್ಎಸ್ಎಸ್ ಬ್ಯಾಂಕುಗಳು ಇರುತ್ತವೆ ಹಾಗೂ ಈಗಿನ ಪರಿಸ್ಥಿತಿಯಲ್ಲಿ ಹೊಸದಾಗಿ ವ್ಯವಸಾಯ ಸೇವಾ ಸಹಕಾರಿ ಸಂಘ/ಬ್ಯಾಂಕುಗಳನ್ನು ರಚಿಸುವ ಅವಶ್ಯಕತೆ ಕಂಡು ಬರುವುದಿಲ್ಲ

(ಆ) ಈ ಗ್ರಾಮಗಳು ಕೃಷಿ ಪತ್ತಿನ ಸಹಕಾರ ಸಂಘವನ್ನು ನೋಂದಣಿ ಮಾಡಲು ನಬಾರ್ಡ್ ವಿಧಿಸಿರುವ ಮಾರ್ಗಸೂಚಿಗಳ ಪ್ರಕಾರ ಅರ್ಹತೆಯನ್ನು

ಹೊಂದಿರುವುದಿಲ್ಲ ಹಾಗೂ ಹಾಲಿ ಈ ಗ್ರಾಮಗಳು ಸೇರ್ಪಡೆಯಾಗಿರುವ ವ್ಯವಸಾಯ ಸೇವಾ ಸಹಕಾರಿ ಸಂಘ/ಬ್ಯಾಂಕುಗಳಿಂದ ತೊಂದರೆಯಿಲ್ಲದೆ ಸೇವೆಯನ್ನು ಪಡೆಯಬಹುದಾಗಿದೆ

(ಇ) (1) ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕ ಮಾಡಲಾಗಿದೆ ಸದ್ಯಕ್ಕೆ ಧಾರವಾಡ ಜಿಲ್ಲಾಧಿಕಾರಿಯವರು ಬ್ಯಾಂಕಿನ ಆಡಳಿತಗಾರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ

(2) ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ

(3) ಸಾಲ ವಸೂಲಾತಿಗಾಗಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ

4) ಬ್ಯಾಂಕಿನ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ

(5) ಬ್ಯಾಂಕಿನ ವೆಚ್ಚವನ್ನು ತಗ್ಗಿಸಲು ಅಶಕ್ತವಾಗಿದ್ದ ಸುಮಾರು 50 ಶಾಖೆಗಳನ್ನು ಮುಚ್ಚಲಾಗಿದೆ

(6) ಸರ್ಕಾರವು ಕೆ ಸಿ ಸಿ ಬ್ಯಾಂಕ್ ನಿ ಧಾರವಾಡ ಇದರ ಪುನಶ್ಚೇತನಕ್ಕಾಗಿ ರೂಪಿಸಿದ ವಿಶೇಷ ಪ್ಯಾಕೇಜ್‌ನಲ್ಲಿ ದಿನಾಂಕ 30-06-2003 ಕ್ಕೆ ಸುಸ್ತಿ ಇದ್ದು, ದಿನಾಂಕ 31-03-2004 ರೊಳಗಾಗಿ ಸಂಬಂಧಪಟ್ಟ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ರೈತರು ಸುಸ್ತಿ ಕೃಷಿ ಸಾಲಗಳ ಅಸಲನ್ನು ಮರುಪಾವತಿಸಿದಲ್ಲಿ ಅಂತಹ ರೈತರ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿರುತ್ತದೆ ಈ ಮನ್ನಾದಿಂದ ಉಂಟಾದ ನಷ್ಟವನ್ನು ರೂ 50 00 ಕೋಟಿಗೆ ಸೀಮಿತಗೊಳಿಸಿ ಸರ್ಕಾರ, ಅಪೆಕ್ಸ್ ಬ್ಯಾಂಕ್ ಮತ್ತು ಕೆ ಸಿ ಸಿ ಬ್ಯಾಂಕ್ ನಿ, ಧಾರವಾಡ ಅನುಕ್ರಮವಾಗಿ ಶೇ 50 25 25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಿರುತ್ತದೆ ಸರ್ಕಾರದ ವತಿಯಿಂದ ಬಿಡುಗಡೆ ಮಾಡಬೇಕಾದ 25 00 ಕೋಟಿ ರೂ ಗಳನ್ನು ಮತ್ತು ಅಪೆಕ್ಸ್ ಬ್ಯಾಂಕಿನ ವತಿಯಿಂದ ಬಿಡುಗಡೆ

ಮಾಡಬೇಕಾದ 12 50 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ

(7) ಅಪೆಕ್ಸ್ ಬ್ಯಾಂಕು ತನ್ನ ಸ್ವಂತ ನಿಧಿಗಳಿಂದ ರೂ 73 00 ಕೋಟಿಗಳ ಅಲ್ಪಾವಧಿ ಕೃಷಿ ಪತ್ತಿನ ಮಿತಿಯನ್ನು ಮಂಜೂರು ಮಾಡಿರುತ್ತದೆ

(8) ಮುಂಗಾರು 2002 ರ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬ್ಯಾಂಕಿಗೆ ಇದುವರೆವಿಗೆ ರೂ 3 18 ಕೋಟಿ ಬಿಡುಗಡೆಗೊಳಿಸಲಾಗಿದೆ

(9) 2005–06ನೇ ಸಾಲಿನ ಬಡ್ಡಿ ದಂಡದ ಬಡ್ಡಿ ಮನ್ನಾ ಯೋಜನೆಯಡಿ ಬ್ಯಾಂಕಿಗೆ ಇದುವರೆಗೆ ರೂ 54–30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ

(10) ರೇವಣಿದಾರರಿಗೆ ರೂ 24 05 ಕೋಟಿ ರೇವಣಿ ಹಣ ವಾಪಸ್ಸು ಮಾಡಲಾಗಿದೆ (ಏಪ್ರಿಲ್–2006 ರಿಂದ 21–3–2007 ರವರೆಗೆ)

(ಈ) ಧಾರವಾಡ ಕೆ ಸಿ ಸಿ ಬ್ಯಾಂಕ್ ವತಿಯಿಂದ ಹಾವೇರಿ ಜಿಲ್ಲೆಯಲ್ಲಿ ಅಸಲನ್ನು ಮರುಪಾವತಿಸಿ ಬಡ್ಡಿ ಮನ್ನಾ ಸೌಲಭ್ಯ ಪಡೆದ ರೈತರಿಗೆ ಈಗಾಗಲೇ 2007–08 ನೇ ಸಾಲಿಗೆ ಕೃಷಿ ಸಾಲವನ್ನು ವಿತರಿಸಿದೆ ಸಾಲ ಮನ್ನಾ ಸೌಲಭ್ಯ ಪಡೆದಂತಹ ರೈತರಿಗೆ ಕೂಡ ಪುನಃ ಬೆಳೆ ಸಾಲವನ್ನು ವಿತರಿಸುವ ಕಾರ್ಯವು ಈಗ ಪ್ರಗತಿಯಲ್ಲಿರುತ್ತದೆ

760 (1119) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2006–07 ಸಾಲಿನಲ್ಲಿ ನೇ ಸಾಲಿನಲ್ಲಿ ಶಿಗ್ಗಾಂವ್ ಸವಣೂರ ತಾಲ್ಲೂಕುಗಳಿಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು (ಕಾಮಗಾರಿವಾರು) ವಿವರ ಒದಗಿಸುವುದು),

(ಆ) ಶಿಗ್ಗಾಂವ ಸವಣೂರ ತಾಲ್ಲೂಕುಗಳಿಗೆ "ರಾಷ್ಟ್ರೀಯ ತೋಟಗಾರಿಕಾ ಮಿಷನ್" ಕಾರ್ಯಕ್ರಮದಡಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ,

(ಇ) ಈ ತಾಲ್ಲೂಕುಗಳಲ್ಲಿ ಅಂತರ ಜಲಮಟ್ಟ ಕುಸಿದಿರುವುದರಿಂದ ಕಡಿಮೆ ನೀರನ್ನು ಉಪಯೋಗಿಸಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಿಕ್ಕೆ ಸರ್ಕಾರದ ಯೋಜನೆಯೇನು ,

(ಈ) ಡಾ॥ ನಂಜುಂಡಪ್ಪನವರ ವರದಿ ರೀತ್ಯಾ ಸವಣೂರ ತಾಲ್ಲೂಕು ಹಿಂದುಳಿದ ತಾಲ್ಲೂಕು ಆಗಿರುವುದರಿಂದ ರೈತರಿಗೆ ತೋಟಗಾರಿಕಾ ಬೆಳೆ ಬೆಳೆಯಲು ಹೆಚ್ಚಿನ ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) 2006–07 ನೇ ಸಾಲಿನಲ್ಲಿ ಶಿಗ್ಗಾಂವ್ ತಾಲ್ಲೂಕಿಗೆ 6 158 ಲಕ್ಷ ರೂ ಗಳನ್ನು ಹಾಗೂ ಸವಣೂರು ತಾಲ್ಲೂಕಿಗೆ 7 359 ಲಕ್ಷ ರೂ ಗಳನ್ನು ಒದಗಿಸಲಾಗಿದೆ ಕಾಮಗಾರಿ ವಿವರಗಳನ್ನು ಕೆಳಗೆ ನೀಡಲಾಗಿದೆ

(ಲಕ್ಷ ರೂ ಗಳಲ್ಲಿ)

ಕ್ರ ಸಂ	ಯೋಜನೆಗಳು	ಶಿಗ್ಗಾಂವ್	ಸವಣೂರು
1	ಪ್ರಚಾರ ಮತ್ತು ಸಾಹಿತ್ಯ	0 01	0 01
2	ರೈತರಿಗೆ ಸಹಾಯ	0 15	0 21
3	ವಿಶೇಷ ಘಟಕ ಯೋಜನೆ	0 193	0 194
4	ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ	0 01	0 01
5	ತೋಟಗಾರಿಕೆ ಕಟ್ಟಡಗಳು	0 25	0 3
6	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ		
	(ಎ) ಜೈವಿಕ ಪೀಡೆ ನಾಶಕಗಳಿಂದ ರೋಗ ಮತ್ತು ಕೀಟಗಳ ನಿಯಂತ್ರಣ	0 26	0 25
	(ಬಿ) ಉಪಗ್ರಹ ಆಧಾರಿತ ತರಬೇತಿ	0 04	0 04
	(ಸಿ) ಎರೆ ಹುಳು ಘಟಕ ಸ್ಥಾಪನೆಗೆ ಸಹಾಯಧನ	1 20	1 20
	(ಡಿ) ಸಾವಯುವ ಕೃಷಿಗೆ ಸಹಾಯಧನ	0 5	0 5
	(ಇ) ರೈತರ ಪ್ರವಾಸ/ತರಬೇತಿ	0 045	0 045
7	ಸೂಕ್ಷ್ಮ ನೀರಾವರಿ ಯೋಜನೆ	3 5	4 6
	ಒಟ್ಟು	**6 158**	**7 359**

(ಆ) ಮೇಲಿನ (ಅ) ನಲ್ಲಿ ಉತ್ತರಿಸಿರುವಂತೆ

(ಇ) ಅಂತರ ಜಲಮಟ್ಟ ಕುಸಿದಿರುವುದರಿಂದ ಕಡಿಮೆ ನೀರನ್ನು ಉಪಯೋಗಿಸಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಿಕ್ಕೆ ಹನಿ ನೀರಾವರಿ, ತುಂತುರು ನೀರಾವರಿ, ಮಳೆ ನೀರು ಕೊಯ್ಲು, ಜಲಾನಯನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

761 (1120) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2006–07ನೇ ಸಾಲಿನಲ್ಲಿ ಶಿಗ್ಗಾಂವ–ಸವಣೂರ ತಾಲ್ಲೂಕುಗಳಿಗೆ ಯಾವ ಯಾವ ಯೋಜನೆಗಳಿಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ (ವಿವರ ಒದಗಿಸುವುದು),

(ಆ) ಶಿಗ್ಗಾಂವ ತಾಲ್ಲೂಕು ಎನ್ ಎಂ ತಡಸ ನೀರಲಗಿ, ತಿಮ್ಮಾಪುರ ಗ್ರಾಮಗಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜಮೀನುಗಳಿಗೆ ಅತಿವೃಷ್ಟಿಯಿಂದ ಬೀಜ ಬಿತ್ತಿರುವ ಜಮೀನುಗಳು ಹಾಗೂ ಬದುವುಗಳು ಕೊಚ್ಚಿ ಹೋಗಿ ರೈತರಿಗೆ ಅತೀ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಇ) ಹಾಗಿದ್ದಲ್ಲಿ, ರೈತರಿಗೆ ಪರಿಹಾರ ನೀಡಲು ಸರ್ಕಾರದ ಕ್ರಮವೇನು,

(ಈ) ಶಿಗ್ಗಾಂವ – ಸವಣೂರ ತಾಲ್ಲೂಕುಗಳಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಉತ್ತೇಜನ ನೀಡಲಾಗುವುದೇ,

(ಉ) ಈ ತಾಲ್ಲೂಕುಗಳಿಗೆ ಜಲರಕ್ಷಣೆ ಹಾಗೂ ಮಳೆ ಕೊಯಲು ಕಾಮಗಾರಿಗಳಿಗೆ ಬಿಡುಗಡೆಗೊಳಿಸಲಾದ ಅನುದಾವವೆಷ್ಟು ,

(ಊ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿ ರಿಯಾಯಿತಿ ದರದಲ್ಲಿ ಪಡೆಯುವ ಬಿತ್ತನೆ ಬೀಜಗಳನ್ನು ರೈತರು ಹೊಲಗಳಲ್ಲಿ ಬಿತ್ತಿರುವ ಬಗ್ಗೆ ಸರ್ವೇ ಮಾಡಿಸಿ ವರದಿ ನೀಡಲಾಗುವುದೇ,

(ಋ) ಹಾಗಿದ್ದಲ್ಲಿ, ಎಷ್ಟು ಕಾಲಾವಧಿಯೊಳಗೆ ಒದಗಿಸಲಾಗುವುದು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) 2006–07 ನೇ ಸಾಲಿನಲ್ಲಿ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳಿಗೆ ವಿವಿಧ ಯೋಜನೆಗಳಿಗಾಗಿ ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ

(ಲಕ್ಷ ರೂ ಗಳು)

ಸಂ	ಯೋಜನೆ	ಸವಣೂರು	ಶಿಗ್ಗಾಂವ್
1	ಐಸೋಪಾಮ್	12 25	14 51
2	ಸಸ್ಯ ಸಂರಕ್ಷಣೆ	0 60	0 67
3	ಕೃಷಿ ಯಾಂತ್ರೀಕರಣ	25 83	27 37
4	ಕೃಷಿ ಸಂಸ್ಕರಣೆ	4 30	7 15
5	ಎತ್ತು ವಿತರಣೆ	4 60	4 60
6	ಸಾವಯುವ ಕೃಷಿ	3 23	4 18
7	ಇತರೆ ಯೋಜನೆಗಳು	18 09	9 39
	ಒಟ್ಟು	**68 90**	**67 87**

(ಆ) ಹೌದು

(ಇ) ಪರಿಹಾರ ನೀಡುವ ವಿಷಯವನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿ ಮಾರ್ಗಸೂಚಿ ಪ್ರಕಾರ ಕಂದಾಯ ಇಲಾಖೆ ಪರಿಶೀಲಿಸುತ್ತದೆ

(ಈ) ಹೌದು

(ಉ) ಈ ತಾಲ್ಲೂಕುಗಳಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸುಜಲಾ ಯೋಜನೆಯಡಿ 2006-07ನೇ ಸಾಲಿನಲ್ಲಿ 3 72 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ

(ಊ) ಹೌದು

(ಋ) Random ಆಗಿ ಸರ್ವೇ ಮಾಡಿಸಿ ಒಂದು ತಿಂಗಳೊಳಗಾಗಿ ಒದಗಿಸಲಾಗುವುದು

762 (1027) ಶ್ರೀ ಶ್ರೀನಿವಾಸಗೌಡ ಕೆ (ಕೋಲಾರ) -ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ -

(ಅ) ರಾಜ್ಯದಲ್ಲಿ ಹನಿ ನೀರಾವರಿಗೋಸ್ಕರ ಶೇ 100 ರಷ್ಟು ಸಬ್ಸಿಡಿ ನೀಡಿರುವಂತಹ ಜಿಲ್ಲೆಗಳಾವುವು ,

(ಆ) ಶೇ 100 ರಷ್ಟು ಸಬ್ಸಿಡಿ ಪ್ರಕಾರ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಯೋಜನೆಯಲ್ಲಿ ಅಳವಡಿಸಲಾದ ಜಮೀನಿನ ವಿಸ್ತೀರ್ಣವೆಷ್ಟು,

(ಇ) ಕಳೆದ 2 ವರ್ಷಗಳಿಂದ ಬಂದಂತಹ ಅರ್ಜಿಗಳೆಷ್ಟು, ಉಳಿದಿರುವ ಅರ್ಜಿಗಳೆಷ್ಟು, (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) ರಾಜ್ಯದಲ್ಲಿ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹನಿ ನೀರಾವರಿಗೆ ಶೇ 100 ಸಬ್ಸಿಡಿ ನೀಡಲಾಗುತ್ತಿದೆ

(ಆ) 2003–04 ನೇ ಸಾಲಿನಿಂದ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಒಟ್ಟು 7739 ಹೆಕ್ಟೇರ್ ಪ್ರದೇಶದಲ್ಲಿ ಶೇ 100 ಸಬ್ಸಿಡಿ ಪ್ರಕಾರ ಹನಿ ನೀರಾವರಿ ಅಳವಡಿಸಲಾಗಿದೆ

(ಇ) ಕಳೆದ ಎರಡು ವರ್ಷಗಳಲ್ಲಿ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಬಂದಂತಹ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 4014 ಮತ್ತು 2276 ಹಾಗೂ ಉಳಿಕೆ ಇರುವ ಅರ್ಜಿಗಳ ಸಂಖ್ಯೆ 1605 ಮತ್ತು 1070

763 (1028) ಶ್ರೀ ಶ್ರೀನಿವಾಸಗೌಡ (ಕೋಲಾರ) –ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ವೈದ್ಯನಾಥನ್ ವರದಿಯನ್ನು ಸಹಕಾರ ಕಾಯ್ದೆಗೆ ಅಳವಡಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ ಯಾವಾಗ ಬಂದಿರುತ್ತದೆ ?

(ಆ) ವೈದ್ಯನಾಥನ್ ವರದಿ ಜಾರಿ ಮಾಡುವುದರಿಂದ ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಸಹಕಾರ ಬ್ಯಾಂಕ್‌ಗಳಿಗೆ ಬರುವ ಅನುದಾನವೆಷ್ಟು ?

(ಇ) ವೈದ್ಯನಾಥನ್ ವರದಿಯನ್ನು ಜಾರಿ ಮಾಡಲಾಗುವುದೇ ?

(ಈ) ಹಾಗಿದ್ದಲ್ಲಿ, ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಭಾರತ ಸರ್ಕಾರವು ಸಹಕಾರಿ ಕೃಷಿ ಪತ್ತಿನ ಸಂಘಗಳ ಪುನಃಶ್ಚೇತನದ ಬಗ್ಗೆ ಪ್ರೊ.ಎ ವೈದ್ಯನಾಥನ್‌ರವರ ಅಧ್ಯಕ್ಷತೆಯಲ್ಲಿ ರಚಿಸಿದ ಕಾರ್ಯಪಡೆಯು ದಿನಾಂಕ 15 02 2005 ರಂದು ಭಾರತ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿರುತ್ತದೆ ಭಾರತ ಸರ್ಕಾರವು ಸದರಿ ಕಾರ್ಯಪಡೆಯ ವರದಿಯನ್ನು ತತ್ವಶಃ (in-principle) ಒಪ್ಪಿಕೊಂಡು ತತ್ಸಂಬಂಧದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿ ಸೆಪ್ಟೆಂಬರ್–ಅಕ್ಟೋಬರ್ 2005 ರಲ್ಲಿ ಪರಿಷ್ಕೃತ ಪುನಶ್ಚೇತನ ಪ್ಯಾಕೇಜನ್ನು ರೂಪಿಸಿರುತ್ತದೆ ಸದರಿ ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಳ್ಳಲು ರಾಜ್ಯ ಸರ್ಕಾರಗಳಿಗೆ ಕಳುಹಿಸಿರುತ್ತದೆ

(ಆ) ಪ್ರೊ॥ ಎ ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ಭಾರತ ಸರ್ಕಾರವು ರೂಪಿಸಿರುವ ಪುನಶ್ಚೇತನ ಪ್ಯಾಕೇಜನ್ನು ಒಪ್ಪಿಕೊಂಡಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ರಾಜ್ಯದ ಅಲ್ಪಾವಧಿ ಕೃಷಿ ಪತ್ತಿನ ಸಂಸ್ಥೆಗಳ ಪುನಶ್ಚೇತನಕ್ಕಾಗಿ ಲಭ್ಯವಾಗಬಹುದಾದ ಮೊಬಲಗು ಕೆಳಗಿನಂತಿದೆ

ಭಾರತ ಸರ್ಕಾರದ ಪಾಲು	325 48 ಕೋಟಿ ರೂ
ರಾಜ್ಯ ಸರ್ಕಾರದ ಪಾಲು	128 72 ಕೋಟಿ ರೂ
ಕೃಷಿ ಪತ್ತಿನ ಸಂಸ್ಥೆಗಳು ಧರಿಸಬೇಕಾದುದು	14 8 ಕೋಟಿ ರೂ

ಈ ಅಂಕಿ ಅಂಶಗಳು ತಾತ್ಕಾಲಿಕವಾಗಿದ್ದು ನಬಾರ್ಡ್ ಕೃಷಿ ಪತ್ತಿನ ಸಹಕಾರ ಸಂಘಗಳ ವಿಶೇಷ ಆಡಿಟ್ ಮಾಡಿದ ನಂತರ ವ್ಯತ್ಯಾಸವಾಗಬಹುದು

(ಇ) ಮತ್ತು (ಈ) ಸದರಿ ಪ್ಯಾಕೇಜಿನ ಶಿಫಾರಸ್ಸುಗಳನ್ನು ಅಂಗೀಕರಿಸುವ ವಿಷಯವು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ

764 (823) ಡಾ॥ ಸುಧಾಕರ್ ಎಂ ಸಿ (ಚಿಂತಾಮಣಿ) –ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2006–07 ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ ಪುರಸ್ಕೃತವಾದ ಅರ್ಜಿಗಳೆಷ್ಟು,

(ಆ) ಈ ಯೋಜನೆಗೆ ಇದುವರೆವಿಗೂ ಬಿಡುಗಡೆಯಾದ ಹಣ ಎಷ್ಟು,

(ಇ) ಬಾಕಿ ಉಳಿದ ಹಣವನ್ನು ಎಷ್ಟು ಕಾಲಾವಧಿಯೊಳಗೆ ಬಿಡುಗಡೆ ಮಾಡಲಾಗುವುದು

ಶ್ರೀ ಶಶಿಕಾಂತ ಅ ನಾಯಕ (ತೋಟಗಾರಿಕೆ ಸಚಿವರು) –

(ಅ) 2006–07 ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ ಸೂಕ್ಷ್ಮ ನೀರಾವರಿ ಯೋಜನೆಯಡಿಯಲ್ಲಿ 190 ಅರ್ಜಿಗಳು ಪುರಸ್ಕೃತವಾಗಿದೆ

(ಆ) ರೂ 97 91 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ

(ಇ) ಆದಷ್ಟು ಶೀಘ್ರ ಬಿಡುಗಡೆ ಮಾಡಲಾಗುವುದು

766 (927) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರೈತರು ಆತ್ಮಹತ್ಯೆ ತಡೆಗಟ್ಟಲು ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ವಿದರ್ಭ ಮಾದರಿ ಪ್ಯಾಕೇಜ್ ಘೋಷಣೆ ಮಾಡಿರುವುದು ನಿಜವೇ, (ವಿವರ ನೀಡುವುದು),

(ಆ) ಆ ಪೈಕಿ ಕೇಂದ್ರದ ಹಾಗೂ ಸರ್ಕಾರದ ಯೋಜನೆಗಳು ಯಾವುವು, (ವಿವರ ನೀಡುವುದು)

(ಇ) ಈ ಪ್ಯಾಕೇಜ್ ನಿರ್ವಹಣೆಯು ಸಮರ್ಪಕವಾಗಿ ನಡೆಸಲಾಗುತ್ತಿದೆಯೇ, (ವಿವರ ನೀಡುವುದು),

(ಈ) ಕಾರ್ಕಳ ತಾಲ್ಲೂಕು ಹಾಗೂ ಕಾಫಿ ಬೆಳೆಯುವ ಮಲೆನಾಡಿನ ಇತರೆ ಪ್ರದೇಶದಲ್ಲಿ ಕಳೆದ 9 ತಿಂಗಳಿಂದ ಆತ್ಮಹತ್ಯೆ ಮಾಡಿಕೊಂಡವರೆಷ್ಟು,

(ಉ) ರೈತರ ಸಾಲದ ಬಡ್ಡಿ ಮನ್ನಾ ಘೋಷಣೆಯಾದಾಗಿನಿಂದ ಸರ್ಕಾರದಿಂದ ಪರಿಹಾರವನ್ನು ಬ್ಯಾಂಕುಗಳಿಗೆ ಪಾವತಿಸಲಾಗಿದೆಯೆ, ಎಷ್ಟು ಹಣ ಪಾವತಿಸಿದೆ, ಇನ್ನೂ ಎಷ್ಟು ಹಣ ಪಾವತಿಸಲು ಬಾಕಿ ಇದೆ ಇದನ್ನು ಯಾವಾಗ ಪಾವತಿಸಲಾಗುವುದು ,

(ಊ) ಹಾಗಿದ್ದಲ್ಲಿ, ಪಾವತಿಸಿರುವ ಹಣವೆಷ್ಟು, ಪಾವತಿ ಮಾಡಬೇಕಾಗಿರುವುದೆಷ್ಟು , ಇದನ್ನು ಯಾವಾಗ ಪಾವತಿಸಲಾಗುವುದು ,

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) –

(ಅ) ಮತು (ಆ) ಹೌದು ವಿವರಗಳನ್ನು ಅನುಬಂಧ-1 ಮತ್ತು 2 ರಲ್ಲಿ ನೀಡಲಾಗಿದೆ (ಇ) ಹೌದು ಇದರ ಉಸ್ತುವಾರಿಗಾಗಿ ಸಚಿವ ಸಂಪುಟದ ಉಪ ಸಮಿತಿಯೊಂದನ್ನು ರಚಿಸಲಾಗಿದೆ

(ಈ)

ಜಿಲ್ಲೆ/ತಾಲ್ಲೂಕು	9 ತಿಂಗಳಲ್ಲಿ ವರದಿಯಾದ ರೈತರ ಆತ್ಮಹತ್ಯೆ ಪ್ರಕರಣಗಳು
ಕಾರ್ಕಳ	00
ಚಿಕ್ಕಮಗಳೂರು	31
ಹಾಸನ	26
ಕೊಡಗು	04

(ಉ) ಕೇಂದ್ರ ಸರ್ಕಾರದ ಪಾಲಿನ 56,56,85559 00 ರೂ ಗಳನ್ನು ನಬಾರ್ಡ್ ಮೂಲಕ ಸಹಕಾರ ಸಂಸ್ಥೆಗಳಿಗೆ ಪಾವತಿಸಲಾಗಿದ್ದು, ರಾಜ್ಯ ಸರ್ಕಾರದ ಪಾಲಿನ ರೂ 7,09,30,998 00 ಬಿಡುಗಡೆಯಾಗಿದ್ದು ಬಾಕಿ 49,47,54,561 00 ರೂ ಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ

Annexure-2

Progress report of Prime Minister's Package Programme in Farmers' Suicide Distress Districts up to June - 2007

District.Chickmagalur

Amount Rs In lakhs

Sl. No	Item of Assistance	Financial Target			Amount released so far	Achievement	
		Subsidy Grant	Loan	Total		Physical	Financial
1	**Ex-gratia assistance from PM's package**	**50 00**	**0.00**	**50 00**	**50 00**	**9**	**0.80**
2	**Assured Irrigation**						
a)	Major / medium irrigation	14864.00	9910.00	24774 00	0 00	0	0 00
b)	Minor irrigation	0.00	6100 00	6100 00	0.00	0	0 00
	Total	**14864.00**	**16010.00**	**30874 00**	**0.00**	**0**	**0 00**
3	**Water shed Development**						
	Participatory watershed project	0 00	0 00	0 00	0 00	0	0.00
	Check dams	0.00	700 00	700.00	0 00	0	0-00
	Rain water harvesting	300 00	0 00	300 00	0 00	0	0 00
	Total	**300.00**	**700.00**	**1000.00**	**0.00**	**0**	**0.00**
4	Seed replacement	1000.00	0 00	1000 00	0'00	2084	27 78
5	Micro irrigation	600.00	0.00	600 00	39 62	514	27 18
6	Extension services	84 00	0 00	84 00	0 00	0	0 00
	Total	**1684 00**	**0.00**	**1684 00**	**39 62**	**2598**	**54.96**
7	**Horticulture Development**	**1814.00**	**0.00**	**1814.00**	**538 00**	**441**	**49.85**
8	**Subsidiary income Activities**						
a)	Animal husbandry	1569.00	0 00	1569.00	34 50	0	0 00
b)	Fisheries	100 00	0-00	100 00	0 00	0	0 00
	Total	**1669.00**	**0.00**	**1669.00**	**34.50**	**0**	**0.00**
9	Restructuring / Rescheduling loan	0.00	28100 00	28100 00	0.00	18836	8237 00
10	Credit flow	0 00	61400 00	61400.00	0 00	23334	2716.68
11	Interest waiver	4000.00	0.00	4000.00	0 00	53531	1374 04
	Total	**4000.00**	**89500.00**	**93500.00**	**0.00**	**95701**	**12327 72**
	Grand total	**24381.00**	**16710 00**	**41091.00**	**662 12**	**56579**	**1479 65**

Note Restructuring / Rescheduling of loan and credit flow are not included in the Grand Total

Progress report of Prime Minister's Package Programme in Farmers' Suicide Distress Districts up to June -07

District Hassan Amount Rs In lakhs

Sl. No	Item of Assistance	Financial Target			Amount released so far	Achievement	
		Subsidy Grant	Loan	Total		Physical	Financial
1	**Ex-gratia assistance from PM's package**	**50.00**	**0 00**	**50.00**	**50.00**	749	**6.52**
2	**Assured Irrigation**						
a)	Major / medium irrigation	27865 20	18576 80	46442 00	0 00	0	0 00
b)	Minor irrigation	0 00	11200 00	11200 00	0 00	0	0 00
	Total	**27865 20**	**29776.80**	**57642.00**	**0.00**	**0**	**0.00**
3	**Water shed Development**						
	Participatory watershed project	3200 00	0 00	3200 00	0 00	0	0 00
	Check dams	0 00	3550 00	3550 00	0 00	0	0 00
	Rain water harvesting	300 00	0 00	300 00	0.00	0	0 00
	Total	**3500.00**	**3550 00**	**7050.00**	**0.00**	**0**	**0 00**
4	Seed replacement	1600 00	0 00	1600 00	0 00	2267	31 09
5	Micro irrigation	1300.00	0 00	1300 00	56 97	971	43 07
6	Extension services	33 87	0 00	33 87	14 50	123	9 94
	Total	**2933.87**	**0.00**	**2933.87**	**71.47**	**3361**	**84 10**
7	**Horticulture Development**	**1664.00**	**0 00**	**1664.00**	**315.00**	**5610**	**120.00**
8	**Subsidiary income Activities**						
a)	Animal husbandry	1822 00	0 00	1822 00	51 75	0	0.00
b)	Fisheries	410 00	0 00	410 00	0 00	0	0 00
	Total	**2232.00**	**0.00**	**2232.00**	**51 75**	**0**	**0.00**
9	Restructuring / Rescheduling loan	0 00	18952 00	18952 00	0 00	90158	45192 00
10	Credit flow	0 00	53900 00	53900 00	0.00	80537	53703 00
11	Interest waiver	2281 00	0.00	2281.00	0 00	90158	13275 00
	Total	**2281.00**	**72852.00**	**75133.00**	**0.00**	**260853**	**112170 00**
	Grand total	**40526.07**	**33326.80**	**73852 87**	**488.22**	**99878**	**13485.62**

Note, Restructuring / Rescheduling of loan and credit flow are not included in the Grand Total

767 (928) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) –ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದ ಮುಜರಾಯಿ ದೇವಾಲಯಗಳಲ್ಲಿ ಸಂಸ್ಕೃತ ಪಾಠಶಾಲೆ ಮತ್ತು ಭಜನೆ ಕೇಂದ್ರಗಳನ್ನು ತೆರೆಯಲು ಚಿಂತನೆ ಸರ್ಕಾರಕ್ಕಿದೆಯೇ ,

(ಆ) ಹಾಗಿದ್ದಲ್ಲಿ ರಾಜ್ಯದ ಯಾವ ಯಾವ ದೇವಾಲಯಗಳಲ್ಲಿ ತೆರೆಯಲಾಗುವುದು , ಇದಕ್ಕೆ ತರಬೇತಿದಾರರ ನೇಮಕಾತಿ ಹಾಗೂ ವಿದ್ಯಾರ್ಥಿಗಳ ಪ್ರವೇಶದ ನಿಯಮಗಳೇನು , (ಪೂರ್ಣ ವಿವರ ನೀಡುವುದು)

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) –

(ಅ) ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಮುಜರಾಯಿ ದೇವಾಲಯಗಳಲ್ಲಿ ಸಂಸ್ಕೃತ ಪಾಠಶಾಲೆ ಮತ್ತು ಭಜನಾ ಕೇಂದ್ರಗಳನ್ನು ತೆರೆಯುವ ಚಿಂತನೆಯು ಸದ್ಯಕ್ಕೆ ಸರ್ಕಾರಕ್ಕೆ ಇರುವುದಿಲ್ಲ

(ಆ) ಮೇಲಿನ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

768 (929) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಸರ್ಕಾರದ ಎತ್ತು–ಬಂಡಿ ಯೋಜನೆಯಿಂದ ಯಾವ ಯಾವ ರೈತರಿಗೆ ಅನುಕೂಲವಾಗಲಿದೆ ,

(ಆ) ಈ ಯೋಜನೆಯನ್ವಯ ಬಂಡಿಗೆ ಹಾಗೂ ಎತ್ತಿಗೆ ಸಬ್ಸಿಡಿ ಹಣ ನೀಡುವುದೆಷ್ಟು ,

(ಇ) ಕಳೆದ ವರ್ಷದಲ್ಲಿ ಕಾರ್ಕಳ ತಾಲ್ಲೂಕಿನ ಎಷ್ಟು ರೈತರು ಈ ಯೋಜನೆಯ ಉಪಯೋಗ ಪಡೆದಿದ್ದಾರೆ,

(ಈ) ಎತ್ತು ಪಡೆದ ಫಲಾನುಭವಿಗಳಿಗೆ, ರಿಯಾಯಿತಿ ದರದಲ್ಲಿ ಬಂಡಿ ನೀಡದೆ ಇರುವುದು ಹಾಗೂ ಬಂಡಿ ನೀಡಿದ ಫಲಾನುಭವಿಗಳಿಗೆ ಎತ್ತು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

(ಉ) ಕಳೆದ ಹಾಗೂ ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು, (ವಿವರ ನೀಡುವುದು) ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಈ ಯೋಜನೆಯಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲವಾಗಿದೆ

(ಅ) ಮತ್ತು (ಆ) ಒಂದು ಜೊತೆ ಎತ್ತು/ಕೋಣ ಶೇ 50%-ಗರಿಷ್ಠ ರೂ 10,000

ಬಂಡಿ ಶೇ 50%-ಗರಿಷ್ಠ ರೂ 10,000

(ಇ) ಯಾರೂ ಇಲ್ಲ

(ಈ) ಹೌದು, ಒಬ್ಬ ಫಲಾನುಭವಿಗೆ ಎತ್ತು ಅಥವಾ ಎತ್ತಿನ ಗಾಡಿ ಇವುಗಳಲ್ಲಿ ಯಾವುದಾದರೊಂದನ್ನು ನೀಡಲಾಗಿದೆ

(ಉ) 2006-07 ರೂ 2000 00 ಲಕ್ಷಗಳು, 2007-08 ರೂ 5000 00 ಲಕ್ಷಗಳು

769 (301) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) -ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ -

(ಅ) 2007-08 ನೇ ಆಯವ್ಯಯದಲ್ಲಿ ಎಂ-ಕೆ ಹುಬ್ಬಳ್ಳಿ ಹತ್ತಿರ ಮಲಪ್ರಭ ನದಿಯಲ್ಲಿರುವ ಗಂಗಾಂಬಿಕಾ ದೇವಸ್ಥಾನ ಅಭಿವೃದ್ಧಿಗೆ ಘೋಷಣೆ ಮಾಡಿದ್ದು ಸರಕಾರದ ಗಮನಕ್ಕೆ ಬಂದಿದೆಯೇ ,

(ಆ) ಬಂದಿದ್ದಲ್ಲಿ, ಕಾಮಗಾರಿ ಯಾವಾಗ ಪ್ರಾರಂಭ ಮಾಡಲಾಗುವುದು ,

(ಇ) ಈ ಕಾಮಗಾರಿಯ ಅಂದಾಜು ವೆಚ್ಚ ಹಾಗೂ ರೂಪರೇಷೆಗಳ ಬಗ್ಗೆ ಮಾಹಿತಿ ನೀಡುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) -

(ಅ) ಬಂದಿದೆ

(ಆ) ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು

(ಇ) ಮೊದಲ ಹಂತದ ಕಾಮಗಾರಿಯ ಅಂದಾಜು ವೆಚ್ಚ ರೂ 3,47,60,000/- ಈ ಹಂತದಲ್ಲಿ ಕೆಳಕಂಡ ಕಾಮಗಾರಿಗಳು ಒಳಗೊಂಡಿವೆ ,-

(1) ಮೂಲ ದೇವಸ್ಥಾನದ ಪುನರ್ ನಿರ್ಮಾಣ ಹಾಗೂ ಅದರ ಸಂರಕ್ಷಣೆ ಮತ್ತು ಸೌಂದರೀಕರಣಗೊಳಿಸುವುದು

(2) ದೇವಸ್ಥಾನದ ಸುತ್ತಲೂ ವರ್ತುಲಾಕಾರದಲ್ಲಿ ಆರ್‌ಸಿಸಿ ಗೋಡೆ ನಿರ್ಮಿಸುವುದು

(3) ದೇವಸ್ಥಾನಕ್ಕೆ ಹೋಗಲು ಉತ್ತರ ದಿಕ್ಕಿನಲ್ಲಿ ಸಂಪರ್ಕ ಸೇತುವೆ ನಿರ್ಮಾಣ ಮಾಡುವುದು

ಉಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು

771 (934) ಶ್ರೀ ವಿಶ್ವನಾಥ ಹೆಚ್ ಎಂ (ಸಕಲೇಶಪುರ) –ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) 2006 ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕಿಗೆ ಕೃಷಿ ಇಲಾಖಾವತಿಯಿಂದ ರೈತರು ಎತ್ತು–ಗಾಡಿ ಕೊಳ್ಳಲು ನಿಗದಿಪಡಿಸಲಾದ ಧನ ಸಹಾಯವೆಷ್ಟು,

(ಆ) 2006 ನೇ ಸಾಲಿನ ಫಲಾನುಭವಿಗಳ ಪಟ್ಟಿಯನ್ನು ಸಹಾಯಕ ನಿರ್ದೇಶಕರಿಗೆ ನೀಡಿದ್ದರೂ ಫಲಾನುಭವಿಗಳಿಗೆ ಧನ ಸಹಾಯ ನೀಡದಿರಲು ಕಾರಣವೇನು ,

(ಇ) ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ಧ ಸರ್ಕಾರದ ಕ್ರಮವೇನು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) 2006–07 ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕಿಗೆ ಎತ್ತು–ಗಾಡಿ ಕೊಳ್ಳಲು ನಿಗದಿಪಡಿಸಲಾದ ಸಹಾಯಧನ ರೂ 6 00 ಲಕ್ಷ

(ಆ) ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದ ಸಮಿತಿ ಅನುಮೋದಿಸಿದ್ದರೂ ಸಹ ಪ್ರಭಾರ ಸಹಾಯಕ ಕೃಷಿ ನಿರ್ದೇಶಕರು, ಸಕಲೇಶಪುರ ಇವರು ಸಕಾಲದಲ್ಲಿ ಅಗತ್ಯ ಕ್ರಮ ಕೈಗೊಳ್ಳದಿರುವುದರಿಂದ 2006–07 ನೇ ಸಾಲಿನಲ್ಲಿ ಫಲಾನುಭವಿಗಳಿಗೆ ರಿಯಾಯಿತಿ ಸೌಲಭ್ಯ ನೀಡಲು ಸಾಧ್ಯವಾಗಿರುವುದಿಲ್ಲ

(ಇ) ತಪ್ಪಿತಸ್ಥ ಅಧಿಕಾರಿ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು

772 (828) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗ (ರಾಮದುರ್ಗ) – ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬೆಳಗಾವಿ ಜಿಲ್ಲೆಗೆ ಕಳೆದ ಮೂರು ಸಾಲಿನಲ್ಲಿ ಜಲಾನಯನ ಇಲಾಖೆಯಿಂದ ಅನುಷ್ಠಾನಗೊಳಿಸಿದ ಯೋಜನೆಗಳಾವುವು ? ಅವುಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು) ,

(ಆ) ಕಳೆದ ಮೂರು ವರ್ಷಗಳಿಂದ ರಾಮದುರ್ಗ ತಾಲ್ಲೂಕಿನಲ್ಲಿ ಜಲಾನಯನ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ? ಏಜನ್ಸಿ (ಎನ್ ಜಿ ಓ) ಗಳಿಂದ ಅನುಷ್ಠಾನಗೊಳಿಸಿದ

ಕಾಮಗಾರಿಗಳಾವುವು (ಏಜನ್ಸಿಗಳ ಹೆಸರು) ಹಾಗೂ ಅವುಗಳಿಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು (ವಿವರ ಒದಗಿಸುವುದು),

(ಇ) ಜಲಾನಯನ ಇಲಾಖೆಯಿಂದ ಅನುಷ್ಠಾನಗೊಳಿಸುವ ನಾಲಾ ಬದು, ಚೆಕ್ ಡ್ಯಾಂ ತಡೆ ಅಣೆಕಟ್ಟು ಹಾಗೂ ಕೃಷಿ ಹೊಂಡ, ಹೊಲಗಳಿಗೆ ಬದುಗಳ ನಿರ್ಮಾಣ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಯಾವ ತಾಂತ್ರಿಕ ಸಿಬ್ಬಂದಿಯಿಂದ ತಯಾರಿಸಲಾಗುತ್ತಿದೆ

(ಈ) ಇಲಾಖೆಯಲ್ಲಿರುವ ತಾಂತ್ರಿಕ ಸಿಬ್ಬಂದಿ ಎಷ್ಟು?

(ಉ) ಇಲಾಖೆಯಲ್ಲಿ ಎರವಲು ಸೇವೆ ಪಡೆದುಕೊಳ್ಳಲಾಗುತ್ತಿದೆಯೇ?

(ಊ) ರಾಮದುರ್ಗ ತಾಲ್ಲೂಕಿನಲ್ಲಿ ಜಲಾನಯನ ಇಲಾಖೆಯ ಕಾಮಗಾರಿಗಳು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಋ) ಬಂದಿದ್ದಲ್ಲಿ ಇಲಾಖೆಯಲ್ಲಿ ಗುಣಮಟ್ಟದ ಕಾಮಗಾರಿಗಳು ಜರುಗುವಂತೆ ರೂಪಿಸಲಾದ ಯೋಜನೆಗಳು ಯಾವುವು ? (ವಿವರ ನೀಡುವುದು)

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಲಾನಯನ ಇಲಾಖೆಯಿಂದ ಅನುಷ್ಠಾನಗೊಳಿಸಲಾದ ಯೋಜನೆಗಳು ಹಾಗೂ ಅವುಗಳಿಗೆ ಬಿಡುಗಡೆಯಾದ ಅನುದಾನದ ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

(ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಜಲಾನಯನ ಇಲಾಖೆಯ ವತಿಯಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರ ಹಾಗೂ ಏಜೆನ್ಸಿ (ಎನ್ ಜಿ ಓ)ಗಳ ಮೂಲಕ ಅನುಷ್ಠಾನಗೊಳಿಸಿದ ಕಾಮಗಾರಿಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ

(ಇ) ಅಂದಾಜು ಪಟ್ಟಿಗಳನ್ನು ಕೃಷಿ ಸಹಾಯಕರ ಮೂಲಕ ತಯಾರಿಸಲಾಗುತ್ತಿದೆ

(ಈ) ಜಲಾನಯನ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ಒಟ್ಟು ತಾಂತ್ರಿಕ ಸಿಬ್ಬಂದಿ – 1763

(ಉ) ಹೌದು

(ಊ) ಇಲ್ಲಾ

(ಋ) ಪ್ರಶ್ನೆ ಉದ್ಭವಿಸುವುದಿಲ್ಲ

ANNEXURE I

Implemented Schemes and Release of grants to Watershed Development Department for the year 2006 2007 in Belgaum district

(Rs in lakhs)

Sl No	Name of Scheme	Talukas										
		Belgaum	Khanapur	Bailhongal	Savadatti	Ramdurg	Chikkodi	Raibag	Athani	Hukkeri	Gokak	Total
1	2	3	4	5	6	7	8	9	10	11	12	13
1	National Watershed Development Programme	11 020	11 115	11 020	11 020	11 020	13 775	0 000	11 020	11 020	0 000	91 010
2	River Valley Project	8 000	0 000	0 000	22 530	11 000	0 000	0 000	0 000	0 000	36 000	77 530
3	Land Reclamation	0 000	0 000	0 000	4 250	4 250	0 856	1 994	0 000	4 250	0 000	15 600
4	Special Component Plan	0 350	0 350	0 350	0 384	0 350	0 350	0 350	0 350	0 350	0 350	3 534
5	D P A P	41 280	0 000	44 250	44 250	44 250	0 000	0 000	33 495	11 280	45 775	294 580
6	Integranted Waste Land Devpt Pr[illegible]	0 000	90 945	0 000	0 000	0 000	193 045	0 000	0 000	0 000	0 000	283 990
7	Western Ghat Development Progr[illegible]	34 650	50 050	22 530	15 085	0 000	0 000	0 000	0 000	21 115	0 000	143 430
8	Sampoorn Grameen Rojagar Yojan[illegible]	7 190	14 251	6 915	6 891	4 528	10 390	7 784	9 763	8 841	9 933	86 486
9	N A B A R D (W D F)	0 000	0 000	2 521	8 208	16 848	0 000	0 000	0 000	0 000	0 000	27 577
10	N A B A R D (RIDF)	0 000	0 000	1 420	0 000	0 000	1 910	0 000	1 670	0 000	0 000	5 000
11	Scarcity	0 000	0 000	30 450	13 245	29 000	0 000	5 000	10 000	0 000	0 000	87 695
12	Suvarn Krushi Honda	31 752	49 392	33 222	25 284	20 580	12 140	19 404	31 948	31 948	31 948	317 618
	Total	102 490	166 711	119 456	125 863	121 246	220 326	15 128	66 298	86 856	92 058	1434 050

ANNEXURE II

List of works taken up & amount released to them by the watershed department under various schemes in Ramdurg taluka of Belgaum District from the last 3 years i e from 2004-05 to 2006-07

Sl No	Scheme	Name of the work	Unit	2004-05		2005-06		2006-07		Total	
				Phy	Grants released	Phy	Grants released	Phy	Grants released	Phy	Grants released
1	2	3	4	5	6	7	8	9	10	11	12
I -1	NWDPRA	Contour Bunding	Ha	90 00		357 00		216 00		702 49	
2		Farm Pond	No	8		26		0		34	
3		M P T	No	7		15		0		22	
4		Agro Forestry	Ha	21 20		16 00		20 00		57 20	
5		Dry Land Horticulture	Ha	26 36	16 118	44 00	23 37	0 00	11 02	70 36	50 509
6		Kitchen Garden	No	160		0		0		160	
7		Rudraradhya Model	No	4		0		0		4	
8		Recharge Pit	No	0		10		0		10	
9		Check Dam	No	0		1		0		1	
10		Nala Bunding	No	0		3		0		3	
II -1	R V P	Contour Bunding	Ha	200 00		395 00		400 00		1015 31	
2		Farm Pond	No	2		1		1		4	
3		Agro Forestry	Ha	71 00		10 00		13 00		94 00	
4		Dry Land Horticulture	Ha	75 14	9 366	8 00	10 944	17 50	11 000	100 64	31 310
5		Safe Disosal of outlets	No	30		0		0		30	
6		Gully plugs	No	40		0		0		40	
7		Water Harvesting Structures	No	2		2		1		5	
8		Fodder Devpt	Ha	2 40		0 00		2 40		4 80	
III	Saline&Alkaline	Land Devolopment	Ha	0 00	0 000	13 09	1 571	35 00	4 250	53 91	5 821
IV	Spl Componant	Contour Bunding	Ha	8 00	0 350	8 00	0 350	8 00	0 350	25 05	1 050
V -1	DPAP	Contour Bunding	Ha	1227 00		594 30		1175 44		3116 68	
2		Nala Bunding	No	0		3		4		7	
3		Farm Pond	No	1		8		0		9	
4		Sand Bag Strs	No	21	67 997	0	51 947	0	44 250	21	164 194
5		Check Dam	No	1		0		5		6	
6		R T W H	No	3		0		0		3	
7		Agro Forestry	Ha	336 00		190 50		278 00		804 50	
8		Dry Land Horticulture	Ha	119 00		126 00		178 60		423 60	

Continued

2

1	2	3	4	5	6	7	8	9	10	11	12
VI--1	S G R Y-ZP (Gen)	Check Dam	No	6	3 512	3	4 217	4	2 842	21	10 571
2		Contour Bunding	No	0		2		0		2	
3		Nala Bunding	No	0		1		0		1	
4		Vented Dam	No	0		1		0		1	
1	S G R Y-ZP (22 5%)	Contour Bunding	No	32	1 002	0	1 950	0	1 686	35	4 638
2		Farm Pond	No	3		0		0		3	
3		Nala Bank Protection	No	2		0		0		2	
4		Field Bunding	No	0		30		23		53	
VII-1	Scarcity	Check Dam	No	6	7 500	0	0 000	8	29 000	22	36 500
2		Nala Bunding	No	2		0		12		14	
3		Recharge Pit	No	10		0		0		10	
4		Contour Bunding	No	2		0		0		2	
5		Farm Pond	No	0		0		1		1	
6		Water storage Tank	No	0		0		1		1	
VIII-1	Nabard RIDF-X	Recharge Pit	No	0	0 000	25	7 950	0	0 000	33	7 950
2		Farm Pond	No	0		18		0		18	
3		Check Dam	No	0		2		0		2	
IX	Suvarna Krushi Honda	Farm Pond	No	0	0 000	0	0 000	210	20 580		20 580
	Total				**105 845**		**102 300**		**124 978**		**333 123**

ANNEXURE-II

List of works taken up and amount released information of NGOs for last 3 years i e, from 2004-05 to 2006-07 Taluka Ramadurga District Belgaum

Sl No	Name of the Agency	Name of the Watershed	Name of the work	Unit	2004-05		2005-06		2006-07		Total	
					Phy	Amount released	Phy	Amount released	Phy	Amount released	Phy	Amount released
1	2	3	4	5	6	7	8	9	10	11	12	13
1	BAIF Institute for Rural Development, Tiptur	Bagojikoppa	Field bunding	Ha	64 74	3 504	8 26	0 838	178 47	15 719	251 47	20 061
			Waste weir	No	45		5		3		53 00	
			Farm pond	No	4		1		10		15 00	
			Grass seeds	Kg	50		21 8		150		221 80	
			Agro-forestry	No	600		7627		0		8227 00	
			Dry land Hortil	No	720		120		0		840 00	
			Gully plugs	No	0		0		0		0 00	
			Contour trenches	Cmt	836 4		589		0		1425 40	
			Clear over fall waste weir	Cmt	0		44 5		0		44 50	
			Community organization	-	0		0		0		0 00	
			Training	-	0		0		0		0 00	
			Admn Cost	-	0		0		0		0 00	

Sl No	Name of the Agency	Name of the Watershed	Name of the work	Unit	2004-05		2005-06		2006-07		Total	
					Phy	Amount released	Phy	Amount released	Phy	Amount released	Phy	Amount released
1	2	3	4	5	6	7	8	9	10	11	12	13
2	The Rural Development Society, Murgod	Nirgyanahalla Naganur Watershed	Field bunding	Ha	0 00	0 00	80 00	5 123	26 77	1 129	106 77	6 252
			Farm Pond	No	0		1		0		1 00	
			Horticulture	Ha	0 00		2 00		0 00		2 00	
3	Kasturba Shikshana & Grameena Sangha, Ramadurga	Channapur DPAP Watershed	Farm Pond	No	0	2 549	1	0	0	0	1	2 549
			Admn Cost	-	0		0		0		0	
			NGO	-	0		0		0		0	

(B) 25222

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59